ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೩

ಶೈವದರ್ಶನ

ಡಾ. ಜೆ. ರುದ್ರಪ್ಪ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಶೈವದರ್ಶನ

ಇತರ ಪ್ರಕಟಣೆಗಳು—೩೪

ಪ್ರಧಾನ ಸಂಪಾದಕ :
ಡಾ. ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.

ಶೈವದರ್ಶನ

ಡಾ. ಜೆ. ರುದ್ರಪ್ಪ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೭೩

SAIVA DARSANA—by Dr. J. Rudrappa; first published by the Director, Prasaranga, University of Mysore, Mysore. 1973, Demy Octavo pp. 331+v+xvi Price ordinary Rs. 13-00, Full Calico Rs. 17-50.

ಮೊದಲನೆಯ ಮುದ್ರಣ: ೧೯೭೩
1796
14 ಚಿಲ್ಲೆ 85
ಸಾಧಾರಣ ಪ್ರತಿ : ರೂ. 13=00
ಉತ್ತಮ ಪ್ರತಿ : ರೂ. 17=50

ಪ್ರಕಾಶನ :
ನಿರ್ದೇಶಕರು
ಪ್ರಸಾರಾಂಗ, ಮೈಸೂರು—570012

ಮುದ್ರಕರು : ಡಿ. ರಾಜರತ್ನಂ
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು–570001

ಪ್ರಕಾಶಕರ ಮಾತು

'ಲಲ್ಲಯೋಗೀಶ್ವರಿ', 'Kashmir Saivism' ಮುಂತಾದ ಕೃತಿಗಳನ್ನು ಬರೆದು ಪ್ರಸಿದ್ಧರಾಗಿರುವ ಶ್ರೀ ಜೆ. ರುದ್ರಪ್ಪನವರ 'ಶೈವದರ್ಶನ' ಎಂಬ ಈ ಕೃತಿಯನ್ನು ವಾಚಕರಿಗೆ ಅರ್ಪಿಸಲು ತುಂಬ ಸಂತೋಷವಾಗುತ್ತದೆ. ಶ್ರೀ ಜೆ. ರುದ್ರಪ್ಪನವರು ಬಹು ದೊಡ್ಡ ವಿದ್ವಾಂಸರು, ಕಾಶ್ಮೀರ ಶೈವದರ್ಶನವನ್ನು ಆಳವಾಗಿ ಅಭ್ಯಾಸ ಮಾಡಿರುವ ಪಂಡಿತೋತ್ತಮರು. ಕಾಶ್ಮೀರ ವಿಶ್ವವಿದ್ಯಾನಿಲಯದಿಂದ ಈ ಸಂಬಂಧವಾಗಿ ಗೌರವ ಡಾಕ್ಟರೇಟ್ ಪದವಿಯನ್ನು ಪಡೆದು ಸನ್ಮಾನಿತರಾದವರು. ಶೈವದರ್ಶನದ ಬಗೆಗೆ ಅಧಿಕಾರವಾಣಿಯಿಂದ ಬರೆಯಬಲ್ಲ ಸಮರ್ಥರು. ಈ ಪುಸ್ತಕವನ್ನು ರಚಿಸಿ ಪ್ರಕಟಿಸಲು ನಮಗೆ ಅವಕಾಶ ಮಾಡಿಕೊಟ್ಟ ಶ್ರೀಮಾನ್ ಜೆ. ರುದ್ರಪ್ಪನವರಿಗೆ ನಾವು ಆಭಾರಿಯಾಗಿದ್ದೇವೆ.

ಪುಸ್ತಕವನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಪ್ರಭುಶಂಕರ
ನಿರ್ದೇಶಕ

ಪ್ರಸ್ತಾವನೆ

ಭಾರತ ದೇಶದಲ್ಲಿ ಶೈವಸಂಪ್ರದಾಯವು ಒಂದು ಧರ್ಮಕ್ಕಿಂತ ಹೆಚ್ಚು ಪ್ರಭಾವಶಾಲಿಯಾಗಿ ಪ್ರಸಿದ್ಧವಾಗಿದೆ. ಈ ದೇಶದಲ್ಲಿ ಪ್ರಾಚೀನ ಕಾಲದಿಂದ ಅನೇಕ ತತ್ತ್ವಜ್ಞಾನಿಗಳು ಅವತರಿಸಿ ಸ್ವಾತ್ಮಾನುಭವ ರೂಪವಾದ ಅಪರೋಕ್ಷ ಜ್ಞಾನವನ್ನು ಪಡೆದು ಶಕ್ತಿಪಾತದಿಂದ ಪವಿತ್ರ ಹೃದಯರಾಗಿ ತಾವು ಅನುಭವಿಸಿದ ಪರಮಾನಂದಾನುಭವವನ್ನು ಭಕ್ತವೃಂದಕ್ಕೆ ಉಣಿಸುವುದಕ್ಕೋಸ್ಕರ ಒಂದೊಂದು ಸಾಧನಮಾರ್ಗವನ್ನು ರಚಿಸಿದರು. ಕಾಲಕ್ರಮದಲ್ಲಿ ಆ ಸಾಧನಮಾರ್ಗಗಳಿಂದ ಹರಡಿದ ಆಚಾರ ವಿಚಾರ ಶ್ರದ್ಧೆಗಳ ಪ್ರಣಾಳಿಗಳೇ ಒಂದೊಂದು ಮತವೆಂದು ಪರಿಗಣಿಸಲ್ಪಟ್ಟವು.

ಭಾರತದಲ್ಲಿ ದರ್ಶನ ಮತ್ತು ಇವೆರಡೂ ಸಹಯೋಗ ಹೊಂದಿರುವುದು ಸರ್ವವಿದಿತವಾಗಿದೆ. ದರ್ಶನವು ವಿದ್ವಾಂಸರಿಗೂ ಜಿಜ್ಞಾಸುಗಳಿಗೂ ಉಪಾದೇಯ ಹಾಗೂ ಗ್ರಾಹ್ಯವಾಗಿರುತ್ತದೆ. ಕಾಶ್ಮೀರ ಶೈವಮಹರ್ಷಿಗಳಿಂದ ಪ್ರತಿಪಾದಿತವಾದ ತತ್ತ್ವವು ಧಾರ್ಮಿಕ ವ್ಯವಹಾರವನ್ನುಂಟುಮಾಡುವುದಾಗಿದೆ. ಈ ತತ್ತ್ವಜ್ಞಾನವು ವ್ಯವಹಾರಿಕತ್ತ್ವ ವ್ಯಾಪಕತ್ವಗಳಿಂದ ಕೂಡಿ ದಾರ್ಶನಿಕರ ಮನನಯೋಗ್ಯ ಹಾಗೂ ಆದರಣೀಯವಾಗಿದೆ. ಬಾಹ್ಯದಲ್ಲಿ ಕಂಡುಬರುವ ಭೇದಗಳ ಅಭಿನ್ನತೆಯನ್ನು ಸೂಚಿಸುತ್ತದೆ. ಅಂತರ್ಯದಲ್ಲಿ ಸಮಾನತ್ತ್ವವನ್ನೂ ಅನೇಕತ್ತ್ವದಲ್ಲಿ ಏಕತ್ವವನ್ನೂ ಪ್ರತಿಪಾದಿಸುವುದೇ ಈ ತತ್ತ್ವಜ್ಞಾನದ ವೈಶಿಷ್ಟ್ಯ. ದೀಪಗಳನ್ನು ಬೇರೆ ಬೇರೆ ಆಕಾರಗಳಲ್ಲಿ ಮಾಡಿದ್ದರೂ ಅದರ ಪ್ರಕಾಶವು ಒಂದೇ ಬಣ್ಣದ್ದಾಗಿರುತ್ತದೆ. ವಿಭಿನ್ನ ಧರ್ಮಗಳ ಆಚಾರದಲ್ಲಿ ಭೇದವು ಕಂಡುಬರುತ್ತಿದ್ದರೂ ಅಂತರ್ಯದಲ್ಲಿ ಏಕತೆಯ ಧಾರೆಯನ್ನು ಕಾಣಬಹುದು.

ಮಹಾಮಹೇಶ್ವರಾಚಾರ್ಯ ಅಭಿನವಗುಪ್ತರು ಈ ಕಾಶ್ಮೀರ ಶೈವಸಿದ್ಧಾಂತದ ಸಮನ್ವಯ ನಿರೂಪಣೆಯನ್ನು ಬಹು ಸುಂದರವಾಗಿ ಮಾಡಿರುತ್ತಾರೆ.

ತೀರ್ಥಕ್ರಿಯಾ ವ್ಯಸನಿನಃ ಸ್ವಮನೀಷಿಕಾಭಿ
ರುತ್ಪ್ರೇಕ್ಷ್ಯ ತತ್ತ್ವಮಿತಿ ಯತ್ ಯದಮೀ ವದಂತಿ ।
ತತ್ ತತ್ತ್ವಮೇವ ಭವತೋಽಸ್ತಿ ನಕಿಂಚಿದನ್ಯತ್
ಸಂಜ್ಞಾಸು ಕೇವಲಮಯಂ ವಿದುಷಾಂ ವಿವಾದಃ ॥

ಈ ಶಿವಾದ್ವೈತ ತತ್ತ್ವವು ಒಂದೇ ಆಗಿದ್ದರೂ ದಾರ್ಶನಿಕರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಹೆಸರಿನ ವಿವಾದವಿರುವುದೇ ಹೊರತು ತತ್ತ್ವದ ವಿಷಯದಲ್ಲಲ್ಲ. ಈ ಶಿವಾದ್ವೈತ ತತ್ತ್ವವು ಸಾಮರಸ್ಯವನ್ನು ಸ್ಥಾಪಿಸತಕ್ಕದ್ದಾಗಿರುವುದರಿಂದ ಆದರಣೀಯ.

ಕಾಶ್ಮೀರದಲ್ಲಿ ಹುಟ್ಟಿ ಬೆಳೆದ ಶೈವ ಸಂಪ್ರದಾಯವನ್ನು ಕಾಶ್ಮೀರ ಶೈವದರ್ಶನ ವೆಂದು ಕರೆಯುತ್ತಾರೆ. ತ್ರಿಕ, ಸ್ಪಂದ, ಪ್ರತ್ಯಭಿಜ್ಞಾಶಾಸ್ತ್ರಗಳೆಂದು ಕರೆಯುವ ವಾಡಿಕೆಯೂ ಉಂಟು. ಭೇದ ಭೇದಾಭೇದ ಅಭೇದ ದೃಷ್ಟಿಗಳನ್ನು ಸಮನ್ವಯ ಮಾಡಿರುವುದರಿಂದ ಇದಕ್ಕೆ ತ್ರಿಕಶಾಸ್ತ್ರ ಎಂದು ಹೆಸರು. ಈ ವಿಶ್ವವೆಲ್ಲಾ ಶಿವತತ್ವ ಪ್ರಸಾರದಿಂದ ರೂಪುಗೊಂಡಿರುತ್ತದೆ. ಆದುದರಿಂದ ಶಿವ-ಶಕ್ತಿವಿಲಾಸವೇ ಸ್ಪಂದ. ಇದನ್ನು ವಿವರಿಸುವುದೇ ಸ್ಪಂದಶಾಸ್ತ್ರ, ಇವುಗಳು ಆಗಮಪರವಾದವುಗಳು, ದಾರ್ಶನಿಕ ವಲ್ಲ. ಆಗಮಸ್ಪಂದಶಾಸ್ತ್ರಗಳಲ್ಲಿ ಹೇಳಿರುವುದನ್ನೇ ದಾರ್ಶನಿಕವಾಗಿ ಪ್ರಮಾಣ ರೀತಿ ಯಾಗಿ ಪ್ರತಿಪಾದಿಸುವುದು ಪ್ರತ್ಯಭಿಜ್ಞಾಶಾಸ್ತ್ರ. ಈ ಎಲ್ಲಾ ದೃಷ್ಟಿಗಳಿಂದ ನಿರೂಪಣೆ ಮಾಡಿರುವ ಈ ವೇದಾಂತ ದರ್ಶನವನ್ನು ಶೈವದರ್ಶನವೆಂದೇ ಕರೆಯುವರು. ಈ ಸಂಪ್ರದಾಯದಲ್ಲಿ ಎಲ್ಲಾ ದೃಷ್ಟಿಗಳ ಸಮನ್ವಯವನ್ನು ಕಾಣಬಹುದು.

ಪರಮಾರ್ಥವಾಗಿ ಪರಮಾತ್ಮನೊಬ್ಬನೇ. ಆಯಾಯ ತತ್ತ್ವಚಿಂತಕರು ತಮ್ಮ ಅಭಿರುಚಿಗನುಸಾರವಾಗಿ ಆ ಪರಮಾತ್ಮನನ್ನು ಒಂದೊಂದು ಹೆಸರಿನಿಂದ ಪೂಜಿಸು ತ್ತಲೂ ಧ್ಯಾನಿಸುತ್ತಲೂ ಬಂದಿದ್ದಾರೆ. ಒಬ್ಬ ದೇವರೇ ಆಯಾಯ ತತ್ತ್ವಚಿಂತಕರ ಇಚ್ಛಾನುಸಾರವಾಗಿ ಆಯಾಯ ಆಕಾರದಿಂದ ಮೈದೋರಿ ಅವರಿಷ್ಟಾರ್ಥವನ್ನು ದಯಪಾಲಿಸುತ್ತಾನೆಂಬುದು ಶ್ರದ್ಧಾಭಿಮಾನಿಗಳ ನಂಬಿಕೆ—

ಶೈವಧರ್ಮವು ವೇದ ಮತ್ತು ಶಿವಾಗಮಗಳಿಂದ ಹೊರಹೊಮ್ಮಿರುವ ವಿಶಿಷ್ಟ ಮಾರ್ಗವನ್ನು ಪ್ರತಿಬಿಂಬಿಸುವುದಾಗಿದೆ. ಶೈವಧರ್ಮವು ವಿಶ್ವ ವಿಶಾಲವಾದದ್ದಾಗಿರುತ್ತಾ ಕಾಲಕ್ರಮದಲ್ಲಿ ಬಂದ ಹೊಸ ಹೊಸ ಭಾವಗಳನ್ನು ಒಪ್ಪಿ, ಸದಾಚಾರಗಳನ್ನು ತೆರೆದ ಮನಸ್ಸಿನಿಂದ ಗ್ರಹಿಸಿ ಅಳವಡಿಸಿಕೊಳ್ಳುತ್ತಾ ಬೆಳೆಯುತ್ತಾ ಬಂದಿದೆ ಎಂಬುದು ಆಯಾಯಾ ಕಾಲಗಳಲ್ಲಿ ರಚಿತವಾದ ಸಾಹಿತ್ಯದಿಂದ ತಿಳಿಯಬರುವುದು. ಒಂದೇಕಡೆ ಬಹಳಕಾಲ ಒಂದು ಪರಿಮಿತಿಯಲ್ಲಿ ನಿಂತ ನೀರು ಬಳಸದೆ ಮಲಿತು ಅದರ ನಿಜ ಸ್ವರೂಪವು ಮರೆಯಾಗುತ್ತದೆಂಬುದು ಸರ್ವವಿದಿತವಾದ ವಿಷಯ. ಅದು ಜೀವಂತವಾಗಿ ಹರಿಯುವಂತೆ ಮಾಡಿದರೆ ಅದರ ಸ್ವಚ್ಛತೆಯು ಕಂಡುಬರುತ್ತದೆ. ಆಲದಮರವು ಬೆಳೆದು ಬಹುಕಾಲದ ಮೇಲೆ ತನ್ನ ಕೊಂಬೆಗಳನ್ನು ನೆಲಕ್ಕೆ ಬಿಟ್ಟು ಹೊಸದಾಗಿ ಚಿಗುರಿ ಮರವಾಗುವಂತೆ ಮತಧರ್ಮಗಳೂ ಕೂಡ ಸದಾಚಾರದಿಂದ ಹೊಸ ರೂಪವನ್ನು ಪಡೆದು ಪ್ರಕಾಶವಾದರೆ ಅವಕ್ಕೆ ಮುಸುಕಿರುವ ಪಾಚಿಯು ನಾಶವಾಗಿ ಹೊಸ ರೂಪ ವನ್ನು ಪಡೆಯುವುದು. ಈ ದೃಷ್ಟಿಯಿಂದ ಶೈವಧರ್ಮವು ಪುರಾತನ ಕಾಲದಿಂದ ಹೇಗೆ ನಾನಾ ರೂಪದಿಂದ ಬೆಳೆದುಬಂದಿದೆ ಎಂಬುದನ್ನು ತಿಳಿಯಬಹುದು.

ಯಾವುದೊಂದು ಮತಧರ್ಮವಾಗಲಿ ಅದೊಂದು ಹಲ ಕೆಲವು ನಂಬಿಕೆಗಳ ಮೂಟೆಯಲ್ಲ. ಅದೊಂದು ಉತ್ತಮ ಜೀವನದ ರೀತಿ. ಆಧ್ಯಾತ್ಮ ಜೀವನದ ಪ್ರಯೋಗಗಳಿಂದ ಹೊರಹೊಮ್ಮಿದ ಜೀವನ ತತ್ತ್ವ. ಮಾನವನ ಶರೀರ ಮನಸ್ಸು

ಹೃದಯುಗಳಲ್ಲಿ ಗೂಢವಾದ ಶಕ್ತಿಗಳ ಸಂಪೂರ್ಣ ಆವಿಷ್ಕಾರವೇ ಮತ ಎನ್ನಿಸಿಕೊಳ್ಳು ವುದು. ದೇಹವೆಂಬುದು ಆತ್ಮನ ವಿಕಾಸ ಕ್ಷೇತ್ರ. ದೇಹಾತ್ಮ ವಿವೇಕ ಆಧ್ಯಾತ್ಮ ಜೀವನದ ಅಡಿಗಲ್ಲು. ಈ ಸಾಮರಸ್ಯವನ್ನು ಯೋಗದಿಂದ ಸಾಧಿಸಬಹುದೆಂಬುದು ಆಧುನಿಕ ದಾರ್ಶನಿಕರಾದ ಅರವಿಂದರ ವಾಣಿ.

ಈ ಜಗತ್ತು ಮಾಯೆಯಲ್ಲ, ಮಿಥ್ಯೆಯಲ್ಲ. ಇದು ನಮ್ಮ ಕ್ರೀಡಾರಂಗ. ಕಾರ್ಯ ಕ್ಷೇತ್ರ. ನಮ್ಮನ್ನು ಹದಗೊಳಿಸುವ ಕ್ಷೇತ್ರ. "ಈ ಜಗತ್ತು ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ" ಎಂದರು ಬಸವಣ್ಣನವರು, ಅಂದರೆ ನಮ್ಮಲ್ಲಿ ಅಂತರ್ಹಿತನಾದ ಸಚ್ಚಿದಾನಂದ ಸ್ವರೂಪನು ವಿಕಸಿಸಬೇಕು ಪ್ರಕಾಶಿಸಬೇಕು. ನಮ್ಮ ಜೀವನ ಹೂವಿನಂತೆ ಅರಳ ಬೇಕಾದರೆ ಜ್ಞಾನಬೇಕು ಸಾಧನೆ ಬೇಕು. ಈ ಸಾಮರಸ್ಯವನ್ನು ದೇಹಾತ್ಮ ಸಮನ್ವಯ ಬುದ್ಧಿ, ಬುದ್ಧಿ ಹೃದಯುಗಳ ಸಮನ್ವಯ, ಪರಮಾರ್ಥ ವ್ಯವಹಾರಗಳ ಸಮನ್ವಯ, ಪ್ರಾಚ್ಯ ಪ್ರತೀಚ್ಯ ಸಂಸ್ಕೃತಿಗಳ ಸಮನ್ವಯ ಮೊದಲಾದ ಪ್ರಕ್ರಿಯೆಗಳಿಂದ ದೇಹ ದಲ್ಲಿರುವ ಪ್ರಕ್ರಿಯೆಗಳನ್ನು ಉದ್ಬೋಧಗೊಳಿಸಿ ಆತ್ಮ ತೇಜಸ್ಸನ್ನು ಹೆಚ್ಚಿಸಿಕೊಳ್ಳುತ್ತಾ ಮನುಷ್ಯ ಉತ್ತಮನಾಗಬೇಕೆಂದು ದಾರ್ಶನಿಕರೂ ಯೋಗದವರೂ ಉಪದೇಶಿಸಿದರು.

ಮನುಷ್ಯನ ಜೀವನದಲ್ಲಿ ಶೀಲವು ಪ್ರಧಾನವಾದದ್ದು. ಶೀಲವು ನೀತಿಯ ಆಶ್ರಯ ದಲ್ಲಿ ಬೆಳೆಯಬೇಕಾಗಿದೆ. ಶ್ರದ್ಧೆ ವಿಶ್ವಾಸಗಳಿಲ್ಲದೆ ನೀತಿಯು ಪರಿಪೂರ್ಣವಾಗಿ ಬಳಕೆ ಯಲ್ಲಿರಲಾರದು. ಲೌಕಿಕ ನಿಯಮಗಳಿಂದುಂಟಾಗುವ ನೀತಿಯು ಪರಿಪೂರ್ಣವಾಗಿ ಬಳಕೆಯಲ್ಲಿರಲಾಗದು. ಲೌಕಿಕ ನಿಯಮಗಳಿಂದುಂಟಾಗುವ ನೀತಿಮಾರ್ಗಗಳು ಬದಲಾವಣೆಯನ್ನು ಪಡೆಯುತ್ತಲೇ ಇರುತ್ತವೆ. ಅಲೌಕಿಕವಾದ ತತ್ತ್ವದಲ್ಲಿ ಶ್ರದ್ಧೆ ಮತ್ತು ವಿಶ್ವಾಸಗಳು ತಳಹದಿಯಾಗಿದ್ದಲ್ಲಿ ನೀತಿಯ ಘನತೆಯು ಶಾಶ್ವತವಾಗಿ ನಿಲ್ಲುವುದು. ಇದನ್ನು ಮತ ಎಂದು ಕರೆದರು. ಪರಮಾತ್ಮನಲ್ಲಿ ಭಕ್ತಿ ವಿಶ್ವವ್ಯಾಪಾರ ದಲ್ಲಿ ಶ್ರದ್ಧೆ ಈ ಎರಡರ ಸಮನ್ವಯವೇರ್ಪಟ್ಟಲ್ಲಿ ಅದು ದೈವ ಜೀವನವಾಗುತ್ತದೆ. ವಿಶ್ವವ್ಯಾಪಾರಗಳೆಲ್ಲಾ ಪರಮಾತ್ಮನಿಂದ ಬೇರೆಯಲ್ಲ. ಇವೆಲ್ಲಾ ಪರಮಾತ್ಮನ ಲೀಲೆ ಯೆಂಬ ಅನುಸಂಧಾನವು ದಾರ್ಶನಿಕ ತಿಳಿವಳಿಕೆಯ ಪರಿಪಕ್ವ ಸ್ಥಿತಿಯನ್ನು ತೋರಿಸು ತ್ತದೆ. ಪರಮಾತ್ಮನ ಸ್ವರೂಪವನ್ನು ಅನುಸಂಧಾನ ಮಾಡುವಾಗ ಆರಂಭದಲ್ಲಿ ಭೇದ ಭಾವದ ಅನುಭವವಿರುತ್ತದೆ. ಅದೇ ತತ್ತ್ವದ ತಿಳಿವಳಿಕೆಯ ನೆರವಿನಿಂದ ಭೇದಾಭೇದ ರೂಪವಾದ ಜ್ಞಾನವಿಷಯವಾಗುತ್ತಲಿರುತ್ತದೆ. ಸಾಧನಾಭ್ಯಾಸಗಳ ಬಲದಿಂದ ಅಭೇದ ವ್ಯಾಪ್ತಿಯು ಅನುಭವಕ್ಕೆ ಬರುತ್ತದೆ.

ವಸ್ತುತೋ ಹಿ ತ್ರಿಧೈವೇಯಂ ಜ್ಞಾನಸತ್ತಾ ವಿಜೃಂಭತೇ ।

ಭೇದೇನ ಭೇದಾಭೇದೇನ ತಥೈವಾ ಭೇದಭಾಗಿನಾ ॥

ಹೀಗೆ ಜೀವನದಲ್ಲಿ ನೀತಿಯ ನೆಲೆಯಿಂದ ಧರ್ಮಮಾರ್ಗವನ್ನನುಸರಿಸಬೇಕು. ದಾರ್ಶನಿಕ ತತ್ತ್ವಾನುಸಂಧಾನದಿಂದ ತಿಳಿವಳಿಕೆಯನ್ನು ವಿಶದಪಡಿಸಿಕೊಳ್ಳಬೇಕು. ಸಾಧನಾಭ್ಯಾಸಗಳ ಪರಿಪಾಕದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯಬೇಕು ಎಂಬುದು ನಮ್ಮ ಹಿರಿಯರ ನಾಣ್ಣುಡಿ.

ಮಾನವ ಜಾತಿಯ ಜ್ಞಾನಭಂಡಾರವು ವೇದಗಳಲ್ಲಿಯೂ ಆಗಮಗಳಲ್ಲಿಯೂ ರೂಪುಗೊಂಡಿತೆಂದು ಪ್ರಸಿದ್ಧವಾಗಿದೆ— ಶೈವಧರ್ಮವು ವೇದ-ಮುಖ್ಯವಾಗಿ ಆಗಮಗಳಿಂದ ಹೊರಹೊಮ್ಮಿರುವ ವಿಶಿಷ್ಟ ಮಾರ್ಗ. ಕಾಶ್ಮೀರ ಶೈವಧರ್ಮವು ಏಕದೇವತಾವಾದವನ್ನಂಗೀಕರಿಸಿದೆ. ಆಗಮಗಳಲ್ಲಿ ಹೇಳಿರುವ ಉಪಾಸನಾ ಮಾರ್ಗವನ್ನವಲಂಬಿಸಿದೆ. ತತ್ತ್ವಜ್ಞಾನಿಗಳು ಉಪದೇಶಿಸಿರುವ ಸಂಪ್ರತಿಪನ್ನವಾದ ದೀಕ್ಷಾ ಸಂಸ್ಕಾರಗಳನ್ನು ಅನುಸರಿಸಿದೆ. ಹಾಗೆಯೇ ಪೂಜೆ ಮೊದಲಾದ ಬಾಹ್ಯಾಚಾರಗಳನ್ನೂ ದಾರ್ಶನಿಕ ಸಂಪ್ರದಾಯದಂತೆ ತತ್ತ್ವವಿಚಾರವನ್ನೂ ಪುಷ್ಟೀಕರಿಸಿದೆ. ಅನುಭವಗಳ ಆದರ್ಶವನ್ನನುಸರಿಸಿ ಸ್ವಾತ್ಮವಿಮರ್ಶೆಯನ್ನೂ ನಿಷ್ಕಾಮ ಕರ್ಮವನ್ನೂ ಸಾತ್ಮೀಕರಣ ಮಾಡಿಕೊಂಡಿದೆ. ಹೀಗೆ ಈ ಶೈವದರ್ಶನವು ಆತ್ಮಪ್ರಕಾಶ ಶಕ್ತಿಯು ಉನ್ಮೀಲನವಾಗುವುದಕ್ಕೆ ಉತ್ತಮ ಸಾಧನವಾಗಿವೆ.

ಕಾಶ್ಮೀರ ಶಿವಾದ್ವೈತ ಸಿದ್ಧಾಂತವು ಅನೇಕ ದಾರ್ಶನಿಕರ ಭಾವನೆಗಳ ಸಮ್ಮೇಳನ ಸ್ವರೂಪವಾಗಿದೆ. ಈ ಸಿದ್ಧಾಂತದಲ್ಲಿ ಭೇದವಾದ, ಭೇದಾಭೇದವಾದ, ಅಭೇದವಾದಗಳ ಸಮನ್ವಯವು ಯುಕ್ತಿ, ಅನುಭವ, ಸಂಪ್ರದಾಯಗಳಿಂದ ಸಮರ್ಥಿಸಲ್ಪಟ್ಟಿದೆ ಎಂಬುದನ್ನು ಕಾಣಬಹುದು. ಹಾಗೆಯೇ ಬೌದ್ಧರ ವಿಜ್ಞಾನವಾದದ ಕ್ರಮವನ್ನೂ ಧರ್ಮವನ್ನೂ ವಿನಯವನ್ನೂ ಅಳವಡಿಸಿಕೊಂಡಿದೆ. ವೈದಿಕ ಸಂಪ್ರದಾಯದವರ ವಿಚಾರ ಧೋರಣೆ ಇದೆ. ಶೈವ ಮತ್ತು ಶಾಕ್ತ ಸಂಪ್ರದಾಯಗಳ ಸಾಧನಾಭ್ಯಾಸಗಳೂ ಉಪನಿಷತ್ತುಗಳ ಉಪಾಸನಾ ಮಾರ್ಗಗಳೂ ಇದರಲ್ಲಿ ಅಡಕವಾಗಿವೆ. ಪ್ರಾಣಾಯಾಮವೇ ಮೊದಲಾದ ಯೋಗಾಭ್ಯಾಸದ ಅಂಶಗಳಿಂದ ಕೂಡಿದೆ. ಹಾಗೆಯೇ ಸಾಂಖ್ಯರ ೨೫ ತತ್ತ್ವಗಳನ್ನು ಆವಶ್ಯಕವಾದ ವ್ಯತ್ಯಾಸಗಳಿಂದ ಒಪ್ಪಿದೆ. ವೈಷ್ಣವ ಸಂಪ್ರದಾಯದ ಭಕ್ತಿ, ಆಲಂಕಾರಿಕರ ರಸ ಈ ಎರಡು ಅಂಶಗಳನ್ನು ಸ್ವೀಕರಿಸಿದೆ. ಈ ಸಿದ್ಧಾಂತವು ದಾರ್ಶನಿಕ ಭಾವನೆಗಳಲ್ಲಿ ಮುಖ್ಯವಾಗಿ ಪ್ರಯೋಗಗಳ ಮತ್ತು ಅನುಭವಗಳ ಆಳವನ್ನು ಮುಟ್ಟಿದೆ ಎನ್ನಬಹುದು.

ಕಾಶ್ಮೀರ ಶೈವ ಮಹಾಮಹಿಮರಲ್ಲಿ ಕಂಡುಬರುವ ಸತ್ಯದ ಸ್ವರೂಪವು ಶಾಸ್ತ್ರ, ತತ್ತ್ವಜ್ಞಾನ, ಧರ್ಮ ಇವುಗಳಲ್ಲಿ ಯಾವುದೇ ದೃಷ್ಟಿಯಿಂದ ವಿಚಾರಮಾಡಿದರೂ ಸಮಾಧಾನಕರವಾದದ್ದೆಂದೂ ಸರ್ವಮಾನ್ಯವಾದದ್ದೆಂದೂ ನಿಶ್ಚಿತವಾಗಿ ಕಂಡುಬರುವುದು. ಏತಕ್ಕೆಂದರೆ ಅವರು ಪ್ರತಿಪಾದಿಸಿರುವ ಪರಮ ಸತ್ಯಕ್ಕೆ ಪ್ರತ್ಯಕ್ಷ ಅಪರೋಕ್ಷ ಪ್ರಾತಿಭ ಅನುಭವವೇ ಅಡಿಗಲ್ಲು. ಏಕರೂಪತೆಯ ಮೂಲಕವೇ ಅನುಭವವು ವಸ್ತು

ನಿಷ್ಠವೂ ತರ್ಕಪ್ರಾಪ್ತವೂ ತರ್ಕಮಾನ್ಯವೂ ಇರುವುದೆಂದು ಸಿದ್ಧವಾಗುವುದು. ಇಷ್ಟೇ ಅಲ್ಲದೆ ಸಾಕ್ಷಾತ್ಕಾರಿ ಪುರುಷರ ಅನುಭವಗಳು ಆನಂದಮಯವಿರುವುವಲ್ಲದೆ ಮಾನವನ ಬುದ್ಧಿಭಾವ ಕ್ರಿಯಾಶಕ್ತಿಗಳ ವಿಕಾಸವು ಮತ್ತು ಅವನಿಗಾಗುವ ಆನಂದಾನುಭವವು ಸತ್ಯತೆಯ ಕುರುಹುಗಳು.

ಶೈವದರ್ಶನವು ದಾರ್ಶನಿಕ ಭಾವನೆಗಳಲ್ಲಿ ಮುಖ್ಯವಾಗಿ ಪ್ರಯೋಗ ಮತ್ತು ಅನುಭವಗಳ ಆಸೆಯನ್ನು ಮುಟ್ಟಿದೆ. ಅನುಭವ ಮತ್ತು ಪ್ರಯೋಗಗಳಲ್ಲಿ ಮನುಷ್ಯನ ಪರಸ್ಪರ ವಿರುದ್ಧವಾದ ಯುಕ್ತಿಗಳು ಮತ್ತು ಭಾವಗಳು ಏಕೀಭವಿಸಿ ಮಾನವನ ಜೀವನಕ್ಕೆ ಪ್ರಕಾಶವನ್ನು ನೀಡುತ್ತವೆ. ಆಧ್ಯಾತ್ಮವಿಕಾಸಕ್ಕೆ ಆವಶ್ಯಕವಾದ ನಿಯಮಗಳನ್ನು ಅಂಗೀಕರಿಸಿದೆ. ಈ ಶಾಸ್ತ್ರವು ಮಾನವನ ಸಂಪೂರ್ಣ ರಚನೆಯನ್ನು ವಿಮರ್ಶಿಸುತ್ತದೆ. ಮಾನವನ ದೈಹಿಕ, ಮಾನಸಿಕ, ಅಂತಃಕರಣ, ಚೈತನ್ಯ ಮೊದಲಾದ ಎಲ್ಲಾ ವಿಷಯಗಳಲ್ಲಿಯೂ ಸಮಗ್ರವಾಗಿ ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸುತ್ತದೆ. ವೈಜ್ಞಾನಿಕ ಮತ್ತು ತಾತ್ವಿಕ ಭಾವನೆಗಳ ದೃಷ್ಟಿಯಿಂದಲೂ ನೈತಿಕ ಮತ್ತು ಆಧ್ಯಾತ್ಮಿಕ ಧರ್ಮ ಪ್ರಯೋಗಗಳ ರೀತಿಯಿಂದಲೂ ಸಾಧನ ರೂಪವಾಗಿದೆ ಎನ್ನಬಹುದು. ಮಾನವನ ಜೀವನವು ದಿವ್ಯವಾಗಿಯೂ ಸ್ಪೃಹಣೀಯವಾಗಿಯೂ ಆಗುವಂತೆ ಮಾಡುವುದೇ ಈ ದರ್ಶನದ ಶಕ್ತಿ. ತತ್ತ್ವಜ್ಞಾನದ ತಿಳಿವಳಿಕೆಯಿಂದ ಮಾನವನು ನೀತಿಯತ್ತ ಹೊರಳುವನು. ಸಾಕ್ಷಾತ್ಕಾರದಿಂದಲೇ ನೀತಿಗೆ ಪೂರ್ಣತೆ. ಎಲ್ಲಾ ಧರ್ಮಗಳೂ ಸಾಕ್ಷಾತ್ಕಾರವನ್ನೇ ತಮ್ಮ ಗುರಿಯನ್ನಾಗಿ ಇಟ್ಟುಕೊಂಡಿರುವುವು—

ಕಾಶ್ಮೀರ ಶೈವಗ್ರಂಥಗಳಲ್ಲಿ ಸರ್ವತೋಮುಖವಾದ ತಿಳಿವಳಿಕೆಯನ್ನು ಸಂಕ್ಷೇಪವಾಗಿ ಸೂತ್ರಗಳ ಮೂಲಕ ತಿಳಿಯಪಡಿಸಿರುತ್ತಾರೆ. ಕಾಶ್ಮೀರ ಶೈವವನ್ನು ಪ್ರತಿಪಾದಿಸಿರುವ ಗ್ರಂಥಗಳಲ್ಲಿ ವಸುಗುಪ್ತನಿಂದ ಪ್ರಕಾಶವಾದ "ಶಿವಸೂತ್ರಗಳು" ಪ್ರಧಾನವಾದವುಗಳಾಗಿವೆ. ಹಾಗೆಯೇ ಈ ಸಂಪ್ರದಾಯವನ್ನು ಬೆಳೆಯಿಸಿಕೊಂಡು ಬಂದವರಲ್ಲಿ ಕ್ಷೇಮರಾಜನೆಂಬ ಪಂಡಿತನು ಉಜ್ವಲವಾದ "ಪ್ರತ್ಯಭಿಜ್ಞಾ ಹೃದಯ"ವೆಂಬ ಚಿಕ್ಕ ಗ್ರಂಥವನ್ನು ಇಪ್ಪತ್ತು ಸೂತ್ರಗಳ ಆಧಾರದಿಂದ ರಚಿಸಿರುತ್ತಾನೆ. ಶಿವಸೂತ್ರಗಳು ಮತ್ತು ಪ್ರತ್ಯಭಿಜ್ಞಾ ಹೃದಯ ಈ ಎರಡರ ಅಭ್ಯಾಸ ಮತ್ತು ತಿಳಿವಳಿಕೆಗಳಿಂದ ಕಾಶ್ಮೀರ ಶೈವದರ್ಶನದ ಸ್ವರೂಪಜ್ಞಾನವುಂಟಾಗುತ್ತದೆ ಈ ಶೈವದರ್ಶನದ ಅಭ್ಯಾಸದಿಂದ ಆಗುವ ವಿಕಾಸವನ್ನು ಸಾಧಕನು ಪಡೆಯಬಹುದು. ಈ ವಿಷಯಗಳನ್ನು ಜಿಜ್ಞಾಸುಗಳಾಗಿರುವ ಕನ್ನಡಿಗರಿಗೆ ತಿಳಿಯಪಡಿಸುವ ಉದ್ದೇಶದಿಂದ ಈ ಶೈವದರ್ಶನದ ಸಾರಸರ್ವಸ್ವವನ್ನು ತಾತ್ವಿಕವಾಗಿಯೂ ಪ್ರಾಯೋಗಿಕವಾಗಿಯೂ ಈ ಎರಡು ಗ್ರಂಥಗಳಲ್ಲಿ ಸಾಧ್ಯವಾದಷ್ಟನ್ನು ತಿಳಿಯಾದ ಕನ್ನಡ ಭಾಷೆಯಲ್ಲಿ ಪ್ರತಿಬಿಂಬಿಸಿರುತ್ತೇನೆ.

ಈ ಶೈವದರ್ಶನ ಗ್ರಂಥಗಳ ಪರಿಭಾಷೆಯಲ್ಲಿ ವಾಗ್ವಿಲಾಸಮಹಿಮೆ ಪ್ರಕಾಶಪೂರ್ಣವಾಗಿದೆ. ಈ ದರ್ಶನವು ಈಶ್ವರನ ಅಸ್ತಿತ್ವವನ್ನು ತೋರುವ ದೀಪವಾಗಿದೆ.

ಆ ದೀಪವನ್ನು ಹಚ್ಚಿಟ್ಟವನು ಶಿವನೇ. ಆದುದರಿಂದ ಅವನ ಆ ದೀಪದ ಬೆಳಕಿನಲ್ಲಿ ಅವನನ್ನು ಕಾಣಬೇಕು.

ಶಿವೋ ಭೂತ್ವಾ ಶಿವಂ ಯಜೇತ್

ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ಣಾಟಕದಲ್ಲಿ ಶೈವಧರ್ಮವು ವಿಶೇಷ ಪ್ರಚಾರದಲ್ಲಿದೆ. ಮೂಲಭೂತವಾದ ಶೈವತತ್ತ್ವಗಳ ವಿವೇಚನೆ ಅಭ್ಯಾಸ ಅನುಭವಗಳಿಂದ ಪರಿಷ್ಕೃತವಾದ ಕಾಶ್ಮೀರ ಶೈವದರ್ಶನವು ಕನ್ನಡಿಗರಿಗೆ ಉಪಯುಕ್ತವೂ ಆವಶ್ಯಕವೂ ಎಂದು ಭಾವಿಸಿ ಈ ಶೈವಧರ್ಮದ ಸಾರಭೂತವಾದ ಸಾಹಿತ್ಯವನ್ನು ಕನ್ನಡ ಸಹೃದಯರ ಮುಂದಿಟ್ಟದ್ದೇನೆ.

ಬೆಂಗಳೂರು ಸಂಸ್ಕೃತ ಮಹಾ ಪಾಠಶಾಲೆಯ ವಿಶಿಷ್ಟಾದ್ವೈತ ಸಿದ್ಧಾಂತ ಪ್ರಾಧ್ಯಾಪಕರಾದ ಶ್ರೀಮಾನ್ ವೀರರಾಘವಾಚಾರ್ಯರವರು ಕಾಶ್ಮೀರ ಶೈವಗ್ರಂಥಗಳಲ್ಲಿನ ಕ್ಲಿಷ್ಟ ಭಾಗಗಳನ್ನು ಪರಿಚಯ ಮಾಡಿಕೊಟ್ಟು ಉಪಕರಿಸಿದ್ದಾರೆ. ಅವರ ಉಪಕಾರವನ್ನು ಹೃತ್ಪೂರ್ವಕ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾದ ಡಾ|| ಪ್ರಭುಶಂಕರ ಅವರು ಈ ಗ್ರಂಥದ ಪ್ರಕಟನೆಯ ಬಗೆಗೆ ವಿಶೇಷ ಆಸ್ಥೆಯನ್ನು ವಹಿಸಿ ಇದು ಪ್ರಕಟವಾಗಲು ನೆರವು ನೀಡಿದ್ದಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಗ್ರಂಥದ ಕರಡಚ್ಚನ್ನು ಅತ್ಯಂತ ಶ್ರದ್ಧೆಯಿಂದ ಪರಿಶೀಲಿಸಿಕೊಟ್ಟ ಶ್ರೀ ಎನ್. ಬಸವಾರಾಧ್ಯ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಯಾವ ಯಾವ ಮಹಾತ್ಮರ ಲೇಖನಗಳಿಂದ ಪ್ರಭಾವಿತನಾಗಿ ನನಗೆ ಗ್ರಾಹ್ಯವಾದದ್ದನ್ನು ಸಂಕ್ಷಿಪ್ತಿಸಿರುವೆನೋ ಅವರೆಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಗಾಂಧಿನಗರ
ಬೆಂಗಳೂರು

ಜೆ. ರುದ್ರಪ್ಪ

ವಿಷಯಾನುಕ್ರಮಣಿಕೆ

ಪ್ರತ್ಯಾಭಿಜ್ಞಾಹೃದಯ

ಶಿವಸೂತ್ರಗಳು

ಅನುಬಂಧ



ನಟರಾಜ

ಆಂಗಿಕಂ ಭುವನಂ ಯಸ್ಯ ವಾಚಿಕಂ ಸರ್ವವಾಙ್ಮಯಂ ।
ಆಹಾರ್ಯಂ ಚಂದ್ರತಾರಾದಿ ತಂ ನಮಃ ಸಾತ್ವಿಕಂ ಶಿವಂ ॥

ಯಾರ ಶರೀರಚಲನಗಳಿಂದ ವಿಶ್ವವು ಹೊರಹೊಮ್ಮಿತೋ
ಯಾರ ವಾಕ್ಕಿನಿಂದ ಶಬ್ದ ಮತ್ತು ವಾಙ್ಮಯವು ಹುಟ್ಟಿತೋ
ಯಾರಿಗೆ ಚಂದ್ರ ಮತ್ತು ನಕ್ಷತ್ರಗಳೇ ಆಭರಣಗಳಾಗಿವೆಯೋ
ಆ ಸಾತ್ವಿಕಪ್ರಕಾಶಜ್ಯೋತಿಯಾದ ಶಿವನನ್ನು ನಾನು ನಮಸ್ಕರಿಸುತ್ತೇನೆ.

ಕಾಶ್ಮೀರ ಶೈವದರ್ಶನದ ಇತಿಹಾಸ

ಕಾಶ್ಮೀರವು ಹಿಮಾಲಯಪರ್ವತಶ್ರೇಣಿಯಲ್ಲಿ ಉನ್ನತವಾದ ಒಂದು ಪ್ರಾಂತದಲ್ಲಿ ರಮಣೀಯವಾದ ಸರೋವರಗಳಿಂದಲೂ ಗಗನಚುಂಬಿತ ಪರ್ವತಗಳಿಂದಲೂ ಮನೋಹರವಾದ ಉದ್ಯಾನವನಗಳಿಂದಲೂ ಕೂಡಿದ ಪ್ರಕೃತಿಸೌಂದರ್ಯದಿಂದ ಶೋಭಿಸುತ್ತಿದೆ. ಈ ಪ್ರದೇಶದಲ್ಲಿ ಮಾನವಜಾತಿಗೆ ವಾಸಯೋಗ್ಯವಾಗಿಯೂ ಸಾಧನಾಭ್ಯಾಸಕ್ಕೆ ಅನುಕೂಲವಾಗಿಯೂ ಇರುವ ಸ್ಥಳಗಳಲ್ಲಿ ಋಷಿಗಳ ಆಶ್ರಮಗಳಿದ್ದುವೆಂಬುದು ಪುರಾಣಪ್ರಸಿದ್ಧವಾಗಿದೆ. ಈಗಲೂ ಅಲ್ಲಿ ಪುಣ್ಯಕ್ಷೇತ್ರಗಳನ್ನು ಗುರುತಿಸುತ್ತೇವೆ. ಅಮರನಾಥ ಕ್ಷೇತ್ರವು ಇವುಗಳಲ್ಲಿ ಮುಖ್ಯವಾದದ್ದು. ಇಂತಹ ಸನ್ನಿವೇಶಗಳಿಂದ ಕೂಡಿದ ಕಾಶ್ಮೀರವು ಹಿಂದಿನ ಕಾಲದಲ್ಲಿ ವಿದ್ಯಾವಂತರಿಗೂ ಧರ್ಮಕ್ಕೂ ಸಂಸ್ಕೃತಿಗೂ ಆಶ್ರಯವಾಗಿತ್ತು. ಶಾರದಾಪೀಠವೆಂದು ಹೆಸರು ಪಡೆದಿತ್ತು. ಮಹಾಮಹಿಮರಾದ ಶಂಕರಾಚಾರ್ಯರು (ಕ್ರಿ.ಶ. ೭೮೦-೮೨೦) ತಮ್ಮ ದಿಗ್ವಿಜಯಗಳಲ್ಲಿ ಇಲ್ಲಿ ಸರ್ವಜ್ಞಪೀಠವನ್ನು ಸ್ಥಾಪಿಸಿದರೆಂದು ಉಲ್ಲೇಖವಿದೆ. ಶ್ರೀರಾಮಾನುಜಾಚಾರ್ಯರು ಮತ್ತು ಅವರ ಹಿಂದಿನ ಯಾಮುನಾಚಾರ್ಯರು ಕಾಶ್ಮೀರಕ್ಕೆ ಹೋಗಿ ವಿದ್ವದ್ಗೋಷ್ಠಿಯಲ್ಲಿ ಭಾಗವಹಿಸಿ ಅಲ್ಲಿಂದ ಕೆಲವು ವೈಷ್ಣವ ಸಂಪ್ರದಾಯಗಳನ್ನು ತಿಳಿದುಬಂದರೆಂದು ಕಾಶ್ಮೀರಾಗಮಪ್ರಾಮಾಣ್ಯವೆಂಬ ಗ್ರಂಥದಿಂದ ತಿಳಿದುಬರುತ್ತದೆ. ದಕ್ಷಿಣ ದೇಶದಿಂದ ಅನೇಕ ವಿದ್ವಾಂಸರು ಕಾಶ್ಮೀರಕ್ಕೆ ಹೋಗಿ ಶಾಸ್ತ್ರಾರ್ಥದಲ್ಲಿ ಭಾಗವಹಿಸುತ್ತಿದ್ದರೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಚೋಳರ ಕಾಲದಲ್ಲಿ ಚಿದಂಬರದಲ್ಲಿ ವಾಸವಾಗಿದ್ದ ಮಹೇಶ್ವರಾನಂದನಿಂದ ರಚಿತವಾದ ಮಹಾರ್ಥಮಂಜರಿ ಮತ್ತು ಪರಿಮಳ ಎಂಬ ಗ್ರಂಥಗಳಿಂದ ಪ್ರತ್ಯಭಿಜ್ಞಾ ಶೈವವು ದಕ್ಷಿಣ ದೇಶದಲ್ಲಿ ಪ್ರಚಾರದಲ್ಲಿತ್ತೆಂದು ತಿಳಿದುಬರುತ್ತದೆ. ಕಾಶ್ಮೀರ ಪಂಡಿತರಿಂದ ರಚಿಸಲ್ಪಟ್ಟ ಅಲಂಕಾರ ಮತ್ತು ನಾಟ್ಯಶಾಸ್ತ್ರ ಗ್ರಂಥಗಳು ಕಾಶ್ಮೀರದಲ್ಲಿ ದೊರೆಯದೆ ತಿರುವಾಂಕೂರು ಗ್ರಂಥಾಲಯಗಳಲ್ಲಿ ದೊರೆತಿರುವುದನ್ನು ನೋಡಿದರೆ ಕಾಶ್ಮೀರ ಪಂಡಿತರಿಗೂ ದಾಕ್ಷಿಣಾತ್ಯರಿಗೂ ಬಹಳ ಹಿಂದಿನ ಕಾಲದಿಂದಲೂ ಸಂಪರ್ಕವಿತ್ತೆಂದು ಊಹಿಸಲವಕಾಶವಿದೆ. ಕಾಶ್ಮೀರದಲ್ಲಿ ದುಲ್ಚಾ ಮತ್ತು ಸಿಕಂದರ್ ದೊರೆಗಳು ರಾಜ್ಯವಾಳುತ್ತಿದ್ದಾಗ ರಾಜ್ಯದಲ್ಲಾದ ಉಪಟಳದಿಂದಲೂ ಹಿಂಸೆಯಿಂದಲೂ ಅನೇಕ ಸಂಸ್ಕೃತ ಪಂಡಿತರು ತಮ್ಮ ಗ್ರಂಥಗಳನ್ನು ತೆಗೆದುಕೊಂಡು ದಕ್ಷಿಣ ದೇಶಕ್ಕೆ ವಲಸೆ ಬಂದರೆಂದು ಕಲ್ಹಣನ ರಾಜತರಂಗಿಣಿಯಿಂದ ವ್ಯಕ್ತವಾಗುತ್ತದೆ.[1] ಹಾಗೆ ವಲಸೆ ಬಂದ ವಿದ್ವಾಂಸರು ದಕ್ಷಿಣದೇಶದ ರಾಜರ ಆಶ್ರಯದಲ್ಲಿದ್ದರು. ಬಿಲ್ಹಣ ಮತ್ತು ಸಂಗೀತರತ್ನಾಕರ ಗ್ರಂಥಕರ್ತನಾದ ಶಾರ್ಙ್ಗದೇವ ಇವರು ದೇವಗಿರಿಯ ಯಾದವರಾಯನ ಆಸ್ಥಾನದಲ್ಲಿದ್ದರು.

---

1. ಶ್ರೀವಾರನ ರಾಜತರಂಗಿಣಿ III ನೇ ಭಾಗ, ಶ್ಲೋಕಗಳು ೭೫–೭೯

ದಾಕ್ಷಿಣಾತ್ಯರೂ ಕೂಡ ಕಾಶ್ಮೀರಕ್ಕೆ ಹೋಗಿ ನೆಲೆಸಿದ್ದರೆಂಬುದಕ್ಕೆ ಕೆಲವು ನಿದರ್ಶನಗಳಿವೆ. ಎಂಟನೆಯ ಶತಮಾನದಲ್ಲಿ ಕಾಶ್ಮೀರದಲ್ಲಿ ಆಳುತ್ತಿದ್ದ ಜಯಪೀಡನ ಆಸ್ಥಾನದಲ್ಲಿ ಪ್ರಸಿದ್ಧನಾದ ದ್ರಾವಿಡ ಮಾಂತ್ರಿಕನಿದ್ದನೆಂದು ರಾಜತರಂಗಿಣಿಯಲ್ಲಿ ಉಲ್ಲೇಖವಿದೆ.[2] ಹನ್ನೊಂದನೆಯ ಶತಮಾನದಲ್ಲಿ ಹರ್ಷಚಕ್ರವರ್ತಿಯು ನಾಟ್ಯಶಾಸ್ತ್ರಕ್ಕೆ ಸಂಬಂಧಪಟ್ಟ ದಾಕ್ಷಿಣಾತ್ಯ ಮಾದರಿಗಳನ್ನೂ ನಾಟ್ಯಭಂಗಿಗಳನ್ನೂ ಕರ್ಣಾಟಕ ಜನರಿಂದ ಬರಮಾಡಿಕೊಂಡನು.[3] ಹದಿಮೂರನೆಯ ಶತಮಾನದಲ್ಲಿ ಜಯಸಿಂಹನೆಂಬ ರಾಜನು ಮಠವನ್ನು ಕಟ್ಟಿಸಿ ದ್ರಾವಿಡ ಬ್ರಾಹ್ಮಣರನ್ನು ಕರೆಯಿಸಿ ಅವರಿಗೋಸ್ಕರ ಸಿಂಹಪುರವೆಂಬ ಗ್ರಾಮವನ್ನು ಕೊಟ್ಟನು.[4] ರಾಜತರಂಗಿಣಿಯ ಕಲ್ಹಣನ ಅನಂತರ ಕಾಶ್ಮೀರದಲ್ಲಿ ನಡೆದ ದಬ್ಬಾಳಿಕೆ ಮತ್ತು ಕ್ರೌರ್ಯಗಳನ್ನು ತಡೆಯಲಾರದೆ ಅನೇಕ ವಿದ್ವಾಂಸರು ದಕ್ಷಿಣ ದೇಶಕ್ಕೆ ಬಂದು ನೆಲಸಿದರು. ಇದಾದ ಕೆಲವು ಕಾಲಾನಂತರ ವಿದ್ಯಾಪಕ್ಷಪಾತಿಯಾದ ಜೈನುಲಾಬುದ್ದೀನ್ ಎಂಬ ದೊರೆಯು (ಕ್ರಿ.ಶ. ೧೪೨೦-೭೦) ಕಾಶ್ಮೀರದಲ್ಲಿ ಖಿಲವಾಗುತ್ತಿದ್ದ ಸಂಸ್ಕೃತ ವಿದ್ಯೆಯನ್ನು ಪುನರುತ್ಥಾನಗೊಳಿಸುವುದಕ್ಕೋಸ್ಕರ ಸಂಸ್ಕೃತ ವಿದ್ಯೆಗೆ ಪ್ರೋತ್ಸಾಹ ಕೊಟ್ಟದ್ದಲ್ಲದೆ ಅಥರ್ವವೇದದ ರಹಸ್ಯಗಳನ್ನು ತಿಳಿದುಕೊಂಡುಬರುವಂತೆ ಕೆಲವರನ್ನು ಕರ್ಣಾಟಕಕ್ಕೆ ಕಳುಹಿಸಿ ಅಲ್ಲಿಂದ ಆ ವಿದ್ಯೆಯನ್ನು ಕಲಿತು ಬಂದವರಿಂದ ಖಿಲವಾಗಿದ್ದ ವೇದವಿದ್ಯೆಗೆ ಪ್ರೋತ್ಸಾಹಕೊಟ್ಟು ಆ ವಿದ್ಯೆಯು ಅಲ್ಲಿ ಉಳಿಯುವಂತೆ ಮಾಡಿದನು.[5]

ಕುರುಭಿರ್ನಿಹತೇ ದ್ರೋಣೇ ತದಾಥರ್ವಾ ನಿರಾಶ್ರಯಃ
ಶರಣೀಕೃತವಾನ್ ವೇದಃ ಕರ್ಣಾಟಾನ್ ಪಟುಚೇತನಾನ್
ಕಾಲೇಽಥ ವಿಪುಲೇ ಯಾತೇ ಸ್ಪೃಹ ಭಟ್ಟಭಯಾಕುಲಃ
ಯುದ್ಧಭಟ್ಟಾಭಿಧೋ ಮಾನೀ ದೇಶಾಂತರಮಗಾದ್ ಗುಣೀ
ಯಜುಷಃ ಪಠನಾಪ್ರೀತ್ಯೈಃ ಕರ್ಣಾಟೈಃ ಸೋಽಥ ಪಾಲಿತಃ
ಸ ರಹಸ್ಯಮಥರ್ವಾಣಂ ನಿಜಾಂ ಪ್ರತ್ಯಾಗತೋ ಭುವಮ್
ಶ್ರೀ ಜೈಲೋಲ್ಲಾಬದ್ಧೀನಸ್ಯ ಗುಣಿನೋ ಗುಣರಾಗಿಣಃ
ಉಪಧೀಕೃತ್ಯ ತಂ ವೇದಂ ಪರಾಂ ತುಷ್ಟಿಮಜೀಜನತ್
ದತ್ತಸ್ವಕೀಯ ವಸ್ತ್ರಾನ್ನಃ ಶಿರ್ಯಭಟ್ಟೋಽಥ ಧರ್ಮವಿತ್
ಸಾ ಧರ್ಮಿಷ್ಠಾತು ಶಾಲಾ ಶಿರ್ಯಭಟ್ಟಸ್ಯ ಧೀಮತಃ
ಕರ್ಣಾಟಾನಾಮಪಿ ಪರಮಾಗಮ ಸ್ಪೃಹಣೀಯತಾಂ

(ಜೋನರಾಜ, ರಾಜತರಂಗಿಣಿ, II, ೧೨೬೮-೭೪)

2. ರಾ.ತ. IV, ೫೯೩.
3. ರಾ.ತ. VII, ೯೨೯.
4. ರಾ.ತ. VIII, ೨೪೪೪.
5. ರಾ. ತ. II, ೧೨೬೮-೭೪.

ಕರ್ಣಾಟಕರು ಅಥರ್ವವೇದದ ರಹಸ್ಯಗಳನ್ನು ಕಾಶ್ಮೀರದವರಿಗೆ ಹೇಳಿಕೊಟ್ಟರೆಂದು ಉಲ್ಲೇಖವಿದೆ. ಕರ್ಣಾಟಕದಲ್ಲಿಯೂ ಈ ಮತವು ವ್ಯಾಪಿಸಿದ್ದಂತೆ ತೋರುವುದು. ವಿಜಯನಗರದ ಸಂಗಮ ವಂಶಕ್ಕೆ ಕುಲಗುರುಗಳಾದ ಕಾಶೀವಿಲಾಸ ಕ್ರಿಯಾಶಕ್ತಿ, ತ್ರಿಯಂಬಕ ಕ್ರಿಯಾಶಕ್ತಿ, ಚಂದ್ರಭೂಷಣ ಕ್ರಿಯಾಶಕ್ತಿ, ವಿದ್ಯಾಶಂಕರ ಮುಂತಾದವರು ೧೪–೧೫ ನೆಯ ಶತಾಬ್ದಗಳಲ್ಲಿ ಪಾಶುಪತ ಮತ್ತು ಪ್ರತ್ಯಭಿಜ್ಞಾ ಶೈವಮತಾವಲಂಬಿಗಳಾಗಿದ್ದರು. ಗೋರಕ್ಷನಾಥ ಮುಂತಾದ ನಾಥಪಂಥಿಗಳೂ ಈ ಮತದ ಅನೇಕಾಂಶಗಳನ್ನು ಗ್ರಹಿಸಿರುವರು.[6] ಕಾಶ್ಮೀರದ ಶಿವಾದ್ವೈತವು ದಕ್ಷಿಣ ದೇಶದಲ್ಲಿ ಪ್ರಚಾರದಲ್ಲಿತ್ತೆಂಬುವಕ್ಕೆ ಗೋವೆಯ ರಾಜ್ಯವನ್ನಾಳಿದ ಮಾಧವಮಂತ್ರಿ ಮುಂತಾದ ಕಾಶ್ಮೀರ ಬ್ರಾಹ್ಮಣರು ತ್ರಿಕಶಾಸನದ ಅನುಯಾಯಿಗಳಾಗಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಕಾಶ್ಮೀರ ದೇಶಾಧಿಪತಿಯಾದ ಮೋಳಿಗೆಮಾರಯ್ಯನು ತನ್ನ ಅರಸೊತ್ತಿಗೆಯನ್ನು ಬಿಟ್ಟು ಬಸವೇಶ್ವರನ ಕಾಲಕ್ಕೆ ಕರ್ಣಾಟಕಕ್ಕೆ ಬಂದು ಬಸವೇಶ್ವರನ ಅನುಯಾಯಿಯಾಗಿದ್ದನೆಂದು ಕವಿಚರಿತೆಕಾರರು ಬರೆದಿರುವರು. ಶ್ರೀ ಶಂಕರಾಚಾರ್ಯರು ಶ್ರೀ ರಾಮಾನುಜಾಚಾರ್ಯರು ಕಾಶ್ಮೀರಕ್ಕೆ ಹೋಗಿ ಅಲ್ಲಿ ತಮ್ಮ ವಿದ್ವತ್ತನ್ನು ಪ್ರಕಾಶಪಡಿಸಿದರೆಂಬುದನ್ನು ಹಿಂದೆಯೇ ಸೂಚಿಸಿದೆ.

ಕಾಶ್ಮೀರದ ವಿದ್ವಾಂಸರನೇಕರು ಕಾಶ್ಮೀರದಲ್ಲಾದ ರಾಜಕೀಯ ಉಪಟಳದಿಂದ ಕರ್ಣಾಟಕಕ್ಕೆ ಕ್ರಿ. ಶ. ೯–೧೦ ನೆಯ ಶತಮಾನಗಳಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ವಲಸೆ ಬಂದದ್ದರಲ್ಲಿ ಆಶ್ಚರ್ಯವೇನಿಲ್ಲ. ಕಾಶ್ಮೀರದಲ್ಲಿ ಹುಟ್ಟಿ ಪ್ರಚಾರಗೊಂಡ ಪ್ರತ್ಯಭಿಜ್ಞಾ, ಗುಜರಾತಿನಲ್ಲಿ ಹುಟ್ಟಿದ ಲಕುಲೀಶ ಕಾಳಾಮುಖ ಪಾಶುಪತಾದಿ ಶೈವಪಂಥೀಯರಿಗೆ ಕರ್ಣಾಟಕವು ಆಶ್ರಯಸ್ಥಾನವಾಗಿ ಸ್ವಧರ್ಮ ರಕ್ಷಣಾಕ್ಷೇತ್ರವಾಯಿತು. ಈ ಶೈವಪಂಥೀಯರಲ್ಲಿ ಕಾಳಾಮುಖ ಪಂಥವು ೯ನೇ ಶತಮಾನದಲ್ಲಿ ಕರ್ಣಾಟಕದಲ್ಲಿ ವಿಶೇಷ ಪ್ರಭಾವೀ ಪಂಥವಾಗಿತ್ತು. ಈ ಮೇಲಿನ ಅಂಶಗಳಿಂದ ಬಹಳ ಹಿಂದಿನಕಾಲದಿಂದಲೂ ಕಾಶ್ಮೀರಕ್ಕೂ ದಕ್ಷಿಣದೇಶಕ್ಕೂ ಮುಖ್ಯವಾಗಿ ವಿದ್ವಾಂಸರ ಸಂಪರ್ಕವಿತ್ತೆಂದು ವೇದ್ಯವಾಗದೆ ಇರದು.

ಸಂಸ್ಕೃತ ವಿದ್ಯೆಗೆ ಆಶ್ರಯವಾಗಿದ್ದ ಕಾಶ್ಮೀರವು ಭಾರತ ಸಂಸ್ಕೃತಿಯನ್ನು ಬಹಳವಾಗಿ ಬೆಳೆಸಿಕೊಂಡು ಬಂದಿತೆಂಬುದಕ್ಕೆ ಹಲವಾರು ನಿದರ್ಶನಗಳಿವೆ. ನಾಟ್ಯಶಾಸ್ತ್ರ ಅಲಂಕಾರಶಾಸ್ತ್ರ ಗ್ರಂಥಗಳನ್ನು ಕಾಶ್ಮೀರ ಪಂಡಿತರು ಬರೆದು ಪ್ರಸಿದ್ಧರಾಗಿದ್ದಾರೆ. ಧ್ವನಿ, ರಸತತ್ತ್ವಗಳ ಮೇಲೆ ಗ್ರಂಥಗಳನ್ನು ರಚಿಸಿದ ಕಾಶ್ಮೀರ ಪಂಡಿತರಾದ ಆನಂದವರ್ಧನ ಮತ್ತು ಅಭಿನವಗುಪ್ತರು ಚಿರಸ್ಮರಣೀಯರಾಗಿದ್ದಾರೆ. ಭಾರತದ ದರ್ಶನಶಾಸ್ತ್ರಗಳಿಗೆ ಕಾಶ್ಮೀರ ವಿದ್ವಾಂಸರು ಸಲ್ಲಿಸಿರುವ ಸೇವೆಯು ಮಹತ್ತರವಾದದ್ದು. ಸೂಕ್ಷ್ಮಪ್ರಜ್ಞೆ, ವಿಚಾರಶೀಲತೆ, ಅದ್ಭುತವಾದ ಕಲ್ಪನಾಶಕ್ತಿ, ಉಜ್ವಲವಾದ ಉತ್ಸಾಹಗಳಿಂದ ಕೂಡಿದ ವಿದ್ವಾಂಸರೂ ಸಿದ್ಧಪುರುಷರೂ ಆದ ಕಾಶ್ಮೀರದ ಮಹಾಮಹಿಮರು ಆಧ್ಯಾತ್ಮಶಾಸ್ತ್ರಕ್ಕೆ

---

6. ಭಾರತೀಯ ಸಂಸ್ಕೃತಿ : ಡಾ॥ ಶ್ರೀಕಂಠಶಾಸ್ತ್ರಿ ; ಪು. ೧೩೪–೧೩೫.

ಸಂಬಂಧಪಟ್ಟ ಪ್ರಶ್ನೆಗಳಿಗೆ ವಿದ್ವಜ್ಜನರು ಒಪ್ಪುವ ರೀತಿಯಲ್ಲಿ ಉತ್ತರಿಸಿ, ಆಧ್ಯಾತ್ಮಿಕ ಸಾಧನಾಭ್ಯಾಸಗಳನ್ನು ಸಮನ್ವಯಗೊಳಿಸಿ ತಮ್ಮದೇ ಆದ ಒಂದು ಪ್ರತ್ಯಭಿಜ್ಞಾದರ್ಶನವನ್ನು ನಮ್ಮ ಮುಂದಿಟ್ಟಿದ್ದಾರೆ. ಈ ದಾರ್ಶನಿಕ ತತ್ತ್ವಶಾಸ್ತ್ರವು ಕ್ರಿ. ಶ. ೯ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ಸುವ್ಯವಸ್ಥಿತವಾಗಿ ಬೆಳೆದುಬಂದಿತು.

ಈ ಕಾಶ್ಮೀರ ಶೈವಪಂಥಕ್ಕೆ ಮೂಲಪುರುಷ ದೂರ್ವಾಸ ಮಹರ್ಷಿಯೆಂದೂ ದೂರ್ವಾಸ ಸಂತತಿಯವರು ಈ ಶೈವಶಾಸ್ತ್ರವನ್ನು ಪ್ರಸರಿಸಿ ಶೈವಧರ್ಮವನ್ನು ಉದ್ಧರಿಸಿದರೆಂದೂ ಸಿದ್ಧ ಸೋಮಾನಂದರು ಶಿವದೃಷ್ಟಿಯೆಂಬ ತಮ್ಮ ಗ್ರಂಥದಲ್ಲಿ ಹೇಳಿರುವರು.

ಕಾಶ್ಮೀರ ಶೈವಮತದ ಪುನರುತ್ಥಾನಕಾಲದಲ್ಲಿ ಬಗೆಬಗೆಯ ದಾರ್ಶನಿಕರ ಭಾವನೆಗಳಿಗೆ ಕಾಶ್ಮೀರವು ಕೇಂದ್ರಸ್ಥಾನವಾಗಿತ್ತು. ಅಶೋಕನ ಕಾಲದಲ್ಲಿ (ಕ್ರಿ.ಪೂ. ೨೭೩-೨೩೨) ಕಾಶ್ಮೀರವು ಬೌದ್ಧಮತಕ್ಕೆ ಆಶ್ರಯವಾಗಿತ್ತು. ಅನಂತವೂ ರಾಜಾಶ್ರಯದಿಂದಲೂ ಅಶ್ವಘೋಷನೇ ಮೊದಲಾದ ಘನವಿದ್ವಾಂಸರ ಪ್ರಾಬಲ್ಯದಿಂದಲೂ ಬೌದ್ಧಮತವು ಉಚ್ಛ್ರಾಯಸ್ಥಿತಿಗೆ ಬಂದಿತು. ಬೌದ್ಧರು ಅಲ್ಲಿ ನೆಲೆಗೊಳ್ಳುವುದಕ್ಕೆ ಮುಂಚಿನಿಂದ ಇದ್ದ ಶೈವಮತವು ಶಿಲವಾಗುತ್ತಾ ಬಂದಿತು. ಬೌದ್ಧಪಂಡಿತರನ್ನು ವಾಗ್ವಾದದಲ್ಲಿ ಗೆಲ್ಲುವುದು ಅಸಾಧ್ಯವೆನ್ನಿಸಿದ ವಸುಗುಪ್ತನೆಂಬ ಸಿದ್ಧಪುರುಷನು ಶಿವಮತವನ್ನುದ್ಧಾರ ಮಾಡಬೇಕೆಂದು ಶಿವನನ್ನೇ ಪ್ರಾರ್ಥಿಸಿದನೆಂಬ ಐತಿಹ್ಯವೂ ಉಂಟು. ಕಾನಿಷ್ಕ ಚಕ್ರವರ್ತಿಯು ಕಾಶ್ಮೀರದಲ್ಲಿ ಬೌದ್ಧರ ಸಭೆಯೊಂದನ್ನು ಕರೆದು ಬೌದ್ಧಮತಪ್ರಚಾರಕ್ಕಾಗಿ ಕಾನಿಷ್ಕಪುರವನ್ನು ದಾನವಾಗಿ ಕೊಟ್ಟಾಗ ಶೈವರು ಬೌದ್ಧಮತದ ಪ್ರಾಬಲ್ಯವನ್ನು ಕಂಡುಕೊಂಡರು. ಆಗ ಕಾಶ್ಮೀರದಲ್ಲಿ ಪಾಣಿನಿ ವ್ಯಾಕರಣವು ವಿಶೇಷವಾಗಿ ಅಭ್ಯಾಸದಲ್ಲಿತ್ತು. ಪತಂಜಲಿಯ ಮಹಾಭಾಷ್ಯದ ಮೇಲೆ ಕೈಯಟನು ವ್ಯಾಖ್ಯಾನವನ್ನು ಬರೆದಿದ್ದನು. ಅದ್ವೈತವೇದಾಂತವು ಸಾಮಾನ್ಯವಾಗಿ ಬಳಕೆಯಲ್ಲಿತ್ತು. ಶಂಕರಾಚಾರ್ಯರು (ಕ್ರಿ.ಶ. ೮೨೦) ಕಾಶ್ಮೀರದ ಯಾತ್ರೆಯನ್ನು ಕೈಗೊಂಡು ಅದ್ವೈತ ಭಾವನೆಯನ್ನು ಮೂಡಿಸಿದ್ದರು. ಕೆಲವು ಶೈವಪಂಡಿತರು ಶಾಕ್ತಾದ್ವೈತಮತವನ್ನು ಅಭಿವೃದ್ಧಿಗೊಳಿಸಿದ್ದರು. ಆಗ ಪ್ರಚಾರದಲ್ಲಿದ್ದ ಸಾಂಖ್ಯಮತವು ವೇದಾಂತ ವಿಚಾರಗಳಲ್ಲಿ ಪರಿಪೋಷಕವಾಗಿತ್ತು. ಇಂತಹ ಸನ್ನಿವೇಶದಲ್ಲಿ ಪ್ರತ್ಯಭಿಜ್ಞಾಸಿದ್ಧಾಂತವು ಪ್ರಾರಂಭವಾಯಿತು.

ಈ ಸಿದ್ಧಾಂತವು ಅನೇಕ ದಾರ್ಶನಿಕರ ಭಾವನೆಗಳ ಸಮ್ಮೇಳನ ಸ್ವರೂಪವಾಗಿದೆ. ಈ ಸಿದ್ಧಾಂತದಲ್ಲಿ ಭೇದವಾದ, ಭೇದಾಭೇದವಾದ, ಅಭೇದವಾದಗಳ ಸಮನ್ವಯವು ಯುಕ್ತಿ, ಅನುಭವ, ಸಂಪ್ರದಾಯಗಳಿಂದ ಸಮರ್ಥಿಸಲ್ಪಟ್ಟಿದೆ ಎಂಬುದನ್ನು ಕಾಣಬಹುದು. ಹಾಗೆಯೇ ಬೌದ್ಧರ ವಿಜ್ಞಾನವಾದದ ಕ್ರಮವನ್ನೂ ಧರ್ಮವನ್ನೂ ವಿಷಯಗಳನ್ನೂ ಅಳವಡಿಸಿಕೊಂಡಿದೆ. ವೈದಿಕ ಸಂಪ್ರದಾಯದವರ ವಿಚಾರಧೋರಣೆಯಿದೆ. ಶೈವ ಮತ್ತು ಶಾಕ್ತ ಸಂಪ್ರದಾಯಗಳ ಸಾಧನಾಭ್ಯಾಸಗಳೂ ಉಪನಿಷತ್ತುಗಳ ಉಪಾಸನಾ ಮಾರ್ಗಗಳೂ ಇದರಲ್ಲಿ ಅಡಕವಾಗಿವೆ. ಪ್ರಾಣಾಯಾಮವೇ ಮೊದಲಾದ

ಯೋಗಾಭ್ಯಾಸದ ಅಂಶಗಳಿಂದ ಕೂಡಿದೆ. ಹಾಗೆಯೇ ಸಾಂಖ್ಯರ ೨೫ ತತ್ತ್ವಗಳನ್ನು ಅವಶ್ಯಕವಾದ ವ್ಯತ್ಯಾಸಗಳಿಂದ ಒಪ್ಪಿದೆ. ವೈಷ್ಣವ ಸಂಪ್ರದಾಯದ ಭಕ್ತಿ, ಆಲಂಕಾರಿಕರ ರಸ ಈ ಎರಡು ಅಂಶಗಳನ್ನು ಸ್ವೀಕರಿಸಿದೆ. ಈ ಸಿದ್ಧಾಂತವು ದಾರ್ಶನಿಕ ಭಾವನೆಗಳಲ್ಲಿ ಮುಖ್ಯವಾಗಿ ಪ್ರಯೋಗ ಮತ್ತು ಅನುಭವಗಳ ಆಳವನ್ನು ಮುಟ್ಟಿದೆ. ಸಾಧನಮಾರ್ಗದಲ್ಲಿ ಇತರ ದರ್ಶನಗಳ ಮುಖ್ಯ ಅಭಿಪ್ರಾಯಗಳನ್ನು ಅಳವಡಿಸಿಕೊಂಡಿದೆ. ಪ್ರತ್ಯಭಿಜ್ಞಾಶಾಸ್ತ್ರದ ಸಾರವಾದರೂ ಪ್ರಕಾಶ--ವಿಮರ್ಶ, ಶಿವ–ಶಕ್ತಿ, ಜ್ಞಾನ–ಕ್ರಿಯೆ, ವಿದ್ಯೆ–ಅವಿದ್ಯೆ, ಭೇದ–ಅಭೇದ ಮುಂತಾದ ಪ್ರಕ್ರಿಯೆಗಳ ಸಾಮರಸ್ಯ.

ಈ ಶಿವಾದ್ವೈತಮತವು ಪೂರ್ಣವಾಗಿ ತನ್ನ ದಾರ್ಶನಿಕ ಭಾವನೆಯಲ್ಲಿ ಅದ್ವೈತ ವಾದವಾಗಿದೆ. ಯಜ್ಞಯಾಗಾದಿಗಳನ್ನು ಆಚರಣೆಯಲ್ಲಿಟ್ಟುಕೊಂಡಿರುವ ಮತಗಳಿಗಿಂತ ಬೇರೆಯಾಗಿದೆ. ವರ್ಣಭೇದವಿಲ್ಲದೆ ಯಾರುಬೇಕಾದರೂ ಈ ಸಂಪ್ರದಾಯವನ್ನನುಸರಿಸಿ ಮೋಕ್ಷವನ್ನು ಪಡೆಯಬಹುದು. ಇಲ್ಲಿ ಜಾತಿ, ರಾಷ್ಟ್ರೀಯತೆ ಮೊದಲಾದ ನಿರ್ಬಂಧ ಗಳಿಲ್ಲ. ವಿಶ್ವಭ್ರಾತೃತ್ವವೇ ಇದರ ಗುರಿ. ಇದು ಆಗಮಗಳನ್ನೇ ಅನುಸರಿಸಿರುವ ಮತ. ಈ ಮತಕ್ಕೆ ೬೪ ಶೈವಾಗಮಗಳು ಆಧಾರವಾಗಿವೆ. ಈ ಮತವು ಕೇವಲ ಯುಕ್ತಿ ವಾದವಲ್ಲ. ಬರೀ ಶಾಸ್ತ್ರಗಳನ್ನೇ ಆಶ್ರಯಿಸಿಲ್ಲ. ಅನೇಕ ಸಾಧಕರ ಸಾಧನೆಗಳಿಂದುಂಟಾದ ಅನುಭವಸಿದ್ಧವಾದ ವಿಷಯಗಳ ಮೇಲೆ ಪ್ರಧಾನವಾಗಿ ಆಧಾರಪಟ್ಟಿರುವುದಾಗಿದೆ.

ಸಾಧನ ಪ್ರಯೋಗಗಳು ಭಾವನಾಮಯವಾಗಿ ನಿಂತರೆ ಅನುಭವ. ಅನುಭವದ ರಹಸ್ಯವನ್ನು ಭೇದಿಸಿ ತಿಳಿಯಬೇಕಾದರೆ ಸಮ್ಯಕ್‌ದೃಷ್ಟಿ, ತತ್ತ್ವವಿಚಾರ, ತತ್ತ್ವಾನು ಶೀಲನ, ಸಮ್ಯಕ್‌ಜ್ಞಾನ, ಗುರೂಪದೇಶಗಳು ಬೇಕು. ಹಾಗೆಯೇ ಇವುಗಳ ಪೂರ್ವ ಸಿದ್ಧತೆಗಾಗಿ ಶೀಲಸಂಪಾದನೆ, ಸತ್ಯಾನ್ವೇಷಣ ಮೊದಲಾದ ಹಲವು ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ಪೂಜೆ ಪ್ರಾರ್ಥನೆ ಧ್ಯಾನಾದಿಗಳನ್ನು ಕೈಗೊಳ್ಳುತ್ತಿದ್ದೇವೆ. ಸತ್ಸಂಗ ಗುರುಶುಶ್ರೂಷೆಗಳನ್ನು ಮಾಡುತ್ತಿದ್ದೇವೆ. ಈ ರೀತಿಯಲ್ಲಿ ನಾವು ಯಾವ ಮತಧರ್ಮ ಗಳನ್ನಾದರೂ ವಿಮರ್ಶೆ ಮಾಡುತ್ತಾ ಹೋದರೆ ತತ್ತ್ವವು ಸುಲಭವಾಗಿ ವೇದ್ಯವಾಗು ವುದು. ಶಿವಾನುಭವವೆಂಬುದು ಒಂದು ವಿಶಿಷ್ಟ ಜೀವನ. ಒಂದು ಅಪೂರ್ವವಾದ ಅನುಭವ. ಅದು ಲೌಕಿಕ ಪ್ರಪಂಚದಲ್ಲಿ ಜೀವನವನ್ನು ಸಾಗಿಸುವುದಕ್ಕೆ ಅಥವಾ ಬಾಳುವು ದಕ್ಕೆ ಮಾಡುವ ಪ್ರಯತ್ನಗಳಿಂದ ದೊರೆಯುವ ಅನುಭವವಲ್ಲ. ಈ ಅನುಭವಗಳು ಬುದ್ಧಿಶಕ್ತಿ ಅಥವಾ ಜ್ಞಾನಸಾಮಗ್ರಿಗಳನ್ನು ಹೆಚ್ಚಿಸತಕ್ಕವುಗಳು. ಶಿವಾನುಭವವಾದರೋ ನಮ್ಮ ಸ್ವಭಾವವನ್ನು ಪರಿವರ್ತನ ಮಾಡುವಂತಹುದು. ಸತ್ಯವನ್ನು ಒಳಹೊಕ್ಕು ನೋಡುವ ಸೂಕ್ಷ್ಮ ಪರಿಜ್ಞಾನವನ್ನುಂಟುಮಾಡುವಂತಹುದು. ಮಹತ್ತ್ವದ ಅರಿವನ್ನೂ ನೇರವಾಗಿ ಕೊಡುವಂತಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಅದು ಬ್ರಹ್ಮ ವಿಹಾರ, ಪರಮಾರ್ಥಾನುಭವ.

ತ್ರಿಕಸಾಹಿತ್ಯ

ಕಾಶ್ಮೀರದಲ್ಲಿ ಪ್ರಚಲಿತವಾಗಿರುವ ಶೈವಧರ್ಮವನ್ನು ತ್ರಿಕದರ್ಶನ ಎಂದು ಕರೆಯುವ ವಾಡಿಕೆಯಿದೆ. ಈ ದರ್ಶನ ಪತಿ, ಪಶು, ಪಾಶ ಎಂಬ ಮೂರು ಪ್ರಧಾನ ವಿಭಾಗಗಳುಳ್ಳ ಶಾಸ್ತ್ರವೆಂದರ್ಥ. ಶೈವಾಗಮಗಳಲ್ಲಿ ಸಿದ್ಧ, ನಾಮಕ, ಮಾಲಿನೀತಂತ್ರ ಎಂಬ ಶೈವಾಗಮಗಳೇ ಮಹತ್ವವಾದ ಆಧಾರವಾದುದರಿಂದ ಈ ದರ್ಶನಕ್ಕೆ ತ್ರಿಕ ಅಥವಾ ಷಡರ್ಥಶಾಸ್ತ್ರ ಎಂದು ಹೆಸರು ಬರಲು ಕಾರಣವಾಯಿತು. ಈ ತತ್ತ್ವದಲ್ಲಿ ಪತಿ, ಪಶು, ಪಾಶ ಎಂಬಿವೇ ಮೂರು ಪ್ರಧಾನವಾದ ಅಂಶಗಳು. ಪತಿ ಎಂದರೆ ಪರಮಶಿವ, ಪಶು ಎಂದರೆ ಜೀವ, ಪಾಶ ಎಂದರೆ ಪರಮಶಿವನಿಂದ ಜೀವನನ್ನು ಬೇರ್ಪಡಿಸಿ ಸಂಸಾರಾವಸ್ಥೆಯಲ್ಲಿಟ್ಟಿರುವ ಬಂಧ. ಜೀವನು ಶಿವನಿಂದ ತಾನು ಬೇರೆಯಲ್ಲವೆಂದು ತಿಳಿದಾಗ ಪಾಶವು ಮಾಯವಾಗುವುದು. ಪಾಶವನ್ನು ಮಲವೆಂದು ಕರೆಯುವುದು ಈ ಸಂಪ್ರದಾಯದ ಸಾಮಾನ್ಯ ವಿಷಯ. ಮಲನಿವೃತ್ತಿಯಿಂದ ಮೋಕ್ಷಪ್ರಾಪ್ತಿ ಎಂಬುದು ಈ ಮತದ ಗುರಿ. ಇದರಿಂದ ಇದಕ್ಕೆ ಪಾಶುಪತಮತವೆಂದು ಹೆಸರಾಯಿತು.

ತ್ರಿಕಸಾಹಿತ್ಯವು ವಿಪುಲವಾದದ್ದು. ಇದು ಮೂರುತೆರನಾಗಿದೆ.

೧. ಆಗಮಶಾಸ್ತ್ರ
೨. ಸ್ಪಂದಶಾಸ್ತ್ರ
೩. ಪ್ರತ್ಯಭಿಜ್ಞಾ ಶಾಸ್ತ್ರ.

ಆಗಮಶಾಸ್ತ್ರ : ಆಗಮಶಾಸ್ತ್ರ ಅಂದರೆ ಬಹಳ ಹಿಂದಿನಿಂದ ಅನೂಚಾನವಾಗಿ ದೈವಿಕ ಪ್ರಾಮಾಣ್ಯವೆಂದು ನಂಬಿರುವ ಪರಂಪರಾಗತ ಬೋಧೆ ಅಥವಾ ಸಂಪ್ರದಾಯ. ಉದಾಹರಣೆ : ಶಿವಶಕ್ತಿ ಸಂಭಾಷಣಾ ರೂಪವಾದ ಸಾಹಿತ್ಯ ಶಿವಸೂತ್ರಗಳು ಶಿವನಿಂದಲೇ ವಸುಗುಪ್ತನಿಗೆ ಉಪದೇಶಿಸಲ್ಪಟ್ಟವುಗಳು. ತ್ರಿಕದರ್ಶನಕ್ಕೆ ಮುಖ್ಯವಾದ ಆಧಾರ ಗ್ರಂಥಗಳೆಂದರೆ ಸ್ವಚ್ಛಂಥ ತಂತ್ರ, ಮೃಗೇಂದ್ರಾಗಮ, ರುದ್ರಯಾಮಳ, ಮಾಲಿನೀ ವಿಜಯ, ನೇತ್ರ, ವಿಜ್ಞಾನ ಭೈರವ, ಶಿವಸೂತ್ರಗಳು.

ಪರಶಿವನೇ ಅದ್ವೈತಸಿದ್ಧಾಂತವನ್ನು ಪ್ರತಿಪಾದನೆ ಮಾಡಿ ಪ್ರಚಾರ ಮಾಡುವಂತೆ ದೂರ್ವಾಸ ಋಷಿಗೆ ಅಪ್ಪಣೆ ಮಾಡಿದನು. ತ್ರ್ಯಂಬಕ, ಆಮರ್ದಕ ಮತ್ತು ಶ್ರೀನಾಥ ಎಂಬ ಮಾನಸಪುತ್ರರನ್ನು ಸೃಷ್ಟಿಮಾಡಿ ದೂರ್ವಾಸನು ಕ್ರಮವಾಗಿ ಅದ್ವೈತ, ದ್ವೈತ ಮತ್ತು ದ್ವೈತಾದ್ವೈತ ದರ್ಶನಗಳನ್ನು ಉಪದೇಶ ಮಾಡಿದನು. ತ್ರ್ಯಂಬಕನು ಉಪದೇಶ ಮಾಡಿದ್ದರಿಂದ ಈ ಮತಕ್ಕೆ ತ್ರ್ಯಂಬಕದರ್ಶನವೆಂಬ ಒಂದು ಹೆಸರು. ತ್ರ್ಯಂಬಕನಿಂದ ೧೯ ನೆಯವನಾದ ಸೋಮಾನಂದನು (ಕ್ರಿ.ಶ. ೮೫೦) ತನ್ನ ಶಿವದೃಷ್ಟಿ ಗ್ರಂಥದಲ್ಲಿ ತನ್ನನ್ನು ಹೇಳಿಕೊಂಡಿದ್ದಾನೆ.

ಸ್ಪಂದಶಾಸ್ತ್ರ: ಪರಿಪೂರ್ಣನಾದ ಶಿವನು ಪರಿಮಿತವಾದ ವಿಶ್ವವನ್ನು ಪ್ರಕಾಶಪಡಿಸುವುದರಲ್ಲಿ ತನ್ನ ಮೊದಲನೆಯ ಸ್ಥಿತಿಯಿಂದ ಶಕ್ತಿಗಳನ್ನು ಪ್ರಸರಿಸುವುದರಲ್ಲಿ ಮೊದಲ

ನೆಯ ಸ್ಫುರಣವೇ ಸ್ಪಂದ. ಸ್ಪಂದ, ಕಂಪನ, ಚಲನ, ಸ್ಫುರತ್ತಾ, ಉನ್ಮೇಷ–ಇವೆಲ್ಲವೂ ಮೂಲದಲ್ಲಿ ವಿಕಾರವಿಲ್ಲದೆ ಶಕ್ತಿವಿಲಾಸವನ್ನು ತೋರ್ಪಡಿಸುವುವು. ವಿಶ್ವದ ಭೇದಗಳು ಅನಂತವಾಗಿದ್ದು ಸ್ಪಂದಶಕ್ತಿಯ ಮಹಿಮೆಯಿಂದ ಪ್ರತಿಯೊಂದು ಪದಾರ್ಥವೂ ಭಿನ್ನ ಭಿನ್ನವಾಗಿ ಗುಣ, ಕ್ರಿಯೆ, ಆಕಾರ, ವ್ಯವಹಾರ, ಪರಿಣಾಮ–ಇವುಗಳಿಂದ ಬೇರೆಬೇರೆ ಯಾಗಿ ತೋರುತ್ತಿರುತ್ತದೆ. ಸ್ಪಂದದೃಷ್ಟಿಯಿಂದ ಪ್ರತಿಯೊಂದು ವ್ಯಕ್ತಿಯನ್ನೂ ಸ್ಪಂದದ ಮಿತಿಯಿಂದ ಪ್ರತಿಯೊಂದು ಪದಾರ್ಥವನ್ನೂ ಅರಿಯುವುದರಿಂದ ಐಕ್ಯ ಮತ್ತು ಭಿನ್ನತೆಗಳು ಒಂದರಲ್ಲೇ ಅಡಗಿರುತ್ತದೆಂಬುದೂ ವಿಶ್ವವ್ಯವಹಾರಗಳೆಲ್ಲ ಸ್ಪಂದದ ತಾರತಮ್ಯಗಳಿಂದ ನಡೆಯುತ್ತಿರುತ್ತೆಂಬುದೂ ಸ್ಪಂದದಿಂದ ತಿಳಿಯುತ್ತದೆ. ಸತ್ವರಜಸ್ ತಮಸ್ಸುಗಳ ಪ್ರಭಾವವು ಚಿತ್ಸ್ಪಂದದಿಂದಲೇ ಹೊರಟಿರುವುವು. ಸ್ಪಂದತತ್ತ್ವದ ಸ್ವರೂಪವನ್ನು ಅನುಸಂಧಾನ ಮಾಡುವವನಿಗೆ ಸ್ವರೂಪ ವಿಕಾಸವೇರ್ಪಡುತ್ತದೆ. ಸುಖ ದುಃಖ, ಗ್ರಾಹ್ಯಗ್ರಾಹಕ ಭಾವಗಳು ಈ ಎಲ್ಲಾ ವ್ಯತ್ಯಾಸಗಳೂ ಸ್ಪಂದಶಕ್ತಿಯ ವಿಲಾಸ ಗಳು. ಈ ಸಾಹಿತ್ಯಕ್ಕೆ ಸಂಬಂಧಿಸಿದ ಸ್ಪಂದಕಾರಿಕೆಗಳು ಶಿವಸೂತ್ರಗಳನ್ನೂ ಪ್ರತಿಪಾದಿಸ ತಕ್ಕವುಗಳಾಗಿವೆ. ಈ ಕಾರಿಕೆಗಳಲ್ಲಿ ಮುಖ್ಯವಾದ ಗ್ರಂಥಗಳು ಕ್ಷೇಮರಾಜ ವಿರಚಿತ ‘ ಸ್ಪಂದನಿರ್ಣಯ ’ ಮತ್ತು ‘ ಸ್ಪಂದ ಸಂದೋಹ ’, ಉತ್ಪಲವೈಷ್ಣವನ ‘ ಪ್ರದೀಪಿಕಾ ’ ಮತ್ತು ರಾಮಕಾಂತನ ‘ ಸ್ಪಂದ ವಿವೃತಿ ’, ‘ ಸ್ಪಂದಸರ್ವಸ್ವ’ವೆಂಬ ಹೆಸರಿನಿಂದ ಪ್ರಸಿದ್ಧಿಯಾಗಿರುವ ‘ ಸ್ಪಂದಕಾರಿಕೆ ’ಯ ವ್ಯಾಖ್ಯಾನವೇ ಕಲ್ಲಟನ ಶ್ರೇಷ್ಠ ಕೃತಿ. ‘ ಶಿವ ದೃಷ್ಟಿ’ ಮತ್ತು ‘ ಪರಾತ್ರಿಂಶಿಕಾವಿವೃತಿ ’ ಎಂಬವು ಸೋಮಾನಂದನ ಮಹತ್ವಪೂರ್ಣ ವಾದ ಗ್ರಂಥಗಳು.

ಪ್ರತ್ಯಭಿಜ್ಞಾ ಶಾಸ್ತ್ರ : ಉತ್ಪಲಾಚಾರ್ಯನ (ಕ್ರಿ.ಶ. 900) ‘ ಈಶ್ವರ ಪ್ರತ್ಯ ಭಿಜ್ಞಾಕಾರಿಕಾ ’ ಎಂಬ ಗ್ರಂಥವು ಪ್ರಮಾಣ ಪೂರ್ವಕವಾಗಿ ಪ್ರತಿಪಕ್ಷವನ್ನು ಖಂಡನೆ ಮಾಡಿ ಅದ್ವೈತತತ್ತ್ವವನ್ನು ಸಿದ್ಧಾಂತ ಮಾಡವುದಾಗಿರುತ್ತದೆ. ಉತ್ಪಾಲಾಚಾರ್ಯನ ‘ ಸಿದ್ಧತ್ರಯೀ ’ ಎಂಬ ಗ್ರಂಥದಲ್ಲಿ ಅಜಡ ಪ್ರಮಾತೃಸಿದ್ಧಿ, ಈಶ್ವರಸಿದ್ಧಿ ಮತ್ತು ಸಂಬಂಧ ಸಿದ್ಧಿಯನ್ನು ವಿವೇಚಿಸಲಾಗಿದೆ.

ಅಭಿನವಗುಪ್ತ (ಕ್ರಿ.ಶ. ೯೫೦–೧೦೦೦). ಈಶ್ವರ ಪ್ರತ್ಯಭಿಜ್ಞಾವಿಮರ್ಶಿನಿ, ತಂತ್ರಾಲೋಕ, ಪರಾತ್ರಿಂಶಿಕಾವಿವೃತಿ, ಪರಮಾರ್ಥಸಾರ, ಅಭಿನವಭಾರತಿ ಮತ್ತು ಲೋಚನ–ಗ್ರಂಥಗಳು ತ್ರಿಕದರ್ಶನದಲ್ಲಿ ಇವನ ಹೆಸರನ್ನು ಅಮರಗೊಳಿಸಿವೆ.

ಕ್ಷೇಮರಾಜ (ಕ್ರಿ.ಶ. ೯೭೫–೧೦೨೫). ಈತನು ಅಭಿನವಗುಪ್ತನ ಶಿಷ್ಯ. ಇವನ ಪ್ರಸಿದ್ಧವಾದ ಗ್ರಂಥಗಳು ಶಿವಸೂತ್ರ ವಿಮರ್ಶಿನಿ, ಸ್ವಚ್ಛಂದ ತಂತ್ರ, ವಿಜ್ಞಾನಭೈರವ, ಇವುಗಳ ವ್ಯಾಖ್ಯಾನ, ಪ್ರತ್ಯಭಿಜ್ಞಾ ಹೃದಯ, ಸ್ಪಂದ ಸಂದೋಹ ಮುಂತಾದುವು.

ಭಾಸ್ಕರ ಮತ್ತು ವರದರಾಜ ಇವರಿಬ್ಬರ ಶಿವಸೂತ್ರ ವಾರ್ತಿಕಾ, ಮಹೇಶ್ವರಾ ನಂದನ ‘ ಪರಿಮಳ ’ ಸಹಿತವಾದ ‘ ಮಹಾರ್ಥಮಂಜರಿ ’ ಇವು ಮುಖ್ಯವಾದ ಗ್ರಂಥಗಳು.

ಕಾಶ್ಮೀರ ಶೈವದಾರ್ಶನಿಕರ ದೃಷ್ಟಿ ಮತ್ತು ಭಾವನೆಗಳು

ಕಾಶ್ಮೀರ ಶಿವಾದ್ವೈತ ಸಿದ್ಧಾಂತವು ಅನುಭವ ಭಾವನಾಮಯವಾಗಿದೆ. ಇದು ಮನುಷ್ಯನ ಅನುಭವವನ್ನು ತೀವ್ರವಾಗಿ ವಿಮರ್ಶಿಸಿ ಆಧ್ಯಾತ್ಮ ತತ್ತ್ವವಿವೇಚನೆಯಿಂದ ಮಾತ್ರವೇ ಪರತತ್ತ್ವವನ್ನು ಪಡೆಯಬಹುದೆಂದು ತೋರಿಸುತ್ತದೆ. ಹಾಗೆಯೇ ಈ ಸಿದ್ಧಾಂತವು ದಾರ್ಶನಿಕ ಭಾವನೆಗಳಲ್ಲಿ ಮುಖ್ಯವಾಗಿ ಪ್ರಯೋಗ ಮತ್ತು ಅನುಭವಗಳ ಆಳವನ್ನು ಮುಟ್ಟಿದೆ. ತರ್ಕಬದ್ಧವಾಗಿ ಇತರ ತತ್ತ್ವಗಳನ್ನು ವಿಮರ್ಶಿಸಿ ತನ್ನ ಪ್ರಾಮಾಣ್ಯವನ್ನು ಸ್ಥಿರಪಡಿಸುತ್ತದೆ. ಮಾನವನಿಗೂ ವಿಶ್ವಕ್ಕೂ ಐಕ್ಯವನ್ನು ಒಪ್ಪಿದೆ. ಆದರೂ ಇದು ಪ್ರಕೃತ್ಯಾತ್ಮಕ ವಿಶ್ವದ ವಿಷಯದಲ್ಲಿ ಪ್ರವೃತ್ಯಾತ್ಮಕ ಸತ್ಯತಾವಾದವನ್ನು ಎತ್ತಿಹಿಡಿದಿದೆ. ಈ ಸಿದ್ಧಾಂತದಲ್ಲಿ ಮುಖ್ಯಸಾಧನೆ ಸ್ವಾತಂತ್ರ್ಯ. ಈ ಸ್ವಾತಂತ್ರ್ಯವು ಪರಿಪೂರ್ಣವಾದದ್ದು. ಸ್ವಾತಂತ್ರ್ಯವನ್ನು ಪಡೆಯುವುದೇ ಕೊನೆಯಗುರಿ. ಇದು ಈ ಸಿದ್ಧಾಂತದ ವೈಶಿಷ್ಟ್ಯ.

ಈ ಸಿದ್ಧಾಂತವನ್ನು ತ್ರಿಕಶಾಸ್ತ್ರವೆಂದು ಕರೆಯುವ ವಾಡಿಕೆ ಇದೆ. ಇದು ಮಾನವನ ಸಂಪೂರ್ಣ ರಚನೆಯನ್ನು ವಿಮರ್ಶಿಸುತ್ತದೆ. ಮಾನವನ ದೈಹಿಕ, ಮಾನಸಿಕ, ಅಂತಃಕರಣ, ಚೈತನ್ಯ ಮೊದಲಾದ ಎಲ್ಲಾ ವಿಷಯಗಳಲ್ಲಿಯೂ ಸಮಗ್ರವಾಗಿ ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸುತ್ತದೆ. ಸಾಂಖ್ಯರು ಮಾನವನ ರಚನೆಯು ೨೫ ತತ್ತ್ವಗಳಿಂದ ಕೂಡಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ತ್ರಿಕಶಾಸ್ತ್ರಜ್ಞರಾದರೋ 'ಪ್ರಕೃತಿ' 'ಪುರುಷ' ತತ್ತ್ವಗಳಮೇಲೆ ಇನ್ನೂ ಹನ್ನೊಂದು ತತ್ತ್ವಗಳಿವೆಯೆಂದು ನಿರ್ಧರಿಸಿದ್ದಾರೆ. ತತ್ತ್ವ ಎಂದರೆ ಒಂದು ಪದಾರ್ಥದ ವಿಷಯದ ಸಾರಸರ್ವಸ್ವ. ಜೀವಾತ್ಮನು ೩೬ ತತ್ತ್ವಗಳಿಂದ ಕೂಡಿದ್ದಾನೆ. ಮಾನವನು ೩೬ ತತ್ತ್ವಗಳ ಪುಂಜದಿಂದ ಕೂಡಿರುವಂತೆಯೇ ವಿಶ್ವವೂಕೂಡ ೩೬ ತತ್ತ್ವಗಳ ಪುಂಜವೆಂದು ಶಾಸ್ತ್ರಜ್ಞರು ಸಮರ್ಥಿಸಿದ್ದಾರೆ. ಇಷ್ಟೇ ಅಲ್ಲದೆ ಅವುಗಳನ್ನು ಸಾಕ್ಷಾತ್ತಾಗಿ ಅನುಭವಕ್ಕೆ ತಂದುಕೊಳ್ಳುವ ಮಾರ್ಗವನ್ನು ಹೇಳಿದ್ದಾರೆ. ವೈಜ್ಞಾನಿಕ ಮತ್ತು ತಾತ್ತ್ವಿಕ ಭಾವನೆಗಳ ದೃಷ್ಟಿಯಿಂದಲೂ ನೈತಿಕ ಮತ್ತು ಆಧ್ಯಾತ್ಮಿಕ ಧರ್ಮಪ್ರಯೋಗಗಳ ರೀತಿಯಿಂದಲೂ ಆತ್ಮಸಾಕ್ಷಾತ್ಕಾರಕ್ಕೆ ಈ ತ್ರಿಕ ಸಿದ್ಧಾಂತವು ಸಾಧನ ರೂಪವಾಗಿದೆ. ಈ ಸಿದ್ಧಾಂತದ ತತ್ತ್ವಗಳು ತೀರಾಗಹನವಾದವೂ ಸೂಕ್ಷ್ಮವಾದವೂ ಆಗಿವೆ. ಇದನ್ನು ಅನುಷ್ಠಾನಕ್ಕೆ ತರುವ ಸಾಧಕನ ನೈತಿಕ, ಬೌದ್ಧಿಕ ಮಟ್ಟವು ತೀರಾ ಉನ್ನತವಾದದ್ದಾಗಿರಬೇಕು. ಇದನ್ನು ಪ್ರತ್ಯಭಿಜ್ಞಾ ಶಾಸ್ತ್ರವೆಂದು ಕರೆಯುವುದು ರೂಢಿಯಲ್ಲಿ ಬಂದಿದೆ.

ಅನುಭವವು ಎಲ್ಲಾ ದಾರ್ಶನಿಕರಿಗೂ ಒಂದೇ, ವಿವರಣೆಗಳು ಮಾತ್ರಬೇರೆ. ಎಲ್ಲಾ ದರ್ಶನಗಳೂ ಪ್ರಮಾತೃ ಅಥವಾ ಅನುಭವದ ಸಾಕ್ಷಿಯಾರು ಎಂಬ ವಿಚಾರದಲ್ಲಿ ಮಗ್ನವಾಗಿರುತ್ತವೆ. ಅನುಭವದ ವಿಷಯ ಸರ್ವರಿಗೂ ಸಮಾನ. ಜ್ಞಾತೃಜ್ಞೇಯಗಳ ರಹಸ್ಯವೇನೆಂಬುದೇ ಪ್ರತ್ಯಭಿಜ್ಞಾ ಶಾಸ್ತ್ರದ ವಿಮರ್ಶನೀಯ ವಿಷಯ.

ಜ್ಞಾತೃಜ್ಞೇಯ, ಪ್ರಮಾತಾ ಪ್ರಮೇಯ ಇವುಗಳ ಮೂಲತತ್ತ್ವದ ಶೋಧನೆಗೆ ಹೊರಟಾಗಲೇ ಒಂದು ಕಡೆ ಜ್ಞಾನದ ಉಪಕರಣಗಳಾದ ಇಂದ್ರಿಯಗಳು, ಅಂತಃಕರಣವಾದ ಮನಸ್ಸು ಇವುಗಳೆಲ್ಲಕ್ಕೂ ಮೂಲವಾದ ಸಾಕ್ಷಿ–ಇವುಗಳ ಸ್ವರೂಪಜ್ಞಾನವಾಗುವುದು. ಇನ್ನೊಂದುಕಡೆ ಬಾಹ್ಯಸೃಷ್ಟಿಗೆಲ್ಲಾ ಪ್ರೇರಕನಾದ ಪರಮೇಶ್ವರನ ಕಲ್ಪನೆಯೂ ಆಗುವುದು. ಇವೆರಡಕ್ಕೂ ಸಾಮರಸ್ಯ ಬರಲು ಒಂದೇ ತತ್ತ್ವವನ್ನಾಶ್ರಯಿಸಬೇಕಾಗುತ್ತದೆ. ಅಪರಿಮಿತ ಇಚ್ಛಾಜ್ಞಾನ ಕ್ರಿಯಾಶಕ್ತಿಗಳುಳ್ಳವನು ಪರಮೇಶ್ವರನಾಗುವಂತೆ ಅವನೇ ಪರಿಮಿತ ಇಚ್ಛಾಜ್ಞಾನ ಕ್ರಿಯಾಶಕ್ತಿಗಳಿಂದ ಪುರುಷನೆನಿಸುವನು, ಪಶುವೆನಿಸುವನು. ಒಂದೇ ಅಪರಿಮಿತ ಪ್ರಕಾಶವು ಒಳಗಿನ ಹೊರಗಿನ ಎಲ್ಲಕ್ಕೂ ಮೂಲ. ಆ ಪ್ರಕಾಶವು ವಿಮರ್ಶವನ್ನಗಲಿರಲಾರದು. ಈ ಪ್ರಕಾಶ-ವಿಮರ್ಶಗಳ ಗುರುತಿಸುವಿಕೆ ಅಥವಾ ಪ್ರತ್ಯಭಿಜ್ಞಾನವೇ ಜೀವನ್ಮುಕ್ತಿ. ಈ ಶಿವಯೋಗದ ಸಿದ್ಧಿ ಇಲ್ಲಿಯೇ ಲಭಿಸತಕ್ಕದ್ದು, ಜನ್ಮಾಂತರಗಳಲ್ಲಿ ಉಂಟಾಗುವ ಫಲವಲ್ಲ.

ಈ ಶೈವಮತವು ತನ್ನದೇ ಆದ ಒಂದು ರೀತಿಯಲ್ಲಿ ಸ್ಥೂಲ ಮತ್ತು ಸೂಕ್ಷ್ಮರೂಪದಿಂದಿರುವ ವಿಶ್ವವನ್ನು ವಿವರಿಸುತ್ತದೆ. ಅನಾದಿಕಾಲದಿಂದ ಬಂಧಿತನಾಗಿರುವ ಈ ಜೀವಾತ್ಮನ ಮೋಕ್ಷಕ್ಕೆ ಉಪಾಯವನ್ನು ಸೂಚಿಸಿರುತ್ತದೆ. ಮಾನವನು ತನ್ನ ಅಧಿಕಾರಕ್ಕನುಗುಣವಾಗಿ ತ್ರಿಕರಣಗಳಿಂದ ಯಾವ ರೀತಿ ನಡೆದುಕೊಂಡು ಇಹದಲ್ಲಿ ಶಾಂತಿಯನ್ನೂ ಪರದಲ್ಲಿ ಶ್ರೇಯಸ್ಸನ್ನೂ ಹೊಂದಬಹುದೆಂಬುದನ್ನು ವಿಶಿಷ್ಟ ರೀತಿಯಿಂದ ವಿಮರ್ಶಿಸಿರುತ್ತದೆ.

ದಾರ್ಶನಿಕರ ಉಪದೇಶ ಎರಡುಬಗೆಯದಾಗಿದೆ. ಸಾಮಾನ್ಯವಾದ ಅನುಭವದಿಂದ ಸೂಕ್ಷ್ಮವಾದ ಅಲೌಕಿಕವಾದ ಅತೀಂದ್ರಿಯವಾದ ವಿಷಯಗಳನ್ನು ಊಹಿಸುವುದು ಒಂದು ಬಗೆ. ಹಾಗೆಯೇ ಅತೀಂದ್ರಿಯ ಪರತತ್ತ್ವಗಳನ್ನು ಮೊದಲು ಉದ್ದೇಶಿಸಿ ಸ್ಥೂಲವಾದ ಎಲ್ಲರ ಅನುಭವಕ್ಕೂ ಗೋಚರಿಸುವ ಪ್ರಪಂಚದ ಸ್ವರೂಪ, ಸ್ವಭಾವ ಮತ್ತು ಪ್ರಯೋಜನಗಳನ್ನು ನಿರ್ಣಯಿಸುವುದು ಇನ್ನೊಂದು ಬಗೆ. ಕೊನೆಯ ತೀರ್ಮಾನದಲ್ಲಿ ಸ್ಥೂಲ ಸೂಕ್ಷ್ಮಗಳಿಗೆ ಐಕ್ಯವು ಸಿದ್ಧವಾಗುತ್ತದೆ.

ಕಾಶ್ಮೀರ ಶಿವಾದ್ವೈತ ಸಿದ್ಧಾಂತವು ಅನುಭವ ಭಾವನಾಮಯವಾಗಿದೆ. ಇದು ಪ್ರಪಂಚವೆಲ್ಲಾ ಒಂದೇ ಶಕ್ತಿಯ ವಿಲಾಸವೆಂಬ ಭಾವನೆಯನ್ನು ತಿಳಿಯಪಡಿಸುತ್ತದೆ. ಆ ಶಕ್ತಿಯು ಶಿವಾಭಿನ್ನವೆಂದು ಜಡ ಚೇತನ, ಚಿತ್ತು, ಅಚಿತ್ತು, ಬಾಹ್ಯ, ಆಂತರೀಯ ಎಂಬ ಒಂದಕ್ಕೊಂದು ಭಿನ್ನವಾಗಿರುವ ತತ್ತ್ವಗಳಲ್ಲಿ ಐಕ್ಯವನ್ನು ಒಂದು ಅಪೂರ್ವ ರೀತಿಯಲ್ಲಿ ಬೋಧಿಸುತ್ತದೆ. ಇಲ್ಲಿ ಪರಶಿವನೇ ಪರತತ್ತ್ವ. ಪರತತ್ತ್ವವು ಪೂರ್ಣವಾಗಿ ಜೀವಾತ್ಮನ ಸ್ವರೂಪವೂ ಆಗಿದೆ. ಇದನ್ನು ಬಣ್ಣಿಸಲು ಸಾಧ್ಯವಿಲ್ಲ. ಆದರೆ ಸಾಧನಗಳ ಪರಿಣಾಮವಾಗಿ ಜೀವಾತ್ಮ ಪರಮಾತ್ಮಗಳ ಐಕ್ಯವು ಸಾಧ್ಯ. ಈ ಸಂಯೋಗವನ್ನು ಸಾಧಿಸಲು ಅನೇಕ ಮಾರ್ಗಗಳಿವೆ. ಈ ಸಿದ್ಧಾಂತವು ಮನುಷ್ಯನ ಅನುಭವವನ್ನು ತೀವ್ರ

ವಾಗಿ ವಿಮರ್ಶಿಸಿ ಆಧ್ಯಾತ್ಮತತ್ತ್ವವಿವೇಚನೆಯಿಂದ ಪರತತ್ತ್ವವನ್ನು ಸಾಧಿಸಬಹುದೆಂದು ತೋರಿಸುತ್ತದೆ. ಇದು ತನ್ನ ಪ್ರಾಮಾಣ್ಯವನ್ನು ಸ್ಥಿರಪಡಿಸುತ್ತದೆ. ಈ ತತ್ತ್ವದಲ್ಲಿ ಆಧ್ಯಾತ್ಮ ವಿಮರ್ಶನೆಯಿಂದ ಸ್ವಾತಂತ್ರ್ಯವು ಅಂಗೀಕೃತವಾಗಿದೆ. ಈ ಕಾರಣದಿಂದ ಇದು ಸ್ವತಃ ಅನುಭವದಿಂದ ಗೋಚರವಾಗತಕ್ಕ ಶಾಸ್ತ್ರವಾಗಿದೆ.

ಬ್ರಹ್ಮಾನುಭವದೃಷ್ಟಿಯಿಂದ ಪರತತ್ತ್ವಕ್ಕಿಂತ ಆಚೆ ಹಿರಿಯದು ಯಾವುದೂ ಇಲ್ಲ. ಅದು ಅನಂತ ಮತ್ತು ಅವರ್ಣನೀಯ. ಈ ಪರತತ್ತ್ವವನ್ನು ಇದು, ಅದು, ಇದಲ್ಲ, ಅದಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಸಂಕುಚಿತವಾದ ಮನಸ್ಸು ಅದನ್ನು ಗ್ರಹಿಸಲಾರದು. ಅದನ್ನು ಕುರಿತು ಮಾತುಗಳಿಂದ ವಿವರಿಸಲು ಸಾಧ್ಯವಿಲ್ಲ. ಅದನ್ನು ಇಂದ್ರಿಯಗಳಿಂದ ತಿಳಿಯಲಾಗದು. ಮನಸ್ಸಿನಿಂದ ಊಹಿಸಲಾಗದು. ಆದರೆ ಅನುಭವ ದಿಂದ ಸಾಕ್ಷಾತ್ಕರಿಸಬಹುದು. ನಾವು ಆ ಪರತತ್ತ್ವವನ್ನು ತಿಳಿಯಲಿಕ್ಕೆ ಅಥವಾ ತಿಳಿಸಲಿಕ್ಕೆ ನಮ್ಮ ಭಾಷೆಯ ಯಾವ ಪದವನ್ನು ಉಪಯೋಗಿಸಿದರೂ ಅದರ ಪರಿಪೂರ್ಣ ಸ್ವರೂಪವನ್ನು ತಿಳಿಯಲಾರೆವು. ಆ ಪರತತ್ತ್ವವು ಆಧ್ಯಾತ್ಮ ಸಾಧನೆಗಳಿಂದ ಮಾತ್ರ ಸಾಕ್ಷಾತ್ಕರಿಸಬಹುದಾಗಿದೆ.

ಆಧ್ಯಾತ್ಮತತ್ತ್ವವು ಅನುಭವಕ್ಕೆ ಗೋಚರಿಸುವ ತತ್ತ್ವವು. ಇಲ್ಲಿ ಪರಮ ಶಿವನೇ ಪರತತ್ತ್ವ. ಇವನನ್ನು ಚಿತ್, ಸಂವಿತ್, ಪರಾಸಂವಿತ್ ಎಂದು ಕರೆಯುವರು. ಪರಮ ಶಿವನು ಸರ್ವಸ್ವತಂತ್ರನು, ಸರ್ವಕ್ಕೂ ಕಾರಣನು. ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತವಾಗಿರುವ ಸ್ಥಿತಿಯಲ್ಲಿ ವಿಶ್ವೋತ್ತೀರ್ಣ ಅಥವಾ ವಿಶ್ವಾತೀತನೆನಿಸಿಕೊಳ್ಳುತ್ತಾನೆ. ಹಾಗೆಯೇ ಚರಾಚರಾತ್ಮಕ ಪ್ರಪಂಚಕ್ಕೆ ಸರ್ವವಿಧ ಕಾರಣನಾಗಿ ವಿಶ್ವಾತ್ಮಕ ಅಥವಾ ವಿಶ್ವಮಯನಾಗಿದ್ದಾನೆ. ಚಿದಾನಂದಘನನಾಗಿ ಪರಿಪೂರ್ಣನಾಗಿರುತ್ತಾನೆ. ಸಚ್ಚಿದಾನಂದ ಸ್ವರೂಪನು ಪ್ರಕಾಶವಿಮರ್ಶಮಯನು. ಪ್ರಕಾಶವೆಂದರೆ ತನ್ನ ಶಕ್ತಿ ಪ್ರಸಾರ, ಭೇದ ವನ್ನಂಗೀಕರಿಸಿ ಪದಾರ್ಥರೂಪವಾಗಿ ವ್ಯಕ್ತವಾಗುವಿಕೆ. ತನ್ನ ಶಕ್ತಿಯ ಪ್ರಸಾರದಿಂದ ವಿಶ್ವವನ್ನು ಸೃಷ್ಟಿಸುವನು. 'ಸ್ವಶಕ್ತಿ ಪ್ರಚಯೋಸ್ಯ ವಿಶ್ವಂ' (ಶಿವಸೂತ್ರ, III ಉನ್ಮೇಷ ೩೦ ನೆಯ ಸೂತ್ರ) 'ಸ್ವೇಚ್ಛಯಾಸ್ವಭಿತ್ತೌ ವಿಶ್ವಮುನ್ಮೀಲಯತಿ' (ಪ್ರತ್ಯಭಿಜ್ಞಾಹೃದಯ ೨ ನೆಯ ಸೂತ್ರ). ಹೊರಗಿನ ಯಾವುದೊಂದು ಪದಾರ್ಥದ ಸಹಾಯವಿಲ್ಲದೆ ತನ್ನಿಂದಲೇ ತನ್ನಲ್ಲಿ ಅಡಕವಾಗಿದ್ದ ವಿಶ್ವವನ್ನು ಸೃಷ್ಟಿಸುವನು. **ವಿಮರ್ಶ**ವೆಂದರೆ ಭೇದಾಭೇದಗಳನ್ನು ತನ್ನಲ್ಲಿಯೆ, ಸ್ಫುರಿಸಿಕೊಳ್ಳುವ ಶಕ್ತಿಯುಳ್ಳ ಸ್ವಸ್ವರೂಪ ಪರಾಮರ್ಶ.

ನಿಸ್ತರಂಗವಾಗಿರುವ ಚಿತ್‌ಸ್ವರೂಪವೇ ಪರಮಶಿವ. ನಿಸ್ತರಂಗವಾಗಿರುವ ಸಮುದ್ರ ದಲ್ಲಿ ಸೂಕ್ಷ್ಮವಾದ ಅಲೆಗಳುಂಟಾಗುವಂತೆ ಆಗುವ ಚಿತ್ಸಮುದ್ರದ ಚಲನವೇ ಶಕ್ತಿ. ಮೊದಲನೆಯ ಚಲನಕ್ಕೆ ಸ್ಪಂದ, ಸ್ಫುರತ್, ಉನ್ಮೇಷ ಎಂದು ಹೇಳುವುದು. ಈ ಶಕ್ತಿಯ ಪ್ರಸರಣದಿಂದಲೇ ಸೃಷ್ಟಿಸ್ಥಿತಿಗಳು ನಡೆಯುತ್ತಿರುವುದು. ಈ ಶಕ್ತಿಯು ತನ್ನ ಪ್ರಸರವನ್ನು ಉಪಸಂಹರಿಸಿದರೆ ಪ್ರಳಯವೆಂದು ಹೇಳಲ್ಪಡುವುದು. ಪರಮಶಿವನಿಗೆ

ಚಿತ್, ಆನಂದ, ಇಚ್ಛಾ, ಜ್ಞಾನ ಕ್ರಿಯಾಶಕ್ತಿಗಳು ನಿತ್ಯವಾಗಿರುತ್ತವೆ. ಪರಮಶಿವನು ಸ್ವಯಂಪ್ರಕಾಶನು (ಚಿಚ್ಛಕ್ತಿ). ಇನ್ನೊಂದರ ಸಹಾಯವಿಲ್ಲದೆ ಸ್ವತಂತ್ರವಾಗಿ ತನ್ನಲ್ಲಿಯೇ ಆನಂದಪಡಲು ಸಮರ್ಥನು (ಆನಂದಶಕ್ತಿ). ತಾನು ಏನುಬೇಕಾದರೂ ಮಾಡಬಲ್ಲೆನೆಂಬ ಅಪ್ರತಿಹತವಾದ ದೃಢಸಂಕಲ್ಪವುಳ್ಳ ಚಮತ್ಕಾರ ರೂಪವಾದ ಇಚ್ಛಾಶಕ್ತಿಯುಳ್ಳವನು. ಗ್ರಾಹ್ಯಗ್ರಾಹಕ ವ್ಯವಹಾರಗಳನ್ನು ತನ್ನಲ್ಲಿ ಒಳಗೊಂಡಿರುವ ಜ್ಞಾನಶಕ್ತಿಯುಳ್ಳವನು. ಅನೇಕ ರೂಪಗಳಿಂದ ಪದಾರ್ಥಗಳನ್ನು ಸೃಷ್ಟಿಮಾಡುವ ಕ್ರಿಯಾಶಕ್ತಿಯುಳ್ಳವನು.

ಪರಶಿವನು ತನ್ನ ಪಂಚಶಕ್ತಿಗಳಿಂದ ಯಾವಾಗಲೂ ಪಂಚಕೃತ್ಯಗಳನ್ನು ಮಾಡುತ್ತಿರುತ್ತಾನೆ. ಪಂಚಕೃತ್ಯಗಳು ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹ. ಇಲ್ಲಿ ಸೃಷ್ಟಿ ಅಂದರೆ ವಿಶ್ವಸೃಷ್ಟಿ. ಸ್ಥಿತಿ ಅಂದರೆ ಸೃಷ್ಟಿಮಾಡಿದ್ದನ್ನು ಕಾಪಾಡುವುದು. ಸಂಹಾರ ಅಂದರೆ ತನ್ನಲ್ಲಿಯೇ ಲಯಮಾಡಿಕೊಳ್ಳುವುದು. ತಿರೋಧಾನವೆಂದರೆ ಚಿತ್ತಿನಲ್ಲಿ ಅಖಂಡವಾಗಿದ್ದದ್ದನ್ನು ಪುನಃ ಭೇದರೂಪವಾಗಿ ಪ್ರಕಾಶಪಡಿಸುವ ಸ್ಥಿತಿಯಲ್ಲಿರಿಸುವಿಕೆ. ಅನುಗ್ರಹವೆಂದರೆ ಸಂಸ್ಕಾರರೂಪದಲ್ಲಿಲ್ಲದೆ ಚಿತ್ತಿನಲ್ಲಿಯೇ ಸಂಪೂರ್ಣವಾಗಿ ಲಯವಾಗುವುದು. ಹೀಗೆ ಐದು ಶಕ್ತಿಗಳಿಂದಲೂ ಐದು ಕೃತ್ಯಗಳಿಂದಲೂ ವಿಶ್ವಾತ್ಮಕನಾಗಿಯೂ ವಿಶ್ವಾತೀತನಾಗಿಯೂ ಚಿದಾನಂದೈಕ ಘನನಾಗಿಯೂ ಅನುತ್ತರ ವಿಮರ್ಶಮಯನಾಗಿಯೂ ಸ್ವತಂತ್ರನಾಗಿಯೂ ಪರಿಪೂರ್ಣನಾಗಿಯೂ ಪರಮಶಿವನಿದ್ದಾನೆ.

ಮಹೇಶ್ವರ (ವಿಶ್ವಚಿತ್ತ)

ಕಾಶ್ಮೀರ ಶಿವಾದ್ವೈತ ಸಿದ್ಧಾಂತದಲ್ಲಿ ಜೀವಾತ್ಮನ ವ್ಯಕ್ತಿ ಚಿತ್ತವು ವಿಶ್ವಚಿತ್ತದಿಂದ ಬೇರೆಯಲ್ಲ. ವ್ಯಕ್ತಿಯ ಮನಸ್ಸಿನ ವಿಚಾರ ವಿಮರ್ಶನೆಯಿಂದ ವಿಶ್ವಚಿತ್ತದ ಸ್ವರೂಪವನ್ನು ತಿಳಿಯಬಹುದು. ವ್ಯಕ್ತಿಯ ಮನಸ್ಸು ಹೊರಗಿನ ಪದಾರ್ಥಗಳ ಸಂಬಂಧದಿಂದ ವೃತ್ತಿಗಳನ್ನು ಗ್ರಹಿಸುತ್ತದೆ. ಹಾಗೆಯೇ ಹಿಂದಿನ ಅನುಭವಗಳಿಂದುಂಟಾದ ಸಂಸ್ಕಾರಗಳಿಂದಲೂ ಕೂಡಿದೆ ; ಅಂದರೆ ಮನಸ್ಸು ಹಿಂದಿನ ವೃತ್ತಿಗಳಿಗೂ ಹೊರಗಿನಿಂದ ಬರುವ ವೃತ್ತಿಗಳಿಗೂ ಆಶ್ರಯವಾಗಿದೆ. ಪ್ರತ್ಯಕ್ಷವಾಗಿ ಒಂದು ಪದಾರ್ಥವನ್ನು ಗ್ರಹಿಸುವುದು. ಹಿಂದಿನ ವೃತ್ತಿಗಳಿಗೂ ಆಶ್ರಯವಾಗಿದೆ. ಪ್ರತ್ಯಕ್ಷವಾಗಿ ಒಂದು ಪದಾರ್ಥವನ್ನು ಗ್ರಹಿಸುವುದೂ ಹಿಂದಿನ ವೃತ್ತಿಗಳನ್ನು ನೆನೆಯುವುದೂ ಮುಂದೆ ಬರಲಿರುವವುಗಳನ್ನು ಊಹಿಸುವುದೂ ಸ್ವಪ್ನ ಮೊದಲಾದವುಗಳೂ ಎಲ್ಲವೂ ಈ ಆಶ್ರಯದಲ್ಲಿಯೇ. ಹೊರಗಣ ವಸ್ತುಗಳಿಂದ ಬರತಕ್ಕ ಪ್ರೇರಣಾತ್ಮಕವಾದ ವೃತ್ತಿಯು ಮನಸ್ಸಿನ ಮೇಲೆ ಮುದ್ರೆಯೊತ್ತಿದಂತಲ್ಲ. ನಿರ್ಮಲವಾದ ಕನ್ನಡಿಯಮೇಲೆ ಅಥವಾ ಅದರ ಮುಂದೆ ಇಟ್ಟ ಪದಾರ್ಥದಂತೆ ವಿಶದವಾಗಿ ಗೋಚರವಾಗುತ್ತದೆ. ಇಲ್ಲಿ ಕನ್ನಡಿ ದೃಷ್ಟಾಂತವನ್ನು ಕೊಡುವ ಉದ್ದಿಶ್ಯ ಇಷ್ಟೆ. ಕನ್ನಡಿಯು ಒಂದು ಪದಾರ್ಥವನ್ನು ಪ್ರತಿಫಲಿಸಿದರೆ ಅದು ತನ್ನ ಅಸ್ತಿತ್ವವನ್ನು ನೈರ್ಮಲ್ಯವನ್ನು ಕಳೆದುಕೊಳ್ಳದೆ ಆ ಪದಾರ್ಥವನ್ನು ಸ್ವಚ್ಛವಾಗಿ ತೋರಿಸುತ್ತದೆ. ಈಗ

ಕನ್ನಡಿಗೂ ಮನಸ್ಸಿಗೂ ಇರುವ ವ್ಯತ್ಯಾಸ ಏನು ಎಂಬ ಪ್ರಶ್ನೆ ಏಳುತ್ತದೆ. ಒಂದು ಪದಾರ್ಥವ ಪ್ರತಿಬಿಂಬವನ್ನು ಪಡೆಯಬೇಕಾದರೆ ಕನ್ನಡಿಗೆ ಹೊರಗಿನ ಬೆಳಕುಬೇಕು. ಮನಸ್ಸಿಗಾದರೋ ಆ ರೀತಿ ಹೊರಗಿನ ಸಹಾಯ ಬೇಕಾಗಿಲ್ಲ. ಕತ್ತಲೆಯಲ್ಲಿ ಕನ್ನಡಿಯು ಪದಾರ್ಥವನ್ನು ಬಿಂಬಿಸಲಾರದು. ಆದರೆ ಮನಸ್ಸು ಸ್ವಯಂಶಕ್ತವಾಗಿದೆ. ಇದು ಹೊರಗಿನ ಯಾವ ಪ್ರಕಾಶದ ಸಹಾಯವೂ ಇಲ್ಲದೆ ವೃತ್ತಿಗಳನ್ನು ಗ್ರಹಿಸಬಲ್ಲದು. ಇದು ವೃತ್ತಿಗಳನ್ನು ಗ್ರಹಿಸುತ್ತದೆ, ಪ್ರಕಾಶಪಡಿಸುತ್ತದೆ. ಆ ವೃತ್ತಿಗಳಿಂದ ಬೇರೆಯಾಗಿರುವಂತೆಯೂ ಇರುತ್ತದೆ. ಈ ಅಂಶವನ್ನು ಈ ಸಂಪ್ರದಾಯದಲ್ಲಿ ಪಾರಿಭಾಷಿಕವಾಗಿ '**ಪ್ರಕಾಶ**'ಎನ್ನುತ್ತಾರೆ.

ಇನ್ನು ಮನಸ್ಸಿನ ಸ್ವರೂಪದ ಎರಡನೆಯ ಅಂಶ **ವಿಮರ್ಶ**. ಇಲ್ಲಿ ಮನಸ್ಸು ತನ್ನ ಅಸ್ತಿತ್ವವನ್ನು ನೈರ್ಮಲ್ಯವನ್ನು ತಿಳಿಯುವುದಾಗಿದೆ. ಇದು ಸ್ವತಃ ವಿಮರ್ಶೆಯನ್ನು ಮಾಡುತ್ತದೆ. ಬೇರೆ ವೃತ್ತಿಗಳನ್ನು ತನ್ನಲ್ಲಿ ಉಳಿಸಿಕೊಳ್ಳುತ್ತದೆ. ಇದನ್ನೇ ನಾವು ಸಂಸ್ಕಾರಗಳೆನ್ನುತ್ತೇವೆ. ತಾನು ಉಳಿಸಿಕೊಂಡಿರುವ ವೃತ್ತಿಗಳನ್ನು ಸಮಯ ಬಂದಾಗ ನೆನೆದು ಹಿಂದಿನ ಸ್ಥಿತಿಯನ್ನು ಜ್ಞಾಪಕಕ್ಕೆ ತರುತ್ತದೆ. ವೃತ್ತಿಗಳನ್ನು ಸೇರಿಸಿ ಹೊಸದಾಗಿ ಒಂದು ಸೃಷ್ಟಿಯನ್ನು ಮಾಡುತ್ತದೆ. ಊಹಾಪ್ರಪಂಚವೆಲ್ಲಾ ಹೊಸಸೃಷ್ಟಿ ಎಂಬುವುದು ಎಲ್ಲರ ಅನುಭವದಲ್ಲಿದೆ. ಈ ಅಂಶವನ್ನು ಪಾರಿಭಾಷಿಕವಾಗಿ 'ವಿಮರ್ಶೆ' ಎನ್ನುತ್ತೇವೆ. ಇದು ಮಾನವನ ಮನಸ್ಸಿನ ವಿಶಿಷ್ಟ ಸ್ವರೂಪ. ಮಾನವನ ಮನಸ್ಸು ಸ್ವಯಂಪ್ರಕಾಶವಾಗಿಯೂ ಚೈತನ್ಯಸ್ವರೂಪವಾಗಿಯೂ ಇದೆ. ತಾನು ಪ್ರಕಾಶಿಸುವೆನೆಂಬುದು ಮನಸ್ಸಿಗೆ ಗೊತ್ತು. ಹೇಗೆಂದರೆ ವ್ಯಕ್ತಿಯ ಮನಸ್ಸು ವಿಶ್ವದ ಚಿತ್ತದಿಂದ ಬೇರೆಯಲ್ಲ. ಕಾರಣ ಇಷ್ಟೆ. ವ್ಯಕ್ತಿಯ ಮನಸ್ಸು ಪರತತ್ತ್ವದಿಂದ ಬೇರೆಯಾಗದಿರುವುದರಿಂದ ಸ್ವಯಂಪ್ರಕಾಶವಾಗಿಯೂ ಚೈತನ್ಯಸ್ವರೂಪವಾಗಿಯೂ ಇದೆ.

ಕಾಶ್ಮೀರ ಶಿವಾದ್ವೈತ ಸಿದ್ಧಾಂತದಲ್ಲಿ ವಿಮರ್ಶವು ಚೈತನ್ಯ ಸ್ವರೂಪವಾಗಿದೆ. ಅದ್ವೈತ ವೇದಾಂತಿಗಳು ಹೇಳುವಂತೆ ಬ್ರಹ್ಮನು ಶಾಂತ, ನಿಷ್ಕ್ರಿಯ, ನಿರ್ಗುಣನಾಗಿರುವುದರಿಂದ ಅಲ್ಲಿ ಯಾವ ಕ್ರಿಯೆಗೂ ವಿಮರ್ಶೆಗೂ ಅವಕಾಶವಿಲ್ಲ. ಅದು ಕ್ರಿಯಾಶೂನ್ಯ, ಕ್ರಿಯಾತ್ಮಕವಲ್ಲ. ಅದು ಸ್ವಯಂಪ್ರಕಾಶಪ್ರವೃತ್ತಿಗೆ ಆಶ್ರಯವಾದ ಚೈತನ್ಯವುಳ್ಳದ್ದಲ್ಲ. ಅವರ ಅಭಿಪ್ರಾಯದಂತೆ ಎಲ್ಲಾ ಚೈತನ್ಯದ ಉಬ್ಬರವಿಳಿತಗಳು ಕ್ರಿಯಾತ್ಮಕವಾಗಿರುತ್ತವೆ; ಬ್ರಹ್ಮನು ಚೈತನ್ಯಸ್ವರೂಪವೇ ಹೊರತು ಚೈತನ್ಯಕ್ಕಾಶ್ರಯವಲ್ಲವೆಂಬುದು ಅವರ ನಿಯಮ. ಚೈತನ್ಯಕ್ಕೆ ಆಶ್ರಯವಾದರೆ ಕ್ರಿಯಾತ್ಮಕವಾಗುತ್ತದೆ. ಕ್ರಿಯಾತ್ಮಕವಾದರೆ ಪರಿಪೂರ್ಣ ಶಾಂತಿಗೆ ಭಂಗಬರುತ್ತದೆ. ಬ್ರಹ್ಮನು ನಿರ್ವಿಕಲ್ಪನಾಗಿದ್ದಾನೆ. ಚೈತನ್ಯಕ್ಕಾಶ್ರಯನೆಂದು ಒಪ್ಪಿಕೊಳ್ಳುವುದು ತಪ್ಪಾಗುವುದೆಂದು ಅವರ ಭಾವನೆ. ಆದುದರಿಂದ ಬ್ರಹ್ಮನು ಚಿನ್ಮಾತ್ರ, ಚೈತನ್ಯಾಶ್ರಯನಲ್ಲವೆಂಬುದು ಅವರ ಅಭಿಪ್ರಾಯ. ಆದರೆ ಈ ಶಿವಾದ್ವೈತ ಸಿದ್ಧಾಂತದಲ್ಲಾದರೋ ಪರತತ್ತ್ವವು (ಬ್ರಹ್ಮನು) ಸ್ವಯಂಪ್ರಕಾಶ, ಚೈತನ್ಯಸ್ವರೂಪ ಮತ್ತು ಚೈತನ್ಯಾಶ್ರಯ. ಹಾಗೆಯೇ ನಿರ್ವಿಕಲ್ಪವೂ ಹೌದು.

ಈ ಸಿದ್ಧಾಂತದಂತೆ ವಿಕಲ್ಪಗಳು ಅನೇಕತ್ವದಲ್ಲಿ ಏಕತ್ವವನ್ನು ಸೂಚಿಸುತ್ತವೆ. ಹೇಗೆಂದರೆ ಒಬ್ಬ ಮನುಷ್ಯನು ಬಗೆಬಗೆಯ ತಿಳಿವಳಿಕೆಗಳನ್ನು ಒಂದಾಗಿ ಕೂಡಿಸುತ್ತಾನೆ. ಒಂದೇ ವಿಷಯವನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸುತ್ತಾನೆ. ಹಾಗೆಯೇ ಕೆಲವನ್ನು ತಳ್ಳಿ ಹಾಕುತ್ತಾನೆ. ಕೆಲವನ್ನು ತಿದ್ದಿ ಕೊಳ್ಳುತ್ತಾನೆ. ಪ್ರತಿಯೊಂದು ತಿಳಿವಳಿಕೆಯೂ ತನ್ನದೇ ಆದ ವ್ಯಕ್ತಿತ್ವವನ್ನು ಪಡೆದಿರುತ್ತದೆ. ನಮ್ಮ ಅನುಭವದಲ್ಲಿರುವ ತಿಳಿವಳಿಕೆಯ ಬಗೆಬಗೆಯಾಗಿರುವ ಸ್ಥಿತಿಗಳನ್ನೇ ವಿಕಲ್ಪಗಳೆಂದು ಪಾರಿಭಾಷಿಕವಾಗಿ ಇಲ್ಲಿ ಕರೆಯುವುದು. ಎಲ್ಲಾ ತಿಳಿವಳಿಕೆಗಳೂ ವಿಕಲ್ಪಗಳೇ ಆಗಿವೆ. ಈ ವಿಕಲ್ಪಗಳ ಮಹಿಮೆಯಿಂದಲೇ ನಾನು, ನನ್ನದು, ನಾನು ಬೇರೆ ಎಂಬ ಭಾವನೆಗಳು ನಿಂತಿರುತ್ತವೆ. ನಮ್ಮ ಭಾವನಾ ಪ್ರಪಂಚದಲ್ಲಿ ಯಾವ ಯೋಚನೆಗಳೂ ಇಲ್ಲದಿದ್ದರೆ ನಿರ್ವಿಕಲ್ಪಸ್ಥಿತಿ ಎನ್ನುತ್ತೇವೆ. ನಮ್ಮ ತಿಳಿವಳಿಕೆಗಳನ್ನು ಒಟ್ಟುಗೂಡಿಸುವುದಕ್ಕಾಗಲಿ ಬೇರ್ಪಡಿಸುವುದಕ್ಕಾಗಲಿ ವಿಕಲ್ಪಗಳು ಬೇಕೇಬೇಕು. ಆದುದರಿಂದ ವಿಕಲ್ಪವೃತ್ತಿಗಳು ಅನೇಕವಾಗಿ ಇಲ್ಲದಿದ್ದಲ್ಲಿ ಒಂದು ನಿಶ್ಚಯ ವೃತ್ತಿಯುಂಟಾಗಲು ಸಾಧ್ಯವಿಲ್ಲ. ಇವೆಲ್ಲಾ ಪ್ರಾಪಂಚಿಕ ವ್ಯವಹಾರದ ವಸ್ತುಸ್ಥಿತಿಯಾಯಿತು. ಪರಮಾರ್ಥ ಅಥವಾ ಪರತತ್ತ್ವದಲ್ಲಾದರೋ ಒಂದು ವಿಕಲ್ಪಕ್ಕೆ ಇನ್ನೊಂದು ವಿಕಲ್ಪವು ವಿರುದ್ಧವಾಗಿ ಇಲ್ಲವೇ ಇಲ್ಲ. ಏಕೆಂದರೆ ಅಲ್ಲಿ ಇದೆ (ಅಸ್ತಿ) ಇಲ್ಲ (ನಾಸ್ತಿ) ಎಂಬ ವಿಭಾಗವೇ ಇಲ್ಲ. ಆದುದರಿಂದ ಅವುಗಳನ್ನು ವಿಕಲ್ಪಗಳೆಂದು ವಿವರಿಸುವುದೇ ಸರಿಯಲ್ಲ. ಹೀಗೆ ಅದ್ವೈತ ವೇದಾಂತಿಗಳ ಚಿನ್ಮಾತ್ರ ಬ್ರಹ್ಮನ ನಿರೂಪಣೆಯಲ್ಲೂ ಕಾಶ್ಮೀರ ಶೈವರ ಪ್ರಕಾಶ ವಿಮರ್ಶಮಯ ಪರಶಿವ (ಪರತತ್ತ್ವ) ನಿರೂಪಣೆಯಲ್ಲೂ ಇರುವ ವಿಶಿಷ್ಟವಾದ ಭೇದವನ್ನು ಕಾಣಬಹುದು.

ವಿಶ್ವಚಿತ್ತವು (ಮಹೇಶ್ವರ) (Universal mind) ಎಲ್ಲಾ ವಿಷಯಗಳನ್ನೂ ತಾನೇ ಮುಂದುವರಿಸುತ್ತದೆ. ಕ್ರಿಯಾತ್ಮಕವಾಗಿಯೂ ಇದೆ. ಅದರ ಇಚ್ಛಾಶಕ್ತಿಯ ಸ್ಥೂಲರೂಪವೇ ಈ ವಿಶ್ವದ ಅಭಿವ್ಯಕ್ತಿ. ಈ ವಿಶ್ವದಲ್ಲಿ ಸಂಕುಚಿತವಾದ ರೂಪದಲ್ಲಿ ಪ್ರಯೋಜನವುಳ್ಳ ಪದಾರ್ಥಗಳೂ ಗ್ರಾಹಕರಾಗಿರುವ ಜೀವಾತ್ಮರುಗಳೂ ಸೇರಿರುತ್ತಾರೆ. ಆಧ್ಯಾತ್ಮ ದೃಷ್ಟಿಯಲ್ಲಿ ಈ ವಿಶ್ವಚಿತ್ತವು ಸ್ವಯಂಚೈತನ್ಯರೂಪಿಯಾದ ಪರತತ್ತ್ವದ ಇಚ್ಛಾಶಕ್ತಿ. ಇದು ಸ್ವತಂತ್ರವಾದ ಭಾವನಾ ಮತ್ತು ಕ್ರಿಯೆಯಿಂದ ಕೂಡಿರುವುದು. ಇದನ್ನೇ ಪಾರಿಭಾಷಿಕವಾಗಿ 'ಮಹೇಶ್ವರ' ಎನ್ನುತ್ತಾರೆ. ಇಲ್ಲಿ 'ಮಹೇಶ್ವರ' ಪದವನ್ನು ಜನಜನಿತವಾದ 'ಪಾರ್ವತೀಪತಿ' ಎಂಬ ಪದದ ಅರ್ಥದಲ್ಲಿ ಉಪಯೋಗಿಸಿಲ್ಲ. ಇದು 'ಮಹೇಶ್ವರ' ಎಂಬ ತತ್ತ್ವವನ್ನು ಸೂಚಿಸುವ ಪದ. ಇದೇ ವಿಶ್ವಚಿತ್ತ. ಈ ವಿಶ್ವವು ಪರಶಿವನಿಂದ ಸೃಷ್ಟಿಮಾಡಲ್ಪಟ್ಟ ಬೇರೆ ಪದಾರ್ಥವಲ್ಲ. ಪರಶಿವನು ಹೊರಗಿನ ಶಿಲ್ಪಿಯಲ್ಲ. ಈ ಶಿವಾದ್ವೈತ ಸಂಪ್ರದಾಯದಂತೆ 'ಮಹೇಶ್ವರ' ಎಂಬುವುದು ಪರಶಿವನ ಸ್ವಭಾವದ ಅನಂತ ರೂಪರೇಖೆಗಳುಳ್ಳ ವಿಶ್ವಚಿತ್ತದ ಐಶ್ವರ್ಯ. ಈ ವಿಶ್ವಚಿತ್ತವು ಸ್ವತಂತ್ರೇಚ್ಛಾರೂಢವಾದದ್ದು. ಇದು ವಿಶ್ವವನ್ನು ತನ್ನ ಸಂಕಲ್ಪದಂತೆ ನಿರೂಪಿಸುತ್ತದೆ.

ಪ್ರತ್ಯಭಿಜ್ಞಾ ಇತಿಹಾಸ-ಸಾಹಿತ್ಯ

ಕಾಶ್ಮೀರ ಶಿವಾದ್ವೈತ ಸಿದ್ಧಾಂತವನ್ನು ಪ್ರಕಾಶಕ್ಕೆ ತಂದವರಲ್ಲಿ ಮೊದಲನೆಯವನು ಸಿದ್ಧಪುರುಷ ವಸುಗುಪ್ತ (ಕಿ. ಶ. ೮೨೫). ಈತನು ಕಾಶ್ಮೀರದೇಶದ ಶ್ರೀನಗರದ ಹತ್ತಿರವಿರುವ ಮಹದೇವಗಿರಿ ಎಂಬ ಕ್ಷೇತ್ರದಲ್ಲಿ ತಪೋನಿಷ್ಠನಾಗಿ ವಾಸವಾಗಿದ್ದನು. ಒಂದುದಿನ ಸ್ವಪ್ನದಲ್ಲಿ ಶಿವನೇ ಬಂದು "ಸಮೀಪದಲ್ಲಿರುವ ಶಿಲಾತಲದಲ್ಲಿ ಶಿವಸೂತ್ರಗಳು ಕೆತ್ತಲ್ಪಟ್ಟಿವೆ, ನೀನು ಆ ಸೂತ್ರಗಳನ್ನು ಕಂಡುಹಿಡಿದು ಶೈವಮತವನ್ನು ಉದ್ಧಾರಮಾಡಿ ಪ್ರಚಾರ ಮಾಡು" ಎಂದು ಹೇಳಲಾಗಿ ಆ ಶಿಲಾತಲವನ್ನು ಹುಡುಕಿ ಮುಟ್ಟಿದ ಮಾತ್ರದಿಂದಲೇ ತಿರುಗಿದ ಬಂಡೆಯಮೇಲೆ ಕೆತ್ತಿದ್ದ ಶೈವಾಗಮ ಶಾಸ್ತ್ರಸಂಗ್ರಹರೂಪವಾದ 'ಶಿವಸೂತ್ರಗಳ'ನ್ನು ಉದ್ಧರಿಸಿ ಪ್ರಕಾಶಪಡಿಸಿದನು. ಈ ಸೂತ್ರಗಳಲ್ಲಿ ಬಂಧನಿವೃತ್ತಿಗೆ ಸಹಾಯಕಗಳಾದ ಉಪಾಯಗಳನ್ನು ಸೂಚಿಸಿದೆ. ಈತನ ಉದ್ದೇಶವು ಒಂದು ಸಿದ್ಧಾಂತವನ್ನು ಸ್ಥಾಪಿಸಬೇಕೆಂದಿರಲಿಲ್ಲ. ಅಪರೋಕ್ಷಾನುಭವದ ನೈಜಸ್ವರೂಪದ ವಿವರಣೆ ಮಾತ್ರ ಇವನಿಗೆ ಪ್ರಕೃತವಾಗಿತ್ತು. ಪರತತ್ತ್ವಸಾಕ್ಷಾತ್ಕಾರಕ್ಕೆ ಮೂರು ಮಾರ್ಗಗಳನ್ನು ತೋರಿಸಬೇಕೆಂಬುದೇ ಆಗಿತ್ತು. ಈತನು ತರ್ಕವಾದ ಸರಣಿಯನ್ನು ಅನುಸರಿಸಲಿಲ್ಲ, ಶಾಸ್ತ್ರ ಪ್ರಾಮಾಣ್ಯವನ್ನು ಅಪೇಕ್ಷಿಸಲಿಲ್ಲ. ಮೋಕ್ಷಕ್ಕೆ ಸಾಧನಗಳಾದ ಶಾಂಭವ, ಶಾಕ್ತ, ಆಣವ ಎಂಬ ಮೂರು ಉಪಾಯಗಳನ್ನು ವಿವೇಚಿಸುವುದೇ ಆಗಿತ್ತು. ಈ ಮೂರು ಉಪಾಯಗಳು ಯೋಗಸಾಧನೆಗಳನ್ನೊಳಗೊಂಡಿರುವವುಗಳೇ ಆಗಿವೆ. ಈ ಸೂತ್ರಗಳು ಜ್ಞಾನಿಗಳಿಗೆ ಉತ್ತಾರಕಗಳಾಗಿಯೂ ಸಾಮಾನ್ಯರಿಗೆ ಉಪಕಾರಕಗಳಾಗಿಯೂ ಇವೆ. ಈತನ ಶಿಷ್ಯ ಭಟ್ಟಕಲ್ಲಟನು ಶಿವಸೂತ್ರಗಳ ಅಂಶಗಳನ್ನು ಕ್ರೋಡೀಕರಿಸಿ ಸ್ಪಂದಕಾರಿಕೆಗಳನ್ನು ಬರೆದು ಶಿವಸೂತ್ರಗಳ ತತ್ತ್ವಾರ್ಥವನ್ನು ಪ್ರಕಾಶಪಡಿಸುವುದರ ಮೂಲಕ ತನ್ನ ಗುರುವಿನ ಮತವನ್ನು ಪ್ರಚುರಪಡಿಸಿದನು. ಇವರ ತರುವಾಯ ಸಿದ್ಧಸೋಮಾನಂದನು (೯ ನೇ ಶತಮಾನದ ಉತ್ತರಾರ್ಧ) ಶಿವದೃಷ್ಟಿ ಎಂಬ ಗ್ರಂಥವನ್ನು ಬರೆದನು. ಇದರಲ್ಲಿ ಇತರ ಮತಗಳನ್ನು ವಿಶದವಾಗಿ ಅನುವಾದ ಮಾಡಿದ್ದಾನೆ. ಅವುಗಳನ್ನು ಕಾರಣವಾದದಿಂದ ನಿರಾಕರಿಸಿ ಕ್ರಮಬದ್ಧವಾಗಿ ಕಾರಣವಾದವನ್ನು ಮುಂದಿಟ್ಟುಕೊಂಡು ಪರತತ್ತ್ವವನ್ನು ವಿವೇಚಿಸಿದ್ದಾನೆ. ಹಾಗೆಯೇ ಈತನು ವೈಯ್ಯಾಕರಣರ ಶಬ್ದಬ್ರಹ್ಮವಾದವನ್ನು ಖಂಡಿಸಿರುವನು. ಭರ್ತೃಹರಿಯ ವಾಕ್ಯಪದೀಯದಲ್ಲಿ ಹೇಳಿರುವ 'ಪಶ್ಯಂತಿ' ಯೇ ಪರಮಸೀಮೆಯೆಂಬುದನ್ನು ನಿರಾಕರಿಸಿದ್ದಾನೆ. ಭರ್ತೃಹರಿಯು ಪಶ್ಯಂತಿ, ಮಧ್ಯಮಾ, ವೈಖರಿ ಎಂಬ ಮೂರು ವಿಭಾಗಗಳನ್ನೇ ಅಂಗೀಕರಿಸಿರುತ್ತಾನೆ. ಕಾಶ್ಮೀರ ಶೈವರು ಪರಾ, ಪಶ್ಯಂತಿ, ಮಧ್ಯಮಾ, ವೈಖರಿ ಎಂಬ ನಾಲ್ಕು ಭೇದಗಳನ್ನು ಅಂಗೀಕರಿಸಿ 'ಪರಾ' ಎನ್ನುವುದು ಚರಸೀಮೆಯೆಂದು ಸ್ಥಾಪಿಸಿರುತ್ತಾರೆ. ಈ 'ಪರಾ' ಎಂಬ ಸ್ಥಿತಿಯನ್ನು 'ಸ್ವಾತಂತ್ರ್ಯ' ಅಥವಾ 'ವಿಮರ್ಶಾ' ಎಂದು ಕಾಶ್ಮೀರಶೈವರು ವ್ಯವಹರಿಸುವರು. ವಸುಗುಪ್ತನಿಂದ ಸೋಮಾನಂದನು ಕೆಲವು ವಿಷಯಗಳಲ್ಲಿ ಮುಂದುವರಿದಿರುವನೆನ್ನಬಹುದು. ಮೋಕ್ಷವನ್ನು ಪಡೆಯಲು ಸಾಧಕನು ತನ್ನ ಜೀವನದಲ್ಲೇ ಆ ಪರತತ್ತ್ವವನ್ನೂ ಪರಿಪೂರ್ಣ ಸ್ವಾತಂತ್ರ್ಯ

ವನ್ನೂ ಗುರುತಿಸಬಹುದು ಅನುಭವಿಸಬಹುದು ಎಂಬುದೇ ಸೋಮಾನಂದನ ಸಿದ್ಧಾಂತ. ಪ್ರತಿವ್ಯಕ್ತಿಯೂ ಆಂತರ್ಯವಾಗಿ ಸ್ವಾತಂತ್ರ್ಯವುಳ್ಳವನಾಗಿರುವನು. ಆದರೆ ಮಾಯೆಯು ಅದನ್ನು ಮುಚ್ಚಿದೆ. ಆಧ್ಯಾತ್ಮತತ್ತ್ವದ ಸಾರವನ್ನು ವ್ಯಕ್ತಿಯು ತನ್ನ ಸ್ವರೂಪವೆಂದು ಗುರುತಿಸಿದರೆ ಆ ಮಾಯೆಯ ಮುಸುಕು ಪರಿಹಾರವಾಗುವುದೆಂಬುದೇ ಸೋಮಾನಂದನ ಸಿದ್ಧಾಂತ.

ಸೋಮಾನಂದನ ಶಿಷ್ಯನಾದ ಉತ್ಪಲಾಚಾರ್ಯನು ಆಗ ಕಾಶ್ಮೀರದಲ್ಲಿ ಪ್ರಬಲ ವಾಗಿದ್ದ ಬೌದ್ಧಮತವನ್ನು ನಿರಾಕರಿಸಿ ಶಿವಾದ್ವೈತಕ್ಕೆ ವಿರುದ್ಧವಾಗಿದ್ದ ಬೌದ್ಧರ ಆಕ್ಷೇಪಣೆಗಳನ್ನು ಎದುರಿಸಿದನು. ಲೋಕಾನುಗ್ರಹಬುದ್ಧಿಯಿಂದ "ಸಮಸ್ತ ಸಂಪತ್ ಸಮವಾಪ್ತಿ ಹೇತುಂ ತತ್ ಪ್ರತ್ಯಭಿಜ್ಞಾಂ ಉಪಪಾದಯಾಮಿ" ಎಂದು ಹೇಳಿಕೊಂಡು 'ಪ್ರತ್ಯಭಿಜ್ಞಾಕಾರಿಕೆ' ಎಂಬ ಪ್ರಕರಣ ಗ್ರಂಥವನ್ನು ಬರೆದನು. ಮತ್ತು ಅದರಮೇಲೆ ಎರಡು ವ್ಯಾಖ್ಯಾನಗಳನ್ನು ಬರೆದನು.

ಇವರ ನಂತರ ಬಂದ ಅಭಿನವಗುಪ್ತಾಚಾರ್ಯರು (ಕ್ರಿ. ಶ. ೯೬೦) ಉತ್ಪಲಾ ಚಾರ್ಯರ ಪ್ರಶಿಷ್ಯರು. ಇವರು ಸರ್ವಂಕಷ ಪ್ರಜ್ಞೆಯುಳ್ಳವರು. ಮತ್ತು ಆಧ್ಯಾತ್ಮ ವಿಕಾಸವನ್ನು ಪಡೆದವರು. ಇವರು ರಚಿಸಿರುವ ೪೧ ಗ್ರಂಥಗಳು ಇದುವರೆಗೆ ದೊರೆತಿವೆ. ಇವರು ೬೪ ಶಿವಾಗಮಗಳ ಮೇಲೆ ವ್ಯಾಖ್ಯಾನವನ್ನು ಬರೆಯಲುಪಕ್ರಮಿಸಿ ಸ್ವತಂತ್ರವಾಗಿ 'ತಂತ್ರಾಲೋಕ' ಎಂಬ ಬೃಹದ್ಗ್ರಂಥವನ್ನು ಬರೆದಿದ್ದಾರೆ. ಇದರಲ್ಲಿ ಆಗಮಿಕವಾದ ಅನುಭವ, ದೈವವಾದ, ಸಂಸ್ಕಾರಗಳು, ಪ್ರಮಾಣ, ಮಾನಸಿಕ ಮತ್ತು ದಾರ್ಶನಿಕ ವಿಷಯಗಳು ವಿಶದೀಕರಿಸಲ್ಪಟ್ಟಿವೆ. ಉತ್ಪಲಾಚಾರ್ಯರ ಈಶ್ವರ ಪ್ರತ್ಯಭಿಜ್ಞಾಕಾರಿಕೆಗೆ ಈಶ್ವರ ಪ್ರತ್ಯಭಿಜ್ಞಾ ವಿಮರ್ಶಿನಿ ಎಂಬ ವ್ಯಾಖ್ಯಾನವನ್ನು ಬರೆದು ಅದಕ್ಕೆ ಟೀಕೆಯನ್ನು ಬರೆದಿರುವರು. ಇವರ ಎರಡು ವ್ಯಾಖ್ಯಾನಗಳು ಪ್ರತ್ಯಭಿಜ್ಞಾದರ್ಶನಕ್ಕೆ ಪ್ರಮಾಣ ಗ್ರಂಥ ಗಳಾಗಿವೆ. ಅಭಿನವಗುಪ್ತಾಚಾರ್ಯರು ಆನಂದವರ್ಧನರು ರಚಿಸಿರುವ 'ಧ್ವನ್ಯಾಲೋಕ' ವೆಂಬ ಅಲಂಕಾರ ಗ್ರಂಥಕ್ಕೆ 'ಲೋಚನ'ಎಂಬ ವ್ಯಾಖ್ಯಾನವನ್ನು ಬರೆದು ಅಲ್ಲಿ ಅಭಿಧೇಯ ವೃತ್ತಿ, ತಾತ್ಪರ್ಯವೃತ್ತಿ, ಲಾಕ್ಷಣಿಕವೃತ್ತಿಗಳಿಗಿಂತ 'ಧ್ವನಿ' ಬೇರೆ ಎಂಬುದನ್ನು ಸ್ಥಾಪಿಸಿರುತ್ತಾರೆ. ಭರತನ ನಾಟ್ಯಶಾಸ್ತ್ರದ ಮೇಲೆ 'ಅಭಿನವಭಾರತಿ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ನಾಟಕದಲ್ಲಿ ಮತ್ತು ನಾಟ್ಯದಲ್ಲಿ 'ರಸ'ದ ಸ್ವರೂಪ ವನ್ನು ನಿರೂಪಿಸಿರುತ್ತಾರೆ. ಈ ಎಲ್ಲಾ ವಿಷಯಗಳಲ್ಲೂ ವಿದ್ವಾಂಸರು ಇವರನ್ನು ಪ್ರಮಾಣವೆಂದು ಅಂಗೀಕರಿಸಿರುತ್ತಾರೆ. ಇಷ್ಟೇ ಅಲ್ಲದೆ ಇವರು ಆಗಮವಾಕ್ಯಗಳನ್ನು ಉದಾಹರಿಸಿ ಶಿವಾದ್ವೈತದ ಎಲ್ಲಾ ವಿಷಯಗಳೂ ೬೪ ಶಿವಾಗಮಗಳಿಗೆ ಸಮ್ಮತವಾಗಿವೆ ಯೆಂದೂ ಭಾರತೀಯರ 'ರಸಸಿದ್ಧಾಂತ'ವು ಶಿವಾದ್ವೈತದ ತಳಹದಿಯ ಮೇಲೆ ಸ್ಥಾಪಿತವಾಗಿದೆಯೆಂದೂ ನಿರ್ದೇಶಿಸಿ ಪ್ರತ್ಯಭಿಜ್ಞಾದರ್ಶನವನ್ನು ಸರ್ವವಿಧದಲ್ಲೂ ಪರಿ ಪುಷ್ಟಗೊಳಿಸಿ ಸ್ಥಾಯಿಯಾಗಿ ನಿಲ್ಲುವಂತೆ ಮಾಡಿದ್ದಾರೆ.

ಇವರ ಶಿಷ್ಯನಾದ ಕ್ಷೇಮರಾಜನು (ಕ್ರಿ. ಶ. ೧೦೪೦) ಶಿವಸೂತ್ರ ವಿಮರ್ಶಿನಿ, ಪ್ರತ್ಯಭಿಜ್ಞಾ ಹೃದಯ ಮೊದಲಾದ ಹಲವು ಗ್ರಂಥಗಳನ್ನು ಬರೆದು ಕಾಶ್ಮೀರ ಶೈವವನ್ನು ಮತ್ತಷ್ಟು ಪ್ರಕಾಶಕ್ಕೆ ತಂದನು. ಅಭಿನವ ಗುಪ್ತರ 'ಪರಮಾರ್ಥಸಾರ' ದ ಮೇಲೆ ಯೋಗರಾಜನ (ಕ್ರಿ. ಶ. ೧೦೬೦) ವ್ಯಾಖ್ಯಾನವೂ, 'ತಂತ್ರಾಲೋಕ'ದ ಮೇಲೆ ಜಯರಥನ (ಕ್ರಿ. ಶ. ೧೦೪೦) ವ್ಯಾಖ್ಯಾನವೂ ಈಶ್ವರ ಪ್ರತಿಭಿಜ್ಞಾವಿಮರ್ಶನಿಯ ಮೇಲೆ ಭಾಸ್ಕರಕಂಠನ (ಕ್ರಿ. ಶ. ೧೦೭೮) ವ್ಯಾಖ್ಯಾನವೂ ಪ್ರಮುಖವಾದವುಗಳಾಗಿವೆ. ದಕ್ಷಿಣ ಭಾರತದ ಚೋಳರಾಜ್ಯದಲ್ಲಿದ್ದ 'ಮಹಾಪ್ರಕಾಶ' ನ ಶಿಷ್ಯನಾದ ಗೋರಕ್ಷನು ಮಹಾರ್ಥಮಂಜರಿ-ಇದರ ವ್ಯಾಖ್ಯಾನ ಪರಿಮಳಗಳನ್ನು ಬರೆದು ಪ್ರತ್ಯಭಿಜ್ಞಾ ಶಾಸ್ತ್ರವನ್ನು ಮತ್ತಷ್ಟು ಪ್ರಕಾಶಕ್ಕೆ ತಂದನು. ಗೋರಕ್ಷನು ಮಹೇಶ್ವರಾನಂದನೆಂದು ಪ್ರಸಿದ್ಧನಾಗಿದ್ದಾನೆ.

ಪ್ರತ್ಯಭಿಜ್ಞಾ ಶಾಸ್ತ್ರ

ಪ್ರತ್ಯಭಿಜ್ಞಾ ಶಾಸ್ತ್ರ ಎಂಬುದರಲ್ಲಿ 'ಪ್ರತ್ಯಭಿಜ್ಞಾ' ಎಂಬ ಪದವು ಕಾಶ್ಮೀರ ಶಿವಾದ್ವೈತದ ರಹಸ್ಯವನ್ನು ಸೂಚಿಸುತ್ತದೆ. ಪ್ರತ್ಯಭಿಜ್ಞಾ ಎಂದರೆ 'ಅವನೇ ನಾನು' 'ಆ ಶಿವನೇ ನಾನು' ಎಂದು ಮಲಾವೃತನಾದ ಜೀವನು ತನ್ನ ಸಹಜ ಸ್ವರೂಪ ವನ್ನು ಗುರುತಿಸುವುದು. ಎಲ್ಲಾ ಪ್ರಾಣಿಗಳೂ 'ಪ್ರತ್ಯಭಿಜ್ಞಾ' ಎಂಬ ಅಂಶ ವನ್ನು ಒಂದಲ್ಲ ಒಂದು ರೀತಿ ಅನುಭವಿಸುತ್ತವೆ. ನಾವು ಮನೆಯಿಂದ ಹೊರಕ್ಕೆ ಹೋದರೆ ಮರಳಿ ನಾವು ಮನೆಯನ್ನು ಸೇರುವುದು ಪ್ರತ್ಯಭಿಜ್ಞೆಯಿಂದಲೇ. ಯಾವ ಮನೆಯಿಂದ ನಾವು ಹೊರಟಿರುವೆವೋ ಅದೇ ಮನೆ ಇದು ಎಂಬ ದೃಢವಾದ ತಿಳಿವಳಿಕೆ ಬರದಿದ್ದರೆ ನಾವು ಆ ಮನೆಯೊಳಕ್ಕೆ ಬರುತ್ತಿರಲಿಲ್ಲ. "ಗ್ರಹಣ ಸ್ಮರಣಯೋಃ ಐಕ್ಯಂ ಪ್ರತ್ಯಭಿಜ್ಞಾ" ಎಂಬಂತೆ ಈಗ ನೋಡಿದ್ದು, ಹಿಂದೆ ನೋಡಿದ್ದು, ಎರಡೂ ಒಂದೇ ಎಂಬ ತಿಳಿವಳಿಕೆಯೇ ಪ್ರತ್ಯಭಿಜ್ಞಾ ಎನ್ನಿಸುವುದು. ಇದನ್ನು ಪ್ರತ್ಯಕ್ಷ ಮೂಲಕವಾದ ಪ್ರತ್ಯಭಿಜ್ಞೆ ಎನ್ನಬಹುದು.

ನಾವು ಒಬ್ಬ ಮನುಷ್ಯನ ಕಥೆಯನ್ನು ಕೇಳಿರುತ್ತೇವೆ. ಅವನ ಸ್ವರೂಪ ಸ್ವಭಾವ ಗಳನ್ನು ಪರೋಕ್ಷವಾಗಿ ತಿಳಿದಿರುತ್ತೇವೆ. ಅವನು ಇಂತಹವನಿರಬಹುದೆಂದು ಊಹಿಸಿಯೂ ಇರುತ್ತೇವೆ. ಯಾವುದೋ ಒಂದು ಸಮಯದಲ್ಲಿ ಅದೇ ವ್ಯಕ್ತಿಯೊಡನೆ ನಾವು ವ್ಯವ ಹರಿಸುತ್ತಿದ್ದರೂ ನಾವು ಕೇಳಿರುವ ಮನುಷ್ಯನು ಇವನೇ ಎಂಬ ಜ್ಞಾನವು ನಮ ಗುಂಟಾಗುವುದಿಲ್ಲ. ಅವನ ಪರಿಚಯವಿರುವವರು 'ಅವನೇ ಇವನು' ಎಂದು ನಮ್ಮನ್ನೆ ಚ್ಚರಿಸಿದರೆ ಆಗ ಹಿಂದೆ ಕೇಳಿದ ಕಥೆಯನ್ನು ಜ್ಞಾಪಿಸಿಕೊಂಡು 'ಸೋಽಯಂ ದೇವದತ್ತಃ' ಎಂಬಂತೆ 'ಅವನೇ ಇವನು' ಎಂದು ಗುರುತಿಸುತ್ತೇವೆ. ಇದು ಎಲ್ಲರ ಅನುಭವದಲ್ಲಿರುವ ವಿಷಯ. ಬಾಲ್ಯದಲ್ಲಿ ಒಬ್ಬ ಮಿತ್ರನನ್ನು ನೋಡಿ ಬಹಳ ದಿವಸಗಳಾಗಿದ್ದರೆ ಅವನು ಎದುರಿಗೆ ಬಂದಾಗ ಒಡನೆಯೇ ಗುರುತಿಸುವುದಕ್ಕಾಗದಿದ್ದರೂ ಅವನ ರೂಪು, ಕಂಠ

ಧ್ವನಿ, ಮಾತಿನ ಶೈಲಿ ಮುಂತಾದುವುಗಳಿಂದ ಅನುಮಾನಿಸಿ “ಓಹೋ! ನೀವು ಇಂಥಾವರಲ್ಲವೆ! ನನಗೆ ಗುರುತೇ ಸಿಗಲಿಲ್ಲವಲ್ಲ” ಎಂದು ಸಂಕೋಚಪಡುವುದು ಬಳಕೆಯಲ್ಲಿದೆ. ಆಗ ಹತ್ತಿರವಿದ್ದ ಮಿತ್ರನು ‘ಅವನೇ ಇವನು’ ಎಂದು ಹೇಳಿದರೆ ಆಗ ವ್ಯಕ್ತಿಯನ್ನು ಗುರುತಿಸುತ್ತೇವೆ.

ಒಬ್ಬ ರಾಜನು ತನ್ನ ಚಿಕ್ಕಮಗುವಿನೊಡನೆ ಬೇಟೆಗೆ ಹೋಗಿದ್ದನು. ಬೇಟೆಯಲ್ಲಿ ಮೃಗಗಳನ್ನಟ್ಟಿಕೊಂಡು ಬಹುದೂರ ಹೋದಾಗ ಆ ಮಗುವು ಆಟವಾಡುವುದಕ್ಕೆ ಹೋಗಿ ತಪ್ಪಿಸಿಕೊಂಡಿತು. ರಾಜನು ಹುಡುಕಿ ಹುಡುಕಿ ಬೇಸತ್ತು ಮಗನನ್ನು ಕಾಣದೆ ಎಲ್ಲೋ ಕಾಡುಮೃಗಗಳಿಗೆ ತುತ್ತಾಗಿರಬಹುದೆಂದು ತಿಳಿದು ಮನೆಗೆ ಸೇರಿದನು. ಆ ಮಗುವನ್ನು ಅಲ್ಲಿನ ಬೇಡರು ಅಕ್ಕರೆಯಿಂದ ಸಾಕಿದರು. ಅವನು ಯೌವನವಂತನಾದನು. ಹತ್ತಾರುವರ್ಷಗಳು ಕಳೆದನಂತರ ಅದೇ ಕಾಡಿಗೆ ಆ ಮಗುವನ್ನು ನೋಡಿದ್ದ ಸರದಾರನೊಬ್ಬನು ಬೇಟೆಗೆ ಬಂದನು. ಬೇಡರ ಮಧ್ಯೆ ಇದ್ದ ಈ ಹುಡುಗನನ್ನು ನೋಡಿ ಇವನ ರೂಪುಲಾವಣ್ಯಗಳಿಂದ ಇವನು ಬೇಡರ ಮನೆತನದಲ್ಲಿ ಹುಟ್ಟಿದವನಲ್ಲವೆಂದು ಊಹಿಸಿ ಹಿಂದೆ ರಾಜನೊಡನೆ ಬಂದಾಗ ಕಳೆದುಕೊಂಡಿದ್ದ ಮಗುವೇ ಇವನಿರಬಹುದೆಂದು ನಿಶ್ಚೈಸಿಕೊಂಡು ಯುಕ್ತಿಯಿಂದ ಆ ಹುಡುಗನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅದುವರೆಗೂ ಬೇಡರ ಹುಡುಗನೆಂದೇ ತಿಳಿದಿದ್ದ ಆ ಹುಡುಗನಿಗೆ ‘ನೀನು ಬೇಡರ ಮಗನಲ್ಲ, ನೀನು ರಾಜನ ಮಗನು’ ಎಂದು ಹಿಂದಿನ ಕಥೆಯನ್ನು ತಿಳಿಸಲಾಗಿ ತಾನು ರಾಜನ ಮಗನೆಂದು ತಿಳಿದು ಕಾಡಿನಿಂದ ಪಟ್ಟಣಕ್ಕೆ ಹೋಗಿ ರಾಜನಾದನು. ಇದು **ಅನುಮಾನಪ್ರಧಾನವಾದ ಪ್ರತ್ಯಭಿಜ್ಞೆ.**

ಸರದಾರನು ಇವನ ರೂಪುಲಾವಣ್ಯಗಳನ್ನೂ ಚಲನವಲನಗಳನ್ನೂ ನೋಡಿ ಇವನು ಬೇಡರ ಹುಡುಗನಲ್ಲವೆಂದು ತಾನು ನಿಶ್ಚೈಸಿಕೊಂಡನು. ಅವನ ನಿಶ್ಚಯಕ್ಕೆ ಇಲ್ಲಿ ಅನುಮಾನವೇ ಮುಖ್ಯ. ರಾಜಕುಮಾರನು ತಾನು ಇಂಥವನೇ ಎಂದು ತಿಳಿದುಕೊಂಡದ್ದು ಸರದಾರನ ಮಾತಿನಿಂದ. ಇದು **ಶಬ್ದಪ್ರಮಾಣ.** ಹೀಗೆ ಪ್ರತ್ಯಕ್ಷ, ಅನುಮಾನ, ಶಬ್ದ–ಇವು ಮೂರು ಪ್ರತ್ಯೇಕವಾದ ಘಟನೆಗಳಲ್ಲಿ ಪ್ರಧಾನವಾಗಿದ್ದು ಪ್ರತ್ಯಭಿಜ್ಞೆಯನ್ನುಂಟುಮಾಡುತ್ತವೆ. ಮನೆಯನ್ನು ಬಿಟ್ಟು ಹೊರಕ್ಕೆ ಹೋದವನು ಮನೆಯನ್ನು ಸೇರುವ ಪ್ರಸಂಗದಲ್ಲಿ ಪ್ರತ್ಯಕ್ಷಪ್ರಮಾಣವು ಪ್ರಧಾನವಾಗಿರುತ್ತದೆ. ಸರದಾರನು ರಾಜಕುಮಾರನನ್ನು ಗುರುತಿಸಿದ್ದು ಅನುಮಾನದಿಂದ. ಅನುಮಾನ ಪ್ರಮಾಣವೇ ಇಲ್ಲಿ ಪ್ರಧಾನವಾದದ್ದು. ರಾಜಕುಮಾರನು ತನ್ನನ್ನು ತಿಳಿದ ಪ್ರಸಂಗದಲ್ಲಿ ಶಬ್ದಪ್ರಮಾಣವೇ ಮುಖ್ಯ. ನಮ್ಮ ತಿಳಿವಳಿಕೆಯಲ್ಲಿ ಪ್ರಮಾಣಗಳು ಒಂದರೊಡನೊಂದು ಸೇರಿಕೊಂಡಿದ್ದರೂ ಯಾವ ಪ್ರಮಾಣಗಳು ಮುಖ್ಯವಾಗಿರುತ್ತವೆಯೋ ಅವನ್ನು ಪ್ರಧಾನವಾಗಿ ವ್ಯವಹರಿಸುತ್ತೇವೆ.

ಇನ್ನೊಂದು ದೃಷ್ಟಾಂತದಿಂದ ಪ್ರತ್ಯಭಿಜ್ಞೆ ಇಂತಹುದು ಎಂದು ಸಮರ್ಥಿಸಬಹುದು. ಒಂದು ಕಾಡಿನಲ್ಲಿ ತುಂಬಾ ಈಯಲಾದ ಸಿಂಹವು ಎರಡು ಮೂರು ದಿನ

ವಾದರೂ ಆಹಾರ ಸಿಕ್ಕದೆ ಅಲೆದಾಡುತ್ತಾ ದೂರದಲ್ಲಿ ಒಂದು ಕುರಿಮಂದೆಯನ್ನು ಕಂಡಿತು. ಹಸಿವಾಗಿದ್ದ ಸಿಂಹವು ಆತುರದಿಂದ ಕುರಿಮಂಡೆಯೊಳಕ್ಕೆ ನುಗ್ಗಬೇಕೆಂದು ಬಂದಾಗ್ಗೆ ಮಧ್ಯೆ ಹೊಳೆಯೊಂದು ಅಡ್ಡಲಾಗಿ ಸಿಕ್ಕಿತು. ಆಗ ಹಸಿದ ಸಿಂಹವು ಹೊಳೆಯನ್ನು ದಾಟಲಾರದೆ ಆಚೆ ದಡದಲ್ಲಿ ಹೋಗಿ ಮರಿಹಾಕಿ ಸತ್ತಿತು. ಸಿಂಹದ ಮರಿಯಾದರೋ ಕುರಿಗಳ ಮಂದೆಯೊಳಗೆ ಸೇರಿಕೊಂಡು ಕುರಿಗಳ ಹಾಲನ್ನು ಕುಡಿದು ಕುರಿಗಳಂತೆ ಹುಲ್ಲು ಮೇದು ಕೆಲವು ವರ್ಷ ಕಾಲಹಾಕಿತು. ಹೀಗಿರುವಾಗ್ಗೆ ಒಂದುದಿನ ಒಂದು ದೊಡ್ಡ ಸಿಂಹವು ಅಲ್ಲಿಗೆ ಬಂದು ಕುರಿಗಳ ಮಧ್ಯೆ ಇರುವ ಸಿಂಹದ ಮರಿಯನ್ನು ನೋಡಿ ಅಲ್ಲಿಗೆ ನುಗ್ಗಿತು. ಕುರಿಗಳೆಲ್ಲಾ ಚೆದುರಿಹೋದವು. ಸಿಂಹದ ಮರಿ ಅಲ್ಲಿಯೇ ಇದ್ದಿತು. ಆಗ ಸಿಂಹವು ಆ ಮರಿಯನ್ನು ಹೊಳೆಯ ಹತ್ತಿರ ಎಳೆದುಕೊಂಡು ಬಂದು ನೀರಿನಲ್ಲಿ ಅದರ ಮುಖವನ್ನು ತೋರಿಸಿ ‘ ನೀನು ಕುರಿಮರಿಯಲ್ಲ, ಸಿಂಹದ ಮರಿ ’ ಎಂದು ಪ್ರತಿಬಿಂಬವನ್ನು ತೋರಿಸಿ ಹೇಳಿದರೂ ಆ ಮರಿಗೆ ನಂಬಿಕೆ ಬಾರದೆ ಸ್ತಬ್ಧವಾಗಿ ಹಾಗೆಯೇ ನಿಂತಿತು. ಆಗ ದೊಡ್ಡ ಸಿಂಹವು ಅದನ್ನು ತನ್ನ ಗುಹೆಯೊಳಕ್ಕೆ ಎಳೆದುಕೊಂಡು ಹೋಗಿ ರಕ್ತಮಾಂಸವನ್ನು ಹಾಕಿ ತಿನ್ನುವಂತೆ ಬಲವಂತಮಾಡಿತು. ಅದರ ಭಯಕ್ಕೋಸ್ಕರ ಸಿಂಹದ ಮರಿ ರಕ್ತ ಮಾಂಸಗಳ ರುಚಿಯನ್ನು ಸವಿಯಿತು. ಅದನ್ನೆಲ್ಲಾ ತಿಂದಮೇಲೆ ಈಚೆಗೆ ಎಳೆತಂದು ‘ ಬೇಟೆಗೆ ಹೋಗೋಣ, ಗುಟುರು ಹಾಕು’ ಎಂದು ಬೇಟೆಗೆ ಕರೆದುಕೊಂಡುಹೋಯಿತು. ಆಗ ಸಿಂಹದ ಮರಿಗೆ ತಾನು ಕುರಿಮರಿಯಲ್ಲವೆಂದೂ, ನಿಜವಾಗಿಯೂ ಸಿಂಹದ ಮರಿಯೆಂದೂ ಸಹಜವಾಗಿ ಗೊತ್ತಾಯಿತು. ದೊಡ್ಡ ಸಿಂಹದಿಂದ ಇಷ್ಟು ಸಂಸ್ಕಾರವಾದ ಮೇಲೆ ಚಿಕ್ಕ ಸಿಂಹದ ಮರಿಗೆ ತನ್ನ ನಿಜಸ್ವರೂಪವು ತಿಳಿದುಬಂತು. ಹಾಗೆಯೇ ‘ಆ ಶಿವನೆ ನಾನು ’ ಎಂದು ಮಲಾವೃತನಾದ ಜೀವನು ತನ್ನ ಸಹಜ ಸ್ವರೂಪವನ್ನು ಶಾಸ್ತ್ರತಃ, ಗುರುತಃ, ಸ್ವತಃ–ಅಂದರೆ, ಶಾಸ್ತ್ರದಲ್ಲಿ ಹೇಳಿರುವ ಆಧ್ಯಾತ್ಮಿಕ ಅಥವಾ ಬೌದ್ಧಿಕ ಜ್ಞಾನದಿಂದಾಗಲಿ, ದೀಕ್ಷಾಪೂರ್ವಕವಾದ ಗುರೂಪದೇಶದಿಂದಾಗಲಿ, ಪೌರುಷ ಜ್ಞಾನದಿಂದಾಗಲಿ, ಶ್ರವಣ ಮನನ ನಿಧಿಧ್ಯಾಸದಿಂದಲೂದ ಸಾಧನಾಭ್ಯಾಸಗಳಿಂದಾಗಲಿ ಸ್ವಸ್ವರೂಪವನ್ನು ಕಂಡುಕೊಳ್ಳುವುದೇ ಪ್ರತ್ಯಭಿಜ್ಞಾ.

ಮೊದಲು ತಿಳಿದಿದ್ದ ವಿಷಯಗಳನ್ನು ಮಧ್ಯೆ ಕೆಲವು ಕಾಲ ಮರೆತು ಅಥವಾ ವಿಶದವಾಗಿ ತಿಳಿಯದೆ ಇದ್ದು ಅನಂತರ ಮೊದಲ ಸ್ಥಿತಿಯನ್ನು ಮರಳಿ ನಿಸ್ಸಂಶಯವಾಗಿ ಪೂರ್ಣವಾಗಿ ತಿಳಿಯುವಿಕೆಗೆ ‘ ಪ್ರತ್ಯಭಿಜ್ಞೆ ’ ಎಂದು ಸಂಸ್ಕೃತದ ಪರಿಭಾಷೆ. ‘ ಗ್ರಹಣ ಸ್ಮರಣಯೋಃ ಐಕ್ಯಂ ’ ಎಂಬಂತೆ ಈಗ ನೋಡಿದ್ದು, ಹಿಂದೆ ನೋಡಿದ್ದು ಒಂದೇ ಎಂಬ ತಿಳಿವಳಿಕೆಯೇ ಪ್ರತ್ಯಭಿಜ್ಞಾ. ಈ ಶಿವಾದ್ವೈತದ ರಹಸ್ಯವು ಪ್ರತ್ಯಭಿಜ್ಞಾ ಎಂಬ ಪದದಲ್ಲಿ ಅಡಗಿದೆ. ಪ್ರತ್ಯಭಿಜ್ಞಾ ಅಂದರೆ ತನ್ನ ನಿಜಸ್ವರೂಪವನ್ನು ತಾನು ಗುರುತಿಸುವುದು. ತನ್ನಲ್ಲಿಯೇ ಶಿವನು ಇದ್ದಾನೆಂಬ ಅಂಶವನ್ನು ತಿಳಿದು ಸಾಕ್ಷಾತ್ಕರಿಸುವುದು.

ಅನುಭವವು ಎಲ್ಲಾ ದಾರ್ಶನಿಕರಿಗೂ ಒಂದೇ. ವಿವರಣೆಗಳು ಮಾತ್ರ ಬೇರೆ.

ಎಲ್ಲಾ ದರ್ಶನಗಳೂ ಪ್ರಮಾತೃ ಅಥವಾ ಅನುಭವದ ಸಾಕ್ಷಿ ಯಾರು ಎಂಬ ವಿಚಾರದಲ್ಲಿ ಮಗ್ನವಾಗಿರುತ್ತವೆ. ಪ್ರಮಾತೃ, ಪ್ರಮೇಯ, ಜ್ಞಾನಜ್ಞೇಯಗಳ ರಹಸ್ಯವೇನೆಂಬುದೇ ಪ್ರತ್ಯಭಿಜ್ಞಾ ಶಾಸ್ತ್ರದ ವಿಮರ್ಶನೀಯ ವಿಷಯ. ಗ್ರಾಹ್ಯಗ್ರಾಹಕ, ಪ್ರಮಾತೃಪ್ರಮೇಯ ಇವುಗಳ ಮೂಲವನ್ನು ಶೋಧಿಸುವುದಕ್ಕೆ ಹೊರಟಾಗ ಒಂದು ಕಡೆ ಜ್ಞಾನದ ಉಪಕರಣ ಗಳಾದ ಇಂದ್ರಿಯಗಳು, ಅಂತಃಕರಣವಾದ ಮನಸ್ಸು ಇವುಗಳಿಗಿಂತ ಮೂಲವಾದ ಸಾಕ್ಷಿ ಇವುಗಳ ಸ್ವರೂಪ ಪರಿಜ್ಞಾನವಾಗುವುದು. ಇನ್ನೊಂದು ಕಡೆ ಬಾಹ್ಯಸೃಷ್ಟಿಗೆ ಕಾರಣನಾದ ಪರಮೇಶ್ವರನ ಕಲ್ಪನೆಯೂ ಮೂಡುವುದು. ಇವೆರಡಕ್ಕೂ ಸಾಮರಸ್ಯ ಬರಲು ಒಂದೇ ತತ್ತ್ವವನ್ನಾಶ್ರಯಿಸಬೇಕಾಗುತ್ತದೆ. ಆ ಪರತತ್ತ್ವವೇ ಒಳಗಿನ ಹೊರಗಿನ ಎಲ್ಲಕ್ಕೂ ಮೂಲ. ಆ ಪರತತ್ತ್ವವನ್ನು ಗುರುತಿಸುವುದೇ ' ಪ್ರತ್ಯಭಿಜ್ಞಾ.'

ಎಲ್ಲಾ ಜೀವರುಗಳೂ ಶಿವರೂಪಿಗಳೇ ಆಗಿದ್ದಾರೆ. ಶಿವತ್ವವು ಜೀವನಲ್ಲಿ ಸಿದ್ಧವಾಗಿದ್ದರೂ ಅವ್ಯಕ್ತವಾಗಿದೆ. ಇದಕ್ಕೆ ಕಾರಣ ಶಕ್ತಿಸಂಕೋಚರೂಪವಾದ ಮಲಗಳೇ ಆಗಿರುತ್ತವೆ. ಶಕ್ತಿಸಂಕೋಚಕ್ಕೆ ಮೂಲವಾದ ಮಾಯಾಪಾಶ ನಿವೃತ್ತಿಯಿಂದ ಶಕ್ತಿಯು ವಿಕಾಸವನ್ನು ಹೊಂದಿ ಆ ಶಿವನೇ ನಾನು ಎಂದು ಮಲಾವೃತನಾದ ಜೀವನು ತನ್ನ ಸಹಜ ಸ್ವರೂಪವನ್ನು ಗುರುತಿಸುವುದೇ ಪ್ರತ್ಯಭಿಜ್ಞಾ. ಇದೇ ಜೀವನ್ಮುಕ್ತಿ. ಈ ಶಿವಯೋಗದ ಸಿದ್ಧಿ ಇಲ್ಲಿಯೇ ಲಭಿಸತಕ್ಕದ್ದು—ಜನ್ಮಾಂತರದಲ್ಲಿ ಉಂಟಾಗುವ ಫಲವಲ್ಲ.

ಪರಶಿವನು ವಿಶ್ವಸೃಷ್ಟಿಯನ್ನು ಮಾಡುವಾಗ ತನ್ನಲ್ಲಿರುವ ಅನಂತಶಕ್ತಿಗಳನ್ನು ಪ್ರಸಾರಮಾಡುತ್ತಾನೆ. ಆ ಶಕ್ತಿಗಳ ಪ್ರಸಾರವೇ ಈ ವಿಶ್ವ. ಆ ಶಕ್ತಿಗಳಲ್ಲಿ ಜ್ಞಾನ, ಕ್ರಿಯಾಶಕ್ತಿಗಳಿರುವಂತೆ ಸ್ಮೃತಿಶಕ್ತಿ, ಅಪೋಹನ ಶಕ್ತಿಗಳೂ ಇವೆ. ಆ ಅಪೋಹನ ಶಕ್ತಿಯ ವಿಲಾಸವೇ ಸ್ಥೂಲಪ್ರಪಂಚ ಮತ್ತು ಜೀವಭಾವ. ಅಂದರೆ ಸರ್ವಶಕ್ತನಾದ ಪರಶಿವನು ಜೀವಭಾವವನ್ನೂ, ಸ್ಥೂಲಪ್ರಪಂಚವನ್ನೂ, ತನ್ನ ಶಕ್ತಿಸಂಕೋಚದ ಮೂಲಕ 'ಮಾಯಾವಿಮೋಹಿನೀಶಕ್ತಿ' ಯಿಂದ ಹೊರಹೊಮ್ಮಿಸುತ್ತಾನೆ. ಮರಳಿ ತನ್ನ ' ದೃಕ್ಕ್ರಿಯಾಶಕ್ತಿ ' ಗಳ ಆವಿಷ್ಕಾರದಿಂದಲೇ ಸಹಜಾವಸ್ಥೆಯನ್ನು ಪಡೆಯುತ್ತಾನೆ. ಇದನ್ನು ಲೀಲೆ, ಮಾಯೆ, ಆಭಾಸ ಎಂಬ ಪದಗಳಿಂದ ಬೇರೆ ಬೇರೆ ದೃಷ್ಟಿಯಿಂದ ವೀಕ್ಷಿಸುತ್ತಾರೆ. ಅಪೋಹನ ಶಕ್ತಿಯಿಂದುಂಟಾದ ಸಂಕೋಚವನ್ನು ತನ್ನ ಸ್ಫುರಣ ಶಕ್ತಿಯಿಂದ ಗುರುತಿಸಿ ಸಹಜಾವಸ್ಥೆಯನ್ನು ಪಡೆಯುವಿಕೆಯೇ ಪ್ರತ್ಯಭಿಜ್ಞೆ ಎನ್ನಿಸುವುದು.

ಇದುವರೆಗೂ ಲೌಕಿಕದೃಷ್ಟಾಂತಗಳಿಂದ ಪ್ರತ್ಯಭಿಜ್ಞೆ ಎಂಬುದರ ಅರ್ಥವನ್ನು ಸ್ಥೂಲವಾಗಿ ವಿವರಿಸಿದ್ದಾಯಿತು. ಇನ್ನು ತಾತ್ತ್ವಿಕದೃಷ್ಟಿಯಿಂದ ' ಆ ಶಿವನೇ ನಾನು ' ಎಂಬುದನ್ನು ಪ್ರತ್ಯಭಿಜ್ಞಾ ಶಾಸ್ತ್ರವು ಹೇಗೆ ನಿರ್ಣಯಿಸುತ್ತದೆಂಬುದನ್ನು ತಿಳಿಯಬಹುದು. ಈ ತತ್ತ್ವಶಾಸ್ತ್ರದ ಪ್ರಕಾರ ವಿಶ್ವಕ್ಕೆ ಮೂಲಕಾರಣ ಶಿವನು. ಆತನೊಬ್ಬನು, ಸ್ವತಂತ್ರನು, ಸರ್ವಶಕ್ತನು ಮತ್ತು ಅನಂತಶಕ್ತಿಗಳನ್ನೊಳಗೊಂಡಿರುವವನು. ಭೇದಜ್ಞಾನಕ್ಕೆ ಕಾರಣವಾಗಿರುವ ಈ ಪ್ರಪಂಚವೆಲ್ಲಾ ಆತನ ಸ್ವಾತಂತ್ರ್ಯವಿಲಾಸ. ಈ ಪ್ರಪಂಚ ಜಡಚೇತನರೂಪವಾಗಿರಲಿ ಚರಾಚರವಾಗಿರಲಿ ಗ್ರಾಹ್ಯ ಗ್ರಾಹಕರೂಪವಾಗಿರಲಿ ಹೇಗೇ

ಇರಲಿ ಇದು ಶಿವನಿಂದ ಬೇರೆಯಲ್ಲ. ಆ ಶಿವನು ತನ್ನ ಲೀಲೆಯಿಂದ ಗ್ರಾಹ್ಯಗ್ರಾಹಕಭಾವದಿಂದಿರುವ ಈ ವಿಶ್ವವನ್ನು ತನ್ನಲ್ಲಿಯೇ ಪ್ರಕಾಶಪಡಿಸುತ್ತಾನೆ. ಈ ಪ್ರಕಾಶವು ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯಗಳ ಏರಿಳಿತಗಳಿಂದ ನಡೆಸಲ್ಪಡುತ್ತದೆ. ಹಾಗೆಯೇ ಆ ಪರಮಶಿವನು ಸತ್, ಚಿತ್, ಆನಂದ ಇಚ್ಛಾಜ್ಞಾನ ಕ್ರಿಯಾಶಕ್ತಿಗಳಿಂದ ಪರಿಪೂರ್ಣನಾಗಿದ್ದಾನೆ. ಮೂವತ್ತಾರು ತತ್ತ್ವರೂಪಿಯಾಗಿ ವಿಶ್ವಾತ್ಮಕನಾಗಿದ್ದಾನೆ. ಸಕಲಾಪ್ರಳಯಾಕಲಾದಿ ಸಪ್ತಪ್ರಮಾತೃವಾಗಿದ್ದಾನೆ. ಪರಾಪಶ್ಯಂತೀ ಮಧ್ಯಮಾವೈಖರೀರೂಪವಾದ ಶಕ್ತ್ಯಾತ್ಮಕನಾಗಿದ್ದಾನೆ. ತನ್ನ ಸ್ವಾತಂತ್ರ್ಯಶಕ್ತಿಯ ವಿಲಾಸವು ದೇಶ, ಕಾಲ, ಆಕಾರಗಳಿಲ್ಲದ ಪ್ರಶಾಂತಸ್ಥಿತಿಯನ್ನು ಪಡೆಯುತ್ತದೆ ಎಂಬಿವೇ ಮೊದಲಾದ ವಿಚಾರಗಳನ್ನು ಶಾಸ್ತ್ರದಿಂದ ತಿಳಿಯುವುದು ಮೊದಲನೆಯ ಘಟ್ಟ. ತತ್ತ್ವಶಾಸ್ತ್ರ ವಿಷಯಗಳನ್ನು ಕೇಳಿ ತಿಳಿಯುವುದರಿಂದ ಜೀವನಿಗೆ ಸ್ವಸ್ವರೂಪದ ಅರಿವುಂಟಾಗುತ್ತದೆ; ಹಾಗೆಯೇ ತತ್ತ್ವಸ್ವರೂಪಜ್ಞಾನವು ತಿಳಿಯಾಗುತ್ತದೆ. ಅಧಿಕಾರ ಭೇದದ ವ್ಯತ್ಯಾಸಗಳು ಮನವರಿಕೆಯಾಗುತ್ತವೆ. ಹಿಂದಿನ ಸಂಸ್ಕಾರಗಳಿಂದ ರೂಪುಗೊಂಡ ಇವನ ವ್ಯಕ್ತಿತ್ವದ ನಿಲವು ವಿಶದವಾಗಿ ಗೋಚರಿಸುತ್ತದೆ. ಇಂತಹ ಪೂರ್ಣವಾದ ತಿಳಿವಳಿಕೆಯಿಂದ ಇವನು ತನ್ನ ಭಾವೀಕಾರ್ಯಕ್ರಮವನ್ನು ನಿರ್ಣಯಿಸಲು ಸಮರ್ಥನಾಗುತ್ತಾನೆ. ಈ ರೀತಿಯಾದ ಪೂರ್ವ ಸಿದ್ಧತೆಯಿಂದ ತನಗೆ ಬರುತ್ತಿರುವ ಭೇದಜ್ಞಾನಗಳನ್ನು ಮನನ ಮಾಡಬೇಕು. ಇವುಗಳ ವಿವೇಚನೆಯಿಂದ ಪ್ರಶಾಂತಸ್ಥಿತಿಯು ಅನುಭವಕ್ಕೆ ಬರುತ್ತದೆ. ಪ್ರಶಾಂತಸ್ಥಿತಿ, ಅಪ್ರಶಾಂತ ಸ್ಥಿತಿ ಈ ಎರಡು ದಶೆಗಳನ್ನೂ ಮನನ ಮಾಡುವುದಕ್ಕೆ ಸಮರ್ಥನಾದರೆ ತನ್ನಲ್ಲಿ ಯಾವಾಗಲೂ ನಡೆಯುತ್ತಿರುವ ವಿಕಲ್ಪ ವ್ಯಾಪಾರಗಳಾಗಿರುವ ಸೃಷ್ಟಿ ಸ್ಥಿತಿ ಪ್ರಳಯಗಳನ್ನು ಅನುಸಂಧಾನ ಮಾಡಬಹುದು. ಇದರಿಂದ ವಿಕಲ್ಪಗಳಿಲ್ಲದಿರುವ ತಿರೋಧಾನವು ಮನವರಿಕೆಯಾಗುತ್ತದೆ. ಅನುಗ್ರಹವನ್ನು ಊಹಿಸಲು ಸಮರ್ಥನಾಗುತ್ತಾನೆ. ಈ ಅಭ್ಯಾಸದಿಂದ ಜಾಗ್ರತ್ ಸ್ವಪ್ನ ಸುಷುಪ್ತಿಗಳ ವ್ಯತ್ಯಾಸ ಅವುಗಳಲ್ಲಿ ಉಂಟಾಗುತ್ತಿರುವ ಸುಖದುಃಖಗಳು ಸ್ಫುಟವಾಗಿ ಗೋಚರಿಸುತ್ತವೆ. ಈ ಎಲ್ಲಾ ವ್ಯಾಪಾರಗಳಿಗೂ ಆಶ್ರಯವಾಗಿರುವ ಚಿತ್ಸ್ವರೂಪವು ನಿರ್ವಿಕಾರವಾದುದೆಂದು ದೃಢ ವಿಶ್ವಾಸವೇರ್ಪಡುತ್ತದೆ. ಶಾಸ್ತ್ರಜ್ಞಾನವು ವಿಮರ್ಶಾಪೂರ್ವಕವಾದ ಮನನದಿಂದ ಅನುಭವಾರೂಢವಾಗಲಾಗಿ ಸ್ವರೂಪಾನುಸಂಧಾನರೂಪವಾದ ಧ್ಯಾನಕ್ಕೆ ಅರ್ಹನಾಗುತ್ತಾನೆ. ಸಾಧಕನು ತನ್ನಲ್ಲಿ ಅನುಭವಕ್ಕೆ ಬರುತ್ತಿರುವ ಭೇದಜ್ಞಾನಗಳನ್ನೂ ಪ್ರಶಾಂತಸ್ಥಿತಿಯನ್ನೂ ಪಂಚಕೃತ್ಯಗಳನ್ನೂ ಜಾಗ್ರತ್ ಸ್ವಪ್ನ ಸುಷುಪ್ತ್ಯಾದಿ ಅವಸ್ಥೆಗಳನ್ನೂ ಧ್ಯಾನಾಭ್ಯಾಸಗಳಿಂದ ಮನನ ಮಾಡಿ ತಾನು ಶಾಸ್ತ್ರತತ್ತ್ವದ ವಿಚಾರಸರಣಿಯಿಂದುಂಟಾದ ಸಾತ್ಮ್ಯಕೃತವಾದ ಜ್ಞಾನದಿಂದ ಪ್ರತಿಬೋಧಿತನಾಗಿ 'ತಾನೇ ಆ ಶಿವನು' ಎಂದು ತನ್ನ ಸ್ವರೂಪವನ್ನು ಗುರುತಿಸುವಿಕೆಯೇ ಪ್ರತ್ಯಭಿಜ್ಞೆ. ಹಿಂದೆ ಶಾಸ್ತ್ರಜ್ಞಾನದಿಂದುಂಟಾದ ಅರಿವು ಮತ್ತು ಪರಿಪಾಕದಿಂದ 'ಆ ಶಿವನು ನಾನು' ಎಂದು ಏರ್ಪಟ್ಟ ಅನುಭವ ಈ ಎರಡಂಶಗಳ ಐಕ್ಯವೇ ಪ್ರತ್ಯಭಿಜ್ಞಾ.

ಪ್ರತ್ಯಭಿಜ್ಞೆಯನ್ನು ಅನೇಕ ರೀತಿಯಾಗಿ ನಮ್ಮ ಅನುಭವಕ್ಕೆ ಸಮನ್ವಯಪಡಿಸಿಕೊಳ್ಳಬಹುದು. ನಮಗೆ ಪ್ರಪಂಚದಲ್ಲಿ ಜಡ ಚೇತನ ತಿಳಿಯುವವನು ತಿಳಿಯಲ್ಪಡತಕ್ಕ ವಸ್ತು (ಗ್ರಾಹಕಗ್ರಾಹ್ಯಭೇದ) ಎಂಬ ಪರಸ್ಪರ ವಿರುದ್ಧ ಅಂಶಗಳು ತೋರುತ್ತಿವೆ. ಇಲ್ಲಿ ಗ್ರಾಹಕಾನುಭವ ಗ್ರಾಹ್ಯಾನುಭವಗಳನ್ನು ಅಂತರನುಭವ ಬಾಹ್ಯಾನುಭವ ಎಂಬುದಾಗಿ ಹೇಳಬಹುದು. ಹೊರಗಿನ ಎಲ್ಲಾ ಅನುಭವಗಳೂ ದೇಶ, ಕಾಲ, ಆಕಾರ ಈ ಮೂರು ಧರ್ಮಗಳಿಂದ ಕೂಡಿರುತ್ತವೆ. ಆ ಅನುಭವಗಳು ಜ್ಞಾಪಕಕ್ಕೆ ಬರುವಾಗ್ಗೆ ಈ ಮೂರು ಧರ್ಮಗಳನ್ನೊಳಗೊಂಡೇ ಬರುತ್ತವೆ. ನಾವು ಪೇಟೆಯಲ್ಲಿ ಒಂದು ವಸ್ತುವನ್ನು ಕಳೆದ ತಿಂಗಳು ನೋಡಿದ್ದೆವು ಅನ್ನೋಣ. ಆ ಪದಾರ್ಥವು ಜ್ಞಾಪಕಕ್ಕೆ ಬರುವಾಗ ಪೇಟೆಯಲ್ಲಿ ಯಾವ ಸ್ಥಳದಲ್ಲಿ ನೋಡಿದ್ದೆವೋ ಆ ಸ್ಥಳದ ಜ್ಞಾನವೂ (ದೇಶ) ಆ ಸಮಯ ಜ್ಞಾನವೂ (ಕಾಲ) ಆ ಪದಾರ್ಥದ ಸ್ವರೂಪಜ್ಞಾನವೂ (ಆಕಾರ) ಆಗುತ್ತವೆ ಅಥವಾ ಬರುತ್ತವೆ. ಕಾಲಾಂತರದಲ್ಲಿ ಬೊಂಬಾಯಿಯಲ್ಲಿಯೋ ಕಲ್ಕತ್ತಾದಲ್ಲಿಯೋ ನಾವು ನೋಡಿದ್ದ ಸ್ನೇಹಿತನನ್ನು ಕಂಡರೆ ಅಪ್ರಕೃತವಾಗಿರುವ ಆ ಊರಿನ ದೇಶ ಜ್ಞಾನವೂ ಬರುತ್ತದೆ. ಈ ಕ್ರಮದಲ್ಲಿ ಮೊದಲು ಆಕಾರ, ತರುವಾಯ ದೇಶ, ಹಾಗೆಯೇ ವಿವೇಚಿಸಿದರೆ ಕಾಲ ಹೀಗೆ ಮೂರು ಧರ್ಮಗಳು ಮೂರೆಲೆಗಳಿಂದ ಮುತ್ತುಗದೆಲೆಯಂತೆ ಒಟ್ಟಾಗಿ ಸೇರಿರುವ ತ್ರಿಪುಟಿಯಾಗಿರುತ್ತದೆ. ಇದು ಬಾಹ್ಯಾನುಭವದ ವಿವೇಚನೆ. ಇದಕ್ಕೆ ವಿರುದ್ಧವಾಗಿ ಅಂತರನುಭವ ಅಥವಾ ಗ್ರಾಹಕಾನುಭವವು ದೇಶ ಕಾಲ ಆಕಾರಗಳಿಂದ ದೂರವಾಗಿರುತ್ತದೆ. ದೇಶ ಕಾಲ ಆಕಾರರಹಿತವಾಗಿರುವ 'ನಾನು' ಎನ್ನುವ (ಅಹಂ) ಅನುಭವವು ಕೇವಲ ಸದ್ರೂಪವಾಗಿರುತ್ತದೆ. ದೇಶ ಕಾಲ ಆಕಾರಸಹಿತವಾದ 'ಇದಂ' ವ್ಯವಹಾರದೊಡನೆ ಏಕೀಭವಿಸಿಯೂ ಇರುತ್ತದೆ, ಭಿನ್ನಾಭಿನ್ನವಾಗಿಯೂ ಇರುತ್ತದೆ. ದೇಶ ಕಾಲ ಆಕಾರಸಹಿತವಾದ ವ್ಯವಹಾರಗಳನ್ನು ನಾನು ನೋಡಿದೆ, ನಾನು ಕೇಳಿದೆ, ನನಗೆ ತಿಳಿಯಿತು ಎಂಬುವುದು 'ನಾನು' ಎಂಬ ತತ್ತ್ವಕ್ಕಿಂತ ಬೇರೆಯಾಗಿರುವ ನೋಡುವಿಕೆ, ಮಾಡುವಿಕೆ, ತಿಳಿಯುವಿಕೆ ಮುಂತಾದ ಕ್ರಿಯಾರೂಪವನ್ನು ಹೊಂದುತ್ತದೆ. ಇದರಲ್ಲಿ ಚಮತ್ಕಾರವು ಇಷ್ಟೆ. ನಾನು ಎಂಬ ಅನುಭವವು ದೇಶ ಕಾಲ ಆಕಾರಸಹಿತವಾದ 'ಇದಂ' ವ್ಯವಹಾರದೊಡನೆ ಏಕೀಭವಿಸಿಯೂ ಇರುತ್ತದೆ, ಭಿನ್ನಾಭಿನ್ನವಾಗಿಯೂ ಇರುತ್ತದೆ, ಭಿನ್ನವಾಗಿಯೂ ಇರುತ್ತದೆ. ದೇಶ ಕಾಲ ಆಕಾರಸಹಿತವಾದ 'ಇದಂ' (ಗ್ರಾಹ್ಯ) ವ್ಯವಹಾರವು 'ಅಹಂ' (ಗ್ರಾಹಕ) ಇಲ್ಲದೆ ಇಲ್ಲ. ಆದರೆ ದೇಶ ಕಾಲ ಆಕಾರರಹಿತವಾದ 'ಅಹಂ' ಅನುಭವವು 'ಇದಂ' ಇಲ್ಲದೇನೂ ಇರಬಹುದು. ಇದರಿಂದ 'ಅಹಂ' ಅನುಭವವು (ಗ್ರಾಹಕನ ಸ್ವರೂಪವು) ಅನಂತವಾದ ಗ್ರಾಹ್ಯ ವಿಭಾಗಗಳನ್ನೊಳಗೊಂಡು ಅಭಿನ್ನವಾಗಿ ನಿಸ್ತರಂಗವಾಗಿ ಆನಂದರೂಪವಾಗಿರುತ್ತದೆ; ಹಾಗೆಯೇ ಅನಂತವಾದ ಬಾಹ್ಯಜ್ಞಾನಗಳಿಂದ ಕೂಡಿಯೂ ಇರುತ್ತದೆ. ಈ ವೈಚಿತ್ರ್ಯವನ್ನು ಸಾಮಾನ್ಯ ಜನಗಳು ಗಮನಿಸದಿರುವುದರಿಂದ ಗ್ರಾಹ್ಯ ಬೇರೆ ಗ್ರಾಹಕ ಬೇರೆ ಎಂಬ ತಿಳಿವಳಿಕೆಯಿಂದಿರುವರು. ತತ್ತ್ವಜ್ಞಾನಿಗಳು ಈ ಗ್ರಾಹ್ಯ ಗ್ರಾಹಕಗಳಿಗಿರುವ ಸಂಬಂಧವನ್ನೂ ಅದರ ಐಕ್ಯವನ್ನೂ

ಅದರ ವ್ಯವಹಾರ ಚಮತ್ಕಾರಗಳನ್ನೂ ತಿಳಿದಿರುತ್ತಾರೆ. ಆದುದರಿಂದ ಅವರಿಗೆ ಗ್ರಾಹ್ಯ ಮತ್ತು ಗ್ರಾಹಕ ವ್ಯವಹಾರಗಳಲ್ಲಿ ಪರಪ್ರಮಾತ್ರಾವೇಶ (ಶಿವಾಭಿನ್ನ) ದೃಷ್ಟಿಯು ಸ್ಥಿರವಾಗಿರುತ್ತದೆ. ಈ ವಿಷಯವನ್ನು 'ವಿಜ್ಞಾನಭೈರವ'ವೆಂಬ ಗ್ರಂಥದಲ್ಲಿ ಸೂತ್ರಪ್ರಾಯವಾಗಿ ಹೇಳಿದ್ದಾರೆ–

ಗ್ರಾಹ್ಯಗ್ರಾಹಕ ಸಂವಿತ್ತಿಃ ಸಾಮಾನ್ಯಾ ಸರ್ವದೇಹಿನಾಂ
ಯೋಗಿನಾಂತು ವಿಶೇಷೋಽಯಂ ಸಂಬಂಧೆ ಸಾವಧಾನತಾ

ದೇಶ ಕಾಲ ಆಕಾರ ಸಹಿತವಾಗಿ ಬರುವ ತಿಳಿವಳಿಕೆಗಳೆಲ್ಲಾ ಕೇವಲ ಕ್ಷಣಿಕಗಳಾಗಿರುವುವೆಂದೂ ಗ್ರಾಹಕಾನುಭವವು ನಿತ್ಯವಾಗಿರುವುದೆಂದೂ ಗ್ರಾಹ್ಯಗ್ರಾಹಕಗಳು ಒಂದೇ ಎಂದು ತಿಳಿದರೆ, ಅನಾದಿಕಾಲದಿಂದ ಬಂದಿರುವ 'ಅಖ್ಯಾತಿ' ಮೂಲಕವೇ ಈ ಪ್ರಪಂಚದಲ್ಲಿರುವ ರಾಗದ್ವೇಷಗಳು ಹುಟ್ಟಿವೆ ಎಂಬುದು ವ್ಯಕ್ತವಾಗುವುದು. ಇದಕ್ಕೋಸ್ಕರವಾಗಿಯೇ ಗ್ರಾಹ್ಯಗ್ರಾಹಕ ವಿಭಾಗಗಳ ತಿಳಿವಳಿಕೆಗಳು ವಿಶದವಾದರೆ ಈ ವಿಶ್ವಕ್ಕೆಲ್ಲಾ ಮೂಲವಾಗಿರುವ ಮಹಾಚಿತ್ಸಮುದ್ರರೂಪವಾಗಿರುವ ಪರಮಶಿವನೊಬ್ಬನೇ ಮಹಾ ಗ್ರಾಹಕನಾಗಿರುವನೆಂದೂ ಸ್ವೇಚ್ಛೆಯಿಂದ ಮಿತಗ್ರಾಹಕನಾಗಿರುವ ಶಿವನೇ ಜೀವನೆಂದೂ ಗ್ರಾಹ್ಯರೂಪವಾಗಿರುವ ಈ ವಿಶ್ವವೆಲ್ಲಾ ಶಿವನ ಸ್ವಾತಂತ್ರ್ಯ ಶಕ್ತಿಯ ವಿಲಾಸವಾಗಿರುವುದೆಂದೂ ಈಶ್ವರಾಭಿನ್ನವೆಂದೂ ಅನುಭವಕ್ಕೆ ಬರುತ್ತವೆ. ಇದಕ್ಕೆ ಪ್ರತ್ಯಭಿಜ್ಞೆಯೆಂದು ಹೆಸರು.

ಬೇರೆ ಸಂಪ್ರದಾಯಗಳಲ್ಲಿರುವಂತೆ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ಭಾವನೆ ಇಲ್ಲಿಲ್ಲ. ಈಶ್ವರನೂ ಸತ್ಯ, ಈಶ್ವರನಿಂದ ಸೃಷ್ಟಿಮಾಡಲ್ಪಟ್ಟ ಈ ಪ್ರಪಂಚವೂ ಸತ್ಯ ಎಂಬುದು ಈ ಸಿದ್ಧಾಂತದ ನಿಶ್ಚಯವಾಗಿರುತ್ತದೆ. ಚಿಚ್ಛಕ್ತಿಯು ಕಾರಣ, ವಿಶ್ವವು ಕಾರ್ಯ. ಆದುದರಿಂದ ಕಾರ್ಯಕಾರಣಗಳೆರಡೂ ಸತ್ಯವಾದುವುಗಳಾಗಿವೆ. ಒಂದು ಸತ್ಯ ಒಂದು ಮಿಥ್ಯ ಎಂಬ ವ್ಯವಹಾರಗಳಿಲ್ಲಿಲ್ಲ. ಈಶ್ವರನೂ ಚಿಚ್ಛಕ್ತಿಯೂ ಅಭಿನ್ನರಾಗಿರುತ್ತಾರೆ. ಶಕ್ತಿಯ ಪ್ರಸರಣವೇ ಈ ವಿಶ್ವ. ಈಶ್ವರನು ಆಧಾರ, ವಿಶ್ವವು ಆಧೇಯ. ಆಧೇಯವು ಆಧಾರಕ್ಕೆ ಅಧೀನವಾಗಿರುತ್ತದೆ. ಈಶ್ವರನು ತನ್ನಲ್ಲಿಯೇ ತನ್ನ ಸಂಕಲ್ಪದಿಂದ ವಿಶ್ವವನ್ನು ತೋರ್ಪಡಿಸಿಕೊಳ್ಳುತ್ತಾನೆ. ಚಿದ್ಘನ ರೂಪವಾಗಿರುವ ಈಶ್ವರನು ಜ್ಞಾನ ಇಚ್ಛಾ ಕ್ರಿಯಾಶಕ್ತಿಗಳಿಂದ ಕೂಡಿದ್ದರೂ ಶಕ್ತಿಪ್ರಸರವಿಲ್ಲದಿರುವ ಸ್ಥಿತಿ ಒಂದು, ಶಕ್ತಿ ಪ್ರಸರವಿರುವ ಸ್ಥಿತಿ ಒಂದು, ಹೀಗೆ ಎರಡು ಸ್ಥಿತಿಗಳುಳ್ಳವನಾಗಿರುತ್ತಾನೆ. ಶಕ್ತಿ ಪ್ರಸರವಿಲ್ಲದಿರುವ ಸ್ಥಿತಿ ವಿಶ್ವಾತೀತವಾದ ಪರಾವಸ್ಥೆ. ಇದನ್ನೇ ತತ್ತ್ವಗಣನೆಯಲ್ಲಿ 'ಪರಮಶಿವ' ಎನ್ನುವುದು--ಶಕ್ತಿ ಪ್ರಸರವಿರುವ ಸ್ಥಿತಿಯು ಶಿವನಿಂದ ಭೂಮಿವರೆಗಿರುವ ಮೂವತ್ತಾರು ತತ್ತ್ವ ವಿಭಾಗಗಳುಳ್ಳದ್ದಾಗಿದೆ. ಇದು ವಿಶ್ವಾತ್ಮಕವಾದದ್ದು. ಈಶ್ವರನು ತನ್ನಲ್ಲಿ ಸೂಕ್ಷ್ಮವಾಗಿರುವುದನ್ನೇ ಸ್ಥೂಲವಾಗಿ ಪ್ರಕಟಪಡಿಸುತ್ತಾನೆ. ಹೀಗೆ ಪ್ರಕಟವಾದದ್ದೇ ವಿಶ್ವ. ಬೇರೆ ತನ್ನಿಂದ ಭಿನ್ನವಾಗಿರುವ ಪದಾರ್ಥದಿಂದ ಸೃಷ್ಟಿಸುವುದಿಲ್ಲ. ಆದುದರಿಂದ ಈ ರೀತಿಯಾದ ಪ್ರಕಟನೆಗೆ 'ಉನ್ಮೀಲನ' ಅಥವಾ 'ಆಭಾಸನ' ಎಂದು ಶಾಸ್ತ್ರವ್ಯವಹಾರವಿದೆ.

ಪ್ರತ್ಯಭಿಜ್ಞಾ ಸಂಪ್ರದಾಯದ ವೈಶಿಷ್ಟ್ಯವೇನೆಂದರೆ ಶಾಸ್ತ್ರಜ್ಞಾನದಿಂದ ಶಿವನೇ ಅದನ್ನು ಸಾಕ್ಷಾತ್ಕಾರ ಮಾಡಿಕೊಂಡು ಸಂಪೂರ್ಣವಾದ ತಾನು ಎಂದು ತಿಳಿದರೂ ಅನುಭವವನ್ನು ಇಲ್ಲಿಯೇ ಪಡೆಯುವುದಕ್ಕೆ ಸ್ವತಂತ್ರವಾದ ಅವಕಾಶವನ್ನು ಕಲ್ಪಿಸಿರುವಿಕೆಯೇ ಆಗಿದೆ. ಪ್ರತ್ಯಕ್ಷ, ಅನುಮಾನ, ಶಬ್ದ ಈ ಮೂರು ಪ್ರಮಾಣಗಳ ಮೂಲಕ ಇವನು ಸಾಕ್ಷಾತ್ಕಾರವನ್ನು ಹೊಂದಲು ಯಾವ ರೀತಿ ಪ್ರಯತ್ನಪಡಬಹುದು ಎಂಬ ಅಂಶವನ್ನು ನಿರ್ಣಯಿಸಲು ಸಹಕಾರಿಯಾಗಿದೆ. ಪ್ರತ್ಯಕ್ಷಾನುಭವದಿಂದ ಶಾಸ್ತ್ರದಲ್ಲಿ ಹೇಳಿರುವ ತನ್ನಲ್ಲಿ ಸಂಕುಚಿತವಾಗಿರುವ ಶಕ್ತಿ ಸ್ವರೂಪವನ್ನು ತಿಳಿಯಬಹುದು. ತಾನು ಯಾವ ಉಪಾಯಾನುಷ್ಠಾನಕ್ಕೆ ಅರ್ಹನೆಂಬುದನ್ನು ತನ್ನ ವ್ಯಕ್ತಿತ್ವದ ನಿಲುವಿನಿಂದ ನಿರ್ಣಯಿಸಬಹುದು. ಅನುಮಾನದಿಂದ ಮೆಟ್ಟಿಲು ಮಟ್ಟಿಲಾಗಿ ವಿಕಾಸವನ್ನು ತನ್ನ ಅಭ್ಯಾಸದ ಫಲದ ಅತಿಶಯವನ್ನು ಗುರುತಿಸಬಹುದು. ಸದ್ಗುರೂಪದೇಶದಿಂದ ತನ್ನ ವ್ಯಕ್ತಿತ್ವವನ್ನು ಸಂಸ್ಕರಿಸಿಕೊಳ್ಳಬಹುದು. ಯಾವುದರಿಂದಲಾದರೂ 'ಪೂರ್ಣಾಹಂ ವಿಮರ್ಶಾ' (ನಿರ್ವಿಕಲ್ಪವಾದ ಪ್ರಶಾಂತವಾದ ಚಿದನುಭವ) ಏರ್ಪಟ್ಟರೆ ಆಮೇಲೆ ಈ ಪ್ರಮಾಣಗಳಿಂದ ಏನೂ ಕೆಲಸವಿಲ್ಲ. ಜೀವನು ಶಿವನೇ ಆಗಿದ್ದಾನೆಂದೂ ಶಿವತ್ವ ಪ್ರಾಪ್ತಿಯು ಒಂದು ಅಪೂರ್ವ ಅಂಶವಲ್ಲವೆಂದೂ ಸದಾ ಅನುಭವದಲ್ಲಿದ್ದರೂ ಅನಾದಿಕಾಲದಿಂದ ಬಂದಿರುವ ಮೋಹದಿಂದ ಸ್ವಸ್ವರೂಪವು ತಿಳಿಯುತ್ತಾ ಇಲ್ಲವೆಂದೂ ಆ ಸ್ವಸ್ವರೂಪವನ್ನೂ ಇವನು ಚಿಚ್ಛಕ್ತಿಯನ್ನೂ ಉದ್ದೀಪನಗೊಳಿಸುವುದರಿಂದ ಅನುಭವಕ್ಕೆ ತರಲು ಪ್ರತ್ಯಭಿಜ್ಞಾತತ್ತ್ವವು ಉಪದೇಶಿಸಲ್ಪಟ್ಟಿದೆಯೆಂದೂ ತಿಳಿಯಬೇಕು.

> ಕಿಂತು ಮೋಹವಶಾದಸ್ಮಿನ್ ದೃಷ್ಟೇಽಪ್ಯನುಪಲಕ್ಷಿತೇ
> ಶಕ್ತ್ಯಾವಿಷ್ಕರಣೇನೇಯಂ ಪ್ರತ್ಯಭಿಜ್ಞೋಪದಿಶ್ಯತೇ

ಅಭಿನವಗುಪ್ತಾಚಾರ್ಯರು ತಮ್ಮ ತೇಜಸ್ಸು ಶಿವಚರಣ ದೀಪ್ತವಾದಾಗ ತಮ್ಮಿಂದ ರಚಿತವಾದ ಪರಮಾರ್ಥಸಾರವೆಂಬ ಗ್ರಂಥದಲ್ಲಿ ಸಾಕ್ಷಾತ್ಕಾರಜನ್ಯವಾದ ಸ್ಫೂರ್ತಿಯನ್ನು ಕಾಣಬಹುದು. ಇದರಲ್ಲಿ ಕಾಶ್ಮೀರ ಶೈವದರ್ಶನದ ಸ್ವರೂಪ ಮತ್ತು ಆಚಾರ್ಯರ ನಿರೂಪಣೆಯ ಮಾರ್ಗವನ್ನು ನಾವು ಗಮನಿಸಬಹುದು.

ಪರತತ್ತ್ವವು ಏಕವೂ ನಿತ್ಯವೂ ಅಖಂಡವೂ ಚೈತನ್ಯಸ್ವರೂಪವೂ ಆಗಿದೆ. ಪರಮೇಶ್ವರನ (ಪರತತ್ತ್ವ) ಆನಂದೋಚ್ಛಲಿತ ಶಕ್ತಿ ವೈಭವದ ಪ್ರಕಾಶದಿಂದ ಶಕ್ತಿ, ಮಾಯೆ, ಪ್ರಕೃತಿ, ಪೃಥ್ವಿ ಎಂಬ ವಿಭಾಗದಿಂದ ಕೂಡಿ ಅಂಡ ಚತುಷ್ಟಯವು ಹೊರ ಅಸ್ತಿತ್ವವನ್ನು ಪಡೆಯಿತು. ಈ ರೀತಿ ಕೋಶರೂಪವಾಗಿ ಪ್ರಕಾಶವಾದ ಜಗತ್ತಿಗೆ ಸರ್ವಸ್ವತಂತ್ರನಾದ ಪರಶಿವನೇ ಕಾರಣ. ಆತನ ಶಕ್ತಿವಿಕಾಸವೇ ಈ ವಿಶ್ವ.

> ನಿಜಶಕ್ತಿ ವೈಭವಭರಾತ್
> ಅಂಡಚತುಷ್ಟಯಮಿದಂ ವಿಭಾಗೇನ
> ಶಕ್ತಿರ್ಮಾಯಾಪ್ರಕೃತಿಃ
> ಪೃಥ್ವೀಚೇತಿ ಪ್ರಭಾವಿತಂ ಪ್ರಭುಣಾ ॥

(ಪರಮಾರ್ಥಸಾರ_೪)

ಪರಶಿವನು ಸರ್ವಚೈತನ್ಯಸ್ವರೂಪನಾಗಿ ಸ್ವಂತ ಇಚ್ಛೆಯಿಂದ ನಟನಂತೆ ಜಡಾಜಡ ವಸ್ತು ಭೇದದಿಂದ ಹಲವು ಬಗೆಯ ರೂಪಗಳನ್ನು ತಾಳುವನು, ಪ್ರಕಟಿಸುವನು. ಅನೇಕ ವಿಧವಾಗಿ ಜೀವಾತ್ಮರಂತೆ ತೋರಿಬರುವನು. ನಾನಾತ್ವವನ್ನು ಸ್ವೀಕರಿಸಿ ಪ್ರಪಂಚವನ್ನು ಸೃಷ್ಟಿಸಿದನು. ಆ ಪರಶಿವನೇ ಭೋಕ್ತೃಭೋಗ್ಯಲಕ್ಷಣವುಳ್ಳ ಪ್ರಮಾತೃಪ್ರಮೇಯ ದ್ವಂದ್ವವನ್ನು ಪ್ರಕಟಿಸುವನು. ಇದೆಲ್ಲವೂ ಆ ಪರಮೇಶ್ವರನ ನಿರತಿಶಯವಾದ ಸ್ವಾತಂತ್ರ್ಯ ಶಕ್ತಿಯಿಂದಲೇ ಪೂರ್ಣಸ್ವರೂಪತೆಯನ್ನು ತ್ಯಾಗಮಾಡಿ ಭೋಕ್ತೃಭೋಗ್ಯ ಸ್ವಭಾವದಿಂದ ಜೀವಜಗತ್ತುಗಳನ್ನು ಸೃಷ್ಟಿ ಮಾಡಿದನು. ಹೀಗೆ ಪ್ರಕಟವಾಗಿದ್ದರೂ ಪ್ರಮಾತೃಗಳಾದ ಜೀವರಲ್ಲಿ ಅನುಭಾವಿಯಾಗಿ ಶಿವನಾಗಿಯೇ ಉಳಿದಿರುವನು. ಇದು ಸರ್ವೇಶ್ವರನಾದ ಶಿವನ ಲೀಲೆ.

ಪರತತ್ತ್ವವು ಚೈತನ್ಯಸ್ವರೂಪ. ಈ ಮೂಲಭೂತವಾದ ಚೈತನ್ಯದಿಂದ ಪರಿಷ್ಕೃತ ವಾದ ಪಂಚಶಕ್ತಿಗಳ ಅಭಿವ್ಯಕ್ತಿಯೇ ಜಗನ್ನಿರ್ಮಾಣ. ಈ ನಿರ್ಮಾಣದಲ್ಲಿ ನಾಲ್ಕು ಭೂಮಿಕೆಗಳು. ಮೊದಲನೆಯ ಭೂಮಿಕೆಯಲ್ಲಿ ಪರಶಿವನು ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧ ವಿದ್ಯಾ ತತ್ತ್ವಗಳಲ್ಲಿ ಆವಿಷ್ಕಾರ ಹೊಂದುವನು. ಈ ಐದು ತತ್ತ್ವಗಳ ಅಭಿವ್ಯಕ್ತಿಗೆ **ಶಕ್ತ್ಯಂಡ**ವೆಂದು ಹೆಸರು. ಎರಡನೆಯ ಭೂಮಿಕೆಗೆ **ಮಾಯಾಂಡ**ವೆಂದು ಹೆಸರು. ಮಾಯೆಯು ಶಿವನ ಅಘಟನ ಘಟನಾ ಸಾಮರ್ಥ್ಯವುಳ್ಳದ್ದು. ಈ ಮೂಲಕ ಶಿವನು ತನ್ನ ಸ್ವರೂಪವನ್ನು ಮರೆಮಾಚಿಕೊಳ್ಳುತ್ತಾನೆ. ಈ ಮಾಯೆಯಿಂದ ಸಂಕುಚಿತ ವಾದ ಕಲಾ, ವಿದ್ಯಾ, ರಾಗ, ಕಾಲ, ನಿಯತಿ ಎಂಬ ಪಂಚಕಂಚುಕಗಳಿಂದ ಆಚ್ಛಾದಿತನಾದ ಪಶು (ಅಣು) ಎನ್ನಿಸಿಕೊಳ್ಳುವನು. ಈ ಪಶುವೇ ಜೀವಾತ್ಮ. ಮೂರನೆಯ ಭೂಮಿಕೆ **ಪ್ರಕೃತ್ಯಂಡ** : ಇದರಲ್ಲಿ ಪ್ರಕೃತಿಯು ಸತ್ತ್ವರಜಸ್ತಮೋಗುಣ ಗಳಿಂದ ಕೂಡಿ ಬುದ್ಧಿ ಅಹಂಕಾರ ಮನಸ್ಸು ಈ ಮೂರು ಸೇರಿರುವ ಅಂತಃಕರಣವೆನ್ನಿಸಿ ಕೊಳ್ಳುತ್ತದೆ. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ತನ್ಮಾತ್ರ ಗಳು ಈ ಪ್ರಕೃತ್ಯಂಡಕ್ಕೆ ಸೇರಿದವುಗಳು, ಐದು ತನ್ಮಾತ್ರಗಳು ಮತ್ತು ಮನಸ್ಸು ಬುದ್ಧಿ ಅಂತಃಕರಣ ಇವು ಎಂಟೂ ಸೇರಿ **ಪುರ್ಯಷ್ಟಕ** (ಸೂಕ್ಷ್ಮಶರೀರ)ವೆನ್ನಿಸಿಕೊಂಡಿದೆ. ನಾಲ್ಕನೆಯ ಭೂಮಿಕೆಗೆ **ಪೃಥಿವ್ಯಂಡ**ವೆಂದು ಹೆಸರು. ಹೀಗೆ ಶಿವನು ಮೂಲತಃ ತನ್ನನ್ನು ಆವರಣಮಾಡಿಕೊಂಡು ಅಂದರೆ ಶಕ್ತ್ಯಂಡ, ಮಾಯಾಂಡ, ಪ್ರಕೃತ್ಯಂಡ, ಪೃಥಿವ್ಯಂಡಗ ಳಿಂದ ಆಚ್ಛಾದಿತನಾಗಿ ಜೀವನಾಗುತ್ತಾನೆ. ಶಿವನ ಶಕ್ತಿಯ ಪರಿಣಾಮವೇ ಈ ಸೃಷ್ಟಿ. ಈ ಸೃಷ್ಟಿಯು ೩೬ ತತ್ತ್ವಗಳಿಂದ ಕೂಡಿದೆ. ಹೀಗಿದ್ದರೂ ಈ ವೈವಿಧ್ಯಪೂರ್ಣವಾದ ಸೃಷ್ಟಿಯು ಪರಮಾತ್ಮನಲ್ಲಿಯೇ ಇದೆ. ಆದರೂ ಅವನಿಂದ ಭಿನ್ನವಾಗಿರುವಂತೆ ತೋರುವುದು.

ಸರ್ವತಂತ್ರಸ್ವತಂತ್ರನಾದ ಶಿವನೇ ಸ್ವಸ್ವರೂಪವನ್ನು ಮರೆಸಿಕೊಂಡು ಭೋಕ್ತೃ ಭೋಗ್ಯಸ್ವಭಾವವನ್ನು ಹೊಂದಿ ನಟನಂತೆ ವೇಷಧಾರಣಮಾಡಿಕೊಂಡು ಪಶುಭಾವ ವನ್ನು ಹೊಂದಿದರೂ ಅಂತರಂಗದಲ್ಲಿ ಅನುಭಾವಿಯಾಗಿ ಚಿದಾನಂದೈಕಘನವಾಗಿ ಶಿವ ನಾಗಿಯೇ ಉಳಿಯುವನು.

ತತ್ರಾಂತರ್ವಿಶ್ವಮಿದಂ
ವಿಚಿತ್ರತನುಕರಣಭುವನ ಸಂತಾನಂ
ಭೋಕ್ತಾ ಚ ತತ್ರ ದೇಹೀ
ಶಿವ ಏವ ಗೃಹೀತ ಪಶುಭಾವಃ ॥೫॥

ಪರಶಿವನಿಗೆ ಸ್ವರೂಪವಾದ ಚಿತ್, ನಿವೃತ್ತಿ, ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳನ್ನೇ ಆತನು ಶಿವ, ಶಕ್ತಿ, ಸದಾಶಿವ, ಈಶ್ವರ, ವಿದ್ಯಾತತ್ತ್ವಗಳ ರೀತಿಯಲ್ಲಿ ಪ್ರಕಾಶಗೊಳಿಸುತ್ತಾ ಗ್ರಾಹ್ಯಗ್ರಾಹಕ ರೂಪದಲ್ಲಿ ಮತ್ತು ಕರ್ತೃ, ಕರಣ, ಕ್ರಿಯಾರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಲೀಲಾವಿಹಾರಿಯಾದ ಪರಮೇಶ್ವರನ ಅಘಟನ ಘಟನಾ ಸಾಮರ್ಥ್ಯವು ಮಾಯೆಯಿಂದ ಪಶುಭಾವವನ್ನು ಹೊಂದಿ ಆಣವಾದಿ ಮಲತ್ರಯಕ್ಕೆ ಒಳಗಾಗುತ್ತಾನೆ. ಶಿವನಿಗೆ ಈ ರೀತಿಯಾದ ಆತ್ಮಾವರಣವೆಂದರೆ ಆಶ್ಚರ್ಯ ಮತ್ತು ದುಸ್ಸಾಧ್ಯ. ಆದರೆ ಅಸಾಧ್ಯವಾದದ್ದನ್ನು ಸಾಧ್ಯವಾದದ್ದನ್ನಾಗಿ ಮಾಡುವುದು ಅವನ ಸ್ವಾತಂತ್ರ್ಯದ ವೈಶಿಷ್ಟ್ಯ.

ಪರಮಂ ಯತ್ ಸ್ವಾತಂತ್ರ್ಯಂ
ದುರ್ಘಟ ಸಂಪಾದನಂ ಮಹೇಶಸ್ಯ
ದೇವೀ ಮಾಯಾಶಕ್ತಿಃ
ಸ್ವಾತ್ಮಾವರಣಂ ಶಿವಸ್ಯೈತತ್ ॥೧೫॥
ಮಾಯಾಪರಿಗ್ರಹವಶಾತ್
ಬೋಧೋ ಮಲಿನಃ ಪುಮಾನ್ ಪಶುರ್ಭವತಿ
ಕಾಲ ಕಲಾನಿಯತಿವಶಾತ್
ರಾಗ ವಿದ್ಯಾವಶೇನ ಸಂಬದ್ಧಃ ॥೧೬॥

ಜ್ಞಾನಸ್ವರೂಪನಾದ ಶಿವನು ಹೀಗೆ ಸ್ವೇಚ್ಛೆಯಿಂದ ಸ್ವಕಲ್ಪಿತ ಮಾಯೆಗೆ ಒಳಗಾಗಿ ಅಣುತ್ತ್ವವನ್ನು ಪಡೆದೊಡನೆ ಆತನ ಜ್ಞಾನಕ್ರಿಯಾಶಕ್ತಿಗಳು ಕಾಲ, ಕಲಾ, ನಿಯತಿ, ರಾಗ, ವಿದ್ಯಾ ಮತ್ತು ನಾನಾತ್ವ ಕಲ್ಪನೆಯ ಮಾಯಾ ಎಂಬ ಷಟ್ಕಂಚುಕಗಳಿಂದ ಆವೃತ್ತನಾಗುತ್ತಾ–

ಮಾಯಾವರಣಂ ಮಲ ಇಹ
ಸೂಕ್ಷ್ಮಂ ಮಾಯಾದಿ ಕಂಚುಕಂ ಸ್ಥೂಲಂ
ಬಾಹ್ಯಂ ವಿಗ್ರಹರೂಪಂ
ಕೋಶತ್ರಯ ವೇಷ್ಟಿತೋಹ್ಯಾತ್ಮಾ ॥೨೪॥

ಇಲ್ಲಿ ಮಲವೆಂದರೆ ದೋಷವೆಂದರ್ಥ. ತನ್ನ ನಿಜಸ್ವರೂಪವನ್ನು ಮರೆಸುವುದು ಆಣವಮಲ, ಭೇದಾಭೇದ ಬುದ್ಧಿಹುಟ್ಟಿಸುವುದು ಮಾಯಾಮಲ, ಶುಭಾಶುಭಕರ್ಮಗಳಿಂದಾಗುವುದು ಕಾರ್ಮಮಲ—ಹೀಗೆ ಪರಮಾವರಣಮಲ, ಮಾಯೆ ಮೊದಲಾದ

ಸೂಕ್ಷ್ಮಾವರಣಮಲ, ದೇಹರೂಪವಾದ ಸ್ಥೂಲಾವರಣಮಲ ಈ ವಿಧವಾದ ಮೂರು ಕೋಶಗಳಿಂದ ಸುತ್ತುವರಿಯಲ್ಪಟ್ಟಿದ್ದಾನೆ.

ರೇಷ್ಮೆಹುಳುವು ತನ್ನ ಸುತ್ತಲೂ ಆವರಣವನ್ನು ನೆಯ್ದುಕೊಂಡು ತನ್ನ ತುಂತುವಿನಿಂದಾದ ಕೋಶದಿಂದ ತನ್ನನ್ನೇ ಬಂಧಿಸಿಕೊಳ್ಳುವಂತೆ ಆತ್ಮನು ದೇಹ ಪ್ರಾಣಗಳನ್ನೇ ತಾನೆಂದು ಎಣಿಸುವುದು, ಗಗನ ಪ್ರಪಂಚವನ್ನೇ ತನ್ನ ಕಾರ್ಯಕ್ಷೇತ್ರವೆಂದು ತಿಳಿಯುವುದು. ಈ ರೀತಿಯಾದ ಭಾವನೆಗಳ ಸೂತ್ರದ ಬಲೆಯಿಂದ ತನ್ನ ಸುತ್ತಲೂ ಬಲವಾದ ಕೋಶಾವರಣವನ್ನು ಕಲ್ಪಿಸಿಕೊಂಡಿದ್ದಾನೆ. ಈ ರೀತಿಯಲ್ಲಿ ತನ್ನನ್ನು ತಾನು ಮರೆಯುವ ರೀತಿಗೆ **ಅಖ್ಯಾತಿ** ಎಂದು ಹೆಸರು. ಅಖ್ಯಾತಿಯಿಂದ, ಚಿನ್ಮಾತ್ರನೆನಿಸಿ ಜ್ಞಾನಸ್ವರೂಪನಾದ ಜೀವಾತ್ಮನು ವಿಕಲ್ಪಗಳ ಸರಪಣಿಯಿಂದ ಬಂಧಿಸಲ್ಪಟ್ಟವನಾಗಿದ್ದಾನೆ.

ದೇಹಪ್ರಾಣವಿಮರ್ಶನ
ಧೀ ಜ್ಞಾನ ನಭ ಪ್ರಪಂಚಯೋಗೇನ
ಆತ್ಮಾನಾಂ ವೇಷ್ಟಯತೇ
ಚಿತ್ರಂಜಾಲೇನ ಜಾಲಕಾರ ಇವ ॥೩೨॥

ರೇಷ್ಮೆಹುಳು ತನ್ನ ಬಾಯಿಂದಲೇ ಹೊರಟ ದಾರದಿಂದ ತನ್ನ ಸುತ್ತಲೂ ಬಲವಾದ ಕೋಶಾವರಣವನ್ನು ಕಲ್ಪಿಸಿಕೊಂಡು ಹೊರಗೆ ಬರಲಾಗದಂತೆ ಒಳಗೆ ಸಿಲುಕಿರುವ ರೀತಿಯಲ್ಲಿ ಜೀವಾತ್ಮನಿದ್ದಾನೆ. ರೇಷ್ಮೆಹುಳು ಕೆಲವುಕಾಲದ ಮೇಲೆ ತಾನೇ ಕಲ್ಪಿಸಿಕೊಂಡ ಕೋಶಾವರಣದಿಂದ ತಾನೇ ಕತ್ತರಿಸಿಕೊಂಡು ಹೊರಗೆ ಬಂದುಬಿಡುತ್ತದೆ. ಪಶುಭಾವವನ್ನು ಹೊಂದಿದ ಜೀವಾತ್ಮನೂ ಕೂಡ ದೇಹವಿಮರ್ಶನ, ಪ್ರಾಣವಿಮರ್ಶನ, ಬುದ್ಧಿ ನಿಶ್ಚಯ ಮತ್ತು ಶೂನ್ಯಭಾವನೆಗಳಿಂದ ಕೂಡಿದ ನಭಃ ಪ್ರಪಂಚವನ್ನು ದಾಟಿ ಆತ್ಮನ ಸ್ವಸಂವೇದನೆಯಿಂದ ಶಿವಾನುಗ್ರಹಕ್ಕೆ ಪಾತ್ರನಾಗಿ ತನ್ನ ಆವರಣಗಳನ್ನು ಕಳಚಿಕೊಂಡು ಶಿವತ್ತ್ವವನ್ನು ಪಡೆಯುವನು.

ಪೃಥಿವಿ, ಪ್ರಕೃತಿ, ಮಾಯೆ ಇವು ಮೂರು ಜ್ಞಾನಕ್ಕೆ ವಿಷಯಗಳಾಗಿವೆ. ಆದರೆ ಜ್ಞೇಯ ಬೇರೆಯಲ್ಲ ಎಂಬ ಅದ್ವೈತ ಭಾವನೆಯು ಸ್ಥಿರವಾಗಿ ನಿಂತರೆ ಉಳಿಯುವುದು ಕೇವಲ ಸತ್ ಒಂದೇ–

ಪೃಥಿವೀ ಪ್ರಕೃತಿರ್ಮಾಯಾ
ತ್ರಿತಯಮಿದಂ ವೇದ್ಯರೂಪತಾಪತಿತಂ
ಅದ್ವೈತಭಾವನಬಲಾತ್
ಭವತಿ ಹಿ ಸನ್ಮಾತ್ರ ಪರಿಶೇಷಂ ॥೪೧॥

ಪರವೂ, ಶುದ್ಧವೂ, ಶಾಂತವೂ, ಅಭೇದಸ್ವರೂಪವೂ, ಸಮವೂ, ಸಕಲವೂ, ಅಮೃತವೂ, ಸತ್ಯವೂ ಆದ ಆ ಬ್ರಹ್ಮತತ್ತ್ವವು ಪ್ರಕಾಶರೂಪವಾದ ತನ್ನ ಶಕ್ತಿಯಲ್ಲಿ ವಿಶ್ರಾಂತವಾಗುವುದು.

ತದ್ಬ್ರಹ್ಮ ಪರಂ ಶುದ್ಧಂ
ಶಾಂತಮಭೇದಾತ್ಮಕಂ ಸಮಂ ಸಕಲಂ
ಅಮೃತಂ ಸತ್ಯಂ ಶಕ್ತೌ
ವಿಶ್ರಾಮ್ಯತಿ ಭಾಸ್ವರೂಪಾಯಾಂ ॥೪೩॥

ಮಾಯೆ ಮತ್ತು ಮಾಯೆಯಿಂದುಂಟಾದ ಕಂಚುಕಿಗಳ ಆವರಣವನ್ನು ಕಿತ್ತೊಗೆದು ತನ್ನ ಸ್ವರೂಪಸಿದ್ಧವಾದ ಶಿವತ್ತ್ವವನ್ನು ಸಾಧಿಸುವುದೇ ಸಮ್ಯಕ್‌ಯೋಗ. ಇಷ್ಟಾದರೂ ಕೊನೆಯ ಸಾಧನ ಶಿವಾನುಗ್ರಹ. ಆತ್ಮನ ನೈಜಸ್ವಭಾವದ ಸ್ವರೂಪ ಪ್ರಾಪ್ತಿಯೇ ಮುಕ್ತಿ. ಅಭಿನವಗುಪ್ತಾಚಾರ್ಯರು ಶಿವಮಾರ್ಗವನ್ನನುಸರಿಸದ ಯೋಗ ಭ್ರಷ್ಟನೂ ಕ್ರಮೇಣ ಯೋಗಮಾರ್ಗಕ್ಕೆ ಸೆಳೆಯಲ್ಪಟ್ಟು ಶಿವನನ್ನು ಸೇರುವನೆಂದು ಆಶ್ವಾಸವನ್ನಿತ್ತಿದ್ದಾರೆ. ಪರಮಾರ್ಥಮಾರ್ಗದಲ್ಲಿ 'ಅಭಿಕ್ರಮ' ನಾಶವಿಲ್ಲವೆಂದು ಹೇಳಿ 'ಪರಮಾರ್ಥ ಯಥಾತಥಾಪಿ ಪ್ರಯತನೀಯಂ' ಎಂದು ಉಪದೇಶಿಸಿರುತ್ತಾರೆ.

ಸ್ವಾತಂತ್ರ್ಯವಾದ

ಆಧ್ಯಾತ್ಮದೃಷ್ಟಿಯಿಂದ ಈ ವಿಶ್ವಚಿತ್ತವು ಸ್ವತಂತ್ರೇಚ್ಛಾರೂಢವಾಗಿದೆ. ಈ ಸ್ವತಂತ್ರೇಚ್ಛೆಯು ಈ ವಿಶ್ವವನ್ನು ತನ್ನ ಸಂಕಲ್ಪದಂತೆ ನಿರೂಪಿಸುತ್ತದೆ. ಇದು ಅಲೆಗಳಿಲ್ಲದ ನೀರಿನಲ್ಲಿ ಅಲೆಗಳನ್ನುಂಟುಮಾಡುವ ಚಲನದಂತಿದೆ. ತನಗೆ ಕಾಣದಿರುವ ಅವಯವಗಳನ್ನು ಪ್ರಚೋದಿಸುವ ಶಕ್ತಿಯಂತಿದೆ. ಇದು ವಿಶ್ವಚಿತ್ತದ ಪ್ರೇರಣೆ. ಇದು ಜಡಶಕ್ತಿಯಲ್ಲ. ಚೈತನ್ಯಪೂರ್ಣವಾದ ಶಕ್ತಿ. ಇದು ಸ್ವತಂತ್ರ. ಹೊರಗಿನ ಸಹಾಯಕ್ಕೆ ಒಳಪಟ್ಟಿರುವುದಿಲ್ಲ. ಇದು ಬದಲಾವಣೆಗಳನ್ನು ಪಡೆದಂತೆ ಕಂಡರೂ ನಿರ್ವಿಕಾರವಾಗಿದೆ. ಆದುದರಿಂದ ಇದನ್ನು 'ಮಹಾಸತ್ತಾ' ಎನ್ನುತ್ತಾರೆ. ಇದು ಕಾಲ ದೇಶಗಳಿಗೆ ಅಧೀನವಲ್ಲ. ಇದು ಅನೇಕ ರೂಪಗಳನ್ನು ಪಡೆಯುವುದರಲ್ಲಿ ಸ್ವತಂತ್ರವಾಗಿದೆ. ಅಂತರ್ಯಾ ಸ್ವಭಾವವಾಗಿದೆ.

ಪರಶಿವನು ತನ್ನ ಸ್ವತಂತ್ರೇಚ್ಛೆಯಿಂದ ತಾನೇ, ತನ್ನಿಂದಲೇ, ತನ್ನಲ್ಲಿಯೇ ಎಲ್ಲವನ್ನೂ ಹೊರಹೊಮ್ಮಿಸುತ್ತಾನೆ. ವಿಶ್ವದ ಎಲ್ಲಾ ಅಂಶಗಳೂ ಎಲ್ಲಾ ಅನುಭವಗಳೂ ಅವು ಬೇರೆ ಬೇರೆಯಾಗಿರಲಿ ಸಾಮೂಹಿಕವಾಗಿರಲಿ ಗ್ರಾಹಕವರ್ಗಕ್ಕೆ ಸೇರಿರಲಿ ಗ್ರಾಹ್ಯವರ್ಗಕ್ಕೆ ಸೇರಿರಲಿ, ಅವುಗಳ ಪರಸ್ಪರ ಸಂಬಂಧವಾದ ಎಲ್ಲಾ ಅಂಶಗಳೂ ಆ ಪರತತ್ತ್ವದ ಸ್ವತಂತ್ರೇಚ್ಛೆಯ ಅಭಿವ್ಯಕ್ತಿಗಳೇ ಆಗಿರುತ್ತವೆ.

'ಸ್ವೇಚ್ಛಯಾ ಸ್ವಭಿತ್ತೌ ವಿಶ್ವಮುನ್ಮೀಲಯತಿ'

ಇಲ್ಲಿರುವ ಮುಖ್ಯತತ್ತ್ವ ಇಚ್ಛಾಶಕ್ತಿ ನಾವು ಅದರ ಕ್ರಿಯೆ ಮತ್ತು ಉದ್ವೇಗಗಳನ್ನು ಅನುಭವಿಸುತ್ತಿರುತ್ತೇವೆ. ಇಂತಹ ಸಂದರ್ಭಗಳಲ್ಲಿ ಸ್ವಾತಂತ್ರ್ಯದ ಅಂಶವು ನಮ್ಮಲ್ಲಿದೆಯೆಂದು ಮನಗಾಣುತ್ತೇವೆ. ಶರೀರದ ಎಲ್ಲಾ ಚಲನವಲನಗಳೂ ಇಚ್ಛಾಶಕ್ತಿಯ ಸ್ಥೂಲಪರಿಣಾಮಗಳು ಯೋಗಿಯು ತನ್ನ ಇಚ್ಛಾಶಕ್ತಿಯಿಂದ ಸ್ವತಂತ್ರವಾಗಿ

ಅನೇಕ ಪದಾರ್ಥಗಳನ್ನು ತೋರಿಸಬಲ್ಲನು. ಯೋಗಿಗೆ ಗ್ರಾಹ್ಯಗ್ರಾಹಕಗಳಿಗೆ ಭೇದವು ಕಾಣುವುದಿಲ್ಲ. ಕಾರಣ ಇಷ್ಟೆ, ಆತನಿಗೆ ಗ್ರಾಹ್ಯ ಮತ್ತು ಗ್ರಾಹಕ ವ್ಯವಹಾರಗಳಲ್ಲಿ ಪರಪ್ರಮಾತ್ರಾವೇಶ (ಶಿವಾಭಿನ್ನ) ದೃಷ್ಟಿಯು ಸ್ಥಿರವಾಗಿರುತ್ತದೆ.

ಚಿದಾತ್ಮೈವಹಿ ದೇವೋಽಂತ ಸ್ಥಿತಮಿಚ್ಛಾವಶಾದ್ಬಹಿಃ
ಯೋಗೀವ ನಿರುಪಾದಾನಂ ಅರ್ಥಜಾತಂ ಪ್ರಕಾಶಯೇತ್

ಈ. ಪ್ರ. ಅಧ್ಯಾಯ ೧, ಆನ್ಹಿಕ ೫ ಕಾರಿಕಾ ೧೭

ಗ್ರಾಹ್ಯಗ್ರಾಹಕ ಸಂವಿತ್ತಿಃ ಸಾಮಾನ್ಯಾ ಸರ್ವದೇಹಿನಾಂ
ಯೋಗಿ ನಾಂತು ವಿಶೇಷೋಽಯಂ ಸಂಬಂಧೇ ಸಾವಧಾನತಾ

ವಿಜ್ಞಾನ ಭೈರವ

ಚಿದಾತ್ಮಕನಾದ ಪ್ರಮಾತೃವು ಯಾವ ಸಾಧನೆಗಳಿಲ್ಲದಿದ್ದರೂ ತನ್ನಲ್ಲಿರುವ ಅನಂತ ವಾದ ವಿಶ್ವವನ್ನು ತೋರ್ಪಡಿಸುತ್ತಾನೆ. ಇದು ಆತನ ಇಚ್ಛಾಶಕ್ತಿಯ ವಿಲಾಸ. ಯೋಗಿಗಳೂ ಸಿದ್ಧರೂ ತಮ್ಮ ಇಚ್ಛೆಯಿಂದಲೇ ಲೋಕಗಳನ್ನೇ ಸೃಷ್ಟಿಮಾಡಿದರು ಎಂಬ ಪುರಾಣ ಕಥೆಗಳಿವೆ.

ಪರಶಿವನ ಸ್ವಾತಂತ್ರ್ಯವೇ ಕಾಶ್ಮೀರಶೈವದ ಮೂಲ. ಪರಶಿವನು ಪೂರ್ಣಾನಂದ, ಪ್ರಕಾಶವಿಮರ್ಶಮಯ, ಬಹುರೂಪಿ, ಸ್ವೇಚ್ಛೆಯಿಂದ ತನ್ನನ್ನು ತಾನೇ ನೋಡಬಲ್ಲ. ಅಲ್ಲದೆ ಜಗತ್ತನ್ನು ಪೂರ್ಣದೃಷ್ಟಿಯಿಂದ ನೋಡಬಲ್ಲ. ಅವನಲ್ಲಿ ಮಹತ್ತರವಾದ ಶಕ್ತಿಯ ಲಕ್ಷಣವೆಂದರೆ 'ಸ್ವಾತಂತ್ರ್ಯಶಕ್ತಿ'. ಇದೇ ಅವನ ಪರಮ ಪ್ರಧಾನಶಕ್ತಿ. ಅವನು ಸರ್ವತಂತ್ರಸ್ವತಂತ್ರನು. ಅವನ ಸ್ವಾತಂತ್ರಶಕ್ತಿಯಿಂದಲೇ ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು ಹುಟ್ಟಿವೆ. ಆದ್ದರಿಂದ ಈ ಸೃಷ್ಟಿಯ ಮೂಲ ಶಿವ–ಶಕ್ತಿ. ತನ್ನ ಇಚ್ಛೆಯಿಂದ ಈ ಜಗತ್ತನ್ನು ಸೃಷ್ಟಿಸಿದ. ಪಾರಮಾರ್ಥಿಕ ಮತ್ತು ಲೌಕಿಕ ಈ ಎರಡು ಸ್ಥಿತಿಯಲ್ಲಿಯೂ ಅವನದೇ ಪೂರ್ಣ ಸತ್ಯತಾ. ತನ್ನನ್ನು ಎರಡು ರೂಪದಲ್ಲಿಯೂ ವ್ಯಕ್ತಪಡಿಸಿಕೊಂಡಿದ್ದಾನೆ. ಗ್ರಾಹಕ ವ್ಯಕ್ತಿಗತರೂಪವನ್ನು ಹೊಂದಿದವನೂ, ಗ್ರಾಹ್ಯ ವಸ್ತುನಿಷ್ಠಪ್ರಂಪಚಾನುಭವವನ್ನು ಉಂಟುಮಾಡುವುದಕ್ಕೆ ಸಾಧನವಾದ ವಸ್ತುವೂ ತಾನೇ—ಪರಿಮಿತವಾದ ಶಕ್ತಿಯಿಂದ ಪ್ರಪಂಚವನ್ನು ನಡೆಸುವವನೂ ತಾನೇ ಆಗಿದ್ದಾನೆ.

ಗ್ರಾಹಕವರ್ಗರೂಪಿಯಾದ ಬದ್ಧಾತ್ಮನನ್ನು ವಿಮುಕ್ತನನ್ನಾಗಿ ಮಾಡುವ ಅನುಗ್ರಹವನ್ನು ಶಕ್ತಿಪಾತ ಎನ್ನುತ್ತೇವೆ. ಈ ಶಿವಾನುಗ್ರಹ ಲೀಲೆಯಕಾರ್ಯ ಆನಂದದ ಸಾಕಾರರೂಪ ಎಂದು ಹೇಳಬಹುದು. ಪರಶಿವನ ಮಾನಸಿಕ ಕಣ್ಣಿನ ಸ್ವರೂಪರಚನೆಯೇ ಸೃಷ್ಟಿ. ತಾನು ಅವಲೋಕಿಸಿದ್ದನ್ನು ಹಿಡಿದಿಟ್ಟುಕೊಳ್ಳುವುದೇ ರಕ್ಷಣೆ. ಈ ತತ್ತ್ವಗಳನ್ನು ಪ್ರಜ್ಞೆಯೊಂದಿಗೆ ಅನುಗೊಳಿಸುವುದೇ ಅನುಗ್ರಹ. ಅನುಗ್ರಹವು ಪೂರ್ಣವಾಗಿ ಈಶನ ಇಚ್ಛೆಯನ್ನೇ ಅವಲಂಬಿಸಿರುತ್ತದೆ. ಯಾರಲ್ಲಿ ಅತಿಶಯವಾದ ಪ್ರವೃತ್ತಿ ವಿಶೇಷಗಳು ಕಂಡುಬರುತ್ತವೆಯೋ ಅವರಿಗೆ ಶಿವಾನುಗ್ರಹ ಉಂಟಾಗಿದೆ ಎನ್ನಬಹುದು.

ಆಭಾಸವಾದ

ಸ್ವಯಂಪ್ರಕಾಶವಾದ ಪರಮಶಿವನೇ ಈ ವಿಶ್ವಕ್ಕೆ ಮೂಲಕಾರಣ. ಈತನು ಚಿನ್ಮಯನಾಗಿದ್ದಾನೆ. ಅನೇಕ ಭೇದರೂಪದಿಂದಿರುವ ಈ ವಿಶ್ವವನ್ನು ತನ್ನಿಂದಲೇ ಹೊರಹೊಮ್ಮಿಸಿ ತಾನೇ ಆಧಾರಭೂತನಾಗಿದ್ದಾನೆ. ಅನಂತವಾದ ವಿಶ್ವವು ಈತನಿಂದಲೇ ಹೊರಹೊಮ್ಮಿದ್ದರೂ ಶಿವನ ಸ್ವರೂಪಕ್ಕೆ ಯಾವ ವಿಕಾರವೂ ಇಲ್ಲ, ಚ್ಯುತಿಯೂ ಇಲ್ಲ. ಪರತತ್ತ್ವದಿಂದ ಹೊರಹೊಮ್ಮಿರುವ ಬಾಹ್ಯಪ್ರಪಂಚವನ್ನು ಕುರಿತ ವಿಚಾರ ಮತ್ತು ವಿಷಯಗಳಿಗೆ ಆಭಾಸವಾದವೆನ್ನುತ್ತೇವೆ. ವಿಚಾರದ ಚರಮಸೀಮೆಯಲ್ಲಿ ಎಲ್ಲವೂ ಏಕರೂಪವನ್ನು ಪಡೆಯುತ್ತವೆ.

'ಆಭಾಸ' ಎನ್ನುವ ಪದವು 'ಭಾದೀಪ್ತೌ' ಎನ್ನುವ ಪದದಿಂದ ನಿಷ್ಪನ್ನವಾಗಿರುತ್ತದೆ. 'ಭಾ' ಎನ್ನುವ ಧಾತುವಿಗೆ ಬೆಳಗುವುದು, ಪ್ರಕಾಶಿಸುವುದು ಎಂದು ಅರ್ಥವಾಗುತ್ತದೆ. ಪದಾರ್ಥವಾಗಲೀ, ಪದಾರ್ಥಜ್ಞಾನವಾಗಲೀ ತನ್ನ ವ್ಯಕ್ತಿತ್ವದ ಪರಿಪೂರ್ಣತೆಯಿಂದಲೇ ಪ್ರಕಾಶಿಸುತ್ತದೆ. ಇದನ್ನೇ 'ಆಭಾಸ'ವೆನ್ನುವುದು. 'ಆಭಾಸ' ಎನ್ನುವುದರಲ್ಲಿ ನಾವು ಎರಡು ಅಂಶಗಳನ್ನು ಗಮನಿಸಬಹುದು. ಬಾಹ್ಯ ಪ್ರಪಂಚದಲ್ಲಿ ನಮ್ಮಲ್ಲಿರುವ ಅನುಭವವು ಬಾಹ್ಯಜ್ಞಾನಾನುಭವವಾಗಿ ಬದಲಾವಣೆ ಪಡೆಯುವುದು. ಉದಾಹರಣೆಗೆ, ಯಾವ ಪದಾರ್ಥವು ಬೇಕೋ ಆ ಪದಾರ್ಥದ ಹೆಸರನ್ನು ಹೇಳಿ ತರಿಸುತ್ತೇವೆ. ಈ ಸ್ಥಿತಿಯಲ್ಲಿ ಒಳಗಿದ್ದ ಜ್ಞಾನವು ಬಾಹ್ಯ ವಿಷಯಜ್ಞಾನವಾಗಿ ಪರಿಣಮಿಸಿತು. ವಿಶ್ವವು ಇಂತಹ ಬಾಹ್ಯ ಮತ್ತು ಆಭ್ಯಂತರಗಳಾಗಿರುವ ಅನೇಕ ಆಭಾಸಗಳಿಂದ ಕೂಡಿದ್ದಾಗಿದೆ. ಈ ಆಭಾಸಗಳು ಶಿವನ ಸ್ವರೂಪಕ್ಕೆ ಚ್ಯುತಿ ಇಲ್ಲದಿರುವಂತೆ ಒಂದನ್ನೊಂದು ಬೆರೆಯದೆ ಇರುತ್ತವೆ.

ಆಭಾಸವಾದದ ತತ್ತ್ವದಂತೆ ಗ್ರಾಹ್ಯವಾಗಲಿ ಗ್ರಾಹಕವಾಗಲಿ ಅದು ಆ ಪರತತ್ತ್ವದ ಸಂಕುಚಿತವಾದ ಅಭಿವ್ಯಕ್ತಿಯೇ ಆಗಿರುತ್ತದೆ. ಆ ಪರತತ್ತ್ವದ ಆಶಯ ಅಥವಾ ಆಧಾರದಿಂದ ಅನೇಕತ್ವಗಳು ಹೊರಹೊಮ್ಮಿವೆಯೆಂದು ತಿಳಿಯುವುದೇ ಅಭೇದಜ್ಞಾನ. ಈ ಆಭಾಸದ ವಿಷಯವನ್ನು ಪದಾರ್ಥವಿಷಯಿಕಜ್ಞಾನದಿಂದಲ್ಲದೆ ನಮ್ಮ ಅನುಭವದಿಂದಲೂ ತಿಳಿಯಬಹುದು. ನಮಗೆ ಒಂದು ಪದಾರ್ಥದ ತಿಳಿವಳಿಕೆಯುಂಟಾದ ಅನಂತರ ಮತ್ತೊಂದು ಪದಾರ್ಥದ ತಿಳಿವಳಿಕೆಯುಂಟಾಗುತ್ತದೆ. ನಮ್ಮ ಜೀವನದ ಅನುಭವದಲ್ಲಿ ಎಷ್ಟೋ ಪದಾರ್ಥಗಳ ತಿಳಿವಳಿಕೆಗಳು ನಮ್ಮಲ್ಲಡಗಿರುತ್ತವೆ. ನಾನು ನೋಡಿದೆ, ನಾನು ಕೇಳಿದೆ, ನಾನು ತಿಳಿದಿದ್ದೇನೆ–ಇವೇ ಮುಂತಾದ ವ್ಯವಹಾರಗಳಲ್ಲಿ 'ನಾನು' ಎಂಬ ತತ್ತ್ವವು ಎಡೆಬಿಡದೆ ಇರುತ್ತದೆ. ಇಲ್ಲಿ 'ನಾನು' ಎಂಬ ತತ್ತ್ವದ ಆಧಾರದ ಮೇಲೆ ಈ ತಿಳಿವಳಿಕೆಗಳು ಪುಂಖಾನುಪುಂಖವಾಗಿ ಬಂದು ಹೋಗುತ್ತಿರುತ್ತವೆ. ಹೀಗೆ ಬಂದು ಹೋಗುತ್ತಿರುವ ತಿಳಿವಳಿಕೆಗಳೆಲ್ಲಾ ಆಭಾಸಗಳು ಇಲ್ಲಿಯೂ ಕೂಡ ಎಷ್ಟು ತಿಳಿವಳಿಕೆಗಳುಂಟಾದರೂ 'ನಾನು' ಎಂಬ ತತ್ತ್ವಕ್ಕೆ ವಿಕಾರವೂ ಇಲ್ಲ, ಚ್ಯುತಿಯೂ ಇಲ್ಲ.

ಈ ಆಭಾಸವಾದದಲ್ಲಿ ಇನ್ನೊಂದು ಚಮತ್ಕಾರವನ್ನು ನಾವು ಗಮನಿಸಬಹುದು. ಒಂದೇ ಪದಾರ್ಥಜ್ಞಾನದಲ್ಲಿ ಅನೇಕ ಆಭಾಸಗಳು ಸೇರಿರಬಹುದು. ಒಂದೊಂದು ವೇಳೆ ಅನೇಕ ಅಂಶಗಳಿಂದೊಡಗೂಡಿದೆ ಎಂದು ಒಂದು ಪದಾರ್ಥವನ್ನು ತಿಳಿಯುವುದುಂಟು. ಬೇರೆ ದೃಷ್ಟಿಯಿಂದ ಅದರಲ್ಲಡಗಿರುವ ಬೇರೆ ಬೇರೆ ಅಂಶಗಳನ್ನು ಗಮನಿಸುವುದೂ ಉಂಟು. ಆಭಾಸವಾದಿಯ ಮತದಂತೆ ಪ್ರತಿಯೊಂದು ವಿಷಯಜ್ಞಾನವೂ ಪರಿಪೂರ್ಣವಾಗಿದೆ. ಗ್ರಾಹಕನ ವಿಮರ್ಶಾಶಕ್ತಿ, ಭಾವ ಮತ್ತು ಅಸ್ತಿತ್ವಗಳಿಗೆ ಅನುಸಾರವಾಗಿ ಪದಾರ್ಥದ ಯೋಗ್ಯತೆ ಅಥವಾ ಬೆಲೆಯು ವ್ಯತ್ಯಾಸವನ್ನು ಹೊಂದುತ್ತದೆ. ನಾವು ಒಂದು 'ಪುಸ್ತಕ'ವನ್ನು ನೋಡುತ್ತೇವೆಂದು ಇಟ್ಟುಕೊಳ್ಳೋಣ. ಬೇರೆ ಬೇರೆ ದೃಷ್ಟಿಯಿಂದ ನಾವು ಆ 'ಪುಸ್ತಕ'ವನ್ನು ವಿಮರ್ಶಿಸಬಹುದು ಅದರಲ್ಲಿ ಹೆಚ್ಚು ವಿಚಾರವಿಲ್ಲದಿದ್ದರೆ 'ಪುಸ್ತಕ' ಎಂಬ ತಿಳಿವಳಿಕೆ ಮಾತ್ರ ಇರುತ್ತದೆ. ಇದು ವಿಶಿಷ್ಟವಾದ ಒಂದು ಆಭಾಸ. 'ಪುಸ್ತಕ'ದಲ್ಲಿರುವ ವಿಷಯಗಳು, ಭಾಷೆ, ಲಿಪಿ, ಅದನ್ನು ಓದುವುದರಿಂದಾಗುವ ಪ್ರಯೋಜನ ಮುಂತಾದ ಅನೇಕ ಅಂಶಗಳನ್ನು ಗಮನಿಸುತ್ತೇವೆ. ಇವೆಲ್ಲಾ ಬೇರೆ ಬೇರೆ ಆಭಾಸಗಳು. 'ಪುಸ್ತಕ' ಎಂಬ ಒಂದು ದೃಷ್ಟಿಯಿಂದ ಅಭಿನ್ನವಾಗಿಯೂ, ವಿಚಾರದೃಷ್ಟಿಯಿಂದ ಬೇರೆಬೇರೆಯಾಗಿಯೂ ನೋಡುತ್ತೇವೆ ಅಥವಾ ತಿಳಿಯುತ್ತೇವೆ. ಇದರಿಂದ ಪ್ರತಿಯೊಂದು ಪದಾರ್ಥವೂ ಭಿನ್ನಾಭಿನ್ನವಾಗಿ ತೋರುತ್ತದೆ. ಪದಾರ್ಥಗಳಲ್ಲಿ ಎಷ್ಟು ವ್ಯತ್ಯಾಸವಿದ್ದರೂ ಒಂದಕ್ಕೊಂದಕ್ಕೆ ವಿರುದ್ಧವಾಗಿರುವ ಧರ್ಮಗಳಿಂದ ಕೂಡಿದ್ದರೂ ಆ ಪದಾರ್ಥದ ತಿಳಿವಳಿಕೆಗಳು ನಮ್ಮಲ್ಲಿ ಒಂದನ್ನೊಂದು ಬೆರೆಯದೆ ಅಡಗಿರುತ್ತವೆ. ಆದ್ದರಿಂದ ಬಾಹ್ಯಪದಾರ್ಥಗಳೇ ಆಗಲಿ, ಪದಾರ್ಥಗಳಿಂದುಂಟಾದ ತಿಳಿವಳಿಕೆಗಳೇ ಆಗಲಿ, ಲೌಕಿಕವಿಷಯಜ್ಞಾನಗಳಾಗಲಿ, ಅತೀಂದ್ರಿಯ ವಿಷಯಜ್ಞಾನಗಳಾಗಲಿ ಎಲ್ಲವೂ ಆಭಾಸಗಳೇ ಆಗಿರುತ್ತವೆ. ಈ ಆಭಾಸಗಳ ಅವಾಂತರಗಳೆಷ್ಟಿದ್ದರೂ 'ನಾನು' ಎಂಬ ತತ್ತ್ವಕ್ಕೆ ವಿಕಾರವಿಲ್ಲ, ಉಬ್ಬರವಿಳಿತವಿಲ್ಲ. ಈ ರೀತಿಯಾಗಿ ಶಿವನು ಈ ವಿಶ್ವವನ್ನು ನಾನಾರೂಪವಾಗಿ ಹೊರಹೊಮ್ಮಿಸಿದ್ದರೂ ಆತನ ಸ್ವರೂಪಕ್ಕೆ ವಿಕಾರವೂ ಇಲ್ಲ, ಚ್ಯುತಿಯೂ ಇಲ್ಲ. ಯಾವಾಗಲೂ ಪರಿಪೂರ್ಣನಾಗಿಯೇ ಇರುತ್ತಾನೆ. ವಿಶ್ವವೆಲ್ಲಾ ಶಿವನಿಗೆ ಆಭಾಸಗಳು. ನಮಗೆ ಬರುವ ತಿಳಿವಳಿಕೆಗಳೆಲ್ಲಾ ನಮಗೆ ಆಭಾಸಗಳು.

ಶೈವಾಗಮಗಳಲ್ಲಿ ಪ್ರತಿಪಾದಿತವಾದ ೩೬ ತತ್ತ್ವಗಳನ್ನು ಪರತತ್ತ್ವದ ಶಕ್ತಿಸ್ಫುರಣರೂಪವಾದ ಆಭಾಸವೆಂದು ಹೇಳುವುದು ಈ ದರ್ಶನದ ವೈಶಿಷ್ಟ್ಯ. ಆಧ್ಯಾತ್ಮದೃಷ್ಟಿಯಿಂದ ಪರತತ್ತ್ವ ವಿಷಯವನ್ನು ವಿಚಾರಮಾಡುವುದನ್ನು 'ಸ್ವಾತಂತ್ರ್ಯ'ವಾದವೆಂದು ಕರೆಯುವ ಹಾಗೆ ಪರತತ್ತ್ವದಿಂದ ಹೊರಹೊಮ್ಮಿರುವ ಬಾಹ್ಯಪ್ರಪಂಚವನ್ನು ಕುರಿತ ವಿಚಾರ ಮತ್ತು ವಿಷಯಗಳಿಗೆ 'ಆಭಾಸವಾದ'ವೆನ್ನುತ್ತೇವೆ. ಪರತತ್ತ್ವದಿಂದ ಹೊರಹೊಮ್ಮಿರುವ ಎಲ್ಲಾ ವಿಷಯಗಳೂ ದೃಶ್ಯಗಳೂ ಒಂದು ಬಗೆಯಾದ ಸಂಕೋಚಕ್ಕೆ ಒಳಪಟ್ಟಿರುತ್ತವೆ. ಇವುಗಳಲ್ಲಿ ಕೆಲವು ಬಾಹ್ಯೇಂದ್ರಿಯಗಳಿಗೆ ಗೋಚರಿಸುತ್ತವೆ. ಕೆಲವು ಮನೋಭಾವಗಳ ರೂಪದಲ್ಲಿರುತ್ತವೆ. ಯಾವ ರೂಪದಲ್ಲಿರಲಿ, ಗ್ರಾಹ್ಯವಾಗಿರಲಿ,

ಜ್ಞಾನಕ್ಕೆ ಸಾಧನವಾಗಿರಲಿ, ಜ್ಞಾನವಾಗಿರಲಿ–ಅಂದರೆ ಅಸ್ತಿತ್ವವನ್ನು ಹೊಂದಿರುವುದೆಲ್ಲಾ ಆಭಾಸವೇ. ಇದು, ಇಂತಹುದು ಎಂದು ನಾವು ಒಂದು ಪದಾರ್ಥವನ್ನು ವರ್ಣಿಸುತ್ತೇವೆ. ‘ ಇದು ’ ಎನ್ನುವುದು ಸ್ವರೂಪವನ್ನು ತಿಳಿಯಪಡಿಸುವುದು. ‘ ಇಂತಹುದು ’ ಎನ್ನುವುದು ಅದರಲ್ಲಿರುವ ಧರ್ಮಗಳನ್ನು ಸೂಚಿಸುತ್ತದೆ. ಇವೆಲ್ಲವೂ ಮಹಾಚಿತ್‌ಶಕ್ತಿಯ ಸಾಮರ್ಥ್ಯದಿಂದ ಪ್ರಕಾಶಿಸುತ್ತವೆ. ಹೀಗೆ ಪ್ರಕಾಶಿಸುತ್ತಿರುವವುಗಳೆಲ್ಲಾ ಆಭಾಸಗಳೇ. ಇಲ್ಲಿ ಪದಾರ್ಥದ ತಿಳಿವಳಿಕೆಗಳು ಬೇರೆಬೇರೆಯಾಗಿ ಗ್ರಾಹ್ಯದೃಷ್ಟಿಯಿಂದ ತೋರುತ್ತವೆ. ಆದರೂ ಆಭಾಸಸ್ಥಿತಿ ಮತ್ತು ಆಶಯ ಏಕರೂಪವಾಗಿರುವುದರಿಂದ ಅಭಿನ್ನವಾಗಿರುತ್ತವೆ. ಪ್ರಕಾಶ್ಯವಾದ ಪದಾರ್ಥ ಬೇರೆಯಾಗಿದ್ದರೂ ಪ್ರಕಾಶ ಮಾತ್ರ ಅಭಿನ್ನವಾಗಿರುತ್ತದೆ. ವಿಚಾರದ ಚರಮಸೀಮೆಯಲ್ಲಿ ಏಕರೂಪವನ್ನು ಪಡೆಯುತ್ತವೆ. ಬಗೆಬಗೆಯ ಬಣ್ಣಗಳಿಂದ ಕಂಗೊಳಿಸುವ ನವಿಲು ಮೂಲರೂಪದಲ್ಲಿ ಒಂದೇ ಆಗಿತ್ತು. ಈ ದೃಷ್ಟಾಂತವನ್ನು ‘ ಮಯೂರಾಂಡರಸನ್ಯಾಯ ’ ಎಂದು ಹೇಳುತ್ತೇವೆ.

ಪರತತ್ತ್ವದಿಂದ ಹೊರಹೊಮ್ಮಿರುವ ಎಲ್ಲಾ ವಿಷಯಗಳೂ, ದೃಶ್ಯಗಳೂ ಒಂದು ಬಗೆಯಾದ ಸಂಕೋಚಕ್ಕೆ ಒಳಪಟ್ಟಿರುತ್ತವೆ. ಕೆಲವು ಬಾಹ್ಯೇಂದ್ರಿಯಗಳಿಗೆ ಗೋಚರಿಸುತ್ತವೆ. ಕೆಲವು ವೇಳೆ ಅಭಿನ್ನವಾದ ಭೇದಾವಸ್ಥೆಯಲ್ಲಿ ಮುಳುಗುತ್ತವೆ. ಇವುಗಳಲ್ಲದೆ ನಿದ್ರೆ, ಮೂರ್ಛೆ ಮೊದಲಾದ ಅವಸ್ಥೆಗಳಿವೆ. ಇವುಗಳನ್ನು ತಿಳಿಯುವ ತಿಳಿವಳಿಕೆಯಾಗಲಿ ಅಥವಾ ಕೇವಲ ತಿಳಿವಳಿಕೆಯಾಗಲಿ ಎಲ್ಲವೂ ಆಭಾಸಗಳೇ ಆಗಿವೆ. ಗ್ರಾಹ್ಯವಾಗಲಿ, ಗ್ರಾಹಕವಾಗಲಿ—ಅದು ಪರತತ್ತ್ವದ ಸಂಕುಚಿತವಾದ ಅಭಿವ್ಯಕ್ತಿ. ಈ ಎರಡೂ ಭೇದದಲ್ಲಿ ಅಭೇದವನ್ನುಳ್ಳದ್ದಾಗಿವೆ. ಅನೇಕತ್ವವಿಲ್ಲದೆ ಏಕತ್ವವಿಲ್ಲ. ಒಂದೇ ಆಧಾರದಿಂದ ಈ ಅನೇಕತ್ವಗಳು ಹೊರಹೊಮ್ಮಿವೆಯೆಂಬ ತಿಳಿಯುವಿಕೆಯೇ ಅಭೇದಜ್ಞಾನ.

ಗ್ರಾಹಕಸ್ಥಿತಿಯೂ ಕೂಡ ಹೀಗೆಯೇ ವಿಭಿನ್ನವಾಗಿದೆ. ಗ್ರಾಹಕನು ಕಾಲಕ್ಕೆ ಅಧೀನನಾಗಿದ್ದಾನೆ. ಪ್ರಯೋಜನ, ಪ್ರವೃತ್ತಿ, ತಿಳಿವಳಿಕೆ, ಶರೀರ, ಪ್ರಾಣಶಕ್ತಿ, ಇಂದ್ರಿಯಗಳು ಮೊದಲಾದುವುಗಳಿಂದ ಸಂಕುಚಿತನಾಗಿದ್ದರೂ ಇವು ಯಾವುವೂ ಅವನ ಶಾಶ್ವತವಾದ ಅಂಶಗಳಲ್ಲ. ಇವುಗಳ ಶಕ್ತಿಗಳು ಪ್ರತಿಯೊಂದು ಅನುಭವಗಳಲ್ಲಿಯೂ ಬೇರೆ ಬೇರೆಯಾಗಿರುತ್ತವೆ. ಈತನ ಆಂತರ್ಯಸಂಕೋಚವನ್ನು ‘ ಆಣವಮಲ ’ ಎನ್ನುತ್ತೇವೆ. ಹೀಗೆ ಅನೇಕ ಉಪಕರಣಗಳ ಸಮಾವೇಶದಲ್ಲಿ ಶಾಶ್ವತವಾಗಿ ಮುಂದುವರೆಯುವುದು. ಆತ್ಮತತ್ತ್ವ ಒಂದೇ ಆಗಿರುತ್ತದೆ. ವಿಷಯಜ್ಞಾನದ ಕ್ರಮ ಎರಡು ಬಗೆ ಆಗಿರುತ್ತದೆ—ಮುಖ್ಯ, ಗೌಣ—ಮೊದಲನೆಯದು ಪದಾರ್ಥದ ವೃತ್ತಿಯು ಮನಸ್ಸಿನಲ್ಲಿ ಚಲನವನ್ನುಂಟು ಮಾಡುತ್ತದೆ. ಅದೇ ಆಂತರ್ಯಭಾವನೆ (ಆಂತರಶಬ್ದನ). ಈ ಆಭಾಸಕ್ರಮ ಮೂಲ ರೂಪದಲ್ಲಿ ಕಾಲದೇಶಗಳಿಂದ ಸಂಕುಚಿತವಾಗಿಲ್ಲ. ಎರಡನೆಯ ವಾದದ ಕ್ರಮದಲ್ಲಿ ವಿಭಿನ್ನವಾದ ಅಂಶಗಳನ್ನು ಒಟ್ಟುಗೂಡಿಸುವುದೇ ಆಗಿರುತ್ತದೆ. ಇದರಿಂದ ಪದಾರ್ಥದ ಸಮಷ್ಟಿ ರೂಪವು ಏರ್ಪಡುತ್ತದೆ.

ಈ ರೀತಿಯಾಗಿ ಶಿವನು ಈ ವಿಶ್ವವನ್ನು ನಾನಾರೂಪವಾಗಿ ಹೊರಹೊಮ್ಮಿಸಿದ್ದರೂ ಆತನ ಸ್ವರೂಪಕ್ಕೆ ವಿಕಾರವೂ ಇಲ್ಲ, ಚ್ಯುತಿಯೂ ಇಲ್ಲ. ಪರಿಪೂರ್ಣನಾಗಿಯೇ ಇರುತ್ತಾನೆ. ವೈವಿಧ್ಯಪೂರ್ಣವಾದ ಪ್ರಪಂಚ ಪರಮಾತ್ಮನಲ್ಲಿಯೇ ಇದೆ. ಆದರೆ ಅದು ಅವನಿಗಿಂತ ಭಿನ್ನವಾಗಿಯೂ ತೋರುವುದು. ಹೀಗಿದ್ದರೂ ಈ ದರ್ಶನಕಾರರು ಈ ಆಭಾಸಗಳನ್ನು ಮಿಥ್ಯೆಯೆಂದು ಹೇಳುವುದಿಲ್ಲ. ಈಶ್ವರ ಮತ್ತು ಪ್ರಪಂಚಕ್ಕೆ ಭೇದಾಭೇದ ಸಂಬಂಧವನ್ನು ಸಮರ್ಥನೆಮಾಡಿ ಪರಶಿವನ ಸಾರ್ವಭೌಮತ್ವವನ್ನು ಪ್ರಪಂಚದ ಸತ್ಯತ್ವವನ್ನು ಆಭಾಸವಾದದ ವಿಶಿಷ್ಟ ದೃಷ್ಟಿಯಿಂದ ವಿವರಿಸಿದ್ದಾರೆ. ಶೈವಾಗಮಗಳಲ್ಲಿ ಪ್ರತಿಪಾದಿತವಾದ ೩೬ ತತ್ತ್ವಗಳು ಪರತತ್ತ್ವ ಶಕ್ತಿಸ್ಫುರಣರೂಪವಾದ ಆಭಾಸಗಳೇ ಆಗಿವೆ.

ನಿರ್ಮಲವಾದ ಕನ್ನಡಿಯಲ್ಲಿ ಗ್ರಾಮ ವೃಕ್ಷ ಮೊದಲಾದವುಗಳು ಪ್ರತಿಬಿಂಬಿತವಾಗಿ ಪರಸ್ಪರ ಬೇರೆಯಾಗಿ ಕಂಡುಬರುವಂತೆ ಸಂವದ್ರೂಪವಾದ ಪರಮೇಶ್ವರನಲ್ಲಿ ಪ್ರತಿಬಿಂಬಿತವಾದ ಈ ವಿಶ್ವವು ಅಭಿನ್ನವಾಗಿದ್ದರೂ ಘಟಪಟಾದಿರೂಪಗಳಿಂದ ಬೇರೆಯಾಗಿ ಕಂಡು ಬರುತ್ತವೆ. ಇದರಿಂದ ದ್ವೈತ ಭಾವನೆಯು ಕಲ್ಪಿತವಾಗುತ್ತದೆ. ಅದ್ವೈತ ಭಾವನೆಯು ವಾಸ್ತವಿಕವಾಗಿರುತ್ತದೆ. ಈ ಆಭಾಸ ಅಥವಾ ಪ್ರತಿಬಿಂಬತತ್ತ್ವವನ್ನಂಗೀಕರಿಸಿರುವುದರಿಂದ ತ್ರಿಕದರ್ಶನವನ್ನು ದಾರ್ಶನಿಕ ದೃಷ್ಟಿಯಿಂದ 'ಆಭಾಸವಾದ' ಎಂದು ಕರೆಯುತ್ತಾರೆ.

೧೯ ಬಿಂಬ ಪ್ರತಿಬಿಂಬ ನ್ಯಾಯ

ಆಧ್ಯಾತ್ಮ ವಿಷಯಗಳನ್ನು ತಿಳಿಯಬೇಕಾಗಿದ್ದರೆ ನಾವು ತಿಳಿದ ವಿಷಯಗಳಿಂದ ತಿಳಿಯದೆ ಇರುವ ವಿಷಯಗಳನ್ನು ಊಹಿಸಿ ತಿಳಿಯಬೇಕಾಗುತ್ತದೆ. ತಿಳಿದ ವಿಷಯಗಳು ಕೆಲವು ಸಾಮಾನ್ಯ ಗುಣಧರ್ಮಗಳನ್ನು ಹೊಂದಿರುತ್ತಾರೆ. ತಿಳಿದ ವಿಷಯಗಳಿಂದ ನಾವು ಊಹಿಸಿ ತಿಳಿಯದೆ ಇರುವ ವಿಷಯಗಳನ್ನು ಆಲೋಚಿಸಿ ತಿಳಿಯಬಹುದು. ನಮಗೆ ಅನೇಕ ವಿಷಯಗಳು ಗೊತ್ತಿರಬಹುದು. ವಿಷಯಗಳ ಯೋಜನೆಯಲ್ಲಿ ದೀರ್ಘವಾದ ಆಲೋಚನೆ ಮಾಡುತ್ತಾ ನಾವು ಸಂಕಲ್ಪಿಸಿರುವ ವಿಷಯದ ಸ್ಥಾನಮಾನಗಳೇನೆಂಬುದನ್ನು ನಾವು ಊಹಿಸಬಹುದು. ನಮ್ಮ ಬುದ್ಧಿಶಕ್ತಿಯಿಂದ ಸ್ವಲ್ಪಮಟ್ಟಿಗೆ ತಿಳಿದರೂ ನಾವು ಅದನ್ನು ಮೆಚ್ಚದೆ ಇರಬಹುದು. ಒಂದು ವಸ್ತುವಿನ ಮೆಚ್ಚಿಗೆಯಾಗಬೇಕಾಗಿದ್ದರೆ ಬರೀ ಅದರ ತಿಳಿವಳಿಕೆ ಸಾಲದು ಮೆಚ್ಚಿಗೆಯು ಸ್ವಾಭಾವಿಕವಾಗಿ ಆಗತಕ್ಕದ್ದು. ನಾವು ಒಂದು ಸುಂದರವಾದಂಥ ಕಲಾವಸ್ತುವನ್ನು ಅಥವಾ ಚಿತ್ರವನ್ನು ನೋಡಬಹುದು. ಅದರ ಕಲಾಕೌಶಲ್ಯದ ಜ್ಞಾನವಿಲ್ಲದೆಯೇ 'ಎಷ್ಟು ಸುಂದರವಾಗಿದೆ' ಎಂದು ಮೆಚ್ಚಬಹುದು. ಇದೇ ರೀತಿಯಲ್ಲಿ ನಾವು ವಿಶ್ವದ ಅಸ್ತಿತ್ವವನ್ನು ಮೆಚ್ಚಬಹುದು. ಆಶ್ಚರ್ಯಪಡಬಹುದು. ಒಬ್ಬ ಮನುಷ್ಯನು ತಾನು ಹೆಚ್ಚು ವಿದ್ಯಾವಂತನಲ್ಲದಿದ್ದರೂ ತನ್ನ ಭವ್ಯದೃಷ್ಟಿಯನ್ನು ಬೆಳೆಸಿಕೊಂಡು ವಿಷಯಗಳನ್ನು ಅದರ ನಿಜಸ್ಥಿತಿಯನ್ನು ಊಹಿಸಬಹುದು. ಈ ರೀತಿಯಾದ ಭವ್ಯದೃಷ್ಟಿಯನ್ನು ಆಧ್ಯಾತ್ಮ ವಿಚಾರಗಳಲ್ಲಿ ಬೆಳೆಸಿಕೊಂಡು ರೂಪಿಸಿಕೊಳ್ಳ

ಬಹುದು. ಈ ಸಂದರ್ಭದಲ್ಲಿ ಬಿಂಬ ಪ್ರತಿಬಿಂಬ ನ್ಯಾಯವು ಸಮಗ್ರದೃಷ್ಟಿಯಿಂದ ತಿಳಿಯುವುದಕ್ಕೆ ಸಹಕಾರಿಯಾಗಿರುತ್ತದೆ.

ನಿರ್ಮಲೆ ಮುಕುರೆ ಯದ್ವದ್ಭಾಂತಿ ಭೂಮಿಜಲಾದಯಃ ।
ಅಮಿಶ್ರಾಸ್ತದ್ವದೇಕಸ್ಮಿಂ ಚಿನ್ನಾಥೆ ವಿಶ್ವವೃತ್ತಯಃ ॥

(ತಂತ್ರಾಲೋಕ, ಆಹ್ನಿಕ ೩ ಶ್ಲೋಕ ೪)

ನಿರ್ಮಲವಾದ ಕನ್ನಡಿಯಲ್ಲಿ ಯಾವ ರೀತಿಯಾಗಿ ಭೂಮಿ ನೀರು ಮೊದಲಾದವುಗಳು ಒಂದಕ್ಕೊಂದು ಸೇರದೆ ಅಸಂಕೀರ್ಣವಾಗಿ ಪ್ರಕಾಶಿಸುತ್ತವೆಯೋ ಅದೇ ರೀತಿಯಾಗಿ ಒಬ್ಬನೇ ಆದ ಚಿನ್ಮೂರ್ತಿಯಾದ ಪರಮೇಶ್ವರನಲ್ಲಿ ಈ ವಿಶ್ವವೆಲ್ಲಾ ಪ್ರತಿಫಲಿಸುತ್ತದೆ. ಅಂದರೆ ನಿರ್ಮಲವಾದ ಚಿತ್ತಿನಲ್ಲಿ ವಿಶ್ವದ ಎಲ್ಲಾ ಪ್ರಕಾರಗಳೂ ಅಸಂಕೀರ್ಣವಾಗಿ ಪ್ರತಿಫಲಿಸುತ್ತವೆ.

ಪ್ರತಿಬಿಂಬವು ಕನ್ನಡಿಯಲ್ಲಿ ಅಥವಾ ಸ್ವಚ್ಛವಾದ ಪದಾರ್ಥಗಳಲ್ಲಿ ತೋರುತ್ತದೆ. ಪ್ರತಿಬಿಂಬವಾಗಿ ತೋರುವ ಪದಾರ್ಥ ಬೇರೆ, ಕನ್ನಡಿ ಬೇರೆ. ಹೀಗಿದ್ದರೂ ಪ್ರತಿಬಿಂಬವು ಕನ್ನಡಿಗಿಂತ ಬೇರೆಯಾಗಿ ತೋರುವುದಿಲ್ಲ. ಕನ್ನಡಿಯ ಪರಿಣಾಮ ಎಷ್ಟಿರುತ್ತದೆಯೋ ಅಷ್ಟೇ ಇರುತ್ತದೆ. ಅಂದರೆ ಚಿಕ್ಕ ಕನ್ನಡಿಯಲ್ಲಿ ದೊಡ್ಡಪದಾರ್ಥವು ಪ್ರತಿಫಲಿಸಿದರೂ ಕನ್ನಡಿಯು ವಿಕಾರವನ್ನು ಪಡೆಯುವುದಿಲ್ಲ. ಇದಲ್ಲದೆ ಒಂದು ಕನ್ನಡಿಯಲ್ಲಿ ಅನೇಕ ಪದಾರ್ಥಗಳು ಪ್ರತಿಫಲಿಸಿದರೂ ಆ ಪದಾರ್ಥಗಳಲ್ಲಿ ಸಾಂಕರ್ಯವೇರ್ಪಡುವುದಿಲ್ಲ. ಉದಾಹರಣೆಗೆ ಬೆಂಕಿ ಮತ್ತು ಹತ್ತಿ ಇವೆರಡು ಒಂದೇಕಡೆ ಒಂದೇಕಾಲದಲ್ಲಿ ಕನ್ನಡಿಯಲ್ಲಿ ಪ್ರತಿಫಲಿಸಿದರೂ ಹತ್ತಿಗೆ ಬೆಂಕಿಯು ಹತ್ತಿಕೊಳ್ಳುವುದಿಲ್ಲ. ಪದಾರ್ಥದ ರೂಪು ಮಾತ್ರ ಪ್ರತಿಫಲಿಸುವುದರಿಂದ ಅವುಗಳು ಒಂದಕ್ಕೊಂದು ಸೇರುವುದಿಲ್ಲ. ಈ ಪ್ರತಿಫಲನಕ್ಕೆ ಆ ಪದಾರ್ಥದಲ್ಲಿರುವ ನೈರ್ಮಲ್ಯವೇ ಕಾರಣ. ನೈರ್ಮಲ್ಯದ ಮಟ್ಟವು ಹೆಚ್ಚುತ್ತಾ ಹೋದಹಾಗೆ ಪ್ರತಿಫಲನವು ಸ್ವಚ್ಛವಾಗುತ್ತಾ ಹೋಗುತ್ತದೆ.

ಪ್ರತಿಫಲನಕ್ಕೆ ಮತ್ತೊಂದು ಕಾರಣವಿದೆ. ಯಾವ ಪದಾರ್ಥವು ಎಲ್ಲಿ ಪ್ರತಿಫಲಿಸಬೇಕೋ ಅಲ್ಲಿ ಆ ಪದಾರ್ಥದ ಸಜಾತೀಯವಾದ ಪದಾರ್ಥತತ್ತ್ವವಿರಬೇಕು. ರೂಪವು ಪ್ರತಿಫಲಿಸಬೇಕಾಗಿದ್ದರೆ ರೂಪವು ಆ ಪ್ರತಿಫಲಿಸಲ್ಪಡತಕ್ಕ ಪದಾರ್ಥದಲ್ಲಿರಬೇಕು. ರೂಪವಿಲ್ಲದ ಆಕಾಶದಲ್ಲಿ ರೂಪವುಳ್ಳ ಆಕಾರಗಳು ಪ್ರತಿಫಲಿಸಲಾರವು. ಅಂದರೆ ರೂಪಿಸಬೇಕಾದರೆ ರೂಪವುಳ್ಳ ದ್ರವ್ಯಬೇಕು. ಕನ್ನಡಿಯು ತನ್ನ ಮುಂದಿಟ್ಟಿರುವ ಪದಾರ್ಥದ ರೂಪವನ್ನು ಪ್ರತಿಬಿಂಬಿಸುತ್ತದೆ. ಪ್ರತಿಬಿಂಬದ ರೂಪವು ಪ್ರತಿಫಲಿಸುತ್ತಿರುವ ಕನ್ನಡಿಯ ಪ್ರಕಾಶ ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತದೆ. ಕನ್ನಡಿಯ ಮುಂದೆ ನಿಲ್ಲಿಸಿರುವ ಆನೆಯ ಬಿಂಬವು ಸಣ್ಣ ಕನ್ನಡಿಯಲ್ಲಿ ತದ್ರೂಪವಾಗಿ ಚಿಕ್ಕದಾಗಿ ಕಾಣುವುದು. ಆದರೆ ಯಾವ ವಸ್ತುವನ್ನು ಪ್ರತಿಬಿಂಬಿಸುತ್ತದೆಯೋ ಅದರ ಗುಣಗಳನ್ನು ಪ್ರತಿಬಿಂಬಿಸಲಾರದು. ಕನ್ನಡಿಯು ಯಾವ ಬದಲಾವಣೆಯನ್ನೂ ಹೊಂದುವುದಿಲ್ಲ.

ನೈರ್ಮಲ್ಯವೆಲ್ಲಿರುತ್ತದೆಯೋ ಅಲ್ಲಿ ಪದಾರ್ಥವು ಪ್ರತಿಫಲಿಸುತ್ತದೆ. ಕನ್ನಡಿಯಲ್ಲಿ ಮುಖವನ್ನು ನೋಡುತ್ತೇವೆ. ಮುಖದಲ್ಲಿ ಕನ್ನಡಿಯನ್ನು ನೋಡಲಾರೆವು. ಇದರಿಂದ ಮುಖದಲ್ಲಿ ಕನ್ನಡಿಯನ್ನು ಪ್ರತಿಫಲನಮಾಡುವಷ್ಟು ನೈರ್ಮಲ್ಯವಿಲ್ಲವೆಂದು ಹೇಳಬಹುದು. ಇದು ಕೇವಲ ಬಾಹ್ಯಪ್ರಪಂಚ ದೃಷ್ಟಾಂತ ವಿಷಯ. ಅಂತು ಇಲ್ಲಿ ಒಂದು ವಿಷಯವನ್ನು ನಾವು ಚೆನ್ನಾಗಿ ಗಮನಿಸಬಹುದು. ರೂಪಿಸಬೇಕಾದರೆ ಅಥವಾ ಪ್ರತಿಫಲಿಸಬೇಕಾದರೆ ಪ್ರತಿಫಲನ ಮಾಡುವ ಪದಾರ್ಥದಲ್ಲಿ ನೈರ್ಮಲ್ಯವಿರಬೇಕು. ನೈರ್ಮಲ್ಯವು ಹೆಚ್ಚಾಗಿದ್ದಷ್ಟು ಪ್ರತಿಫಲನವು ಅಷ್ಟು ಪ್ರಕಾಶಮಾನವಾಗಿರುತ್ತದೆ.

ಸ್ವಸ್ಮಿನ್ ಅಭೇದಾತ್ ಭಿನ್ನಸ್ಯ ದರ್ಶನಕ್ಷಮತೈವ ಯಾ ।
ಅವ್ಯಕ್ತ ಸ್ವಪ್ರಕಾಶಸ್ಯ ನೈರ್ಮಲ್ಯಂ ತದ್ಗುರೂದಿತಂ ॥

ದರ್ಪಣವು ತನಗೆ ಭಿನ್ನವಾಗಿರುವುದನ್ನು ತೋರಿಸುತ್ತದೆ. ಆದರೆ ಚಿತ್ತು ಅಭಿನ್ನವಾಗಿರುವುದನ್ನು ತೋರಿಸುತ್ತದೆ. ಇತರ ಪದಾರ್ಥಗಳನ್ನು ತೋರಿಸಿದರೂ ತನ್ನ ಪ್ರಕಾಶವನ್ನು ಬಿಡುವುದಿಲ್ಲ. ಇದೇ **ನೈರ್ಮಲ್ಯ**. ಈಶ್ವರನ ಪರಮವ್ಯೋಮದಲ್ಲಿ ವಿಶ್ವವೆಲ್ಲಾ ಅಡಗಿದೆ. ಹಾಗೆಯೇ ಜೀವನ ಚಿದಾಕಾಶದಲ್ಲಿ ಇಂದ್ರಿಯಗಳ ಮೂಲಕ ಬರುವ ಎಲ್ಲಾ ವೃತ್ತಿಗಳೂ ಅಡಗಿರುತ್ತವೆ. ಈ ಬಿಂಬ ಪ್ರತಿಬಿಂಬ ಭಾವ ಈಶ್ವರನಿಗೂ ವಿಶ್ವಕ್ಕೂ ಮಾನವನ ತಿಳಿವಳಿಕೆಗೂ ಸಮಾನವಾಗಿದೆ. ಇಲ್ಲಿ ಒಂದು ಚಮತ್ಕಾರವನ್ನು ನಾವು ಗಮನಿಸಬಹುದು. ಬಿಂಬಪ್ರತಿಬಿಂಬಗಳಿಗೆ ನಾವು ಕೊಡುವ ದೃಷ್ಟಾಂತಗಳಲ್ಲಿ ಕನ್ನಡಿಯು ಪ್ರತಿಫಲನಕ್ಕೆ ಆಶ್ರಯವಾದ ಪದಾರ್ಥ. ಇದರಲ್ಲಿ ಪ್ರತಿಫಲಿಸಲ್ಪಡುವ ಪದಾರ್ಥವು ಬೇರೆಯಾಗಿರುತ್ತದೆ. ಪ್ರತಿಫಲಿಸಿದ ಪ್ರತಿಕೃತಿಯನ್ನು ನಾವು ಪ್ರತಿಬಿಂಬವೆನ್ನುತ್ತೇವೆ. ಇಲ್ಲಿ ಕನ್ನಡಿ, ಪದಾರ್ಥ, ಪ್ರತಿಬಿಂಬ ಮೂರು ಪದಾರ್ಥಗಳನ್ನು ನಾವು ಕಾಣುತ್ತೇವೆ. ಆದರೆ ಈಶ್ವರನಿಗೂ ವಿಶ್ವಕ್ಕೂ ಇರುವ ಬಿಂಬ ಪ್ರತಿಬಿಂಬ ನ್ಯಾಯ ವಿಲಕ್ಷಣವಾದದ್ದು. ಇಲ್ಲಿ ಮೇಲಿನ ದೃಷ್ಟಾಂತದಲ್ಲಿರುವಂತೆ ಮೂರು ಪದಾರ್ಥಗಳಿಲ್ಲ. ಇಲ್ಲಿ ಚಿದ್ರೂಪಿಯಾದ **ಶಿವನೇ** ಪ್ರತಿಫಲನಕ್ಕೆ ಆಶ್ರಯನಾಗಿರುವನು. ಪ್ರತಿಬಿಂಬ ರೂಪಿಯೂ ಆಗಿರುವನು.

ಇತ್ಥಂ ವಿಶ್ವಮಿದಂ ನಾಥೆ ಭೈರವೀಯ ಚಿದಂಬರೆ ।
ಪ್ರತಿಬಿಂಬಮಲಂ ಸ್ವಚ್ಛೇನ ಖಲು ಅನ್ಯಪ್ರಸಾದತಃ ॥

ಪ್ರತಿಬಿಂಬವು ಚಿತ್ತಿನ ಸ್ವಾತಂತ್ರ್ಯದಿಂದಲೇ ಹೊರತು ಬೇರೆ ಯಾವುದರಿಂದಲೂ ಅಲ್ಲ. ಸ್ಫಟಿಕವು ಎಲ್ಲಾ ಕಡೆಗಳಲ್ಲಿಯೂ ಸ್ವಚ್ಛವಾಗಿರುವುದರಿಂದ ಎಲ್ಲಾ ಕಡೆಯೂ ಪ್ರತಿಫಲಿಸುವುದಕ್ಕೆ ಸಮರ್ಥವಾಗಿದೆ. ಹಾಗೆ ಚಿತ್ತು ಯಾವಾಗಲೂ ಸ್ವಚ್ಛವಾಗಿರುವುದರಿಂದ ರೂಪರಸಾದಿ ಎಲ್ಲಾ ಗುಣಗಳನ್ನೂ ಮತ್ತು ಪದಾರ್ಥಗಳಲ್ಲಿರುವ ಗುರುತ್ವಾದಿ ವಿಶೇಷ ಧರ್ಮಗಳನ್ನೂ ಗ್ರಹಿಸುವ ಸಾಮರ್ಥ್ಯವುಳ್ಳದ್ದಾಗಿದೆ. ಈ ಪ್ರತಿಫಲನವು **ಅಂತರ್ಮುಖ**ವಾಗಿಯೂ **ಬಹಿರ್ಮುಖ**ವಾಗಿಯೂ ಇದೆ. ಬಾಹ್ಯಪ್ರಪಂಚದ

ಪದಾರ್ಥಗಳಿಂದ ಇಂದ್ರಿಯಗಳ ಮೂಲಕ ಪ್ರತಿಫಲನ ಉಂಟಾಗಿ ಸಂತೋಷವೋ ವಿಷಾದವೋ ಉಂಟಾಗುವ ಹಾಗೆ ಅಂತರ್ಮುಖವಾದ ಸ್ಮರಣದಿಂದ ಸಂತೋಷ ವಿಷಾದಗಳುಂಟಾಗುತ್ತವೆ. ಮೊದಲು ಬಾಹ್ಯೇಂದ್ರಿಯ ಪ್ರತಿಫಲನದಿಂದ ನಮ್ಮ ಜ್ಞಾನತಂತುಗಳಲ್ಲಿ ಒಂದು ಸೂಕ್ಷ್ಮ ಚಲನವುಂಟಾಗುತ್ತದೆ. ಸಂತೋಷದಲ್ಲಿಯೂ ವಿಷಾದದಲ್ಲಿಯೂ ಇಂತಹ ಚಲನಗಳುಂಟಾಗುತ್ತವೆ. ಮನುಷ್ಯ ಸ್ವಭಾವದಲ್ಲಿ ಭೌತಿಕ ಶರೀರದಲ್ಲಿ ಇಂತಹ ಚಲನ ಉಂಟಾಗುವ ವರೆಗೂ ತೃಪ್ತಿಯಿಲ್ಲ.

ನಮ್ಮ ಅನುಭವದಲ್ಲಿರುವ ಪ್ರಪಂಚವು ಪಂಚಭೂತಗಳ ಸಂಕಲನಾತ್ಮಕವಾಗಿದೆ. ಹಾಗೂ ಮನುಷ್ಯ ಶರೀರವು ಈ ಪಂಚಭೂತಗಳ ಪಿಂಡರೂಪವಾಗಿದೆ. ವಿಶ್ವದ ಪದಾರ್ಥಗಳೆಲ್ಲಾ ಈ ಐದು ಭೂತಗಳಿಂದಲೇ ಉಂಟಾಗಿವೆ. ಈ ಐದು ಭೂತಗಳಿಗೂ ಐದು ಗುಣಗಳುಂಟು. ಶಬ್ದ ಸ್ಪರ್ಶ ರೂಪ ರಸ ಗಂಧ ಎಂಬಿವುಗಳೇ ಈ ಐದು ಗುಣಗಳು. ಪ್ರತಿಯೊಂದು ಭೌತಿಕವಾದ ಪದಾರ್ಥದಲ್ಲಿಯೂ ಈ ಐದು ಗುಣಗಳಿರುತ್ತವೆ. ಈ ಐದು ಗುಣಗಳನ್ನು ಗ್ರಹಿಸುವುದಕ್ಕೆ ಅಥವಾ ಪ್ರತಿಫಲಿಸುವುದಕ್ಕೆ ಮನುಷ್ಯನಿಗೆ ಐದು ಇಂದ್ರಿಯಗಳಿವೆ. ಕಿವಿಯಲ್ಲಿ ಶಬ್ದವೂ ಚರ್ಮದಲ್ಲಿ ಸ್ಪರ್ಶವೂ ಕಣ್ಣಿನಲ್ಲಿ ರೂಪವೂ ನಾಲಗೆಯಲ್ಲಿ ರಸವೂ ಮೂಗಿನಲ್ಲಿ ಗಂಧವೂ ಪ್ರತಿಫಲಿಸುತ್ತದೆ. ಆದರೆ ಇಂದ್ರಿಯಗಳಿಗೆ ಸ್ವತಂತ್ರವಾಗಿ ಇವುಗಳನ್ನು ಗ್ರಹಿಸುವ ಶಕ್ತಿಯಿಲ್ಲ. ಇಂದ್ರಿಯಗಳು ಇವುಗಳನ್ನು ಗ್ರಹಿಸಬೇಕಾದರೆ **ಅಂತಃಕರಣ** ಮತ್ತು **ಚಿಚ್ಛಕ್ತಿ**ಯ ಬೆಂಬಲ ಬೇಕು. ಇಂದ್ರಿಯ ಶಕ್ತಿಗಳ ಯೋಗ್ಯತೆಯನ್ನು ಹೆಚ್ಚಿಸಿಕೊಂಡಷ್ಟೂ ಅವುಗಳ ಗ್ರಹಣ ಅಥವಾ ಪ್ರತಿಫಲನದ **ನೈರ್ಮಲ್ಯ**ವು ಹೆಚ್ಚು ಸೂಕ್ಷ್ಮವಾಗಿಯೂ ಸ್ವಚ್ಛವಾಗಿಯೂ ಆಗುತ್ತವೆ. ಸಾಧನೆಗಳಿಂದಲೂ ಭಾವನಾಬಲದಿಂದಲೂ ಹೆಚ್ಚು ಯೋಗ್ಯತೆಯನ್ನು ಪಡೆದಿರುವವರು ಸಾಧಾರಣ ಮನುಷ್ಯರಿಗಿಂತ ಹೆಚ್ಚು ಸ್ವಚ್ಛವಾದ ಇಂದ್ರಿಯ ಶಕ್ತಿಗಳನ್ನುಳ್ಳವರಾಗಿರುತ್ತಾರೆ. ಇಂತಹ ಶಕ್ತಿಗಳನ್ನುಳ್ಳವರೇ ಯೋಗಿಗಳು.

ಹಿಂದೆ ಹೇಳಿದ ಬಾಹ್ಯಪದಾರ್ಥಗಳು ಪ್ರತ್ಯಕ್ಷವಾಗಿಲ್ಲದಿದ್ದರೂ ಅದೇ ಚಿತ್ತಿನಲ್ಲಿ ಅದಕ್ಕೆ ಸಮಾನವಾದ ಸ್ಪರ್ಶಾದಿಗಳು ಪ್ರತಿಬಿಂಬಿತವಾಗಿ ಯಾವುದೋ ಕೆಲವು ನಾಡಿಗಳಲ್ಲಿ ಸುಖವನ್ನುಂಟುಮಾಡುತ್ತವೆ. ಇದರಿಂದ **ಸ್ಮರಣ**ದಲ್ಲಿಯೂ ಪ್ರತಿಬಿಂಬವಿದ್ದು ಸುಖವನ್ನೋ ದುಃಖವನ್ನೋ ಉಂಟುಮಾಡುವುದಾಗಿದೆ :—

ಅಸಂಭವೆ ಬಾಹ್ಯಗತಸ್ಯ ತಾದೃಶಃ
ಸ್ವ ಏವ ತಸ್ಮಿ೯ ಪ್ರತಿಬಿಂಬಿತಸ್ತಥಾ ।
ಕರೋತಿ ತಾಂ ಸ್ಪರ್ಶವರಃ ಸುಖಾತ್ಮಿಕಾಂ
ಸ ಚಾಪಿ ಕಸ್ಯಾಮಪಿ ನಾಡಿಸಂತತಾ ॥

ಮನುಷ್ಯನಿಗೆ ತನ್ನ ಜೀವನದಲ್ಲುಂಟಾಗುವ ಸುಖದುಃಖಗಳು ಎರಡು ಬಗೆಯಾಗಿ ನಮ್ಮ ಅನುಭವದಲ್ಲಿವೆ. ಅಂತರಂಗಿಕವಾಗಿ ಸ್ಮರಣ ಅನುಸಂಧಾನಗಳಿಂದುಂಟಾಗುವ

ದೊಂದು ಬಗೆ. ಬಾಹ್ಯಪದಾರ್ಥಗಳ ತಿಳಿವಳಿಕೆಗಳು ಮತ್ತು ಇಂದ್ರಿಯಗಳ ಮೂಲಕ ಆಗುವ ಪದಾರ್ಥ ಸಂಯೋಗಗಳೂ ಇನ್ನೊಂದು ಬಗೆ. ಈ ಎರಡು ಕ್ರಮಗಳಿಂದುಂಟಾಗುವ ಸುಖದುಃಖಗಳನ್ನು ವಿಮರ್ಶೆಮಾಡಿದರೆ ಜ್ಞಾನತಂತುಗಳ ಚಲನ ಅಥವಾ ಕಂಪನರೂಪ ವಾಗಿ ಅವಾಂತರವನ್ನುಂಟುಮಾಡುತ್ತವೆ. ಕಾಮಕ್ರೋಧಾದಿಗಳು ಇಂತಹ ಅವಾಂತರ ಗಳು. ಇವು ನಮ್ಮ ಅನುಭವದಲ್ಲಿವೆ. ಈ ರೀತಿಯಿಂದಾದ ವ್ಯಕ್ತಿಗಳು ಚಿತ್ತಿನಲ್ಲಿ ಸೇರಿದಾಗ ಸುಖದುಃಖಾನುಭವರೂಪವಾದ ಅನುಭವವಿಲ್ಲ. ಮರಳಿ ಸುಖದುಃಖಗಳುಂಟಾಗ ಬೇಕಾದರೆ ಆಂತರ್ಯವಾದ ಸ್ಮರಣವಾಗಲಿ ಬಾಹ್ಯವಾದ ಪದಾರ್ಥ ಸಂಯೋಗವಾಗಲಿ ಏರ್ಪಡಬೇಕು. ಜ್ಞಾನಿಯಾದವನು ಕ್ಷಣಿಕವಾದ ಈ ಸುಖದುಃಖಗಳಲ್ಲಿ ಅಭಿಮಾನ ವನ್ನಿಡುವುದಿಲ್ಲ. ಸುಖದುಃಖಗಳು ಕೇವಲ ಪ್ರತಿಬಿಂಬಗಳು ಮಾತ್ರವೆಂದು ತಿಳಿಯುತ್ತಾನೆ. ಹೊರಗಿನ ಪದಾರ್ಥಗಳು ಇಂದ್ರಿಯಗಳಿಗೆ ಸಂಬಂಧಿಸದೆ ಇರುವವರೆಗೂ ನಮಗೆ ಸುಖ ದುಃಖಗಳಿಲ್ಲ. ಇಂದ್ರಿಯಗಳಿಗೆ ಪದಾರ್ಥಗಳ ಸಂಯೋಗವೇರ್ಪಟ್ಟು ಅದರ ತಿಳಿವಳಿಕೆ ಮತ್ತು ಅನುಭವವು ಚಿತ್ತಿನಲ್ಲಿ ಸೇರಿಹೋದರೂ ನಮಗೆ ಸುಖದುಃಖಗಳಿಲ್ಲ. ಇಂದ್ರಿಯ ಪದಾರ್ಥ ಸಂಯೋಗದಿಂದ ಜ್ಞಾನ ಉಂಟಾಗಿ ಚಿತ್ತಿನಲ್ಲಿ ಸೇರುವುದರೊಳಗಿರುವ ಮಧ್ಯಸ್ಥಿಕೆಯಲ್ಲಿ ಸುಖದುಃಖಗಳುಂಟಾಗುತ್ತವೆ. ಬಿಂಬಪ್ರತಿಬಿಂಬನ್ಯಾಯದ ತಿಳಿವಳಿಕೆ ಯಿಂದ ಸುಖದುಃಖಗಳ ನಿಜರೂಪವು ತಿಳಿದು ಶಾಂತಿಗೆ ಅವಕಾಶವಾಗುತ್ತದೆ.

ನಮಗೆ ಬರುವ ಎಲ್ಲಾ ತಿಳಿವಳಿಕೆಗಳೂ ಪ್ರತಿಬಿಂಬ ಮಾತ್ರವಾಗಿವೆ. ಅಂತರನು ಭವಗಳೇ ಆಗಲಿ, ಹೊರಗಿನ ಪದಾರ್ಥಗಳಿಂದುಂಟಾದ ತಿಳಿವಳಿಕೆಗಳೇ ಆಗಲಿ ಈ ಪ್ರತಿ ಬಿಂಬದ ಎಲ್ಲೆಯನ್ನು ಮೀರಲಾರವು. ಭೇದಜ್ಞಾನಕ್ಕೆ ಆಕರವಾಗಿರುವ ಈ ಪ್ರತಿ ಬಿಂಬವನ್ನು ಮನನಮಾಡಿದರೆ ಅಭೇದ ವ್ಯಾಪ್ತಿಯನ್ನುಂಟುಮಾಡುವ ಸ್ವರೂಪಾನು ಭವಕ್ಕೂ ಇವುಗಳಿಗೂ ಇರುವ ವ್ಯತ್ಯಾಸವು ತಿಳಿಯುತ್ತದೆ. ದುಃಖಕ್ಕೆ ಕಾರಣಗಳಾಗಿರುವ ಭೇದ ಪ್ರತಿಬಿಂಬಗಳನ್ನು ಉಪೇಕ್ಷಿಸಿ ಸ್ವರೂಪಾನುಭವವನ್ನು ಸಂಪಾದಿಸುವುದಕ್ಕೆ ಬಿಂಬ ಪ್ರತಿಬಿಂಬ ನ್ಯಾಯವು ಪರಮೋಪಕಾರಿಯಾಗಿದೆ. ವಿಶ್ವವೆಲ್ಲಾ ಚಿತ್ತಿನಲ್ಲಿ ಪ್ರತಿಫಲಿಸಿದೆ ಎಂಬ ದೃಢವಿಶ್ವಾಸವೇರ್ಪಟ್ಟಲ್ಲಿ ಜೀವನಿಗೆ ರಾಗ ದ್ವೇಷಗಳಿರುವುದಿಲ್ಲ. ಚಿದಾನಂದವನ್ನು ಪಡೆಯುತ್ತಾನೆ.

ಈಶ್ವರನು ತನ್ನ ಚಿದ್ದರ್ಪಣದಲ್ಲಿ ತನಗಿಂತ ಬೇರೆಯಾಗದಿರುವ ವಿಶ್ವವನ್ನು ಪ್ರತಿ ಫಲನ ಮಾಡುತ್ತಾ ನಿರ್ಮಲವಾದ ವಿಶ್ವರೂಪವನ್ನು ಪ್ರಕಾಶಪಡಿಸುತ್ತಾನೆ.

ತೇನ ಸಂವಿತ್ತಿಮುಕುರೆ ವಿಶ್ವಮಾತ್ಮಾನಮರ್ಪಯತ್ ।
ನಾಥಸ್ಯ ವದತೋಽಮುಷ್ಯ ವಿಮಲಾಂ ವಿಶ್ವರೂಪತಾಂ ॥

(ತಂತ್ರಾಲೋಕ, ಆಹ್ನಿಕ ೩, ಶ್ಲೋಕ ೪೪)

ನಿರ್ಮಲವಾದ ಕನ್ನಡಿಯಲ್ಲಿ ಗ್ರಾಮ ವೃಕ್ಷ ಮುಂತಾದ ಪದಾರ್ಥಗಳು ಪ್ರತಿ ಬಿಂಬಿತವಾಗಿ ಪರಸ್ಪರ ಬೇರೆಯಾಗಿ ಕಂಡುಬರುವಂತೆ ಸಂವಿದ್ರೂಪನಾದ ಪರಮೇಶ್ವರನಲ್ಲಿ

ಪ್ರತಿಬಿಂಬಿತವಾದ ಈ ವಿಶ್ವವು ಅಭಿನ್ನವಾಗಿದ್ದರೂ, ಘಟಘಟಾದಿ ರೂಪಗಳಿಂದ ಬೇರೆಯಾಗಿ ಕಂಡುಬರುತ್ತದೆ. ಇದರಿಂದ ದ್ವೈತಭಾವನೆಯು ಕಲ್ಪಿತವಾಗುತ್ತದೆ. ಅದ್ವೈತಭಾವನೆಯು ವಾಸ್ತವಿಕವಾಗಿರುತ್ತದೆ. ಈ ಆಭಾಸ ಅಥವಾ ಪ್ರತಿಬಿಂಬ ತತ್ತ್ವವನ್ನಂಗೀಕರಿಸಿರುವುದರಿಂದ ತ್ರಿಕದರ್ಶನವನ್ನು ದಾರ್ಶನಿಕ ದೃಷ್ಟಿಯಿಂದ 'ಆಭಾಸವಾದ' ಎಂದು ಕರೆಯುತ್ತಾರೆ.

೩೬ ತತ್ತ್ವಗಳ ಪರಿಗಣನೆ

ಶಿವ
ಶಕ್ತಿ
ಸದಾಶಿವ
ಈಶ್ವರ
ಶುದ್ಧವಿದ್ಯಾ

ಶುದ್ಧಾಧ್ವಗಳು

ಇವು ಶಿವನ ಚಿನ್ಮಾತ್ರಾವಸ್ಥೆಯ ಚಿನ್ಮಾತ್ರ ಸ್ವರೂಪದಲ್ಲಿದ್ದು ಗ್ರಾಹ್ಯಗ್ರಾಹಕಗಳ ಭಾವಾಭಿವ್ಯಕ್ತಿ.

ಮಾಯಾ
ಕಲಾ
ವಿದ್ಯಾ
ರಾಗ
ಕಾಲ
ನಿಯತಿ

ಷಟ್ಕಂಚುಕಗಳು

ಸ್ವರೂಪಾಭಿನ್ನವಾಗಿರುವ ಸತ್ ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳ ಸಂಪೂರ್ಣ ವಿಕಾಸವು ಸಂಕುಚಿತವಾಗಿ ಬದ್ಧಜೀವನನ್ನಾಗಿ ಮಾಡುವುವು–ಸ್ವಸ್ವರೂಪವನ್ನು ಮರೆಸುವುವು.

ಪುರುಷ .... ಗ್ರಾಹಕ–ಜೀವಾತ್ಮ.

ಪ್ರಕೃತಿ .... ಗ್ರಾಹ್ಯವಸ್ತು (ಪ್ರಪಂಚ)–ಸತ್ತ್ವರಜಸ್ತಮೋ ಗುಣಗಳಿಂದ ಕೂಡಿದ್ದು.

ಅಂತಃಕರಣ

ಬುದ್ಧಿ .... ಗ್ರಾಹ್ಯಗ್ರಾಹಕ ರೂಪ.

ಅಹಂಕಾರ | ಸಾತ್ವಿಕ, ರಾಜಸ, ತಾಮಸ | .... ಸಂಕಲ್ಪಾದಿ ಭಾವೋದ್ರೇಕಕ್ಕೆ ಕಾರಣ.

ಮನಸ್ಸು .... ಜ್ಞಾನೇಂದ್ರಿಯ ಕರ್ಮೇಂದಿಯಗಳಿಂದುಂಟಾಗುವ ಎಲ್ಲಾ ಜ್ಞಾನಗಳಿಗೂ ಆಕರವಾದದ್ದು.

೫ ಜ್ಞಾನೇಂದ್ರಿಯಗಳು > ಸಾತ್ವಿಕಾಹಂಕಾರದಿಂದ ಉತ್ಪನ್ನ.

೧. ಶ್ರವಣೇಂದ್ರಿಯ	ಕಿವಿಯಿಂದ ಕೇಳುವುದು.
೨. ಸ್ಪರ್ಶೇಂದ್ರಿಯ	ಚರ್ಮದಿಂದ ಸ್ಪರ್ಶಿಸುವುದು.
೩. ದರ್ಶನೇಂದ್ರಿಯ	ಕಣ್ಣಿನಿಂದ ನೋಡುವುದು.
೪. ಘ್ರಾಣೇಂದ್ರಿಯ	ಮೂಗಿನಿಂದ ಮೂಸಿ ನೋಡುವುದು.
೫. ರಸನೇಂದ್ರಿಯ	ನಾಲಗೆಯಿಂದ ರುಚಿ ನೋಡುವುದು.

೫ ಕರ್ಮೇಂದ್ರಿಯಗಳು > ರಾಜಸಾಹಂಕಾರದಿಂದ ಉತ್ಪನ್ನ.

೧. ವಾಕ್	ಮಾತನಾಡುವುದು	ಇವುಗಳು ಜ್ಞಾನೇಂದ್ರಿಯಗಳ ಮೂಲಕ ಕೆಲಸ ಮಾಡುತ್ತವೆ.
೨. ಪಾಣಿ	ಕೈಯಿಂದ ಕೆಲಸಮಾಡುವುದು	
೩. ಪಾದ	ಕಾಲಿನಿಂದ ನಡೆಯುವುದು	
೪. ಪಾಯು	ಜಲಮಲಾದಿ ವಿಸರ್ಜನ	
೫. ಉಪಸ್ಥ	ಕಾಮಭೋಗವಸ್ತು	

೫ ತನ್ಮಾತ್ರಗಳು ತನ್ಮಾತ್ರಗಳು ಪಂಚಭೂತಗಳ ತಾಮಸಾಹಂಕಾರದಿಂದ ಉತ್ಪನ್ನ.

೧. ಶಬ್ದತನ್ಮಾತ್ರ		ಶಬ್ದ
೨. ಸ್ಪರ್ಶತನ್ಮಾತ್ರ	ಇಂದ್ರಿಯಗಳ	ಸ್ಪರ್ಶ
೩. ರೂಪತನ್ಮಾತ್ರ	ಮೂಲಕ ವ್ಯವ	ರೂಪ
೪. ರಸತನ್ಮಾತ್ರ	ಹರಿಸುವವುಗಳು	ರುಚಿ
೫. ಗಂಧತನ್ಮಾತ್ರ		ವಾಸನೆ

೫ ಪಂಚಭೂತಗಳು ಇವುಗಳು ತನ್ಮಾತ್ರಗಳಿಂದ ಉತ್ಪನ್ನ

೧. ಪೃಥ್ವಿ	ಭೂಮಿ
೨. ಅಪ್ಪು	ನೀರು
೩. ತೇಜಸ್ಸು	ಬೆಳಕು
೪. ವಾಯು	ಗಾಳಿ
೫. ಆಕಾಶ	ಆಕಾಶ

ಪುರುಷ-ಭೋಕ್ತ

ಪ್ರಕೃತಿ–ಭೋಗ್ಯ

ಪರಶಿವನು ಶುದ್ಧಚಿನ್ಮಾತ್ರಸ್ವರೂಪಿಯಾಗಿ ವಿಶ್ವಾತೀತನಾಗಿ ಪರಿಪೂರ್ಣನಾಗಿದ್ದಾನೆ. ಹಾಗೆಯೇ ವಿಶ್ವಾತ್ಮಕನಾಗಿ ೩೬ ತತ್ತ್ವಗಳ ಮೂಲಕ ವಿಶ್ವವ್ಯವಹಾರವನ್ನು ನಡೆಯಿಸುತ್ತಿರುವವನೂ ಆಗಿದ್ದಾನೆ. ಈ ೩೬ ತತ್ತ್ವಗಳು ವಸ್ತುತಃ ವಿಭಾಗವಾಗಿಲ್ಲ.

ವಿಭಾಗವಾಗುವುದಕ್ಕೂ ಆಗುವುದಿಲ್ಲ. ಆದರೆ ಈ ತತ್ತ್ವಗಳ ರೂಪದಿಂದ ನಾವು ವಿಶ್ವಾತ್ಮಕನನ್ನು ಅರಿಯಬಹುದು. ನಮ್ಮ ಭಾವನೆಗೆ ಎಟುಕಿಸಿಕೊಳ್ಳಬಹುದು. ನಮ್ಮ ಮನಸ್ಸಿನಲ್ಲಿ ಪ್ರತಿಫಲಿಸುವಂತೆ ಊಹಿಸಬಹುದು. ಈ ತತ್ತ್ವಗಳ ಅನುಸಂಧಾನದಿಂದ ಚಿತ್ತಶುದ್ಧಿಯಾಗುವುದು.

ಶಾಸ್ತ್ರೀಯವಾಗಿ ಭೇದವನ್ನು ಪುರಸ್ಕರಿಸಿ, ಅಭೇದವನ್ನು ಮನಗಾಣುವುದು ೩೬ ತತ್ತ್ವಗಳ ವಿವೇಚನೆಯ ಫಲವಾಗಿರುತ್ತದೆ. ದಾರ್ಶನಿಕರೆಲ್ಲರೂ ಈ ತತ್ತ್ವಗಳನ್ನು ವಿವೇಚಿಸಿರುತ್ತಾರೆ. ಈ ಸಂಪ್ರದಾಯಗಳ ಸಂಖ್ಯೆ ೩೬. ಇವುಗಳಲ್ಲಿ ೫ ಶುದ್ಧಾಧ್ವ ತತ್ತ್ವಗಳೆಂತಲೂ, ೩೧ ಅಶುದ್ಧಾಧ್ವ ತತ್ತ್ವಗಳೆಂತಲೂ ವಿಭಾಗಿಸಲ್ಪಟ್ಟಿವೆ. ಸಾಂಖ್ಯರು ಅಂಗೀಕರಿಸಿರುವ ೨೫ ತತ್ತ್ವಗಳು ಇವರಿಗೂ ಸಮ್ಮತವಾಗಿವೆ. ಪಂಚಭೂತಗಳು, ಪಂಚತನ್ಮಾತ್ರಗಳು, ಪಂಚಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು, ಮನಸ್ಸು, ಅಹಂಕಾರ, ಮಹತ್ತು, ಮೂಲಪ್ರಕೃತಿ, ಪುರುಷ ಇವೇ ೨೫ ತತ್ತ್ವಗಳು.

ಇವಲ್ಲದೆ ಪಂಚಕಂಚುಕಗಳಾದ ಕಲಾ, ನಿಯತಿ, ರಾಗ, ವಿದ್ಯಾ, ಕಾಲ ಇವೈದೂ ಸೇರಿ ೩೦ ತತ್ತ್ವಗಳಾಗುತ್ತವೆ. ಈ ೩೦ ತತ್ತ್ವಗಳಿಗೆ ಮೂಲಕಾರಣವಾಗಿರುವ ಮಾಯಾತತ್ತ್ವ ಅಶುದ್ಧಾಧ್ವದ ಮೊದಲನೆಯ ಭಾಗ. ಹೀಗೆ ೩೧ ತತ್ತ್ವಗಳು ಅಶುದ್ಧಾಧ್ವಕ್ಕೆ ಸೇರಿದವುಗಳು. ಶುದ್ಧವಿದ್ಯಾ, ಈಶ್ವರ, ಸದಾಶಿವ, ಶಕ್ತಿ ಮತ್ತು ಶಿವ ಇವೈದೂ ಶುದ್ಧಾಧ್ವ ತತ್ತ್ವಗಳು. ಹೀಗೆ ೩೬ ತತ್ತ್ವಗಳು ಆಗಮಗಳಲ್ಲಿಯೂ ಶೈವಸಂಪ್ರದಾಯಗಳಲ್ಲಿಯೂ ನಿರೂಪಿಸಲ್ಪಟ್ಟಿರುತ್ತವೆ. ಸಾಧಕನು ಸ್ಥೂಲ ಮತ್ತು ಸೂಕ್ಷ್ಮರೂಪದಿಂದಿರುವ ಈ ತತ್ತ್ವಗಳನ್ನು ತನ್ನ ಜ್ಞಾನವಿಕಾಸಕ್ಕೆ ತಕ್ಕಂತೆ ಸ್ವರೂಪಕ್ಕಿಂತ ಭಿನ್ನವಾಗಿರುವವುಗಳೆಂದು ಸಾಧನಾವಸ್ಥೆಯಲ್ಲಿ ತಿಳಿದರೂ ಪರಿಪಾಕಾವಸ್ಥೆಯಲ್ಲಿ ಈ ತತ್ತ್ವಗಳು ಶಿವನಿಗಿಂತ ಬೇರೆಯಲ್ಲವೆಂದೂ ತಾನು ಶಿವಾಭಿನ್ನನೆಂದೂ ತಿಳಿಯುತ್ತಾನೆ.

(೩೬ ತತ್ತ್ವಗಳು) ತತ್ತ್ವಪರಿಗಣನೆ

ವಿಶ್ವೋತ್ತೀರ್ಣನಾದ ಪರಶಿವನು ತನ್ನ ಲೀಲೆಯಿಂದ ವಿಶ್ವಾತ್ಮಕನಾಗಿ ೩೬ ತತ್ತ್ವಗಳ ರೂಪವನ್ನು ತಾಳುವನು. ಪ್ರಾಚೀನರು ಅಲೌಕಿಕ ವಿಷಯಗಳನ್ನು ತಿಳಿಯುವುದಕ್ಕೆ ಕೆಲವು ನಿಯಮಗಳನ್ನು ಅಂಗೀಕರಿಸಿರುತ್ತಾರೆ. ಆ ನಿಯಮಗಳನ್ನನುಸರಿಸಿ ಈಗ ನಮ್ಮ ಅನುಭವದಲ್ಲಿರುವ ಲೌಕಿಕ ವಿಷಯಗಳನ್ನೂ ಅಲೌಕಿಕ ವಿಷಯಗಳನ್ನೂ ಯಥಾರ್ಥವಾಗಿ ತಿಳಿಯಬಹುದು. ಸ್ಥೂಲವಾದ ಪ್ರಪಂಚಜ್ಞಾನದಿಂದ ಇದಕ್ಕೆ ಕಾರಣವಾಗಿರುವ ಸೂಕ್ಷ್ಮವಾದ ತತ್ತ್ವಗಳನ್ನು ಅರಿಯಬಹುದು. ಈ ವಿಶ್ವಕ್ಕೆ ಮೂಲಕಾರಣವಾಗಿರುವ ತತ್ತ್ವವನ್ನು ತಿಳಿಯಬೇಕಾದರೆ ನಮ್ಮ ಅನುಭವದಲ್ಲಿರುವ ಸ್ಥೂಲ ಪ್ರಪಂಚಜ್ಞಾನದಿಂದ ಊಹಿಸಬೇಕು. ಎಲ್ಲಾ ಶಾಸ್ತ್ರಜ್ಞರು ಇಂತಹ ಜ್ಞಾನವನ್ನು ಪಡೆಯುವುದಕ್ಕೆ ತತ್ತ್ವಜ್ಞಾನ ಎಂದು ಹೇಳುತ್ತಾರೆ. ತತ್ ಅಂದರೆ ಅದು. ತತ್ತ್ವ ಅಂದರೆ ಅದರ ನಿಜಸ್ವರೂಪ. ಎಲ್ಲಾ ತತ್ತ್ವಗಳನ್ನೂ ಪ್ರತ್ಯಕ್ಷ ಪ್ರಮಾಣಗಳಿಂದ

ತಿಳಿಯಲು ಸಾಧ್ಯವಿಲ್ಲ. ಕೆಲವನ್ನು ಪ್ರತ್ಯಕ್ಷದಿಂದಲೂ ಕೆಲವನ್ನು ಅನುಮಾನದಿಂದಲೂ ಕೆಲವನ್ನು ಆಗಮದಿಂದಲೂ ಕೆಲವನ್ನು ಭಾವನಾಬಲದಿಂದಲೂ ತಿಳಿಯಬೇಕಾಗಿದೆ. ಸೂಕ್ಷ್ಮತತ್ತ್ವವು ಸ್ಥೂಲತತ್ತ್ವವಾಗಬೇಕಾದರೆ ಕೆಲವು ಬದಲಾವಣೆಗಳನ್ನು ಪಡೆಯುತ್ತದೆ. ಈ ಬದಲಾವಣೆಗಳನ್ನು ಶಾಸ್ತ್ರದಿಂದಲೇ ತಿಳಿಯಬೇಕಾಗಿದೆ. ಈ ತತ್ತ್ವಸ್ವರೂಪಗಳಿಗೆ ಲೌಕಿಕ ದೃಷ್ಟಾಂತವನ್ನು ಕೊಡುವುದಾದರೆ ಗಣಿತಶಾಸ್ತ್ರದ ಅಂಕಗಳನ್ನು ಹೋಲಿಸಬಹುದು. ಒಂಬತ್ತನೆಯ ಅಂಕದಲ್ಲಿ ಮಿಕ್ಕ ಎಂಟು ಅಂಕಗಳೂ ಇರುತ್ತವೆ. ಅಂದರೆ ಸ್ಥೂಲವಾದ ವಿಶ್ವದಲ್ಲಿ ಸೂಕ್ಷ್ಮವಾದದ್ದು ಅಡಗಿದೆ. ಒಂದು ಎಂಬ ಅಂಕ ಬೆಳೆಯುತ್ತಾ ಹೋದರೆ ಹತ್ತರವರೆಗೂ ನಡೆಯುತ್ತದೆ. ಅನಂತರ ಸಂಕಲನ ವ್ಯವಕಲನಾದಿ ಭೇದಗಳಿಂದ ಅನಂತವಾದ ವ್ಯಾಪ್ತಿಯನ್ನು ಪಡೆಯುತ್ತದೆ. ಲೆಕ್ಕಕ್ಕೆ ಒಂಬತ್ತು ಅಂಕಗಳು ಹೇಗೆ ಅನಂತವಾದ ವ್ಯವಹಾರಕ್ಕೆ ಕಾರಣವಾಗುತ್ತವೆಯೋ ಅದೇ ರೀತಿಯಾಗಿ ೩೬ ತತ್ತ್ವಗಳು ವಿಶ್ವದ ಬೆಳವಣಿಗೆಗೂ ತಿಳಿವಳಿಕೆಗೂ ಕಾರಣವಾಗಿರುತ್ತವೆ. ಮೊದಲನೆಯದಾದ ಶಿವತತ್ತ್ವದಲ್ಲಿ ಮಿಕ್ಕ ೩೫ ತತ್ತ್ವಗಳು ಅಡಗಿವೆ. ಹಾಗೆಯೇ ಕ್ರಮವಾಗಿ ಮೇಲಿನ

ಪರಮಶಿವ	ವಿಶ್ವೋತ್ತೀರ್ಣ	ಪರಾವಸ್ಥೆ	ಪೂರ್ಣಅಹಂಭಾವ
ಶಿವ — ಶಕ್ತಿ — ಸದಾಶಿವ — ಈಶ್ವರ — ಶುದ್ಧವಿದ್ಯಾ	ಈ ಐದು ಶುದ್ಧಾಧ್ವಗಳು	ಪರಾಪರಾವಸ್ಥೆ	ಇಲ್ಲಿ ಅಹಂ ಭಾವ ಇದಂಭಾವ ಎರಡೂ ಇರುತ್ತವೆ
ಮಾಯಾ — ಕಲಾ — ವಿದ್ಯಾ — ರಾಗ — ಕಾಲ — ನಿಯತಿ	ಮಾಯಾಕೆಳಗಿರುವ ತತ್ತ್ವಗಳು ಅಶುದ್ಧಾಧ್ವಗಳು. ಇವುಗಳಲ್ಲಿ ಮಾಯೆಯಿಂದ ನಿಯತಿವರೆಗೂ ಇರುವವುಗಳು ಷಟ್ಕಂಚುಕಗಳು	ಅಪರಾವಸ್ಥೆ	ಈ ೩೧ ತತ್ತ್ವಗಳು ಪೂರ್ತಿ ಇದಂ ಭಾವಾಪನ್ನವಾಗಿರುತ್ತವೆ

ತತ್ತ್ವದಲ್ಲಿ ಕೆಳಗಿನ ತತ್ತ್ವಗಳು ಅಡಗಿರುತ್ತವೆ. ಕೆಳಗಿನ ತತ್ತ್ವಗಳು ಮೇಲಿನ ತತ್ತ್ವಗಳ ಸಂಬಂಧವಿಲ್ಲದೆ ಇರಲಾರವು. ಒಂದು ವ್ಯಕ್ತಿಯ ಸಂಪುಟದಲ್ಲಿ ಮೂವತ್ತಾರು ತತ್ತ್ವಗಳು ಕೇಂದ್ರೀಕೃತವಾಗಿರುವುದು ಸೃಷ್ಟಿಯ ವೈಚಿತ್ರ್ಯ. ಇದನ್ನು ಪಿಂಡಾಂಡವೆಂದು ಹೇಳುವ ರೂಢಿಯಿದೆ. ಈ ಮಹಾ ವಿಶ್ವವೂ ಕೂಡ ಮೂವತ್ತಾರು ತತ್ತ್ವಗಳ ಸಂಪುಟವೇ ಆಗಿದೆ. ಸ್ಥೂಲವಾದ ವಿಶ್ವವು ಪ್ರಳಯವಾಗಿ ಸೂಕ್ಷ್ಮವಾದ ತತ್ತ್ವದಲ್ಲಿ ಸೇರುವುದುಂಟು. ಮರಳಿ ಈಶ್ವರೇಚ್ಛೆಯಿಂದ ಮಹಾವಿಶ್ವವು ಸೃಷ್ಟಿಯಾಗುತ್ತದೆ. ಈ ವಿಶ್ವಕ್ಕೆ ಬ್ರಹ್ಮಾಂಡ ವೆಂದು ಸಂಜ್ಞೆ. ಬ್ರಹ್ಮಾಂಡದಲ್ಲಿರುವ ಎಲ್ಲಾ ಅಂಶಗಳೂ ಪಿಂಡಾಂಡದಲ್ಲಿ ಸೂಕ್ಷ್ಮರೂಪ ದಿಂದಿರುತ್ತವೆ. ಪಿಂಡಾಂಡದಲ್ಲಿರುವ ಎಲ್ಲಾ ಅಂಶಗಳೂ ಬ್ರಹ್ಮಾಂಡದಲ್ಲಿ ವಿಸ್ತಾರವಾಗಿರು ತ್ತವೆ. ಹೀಗೆ ಮಹಾವಿಶ್ವದ ಸೃಷ್ಟಿ ಸ್ಥಿತಿ ಪ್ರಳಯಗಳು ಮೂವತ್ತಾರು ತತ್ತ್ವಗಳಿಂದ ನಡೆಯುತ್ತಿರುತ್ತವೆ. ಆ ಮೂವತ್ತಾರು ತತ್ತ್ವಗಳು ಈ ರೀತಿಯಲ್ಲಿ ಪರಿಗಣಿಸಲ್ಪಟ್ಟವೆ.

ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು.

ಜ್ಞಾನೇಂದ್ರಿಯಗಳು :– ಶ್ರವಣೇಂದ್ರಿಯ, ಸ್ಪರ್ಶನೇಂದ್ರಿಯ, ದರ್ಶನೇಂದ್ರಿಯ, ರಸ ನೇಂದ್ರಿಯ, ಘ್ರಾಣೇಂದ್ರಿಯ.

ಕರ್ಮೇಂದ್ರಿಯಗಳು :–ವಾಕ್, ಪಾಣಿ, ಪಾದ, ಪಾಯು, ಉಪಸ್ಥ.

ತನ್ಮಾತ್ರಗಳು :–ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ, ರಸತನಾತ್ರ, ಗಂಧ ತನ್ಮಾತ್ರ.

ಪಂಚಭೂತಗಳು :–ಪೃಥವಿ, ಅಪ್ಪು, ತೇಜಸ್ಸು, ವಾಯು, ಆಕಾಶ.

ಈ ಮೂವತ್ತಾರು ತತ್ತ್ವಗಳ ಸರಿಯಾದ ತಿಳಿವಳಿಕೆಯಿಂದ ಪಿಂಡಾಂಡ ಮತ್ತು ಬ್ರಹ್ಮಾಂಡಗಳ ನಿಜಸ್ಥಿತಿಯು ಅರಿವಾಗುತ್ತದೆ. ಸಾಮಾನ್ಯ ಮನುಷ್ಯರಿಗೆ ಈ ತತ್ತ್ವಗಳ ಅರಿವು ವಿಶದವಾಗಿ ಮೊದಮೊದಲು ಆಗದಿರಬಹುದು. ಈ ಕೆಳಗಿನ ವಿವರಗಳನ್ನು ತಿಳಿಯುವುದರಿಂದ ಸುಲಭಗ್ರಾಹ್ಯವಾಗುವುದು. ಪೃಥವ್ಯಾದಿ ಪಂಚಭೂತಗಳೂ ಚಕ್ಷು ರಾದಿ ಇಂದ್ರಿಯಗಳೂ ಎಲ್ಲರ ಅನುಭವದಲ್ಲಿವೆ. ಹೀಗೆ ತಿಳಿದಿರುವ ಮತ್ತು ತಿಳಿಯದಿರುವ ತತ್ತ್ವಗಳನ್ನು ತನ್ನ ಸ್ವಪ್ರಯತ್ನದಿಂದಲೂ ಭಾವನಾಬಲದಿಂದಲೂ ವಿಶದವಾಗಿ ಸಾಕ್ಷಾತ್ಕರಿಸಿಕೊಳ್ಳಬೇಕು. ಪ್ರಪಂಚದಲ್ಲಿ ನಮ್ಮ ತಿಳಿವಳಿಕೆಯು ಭಾವರೂಪವಾಗಿಯೂ ಅಭಾವರೂಪವಾಗಿಯೂ ಇದೆ. ಭಾವರೂಪವೆಂದರೆ ಈ ಪದಾರ್ಥವಿದೆ, ಈ ಅಂಶ ನನಗೆ ತಿಳಿದಿದೆ ಅನ್ನುವ ತಿಳಿವಳಿಕೆ. ಅಭಾವರೂಪವೆಂದರೆ ಈ ಪದಾರ್ಥವಿಲ್ಲ, ಈ ವಿಷಯ ನನಗೆ ತಿಳಿದಿಲ್ಲ ಎಂಬ ತಿಳಿವಳಿಕೆ. ಭಾವರೂಪವಾದ ಇದೆ ಎಂಬ ತಿಳಿವಳಿಕೆ ಎಷ್ಟು ಪ್ರಯೋಜಕವೋ ಅಭಾವರೂಪವಾದ ಇಲ್ಲ ಎಂಬ ತಿಳಿವಳಿಕೆಯು ಅಷ್ಟೆ ಮಹತ್ತ್ವವುಳ್ಳ ದ್ದಾಗಿರುತ್ತದೆ. ಹೀಗೆ ಇಲ್ಲ ಎಂಬ ತಿಳಿವಳಿಕೆಯು ಮುಂದಿನ ವ್ಯವಹಾರಕ್ಕೆ ಸಹಕಾರಿ ಯಾಗಿರುವುದರಿಂದ ಅಭಾವ ವ್ಯವಹಾರವು ಲೌಕಿಕ ವಿಷಯಗಳಲ್ಲಿಯೂ ಅಲೌಕಿಕ

ವಿಷಯಗಳಲ್ಲಿಯೂ ಮುಖ್ಯವಾದದ್ದಾಗಿರುತ್ತದೆ. ಅಲೌಕಿಕ ವಿಷಯಗಳಲ್ಲಿ ಅಭಾವ ಪದಾರ್ಥ ಎಂದರೆ ಅನುಮಾನದಿಂದ ಇದೆ ಅಂತ ತಿಳಿದರೂ ದೇಶ, ಕಾಲ, ಆಕಾರ ವಿಶಿಷ್ಟವಾಗಿ ತಿಳಿಯಲಿಲ್ಲ ಎಂದರ್ಥ. ಲೌಕಿಕ ವ್ಯವಹಾರದಲ್ಲಿಯೂ ಇಲ್ಲ ಎಂದರೆ ಆ ಪದಾರ್ಥವು ನಿರ್ದಿಷ್ಟ ಸಮಯದಲ್ಲಿ ಆ ಪ್ರದೇಶದಲ್ಲಿ ಸಿದ್ಧವಾದ ಆಕಾರದಿಂದ ಇಲ್ಲವೆಂದರ್ಥ. ಇದು ನಮ್ಮೆಲ್ಲರ ಅನುಭವದಲ್ಲಿದ್ದರೂ ನಮ್ಮ ತಿಳಿವಳಿಕೆಯ ಸ್ವರೂಪ ಮತ್ತು ಸ್ವಭಾವಗಳನ್ನು ವಿವೇಚಿಸದಿರುವುದರಿಂದ ನಮ್ಮಲ್ಲಿ ಇಲ್ಲದೆ ಇರುವುದನ್ನು ಇದೆಯೆಂದೂ ಇರುವುದನ್ನು ಇಲ್ಲವೆಂದೂ ತಿಳಿಯುತ್ತೇವೆ. ಇದನ್ನೇ ಅಜ್ಞಾನ, ಅಖ್ಯಾತಿ, ಮಿಥ್ಯಾಜ್ಞಾನ ಇವೇ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಈ ಬಗೆಯ ತಿಳಿವಳಿಕೆಯೇ ರಾಗ ದ್ವೇಷ ಮೋಹಗಳಿಗೆ ಕಾರಣವಾಗುತ್ತದೆ. ನಮ್ಮ ಅನುಭವದಲ್ಲಿಯೇ ಅನೇಕ ಭಾವನೆಗಳು ಉದ್ರಿಕ್ತವಾಗಿ ಸ್ವಲ್ಪಕಾಲವಿದ್ದು ತಿರುಗಿ ಸೂಕ್ಷ್ಮವಾಗಿ ಅಭಾವರೂಪವನ್ನು ಪಡೆಯುತ್ತವೆ. ಆಗ ಈ ಭಾವನೆಗಳು ಸಂಸ್ಕಾರ ರೂಪದಿಂದಿದ್ದು ಕಾಲಾಂತರದಲ್ಲಿಯೋ ದೇಶಾಂತರದಲ್ಲಿಯೋ ಅಭಿವ್ಯಕ್ತವಾಗುವುದು ನಮ್ಮೆಲ್ಲರ ಅನುಭವದಲ್ಲಿದೆ.

ಸಂಪೂರ್ಣವಾಗಿ ತತ್ತ್ವಸಾಕ್ಷಾತ್ಕಾರವನ್ನು ಪಡೆದಿರುವ ಜ್ಞಾನಿಗಳು ತತ್ತ್ವಗಳನ್ನು ಮೂವತ್ತಾರು ಎಂದು ನಿರೂಪಿಸಿರುತ್ತಾರೆ. ಪ್ರಕೃತದಲ್ಲಿ ನಮಗೆ ಆ ಮೂವತ್ತಾರು ತತ್ತ್ವಗಳು ವಿಶದವಾಗಿ ತೋರದಿದ್ದರೂ ಪಿಂಡಾಂಡದಲ್ಲಿಯೇ ಎಲ್ಲಾ ಅಂಶಗಳೂ ಅಡಗಿರುವುದೆಂಬ ತಿಳಿವಳಿಕೆಯಿಂದ ಅನುಭವಕ್ಕೆ ಬರುತ್ತಿರುವ ಕೆಲವು ತತ್ತ್ವಗಳ ಸಹಾಯದಿಂದ ಅನುಭವಕ್ಕೆ ಬಾರದಿರುವ ತತ್ತ್ವಗಳನ್ನು ಸಾಕ್ಷಾತ್ಕರಿಸಬಹುದು. ಇದಕ್ಕೆ ಕೆಲವು ನಿಯಮಗಳನ್ನೂ ಉಪಾಯಗಳನ್ನೂ ಸೂಚಿಸಿರುತ್ತಾರೆ. 'ದೃಷ್ಟೇನ ಅದೃಷ್ಟ ಸಿದ್ಧಿಃ' ತಿಳಿದದ್ದರಿಂದ ತಿಳಿಯದೇ ಇರುವುದನ್ನು ತಿಳಿಯಬೇಕೆಂಬ ನಿಯಮದಂತೆ ತತ್ತ್ವಸಾಕ್ಷಾತ್ಕಾರವನ್ನು ಅನುಮಾನದಿಂದಲೂ ಭಾವನಾಬಲದಿಂದಲೂ ಸಾಧಿಸಬೇಕು. ಮೊದಲು ತಿಳಿವಳಿಕೆ, ಅನಂತರ ಇಚ್ಛೆ, ತರುವಾಯ ಪ್ರಯತ್ನ, ಕೊನೆಯದಾಗಿ ಸಾಕ್ಷಾತ್ಕಾರ ಈ ರೀತಿಯಾಗಿ ಮೊದಲು ನಮಗೆ ಶಾಸ್ತ್ರದಿಂದ ತಿಳಿವಳಿಕೆಯುಂಟಾಗುತ್ತದೆ. ನಮ್ಮ ಸಂಸ್ಕಾರಾನುಗುಣವಾಗಿ ಇಚ್ಛೆಯುಂಟಾಗುತ್ತದೆ. ನಮ್ಮ ಧೈರ್ಯ ಶ್ರದ್ಧೆಗಳಿಗನುಸಾರವಾಗಿ ಪ್ರಯತ್ನ ನಡೆಯುತ್ತದೆ. ನಮ್ಮ ಪ್ರಯತ್ನದ ವೈಶಿಷ್ಟ್ಯಕ್ಕನುಸಾರವಾಗಿ ಫಲಪ್ರಾಪ್ತಿಯಾಗುತ್ತದೆ. ಈ ಕ್ರಮದಲ್ಲಿ ನಾವು ತತ್ತ್ವಗಳನ್ನು ವಿವೇಚಿಸಬೇಕಾಗುತ್ತದೆ.

ಈ ಮೂವತ್ತಾರು ತತ್ತ್ವಗಳಲ್ಲಿ ಮೊದಲಿನ ೫ ತತ್ತ್ವಗಳು ಶುದ್ಧಾಧ್ವಗಳೆಂತಲೂ ಉಳಿದವು ಅಶುದ್ಧಾಧ್ವಗಳೆಂತಲೂ ಪರಿಗಣಿಸಲ್ಪಟ್ಟಿವೆ. ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ–ಎಂಬಿವೇ ಶುದ್ಧಾಧ್ವಗಳು. ಪರಶಿವನು ತನ್ನ ಸ್ವರೂಪಶಕ್ತಿಗಳಾದ ಚಿತ್‌ಶಕ್ತಿ, ನಿರ್ವೃತಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳನ್ನೇ ಶುದ್ಧಾಧ್ವತತ್ತ್ವಗಳ ರೀತಿಯಲ್ಲಿ ಪ್ರಕಾಶಗೊಳಿಸುತ್ತಾನೆ. ಸರ್ವದೇಹಿಗಳ ಅಂತರಂಗದಲ್ಲಿ ಚಿದ್ರೂಪವಾಗಿ ಸರ್ವತತ್ತ್ವಗಳಿಗೂ ಮೀರಿದುದಾದ ಯಾವ ಚೈತನ್ಯವುಂಟೋ ಅವೇ ಶಿವತತ್ತ್ವ.

ನಾನು ವಿಶ್ವವಾಗುತ್ತೇನೆಂದು ಭಾವಿಸಿದ ಆನಂದೋದ್ರೇಕದಲ್ಲಿ ಆದ ಉಚ್ಛೂನತಾರೂಪ ಅಭಿನಿವೇಶನವೇ ಶಕ್ತಿತತ್ತ್ವ. ಇದೇ ಬೀಜಭೂಮಿಯಾದ ಶಕ್ತ್ಯವಸ್ಥೆ. ಇಲ್ಲಿಯೇ ಇಚ್ಛಾಜ್ಞಾನಶಕ್ತಿಗಳ ಸ್ಫುರಣ. ಇನ್ನುಳಿದ ಸದಾಶಿವ, ಈಶ್ವರ, ಶುದ್ಧವಿದ್ಯಾ ಎಂಬ ತತ್ತ್ವಗಳಲ್ಲಿ ಗ್ರಾಹ್ಯಗ್ರಾಹಕಗಳ ನಿಷ್ಪತ್ತಿ. ಗ್ರಾಹಕನಾದ ಜೀವಾತ್ಮನಿಗೆ ಗ್ರಾಹ್ಯವಾದ ವಿಶ್ವವೆಲ್ಲಾ ಪ್ರಮೇಯ.

ಮೂವತ್ತಾರು ತತ್ತ್ವಗಳ ಸ್ವರೂಪ ನಿರೂಪಣೆಯು ಈ ಮುಂದೆ ವಿವರಿಸಿರುವ ರೀತಿಯಲ್ಲಿದೆ.

ಶುದ್ಧಾಧ್ವಗಳು—ಶಿವತತ್ತ್ವ:—ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳಲ್ಲಿ ಜ್ಞಾನ, ಇಚ್ಛಾ, ಕ್ರಿಯಾಶಕ್ತಿಗಳು ಸಮಾನವಾಗಿದ್ದು ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತವಾದ ಚಿದ್ರೂಪದಿಂದಿರುವವನೇ ಶಿವನು. ಈ ಸ್ಥಿತಿಯಲ್ಲಿ 'ಅಹಂ' 'ಇದಂ' ಎಂಬ ಭೇದವಿಲ್ಲ. ಕರ್ತೃ, ಕರ್ಮ, ಕ್ರಿಯಾರೂಪವಾದ ವ್ಯತ್ಯಾಸ ಗಳಿಲ್ಲ. ಮುಂದೆ ಸಪ್ತಪ್ರಮಾತೃಗಳ ರೂಪದಲ್ಲಿ ಬದಲಾವಣೆಯಾಗುವ ಕಾಲದಲ್ಲುಂ ಟಾಗುವ ವ್ಯತ್ಯಾಸಗಳಿಲ್ಲ. ಅಹಂಕಾರವೂ ಇಲ್ಲ. ಇದು ಪೂರ್ಣವಾದ ಚಿದ್ರೂಪ ವಾಗಿರುತ್ತದೆ. ಇದು ವಿಶ್ವಾತ್ಮಕವಾಗಿ ಮಿಕ್ಕ ೩೫ ತತ್ತ್ವಗಳನ್ನೊಳಗೊಂಡಿದೆ. ಇಲ್ಲಿನ ಶಿವನಿಗೆ 'ಅನಾಶ್ರಿತ ಶಿವ'ನೆಂದು ಹೇಳುತ್ತಾರೆ.

ಸ್ವಜ್ಯೋತಿಷ್ಟ್ವಂ ಶಿವಂ ತತ್ತ್ವಂ
ದೃಕ್ಕ್ರಿಯೆ ಶಕ್ತಿರಿತ್ಯುಚ್ಯತೆ
ಸರ್ವಜ್ಞಾನ ಕ್ರಿಯಾವತ್ತ್ವಾ
ಯೋಗ್ಯತಾಸ್ಯಾತ್ ಸದಾಶಿವಃ
ಪ್ರೇರ್ಯತ್ವಂ ಐಶ್ವರಂ ತತ್ತ್ವಂ
ತದ್ವಾರಾ ಪ್ರೇಷಣಾಯತಃ
ಶಿವಶಾಸ್ತ್ರಾದಿ ಬೋಧ್ಯತ್ವಂ
ವಿದ್ಯಾಶ್ರದ್ಧೇಹ ಕೀರ್ತಿತಾ
ಇತ್ಥಂ ಆತ್ಮನ್ಯವಸ್ಥಾಭಿ
ರೇತಾಭಿಃ ತತ್ತ್ವಕಲ್ಪನಾ

ಶಕ್ತಿತತ್ತ್ವ : ಪ್ರಶಾಂತವಾದ ಚಿತ್ಸಮುದ್ರದಲ್ಲಿ 'ಈಷತ್ಸ್ಫುರತ್ತಾ' ಅಂದರೆ ಸ್ವಲ್ಪ ಚಲನವಾಗಿ ಜ್ಞಾನ, ಇಚ್ಛಾ, ಕ್ರಿಯಾಶಕ್ತಿಗಳು ಜ್ವಾಲೆಯಿಂದ ಹೊರಟ ಕಾಂತಿ ಯಂತೆ ಹೊರಹೊಮ್ಮಿದರೆ ಅದು ಶಕ್ತಿತತ್ತ್ವವಾಗುತ್ತದೆ. ಶಿವತತ್ತ್ವದಲ್ಲಿ ಚಿತ್‌ಶಕ್ತಿಯು ಪ್ರಧಾನವಾಗಿರುತ್ತವೆ. ಶಿವತತ್ತ್ವದಿಂದ ಶಕ್ತಿತತ್ತ್ವವು ಸಂಪೂರ್ಣವಾಗಿ ಭಿನ್ನವಲ್ಲ. 'ದೀಪಪ್ರಭಾ' ನ್ಯಾಯದಂತೆ ಒಂದನ್ನೊಂದು ಬಿಡದೆ ಇರುತ್ತದೆ. ಚಿಚ್ಛಕ್ತಿಯಿಲ್ಲದೆ ಆನಂದ ಶಕ್ತಿಯಿಲ್ಲ. ಒಂದಕ್ಕೊಂದು ಪರಸ್ಪರ ಅಧೀನ.

ಸದಾಶಿವ ತತ್ತ್ವ: ಇದು ಮೂರನೆಯ ತತ್ತ್ವ. ಇಲ್ಲಿ ಹಿಂದಿನ ಶಿವಶಕ್ತಿತತ್ತ್ವ ಗಳಿಗಿಂತ ಮುಖ್ಯವಾದ ಬದಲಾವಣೆ ಎಂದರೆ 'ಅಹಂತಾಚ್ಛಾದಿತ ಅಸ್ಪಷ್ಟ ಇದಂತಾ' ಎಂದು ಶಾಸ್ತ್ರದಲ್ಲಿ ಹೇಳಿದೆ. 'ಅಸ್ಪಷ್ಟ ಇದಂತಾ' ಅಂದರೆ ಸ್ವರೂಪಾಭಿನ್ನವಾಗಿರುವ ವಿಶ್ವಗೌಣವಾದ ಗ್ರಾಹ್ಯತ್ವ. 'ಅಹಂತಾ' ಅಂದರೆ ಗ್ರಾಹಕತ್ವ. ಇಲ್ಲಿ ಗ್ರಾಹಕಭಾವವು ಪ್ರಧಾನವಾಗಿದ್ದು ಗ್ರಾಹ್ಯಭಾವವು ಪರಾಪರ ವಿಶ್ವರೂಪವಾಗಿ ಗೌಣವಾಗಿರುತ್ತದೆ. ಅಸಂಖ್ಯಾತರಾದ ಪ್ರಮಾತೃಗಳು (ಜೀವರು) ಇಲ್ಲಿಂದ ಮೊದಲಾಗುತ್ತಾರೆ. ಈ ತತ್ತ್ವ ದಲ್ಲಿರುವ ಪ್ರಮಾತೃಗಳಿಗೆ 'ಮಂತ್ರ ಮಹೇಶ್ವರ'ರೆಂದು ಹೆಸರು.

ಈಶ್ವರ ತತ್ತ್ವ: ಈ ತತ್ತ್ವದಲ್ಲಿ ಗ್ರಾಹ್ಯಗ್ರಾಹಕ ಭಾವಗಳು ಸಮಾನವಾಗಿರು ತ್ತವೆ. 'ಉದ್ರಿಕ್ತ ಕ್ರಿಯಾಶಕ್ತಿಃ ಈಶ್ವರಃ' ಎಂದು 'ಶಿವದೃಷ್ಟಿ'ಯಲ್ಲಿ ಹೇಳಿದೆ. ಈಶ್ವರ ಅಂದರೆ ಐಶ್ವರ್ಯಭಾವವುಳ್ಳವನು. ಈ ಕ್ರಿಯಾಶಕ್ತಿಯೇ ಮುಂದಿನ ಎಲ್ಲಾ ಸೃಷ್ಟಿಗೂ ಕಾರಣ. ಈ ಕ್ರಿಯಾಶಕ್ತಿಯು ಈಶ್ವರತತ್ತ್ವದಲ್ಲಿ ವಿಶಿಷ್ಟವಾಗಿರುತ್ತದೆ ಮತ್ತು ಮುಂದಿನ ತತ್ತ್ವಗಳ ಸೃಷ್ಟಿಗೆ ಕಾರಣವಾಗುತ್ತದೆ. ಇಲ್ಲಿಯೇ ಇಚ್ಛಾಜ್ಞಾನ ಶಕ್ತಿಗಳು ವಿಭಿನ್ನವಾಗಿ ರೂಪುಗೊಳ್ಳುತ್ತವೆ. ಈ ತತ್ತ್ವದಲ್ಲಿರುವ ಪ್ರಮಾತೃವರ್ಗಕ್ಕೆ 'ಮಂತ್ರೇಶ್ವರ'ರೆಂದು ಹೆಸರು. ಇಲ್ಲಿ 'ನಾನೇ ಇದು' ಎಂಬ (ಅಹಂ ಇದಂ) ಸಮತಾ ಭಾವನೆ ಇರುತ್ತದೆ.

ಶುದ್ಧವಿದ್ಯಾತತ್ತ್ವ: ಇಲ್ಲಿ ಗ್ರಾಹ್ಯಗ್ರಾಹಕ ಭಾವಗಳು ಸಾಮಾನಾಧಿಕರಣ್ಯ ದಿಂದಿರುತ್ತವೆ. ಇಲ್ಲಿ ಭೇದಪ್ರಧಾನವಾದ ಗ್ರಾಹ್ಯಭಾವವು ಗ್ರಾಹಕ ನಿಷ್ಪತ್ತಿಯು ತೋರಿ ಬರುತ್ತವೆ. ಅಂದರೆ ನಾನು, ಇದು—ಎಂಬ ಎರಡನ್ನು ಕಾಣುವ ಅರಿವಿನ ಸ್ಥಿತಿ ಇರುತ್ತದೆ. ಹೀಗೆ ಕರ್ತೃ, ಕರಣ, ಕ್ರಿಯಾರೂಪದಲ್ಲಿ ಮಹೇಶ್ವರನೇ ಚಿದ್ರೂಪಸ್ಥಿತಿಯಲ್ಲಿ ಪ್ರಕಾಶ ಗೊಳ್ಳುತ್ತಾನೆ. ಈ ತತ್ತ್ವದಲ್ಲಿ ಮುಂದಿನ ವಿಶ್ವವು ಭೇದ ಪ್ರಧಾನವಾಗಿದ್ದು ಗ್ರಾಹಕರಿಗೆ ಪ್ರಮೇಯವಾಗಿರುತ್ತದೆ. ಇಲ್ಲಿರುವ ಪ್ರಮಾತೃಗಳಿಗೆ ಭೇದವೇ ಪ್ರಧಾನವಾಗಿರುವ ವಿಶ್ವವೆಲ್ಲಾ ಪ್ರಮೇಯವಾಗಿರುತ್ತದೆ. ಅಂದರೆ ಇಲ್ಲಿನ ಪ್ರಮಾತೃಗಳು 'ಭಿನ್ನವೇದ್ಯ ಪ್ರಥಾತ್ಮಕ'ವಾದ ವಿಶ್ವವನ್ನೆಲ್ಲಾ ತಿಳಿಯುವವರಾಗುತ್ತಾರೆ. ಇಲ್ಲಿನ ಪ್ರಮಾತೃಗಳಿಗೆ 'ಮಂತ್ರ'ರೆಂದು ಹೆಸರು.

ಈ ಐದು ತತ್ತ್ವಗಳಿಗೂ ಶುದ್ಧವಿದ್ಯಾತತ್ತ್ವಗಳೆಂದು ಹೆಸರು. ಇದರಲ್ಲಿ ಮೊದಲನೆಯದಾದ ಶಿವತತ್ತ್ವದಲ್ಲಿ ಶುದ್ಧಚಿದ್ರೂಪವಾದ ಪೂರ್ಣಾಹಂತಾನುಭವ. ಎರಡನೆಯ ಶಕ್ತಿತತ್ತ್ವದಲ್ಲಿ ಇಚ್ಛಾಜ್ಞಾನ ಕ್ರಿಯಾಶಕ್ತಿಗಳ ಸ್ಫುರಣ. ಮೂರನೆಯ ಸದಾಶಿವತತ್ತ್ವದಲ್ಲಿ ಗ್ರಾಹ್ಯಗ್ರಾಹಕಗಳ ನಿಷ್ಪತ್ತಿ. ನಾಲ್ಕನೆಯ ಈಶ್ವರತತ್ತ್ವದಲ್ಲಿ ಗ್ರಾಹ್ಯಗ್ರಾಹಕಗಳ ಸಮಪ್ರಧಾನತಾ. ಐದನೆಯ ಶುದ್ಧವಿದ್ಯಾತತ್ತ್ವದಲ್ಲಿ ಭೇದ ಪ್ರಧಾನವಾದ ಗ್ರಾಹ್ಯಭಾವವೂ ಗ್ರಾಹಕನಿಷ್ಪತ್ತಿಯೂ ತೋರಿಬರುತ್ತವೆ. ಆ ಗ್ರಾಹಕರಿಗೆ ವಿಶ್ವವೆಲ್ಲಾ ಪ್ರಮೇಯ.

ಈಶ್ವರೋ ಬಹಿರುನ್ಮೇಷೋಽಂತಸ್ಸದಾಶಿವಃ ।
ಸಾಮಾನಾಧಿಕರಣ್ಯಂಚ ಸದ್ವಿದ್ಯಾಹಮಿದಂ ಧಿಯೋಃ ॥

ಅಶುದ್ಧಾಧ್ವಗಳು : ಇವುಗಳಲ್ಲಿ ಮೊದಲನೆಯ ತತ್ತ್ವ—**ಮಾಯೆ**. ಇದು ಮಾತಿ ಯಾತಿ ಇತಿ ಮಾಯಾ–ಮಾತಿ ಅಂದರೆ 'ವಿಶ್ವಂ ಆತ್ಮಸಾತ್ಕರೋತಿ ಪ್ರಳಯೆ' ಪ್ರಳಯಕಾಲದಲ್ಲಿ ವಿಶ್ವವನ್ನು ತನ್ನಲ್ಲಿ ಉಪಸಂಹರಿಸಿಕೊಳ್ಳುತ್ತದೆ. ಯಾತಿ ಅಂದರೆ 'ವಿಸೃಜತಿ ಸೃಷ್ಟೌ' ವಿಶ್ವವನ್ನು ಸೃಷ್ಟಿಮಾಡುತ್ತದೆ. ಮಾಯೆಯು ಅಚಿದ್ರೂಪವಾದ ಶರೀರಾದಿ ವಿಷಯಗಳಲ್ಲಿ ನಾನು ಎಂಬ ಪ್ರಮಾತೃತ್ವ ಅಭಿಮಾನವನ್ನುಂಟುಮಾಡುತ್ತದೆ. ಭಾವಗಳು ಅಥವಾ ಪದಾರ್ಥಗಳು ಚಿನ್ಮಯಗಳೇ ಆಗಿದ್ದರೂ ಇವುಗಳೆಲ್ಲಾ ಬೇರೆ ಬೇರೆಯೆಂದು ಅಭಿಮಾನವನ್ನು ಹುಟ್ಟಿಸುತ್ತದೆ. ಎಲ್ಲಾ ವಿಧದಲ್ಲಿಯೂ ಪದಾರ್ಥಗಳ ತತ್ತ್ವ ಸ್ವರೂಪವನ್ನು ಮರೆಸಿ ಭೇದಜ್ಞಾನವನ್ನುಂಟುಮಾಡುತ್ತದೆ. ಚಿದ್ರೂಪವನ್ನು ಭಿನ್ನವಾಗಿಯೂ ಚಿತ್ತನ್ನು ಅಚಿತ್ತನ್ನಾಗಿಯೂ ತೋರಿಸುತ್ತದೆ. ಇದು ಪರಮೇಶ್ವರನ ಅಘಟನ ಘಟನಾ ಸಾಮರ್ಥ್ಯ. ಇದು ಕೆಳಗಿನ ೩೦ ತತ್ತ್ವಗಳನ್ನು ಆವರಿಸಿರುತ್ತದೆ. ಇಲ್ಲಿ ಮಾಯೆ ಎಂಬುದಕ್ಕೆ ಮಿಥ್ಯೆ ಎಂದರ್ಥವಲ್ಲ. ಮಾಯೆಯು ಪರಮೇಶ್ವರನ ಶಕ್ತಿರೂಪ. ನಾನು ಎಂಬ ಅಹಂ ವ್ಯವಹಾರವು ಈ ಮಾಯೆಯ ಪ್ರಭಾವವೇ. ಶಿವನ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಎಂಬ ಶಕ್ತಿಗಳು ಸಂಕೋಚವಾಗಿ ಕ್ರಮೇಣ ಕಲಾ, ವಿದ್ಯಾ, ರಾಗ, ಕಾಲ, ನಿಯತಿ ಎಂಬ ರೂಪಗಳಿಂದ ಪಂಚಕಂಚುಕಗಳಾಗಿ ಪರಿಣಮಿಸಿ ಜೀವಾತ್ಮನನ್ನು ಆವರಿಸಿರುವುದು ಕೂಡ ಮಾಯೆಯ ಪ್ರಭಾವವೇ. ನಿದ್ದೆಯಲ್ಲಿಯೂ ಸಮಾಧಿಯಲ್ಲಿಯೂ ತಾನು ಇಲ್ಲವೆಂಬಂತಹ ಸ್ಥಿತಿಯಿದ್ದರೂ ಆಕಾಶದಂತೆ ವೇದ್ಯಭಾವದಿಂದ ನಾನು ಎನ್ನುವುದು ತೋರುತ್ತದೆ. ಶೂನ್ಯವಾಗಿ ಆಕಾಶದ ಹಾಗೆ ತಿಳಿಯಲ್ಪಡತಕ್ಕ ಸ್ಥಿತಿಯಿಂದ ನಾನು ಎಂದು ತೋರುತ್ತದೆ. ಉಚ್ಛ್ವಾಸನಿಶ್ವಾಸಗಳಲ್ಲಿ ನಾನು ಉಸಿರು ಬಿಡುತ್ತೇನೆ ಎಂಬ ಅಭಿಮಾನ ಬರುತ್ತದೆ. ನಾನು ಸಣ್ಣಗಾಗಿದ್ದೇನೆ, ದಪ್ಪಗಾಗಿದ್ದೇನೆ ಎಂಬುದರಲ್ಲಿ ಶರೀರವೇ ನಾನು ಎಂದು ತೋರುತ್ತದೆ. ಆದುದರಿಂದ ಒಳಗೂ ಹೊರಗೂ ಇರುವ ತಿಳಿವಳಿಕೆಗಳು ಭಾವಗಳು ಅಥವಾ ಪದಾರ್ಥಗಳು ಚಿನ್ಮಾತ್ರಸಾರಗಳಾಗಿಯೇ ಇದ್ದರೂ ಬೇರೆ ಬೇರೆಯಾಗಿ ತೋರುತ್ತವೆ.

ತಸ್ಯೈಶ್ವರ್ಯ ಸ್ವಭಾವಸ್ಯ ಪಶುಭಾವ ಪ್ರಕಾಶಿಕಾ ।
ವಿದ್ಯಾಶಕ್ತಿಃ ತಿರೋಧಾನಕರೀ ಮಾಯಾಭಿಧಾ ಪುನಃ ।

(ಈಶ್ವರ ಪ್ರತ್ಯಭಿಜ್ಞಾ ೩–೭)

ಭೇದೇ ತ್ವೈಕರಸೇಭಾತೆ ಅಹಂತಯಾ ಅನಾತ್ಮನೀಕ್ಷಿತೆ ।
ಶೂನ್ಯೆ ಬುದ್ಧೌ ಶರೀರೆ ವಾ ಮಾಯಾ ಶಕ್ತಿಃ ವಿಜೃಂಭತೆ ॥

(ಈಶ್ವರ ಪ್ರತ್ಯಭಿಜ್ಞಾ ೩–೮)

ಶುದ್ಧ ಚಿನ್ಮಾತ್ರಾವಸ್ಥೆಯಲ್ಲಿ ಕೇವಲ ಪ್ರಮಾತೃವಾಗಿರುತ್ತಾನೆ. ಕಲಾದಿ ಪಂಚಕದಿಂದ ಕೂಡಿದರೆ ಪ್ರಮಾತೃ ಪ್ರಮೇಯ ಎರಡೂ ಆಗುವನು. ಮೇಲಿನ ತತ್ತ್ವವು ಕೆಳಗಿನ ತತ್ತ್ವಗಳನ್ನೆಲ್ಲಾ ಆವರಿಸಿರುತ್ತದೆಂಬುದು ನಿಯಮ. ಹಾಗೆಯೇ ಮಾಯೆಯು ಕೆಳಗಿನ ಮಿಕ್ಕ ಮೂವತ್ತು ತತ್ತ್ವಗಳನ್ನಾವರಿಸಿರುತ್ತದೆ. ಬೇರೆ ಸಂಪ್ರದಾಯಗಳಂತೆ ಇಲ್ಲಿ ಮಾಯೆ ಎಂಬುದಕ್ಕೆ ಮಿಥ್ಯೆ ಎಂಬರ್ಥವಿಲ್ಲ. ಮಾಯೆಯು ಜ್ಞಾನಸಂಕೋಚಕ್ಕೆ ಸಾಕ್ಷಾತ್ಕಾರಣವಾಗಿಯೂ ದೇಹ ಇಂದ್ರಿಯಗಳ ಮೂಲಕ ಪರಂಪರಾ ಕಾರಣವಾಗಿಯೂ ಇದೆ ಎಂದು ಗೊತ್ತಾಗುತ್ತದೆ. ಇದು ಪರಮೇಶ್ವರನ ಶಕ್ತಿ. ಮೂವತ್ತು ತತ್ತ್ವಗಳ ರೂಪವನ್ನು ಪಡೆಯುವ ಮಹತ್ವವುಳ್ಳಂಥಾದ್ದು. ಮಾಯೆಯನ್ನು ದಾಟಬೇಕೆನ್ನುವ ಪ್ರಾಚೀನರ ನುಡಿಗಳು ಶುದ್ಧವಿದ್ಯಾಪದಪ್ರಾಪ್ತಿಯಾಗಬೇಕೆಂದು ಸೂಚಿಸುತ್ತವೆ. ಮಾಯೆಯ ಮೇಲೆ ಶುದ್ಧವಿದ್ಯಾತತ್ತ್ವದ ಕೆಳಗಿರುವ ಅಂತರಸ್ಥಿತಿಯಲ್ಲಿ 'ವಿಜ್ಞಾನಾಕಲ' ರೆಂಬ ಪ್ರಮಾತೃವರ್ಗವಿರುತ್ತದೆ.

ಪಂಚಕಂಚುಕಗಳು—ಕಲಾ :—ಇದು ಕಿಂಚಿತ್ಕರ್ತೃತ್ವವನ್ನು ತೋರಿಸುತ್ತದೆ.

ವಿದ್ಯಾ :—ವಿದ್ಯೆಯು ಪ್ರಮಾತೃವಿನ ಕಿಂಚಿಜ್ಞತ್ವವನ್ನು ತೋರ್ಪಡಿಸುತ್ತಿರುವುದಾಗಿದೆ. ಇದು ಪ್ರಮಾತೃ ಪ್ರಮೇಯಗಳೆರಡರಲ್ಲೂ ತೋರುತ್ತಿರುತ್ತದೆ.

ರಾಗ :—ಇದು ನನಗೆ ಬೇಕು ಎಂಬ ಆಸೆ ಹುಟ್ಟುವುದು. "ನಿತ್ಯ ತೃಪ್ತಿತ್ವಗುಣ ಸಂಕೋಚರಾಗ" ಇದರಿಂದ ಜೀವನು ವಿಷಯಗಳಲ್ಲಿ ಅನುರಾಗ ಹೊಂದುತ್ತಾನೆ.

ಕಾಲ :—ಇದು ಪ್ರಮಾತೃವಿನಲ್ಲಿದ್ದು ಪ್ರಮೇಯದಲ್ಲಿಯೂ ಪ್ರಸರಿಸುತ್ತದೆ. ನಾನು ಸಣ್ಣಗಿದ್ದೆ ಈಗ ದಪ್ಪಗಾಗಿದ್ದೇನೆ, ನನಗೆ ವಯಸ್ಸಾಯಿತು ಮುಂತಾದ ವ್ಯವಹಾರಗಳು 'ನಾನು' ಎಂಬ ಪ್ರಮಾತೃಗೇಗೂ ಭೂತರೂಪವಾದ ಸಣ್ಣದಪ್ಪವಾದ ಶರೀರಕ್ಕೂ ಅನ್ವಯಿಸುತ್ತದೆ. ಸ್ವಸ್ವರೂಪದಿಂದ ಇವನು ಕಾಲಾಧೀನನಾಗದಿದ್ದರೂ ಮಾಯಾಪ್ರಭಾವದಿಂದ ಇವನು ಕಾಲಕ್ಕೆ ಅಧೀನನಾಗಿರುವವನಂತೆ ವ್ಯವಹಾರ ಮಾಡುತ್ತಾನೆ.

ನಿಯತಿ :—ರಾಗವು ಪಾರವಿಲ್ಲದೆ ಪ್ರಸರಿಸಿದರೂ ಕಾರ್ಯಕಾರಣ ಭಾವಗಳಿಗನುಸಾರವಾಗಿ ಫಲಪ್ರಾಪ್ತಿಯನ್ನುಂಟುಮಾಡುವುದೇ ನಿಯತಿ. ಸ್ವಾತಂತ್ರ್ಯಶಕ್ತಿಯನ್ನು ನಿಯಮನಗೊಳಿಸುವ ತತ್ತ್ವ.

> ಕಲಾ ಕರ್ತೃತ್ವ ಸಾಮರ್ಥ್ಯಂ ಕಿಂಚಿನ್ಮಾತ್ರಂ ಪ್ರಕೀರ್ತಿತಂ
> ತಾದೃಶಂ ಜ್ಞಾನ ಸಾಮರ್ಥ್ಯಂ ವಿದ್ಯಾತತ್ತ್ವಂ ಇತಿ ಸ್ಮೃತಃ
> ಇದಮೇವ ಇಷ್ಟಮಸ್ತೀತಿ ರಾಗ ಪಾಶೋಽಸ್ತಿ ಬಂಧನಂ
> ಇದಾನೀಂತನ ಭಾವೇಽಸ್ಮಿ ಕಾಲೋಽಪ್ಯಾಕಲನಂ ಮತಂ
> ನಿಯತತ್ತ್ವಂ ಕರ್ಮಫಲಂ ನಿಯತ್ಯಾತ್ಮಕತಾತ್ಮನಃ
> ಏತೇಷಾಂ ಅವಿವೇಕೋ ಯಃ ಸಾ ಮಾಯಾ ಮೋಹಿನೀಯತಃ

ಪರಮೇಶ್ವರನ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಎಂಬ ಶಕ್ತಿಗಳು ಸ್ವಾಭಾವಿಕವಾಗಿ ಅಸಂಕುಚಿತಗಳಾಗಿರತಕ್ಕವುಗಳಾದರೂ ಸಂಕೋಚ ಗ್ರಹಣದಿಂದ ಕಲಾ, ವಿದ್ಯಾ, ರಾಗ, ಕಾಲ, ನಿಯತಿ ರೂಪಗಳನ್ನು ಹೊಂದಿರುತ್ತವೆ.

(ಪರಾಪ್ರವೇಶಿಕಾ)

ಕಲಾದಿತತ್ತ್ವ ಪಂಚಕವು ಚಿದಾತ್ಮನ ಸ್ವರೂಪಾವರಕವಾಗಿರುವುದರಿಂದ ಕಂಚುಕ ವೆಂದು ಹೇಳಿಸಿಕೊಳ್ಳುತ್ತದೆ. ಈ ಕಂಚುಕವಾದರೂ ಸ್ವರೂಪದಿಂದ ವ್ಯತಿರಿಕ್ತವಾಗಿರುವು ದಾದರೂ ಅವ್ಯತಿರಿಕ್ತದಿಂದ ಪೂರ್ಣಸಂವಿತ್ಸ್ವರೂಪವನ್ನು ಆಚ್ಛಾದಿಸಿರುವುದಾಗಿದೆ. ಇದರಿಂದ ಆತ್ಮನು ಬದ್ಧನಾಗಿದ್ದಾನೆ.

ಈ ಕಲಾದಿವರ್ಗವು ಅನುಕ್ರಮವಾಗಿ ಶಿವಾರ್ಚನ ಧ್ಯಾನಾದಿ ವಿಷಯವುಳ್ಳದ್ದು. ಭಗವದ್ವಿಷಯಕವಾದ ಇಚ್ಛೆಯನ್ನು ಹುಟ್ಟಿಸುವಂಥಾದ್ದು. ಆ ವಿಷಯದ ವಿವೇಕ ವುಂಟಾಗುವಿಕೆಯೂ ತದುಪದೇಶಾದಿ ವಿಷಯವನ್ನೇ ಚಿಂತಿಸುವುದು. ಆ ಭಗವದರಾಧನೆ ಯಲ್ಲಿಯೇ ನಿಯಮನವೂ ಎಂಬೀ ಪ್ರಕಾರವಾದ ಶುದ್ಧತ್ವವನ್ನು ಪಡೆಯುವುದಾದರೆ ಪರಮೇಶ್ವರ ವಿಷಯತ್ವದಿಂದ ತತ್ಸ್ವರೂಪ ಲಾಭಾನುಗುಣವಾದ ನಿಜಕಾರ್ಯಕಾರಿಯಾಗಿ ಸಂಸಾರ ಪ್ರತಿದ್ವಂದ್ವಿಯೆನಿಸುವುದು. (ತಂತ್ರಸಾರದ ಆನೆಯ ಆಹ್ನಿಕ)

ಮೊದಲು ಸ್ವರೂಪಾಭಿನ್ನವಾಗಿರುವ ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳು ಕ್ರಮವಾಗಿ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಎಂಬ ಪ್ರಭಾವವುಳ್ಳವುಗಳಾದವು. ಇವುಗಳೇ ಅಶುದ್ಧಾಧ್ವದಲ್ಲಿ ಕಲಾ, ವಿದ್ಯಾ, ರಾಗ, ಕಾಲ, ನಿಯತಿ ರೂಪಗಳಿಂದ ಮಾರ್ಪಟ್ಟವು. ಇವುಗಳನ್ನೇ **ಪಂಚಕಂಚುಕ**ಗಳೆಂದು ಹೇಳುವುದು. ಈ ಶಕ್ತಿಗಳ ಸಂಪೂರ್ಣ ವಿಕಾಸವಿದ್ದಾಗ ಶಿವನು ಸಂಕಚಿತವಾಗಿದ್ದಾಗ ಬದ್ಧಜೀವನು, ಈ ಐದು ತತ್ತ್ವಗಳಿಂದ ಕೂಡಿ ಮಿತಪ್ರಮಾತೃವಾಗಿದ್ದಾನೆ. ತನ್ನ ಕ್ರಿಯಾಶಕ್ತಿ, ತನ್ನ ತಿಳಿವಳಿಕೆ, ತನ್ನ ಆಸೆ, ತನ್ನ ಪರಿಮಿತಿ, ತನ್ನ ಸ್ವಭಾವ ಧರ್ಮ ಇವು ಗಳನ್ನು ವಿಶದವಾಗಿ ತಿಳಿದು ತತ್ತ್ವಜ್ಞಾನಿಯು ಜೀವನವನ್ನು ನಡೆಸುತ್ತಾನೆ. ಈ ಐದು ತತ್ತ್ವಗಳು ಪ್ರಮೇಯಗಳಾಗಿಯೇ ಇದ್ದರೂ ಬಣ್ಣವು ಬಟ್ಟೆಯನ್ನಂಟಿಕೊಂಡಿರುವ ಹಾಗೆ ಪ್ರಮಾತೃವಿಗೆ ಅಂಟಿಕೊಂಡು ಅವನನ್ನು ಬಿಡದಿರುವುವುಗಳಾಗಿವೆ. ಇವು ಈಶ್ವರಶಕ್ತಿ ರೂಪಗಳಾಗಿದ್ದರೂ ಪ್ರತಿಯೊಂದು ಪ್ರಮಾತೃವಿಗೂ ಬೇರೆಬೇರೆಯಾದ ತಾರತಮ್ಯ ವನ್ನುಂಟು ಮಾಡುವವುಗಳಾಗಿರುತ್ತವೆ.

ಸಪ್ತಪ್ರಮಾತೃವರ್ಗದ ಮಂತ್ರ, ಮಂತ್ರೇಶ್ವರ, ಮಂತ್ರ ಮಹೇಶ್ವರರಿಗೆ ೩೩ ಪ್ರಮೇಯಗಳು ಸಾಕ್ಷಾತ್ತಾಗಿ ತಿಳಿಯುತ್ತವೆ. ಸಕಲರಿಗೆ (ಸಂಸಾರಿಗಳಿಗೆ) ಅನುಮಾನ ಆಗಮಾದಿ ಪ್ರಮಾಣಗಳ ದ್ವಾರಾಪ್ರಮೇಯಗಳಾಗುತ್ತವೆ. ಕಲಾದಿತತ್ತ್ವಗಳು ಪ್ರಮೇಯಗಳಾಗಿದ್ದರೂ ಪ್ರಮಾತೃ ಸ್ವಭಾವವನ್ನು ಪಡೆದಿರುವುವುಗಳಾಗಿರುವುದರಿಂದ

ಪ್ರಮೇಯಗಳೆಂದು ವ್ಯವಹಾರವಿಲ್ಲ. ಪ್ರಮಾತೃವೇ ಪ್ರಮೇಯವಾಗಿರುವುದರಿಂದ ಪ್ರಮೇಯಗಳಿಂದ ಪ್ರಮಾತೃವು ಆಚ್ಛಾದಿತನಾಗಿರುತ್ತಾನೆ.

'ಆಚ್ಛಾದಿತ ಪ್ರಮೇಯತಾಕಃ ಪ್ರಮಾತ್ರೀ ಕ್ರಿಯ ಮಾಣಶ್ಚಸಃ' ಕಲಾದಿ ಪಂಚಕಂಚುಕಗಳು ಪ್ರಮಾತೃವಿನ ಸ್ವರೂಪದಲ್ಲಿ ಸೇರಿಹೋಗಿವೆ. ಈ ಪಂಚಕಂಚುಕ ಗಳಿಂದ ಆವೃತನಾದವನೇ ಪುರುಷ. ಇವನಿಗೆ ಸತ್ವರಜಸ್ತಮೋಗುಣಗಳ ಪ್ರಭಾವದಿಂದ ಕೂಡಿದ ದೇಹ, ಇಂದ್ರಿಯ ಮತ್ತು ಅಂತಃಕರಣಗಳನ್ನು ಒದಗಿಸುವುದೇ ಪ್ರಕೃತಿ. ಈ ಪ್ರಕೃತಿಯು ಅಂತಃಕರಣ, ಇಂದ್ರಿಯಗಳು, ತನ್ಮಾತ್ರಗಳು ಮತ್ತು ಭೂತಗಳಿಗೆ ಮೂಲ ವಾಗಿರುತ್ತದೆ. ಪ್ರಕೃತಿಯಿಂದ ಕೆಳಗಿರುವ ಹದಿಮೂರು ಕರಣಗಳು (ಬುದ್ಧಿ, ಅಹಂಕಾರ, ಮನಸ್ಸು, ಐದು ಜ್ಞಾನೇಂದ್ರಿಯಗಳು; ಐದು ಕರ್ಮೇಂದ್ರಿಯಗಳು) ಶರೀರವನ್ನು ಧರಿಸುವುದಕ್ಕೆ ಸಾಧನಗಳಾಗಿವೆ. ಪಂಚಭೂತಗಳು ತನ್ಮಾತ್ರಗಳು ಶರೀರವಾಗಿವೆ. ಅಧ್ಯವ ಸಾಯಕ್ಕೆ ಕಾರಣವಾಗಿರುವುದು ಬುದ್ಧಿ. ಗ್ರಾಹ್ಯಗ್ರಾಹಕ ರೂಪವಾದದ್ದು ಅಹಂಕಾರ, ಸಂಕಲ್ಪಾದಿ ಭಾವೋದ್ರೇಕಗಳಿಗೆ ಕಾರಣವಾಗಿ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಮೂಲಕ ಉಂಟಾಗುವ ಎಲ್ಲಾ ಜ್ಞಾನಗಳಿಗೂ ಆಕರವಾಗಿರುವುದು ಮನಸ್ಸು. ಮಾಯೆ ಯಿಂದ ಈ ಮೂವತ್ತು ತತ್ತ್ವಗಳು ಸೃಷ್ಟಿಯಾಗಿದ್ದರೂ ಮಾಯೀಯಗಳಾದ ದೇಹೇಂದ್ರಿಯಗಳಿಂದ ಜೀವನ ಜ್ಞಾನಸಂಕೋಚವು ಏರ್ಪಡುತ್ತಲಿರುತ್ತದೆ. ಜ್ಞಾನ ಸಂಕೋಚಕ್ಕೆ ಮಾಯೆ ಕಾರಣವೆನ್ನುವಾಗ ಈ ಎರಡಂಶಗಳನ್ನು ಲಕ್ಷ್ಯದಲ್ಲಿಡಬೇಕು.

ಶುದ್ಧ ವಿದ್ಯಾತತ್ತ್ವಗಳಲ್ಲಿರುವ ಶಿವತತ್ತ್ವದಲ್ಲಿ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು ಯಾವ ರೀತಿ ಸಾಮ್ಯಾವಸ್ಥೆಯಲ್ಲಿರುತ್ತವೆಯೋ ಅದೇ ರೀತಿಯಾಗಿ ಅಶುದ್ಧಸೃಷ್ಟಿಯಲ್ಲಿ ಪ್ರಕೃತಿಯು ಸತ್ವ ರಜಸ್ತಮೋಗುಣಗಳ ಸಾಮ್ಯಾವಸ್ಥೆಯಿಂದ ಪ್ರಶಾಂತ ಸಾಗರ ದಂತಿರುತ್ತದೆ. ಸತ್ವ ರಜಸ್ತಮೋಗುಣಗಳ ತಾರತಮ್ಯದಿಂದ ಮಿಕ್ಕ ೨೩ ತತ್ತ್ವಗಳ ಸೃಷ್ಟಿಯಾಗುತ್ತದೆ. ಪ್ರಕೃತಿಯಿಂದ **ಬುದ್ಧಿ**. ಇದನ್ನು ಮಹತ್ತೆಂದು ಕೆಲವರು ವ್ಯವ ಹರಿಸುತ್ತಾರೆ. ಈ ಬುದ್ಧಿಯು ಇದೇ ಸರಿ ಎಂದು ನಿರ್ಣಯಮಾಡುವ ಶಕ್ತಿಯಾಗಿರು ತ್ತದೆ. ಇದು ಸರಿಯೇ ತಪ್ಪೇ ಎಂದು ವಿವೇಚನೆ ಮಾಡುವಾಗ ಕೊನೆಯ ತೀರ್ಮಾನವು ಬುದ್ಧಿಯಿಂದುಂಟಾಗುತ್ತದೆ. ಇದಕ್ಕೆ ಅಧ್ಯವಸಾಯವೆಂದು ಹೆಸರು.

ಮುಂದಿನ ತತ್ತ್ವವೇ **ಅಹಂಕಾರ**. ತನ್ನ ಸ್ವರೂಪಕ್ಕೆ ಸೇರದಿರುವ ವಿಷಯ ಗಳನ್ನು ತಾನೆಂದು ಭಾವಿಸುವಿಕೆಯೇ ಅಹಂಕಾರ. ಈ ಅಹಂಕಾರದ ದೆಸೆಯಿಂದ ಗ್ರಾಹ್ಯ ಮತ್ತು ಗ್ರಾಹಕಗಳಲ್ಲಿ ಭೇದ ಜ್ಞಾನಪೂರ್ವಕವಾದ ಅಭಿಮಾನವುಂಟಾಗುತ್ತದೆ. ನಾನು ನನ್ನದು ಎಂಬ ನಿಶ್ಚಿತವಾದ ಆಕಾಂಕ್ಷೆಯುಂಟಾಗುತ್ತದೆ. ಇದರಿಂದ ಸುಖದುಃಖ ಗಳಿಗೆ ಹೆಚ್ಚು ಅವಕಾಶ. ಅಹಂಕಾರವಿಲ್ಲದಿರುವವರಿಗೆ ಹೆಚ್ಚು ಸುಖವೂ ಇಲ್ಲ. ಹೆಚ್ಚು ದುಃಖವೂ ಇಲ್ಲ. ಅಹಂಕಾರದ ಅನುಭವವು ಗ್ರಾಹ್ಯಗ್ರಾಹಕಗಳಲ್ಲಿ ಶುದ್ಧವಾದ ವ್ಯತ್ಯಾಸ ವನ್ನು ತಿಳಿಯಪಡಿಸದೆ ಸಮ್ಮೋಹವನ್ನುಂಟುಮಾಡುತ್ತದೆ. ಲೋಕರೂಢಿಯಾಗಿ

ಅಹಂಕಾರವನ್ನು ಹೆಮ್ಮೆ, ಜಂಭ, ಗರ್ವ ಮುಂತಾದ ದುರ್ಗುಣಗಳಿಗೆ ಪರ್ಯಾಯ ಪದವಾಗಿ ಉಪಯೋಗಿಸುತ್ತಾರೆ.

ಮನಸ್ಸು : ಇದು ವಿಷಯಸಂಕಲ್ಪಗಳಿಗೆ ಕಾರಣವಾಗಿಯೂ ವಿಷಯಜ್ಞಾನ, ಲಜ್ಜೆ, ಕೋಪ ಮುಂತಾದ ವಿಕಾರಗಳಿಗೆ ಆಶ್ರಯವಾಗಿಯೂ ಇದೆ. ಮನಸ್ಸಿಗೆ ಬರುವ ಎಲ್ಲಾ ಭಾವನೆಗಳೂ ದೇಶ, ಕಾಲ, ಆಕಾರ ಇವುಗಳನ್ನು ಕೂಡಿಯೇ ಬರುತ್ತವೆ. ಸ್ಮೃತಿ, ತಾಪ ಮುಂತಾದ ಆಂತರಂಗಿಕವಾದ ಅನುಭವಗಳು ಇದರಿಂದಲೇ ಉಂಟಾಗುತ್ತವೆ. ಜ್ಞಾನೇಂದ್ರಿಯಗಳಿಂದಲೂ ಕರ್ಮೇಂದ್ರಿಯಗಳಿಂದಲೂ ಹತ್ತುವಿಧವಾದ ತಿಳಿವಳಿಕೆಗಳುಂಟಾಗುತ್ತವೆ. ಆ ಹತ್ತು ವಿಧವಾದ ತಿಳಿವಳಿಕೆಗಳಿಗೂ ಇದು ಆಶ್ರಯವಾಗಿರುತ್ತದೆ. ಇದರ ಸಹಾಯವಿಲ್ಲದೆ ಯಾವ ಇಂದ್ರಿಯಕ್ಕೂ ಸ್ವತಂತ್ರವಾಗಿ ತಿಳಿವಳಿಕೆಯನ್ನುಂಟುಮಾಡುವ ಯೋಗ್ಯತೆಯಿಲ್ಲ. ನಾವು ಏನೋ ಒಂದು ಬೇರೆ ಯೋಚನೆಯನ್ನು ಮಾಡುತ್ತಿದ್ದಾಗ ಕಣ್ಣು ನೋಡುತ್ತಿದ್ದರೂ, ಕಿವಿ ಕೇಳುತ್ತಿದ್ದರೂ, ಕಣ್ಣು ಕಾಣಿಸುವುದಿಲ್ಲ, ಕಿವಿ ಕೇಳಿಸುವುದಿಲ್ಲ. ಇದರಿಂದ ಹೊರಗಿನ ತಿಳಿವಳಿಕೆಗೆ ಮನಸ್ಸು ಮುಖ್ಯಕಾರಣವೆಂದು ಸಿದ್ಧವಾಗುತ್ತದೆ.

ಜ್ಞಾನೇಂದ್ರಿಯಗಳು ಐದು : ಇವು ಸಾತ್ವಿಕಾಹಂಕಾರದಿಂದ ಹುಟ್ಟಿರುತ್ತವೆ. ಇವುಗಳ ಸ್ವರೂಪ ಅತಿ ಸೂಕ್ಷ್ಮವಾಗಿರುವುದರಿಂದ ಭೌತಿಕವಾದ ಶರೀರದ ಸಹಾಯವಿಲ್ಲದೆ ಇವು ಕೆಲಸ ಮಾಡಲಾರವು. ಈ ಐದು ಜ್ಞಾನೇಂದ್ರಿಯಗಳಿಗೂ ಐದು ಕರ್ಮೇಂದ್ರಿಯಗಳಿಗೂ ಈ ಭೌತಿಕ ಶರೀರವಿದ್ದಾಗಲೇ ಪ್ರವೃತ್ತಿ. ಕಿವಿಯಿಂದ ಕೇಳುತ್ತೇವೆ, ಕಣ್ಣಿನಿಂದ ನೋಡುತ್ತೇವೆ, ಮೂಗಿನಿಂದ ವಾಸನೆಯನ್ನು ಕಂಡುಹಿಡಿಯುತ್ತೇವೆ, ನಾಲಗೆಯಿಂದ ರುಚಿನೋಡುತ್ತೇವೆ, ಚರ್ಮದಿಂದ ಮುಟ್ಟುತ್ತೇವೆ. ಆದರೆ ಒಂದು ಇಂದ್ರಿಯದ ಕೆಲಸವು ಇನ್ನೊಂದು ಇಂದ್ರಿಯದಿಂದ ನಡೆಯುವುದಿಲ್ಲ. ಕಿವಿಯಿಂದ ನೋಡಲಾರೆವು, ಕಣ್ಣಿನಿಂದ ಕೇಳಲಾರೆವು.

ಕರ್ಮೇಂದ್ರಿಯಗಳು ಐದು : ಮೇಲೆ ಹೇಳಿದ ರೀತಿಯೇ ಕರ್ಮೇಂದ್ರಿಯಗಳಾದ ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಇವುಗಳು ಒಂದರ ಕೆಲಸವನ್ನು ಇನ್ನೊಂದು ಮಾಡಲಾರವು. ಹೀಗೆ ಸಾತ್ವಿಕಾಹಂಕಾರದಿಂದ ಈ ಐದು ಕರ್ಮೇಂದ್ರಿಯಗಳು ಮೇಲೆ ಹೇಳಿದ ಐದು ಜ್ಞಾನೇಂದ್ರಿಯಗಳು ಮತ್ತು ಮನಸ್ಸು ಈ ಹನ್ನೊಂದೂ ಹುಟ್ಟಿರುತ್ತವೆ.

ತಾಮಸಾಹಂಕಾರದಿಂದ ಶಬ್ದ, ಸ್ಪರ್ಶ, ರೂಪ, ರಸ, ಗಂಧ, ತನ್ಮಾತ್ರಗಳೂ ಈ ತನ್ಮಾತ್ರಗಳಿಂದ ಕ್ರಮವಾಗಿ ಆಕಾಶ, ವಾಯು, ಅಗ್ನಿ, ನೀರು, ಭೂಮಿ ಹೀಗೆ ಪಂಚಭೂತಗಳೂ ಹುಟ್ಟುತ್ತವೆ. ಈ ಐದು ಭೂತಗಳಲ್ಲಿಯೂ ಪರಸ್ಪರ ವೈಲಕ್ಷಣ್ಯವಿದೆ. ಭೂಮಿಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೂ ನೀರಿನಲ್ಲಿ ಶಬ್ದ, ಸ್ಪರ್ಶ, ರೂಪ,

ರಸಗಳೂ ಅಗ್ನಿಯಲ್ಲಿ ಶಬ್ದ, ಸ್ಪರ್ಶ, ರೂಪಗಳೂ ವಾಯುವಿನಲ್ಲಿ ಸ್ಪರ್ಶ, ಶಬ್ದಗಳೂ ಆಕಾಶದಲ್ಲಿ ಶಬ್ದಮಾತ್ರವೂ ಇರುತ್ತವೆ. ಈ ಪಂಚಭೂತಗಳ ಸಹಾಯವಿಲ್ಲದೆ ಜ್ಞಾನೇಂದ್ರಿಯಗಳ ಕೆಲಸ ನಡೆಯುವುದಿಲ್ಲ. ಆಕಾಶದ ಅವಕಾಶವಿಲ್ಲದೆ ಶಬ್ದ ಕೇಳಿಸುವುದಿಲ್ಲ. ವಾಯುವಿಲ್ಲದಿದ್ದರೆ ಸ್ಪರ್ಶ ತಿಳಿಯುವುದಿಲ್ಲ. ಬೆಳಕಿಲ್ಲದಿದ್ದರೆ ಕಣ್ಣು ಕಾಣಿಸುವುದಿಲ್ಲ. ನೀರಿಲ್ಲದಿದ್ದರೆ ರಸ ತಿಳಿಯುವುದಿಲ್ಲ. ಭೂಮಿಯಿಲ್ಲದಿದ್ದರೆ ಅಂದರೆ ಭೂಮಿಯಲ್ಲಿ ಬೆಳೆದ ವಸ್ತುವಿಲ್ಲದಿದ್ದರೆ ವಾಸನೆಯಿಲ್ಲ. ಹೀಗೆ ಬಾಹ್ಯಪ್ರಪಂಚವೆಲ್ಲಾ ಪಂಚಭೂತಮಯವಾಗಿದೆ. ಈ ಪಂಚಭೂತಗಳು ಇಂದ್ರಿಯಗಳಿಗೆ ಸಹಾಯಕಗಳಾಗಿವೆ. ಪ್ರಮಾತೃಗಳ ಸುಖದುಃಖಗಳಿಗೆ ಕಾರಣವಾಗಿವೆ. ಜ್ಞಾನಿಯು ತನಗುಂಟಾಗುವ ಶಾರೀರಕವಾದ ಉದ್ವೇಗಗಳೆಷ್ಟು ಇಂದ್ರಿಯಿಕವಾದ ತೊಂದರೆಗಳೆಷ್ಟು ಮಾನಸಿಕವಾದ ಉಬ್ಬರವಿಳಿತಗಳೆಷ್ಟು ಎಂದು ತಿಳಿಯುತ್ತಾನೆ. ಇಂತಹ ವಿವೇಚನೆಯಿಂದ ಸುಖದುಃಖಗಳು ಗ್ರಾಹಕನ ಸ್ವಸ್ವರೂಪದಲ್ಲಿಲ್ಲವೆಂದೂ ಕರಣಗಳ ಮೂಲಕ ಪ್ರಮೇಯಗಳಿಂದ ಉಂಟಾಗುತ್ತವೆಯೆಂದೂ ತಿಳಿದು ಶಾಂತನಾಗಿ ಸ್ವಸ್ವರೂಪಾನುಸಂಧಾನದಲ್ಲಿ ಆನಂದವನ್ನನುಭವಿಸುತ್ತಾನೆ.

ಪಂಚಭೂತಗಳ ಮಿಶ್ರಣದಿಂದ ಘಟಾದಿ ಪದಾರ್ಥಗಳು ಸ್ವಲಕ್ಷಣ (ಇತರ ಸಂಬಂಧವಿಲ್ಲದೆ ತನ್ನನ್ನು ಮಾತ್ರ ತೋರ್ಪಡಿಸಿಕೊಳ್ಳುವುದು) ಭಾವಾದಿಂದ ಕರ್ಮೇಂದ್ರಿಯಗಳ ದ್ವಾರಾ ಸೇರಿ ಜ್ಞಾನೇಂದ್ರಿಯಗಳಿಂದ ಆಲೋಚಿಸಲ್ಪಟ್ಟು ಅಂತಃಕರಣದಲ್ಲಿ ಸಂಕಲ್ಪ ಮತ್ತು ಅಭಿಮಾನದಿಂದ ನಿಶ್ಚಯಿಸಲ್ಪಟ್ಟು ಬುದ್ಧಿಯಿಂದ ವಿವೇಚಿಸಲ್ಪಟ್ಟು ಕಲಾದಿ ತತ್ತ್ವಗಳೊಡನೆ ಸೇರಿ ಪ್ರಮಾತೃವಿನಲ್ಲಿ ಕೊನೆಗೊಳ್ಳುತ್ತವೆ. ಅಂದರೆ ಪೃಥವ್ಯಾದಿ ಆಭಾಸಗಳು ಚಿತ್ತಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತವೆಂಬುದೇ ಇದರ ಮುಖ್ಯ ಅಭಿಪ್ರಾಯ.

> ತತ್ರ ಪೃಥಿವ್ಯಾದ್ಯಾಭಾಸಾ ಏವ ಮಿಶ್ರೀಭೂಯ ಘಟಾದಿ ಸ್ವಲಕ್ಷಣೀಭೂತಾಃ, ಕರ್ಮೇಂದ್ರಿಯೈರುಪಸರ್ಪಿತಾ, ಬುದ್ಧೀಂದ್ರಿಯೈರಾಲೋಚಿತಾ, ಅಂತಃಕರಣೇನ ಸಂಕಲ್ಪಿತಾ ಅಭಿಮತನಿಶ್ಚಿತರೂಪಾ, ವಿದ್ಯಯಾ ವಿವೇಚಿತಾಃ, ಕಲಾದಿಭಿರನುರಂಜಿತಾಃ, ಪ್ರಮಾತರಿ ವಿಶ್ರಾಮ್ಯಂತಿ ಇತಿ ತಾತ್ಪರ್ಯಂ.
>
> (ಈಶ್ವರಪ್ರತ್ಯಭಿಜ್ಞಾ–ಪುಟ, ೨೧೪.)

> ಷಟ್ತ್ರಿಂಶ ತತ್ತ್ವಭೃತಂ
> ವಿಗ್ರಹರಚನಾ ಗವಾಕ್ಷಪರಿಪೂರ್ಣ
> ನಿಜಮನ್ಯದಥ ಶರೀರಂ
> ಘಟಾದಿವಾ ತಸ್ಯ ದೇವಗೃಹಂ ॥೭೪॥
>
> (ಪರಮಾರ್ಥಸಾರ)

೩೬ ತತ್ತ್ವಗಳಿಂದ ಚಿತ್ರವಿಚಿತ್ರವಾದ ರಚನಾವಿಶೇಷಗಳಿಂದ ವಿಗ್ರಹನಿರ್ಮಾಣವಾಗಿ ಇಂದ್ರಿಯರೂಪವಾದ ಗವಾಕ್ಷಿಗಳಿಂದ ಪರಿಪೂರ್ಣವೆನಿಸಿ ಮೃತ್ಪಿಂಡದಿಂದ ಕೂಡಿರುವ ಶಿಥಿಲವಾದ ಶರೀರವೇ ದೇವಮಂದಿರ.

ತತ್ರ ಚ ಪರಮಾತ್ಮಮಹಾ
ಭೈರವಶಿವದೇವತಾಂ ಸ್ವಶಕ್ತಿಯುತಾಂ
ಆತ್ಮಾಮರ್ಶನವಿಮಲ
ದ್ರವ್ಯೈಃ ಪರಿಪೂಜಯನ್ ಆಸ್ತೆ ॥೭೫॥

(ಪರಮಾರ್ಥಸಾರ)

ಈ ಶರೀರರೂಪವಾದ ದೇವಮಂದಿರದಲ್ಲಿ ಸ್ವಶಕ್ತಿಯುತ ಆತ್ಮದೇವತೆಯಾದ ಭೈರವಮೂರ್ತಿಯನ್ನು ಆತ್ಮಾನುಸಂಧಾನದಿಂದ ಪವಿತ್ರ ದ್ರವ್ಯಗಳಿಂದ ಪೂಜಿಸುತ್ತಾ ಜ್ಞಾನಿಯಾಗುವನು.

ಇಲ್ಲಿ ದೇಹವೇ ದೇವಾಲಯ. ಪಂಚಶಕ್ತಿಗಳಿಂದ ಕೂಡಿ ಸೃಷ್ಟಿ ಸ್ಥಿತಿ ಲಯಗಳಿಂದ ವಿಹರಿಸುವ, ಶಕ್ತಿಪರಿವಾರದಿಂದ ಕೂಡಿದ ಭೈರವನೇ ಉತ್ಸವಮೂರ್ತಿ. ಆತ್ಮಪ್ರಕಾಶರೂಪವಾದದ್ದೆಲ್ಲವೂ ದ್ರವ್ಯರೂಪ. ಈ ಕಾರಣದಿಂದ ಎಲ್ಲವೂ ಶಿವಮಯವೇ ಆಯಿತು. ಈ ರೀತಿ ಜ್ಞಾನಿಯಾದವನು ಪೂಜೆಯನ್ನು ನಡೆಸುವನು. ಜ್ಞಾನಿಯ ನಯನದ ನೋಟ ಶಿವನ ನೋಟ, ಕಿವಿಯ ಕೇಳ್ಮೆ ಶಿವನ ಕೇಳ್ಮೆ, ಮಾಡುವ ಆಘ್ರಾಣ ಶಿವನ ವಾಸನೆಯ ಆಘ್ರಾಣ, ರಸನೆಯ ರಸಾಸ್ವಾದ ಶಿವನ ರಸಾಸ್ವಾದ, ತ್ವಕ್ಕಿನ ಸ್ಪರ್ಶ ಶಿವನ ಸಂಸ್ಪರ್ಶ ಹೀಗೆ ಕರಣಗಳಿಂದ ನಡೆಯುವ ಎಲ್ಲಾ ಕೆಲಸವೂ ಶಿವನ ಪೂರ್ಣ ಪೂಜೆ. ಈ ರೀತಿಯಲ್ಲಿ ಜ್ಞಾನಿಯಾದವನು ದೇಹ ದೇವಾಲಯದಲ್ಲಿ ವಿಶಿಷ್ಟವಾದ ನಿತ್ಯಪೂಜೆಯನ್ನು ನಡೆಸುವನು.

ಕರಚರಣಕೃತಂ ವಾ, ವಾಕ್ಕಾಯಜಂ ಕರ್ಮಜಂ ವಾ
ಶ್ರವಣನಯನಜಂ ವಾ, ಮಾನಸಂ ವಾಪರಾಧಂ
ವಿಹಿತಮವಿಹಿತಂ ವಾ ಸರ್ವಮೇತತ್ ಕ್ಷಮಸ್ವ
ಶಿವಶಿವಕರುಣಾಬ್ಧೇ ಶ್ರೀಮಹಾದೇವ ಶಂಭೋ

(ಶ್ರೀ ಶಂಕರಾಚಾರ್ಯ)

ಗ್ರಾಹ್ಯಗ್ರಾಹಕ ವಿಚಾರ

ತ್ರಿಕಾಲಗಳ ಸಾಮರಸ್ಯವನ್ನು ಸಾಧಿಸುವುದರಿಂದ ಮಾನವನು ಇತರ ಪ್ರಾಣಿಗಳಿಗಿಂತ ಉತ್ತಮನೆಂಬುದು ಸ್ವತಃ ಸಿದ್ಧವಾಗುತ್ತದೆ. "ಜ್ಞಾನೇನ ಹೀನಃ ಪಶುಭಿಃ ಸಮಾನಃ". ಪ್ರಕೃತದಲ್ಲಿ ಜ್ಞಾನ ಎಂಬುದಕ್ಕೆ ಭೂತ ಭವಿಷ್ಯತ್ ವರ್ತಮಾನ ಕಾಲಗಳ ವಿವೇಚನೆಯೆಂದು ಅರ್ಥಮಾಡಬಹುದು. ಸ್ಥೂಲವಾದ ವಿವೇಚನೆ ಪಶುಗಳಿಗೂ

ಇರುತ್ತದೆ, ಸಾಮಾನ್ಯ ಮನುಷ್ಯನಿಗೂ ಇರುತ್ತದೆ. ಒಂದು ವಿಷಯದ ಸಮಗ್ರ ಸ್ವರೂಪಜ್ಞಾನವಾಗಬೇಕಾದರೆ ಸೂಕ್ಷ್ಮವಿವೇಚನೆ ಏರ್ಪಡಬೇಕು. ಈ ವಿವೇಚನೆಯು ಮೊದಲು ಬಾಹ್ಯಪ್ರಪಂಚವನ್ನು ಸ್ಥೂಲದೃಷ್ಟಿಯಿಂದ ಪರಿಶೀಲಿಸುತ್ತದೆ. ಅನಂತರ ಸೂಕ್ಷ್ಮಾವಸ್ಥೆಯನ್ನು ತಿಳಿಯುತ್ತದೆ. ಸ್ಥೂಲವಾದ ವಿಷಯಗಳನ್ನರಿಯುವುದು, ಅವುಗಳ ಉಪಯೋಗಗಳನ್ನು ವಿಭಾಗಿಸುವುದು ಅನಂತವಾದದ್ದು. ಅಸಂಖ್ಯಾತವಾದ ಪದಾರ್ಥಗಳನ್ನು ವ್ಯಕ್ತಿಶಃ ಅರಿಯುವುದು ಅಸಾಧ್ಯ. ಆದುದರಿಂದ ಸ್ಥೂಲಪ್ರಪಂಚಕ್ಕೆಲ್ಲಾ ಶಾಸ್ತ್ರಜ್ಞರು ಒಂದು ಸಂಗ್ರಹವಾದ ಪಾರಿಭಾಷಿಕ ಸಂಕೇತ ಮಾಡಿರುತ್ತಾರೆ. ಸ್ಥೂಲಪ್ರಪಂಚವೆಲ್ಲಾ ತಿಳಿಯಲ್ಪಡುವ ಸ್ವಭಾವವುಳ್ಳದ್ದಾಗಿರುವುದರಿಂದ ಇದಕ್ಕೆ **ಗ್ರಾಹ್ಯ** ಎಂದು ಸಂಜ್ಞೆ. ಎಲ್ಲಾ ಬಗೆಯ ಸುಖದುಃಖಗಳೂ ಊಹೆಗಳೂ ಈ ಗ್ರಾಹ್ಯ ಪ್ರಪಂಚದ ಆಕಾರಗಳಾಗಿರುತ್ತವೆ. ಗ್ರಾಹ್ಯಪ್ರಪಂಚವನ್ನು ತಿಳಿಯತಕ್ಕವನು **ಗ್ರಾಹಕ.** ಗ್ರಾಹಕನು ಹಿಂದಿನದನ್ನು ನೆನೆಯುತ್ತಾನೆ; ಇಂದಿನದನ್ನು ಅನುಭವಿಸುತ್ತಾನೆ; ಮುಂದಿನದನ್ನು ಊಹಿಸುತ್ತಾನೆ. ಗ್ರಾಹಕನ ಜ್ಞಾನದ ಮಿತಿಗನುಸಾರವಾಗಿ ಈ ಮೂರು ಬಗೆಯ ತಿಳುವಳಿಕೆಗಳ ಪ್ರಾಮಾಣ್ಯವು ಪರಿಮಿತವಾಗಿರುತ್ತದೆ. ಎಲ್ಲರ ತಿಳಿವಳಿಕೆಯ ಮಟ್ಟವೂ ಒಂದೇ ಸಮನಾಗಿರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ಹಿಂದಿನ ಸಂಸ್ಕಾರ, ಇಂದಿನ ಸನ್ನಿವೇಶ, ಶಿಕ್ಷಣ, ಶಾಸ್ತ್ರಾಭ್ಯಾಸ, ಸತ್ಸಂಗ, ಸ್ವಪ್ರಯತ್ನ ಮತ್ತು ಅನುಭವಗಳಿಗನುಸಾರವಾಗಿ ತಿಳಿವಳಿಕೆಯ ಯೋಗ್ಯತೆಯು ಬೇರೆಬೇರೆಯಾಗಿರುತ್ತದೆ. ಅದು ಸ್ವಭಾವನಿಯಮ. ವ್ಯತ್ಯಾಸಗಳಿಗೆ ಕಾರಣವಾಗಿರುವ ಜ್ಞಾನದ ಮಿತಿಯ ಅಳತೆಯನ್ನು ತಿಳಿಯದಿರುವವರಿಗೆ ಭಿನ್ನಾಭಿಪ್ರಾಯಗಳು ಸಹಜವಾಗಿರುತ್ತವೆ.

ಗ್ರಾಹ್ಯಪ್ರಪಂಚದ ಪದಾರ್ಥಗಳ ಆಕಾರಗಳು ಮಾನಸಿಕ ಭಾವನೆಗಳ ರೂಪದಿಂದ ಸಂತೋಷವನ್ನೋ ಸಂತಾಪವನ್ನೋ ಉಂಟುಮಾಡುತ್ತವೆ. ಕೆಲವು ವೇಳೆ ಉದಾಸೀನ ವೃತ್ತಿಯನ್ನು ಸೂಚಿಸಬಹುದು. ಹಿಂದಿನದು ಇಂದಿನದು ಮುಂದಿನದು ಈ ಮೂರು ವೃತ್ತಿಗಳು ಎಲ್ಲರಿಗೂ ಸಹಜವಾಗಿ ಅನುಭವದಲ್ಲಿವೆ. ಈ ಮೂರು ಬಗೆಯ ವಿಭಾಗಗಳನ್ನು ಮೀರಿದ ಚಿತ್ತವೃತ್ತಿ ಇಲ್ಲ. ಅತೀತ ಮತ್ತು ಅನಾಗತ ವಿಷಯಗಳಲ್ಲಿ ಈ ವೃತ್ತಿಗಳು ಆಂತರ್ಯವಾಗಿಯೇ ಮೊಳಗುತ್ತವೆ, ಅಳಿಯುತ್ತವೆ. ಸ್ಥೂಲವಾದ ಪದಾರ್ಥಗಳ ಅಪೇಕ್ಷೆ ಈ ಬಗೆಯ ವೃತ್ತಿಗಳ ವಿಲಾಸಕ್ಕೆ ಬೇಕಾಗಿರುವುದಿಲ್ಲ. ಇದರಿಂದ ಅರ್ಥ (ಪದಾರ್ಥ) ಸಹಿತವಾದ ತಿಳಿವಳಿಕೆ, ಅರ್ಥ (ಪದಾರ್ಥ) ರಹಿತವಾದ ತಿಳಿವಳಿಕೆ ಈ ಎರಡೂ ವ್ಯಕ್ತಿಗೆ ಸಂತೋಷ ಅಥವಾ ಸಂತಾಪವನ್ನುಂಟುಮಾಡಲು ಸಮರ್ಥವಾಗಿವೆ ಎಂಬುವುದು ಅನುಭವಸಿದ್ಧವಾಗಿದೆ. ಸ್ಥೂಲಪ್ರಪಂಚದ ಪದಾರ್ಥಗಳು ನಿರ್ದಿಷ್ಟವಾದ ಆಕಾರ, ಪರಿಮಾಣ, ಉಪಯೋಗ ಇವುಗಳಿಂದ ಪರಿಣಾಮದಲ್ಲಿ ಕೆಲವು ವ್ಯತ್ಯಾಸಗಳನ್ನು ಪಡೆದು ವ್ಯಕ್ತಿಗೆ ಅನ್ವಯಿಸುತ್ತವೆ. ಇವು ಅನೇಕ ಬಗೆಯಾಗಿವೆ. ಇವು ಸ್ಥೂಲವಾದ ಶರೀರಕ್ಕೆ ಅನ್ವಯಿಸಬೇಕಾಗಿದ್ದಲ್ಲಿ ಇವುಗಳ ಸ್ಥೂಲರೂಪದಿಂದಲೇ ಅನ್ವಯಿಸಬೇಕು. ಮಾನಸಿಕ ಭಾವನೆಗಳಿಂದ ಸ್ಥೂಲಶರೀರಕ್ಕೆ ಇವರ ಸಂಬಂಧವೇರ್ಪಡುವುದಿಲ್ಲ.

ಹಸಿವಾದರೆ ಭಕ್ಷ್ಯಭೋಜ್ಯಗಳನ್ನು ನೆನೆದ ಮಾತ್ರಕ್ಕೆ ಹೊಟ್ಟೆ ತುಂಬುವುದಿಲ್ಲ. ಆಹಾರ ಮತ್ತು ವಿಹಾರ ಇವುಗಳ ಅನುಭವವು ಇದಕ್ಕೆ ಸಾಕ್ಷಿಯಾಗಿದೆ. ಈ ವಿವೇಚನೆಯು ಗ್ರಾಹ್ಯವಾಗಿರುವ ಪದಾರ್ಥಗಳ ಪರಿಪೂರ್ಣ ಸ್ವರೂಪವನ್ನು ತಿಳಿಯಪಡಿಸುವುದಿಲ್ಲ. ಅದರ ಒಂದಂಶವನ್ನು ಮಾತ್ರ ಸೂಚಿಸುತ್ತದೆ. ಇದರ ಎರಡನೆಯ ಅಂಶವೇ ಆಂತರ್ಯವಾದ ಮಾನಸಿಕ ವೃತ್ತಿಯ ಪ್ರಭಾವ. ಇದು ಸ್ಥೂಲವಾದ ಶರೀರದ ಮೇಲೆ ಪ್ರಸರಿಸುತ್ತದೆ. ಸ್ಥೂಲಶರೀರದ ಆರೋಗ್ಯ ಮತ್ತು ದಾರ್ಢ್ಯವು ಮನಸ್ಸಿನ ಭಾವನೆಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆದರೆ ಮಾನಸಿಕ ಭಾವನೆಗಳಿಗಧೀನವಾಗಿ ಸ್ಥೂಲವಾದ ಶರೀರವಿರುತ್ತದೆಯೇ ವಿನಹ ಶರೀರಕ್ಕಧೀನವಾಗಿಯೇ ಮನಃಪ್ರವೃತ್ತಿ ಇರುವುದಿಲ್ಲ.

ಗ್ರಾಹ್ಯದ ಎರಡು ಮುಖಗಳು—ಅರ್ಥರಹಿತ, ಅರ್ಥಸಹಿತ—ಅನುಭವದಲ್ಲಿದ್ದರೂ ವಿವೇಚನೆಯಿಲ್ಲದಿದ್ದರೆ ಅವುಗಳ ಚಮತ್ಕಾರವು ಮನವರಿಕೆಯಾಗುವುದಿಲ್ಲ. ಈ ಎರಡು ಮುಖಗಳು ಅಂದರೆ ಬಾಹ್ಯವಾಗಿರುವ ಪದಾರ್ಥರೂಪ. ಇದರದೇ ಆದ ಆಂತರ್ಯವಾದ ಮಾನಸಿಕ ವೃತ್ತಿ. ಇವೆರಡಲ್ಲದೆ ಮೂರನೆಯದಾದ ಇನ್ನೊಂದು ಹಂತವುಂಟು. ಅದು ಶಾಸ್ತ್ರನಿಶ್ಚಯ ಅಥವಾ ಸಿದ್ಧಪುರುಷರ ಅನುಭವದಿಂದ ತಿಳಿಯುವ ಅಂಶ. ಅದು ಗ್ರಾಹ್ಯದ ಹಿನ್ನೆಲೆಯಾಗಿಯೂ ಗ್ರಾಹಕಸ್ವರೂಪವಾಗಿಯೂ ಇರುವ ಅಭಿನ್ನವಾದ ತತ್ತ್ವ. ಈ ತತ್ತ್ವವನ್ನು ಪಾರಿಭಾಷಿಕವಾಗಿ **ಚಿತ್, ಪರಾಸಂವಿತ್, ಶಿವ-ಶಕ್ತಿ** ಮೊದಲಾದ ಪದಗಳಿಂದ ಸೂಚಿಸಿರುತ್ತಾರೆ. ಇದರ ಸ್ವರೂಪ ಸ್ವಭಾವಗಳನ್ನು ಪರಿಪೂರ್ಣವಾಗಿ ತಿಳಿಯಪಡಿಸುವುದಕ್ಕೆ ಸಮರ್ಥವಾದ ಪದವಿಲ್ಲ. ನಾವು ಆಡುವ ಭಾಷೆ ಸ್ಥೂಲ ಪದಾರ್ಥಗಳ ಆಕಾರಗಳನ್ನೇ ಪೂರ್ಣವಾಗಿ ಹೇಳಲಾರದು. ಹೀಗಿರುವುದರಿಂದ ಈ ಭಾಷೆಯು ನಿರಾಕಾರವಾದ ತತ್ತ್ವವನ್ನು ಸೂಚಿಸುತ್ತದೆಯೇ ಹೊರತು ವರ್ಣಿಸಲಾರದು. ಈ ಅಂಶಗಳನ್ನು ಅನುಷ್ಠಾನದಿಂದ ಗಮನಿಸಬೇಕು.

ಗ್ರಾಹಕವಾಗಿರುವ ತತ್ತ್ವದ ಸ್ವರೂಪವನ್ನು ಕೂಡ ಪದಗಳು ಸೂಚಿಸುತ್ತವೆಯೇ ಹೊರತು ವರ್ಣಿಸಲಾರವು. ನಮಗೆ ಅನುಭವದಲ್ಲಿ ಉಂಟಾಗಿರುವ ತಿಳಿವಳಿಕೆಗಳು ಅನಂತವಾಗಿವೆ. ಅವುಗಳಲ್ಲಿ ಕೆಲವು ನಮಗೆ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವ ಶಬ್ದ ಸ್ಪರ್ಶ ರೂಪ ರಸ ಗಂಧಗಳನ್ನುಳ್ಳವುಗಳಾಗಿರುತ್ತವೆ. ಅವುಗಳೆಲ್ಲಾ ಎದುವರೆಗೆ ಬೇರೆ ಬೇರೆ ಆಕಾರಗಳಿಂದ ನಮ್ಮ ಭಾವನಾಂಬರದಲ್ಲಿ ತೋರುವುವೋ ಅದುವರೆಗೆ ಅವುಗಳು ಗ್ರಾಹಕನಿಂದ ಬೇರೆಯಾಗಿ ಗ್ರಾಹ್ಯಾಕಾರವನ್ನು ತಾಳುತ್ತಲಿರುತ್ತವೆ. ಇವುಗಳಿಗೆ ಒಂದು ನಿರ್ಬಂಧ ಉಂಟು. ಅದು ಪೌರ್ವಾಪರ್ಯಕ್ರಮ ; ಒಂದಾದನಂತರ ಇನ್ನೊಂದು ಬರುವುದು ಸಹಜ.

ಒಂದು ತಿಳಿವಳಿಕೆ ಬಂದನಂತರ ಇನ್ನೊಂದು ತಿಳಿವಳಿಕೆ ಬರುತ್ತದೆ. ಕೋಟ್ಯನು ಕೋಟಿ ಆಕಾರಗಳು ಆಂತರ್ಯವಾಗಿದ್ದರೂ ಆಯಾ ಕಾಲದಲ್ಲಿ ಒಂದೊಂದಾಗಿ ನೆನಪಿಗೆ ಬಂದು ಅವಗಾಹನೆಗೆ ಬರುತ್ತವೆ. ಇದರಿಂದ ಗ್ರಾಹಕನು ಯಾವ ಬಗೆಯ ಚಿದ್ರೂಪಿಯಾಗಿದ್ದಾನೋ ಆ ತಿಳಿವಳಿಕೆಯ ಆಕಾರಗಳೂ ಕೂಡ ಅದೇ ಜಾತೀಯವಾಗಿರುತ್ತವೆ.

ಆ ತಿಳಿವಳಿಕೆಗಳು ಅಭಿನ್ನವಾದ ಸ್ಥಿತಿಯಲ್ಲಿ ಚಿದ್ರೂಪವನ್ನೇ ಪಡೆಯುತ್ತವೆ. ಈ ಸ್ಥಿತಿಯಲ್ಲಿ ಇವುಗಳು ಸಂತೋಷ ಅಥವಾ ಸಂತಾಪಗಳಿಗೆ ಕಾರಣಗಳಾಗುವುದಿಲ್ಲ. ಇವುಗಳೇ ಮಾನಸಿಕಭಾವನೆಗಳಾಗಿ ಹೊರಹೊಮ್ಮಿದಾಗ ಬೇರೆಬೇರೆಯಾಗಿ ತೋರುತ್ತವೆ. ಈ ಭೇದಜ್ಞಾನದಿಂದ ಸಂತೋಷಸಂತಾಪಗಳುಂಟಾಗುತ್ತವೆ ಮತ್ತು ಪ್ರವೃತ್ತಿಗೆ ಪ್ರೇರಕಗಳಾಗುತ್ತವೆ. ಪ್ರವೃತ್ತಿಕ್ರಮದಲ್ಲಿ ಎಲ್ಲಾ ವ್ಯವಹಾರಗಳೂ ಮಾನಸಿಕವೃತ್ತಿಗಳ ಪ್ರೇರಣೆಯಿಂದಲೇ ನಡೆಯುತ್ತವೆ. ಇದು ಬಾಹ್ಯಕ್ರಿಯೆ. ಈ ಮೂರು ಬಗೆಯ ಸ್ಥಿತಿಗಳು ಅಂದರೆ ಭೇದಜ್ಞಾನ, ಭೇದಾಭೇದಜ್ಞಾನ, ಅಭೇದಜ್ಞಾನ ಎಲ್ಲರ ಅನುಭವದಲ್ಲಿಯೂ ಇವೆ. ಪಾಂಚಭೌತಿಕವಾದ ಸ್ಥೂಲಪದಾರ್ಥಗಳ ಸ್ವರೂಪ ಎಲ್ಲಾ ಪ್ರಾಣಿಗಳಿಗೂ ಅನುಭವದಲ್ಲಿದೆ. ಸೂಕ್ಷ್ಮದೃಷ್ಟಿಯಿಂದ ವಿವೇಚಿಸುವವರಿಗೆ ಈ ಎರಡು ಹಂತಗಳನ್ನೂ ಮೀರಿದ ಅಭಿನ್ನಾವಸ್ಥೆಯು ಗೋಚರಿಸುತ್ತದೆ. ಅನಂತವಾಗಿ ವಿಚಿತ್ರವಾಗಿ ನಡೆಯುತ್ತಿರುವ ವ್ಯವಹಾರಗಳೆಲ್ಲಾ ಈ ಮೂರು ವಿಭಾಗಗಳಲ್ಲಿ ಅಡಗಿರುತ್ತವೆ. ತಿಳಿವಳಿಕೆಗಳು ಭಿನ್ನವಾಗಿರುತ್ತವೆ. ಮಾನಸಿಕ ಭಾವನೆಗಳು ಭಿನ್ನಾಭಿನ್ನವಾಗಿರುತ್ತವೆ. ಚಿದವಸ್ಥೆಯಲ್ಲಿ ಇವೆಲ್ಲವೂ ಅಭಿನ್ನವಾಗಿರುತ್ತವೆ.

ವಸ್ತುತೋ ಹಿ ತ್ರಿಧೈವೇಯಂ ಜ್ಞಾನಸತ್ತಾ ವಿಜೃಂಭತೇ
ಭೇದೇನ ಭೇದಾಭೇದೇನ ತಥೈವಾಽಭೇದಭಾಗಿನಾ

(ತಂತ್ರಾಲೋಕ)

ಇದರಿಂದ ವಿಶ್ವಕ್ಕೆಲ್ಲಾ ಮೂಲಕಾರಣವಾಗಿರುವ ಅಭಿನ್ನವಾಗಿರುವ ಸಂವಿತ್ ಶಕ್ತಿಯೇ ಜ್ಞಾನಶಕ್ತಿಯಿಂದ ಅಭೇದಾವಸ್ಥೆಯನ್ನೂ ಸ್ಮೃತಿಶಕ್ತಿಯಿಂದ ಭಿನ್ನಾಭಿನ್ನಾವಸ್ಥೆಯನ್ನೂ, ಅಪೋಹನಶಕ್ತಿಯಿಂದ ಪರಿಚ್ಛಿನ್ನವಾದ ಭೇದಭಾವನೆಗಳನ್ನೂ ತನ್ನ ಚಮತ್ಕಾರದಿಂದಲೂ ಸ್ವಾತಂತ್ರ್ಯದಿಂದಲೂ ಹೊರಹೊಮ್ಮಿಸುತ್ತಿರುತ್ತದೆ.

ನ ಚೇದಂತಃ ಕೃತಾನಂತ ವಿಶ್ವರೂಪೋ ಮಹೇಶ್ವರಃ ।
ಸ್ಯಾದೇಕಃ ಚಿದ್ವಪುಃ ಜ್ಞಾನಸ್ಮೃತ್ಯಪೋಹನಶಕ್ತಿಮಾನ್ ॥

ಈ.ಪ್ರ. ಅಧ್ಯಾಯ ೧, ಆಹ್ನಿಕ ೩, ಕಾರಿಕಾ ೭

ವಾಚ್ಯವಾಚಕಭಾವ

ಸಾಮಾನ್ಯಾನುಭವದಿಂದ ಭಿನ್ನ ಅಭಿನ್ನ ಭಿನ್ನಾಭಿನ್ನವಾಗಿರುವ ಅವಸ್ಥೆಗಳನ್ನು ವಿವೇಚಿಸಲಾಯಿತು. ಇನ್ನು ಉತ್ತಮಾಧಿಕಾರಿಗಳು ಗಮನಿಸಬೇಕಾದ ವಾಚ್ಯವಾಚಕಭಾವ ಎಂಬಂಶವನ್ನು ಪರಿಶೀಲಿಸಬೇಕಾಗಿದೆ. **ವಾಚ್ಯ** ಅಂದರೆ ಪದಾರ್ಥ. ಯಾವ ಪದದಿಂದ ಯಾವ ಅರ್ಥವನ್ನು ಸೂಚಿಸುತ್ತೇವೆಯೋ ಆ ಪದ **ವಾಚಕ**. 'ದನ' ಎಂಬ ಪದ ವಾಚಕ. ನಾಲ್ಕು ಕಾಲುಳ್ಳ ಆ 'ಪ್ರಾಣಿ' ವಾಚ್ಯ. ಈ ವಾಚ್ಯವಾಚಕಭಾವವು ಒಂದು ಬಗೆಯ ಸಂಬಂಧವಾಗಿದೆ. ಇದು ಬಹುಮಟ್ಟಿಗೆ ಮನುಷ್ಯಕಲ್ಪಿತ

ಸಂಕೇತ. ಈ ಸಂಕೇತಗಳ ಮೂಲಕ ಭಾಷೆಯಾಗುತ್ತದೆ. ತಾವು ತಿಳಿಸಬೇಕಾಗಿರುವ ವಿಷಯಗಳನ್ನು ಭಾಷೆಗಳಲ್ಲಿ ಬರೆದಿಟ್ಟರೆ ಅದು ವಾಙ್ಮಯವೆನಿಸುವುದು. ಈ ವಾಙ್ಮಯಕ್ಕೆ ತಳಹದಿಯಾಗಿರುವುವು ಅಕ್ಷರಗಳು. ನಮ್ಮ ಹಿರಿಯರು ಭಾಷೆಗಳ ವೈಚಿತ್ರ್ಯಗಳನ್ನೂ ವಾಙ್ಮಯದ ಗೌರವವನ್ನೂ ಪರಿಶೀಲಿಸುವುದಕ್ಕೆ ಮುಂಚೆ ಇವು ಯಾವ ಆಧಾರದ ಮೇಲೆ ನಿಂತಿವೆ ಎಂಬುದನ್ನು ಮನನಮಾಡಿ ೫೧ ಅಕ್ಷರಗಳು ನಮ್ಮ ಭಾಷೆಯ ತಳಹದಿ ಎಂದು ನಿರ್ಣಯಿಸಿರುತ್ತಾರೆ. ಮನುಷ್ಯನಿಂದ ಉಚ್ಚರಿಸಲ್ಪಡತಕ್ಕ ಅಕ್ಷರಗಳು ಐವತ್ತೊಂದೇ. ಈ ಅಕ್ಷರಗಳು ಮನುಷ್ಯನ ಕಂಠ, ಜಿಹ್ವೆ, ತಾಲು, ದಂತ, ನಾಸ, ಓಷ್ಠ ಮೊದಲಾದ ಸ್ಥಾನ ಮತ್ತು ಕರಣಗಳ ಪ್ರಯತ್ನದಿಂದ ಉಚ್ಚರಿಸಲ್ಪಡುತ್ತವೆ. ಈ ಅಕ್ಷರಗಳನ್ನು ಸ್ವರ, ವ್ಯಂಜನ, ಯೋಗವಾಹ ಎಂದು ವಿಂಗಡಿಸಿರುತ್ತಾರೆ. ಇವುಗಳ ಉಚ್ಚಾರಣೆಗೆ ಮೂಲರೂಪ ಯಾವುದು ಎಂಬ ಪ್ರಶ್ನೆ ಏಳುತ್ತದೆ. ಇದು ಸೂಕ್ಷ್ಮದೃಷ್ಟಿಯ ಜಿಜ್ಞಾಸೆ. ಇದಕ್ಕೆ ಮೂಲವು ನಾದ. ಆ ನಾದವು ಎಲ್ಲಿಂದ, ಯಾವ ರೂಪದಿಂದ ಹೊರಡುತ್ತದೆಂಬುದು ತಿಳಿಯಬೇಕಾದ ಅಂಶ.

ಸಂಜ್ಞಾಸಂಜ್ಞೀಭಾವದಿಂದ ಬಳಕೆಯಲ್ಲಿರುವ ವ್ಯವಹಾರಕ್ಕೂ ವಾಙ್ಮಯಕ್ಕೂ ಸಂಜ್ಞಾಭಾವವನ್ನು ಪಡೆದಿರುವ ವಿಭಿನ್ನವಾದ ಅಕ್ಷರಗಳಿಗೂ ಮೂಲವಾಗಿರುವುದು ಅಭಿನ್ನವಾದ ನಾದ. ಈ ನಾದದ ಅಭಿವ್ಯಕ್ತಿಗೆ ಪ್ರೇರಣೆಯು ಆವಶ್ಯಕ. ನಾವು ಒಂದು ವಿಷಯವನ್ನು ಹೇಳಬೇಕೆಂದು ಪ್ರೇರಣೆಯುಂಟಾದಾಗ ಅಕ್ಷರಗಳನ್ನು ಉಚ್ಚರಿಸುವುದರ ಮೂಲಕ ಅಭಿಪ್ರಾಯವನ್ನು ಹೊರಪಡಿಸುತ್ತೇವೆ. ಪ್ರೇರಣೆ ಉಂಟಾಗುವ ಸ್ಥಿತಿ, ಪ್ರೇರಣೆ ಇಲ್ಲದೆ ಇರುವ ಸ್ಥಿತಿ ಈ ಎರಡೂ ನಮ್ಮ ಅನುಭವದಲ್ಲಿವೆ. ಪ್ರೇರಣೆಯಿಲ್ಲದ ಪ್ರಶಾಂತವಾದ ಸ್ವರೂಪ ಸತ್ತಾತ್ಮಕವಾಗಿರುವ ಸ್ಥಿತಿಯು ಅಭಿನ್ನವಾದುದು. ಪ್ರೇರಣೆಯುಂಟಾದರೆ ಅಭಿನ್ನಾವಸ್ಥೆಯಿಂದ ಭಿನ್ನಾವಸ್ಥೆ ಅಂಕುರಿಸುತ್ತದೆ. ಅಲ್ಲಿಂದ ಮುಂದಕ್ಕೆ ನಾವು ಯಾವುದನ್ನು ಹೇಳಬೇಕು ಯಾವುದನ್ನು ಹೇಳಬಾರದು ಎನ್ನುವ ಭೇದವಿಷಯಗಳ ನಿರ್ಣಯವಾಗುತ್ತದೆ. ಆಗಲೇ ನಮಗೆ ಗ್ರಾಹ್ಯ ಗ್ರಾಹಕ ಭೇದವು ಸ್ಫುಟವಾಗುತ್ತದೆ. ಗ್ರಾಹ್ಯಪ್ರಪಂಚವನ್ನು ಈ ರೀತಿ ವರ್ಣಿಸಬೇಕೆಂಬ ಸ್ಫುಟವಾದ ಭೇದಜ್ಞಾನದಿಂದ ಅಭಿಪ್ರಾಯಗಳನ್ನು ಹೊರಪಡಿಸುತ್ತೇವೆ. ಈ ವಿವೇಚನೆಯಿಂದ ಗ್ರಾಹಕನಾಗಿರುವವನು ಮೂಲಸ್ವರೂಪದಲ್ಲಿ ಪ್ರಶಾಂತವಾದ ಅಭಿನ್ನವಾದ ಸಂವಿದ್ರೂಪಿಯಾಗಿರುವನು ಎಂಬುದು ಸ್ಥಿರವಾದಂತಹ ಅನುಭವವಾಗಿರುತ್ತದೆ. ಅಲ್ಲಿಂದಾಚೆಗೆ ಹಂತಗಳಿವೆ. ಮೊದಲನೆಯ ಹಂತ **ಆಕೂತ**. ಅಲ್ಲಿಂದ ಆಕೂತವು **ನಾದ**ವಾಗಿ ಪರಿಣಮಿಸುತ್ತದೆ. ಈ ಎರಡನೆಯ ಹಂತದಲ್ಲಿ ಆ ನಾದವು ಭೇದಭಾವನೆಯುಳ್ಳ ಅಭಿಪ್ರಾಯವನ್ನು ತಾಳುತ್ತದೆ. ಆ ನಾದವೇ ಮೂರನೆಯ ಹಂತದಲ್ಲಿ **ಅಕ್ಷರ** ರೂಪವಾಗಿ ಹೊರಹೊಮ್ಮುತ್ತದೆ. ಅಲ್ಲಿಂದ ಮುಂದಕ್ಕೆ **ವಾಕ್ಯ**ಗಳಾಗಿ ಭಾಷಾರೂಪವನ್ನು ಪಡೆಯುತ್ತದೆ. ಈ ರೀತಿಯಾಗಿ ಅಕ್ಷರಗಳು ಪದಗಳು **ವಾಙ್ಮಯ** ರೂಪವನ್ನು ಪಡೆಯುವ ಸ್ಥಿತಿಗಳಲ್ಲಿ ಅಭೇದವ್ಯಾಪ್ತಿಯು ಮರೆಯಾಗಿ ಭೇದ ವ್ಯಾಪ್ತಿಯೇ ದೃಢವಾಗಿ

ರುತ್ತದೆ. ಭಾಷೆಯ ವ್ಯವಹಾರದಿಂದ ಅತೀತ ಅನಾಗತ ವಿಷಯಗಳನ್ನು ಪರಿಶೀಲಿಸುತ್ತೇವೆ. ವಸ್ತುತಃ ವಿಚಾರ ಮಾಡಿದರೆ ಇವುಗಳಲ್ಲಿ ಒಂದಕ್ಕೊಂದಕ್ಕೆ ಇರುವ ಸಂಬಂಧ ವಿಚಿತ್ರವಾಗಿ ಕಂಡುಬರುತ್ತದೆ. ಭಾಷೆಯ ಮೂಲಕ ಸತ್ಯವನ್ನು ಹೇಳಬಹುದು, ಅಸತ್ಯವನ್ನು ಹೇಳಬಹುದು. ವ್ಯವಹಾರದಲ್ಲುಂಟಾಗುವ ಸಂತೋಷಸಂತಾಪಗಳು ಸಾಂಕೇತಿಕವಾಗಿರುತ್ತವೆಯೇ ಹೊರತು ಸ್ವಾಭಾವಿಕವಾಗಿರುವುದಿಲ್ಲ. ಜ್ಞಾನಿಯು ಇದರ ರಹಸ್ಯವನ್ನು ತಿಳಿದಿರುತ್ತಾನೆ. ಆದುದರಿಂದ ಅವನು ವಾಕ್ಕನ್ನು ದುರುಪಯೋಗಪಡಿಸುವುದಿಲ್ಲ. ವಾಗ್ದೇವಿಯ ಪ್ರಯೋಜನವನ್ನು ಆಯಾ ಹಂತಕ್ಕನುಸಾರವಾಗಿ ನಿರ್ಣಯಿಸುತ್ತಾನೆ.

ಅಕಾರಾದಿ ಷಕಾರದವರೆಗಿರುವ **ಮಾತೃಕವು** ವಾಚ್ಯವಾಚಕಗಳಿಂದ ಕೂಡಿರುವ ವಿಶಿಷ್ಟಜ್ಞಾನದಿಂದ ಶೋಕ ವಿಸ್ಮಯ ಹರ್ಷ ರಾಗಗಳನ್ನುಂಟುಮಾಡುತ್ತಾ ಅನೇಕ ಲಿಪಿ ಕ್ರಮಗಳ ಸನ್ನಿವೇಶಗಳಿಂದ ಅನೇಕ ರೂಪಗಳನ್ನು ಪಡೆದು ವಿಶ್ರಾಂತಿಯಿಲ್ಲದೆ ಬಹಿರ್ಮುಖವಾದ ಜ್ಞಾನಗಳಿಂದ ಬಂಧ ಉಂಟುಮಾಡುತ್ತದೆ. ಅಂತಃಪ್ರಪಂಚದಲ್ಲಿ ವಾಚ್ಯವಾಚಕ ಭಾವವಿಲ್ಲ. ಹೀಗೆ ವಾಚ್ಯವಾಚಕ ಭಾವವಿಲ್ಲದ ವಿಶ್ವಕ್ಕೆ ಜನನಿಯಾದ ಮಹಾಶಕ್ತಿಯು ಬಾಹ್ಯಪ್ರಪಂಚದಲ್ಲಿ ತನ್ನ ಸ್ವಶಕ್ತಿಯಿಂದ ಅನೇಕ ರೂಪಗಳನ್ನು ತಾಳಿದೆ. ಒಳಗಿನ ಪ್ರಪಂಚದಲ್ಲಿ **ಧ್ಯಾನಕ್ಕೆ** ಹೋದಾಗ್ಗೆ ಅಕಾರಾದಿ ಷಕಾರಾಂತ ಅಕ್ಷರಗಳಿಲ್ಲ. ಅಕ್ಷರಗಳಿಲ್ಲದೆ ಇರುವುದರಿಂದ ವಾಚ್ಯವಾಚಕ ಭಾವವಿಲ್ಲ. ವಾಚ್ಯವಾಚಕ ಭಾವವಿಲ್ಲದೆ ಇರುವುದರಿಂದ ವಿಕಲ್ಪವಿಲ್ಲ. ವಿಕಲ್ಪವೇ ಭೇದಜ್ಞಾನ. ಅಕ್ಷರಗಳಿಂದ ಅಕ್ಷರವಿಲ್ಲದೆ ಇರುವ ಸ್ಥಿತಿಗೆ ಹೋಗುವುದೇ ಉಪಾಸನಾ. ಅಕ್ಷರಗಳಿಂದ ಕೂಡಿರುವುದು ಸವಿಕಲ್ಪಕ. ಸವಿಕಲ್ಪಕ್ಕೆ ಕಾರಣವಾಗಿರುವ ವಾಚ್ಯವಾಚಕ ಭಾವವು ಬಂಧಕವಾಗಿ ಪರಿಣಮಿಸುತ್ತದೆ. ಪ್ರತಿಯೊಂದು ಚಲನಕ್ಕೂ ಒಂದು ಕಾರಣ ಒಂದು ಪ್ರಯೋಜನ. ಪ್ರಯೋಜನ ಇಂಥದ್ದು ಅಂತ ಹೇಳುವುದಕ್ಕೆ ಅಕ್ಷರಗಳು ಬೇಕು. ಅಕ್ಷರಗಳಿಂದ ಮಂತ್ರ. ಜಪ ಧ್ಯಾನದಲ್ಲಿ ವಾಚ್ಯವಾಚಕ ಭಾವವಿಲ್ಲ. ಪರಮಾರ್ಥಭಾವವಿದೆ—ಮಂತ್ರಗಳು ಶಕ್ತಿರೂಪವಾಗಿವೆ. ಈ ಶಕ್ತಿಯನ್ನೇ **ಮಾತೃಕಾ** ಎಂದು ತಿಳಿಯಬೇಕು.

ಈ ಮೇಲಿನ ವಿವೇಚನೆಯಿಂದ ವಾಗ್ದೇವಿಯ ನಾಲ್ಕು ರೂಪಗಳು ಈ ಸಿದ್ಧಾಂತಕ್ಕನುಸಾರವಾಗಿ ಈ ರೀತಿ ಇವೆ. ಅಭಿನ್ನಾವಸ್ಥೆಯಲ್ಲಿ ಪ್ರಶಾಂತವಾದ ಸ್ಥಿತಿಗೆ **ಪರಾ** ಎಂದು ಹೆಸರು. ಪ್ರೇರಣೆಯುಂಟಾಗಿ ಆಕೂತದಿಂದ ಕೂಡಿರುವುದಕ್ಕೆ **ಪಶ್ಯಂತಿ** ಎಂದು ಸಂಜ್ಞೆ. ಗ್ರಾಹ್ಯಗ್ರಾಹಕ ವಿಭಾಗವನ್ನು ಪಡೆದು ನಾದರೂಪವನ್ನು ಹೊಂದಿ ಭೇದರೂಪದಿಂದ ಹೊರಹೊಮ್ಮಲಿರುವ ಸ್ಥಿತಿಗೆ **ಮಧ್ಯಮಾ** ಎಂದು ಪರಿಭಾಷೆ. ೫೧ ಅಕ್ಷರರೂಪವಾಗಿ ಹೊರಹೊಮ್ಮುವ ಹಂತಕ್ಕೆ **ವೈಖರೀ** ಎಂಬ ಶಾಸ್ತ್ರೀಯ ಸಂಜ್ಞೆ. ಅಭಿನ್ನವಾದ ಆ ಪರಾಶಕ್ತಿಯ ಐಶ್ವರ್ಯವೇ ಈ ವಿಚಿತ್ರವಾದ ಅನಂತವಾದ ಭೇದಪ್ರಪಂಚ. ಈ ರೀತಿ ಅನುಸಂಧಾನಮಾಡುವವನಿಗೆ ಈ ೫೧ ಅಕ್ಷರಗಳೇ ಮಾತೃಕಾಶಕ್ತಿ ಸ್ವರೂಪಗಳಾಗಿರುತ್ತವೆ. ಇನ್ನೊಂದು ದೃಷ್ಟಿಯಿಂದ ಈ ೫೧ ಅಕ್ಷರಗಳೇ ತತ್ತ್ವಸ್ವರೂಪಗಳಾಗಿರುತ್ತವೆ. ಮಾತೃಕಾಚಕ್ರರೂಪವಾದ ಈ ಅಕ್ಷರಸಮಾಮ್ನಾಯವು—ಶುದ್ಧವಾದ

ಧ್ಯಾನದಿಂದ ಭಿನ್ನ, ಭಿನ್ನಾಭಿನ್ನ, ಅಭಿನ್ನ ಈ ಅವಸ್ಥೆಗಳಲ್ಲಿ ಅನುಸಂಧಾನ ಮಾಡುವವನಿಗೆ ಸಮಾಧಿಲಾಭವನ್ನುಂಟುಮಾಡುತ್ತದೆ. ಈ ರೀತಿಯಾಗಿ ವಾಚ್ಯವಾಚಕ ಭಾವಗಳ ಮೂಲಕ ಪರಿಶೀಲಿಸುವುದು ಒಂದು ಉತ್ತಮವಾದ ಸಾಧನಾಕ್ರಮ.

ವ್ಯವಹಾರಗಳೆಲ್ಲಾ ಅಕ್ಷರಗಳಿಂದ ನಡೆಯಬೇಕಾಗಿದೆ. ಅಕ್ಷರಗಳೇ ಮಂತ್ರಗಳು. ಈ ಮಂತ್ರಗಳು ಶಕ್ತಿರೂಪವಾಗಿವೆ. ಈ ಶಕ್ತಿಯನ್ನೇ ಮಾತೃಕಾ ಎಂದು ತಿಳಿಯಬೇಕು. ಮಾತೃಕಾ ಶಿವಾತ್ಮಕವಾಗಿದೆ. ಈ ರಹಸ್ಯವನ್ನು ತಿಳಿದಿರುವವರಿಗೆ ತತ್ತ್ವದ ಅರಿವು ಪೂರ್ಣವಾಗಿ ಉಂಟಾಗುತ್ತದೆ.

ಸರ್ವೇ ವರ್ಣಾತ್ಮಕಾ ಮಂತ್ರಾಃ । ತೇ ಚ ಶಕ್ತ್ಯಾತ್ಮಕಾಃ ಪ್ರಿಯೇ ।
ಶಕ್ತಿಸ್ತು ಮಾತೃಕಾ ಜ್ಞೇಯಾ । ಸಾ ಚ ಜ್ಞೇಯಾ ಶಿವಾತ್ಮಿಕಾ ॥

(ಶ್ರೀತಂತ್ರಸದ್ಭಾವ)

ಮಾತೃಕಾನುಸಂಧಾನ

ಪರಾಔನ್ಮುಖ್ಯೆ, ಇಚ್ಛಾಸಾಪರಾ ಇವ, ಜ್ಞಾನಶಕ್ತ್ಯಾನ್ಮುಖ್ಯೇ ಪಶ್ಯಂತಿ ಕ್ರಿಯಾ ಶಕ್ತ್ಯಾನ್ಮುಖ್ಯೆ ಮಧ್ಯಮಾ, ಸ್ಥಿತೌ ವೈಖರಿ—ಪರಾಶಕ್ತಿ ಮೂಲಾಧಾರದಲ್ಲಿ ನಿರಾಕಾರ ಶಕ್ತಿಸ್ವರೂಪ. ಪಶ್ಯಂತಿ ನಾಭಿಯಲ್ಲಿ ಭೇದಪ್ರಪಂಚವನ್ನು ಪ್ರವೇಶಿಸುವುದು. ಮಧ್ಯಮಾ ಎದೆಯಲ್ಲಿ ಶಬ್ದಸ್ವರೂಪವನ್ನು ಹೊಂದುವುದು. ವೈಖರಿ ನಾಲಿಗೆಯಲ್ಲಿ ಅಕ್ಷರರೂಪವಾಗಿ ಹೊರಹೊಮ್ಮುವುದು. ಪ್ರತಿಯೊಂದು ಅಕ್ಷರವೂ ಒಂದೊಂದು ದೇವತಾಶಕ್ತಿವಿಶಿಷ್ಟ ವಾಗಿರುತ್ತದೆ.

ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲಿ ಅನುಭವಿಸುವವನು ನಾನೇ ಎಂದು ತಿಳಿದು ಹಕಾರಾಂತ ವರ್ಣಗಳಲ್ಲಿ ನ್ಯಾಸಮಾಡಿ ಧ್ಯಾನಮಾಡಿ ಇಚ್ಛಾ ಜ್ಞಾನ ಕ್ರಿಯಾಶಕ್ತಿ ಗಳನ್ನು ಹೆಚ್ಚಿಸಿಕೊಂಡು ಆನಂದಪಡುವುದೇ ಮಾತೃಕಾನುಸಂಧಾನ.

ಭಕ್ತಿಯ ಅನುಷ್ಠಾನದಲ್ಲಿ ಪರಾವಾಕ್ಕನ್ನು ಈ ಕೆಳಗೆ ಕಂಡಂತೆ ಉಪಯೋಗಿಸಿ ಕೊಂಡು ಧ್ಯಾನಮಾಡಬೇಕೆಂದು ಮಗ್ಗೆಮಾಯಿದೇವರು ತಮ್ಮ ಅನುಭವಸೂತ್ರದಲ್ಲಿ ವಿವರಿಸಿರುವರು —

ಪೂಜೆ ಕೈಕರಣ ಸಾಮಗ್ರಿಗಳಿಂದ ಮಾಡುವ ಕ್ರಿಯಾತ್ಮಕವಾದ ಭಕ್ತಿವೈಖರಿ ಎಂದೂ ಪರಮಾತ್ಮನನ್ನು ಸ್ತೋತ್ರಗಳಿಂದ ನೆನೆಯುವುದನ್ನು ಮಧ್ಯಮಾ ಎಂದೂ ದೃಶ್ಯ ರೂಪದಿಂದ ನೆನೆಯುತ್ತಾ ಆರಾಧಿಸುವುದನ್ನು ಪಶ್ಯಂತೀ ಎಂದೂ ಮನಸ್ಸಿನಲ್ಲಿ ಏಕಾಗ್ರತೆ ಯಿಂದ ಧ್ಯಾನಮಾಡುವುದನ್ನು ಪರಾ ಎಂದೂ ಭಕ್ತಿಪೂರ್ವಕ ಪರಾವಾಕ್ಕನ್ನು ಕುರಿತು ಅನುಸಂಧಾನ ಮಾಡುವುದೆಂದು ಹೇಳಿರುವರು.

ಮನಸ್ಥಿರಂ ಯಸ್ಯ ವಿನಾವಲಂಬನಂ
ವಾಯುಸ್ಥಿರೋ ಯಸ್ಯ ವಿನಾವರೋಧನಂ
ದೃಷ್ಟಿ ಸ್ಥಿರೋ ಯಸ್ಯ ವಿನಾವಲೋಕನಂ
ಸ್ಯಾತ್ ಸ್ಯೈವ ಮುದ್ರಾ ವಿಮಲಾ ಚ ಖೇಚರೀ

(ಇದೇ ಶಕ್ತಿಚಕ್ರವಿಲಾಸ)

ಜಾಗ್ರದಾದ್ಯವಸ್ಥೆಗಳು

ಜಾಗ್ರದವಸ್ಥೆಯಲ್ಲಿ ಚಲನವಲನಗಳು ಪ್ರಧಾನವಾಗಿರುತ್ತವೆ. ಆದುದರಿಂದ ಕ್ರಿಯಾಶಕ್ತಿಗೆ ಪ್ರಾಧಾನ್ಯ. ಇದು 'ಸಕಲ' ಪ್ರಮಾತೃಗಳ ಅನುಭವಕ್ಷೇತ್ರ. ಸ್ವಪ್ನಾವಸ್ಥೆಯಲ್ಲಾದರೋ ಸ್ಥೂಲವಾದ ಶಾರೀರಿಕ ಚಲನವಲನಗಳಿಲ್ಲ. ಹಾಗೆಯೇ ಜಾಗ್ರದವಸ್ಥೆಯಲ್ಲಿ ಅನುಭವಿಸುವ ಬಾಹ್ಯಪದಾರ್ಥಗಳ ಸಂಬಂಧವೂ ಇಲ್ಲ. ಆದರೆ ಹಿಂದೆ ಅನುಭವಿಸಿರುವ ಸಂಸ್ಕಾರಗಳು ಸ್ವಪ್ನಾವಸ್ಥೆಯಲ್ಲಿ ವಿಚಿತ್ರ ರೀತಿಯಲ್ಲಿ ಗೋಚರಿಸುತ್ತವೆ. ಇದು ಕೇವಲ ಇಚ್ಛಾಮಾತ್ರವಾದುದರಿಂದ ಇಚ್ಛಾಶಕ್ತಿಗೆ ಪ್ರಾಧಾನ್ಯ. ಈ ಸ್ಥಿತಿಯಲ್ಲಿರುವ ಪ್ರಮಾತೃವಿಗೆ ಪ್ರಳಯಾಕಲನೆಂದು ಹೆಸರು.

ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳು ಎಲ್ಲರ ಅನುಭವದಲ್ಲಿದ್ದರೂ ಈ ಎರಡು ಅವಸ್ಥೆಗಳಿಗಿರುವ ಭೇದವನ್ನು ಗಮನಿಸುವುದಿಲ್ಲ—ಗಮನಿಸಿದರೆ ವಿಮರ್ಶಕನಿಗೆ ತತ್ತ್ವಜ್ಞಾನದ ಮೊದಲನೇ ಮೆಟ್ಟಲಿನ ಪರಿಚಯವಾಗುತ್ತದೆ. ಈ ಎರಡು ಅವಸ್ಥೆಗಳಲ್ಲಿ ಎದ್ದು ಕಾಣುವ ಮುಖ್ಯವಾದ ವ್ಯತ್ಯಾಸವೇನೆಂದರೆ ಜಾಗ್ರದವಸ್ಥೆಯಲ್ಲಿ ಸ್ವಪ್ನದ ವಿಷಯ ಜ್ಞಾಪಕಕ್ಕೆ ಬರುತ್ತದೆ. ಸ್ವಪ್ನದಲ್ಲಿ ಜಾಗ್ರದವಸ್ಥೆಯ ವಿಷಯಗಳು ಜ್ಞಾಪಕಕ್ಕೆ ಬರುವುದಿಲ್ಲ. ಸ್ವಪ್ನವು ಅಲ್ಪಕಾಲಾನುಭವವುಳ್ಳ ಸ್ಥಿತಿ. ಜಾಗ್ರದವಸ್ಥೆಯು ದೀರ್ಘಕಾಲ ಅನುಭವದಲ್ಲಿರುತ್ತದೆ. ಸಂತೋಷಸಂತಾಪಗಳು ಈ ಎರಡು ಅವಸ್ಥೆಗಳಲ್ಲಿಯೂ ಇವೆ.

ಸ್ವಪ್ನವು ಹೇಗೆ ಉಂಟಾಗುತ್ತವೆ ಎಂಬ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ವಾತ ಪಿತ್ತ ಶ್ಲೇಷ್ಮ—ಇವುಗಳ ವಿಕಾರವೆಂದು ಕೆಲವರು ಹೇಳುತ್ತಾರೆ. ಸತ್ತ್ವರಜಸ್ತಮಗಳೆಂಬ ಗುಣಗಳ ಉಬ್ಬರವಿಳಿತಗಳೆಂದು ಮತ್ತೆ ಕೆಲವರು ಹೇಳುತ್ತಾರೆ. ಆಹಾರ ಪಚನವಾಗುವುದರ ವ್ಯತ್ಯಾಸದಿಂದ ಈ ಬಗೆಯ ಅನುಭವವೆಂದು ಇನ್ನು ಕೆಲವರು ಅಭಿಪ್ರಾಯಪಡುತ್ತಾರೆ. ಮಾನಸಿಕವಾದ ಸಂಸ್ಕಾರಗಳು ಈ ರೀತಿಯಾಗಿ ಅನುಭವವಾಗುವುದೆಂದು ಶಾಸ್ತ್ರಜ್ಞರ ಹೇಳಿಕೆ. ಬಿಸಿಲುಗುದುರೆಯಲ್ಲಿ ನೀರು, ಹಗ್ಗದಲ್ಲಿ ಹಾವು, ಕಪ್ಪೆಚಿಪ್ಪಿನಲ್ಲಿ ಬೆಳ್ಳಿ, ಸ್ವಪ್ನ ಇವುಗಳೆಲ್ಲಾ ವಿಷಯರಹಿತವಾದ ತಿಳಿವಳಿಕೆಗಳೆಂದು ಇವುಗಳನ್ನು ಅಸತ್ಯ, ಮಿಥ್ಯೆ, ಸುಳ್ಳು, ಮಾಯೆ—ಎಂಬ ಪದಗಳಿಂದ ಅಲ್ಲಗಳೆಯುತ್ತಾರೆ. ಈ ದೃಷ್ಟಾಂತವನ್ನೇ ಮುಂದಿಟ್ಟುಕೊಂಡು ವಿಶ್ವವನ್ನೇ ಮಿಥ್ಯೆಯೆಂದು ಹೇಳಬೇಕೆಂದು ಕೆಲವರು ಬಯಸುತ್ತಾರೆ. ಇವೆಲ್ಲಾ ಯುಕ್ತಿವಾದ.

ಉಪನಿಷತ್ತುಗಳಲ್ಲಿ ಜೀವಾತ್ಮನು ಕರ್ಮಫಲವನ್ನನುಭವಿಸುವುದು ಎರಡು ಬಗೆಯೆಂದು ವಿವರಿಸಿರುತ್ತಾರೆ. ಕೆಲವು ಫಲಗಳನ್ನು ಜಾಗ್ರದವಸ್ಥೆಯಲ್ಲಿಯೂ, ಕೆಲವು ಫಲಗಳನ್ನು ಸ್ವಪ್ನಾವಸ್ಥೆಯಲ್ಲಿಯೂ ಅನುಭವಿಸುವನು ಎಂದು ಹೇಳುತ್ತಾರೆ. ಪರಮಾತ್ಮನು ಇವನ ಕರ್ಮಫಲಗಳ ಅನುಭವಕ್ಕೋಸ್ಕರ ಸ್ವಪ್ನದಲ್ಲಿ ರಥ, ಕಾಡು, ಮನೆ, ಸರೋವರ ಮುಂತಾದ ದೃಶ್ಯಗಳನ್ನು ಸೃಷ್ಟಿ ಮಾಡುವನು. ಹಾಗೆಯೇ ಇವನಿಗೆ ಸಂತೋಷವನ್ನೋ, ಸಂತಾಪವನ್ನೋ ಉಂಟುಮಾಡುವ ಪದಾರ್ಥಗಳನ್ನು ಸೃಜಿಸುವನು. ಇದರಿಂದ ಜೀವಾತ್ಮನು ತನ್ನ ಕರ್ಮಫಲಗಳನ್ನು ಅನುಭವಿಸುತ್ತಾನೆ ಎಂಬುದು ಉಪನಿಷತ್ತುಗಳ ಸಾಮಾನ್ಯ ಅಭಿಪ್ರಾಯವಾಗಿದೆ. ಕೆಲವು ಸ್ವಪ್ನಗಳಿಂದ ಭವಿಷ್ಯತ್ಕಾಲದಲ್ಲಿ ನಡೆಯುವ ಘಟನೆಗಳ ಸೂಚನೆ ಉಂಟಾಗುತ್ತದೆಂದು ಶಕುನಶಾಸ್ತ್ರಜ್ಞರ ಅಭಿಪ್ರಾಯ. ಕೆಲವರು ಅನುಭವದಿಂದ ಸ್ವಪ್ನದಲ್ಲಿ ಅಲೌಕಿಕ ವಿಷಯಗಳನ್ನು ತಿಳಿಯಬಹುದೆಂದು ಹೇಳುತ್ತಾರೆ. ಸುಪ್ತಚೇತನದಲ್ಲಿ ಅಡಗಿದ್ದ ಕೆಲವು ಅನುಭವಗಳು ಹೊರಗೆ ಬರುವುವೆಂಬುದು ಮನಶ್ಶಾಸ್ತ್ರಜ್ಞರ ಮತ. ಯಾರು ಏನು ಹೇಳಿದರೂ ಸ್ವಪ್ನವು ಇಚ್ಛಾಶಕ್ತಿಯ ಕ್ಷೇತ್ರವೆಂದೇ ಕಾಶ್ಮೀರ ಶೈವರ ಅಭಿಪ್ರಾಯ. ಇದು ಕಲ್ಪಿತವೂ ಅಲ್ಲ, ಸುಳ್ಳೂ ಅಲ್ಲ ಎಂಬುದೇ ಅವರ ನಿಶ್ಚಯ.

"ದೃಷ್ಟೇನ ಅದೃಷ್ಟಸಿದ್ಧಿಃ" ಎಂಬಂತೆ ತನಗೆ ತಿಳಿದಿರುವ ವಿಷಯಗಳನ್ನು ತಿಳಿಯಲು ತನ್ನ ಭಾವನಾಶಕ್ತಿಯನ್ನು ಹರಿಸಬೇಕು. ಆದುದರಿಂದಲೇ ಮೊದಲು ಜಾಗ್ರದವಸ್ಥೆಯನ್ನು ಪರಿಶೀಲಿಸಿದ್ದಾಯಿತು. ಅದರೊಡನೆ ಸ್ವಪ್ನಾವಸ್ಥೆಯನ್ನು ಹೋಲಿಸಿದ್ದಾಯಿತು. ಇವೆರಡಕ್ಕಿರುವ ವ್ಯತ್ಯಾಸವು ಮನವರಿಕೆಯಾದ ನಂತರ ಇನ್ನೂ ಗಹನವಾದ ಸುಷುಪ್ತ್ಯವಸ್ಥೆಯ ಸ್ಥಿತಿಯನ್ನು ವಿಮರ್ಶಿಸಬೇಕಾಗುತ್ತದೆ. ಸುಷುಪ್ತಿ ಎಂದರೆ ಸ್ವಪ್ನವಿಲ್ಲದ ನಿದ್ದೆ ಎಂದು ತಾತ್ಪರ್ಯ. ನಾನು ಇಷ್ಟುಹೊತ್ತು ನಿದ್ದೆಹೋದೆ ಎಂದರೆ ನಾನು ಎಂಬ ತಿಳಿವಳಿಕೆ ಮಾತ್ರ ಇದೆ. ನಿದ್ದೆ ಎಂಬುದನ್ನು ಈ ರೀತಿಯಾಗಿತ್ತು ಎಂದು ವರ್ಣಿಸಲು ಸಾಧ್ಯವಿಲ್ಲ—ಎಂದು ಅರ್ಥವಾಗುತ್ತದೆ. ಜಾಗ್ರದವಸ್ಥೆಯಲ್ಲಿದ್ದ ವಿಚಿತ್ರವಾದ ಭೇದಾನುಭವವು ಇಲ್ಲಿಲ್ಲ. ಸ್ವಪ್ನದಲ್ಲಿ ಗೋಚರವಾಗುವ ವಿಷಯಜ್ಞಾನಗಳ ಗೊಂದಲವು ಇಲ್ಲಿಲ್ಲ. ಇಲ್ಲಿ ಪ್ರಶಾಂತವಾದ ಸತ್ತಾಮಾತ್ರವಾದ ಒಂದು ಅನುಭವವು ಇದೆ. ಇದರಿಂದ ಏರ್ಪಡುವ ತಿಳಿವಳಿಕೆಯೇ ಸುಷುಪ್ತಿ. ಈ ಅವಸ್ಥೆಯಲ್ಲಿ ಇಚ್ಛಾ ಮತ್ತು ಕ್ರಿಯಾಶಕ್ತಿಗಳ ಪ್ರಸಾರವಿಲ್ಲ ಅಭಿವ್ಯಕ್ತಿಯಿಲ್ಲ ಎಂದು ತೀರ್ಮಾನವಾಗುತ್ತದೆ. ಜ್ಞಾನ, ಇಚ್ಛಾ, ಕ್ರಿಯಾ, ಈ ಮೂರು ಶಕ್ತಿಗಳಲ್ಲಿ ಎರಡು ಶಕ್ತಿಗಳಿಗೆ ಅಭಿವ್ಯಕ್ತಿ ಇಲ್ಲದಿರುವುದರಿಂದ ಜ್ಞಾನಶಕ್ತಿಗೆ ಮಾತ್ರ ಅಭಿವ್ಯಕ್ತಿ ಇರುತ್ತದೆ. ಈ ಸ್ಥಿತಿಗೆ **ವಿಜ್ಞಾನಕಲಾ** ಪ್ರಮಾತೃ ಸ್ಥಿತಿಯೆಂದು ಶಾಸ್ತ್ರೀಯ ಪರಿಭಾಷೆ. ಆದರೂ ಇದು ಸಂಕುಚಿತವಾದ ಜ್ಞಾನಶಕ್ತಿ ಅಂದರೆ ತನ್ನ ಇರುವಿಕೆ ಮಾತ್ರ ತೋರುತ್ತದೆಯೇ ಹೊರತು ತನಗಿಂತ ಭಿನ್ನವಾಗಿರುವ ಯಾವ ಅಂಶವನ್ನೂ ತೋರಿಸುವುದಿಲ್ಲ.

ಸುಷುಪ್ತಿಯ ಮುಂದಿನ ಸೂಕ್ಷ್ಮವಾದ ಸ್ಥಿತಿಗಳಲ್ಲಿ ತನ್ನ ಸ್ವರೂಪ ತೋರುವುದಲ್ಲದೆ ತನಗಿಂತ ಸ್ವರೂಪ ಮತ್ತು ಸ್ವಭಾವಗಳಲ್ಲಿ ಬೇರೆಯಾಗಿರುವ ಸ್ಥೂಲವಾದ

ವಿಶ್ವವು ಗ್ರಾಹ್ಯವಾಗಿ ತೋರುತ್ತದೆ. ಆಗ ಗ್ರಾಹಕನಾದವನು ಎತ್ತರವಾದ ಬೆಟ್ಟದ ಮೇಲೆ ಹತ್ತಿರುವ ಮನುಷ್ಯನು ಕೆಳಗಿರುವ ಪದಾರ್ಥಗಳನ್ನೂ ಪ್ರಾಣಿಗಳನ್ನೂ ನೋಡು ವಂತೆ ನೋಡುತ್ತಾನೆ. ಆಗ ಅವನಿಗೆ ಎರಡು ಬಗೆಯ ತಿಳಿವಳಿಕೆಗಳುಂಟಾಗುತ್ತವೆ. ತಾನು ಚಿದ್ರೂಪಿಯೆಂದೂ, ಮಿಕ್ಕ ವಿಶ್ವವು ಚಿದ್ರೂಪವಾಗಿದ್ದರೂ ಸೃಷ್ಟಿಕ್ರಮದಿಂದ ರೂಪಾಂತರವನ್ನು ಪಡೆದಿರುವುದೆಂದೂ ತಿಳಿಯುತ್ತಾನೆ. ಜ್ಞಾನವಿಕಾಸದಲ್ಲಿ ಈ ಅವಸ್ಥೆಯು ಸಿದ್ಧಪುರುಷರಿಗೆ ಅನುಭವಕ್ಕೆ ಬರುವಂತಹುದು. ಅನುಭವಿಗಳು 'ನಾನೇ ವಿಶ್ವ', 'ನಾನೇ ಬ್ರಹ್ಮ' ಎಂದು ಹೇಳಿರುವುದುಂಟು. ಅನುಭವಿಗಳ ತರತಮಭಾವ ಗಳಿಂದ ಈ ಸ್ಥಿತಿಯಲ್ಲಿರತಕ್ಕ ಪ್ರಮಾತೃಗಳು **'ಮಂತ್ರ', 'ಮಂತ್ರೇಶ್ವರ', 'ಮಂತ್ರಮಹೇಶ್ವರ'** ಎಂಬ ಸೂಕ್ಷ್ಮಭೇದಗಳನ್ನುಳ್ಳವರಾಗಿರುತ್ತಾರೆ—ಮೇಲಿನ ವಿವರಣೆಗಳೆಲ್ಲಾ ಕಾಶ್ಮೀರಶೈವ ಸಂಪ್ರದಾಯದವರ ವಿಚಾರಧೋರಣೆ ಮತ್ತು ವಿವರಣೆ. ಜಾಗ್ರದಾದ್ಯವಸ್ಥೆಗಳನ್ನು ಕುರಿತು ವಿಶ್ವ, ತೈಜಸ, ಪ್ರಾಜ್ಞ ಮೊದಲಾದ ಸಂಜ್ಞೆಗಳಿಂದ ಮುಂಡಕೋಪನಿಷತ್ತಿನಲ್ಲಿ ವಿವೇಚಿಸಿರುತ್ತಾರೆ. ದಾರ್ಶನಿಕರೂ ಕೂಡ ಜಾಗ್ರತ್, ಸ್ವಪ್ನ, ಸುಷುಪ್ತಿ, ಮುಗ್ಧಾ, ಮರಣ ಎಂಬ ಐದು ಅವಸ್ಥೆಗಳನ್ನು ವಿವೇಚಿಸಿರುವುದುಂಟು.

ಅನುಭವದಿಂದ ತತ್ತ್ವಗಳನ್ನು ವಿಮರ್ಶಿಸಿ, ಪರಿಷ್ಕರಿಸಿ, ನಿಶ್ಚಯಿಸುವ ರೀತಿಯಲ್ಲಿ ಮೇಲೆ ವಿವರಿಸಿರುವ ಮಾರ್ಗವು ಅನಿವಾರ್ಯವಾಗಿರುತ್ತದೆ. ಇದುವರೆಗೂ ಕಾಶ್ಮೀರ ಶೈವ ಸಂಪ್ರದಾಯದ ಸಕಲ, ಪ್ರಳಯಾಕಲ, ವಿಜ್ಞಾನಾಕಲ, ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರ ಎಂಬ ಆರು ಪ್ರಮಾತೃವರ್ಗವನ್ನೂ, ಅವರನುಭವಿಸುವ ಜಾಗ್ರದಾದ್ಯ ವಸ್ಥೆಗಳ ಸಂಬಂಧವನ್ನೂ ವಿವರಿಸಿದ್ದಾಯಿತು. ಈ ಆರು ಪ್ರಮಾತೃಗಳನ್ನು ಮೀರಿ ಕೇವಲ ಅಭೇದವ್ಯಾಪ್ತಿವಿಸ್ತಾರವಾದ ಸ್ಥಿತಿಯನ್ನು **'ಶಿವಪ್ರಮಾತೃಸ್ಥಿತಿ'** ಎಂದು ಹೇಳುತ್ತಾರೆ. ಈ ಸ್ಥಿತಿಯಲ್ಲಿ ಆ ಪರವಸ್ತುವಿಗೆ ಪರಿಪೂರ್ಣವಾದ ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳಲ್ಲಿ ಆನಂದ ಮತ್ತು ಚಿಚ್ಛಕ್ತಿಗಳು ಪೂರ್ಣಾಭಿವ್ಯಕ್ತಿ ಯಿಂದ ಇರುತ್ತವೆ. ಈ ಸ್ಥಿತಿಯಲ್ಲಿ ವಿಶ್ವವು ತನ್ನಿಂದ ಬೇರೆ ಅಲ್ಲವೆಂಬ ಅಭೇದಾನುಭವ ವಿರುತ್ತದೆ. ಇದು ವಿಶ್ವಾತ್ಮಕ ಸ್ಥಿತಿಯ ಅನುಸಂಧಾನ. ಇದನ್ನೂ ಮೀರಿ ಎಲ್ಲಕ್ಕೂ ಆಶ್ರಯವಾಗಿರುವವನು ಪರಶಿವನು. ಅವನು ವಿಶ್ವಾತೀತನು. ಈ ರೀತಿಯಾಗಿ ಸಪ್ತ ಪ್ರಮಾತೃಗಳು ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯ, ತುರೀಯಾತೀತ ಈ ಐದು ಅವಸ್ಥೆಗಳಿಗೆ ಹೊಂದಿಕೊಂಡಿರುತ್ತಾರೆ. ಸಕಲ ಪ್ರಮಾತೃವು ಜಾಗ್ರದವಸ್ಥೆಗೂ, ಪ್ರಳಯಾಕಲನು ಸ್ವಪ್ನಕ್ಕೂ, ವಿಜ್ಞಾನಾಕಲನು ಸುಷುಪ್ತಿಗೂ, ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರರು ತುರೀಯಕ್ಕೂ, ಶಿವನು ತುರೀಯಾತೀತಸ್ಥಿತಿಗೂ ಸಮನ್ವಿತರಾಗಿರು ತ್ತಾರೆ. ಸತ್, ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳು ಆರು. ಈ ಆಧ್ಯಾತ್ಮಿಕ ಆರು ಶಕ್ತಿಗಳಲ್ಲಿ ಸತ್ ಎಂಬುದು ಸರ್ವಾನುಯಾಯಿ. ಅದಿಲ್ಲದೆ ಯಾವುದೂ ಇಲ್ಲ. ಚಿತ್ ಮತ್ತು ಆನಂದಶಕ್ತಿಗಳು ಸ್ವರೂಪಕ್ಕೆ ಸೇರಿದವುಗಳು. ಆದುದರಿಂದಲೇ ಸಚ್ಚಿದಾನಂದ ಎಂಬ ಪದವು ರೂಢಿಯಲ್ಲಿದೆ.

ಮನಸ್ಸಿನಲ್ಲಿ ಉದ್ಭವಿಸುವ ಮತ್ತು ಚಲಿಸುವ ಸೂಕ್ಷ್ಮಕತೆಯ ಮನೋವ್ಯಾಪಾರಗಳನ್ನು ಪರಿಶೀಲಿಸುತ್ತಾಹೋದರೆ ನಮಗೆ ಜಾಗ್ರದ್, ಸ್ವಪ್ನ, ಸುಷುಪ್ತ್ಯವಸ್ಥೆಗಳಲ್ಲಿ ಉಂಟಾಗುವ ಚಲನವಲನಗಳನ್ನು ಗಮನಿಸಬಹುದು. ಜಾಗ್ರದ್ ಸ್ವಪ್ನ ಸುಷುಪ್ತ್ಯಗಳಲ್ಲಿ ಪ್ರತಿಯೊಂದರಲ್ಲಿಯೂ ಸೂಕ್ಷ್ಮಗತಿಯನ್ನು ಪರಿಶೀಲಿಸಿದರೆ ಪ್ರತಿಯೊಂದು ಅವಸ್ಥೆಯಲ್ಲೂ ಈ ಕೆಳಗೆ ಕಂಡಂತೆ ಸೂಕ್ಷ್ಮಾವಸ್ಥೆಗಳನ್ನು ಪರಿಗ್ರಹಿಸಬಹುದು.

ಜಾಗ್ರತ್—ಜಾಗ್ರತ್
ಜಾಗ್ರತ್—ಸ್ವಪ್ನ
ಜಾಗ್ರತ್—ಸುಷುಪ್ತಿ

ಸ್ವಪ್ನ—ಜಾಗ್ರತ್
ಸ್ವಪ್ನ—ಸ್ವಪ್ನ
ಸ್ವಪ್ನ—ಸುಷುಪ್ತಿ

ಸುಷುಪ್ತಿ—ಜಾಗ್ರತ್
ಸುಷುಪ್ತಿ—ಸ್ವಪ್ನ
ಸುಷುಪ್ತಿ—ಸುಷುಪ್ತಿ

ಈ ರೀತಿಯಾಗಿ ಶ್ರೀಮದಭಿನವಗುಪ್ತಾಚಾರ್ಯರವರು ತಂತ್ರಾಲೋಕದಲ್ಲಿ ಸೂಕ್ಷ್ಮಗತಿಯಿಂದ ವಿವರಿಸಿರುವರು.

ಮೇಲ್ಕಂಡ ಈ ಜಾಗ್ರದವಸ್ಥೆಗಳ ಮೂರು ಸೂಕ್ಷ್ಮಗತಿಗಳ ಅನುಭವಗಳು ಯೋಗಾಭ್ಯಾಸದಲ್ಲಿ ನಿರತರಾದ ಸೂಕ್ಷ್ಮಮತಿಯವರಿಗೆ ಗೋಚರವಾಗುವುದರಲ್ಲಿ ಆಶ್ಚರ್ಯವಿಲ್ಲ. ಒಬ್ಬಾನೊಬ್ಬ ಗಣಿತಶಾಸ್ತ್ರಜ್ಞನು ತೊಡಕಾದ ಗಣಿತ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನಪಡುತ್ತಾ ನಿದ್ರಾಸಕ್ತನಾಗಿ ಮಲಗಿದನು. ಆ ರಾತ್ರಿ ಅವನು ನಿದ್ರಾವಸ್ಥೆಯಲ್ಲಿಯೇ ಎದ್ದು ಕುಳಿತು ಸಂದಿಗ್ಧವಾದ ಸಮಸ್ಯೆಯನ್ನು ಬಿಡಿಸಿ ಬರೆದಿಟ್ಟು ಪುನಃ ಹಾಸಿಗೆಯ ಮೇಲೆ ಮಲಗಿದನು. ಪ್ರಾತಃಕಾಲದಲ್ಲಿ ಎಂದಿನಂತೆ ಎದ್ದಾಗ ರಾತ್ರಿ ಮಲಗಿದ್ದಾಗ ನಿದ್ರಾವಸ್ಥೆಯಲ್ಲಿ ತಾನು ಏನುಮಾಡಿದನೆಂಬ ಅರಿವೇ ಇರಲಿಲ್ಲ. ಆ ರಾತ್ರಿ ತಾನು ಸಮಸ್ಯೆಯನ್ನು ಬಿಡಿಸಿ ಬರೆದಿಟ್ಟದ್ದನ್ನು ನೋಡಿದರೆ ಅವನು ನಿದ್ರಾವಸ್ಥೆಯಲ್ಲಿ ಅನುಭವಿಸಿದ ಸ್ವಪ್ನಜಾಗ್ರದಾದ್ಯವಸ್ಥೆಯೆಂದು ಊಹಿಸಬಹುದು. ಒಂದುವಿಧದಲ್ಲಿ ಈ ವಿಧವಾದ ಸ್ವಪ್ನಜಾಗ್ರದಾದ್ಯವಸ್ಥೆಯನ್ನು ಸ್ವಾನುಭವದ ಪ್ರತೀಕವೆನ್ನಬಹುದು. ಇದೇ ರೀತಿ ಗ್ರಾಹ್ಯಗ್ರಾಹಕಗಳು ಮಿಲನವಾಗಿ ಏಕತ್ವವನ್ನು ಪಡೆಯುವುದೇ ಜಾಗ್ರತ್ ಸುಷುಪ್ತಿಯೆನ್ನಬಹುದು. ಇದೇ ರೀತಿಯಲ್ಲಿ ಪ್ರತಿಯೊಂದು ವಿಭಾಗದಲ್ಲಿಯೂ ಆಗತಕ್ಕ ಸೂಕ್ಷ್ಮಾವಸ್ಥೆಗಳನ್ನು ಸಂವಿತ್ ಸಮಾವೇಶವನ್ನು ಪಡೆದಿರುವ ಯೋಗಿಯು ಚಮತ್ಕಾರವಾಗಿ ಅನುಭವಿಸುವನು. ಜಾಗ್ರತ್ ಸ್ವಪ್ನ ಸುಷುಪ್ತಿಗಳು ಅನುಭವದಲ್ಲಿದ್ದರೂ

ಸಾಧಕನು ತುರೀಯಾವಸ್ಥೆಯ ದೃಷ್ಟಿಯಿಂದ ಈ ವ್ಯತ್ಯಾಸಗಳನ್ನೆಲ್ಲ ಶಕ್ತಿವಿಲಾಸವೆಂದು ತಿಳಿದು ಶಕ್ತಿಚಕ್ರವನ್ನು ಅನುಸಂಧಾನ ಮಾಡುತ್ತಾನೆ. ಈ ಬಗೆಯ ಅನುಸಂಧಾನದಿಂದ ತುರೀಯಾವಸ್ಥೆಯ ಅಭೇದವ್ಯಾಪ್ತಿಯುಳ್ಳ ಆನಂದವನ್ನು ಅನುಭವಿಸುತ್ತಾನೆ. ಇದರ ಮೂಲಕ ತುರೀಯಾತೀತವಾದ ಶುದ್ಧಚೈತನ್ಯಸ್ಥಿತಿಯನ್ನು ಹೊಂದಲು ಶಕ್ತನಾಗುತ್ತಾನೆ.

ತ್ರಿಶುಧಾಮಸು ಯದ್ಭೋಗ್ಯಂ ಭೋಕ್ತಾ ಯಶ್ಚ ಪ್ರಕೀರ್ತಿತಃ
ವೇದೈತದುಭಯಂ ಯಸ್ತು ಸ ಭುಂಜಾನೋನ ಲಿಪ್ಯತೇ

ಜಾಗರಾದಿಗಳಲ್ಲಿದ್ದು ಭೋಗಸಿರತನಾಗಿದ್ದರೂ ನೀರಿನಲ್ಲಿರುವ ಕಮಲಪತ್ರದಂತೆ ನಿರ್ಲಿಪ್ತನಾಗಿರುತ್ತಾನೆ.

ಯೋಗೀ ಸ್ವಚ್ಛಂದಯೋಗೇನ ಸ್ವಚ್ಛಂದಗತಿಚಾರಿಣಾ
ಸ ಸ್ವಚ್ಛಂದಪದೇ ಯುಕ್ತಃ ಸ್ವಚ್ಛಂದಸಮತಾಂ ರಜೇತ್

ಯಾವನು ಈ ಬಗೆಯ ಪರಾಮರ್ಶದಿಂದ ವಿಕಾಸವನ್ನು ಪಡೆದು ಭೇದಸಂಸ್ಕಾರಗಳನ್ನು ಕಳೆಯುವನೋ ಅವನು ಈ ವಿಶ್ವವನ್ನು ಆನಂದರಸಮಯ ಪ್ರವಾಹವೆಂದು ನೋಡುವನು. ಈ ಮೂರು ಅವಸ್ಥೆಗಳಲ್ಲಿ ಅನುಭವಿಸುವವನು ಯಾರು ? ಅನುಭವಿಸಲ್ಪಡತಕ್ಕದ್ದು ಯಾವುದು ? ಎನ್ನುವುದನ್ನು ಪರಿಶೀಲಿಸಿ ಯಾವನು ತಿಳಿದಿರುವನೋ ಅವನಿಗೆ ಈ ಪ್ರಾಪಂಚಿಕ ವ್ಯವಹಾರಗಳ ಬಂಧನವಿಲ್ಲ. ಅವನು ಈ ಮೂರು ಅವಸ್ಥೆಗಳನ್ನು ಅನುಭವಿಸುವ **ವೀರೇಶನು.** ಈ ಕ್ರಮದಿಂದ ಯಾವ ಆತಂಕವೂ ಇಲ್ಲದ ಪರಮಾನಂದಪರಿಪೂರ್ಣನಾಗುವನು. ಭೇದಜ್ಞಾನಕ್ಕೆ ಕಾರಣಗಳಾಗಿರುವ ಇಂದ್ರಿಯಗಳಿಗೆ ಒಡೆಯನಾಗಿ ಅವುಗಳನ್ನು ಅಂಕೆಯಲ್ಲಿಡುವನು. ಈ ವಿಷಯವು ಪ್ರಾಚೀನರಿಂದ ಅನೇಕ ವಿಧವಾಗಿ ನಿರೂಪಿಸಲ್ಪಟ್ಟದೆ. ಈ ರೀತಿಯಾದ ವಿಮರ್ಶನಾ ಮತ್ತು ಅನುಭವವಿಲ್ಲದಿರುವವನ್ನು ಕೇವಲ ಜಾಗ್ರತ್ ಸ್ವಪ್ನ ಸುಷುಪ್ತಿಗಳನ್ನನುಭವಿಸುತ್ತಿರುವನು ಲೌಕಿಕನು. ಯೋಗಿಯಾದರೂ ಈ ಕ್ರಮದಲ್ಲಿ ಸಿದ್ಧಿಯನ್ನು ಪಡೆಯದಿದ್ದರೆ ವೀರೇಶನಾಗುವುದಿಲ್ಲ. ಯೋಗಿಗೆ ಸ್ವಾತಂತ್ರ್ಯವೃತ್ತಿಯು ಬೇಕಾಗಿದೆ. ಅವನದು ಇಂದ್ರಿಯಾಧೀನವೃತ್ತಿಯಲ್ಲ. ಅವನು ಈ ಮೂರು ಅವಸ್ಥೆಗಳಲ್ಲಿಯೂ ಭೋಕ್ತೃರೂಪದಿಂದ ಸುಖದುಃಖಗಳನ್ನನುಭವಿಸುತ್ತಾನೆ. ತುರೀಯಾವಸ್ಥೆಯಲ್ಲಿ ಈ ತೊಂದರೆಗಳಿಲ್ಲ. ಈ ಸಿದ್ಧಿಯುಳ್ಳ ಯೋಗಿಗೆ ತತ್ತ್ವಸಾಕ್ಷಾತ್ಕಾರದ ಕ್ರಮದಲ್ಲಿ ತತ್ತ್ವವನ್ನು ಮೀರಿರುವ ಪರತತ್ತ್ವವು ಭಾವನಾಬಲದಿಂದ ಗೋಚರಿಸುವುದು.

ಅಖಂಡವಾದ ಅನಂತವಾದ ಚಿದಾನಂದಶಕ್ತಿಗಳು ಸಂಕುಚಿತವಾಗಿ ಜ್ಞಾನ, ಇಚ್ಛಾ, ಕ್ರಿಯಾರೂಪಗಳಲ್ಲಿ ಜೀವಾತ್ಮನಲ್ಲಿ ಹೊರಹೊಮ್ಮುತ್ತವೆ. ಇಚ್ಛಾಶಕ್ತಿಯ ಪ್ರಸಾರಕ್ಕೆ ಬಾಹ್ಯಪದಾರ್ಥಗಳು ಬೇಕಾಗಿಲ್ಲ. ಇಚ್ಛೆಯಿಂದ ಭಾವನಾಪ್ರಪಂಚವೇ ಸೃಷ್ಟಿಯಾಗುತ್ತದೆ. ಅದು ಸ್ಮೃತಿರೂಪವಾಗಬಹುದು, ಕಲ್ಪಿತವಾಗಬಹುದು. ಕ್ರಿಯಾಶಕ್ತಿಯ ಪ್ರಸಾರಕ್ಕೆ ಮಾತ್ರ ಸ್ಥೂಲವಾದ ಪ್ರಸಾರಗಳಿರಬೇಕು. ಆದುದರಿಂದ ಜಾಗ್ರದ್

ಅವಸ್ಥೆಯಲ್ಲಿ ಸ್ಥೂಲವಾದ ಪದಾರ್ಥಗಳ ಸಂಬಂಧ ಮತ್ತು ಅನುಬಂಧದಿಂದಲೇ ಪ್ರಾಣಿಗಳು ಸುಖದುಃಖಗಳನ್ನನುಭವಿಸುತ್ತವೆ. ಈ ವ್ಯತ್ಯಾಸಗಳನ್ನು ಗಮನಿಸುವುದು ಮತ್ತು ವಿಮರ್ಶಿಸುವುದು ಇಲ್ಲಿಯ ಕರ್ತವ್ಯವಾಗಿರುತ್ತದೆ. ಈ ವಿಷಯದಲ್ಲಿ ಸಾಧಕನು ಕೇವಲ ಯುಕ್ತಿಯಿಂದಲೇ ವಿಮರ್ಶಿಸುವುದು ಸ್ವಲ್ಪ ಕಷ್ಟವಾಗಬಹುದು. ಅವನ ವಿಮರ್ಶೆಗೆ ಸಹಾಯಕವಾಗಿ ಶಾಸ್ತ್ರ, ಜ್ಞಾನ, ಗುರೂಪದೇಶ, ಸಂಪ್ರದಾಯಾಚರಣೆ ಮುಂತಾದುವುಗಳ ಆವಶ್ಯಕತೆ ಇದೆ. ಅನಂತರ ಇವುಗಳ ಸಹಾಯದಿಂದುಂಟಾಗುವ ತಿಳಿವಳಿಕೆಯಿಂದ ತನ್ನ ಅಧಿಕಾರಕ್ಕನುಗುಣವಾಗಿ ಸಾಧನಾಭ್ಯಾಸಗಳನ್ನು ಮುಂದುವರಿಸಬಹುದು.

ಸ್ವಪ್ನಗಳು : ಜಾಗ್ರದವಸ್ಥೆಯಲ್ಲಿ ನಮಗುಂಟಾಗುವ ಕರ್ಮಫಲಗಳ ಸುಖದುಃಖಾನುಭವಗಳು ನಮ್ಮ ಗ್ರಾಹಕಶಕ್ತಿಗನುಸಾರವಾಗಿ ಗೋಚರವಾಗುವುವು. ಸ್ವಪ್ನಾವಸ್ಥೆಯಲ್ಲಿ ಸಂಭವಿಸುವ ಪುಣ್ಯಪಾಪಾನುಭವಗಳು ಸೂಕ್ಷ್ಮವಾಗಿ ತೆಳ್ಳಗಿದ್ದರೆ ಮನೋರಾಜ್ಯದಲ್ಲಿಯೆ ಪರ್ಯವಸಾನವಾಗಿ ಸ್ವಪ್ನಗಳ ರೂಪದಲ್ಲೇ ಅನುಭವಿಸಲ್ಪಡುತ್ತವೆಂದು ಪ್ರಶ್ನೋಪನಿಷತ್, ಬೃಹದಾರಣ್ಯೋಪನಿಷತ್ತಿನಲ್ಲಿ ಸೂಚಿಸಿದೆ. ಪಾಪಪುಣ್ಯಾನುಭವ ಕ್ರಮಗಳು ನಮಗೆ ತಿಳಿದಿರಬಹುದು, ತಿಳಿಯದಿರಬಹುದು, ಅಸಂಭವವಾಗಿ ತೋರಬಹುದು.

ವೈದ್ಯಶಾಸ್ತ್ರದವರು ತಲೆಯಲ್ಲಿ ಮನಸ್ಸು, ಹೃದಯದಲ್ಲಿ ಆತ್ಮ ಇದೆ ; ತಲೆಯಿಂದ ಸಹಸ್ರಾರು ಚಕ್ರಗಳು ಸೂಕ್ಷ್ಮ ನರಗಳು ದೇಹದಲ್ಲೆಲ್ಲಾ ವ್ಯಾಪಿಸಿವೆ; ಆ ನರಗಳ ಹತ್ತಿರ ಸರಿಯಾಗಿ ರಕ್ತ ಹೋಗದಿದ್ದರೆ ಹೂ ಬಾಡಿದ ಹಾಗೆ ಒಂದು ದಳ ಇನ್ನೊಂದು ದಳಕ್ಕೆ ತಗಲಿ ಸ್ವಪ್ನ ಬರುತ್ತದೆ ; ಶರೀರದಲ್ಲಿ ರೋಗವಿದ್ದರೆ ಮನಸ್ಸಿನಲ್ಲಿ ವಿಕಲ್ಪಗಳಿದ್ದರೆ ಸ್ವಪ್ನಗಳು ಬರುತ್ತವೆ ; ಆರೋಗ್ಯವಾಗಿದ್ದರೆ ಸಾಮಾನ್ಯವಾಗಿ ಸ್ವಪ್ನಗಳು ಪ್ರಾಪ್ತವಾಗುವುದಿಲ್ಲವೆಂದು ಅಭಿಪ್ರಾಯಪಡುತ್ತಾರೆ.

ಮನಶ್ಶಾಸ್ತ್ರದವರು ಸತ್ವರಜಸ್ತಮೋಗುಣಗಳ ಪ್ರಭಾವದಿಂದ ಸ್ವಪ್ನಗಳು ಪ್ರಾಪ್ತವಾಗುತ್ತವೆ, ತಮೋಗುಣದಿಂದ ನಿದ್ದೆಯೂ, ರಜೋಗುಣ ಪ್ರಧಾನವಾಗಿದ್ದರೆ ಜಾಗ್ರದವಸ್ಥೆಯೂ, ಸತ್ವಗುಣ ಪ್ರಧಾನವಾಗಿದ್ದರೆ ಭಯಂಕರ ಅಸ್ತವ್ಯಸ್ತವಾದ ವಿಕಾರ ರೂಪವಾದ ಸ್ವಪ್ನಪ್ರಾಪ್ತಿ ಎಂದು ಹೇಳುತ್ತಾರೆ. ಹೋಮಿಯೋಪತಿ ವೈದ್ಯರು ಸ್ವಪ್ನಗಳಿಂದ ರೋಗಗಳನ್ನು ನಿರ್ಣಯಿಸಬಹುದು. ಸ್ವಪ್ನದಲ್ಲಿ ಅನ್ನ ತಿಂದ ಹಾಗೆ ಆದರೆ ಅಜೀರ್ಣ ಆಗಿದೆಯೆಂದೂ, ಮನೆಯಲ್ಲಿ ಕಳ್ಳತನವಾಗಿದೆಯೆಂದಾದರೆ ಪಿತ್ತಪ್ರಕೋಪವಾಗಿದೆಯೆಂದೂ, ಕೈಕಾಲು ಕಟ್ಟಿ ಬೆಂಕಿಯಲ್ಲಿ ಬಿದ್ದಹಾಗೆ ಆದರೆ ಕ್ಷಯವೆಂದೂ ರೋಗನಿದಾನವನ್ನು ಮಾಡುತ್ತಾರೆ.

ಫ್ರಾಯ್ಡ್ ಮನೋವಿಜ್ಞಾನಶಾಸ್ತ್ರಜ್ಞನು ಮನಸ್ಸಿನಲ್ಲಿ ಉದ್ಭವವಾದ ಆಸೆಗಳನ್ನು ಅದುಮಿಟ್ಟಿರುವುದರಿಂದ ಸ್ವಪ್ನಗಳು ಪ್ರಾಪ್ತವಾಗುತ್ತವೆಂದು ಹೇಳುತ್ತಾನೆ. ನರಗಳ ದೌರ್ಬಲ್ಯ ರಕ್ತಸಂಚಾರ ನಡೆಯದೆ ಇರುವುದರಿಂದ ಸ್ವಪ್ನಗಳು ಪ್ರಾಪ್ತವಾಗುತ್ತವೆಂದು ಯೋಗದವರು, ವೈದ್ಯದವರು ಅಭಿಪ್ರಾಯಪಡುತ್ತಾರೆ. ಅತಿಶಯವಾದ ಭಾವನೆಗಳು ಸ್ವಪ್ನದಲ್ಲಿ ತಲೆದೋರುತ್ತವೆ.

ಸಪ್ತಪ್ರಮಾತೃಗಳು

ಈ ಸಿದ್ಧಾಂತದಲ್ಲಿ ವಿಶ್ವವೆಲ್ಲಾ ಶಿವಾಭಿನ್ನವಾಗಿದೆ. ವಿಶ್ವೋತ್ತೀರ್ಣನಾದ ಪರಶಿವನು ಶಕ್ತಿಸಂಕೋಚವನ್ನನುಸರಿಸಿ ಮೂವತ್ತಾರು ತತ್ತ್ವಗಳಿಂದ ಕೂಡಿದ ವಿಶ್ವರೂಪಿಯಾಗುತ್ತಾನೆ. ಹಾಗೆಯೇ ಅನಂತವಾದ ಜೀವಾತ್ಮರ ಭೇದವನ್ನು ಅಂಗೀಕರಿಸಿ ತಾನೇ ಗ್ರಾಹಕನಾಗಿರುವನು. ಅಸಂಖ್ಯಾತವಾದ ವಿಶ್ವದ ಪದಾರ್ಥಗಳ ರೂಪದಿಂದ ಗ್ರಾಹ್ಯರೂಪಿಯಾಗಿಯೂ ಇರುವನು. ಗ್ರಾಹ್ಯವರ್ಗವಾದ ವಿಶ್ವವನ್ನು ಮೂವತ್ತಾರು ತತ್ತ್ವಗಳನ್ನಾಗಿ ವಿಭಾಗ ಮಾಡಿರುವ ಹಾಗೆ ಗ್ರಾಹಕನಾದ ಜೀವನನ್ನು ಸಪ್ತಪ್ರಮಾತೃಗಳೆಂದು ವಿಭಾಗಿಸಿರುತ್ತಾರೆ.

ಸೃಷ್ಟಿ ಸ್ಥಿತಿ ಪ್ರಳಯಗಳಲ್ಲಿ ಸುಖದುಃಖಗಳಿಗಾಶ್ರಯನಾಗಿರುವ ಗ್ರಾಹಕನು ಅವರೋಹಣ ಆರೋಹಣ ಕ್ರಮದಿಂದ ವ್ಯತ್ಯಾಸವನ್ನು ಪಡೆದರೂ ಶಿವನೇ ಆಗಿರುವನು. ಪರಶಿವನು ತನ್ನ ಅಖ್ಯಾತಿಯಿಂದ ಬದ್ಧಜೀವದಶೆಯನ್ನು ಪಡೆಯುವಾಗ ಶಿವ, ಮಂತ್ರಮಹೇಶ್ವರ, ಮಂತ್ರೇಶ್ವರ, ಮಂತ್ರ, ವಿಜ್ಞಾನಾಕಲ, ಪ್ರಳಯಾಕಲ, ಸಕಲ ಎಂಬ ಏಳು ಅಂತಸ್ತುಗಳಾಗಿ ಅಭಿವ್ಯಕ್ತನಾಗಿದ್ದಾನೆ. ಇದು ಅವರೋಹಣಕ್ರಮ. ಬದ್ಧಜೀವನು ಶಿವತ್ವವನ್ನು ಪಡೆಯುವುದಕ್ಕೆ ಅಧಿಕಾರಾನುಗುಣವಾಗಿ ಅವರೋಹಣ ಕ್ರಮದಿಂದ ಸ್ವಸ್ವರೂಪಾಭಿವ್ಯಕ್ತಿಯನ್ನು ಹೊಂದಬೇಕು. ಅವತರಣ ಕ್ರಮದಲ್ಲಿ ಮೊದಲನೆಯ ಪ್ರಮಾತೃವು "ಶಿವ." ಇವನು ಪರಿಪೂರ್ಣ, ಚಿದ್ರೂಪನು. ಇಲ್ಲಿ ಯಾವ ಮಲಗಳೂ ಇಲ್ಲ. ಎರಡನೆಯದು "ಮಂತ್ರಮಹೇಶ್ವರ." ಇಲ್ಲಿ ಸ್ವಾತಂತ್ರ್ಯವನ್ನು ಮರೆಯಿಸುವ ಆಣವಮಲವು ಆವಿರ್ಭಾವವಾಗುತ್ತದೆ. ಇಲ್ಲಿ ಗ್ರಾಹ್ಯಗ್ರಾಹಕಗಳು ಅಸ್ಫುಟವಾಗಿರುತ್ತವೆ. ಮೂರನೆಯ ಪ್ರಮಾತೃವು "ಮಂತ್ರೇಶ್ವರ." ಇಲ್ಲಿ 'ನಾನು' 'ಇದು' (ಅಹಂ ಇದಂ) ಎಂಬ ಭೇದಭಾವವು ರೂಪುಗೊಳ್ಳುತ್ತದೆ. ನಾಲ್ಕನೆಯ ಪ್ರಮಾತೃವು "ಮಂತ್ರ." ಇಲ್ಲಿಯೂ ಕೂಡ ಮೇಲಿನ 'ಅಹಂ ಇದಂ' ಎಂಬ ಎರಡು ಅಂಶಗಳಲ್ಲಿ 'ಇದಂ' ಪ್ರಧಾನವಾಗಿರುತ್ತದೆ. ಗ್ರಾಹ್ಯಗ್ರಾಹಕಗಳು ಸ್ಫುಟವಾಗಿರುತ್ತವೆ. ಇಲ್ಲಿಗೆ ಗ್ರಾಹ್ಯಗ್ರಾಹಕವು ಪರಿಪೂರ್ಣವಾಗಿರುತ್ತದೆ. ಐದನೆಯ ಪ್ರಮಾತೃವು "ವಿಜ್ಞಾನಾಕಲ." ಈ ಸ್ಥಿತಿಯಲ್ಲಿ ಜೀವಾತ್ಮರುಗಳು ಪರಸ್ಪರ ಭಿನ್ನರೆಂದೂ ತಮ್ಮ ಸ್ವರೂಪವು ಶಕ್ತಿಸಂಕೋಚವನ್ನು ಪಡೆದಿರುವುದೆಂದೂ ಅನುಭವಕ್ಕೆ ಬರುತ್ತದೆ. ಹಾಗೆಯೇ ಈ ಪ್ರಮಾತೃವರ್ಗಕ್ಕೆ ಕರ್ತೃತ್ವವಿಲ್ಲದ ಶುದ್ಧಜ್ಞಾನವಿರುತ್ತದೆ. ಆರನೆಯ ಪ್ರಮಾತೃವು "ಪ್ರಳಯಾಕಲ." ಈ ಸ್ಥಿತಿಯಲ್ಲಿ ಜೀವಾತ್ಮನು ಮಾಯಾಪ್ರಭಾವದಿಂದ ಪಂಚಕಂಚುಕಗಳಿಗೆ ಒಳಗಾಗಿ ತನ್ನ ನಿಜಸ್ವರೂಪವನ್ನು ಮರೆತಿರುತ್ತಾನೆ. ಏಳನೆಯ ಪ್ರಮಾತೃವಿಗೆ "ಸಕಲ" ಎಂದು ಹೆಸರು. ಸಕಲ ಪ್ರಮಾತೃವು ಆಣವ, ಮಾಯಿಯ, ಕಾರ್ಮಮಲಗಳಿಂದಲೂ, ಪ್ರಳಯಾಕಲ ಪ್ರಮಾತೃವು ಆಣವಮಾಯೀಯ ಮಲಗಳಿಂದಲೂ, ವಿಜ್ಞಾನಾಕಾಲ ಪ್ರಮಾತೃವು ಆಣವಮಲದಿಂದಲೂ ಕೂಡಿರುವರು. ಉಳಿದ ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರರು ಸೂಕ್ಷ್ಮರೂಪದಿಂದ ಕೇವಲ ಆಣವಮಲ ಒಂದರಿಂದಲೇ ಇರುವರು.

ತಾತ್ತ್ವಿಕವಾಗಿ ಈ ವಿಭಾಗಗಳು ಸರ್ವದಾ ಇದ್ದರೂ ಅಧಿಕಾರಕ್ಕನುಗುಣವಾಗಿ ಈ ವ್ಯತ್ಯಾಸಗಳು ಗೋಚರಿಸುವುವು. ಸಿದ್ಧಪುರುಷನು 'ಸಕಲ' ಪ್ರಮಾತೃ ಅವಸ್ಥೆಯಲ್ಲಿಯೇ ಈ ಮೇಲಿನ ಅಂತಸ್ತುಗಳನ್ನೆಲ್ಲಾ ಸಾಕ್ಷಾತ್ಕರಿಸಬಹುದು. ಈ ಸಪ್ತ ಪ್ರಮಾತೃಸ್ಥಿತಿಗಳನ್ನು ಪರಿಶೀಲಿಸಿ ಮನನಮಾಡಿದರೆ ಆಣವಮಲದ ಪರಿಣಾಮವಾಗಿ ನಿಜವಾದ ತಿಳಿವಳಿಕೆಯನ್ನು ಮರೆಸಿರುವುದು 'ಅಖ್ಯಾತಿ' ಎಂದು ಮನವರಿಕೆಯಾಗುವುದು. ಆಗ ತಾನು ಶಿವನಿಂದ ಬೇರೆಯಲ್ಲವೆಂದು ತಿಳಿಯುವನು. ಇವೆಲ್ಲವೂ ಕೇವಲ ಗ್ರಾಹಕ ಪರಿಣಾಮಗಳು. ಗ್ರಾಹ್ಯಪರಿಣಾಮಗಳು ಮೂವತ್ತಾರು ತತ್ತ್ವಗಳು. ಗ್ರಾಹ್ಯ ಗ್ರಾಹಕಗಳು ಈಶ್ವರಸ್ವರೂಪವೇ ಆಗಿರುತ್ತವೆ.

ಮೂವತ್ತಾರು ತತ್ತ್ವಗಳ ವಿವೇಚನೆಯಿಂದ ಸಾಧಕನು ಸ್ಥೂಲಪ್ರಪಂಚವನ್ನು ಪುರಸ್ಕರಿಸಿ ಸ್ವಸ್ವರೂಪಾನುಸಂಧಾನದವರೆಗೂ ಹೋಗಬಹುದು. ಸಪ್ತಪ್ರಮಾತೃಸ್ಥಿತಿಗಳನ್ನು ಮನನಮಾಡುವಾಗ ಮೂವತ್ತಾರು ತತ್ತ್ವಗಳನ್ನೂ ಅವುಗಳ ಪರಸ್ಪರ ಸಂಬಂಧವನ್ನೂ ಪರಿಶೀಲಿಸಿದರೆ 'ಅಖ್ಯಾತಿ'ಯ ಪ್ರಭಾವವೆಂತಹುದೆಂಬುದು ಮನವರಿಕೆಯಾಗುವುದು. ಆಣವಮಲದ ಪರಿಣಾಮವಾಗಿ ನಿಜವಾದ ತಿಳಿವಳಿಕೆಯನ್ನು ಮರೆಸಿರುವುದೇ 'ಅಖ್ಯಾತಿ'. ಸಾಧಕನ ಪ್ರಯತ್ನದಿಂದ ತತ್ತ್ವಜ್ಞಾನವು ವಿಶದವಾಗಿ ಏರ್ಪಟ್ಟರೆ, ಇಷ್ಟುಮಾತ್ರ ಅಖ್ಯಾತಿ ವ್ಯವಹಾರ, ಇಷ್ಟುಮಾತ್ರ ಅಖ್ಯಾತಿ ವ್ಯವಹಾರವನ್ನು ಮೀರಿದ್ದು ಎಂಬ ವಿವೇಚನೆಯುಂಟಾಗುತ್ತದೆ. ಭೇದಾಗ್ರಹವನ್ನು ವಿಶದವಾಗಿ ಮನನ ಮಾಡಿ ಸಾಕ್ಷಾತ್ಕರಿಸಿಕೊಳ್ಳುವುದೇ ನಿಜವಾದ ತತ್ತ್ವಜ್ಞಾನ. ಯಾರಿಗೆ ಶಾಸ್ತ್ರಾಭ್ಯಾಸದಿಂದಲೂ ಗುರೂಪದೇಶದಿಂದಲೂ ಸಾಧನಾಭ್ಯಾಸಗಳಿಂದಲೂ ಆಧ್ಯಾತ್ಮವಿಕಾಸವೇರ್ಪಡುವುದೋ ಅವರಿಗೆ ಈ ಸಪ್ತಪ್ರಮಾತೃಗಳ ಸ್ಥಿತಿ ವಿಶದವಾಗಿ ಗೋಚರಿಸುವುದು. ಜೀವಾತ್ಮನು ತನ್ನ ಪರಿಪಾಕಕ್ಕನುಗುಣವಾಗಿ ಈ ಏಳು ಮೆಟ್ಟಿಲುಗಳನ್ನು ದಾಟಿ ತಾನು ಶಿವನಿಂದ ಬೇರೆಯಿಲ್ಲವೆಂದು ತಿಳಿಯುತ್ತಾನೆ. ಶಿವನೇ ಆಗುತ್ತಾನೆ.

ಚಿತ್ಸ್ವರೂಪ

ನಿಸ್ತರಂಗವಾಗಿರುವ ಚಿತ್ಸ್ವರೂಪವೇ ಪರಮಶಿವ. ಅಲೆಗಳಿಲ್ಲದ ಪ್ರಶಾಂತವಾಗಿರುವ ಚಿತ್ಸಮುದ್ರವೇ ಪರಮಶಿವನ ಲೀಲೆಯಿಂದ ಗ್ರಾಹ್ಯಗ್ರಾಹಕ ರೂಪವಾದ ವಿಶ್ವವಾಯಿತು. ಆ ಚಿತ್ತೇ ಮೂವತ್ತೈದು ತತ್ತ್ವರೂಪವಾದ ವಿಶ್ವಸಿದ್ಧಿಗೂ ಗ್ರಾಹ್ಯ ಗ್ರಾಹಕರೂಪವಾದ ವಿಶ್ವವ್ಯವಹಾರಕ್ಕೂ ಕಾರಣವಾಯಿತು. ವಿಶ್ವವು ನೀಲ, ಸುಖ, ದೇಹ, ಪ್ರಾಣಾದಿ ರೂಪಗಳಿಂದ ಕೂಡಿದ್ದಾಗಿದೆ. ನೀಲ ಎಂದರೆ ಬಹಿರಿಂದ್ರಿಯದಿಂದ ತಿಳಿಯತಕ್ಕ ಆಕಾರವಿರುವ ಪದಾರ್ಥಗಳು. ಸುಖವು ಅಂತರಿಂದ್ರಿಯದಿಂದ ಅನುಭವಿಸತಕ್ಕದ್ದು. ದೇಹವು ಬಾಹ್ಯಾನುಭವಕ್ಕೂ ಅಂತರನುಭವಕ್ಕೂ ಆಶ್ರಯವಾಗಿದೆ. ದೇಹದ ಕ್ರಿಯೆಯನ್ನು ನಡೆಸುವ ಚೈತನ್ಯಶಕ್ತಿಯೇ ಪ್ರಾಣ. ಈ ರೀತಿಯಾದ ವಿಶ್ವದ ಸ್ವರೂಪವು ವಿಲಕ್ಷಣವಾದದ್ದಾಗಿದೆ. ಹಾಗೆಯೇ ಈ ವಿಶ್ವವು ವ್ಯವಹಾರದಲ್ಲಿ ನಾಲ್ಕು ಬಗೆಯದಾಗಿದೆ.

ತಿಳಿಯುವವನು, ತಿಳಿಯುವ ಉಪಾಯ, ತಿಳಿಯಲ್ಪಡುವ ವಸ್ತು, ತಿಳಿವಳಿಕೆ ಎಂಬಿವುಗಳೇ ಈ ನಾಲ್ಕು ವಿಭಾಗಗಳು. ಇವುಗಳನ್ನೇ ಶಾಸ್ತ್ರೀಯವಾಗಿ ಪ್ರಮಾತೃ, ಪ್ರಮಾಣ, ಪ್ರಮೇಯ ಮತ್ತು ಪ್ರಮಿತಿ (ಜ್ಞಾನ) ಎಂದು ಹೇಳುವುದು. ಇಲ್ಲಿ ಪ್ರಮಾತೃವೆಂದರೆ ಮಿತಪ್ರಮಾತೃವಾದ ಜೀವನು. ಇವನು ವಿಶ್ವದ ಸ್ವರೂಪ ಮತ್ತು ವ್ಯಾಪಾರಗಳನ್ನು ಪ್ರಮಾಣಗಳಿಂದ ತಿಳಿಯುತ್ತಾನೆ. ಹಾಗೆ ಪ್ರಮಾಣಗಳಿಂದ ತಿಳಿಯುವುದಕ್ಕೆ ಸಾಧ್ಯವಿಲ್ಲದ ವಿಷಯಗಳನ್ನು ಸ್ವಚ್ಛಜ್ಞಾನದಿಂದ (ಸೋಪಜ್ಞತಾವೃತ್ತಿಯಿಂದ) ಅನುಭವಿಸುತ್ತಾನೆ. ವಿಶ್ವವೇ ಇವನಿಗೆ ಪ್ರಮೇಯ, ವಿಶ್ವಜ್ಞಾನವೇ ಪ್ರಮಿತಿ. ನಿಸ್ತರಂಗವಾದ ಚಿತ್ಸ್ವರೂಪಾನುಭವದಲ್ಲಿ ಪ್ರಮಾಣವೇ ಮೊದಲಾದ ನಾಲ್ಕು ಭೇದಗಳಿಲ್ಲ. ನಿಸ್ತರಂಗವಾದ ಚಿತ್ಸ್ವರೂಪವೇ ಪರಮಶಿವ. ವಿಶ್ವವು ಆತನಿಗಿಂತ ಬೇರೆಯಾಗಿಲ್ಲದಿರುವುದರಿಂದ ಆತನನ್ನು ತಿಳಿಯುವುದಕ್ಕೆ ಬೇರೆ ಸಾಧನಗಳಿಲ್ಲ. ಆತನೇ ಸಾಧನ ಮತ್ತು ಸಾಧ್ಯವೂ ಆಗಿರುತ್ತಾನೆ. ಹೇಗೆಂದರೆ ದೀಪವು ಕತ್ತಲೆಯಲ್ಲಿ ಇತರ ಪದಾರ್ಥಗಳನ್ನು ತೋರ್ಪಡಿಸುತ್ತದೆ. ದೀಪವನ್ನು ತೋರಿಸುವುದಕ್ಕೆ ಬೇರೆ ದೀಪವು ಬೇಕಿಲ್ಲ. ಅದು ತನ್ನನ್ನೇ ತಾನು ತೋರ್ಪಡಿಸಿಕೊಳ್ಳುತ್ತಾ ಇತರ ಪದಾರ್ಥಗಳ ತಿಳಿವಳಿಕೆಯನ್ನೂ ಉಂಟುಮಾಡುತ್ತದೆ.

ಸ್ವಯಂಪ್ರಕಾಶವಾದ ಚಿತ್ತು ಸ್ವತಂತ್ರವಾದದ್ದು. ಸರ್ವಶಕ್ತಿಗಳನ್ನೂ ಒಳಗೊಂಡಿರುವಂಥಾದ್ದು. ಎಲ್ಲಕ್ಕೂ ಕಾರಣವಾದದ್ದು. ಸುಖೋಪಾಯವಾದದ್ದು. ಇದನ್ನೇ ಅನುತ್ತರ, ಪರಾಸಂವಿತ್, ಪರಮಶಿವ ಎಂದು ಕರೆಯುವುದು. ಪರಮ ಶಿವನು ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತನಾಗಿರುತ್ತಾನೆ. ಈ ಸ್ಥಿತಿಯಲ್ಲಿ ಈತನು ವಿಶ್ವೋತ್ತೀರ್ಣ ಅಥವಾ ವಿಶ್ವಾತೀತನೆನಿಸಿಕೊಳ್ಳುತ್ತಾನೆ. ಈತನು ಯಾವಾಗಲೂ ಚಿದಾನಂದಘನನಾಗಿ ಪರಿಪೂರ್ಣನಾಗಿರುತ್ತಾನೆ. ಈ ಪರಮಶಿವನು ತನ್ನ ಸ್ವಾತಂತ್ರ್ಯಶಕ್ತಿ ಚಮತ್ಕಾರದಿಂದ ಮೂವತ್ತಾರು ತತ್ತ್ವಗಳ ರೂಪವನ್ನೂ ಸಪ್ತಪ್ರಮಾತೃಭಾವವನ್ನೂ ಪಡೆಯುತ್ತಾನೆ. ಇದು ವಿಶ್ವಾತ್ಮಕ ಸ್ಥಿತಿ.

ನಿಸ್ತರಂಗವಾದ ಸಮುದ್ರದಲ್ಲಿ ಸೂಕ್ಷ್ಮವಾದ ಅಲೆಗಳುಂಟಾಗುವಂತೆ ಆಗುವ ಚಿತ್ಸಮುದ್ರದ ಚಲನವೇ ಶಕ್ತಿ ಅಥವಾ ಚಿಚ್ಛಕ್ತಿ. ಈ ಚಿಚ್ಛಕ್ತಿಯೇ ಜ್ಞಾನ ಇಚ್ಛಾ ಕ್ರಿಯಾ ಎಂಬ ಮೂರು ಭೇದಗಳಿಂದ ಪ್ರಸರಿಸುತ್ತದೆ. ಮೊದಲನೆಯ ಚಿಚ್ಛಕ್ತಿಯೇ ಸ್ಪಂದ, ಸ್ಫುರತ್ತಾ, ಉನ್ಮೇಷ ಎಂದು ಹೇಳುವುದು. ಇದರಿಂದಲೇ ಪ್ರಪಂಚಸೃಷ್ಟಿ. ಮೊದಲನೆಯ ತತ್ತ್ವವಾದ ಶಿವತತ್ತ್ವದಿಂದ ಭೂಮಿಯವರೆಗೂ ಇರುವ ಮೂವತ್ತಾರು ತತ್ತ್ವಗಳು ಶಕ್ತಿಪ್ರಸರಣ ಕ್ರಮದಿಂದ ರೂಪುಗೊಳ್ಳುತ್ತವೆ. ಶಿವ ಶಕ್ತಿ ಈ ಎರಡು ತತ್ತ್ವಗಳಲ್ಲಿ ಗ್ರಾಹ್ಯ-ಗ್ರಾಹಕ ಭೇದಗಳಿಲ್ಲ. ಶಕ್ತಿತತ್ತ್ವದಲ್ಲಿ ಇಚ್ಛಾಜ್ಞಾನಕ್ರಿಯಾ ಶಕ್ತಿಗಳ ಆವಿರ್ಭಾವವಾಗಿರುತ್ತದೆ. ಮೂರನೆಯ ತತ್ತ್ವವಾದ ಸದಾಶಿವ ತತ್ತ್ವದಿಂದ ಗ್ರಾಹಕ ಭಾವವು ಅಂಕುರಿಸುತ್ತದೆ. ಮುಂದಿನ ತತ್ತ್ವಸೃಷ್ಟಿಯಲ್ಲಿ ತತ್ತ್ವಗಳಿಗನುರೂಪವಾದ ಗ್ರಾಹಕವರ್ಗಗಳೇರ್ಪಡುತ್ತವೆ. ಇಚ್ಛಾಜ್ಞಾನಕ್ರಿಯಾ ಎಂಬ ಮೂರು ಶಕ್ತಿಗಳು ಆವಿರ್ಭವಿಸಿದರೂ ಈ ಶಕ್ತಿಗಳು ವಿಶ್ವರೂಪವಾಗಿ ಅನಂತ ಭೇದಗಳನ್ನು

ಪಡೆದಿರುತ್ತವೆ. ಗ್ರಾಹ್ಯಗ್ರಾಹಕ ಭೇದದಿಂದಿರುವ ಈ ವಿಶ್ವವನ್ನು ಹೊರಹೊಮ್ಮಿಸುವ ಮತ್ತು ಉಪಸಂಹರಿಸುವ ಚಮತ್ಕಾರವು ಈ ಚಿಚ್ಛಕ್ತಿಗೆ ಸೇರಿದುದು.

ಚಿಚ್ಛಕ್ತಿಯ ಸ್ವಾತಂತ್ರ್ಯಚಮತ್ಕಾರವು ವಿಲಕ್ಷಣವಾದದ್ದು.

"ವಿಮರ್ಶೋ ಹಿ ಸರ್ವಂಸಹಃ ಪರಮಪಿ ಆತ್ಮೀಕರೋತಿ
ಆತ್ಮಾನಂ ಚ ಪರೀಕರೋತಿ ಉಭಯಮೇಕೀಕರೋತಿ
ಏಕೀಕೃತಂ ದ್ವಯಮಪಿ ನ್ಯಗ್ಭಾವಯತಿ ಇತ್ಯೇವಂ ಸ್ವಭಾವಃ"

(ಈಶ್ವರಪ್ರತ್ಯಭಿಜ್ಞಾ ವಿಮರ್ಶಿನಿ).

ಚಿಚ್ಛಕ್ತಿಯು ಎಲ್ಲವನ್ನೂ ಒಳಗೊಂಡಿರುವಂಥಾದ್ದು. ಬಾಹ್ಯಪ್ರಪಂಚವನ್ನು (ಇದಂ ತಾ) ತನ್ನಲ್ಲಿಯೇ ಸೇರಿಸಿಕೊಳ್ಳುತ್ತದೆ. 'ಅಹಂ' ಎಂಬ ತನ್ನ ಸ್ವರೂಪವನ್ನು 'ಇದಂ' ಎಂಬ ಗ್ರಾಹ್ಯರೂಪವಾಗಿಯೂ ತೋರಿಸುತ್ತದೆ. ಈ ಗ್ರಾಹ್ಯಗ್ರಾಹಕ ಭಾವಗಳನ್ನು ಅಭಿನ್ನವಾಗಿಯೂ ತೋರಿಸುತ್ತದೆ. ಹಾಗೆಯೇ ಮರೆಮಾಚುತ್ತದೆ. ಇಂತಹ ವಿಲಕ್ಷಣ ಚಮತ್ಕಾರ ಸ್ವಭಾವವುಳ್ಳದ್ದು ಚಿತ್ತು.

ಚಿಚ್ಛಕ್ತಿಗೆ ದೇಶ ಕಾಲ ಆಕಾರಗಳ ಭೇದವಿಲ್ಲ. ಆದರೂ ಅದರಿಂದಲೇ ಉದ್ಭವಿಸಿರುವ ವಿಶ್ವವು ದೇಶ ಕಾಲ ಆಕಾರಗಳಿಂದಲೇ ವ್ಯವಹಾರಕ್ಕೆ ಯೋಗ್ಯವಾಗುತ್ತದೆ.

ದೇಶಕಾಲಾಕಾರಭೇದಃ ಸಂವಿದೋ ನ ಹಿ ಯುಜ್ಯತೇ ।
ತಸ್ಮಾದೇಕೈವ ಪೂರ್ಣಾಹಂ ವಿಮರ್ಶಾತ್ಮಾ ಚಿದುಚ್ಯತೇ ॥

ದೇಶಕಾಲಾಕಾರಸಹಿತವಾಗಿರುವ ಈ ವಿಶ್ವಕ್ಕೆ ಚಿಚ್ಛಕ್ತಿಯು ಕಾರಣ. ಅದು ಯಾವಾಗಲೂ ವ್ಯಾಪಕವಾಗಿಯೂ ಸ್ವಯಂಪ್ರಕಾಶವಾಗಿಯೂ ಪರಿಪೂರ್ಣವಾಗಿಯೂ ಇರುತ್ತದೆ. ಸೃಷ್ಟಿಸ್ಥಿತಿಸಂಹಾರಗಳನ್ನು ಬೇರೆ ಸಾಧನಗಳ ಅಪೇಕ್ಷೆಯಿಲ್ಲದೆ ನಿರ್ವಹಿಸುತ್ತಿರುವುದರಿಂದ ಸ್ವತಂತ್ರವಾಗಿದೆ. ಈ ಶಕ್ತಿಯ ಪ್ರಸರದಿಂದಲೇ ಸೃಷ್ಟಿಸ್ಥಿತಿಗಳು ನಡೆಯುತ್ತಿರುವುದು. ಈ ಶಕ್ತಿಯು ತನ್ನ ಪ್ರಸರವನ್ನು ಉಪಸಂಹರಿಸಿಕೊಂಡರೆ ಪ್ರಳಯ ಅಥವಾ ಸಂಹಾರವೆಂದು ಹೇಳಲ್ಪಡುತ್ತದೆ.

ಶಕ್ತಿಪ್ರಸರಣಕ್ರಮದಲ್ಲಿ ನಾವು ಇನ್ನೂ ಒಂದು ಚಮತ್ಕಾರವನ್ನು ಗಮನಿಸಬಹುದು. ಚಿಚ್ಛಕ್ತಿಯು ಅಭೇದವಿಮರ್ಶನರೂಪಿಯಾಗಿ ಪರಾಶಕ್ತಿ ಎನ್ನಿಸುತ್ತದೆ. ಭೇದಾಭೇದವಿಮರ್ಶನರೂಪಿಯಾಗಿ ಪಶ್ಯಂತೀ ಮಧ್ಯಮಾರೂಪಗಳಿಂದ ವಿರಾಜಿಸುತ್ತಿದ್ದು ವೈಖರ್ಯವಸ್ಥೆಯಲ್ಲಿ ಭೇದವನ್ನೇ ಮಿತಪ್ರಮಾತೃವನ್ನು ಜೀವನಿಗೆ ಉಂಟುಮಾಡುತ್ತಿರುತ್ತದೆ. ಪರಾಪಶ್ಯಂತೀ ಮಧ್ಯಮಾ ವೈಖರೀ ಈ ನಾಲ್ಕು ಸ್ಥಿತಿಗಳೂ ಅನಂತಶಕ್ತಿಯುಳ್ಳ ಚಿಚ್ಛಕ್ತಿಯ ಪ್ರಕಾರಗಳೆಂದು ತಿಳಿದು ಉಪಾಸಿಸುವರಿಗೆ ಮುಕ್ತಿಯುಂಟಾಗುತ್ತದೆ.

ಸೇಯಂ ಕ್ರಿಯಾತ್ಮಿಕಾ ಶಕ್ತಿಃ ಶಿವಸ್ಯ ಪಶುವರ್ತಿನೀ ।
ಬಂಧಯಿತ್ರೀ ಸ್ವಮಾರ್ಗಸ್ಥಾ ಜ್ಞಾತಾ ಸಿದ್ಧ್ಯುಪಪಾದಿಕಾ ॥

(ಸ್ಪಂದಕಾರಿಕಾ.)

ಹೀಗೆ ಪರಮಶಿವನು ಅನಂತರೂಪಗಳಿಂದ ವಿಶ್ವರೂಪಿಯಾಗಿ ವಿರಾಜಿಸುತ್ತಿದ್ದಾನೆ. ಇದು ಆತನ ಲೀಲೆ.

ಈಶ್ವರನಿಗೆ ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾ ಎಂಬ ಐದು ಶಕ್ತಿಗಳು ನಿತ್ಯವಾಗಿರುತ್ತವೆ. ವಿಶ್ವಾತೀತನಾದ ಪರಮಶಿವನಲ್ಲಿಯೂ ಶಿವಾತ್ಮಕನಾದ ಶಿವನಲ್ಲಿಯೂ ಈ ಗುಣಗಳು ಸಮಾನವಾಗಿಯೇ ಇವೆ. ಪರಮಶಿವನು ಇನ್ನೊಂದು ವಸ್ತುವಿನ ಆಶ್ರಯ ವಿಲ್ಲದೆ ಸ್ವಯಂಪ್ರಕಾಶನು. ಇನ್ನೊಂದರ ಸಹಾಯವಿಲ್ಲದೆ ತನ್ನಲ್ಲಿಯೇ ಆನಂದವನ್ನು ಪಡೆಯುವ ಶಕ್ತಿಯುಳ್ಳವನಾಗಿಯೂ ತಾನು ಏನುಬೇಕಾದರೂ ಮಾಡಬಲ್ಲೆನೆಂದು ಅಪ್ರತಿಹತವಾದ ದೃಢಸಂಕಲ್ಪವುಳ್ಳ ಮತ್ತು ಚಮತ್ಕಾರರೂಪವಾದ ಇಚ್ಛಾಶಕ್ತಿ ಯುಳ್ಳವನಾಗಿಯೂ ಗ್ರಾಹ್ಯಗ್ರಾಹಕ ವ್ಯವಹಾರಗಳನ್ನು ತನ್ನಲ್ಲಿ ಒಳಗೊಂಡಿರುವ ಜ್ಞಾನಶಕ್ತಿಯುಳ್ಳವನಾಗಿಯೂ ಅನೇಕ ರೂಪಗಳಿಂದ ಪದಾರ್ಥಗಳನ್ನು ಸೃಷ್ಟಿಮಾಡುವ ಕ್ರಿಯಾಶಕ್ತಿಯುಳ್ಳವನಾಗಿಯೂ ಹೀಗೆ ಪಂಚಶಕ್ತಿಗಳುಳ್ಳವನಾಗಿ ಯಾವಾಗಲೂ ಪಂಚ ಕೃತ್ಯಗಳನ್ನು ಮಾಡುತ್ತಿರುತ್ತಾನೆ. ಪಂಚಕೃತ್ಯಗಳು ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹ. ಇಲ್ಲಿ ಸೃಷ್ಟಿ ಅಂದರೆ ವಿಶ್ವಸೃಷ್ಟಿ ಸ್ಥಿತಿ. ಅಂದರೆ ಹಾಗೆ ಸೃಷ್ಟಿಮಾಡಿದ್ದನ್ನು ಕಾಪಾಡುವುದು. ಸಂಹಾರ ಅಂದರೆ ತನ್ನಲ್ಲಿಯೇ ಲಯ ಮಾಡಿಕೊಳ್ಳುವುದು. ತಿರೋಧಾನ ಅಂದರೆ ಪುನಃ ಸ್ಮೃತಿಗೆ ಬರುವ ಸ್ಥಿತಿಯಲ್ಲಿರಿಸುವಿಕೆ. ಅನುಗ್ರಹ ವೆಂದರೆ ಸಂಸ್ಕಾರರೂಪದಲ್ಲಿಲ್ಲದೆ ಸ್ಮರಿಸುವುದಕ್ಕವಕಾಶವಿಲ್ಲದಂತೆ ಚಿತ್ತಿನಲ್ಲಿಯೇ ಸಂಪೂರ್ಣವಾಗಿ ಲಯವಾಗುವುದು. ಹೀಗೆ ಐದು ಶಕ್ತಿಗಳಿಂದಲೂ ಐದು ಕೃತ್ಯ ಗಳಿಂದಲೂ ವಿಶ್ವಾತ್ಮಕನಾಗಿಯೂ ವಿಶ್ವಾತೀತನಾಗಿಯೂ ಚಿದಾನಂದೈಕಘನವಾಗಿಯೂ ಅನುತ್ತರ ವಿಮರ್ಶಮಯನಾಗಿಯೂ ಸ್ವತಂತ್ರನಾಗಿಯೂ ಪರಿಪೂರ್ಣನಾಗಿಯೂ ಪರಮಶಿವನು ಇದ್ದಾನೆ.

> ಸೃಷ್ಟಿಸಂಹಾರಕರ್ತಾರಂ ವಿಲಯಸ್ಥಿತಿಕಾರಕಂ ।
> ಅನುಗ್ರಹಕರಂ ದೇವಂ ಪ್ರಣತಾರ್ತಿವಿನಾಶನಂ ॥

ಪರವಸ್ತುವನ್ನು ಎಲ್ಲರೂ ಅಂಗೀಕರಿಸಿದ್ದಾರೆ. ಆದರೆ ದಾರ್ಶನಿಕರಲ್ಲಿ ಆ ಪರ ವಸ್ತುವಿನ ಸ್ವರೂಪ, ಸ್ವಭಾವ, ಐಶ್ವರ್ಯ ಈ ವಿಷಯಗಳನ್ನು ವಿವರಿಸುವಾಗ ಬಗೆಬಗೆ ಯಾದ ಕಲ್ಪನೆಗಳು ಕಂಡುಬರುತ್ತವೆ. ಚಿದ್ರೂಪಿಯಾಗಿರುವ ಆ ಪರವಸ್ತು ಒಂದೇ ಸತ್ಯ. ಮಿಕ್ಕ ಎಲ್ಲಾ ವಿಶ್ವವು ಕಲ್ಪಿತವಾಗಿರುವುದು. ಆದುದರಿಂದ ಅದೆಲ್ಲಾ ಮಿಥ್ಯಾ ಎಂದು

ಪ್ರಕಾಶರೂಪತಾ ಚಿಚ್ಛಕ್ತಿಃ—ತಂತ್ರಸಾರ

ಸ್ವಾತಂತ್ರ್ಯಂ ಆನಂದಶಕ್ತಿಃ—ತಂತ್ರಸಾರ

ತಚ್ಚಮತ್ಕಾರ ಇಚ್ಛಾಶಕ್ತಿಃ—ತಂತ್ರಸಾರ

ಆಮರ್ಷಾತ್ಮಕತಾ ಜ್ಞಾನಶಕ್ತಿಃ—ತಂತ್ರಸಾರ

ಸರ್ವಾಕಾರಯೋಗಿತ್ವಂ ಕ್ರಿಯಾಶಕ್ತಿಃ—ಅನಾಮಕ

ಕೆಲವರ ಅಭಿಪ್ರಾಯವಿದೆ. ಮಿಥ್ಯಾ ಅಂದರೆ ಸ್ವಲ್ಪಹೊತ್ತು ಇದ್ದಹಾಗೆ ತೋರಿ ಆಮೇಲೆ ಮಾಯವಾಗುವುದು ಅಥವಾ ಪದಾರ್ಥಗಳಿಲ್ಲದೆಯೇ ಪದಾರ್ಥಗಳಿದ್ದಂತೆ ತೋರುವುದು ಎಂದು ತಾತ್ಪರ್ಯವಾಗುತ್ತದೆ. ಇದನ್ನೇ ಅಭ್ಯಾಸವೆಂದು ಹೇಳುವುದುಂಟು. ಒಂದು ಪದಾರ್ಥದಲ್ಲಿ ಇರುವ ಕೆಲವು ಧರ್ಮಗಳನ್ನು ತಿಳಿದರೆ ಮಿಕ್ಕ ಕೆಲವು ಧರ್ಮಗಳು ತಿಳಿಯದೆ ಇದ್ದರೂ ಆತುರವಾಗಿ ನಾವು ಈ ಪದಾರ್ಥವು ಇಂತಹುದೇ ಎಂದು ಹೇಳಿಬಿಡುತ್ತೇವೆ. ಹೇಗೆಂದರೆ ಒಬ್ಬ ಮನುಷ್ಯನ ಮುಖ ನೋಡಿದರೆ ಇವನು ಇಂಥವನೆಂದು ಗುರುತಿಸುತ್ತೇವೆ. ಚಂದ್ರಬಿಂಬವನ್ನು ಒಂದು ಮುಖದಲ್ಲಿ ನೋಡಿ ಚಂದ್ರನೆಂದು ನಂಬುತ್ತೇವೆ. ಚಂದ್ರನ ಹಿಂಭಾಗವನ್ನು ನಾವು ನೋಡಿಲ್ಲ. ನೋಡದಿದ್ದರೂ ವ್ಯವಹಾರಕ್ಕೆ ಏನೂ ತೊಂದರೆಯಿಲ್ಲ. ಹೀಗೆ ಹಗ್ಗವನ್ನು ನೋಡಿರುತ್ತೇವೆ. ಹಾವನ್ನು ನೋಡಿರುತ್ತೇವೆ. ಕೆಲವು ಪರಿಸ್ಥಿತಿಗಳಲ್ಲಿ ಹಾವನ್ನು ಹಗ್ಗವೆಂದೋ, ಹಗ್ಗವನ್ನು ಹಾವೆಂದೋ ನಾವು ಗುರುತಿಸಬಹುದು. ಅದರ ಪೂರ್ಣ ಪರಿಚಯವೇರ್ಪಟ್ಟಾಗ ಸರಿಯಾದ ತಿಳಿವಳಿಕೆಯಿಂದ ತಪ್ಪುತಿಳಿವಳಿಕೆ ದೂರವಾಗಿ ವ್ಯತ್ಯಾಸ ಗೋಚರಿಸುತ್ತದೆ. ಆ ಪರವಸ್ತುವೇ ಪರಮಸತ್ಯವಾಗಿರುವುದರಿಂದ ಅದನ್ನೇ ಸತ್ಯವೆಂದೂ ಮಿಕ್ಕದ್ದೆಲ್ಲಾ ಸುಳ್ಳೆಂದೂ ಹೇಳಬೇಕೆಂದು ಅವರ ಅಭಿಪ್ರಾಯ. ಅದಕ್ಕೆ ಆಧಾರವಾಗಿ ಚೇತನಾಂಶವೆಲ್ಲಾ ಆ ಪರವಸ್ತುವಿನ ಸಾಮ್ರಾಜ್ಯವಾಗಿದೆ. ಇದಕ್ಕೆ 'ದೃಕ್' ಎಂದು ಪರಿಭಾಷೆ. ದೃಶ್ಯವಾಗಿರುವುದೆಲ್ಲಾ ವಿಶ್ವ. ಅದು ಕಲ್ಪಿತವಾಗಿರುವುದರಿಂದ ಮಿಥ್ಯೆ ಎಂದು ಹೇಳುತ್ತಾರೆ. ಹೇಗೆಂದರೆ ಈ ಮಿಥ್ಯಾತ್ವವನ್ನು ಸ್ಥಿರಪಡಿಸುವುದಕ್ಕೋಸ್ಕರವಾಗಿ ಅದರ ವಿವರಣೆಯನ್ನು ಮೂರು ಹಂತಗಳಲ್ಲಿ ವಿಂಗಡಿಸಿರುತ್ತಾರೆ. ಇದನ್ನು ಸಂಕ್ಷೇಪವಾಗಿ 'ಸತ್ತಾ ತ್ರೈವಿಧ್ಯ' ಎನ್ನುತ್ತಾರೆ. ಒಂದು ಪ್ರಾತಿಭಾಸಿಕ ಸತ್ತಾ, ಎರಡು ವ್ಯವಹಾರಿಕ ಸತ್ತಾ, ಮೂರು ಪಾರಮಾರ್ಥಿಕ ಸತ್ತಾ. ಇಲ್ಲಿ ಮೂರನೆಯದು ಪರವಸ್ತು. ಎರಡನೆಯದು ವಿಶ್ವವ್ಯವಹಾರಗಳಿಗೆ ಸಂಬಂಧಪಟ್ಟದ್ದು. ಮೊದಲನೆಯ ಪ್ರಾತಿಭಾಸಿಕ ಸತ್ಯ ಅಂದರೆ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯನ್ನು ಕಾಣುವಿಕೆ. ಕಾಲಕ್ರಮದಲ್ಲಿ ಕಪ್ಪೆಚಿಪ್ಪು ಎಂದು ತಿಳಿದಾಗ ಬೆಳ್ಳಿ ಎಂಬುವ ಭ್ರಾಂತಿ ಹೋಗುತ್ತದೆ.

ಶಿವದೃಷ್ಟಿಭಾವನಾ

ವಿಶ್ವವು ಚರ ಮತ್ತು ಅಚರರೂಪಗಳಿಂದ ಎರಡು ಬಗೆಯಾಗಿದೆ. ಹಾಗೆಯೇ ಜಡ ಮತ್ತು ಅಜಡ ರೂಪಗಳಿಂದ ಪರಸ್ಪರ ಬೇರೆಬೇರೆಯಾಗಿ ತೋರುತ್ತಲಿದೆ. ಹೀಗಿರುವ ವಿಶ್ವವನ್ನು ಶಿವಮಯವಾಗಿ ಭಾವಿಸುವುದಕ್ಕೆ ಕೆಲವು ನಿಶ್ಚಿತವಾದ ಮತ್ತು ತಾತ್ತ್ವಿಕವಾದ ಕಾರಣಗಳು ಇವೆ. ಈ ಕಾರಣಗಳನ್ನೂ ಇವುಗಳಿಗೆ ಸಂಬಂಧಪಟ್ಟ ಅಭಿಪ್ರಾಯಗಳನ್ನೂ ತಿಳಿಯಬೇಕಾಗಿದೆ. ಕಾಲಕ್ರಮದಲ್ಲಿ ಈ ಅಭಿಪ್ರಾಯಗಳ ಮೇಲೆ ಆಕ್ಷೇಪಣೆಗಳು ಬೆಳೆದು ಬಂದವು. ಸೋಮಾನಂದರು ಅವರ ಕಾಲದಲ್ಲಿ ಪ್ರಚಲಿತವಾಗಿದ್ದ ವಾದಗಳನ್ನು ನಿರಾಕರಿಸಿ ವಿಶ್ವವು ಶಿವಾಭಿನ್ನವೆಂದು ತಮ್ಮ 'ಶಿವದೃಷ್ಟಿ' ಎಂಬ ಗ್ರಂಥದಲ್ಲಿ ಸ್ಥಾಪಿಸಿರುತ್ತಾರೆ.

ನಮ್ಮ ಅನುಭವದಲ್ಲಿ ಯಾವ ವಿಚಾರವನ್ನು ತೆಗೆದುಕೊಂಡರೂ ಅದು ಕಾಲ,

ದೇಶ ಮತ್ತು ದಶೆ ಈ ಮೂರು ಅಂಶಗಳಿಗೆ ಒಳಗಾಗಿರುತ್ತದೆ. ವಿಶ್ವವು ಶಿವಮಯವೆಂದು ಹೇಳಬೇಕಾಗಿದ್ದರೂ ಈ ಮೂರು ಅಂಶಗಳ ವ್ಯಾಪ್ತಿಗೆ ಒಳಗಾಗಿರುವ ಪರಿಸ್ಥಿತಿಯನ್ನು ವರ್ಣಿಸಬೇಕಾಗುತ್ತದೆ. ಈ ಮೂರು ಅಂಶಗಳಿಗೆ ಒಳಪಡದೆ ಶಿವನು ಯಾವ ರೀತಿ ಈ ಮೂರು ಭಾವಗಳನ್ನು ಅಂಗೀಕರಿಸಿದನು ಎಂಬ ವಿಷಯವನ್ನು ಇಲ್ಲಿ ವಿಶದೀಕರಿಸಿದೆ.

ಈಶ್ವರನು ಚಿನ್ಮೂರ್ತಿಯಾಗಿದ್ದಾನೆ. ಎಲ್ಲಾ ಪದಾರ್ಥಗಳಲ್ಲಿಯೂ ಚಿದಾತ್ಮಕನಾಗಿ ಸ್ಫುರಿಸುತ್ತಲಿದ್ದಾನೆ. ಯಾವ ಬಗೆಯ ಪ್ರತಿಬಂಧಕವೂ ಇಲ್ಲದೆ ಇಚ್ಛಾ ಮತ್ತು ಕ್ರಿಯಾಶಕ್ತಿಗಳ ಪ್ರಸಾರವುಳ್ಳವನಾಗಿದ್ದಾನೆ. ಈ ರೀತಿ ವಿಶ್ವದ ಎಲ್ಲಾ ಪದಾರ್ಥಗಳೂ ಶಿವಮಯವೆಂದು ಭಾವಿಸುವುದು ಶಿವದೃಷ್ಟಿ.

ಆತ್ಮೈವ ಸರ್ವಭಾವೇಷು ಸ್ಫುರನ್ನಿರ್ವೃತಚಿದ್ವಿಭುಃ ।
ಅನಿರುದ್ಧೇಚ್ಛಾಪ್ರಸರಃ ಪ್ರಸರದೃಕ್ಕ್ರಿಯಃ ಶಿವಃ ॥

(ಶಿವದೃಷ್ಟಿ, ಆಹ್ನಿಕ ೧, ಶ್ಲೋಕ–೨)

ಶಿವನು ಪರಿಪೂರ್ಣನು, ಸರ್ವಶಕ್ತಿ ಮಯನು, ಸಾಕಾರ ನಿರಾಕಾರ ವಸ್ತುಗಳಲ್ಲಿ ಸಮಾನವಾಗಿ ವ್ಯಾಪಿಸಿರುವನು. ವಿಶ್ವವು ಶಿವನಿಗಿಂತ ಬೇರೆಯಲ್ಲ. ಈ ರೀತಿಯಾದ ತಿಳಿವಳಿಕೆ ಮತ್ತು ಭಾವನೆಗಳಿಂದ ಕೂಡಿರುವವನಿಗೆ ಶಿವಸ್ವರೂಪವು ಸರ್ವತ್ರ ಗೋಚರಿಸುತ್ತದೆ.

ಶಿವನು ಶಕ್ತಿಯಿಂದ ಬೇರೆಯಲ್ಲ. ಶಿವನು ಶಕ್ತಿಯುಳ್ಳವನಾದುದರಿಂದ ಶಕ್ತಿಯ ಮೂಲಕ ಅನಂತವಾದ ಕಾರ್ಯಪ್ರಪಂಚವನ್ನು ನಿರ್ವಹಿಸುವನು.

ನ ಶಿವಃ ಶಕ್ತಿರಹಿತೋ ನ ಶಕ್ತಿರ್ವ್ಯತಿರೇಕಿಣೀ ।
ಶಿವಃ ಶಕ್ತಸ್ತಥಾ ಭಾವಾನಿಚ್ಛಯಾ ಕರ್ತುಮೀಹತೇ ॥

(ಶಿವದೃಷ್ಟಿ, ಆಹ್ನಿಕ ೩, ಶ್ಲೋಕ–೨)

ಸಾಕಾರವಾದ ಪದಾರ್ಥಗಳಲ್ಲಿಯೂ ನಿರಾಕಾರವಾದ ಭಾವನೆಗಳಲ್ಲಿಯೂ ಜ್ಞಾನ ಇಚ್ಛಾ ಕ್ರಿಯಾಶಕ್ತಿ ಸಮಾವೇಶವಿದ್ದೇ ಇರುತ್ತದೆ.

ಸಚಿತ್ತ್ವಂ ಸಂಸ್ಥಿತಂ ನಿತ್ಯಂ ಕಥನೀಯಂ ತಥಾಗ್ರತಃ ।
ಏವಂ ಸರ್ವಪದಾರ್ಥಾನಾಂ ಸಮೈವ ಶಿವತಾ ಸ್ಥಿತಾ ॥

(ಆಹ್ನಿಕ, ೧ ಶ್ಲೋಕ-೪೭, ೪೮)

ಶಿವನು ಎಲ್ಲಾ ತಿಳಿವಳಿಕೆಗಳಲ್ಲಿಯೂ ಎಲ್ಲಾ ಆಕಾರಗಳಲ್ಲಿಯೂ ಎಲ್ಲಾ ಪದಾರ್ಥಗಳಲ್ಲಿಯೂ ತನ್ನ ಶಕ್ತಿಯ ಆವೇಶದಿಂದ ಇದ್ದರೂ ಪರಿಪೂರ್ಣನಾಗಿಯೇ ಇದ್ದಾನೆ.

ತಸ್ಮಾತ್ಸಮಗ್ರಾಕಾರೇಷು ಸರ್ವಸು ಪ್ರತಿಪತ್ತಿಷು ।
ವಿಜ್ಞೇಯಂ ಶಿವರೂಪತ್ತ್ವಂ ಸ್ವಶಕ್ತ್ಯಾವೇಶನಾತ್ಮಕಂ ॥

(ಆಹ್ನಿಕ ೩, ಶ್ಲೋಕ ೧೭)

ವಿಶ್ವವು ಅನಂತವಾದ ನಿತ್ಯವಾದ ನಾನಾರೂಪಗಳ ವ್ಯವಸ್ಥೆಯಿಂದ ಭೇದಾತ್ಮಕವಾಗಿದ್ದರೂ ಸತ್ಯವಾಗಿ ಶಿವತ್ವವು ವಿರಾಜಿಸುತ್ತಲಿರುತ್ತದೆ.

ಏವಂ ಭೇದಾತ್ಮಕಂ ನಿತ್ಯಂ ಶಿವತತ್ತ್ವಮನಂತಕಮ್ ।
ತಥಾ ತಸ್ಯ ವ್ಯವಸ್ಥಾ ನಾನಾ ರೂಪೇಽಪಿ ಸತ್ಯತಾ ॥

(ಆಹ್ನಿಕ ೧, ಶ್ಲೋಕ ೪೯)

ದ್ವೈತಭಾವದಲ್ಲಿಯಾದರೂ ಅದ್ವೈತಭಾವದಲ್ಲಿಯಾದರೂ ಶಿವನಿಗೆ ಅನಂತಶಕ್ತಿಗಳಿರುವುದರಿಂದ ಸರ್ವತ್ರ ಶಿವತ್ತ್ವವು ಸಿದ್ಧವಾಗಿದೆ. ಭಾವುಕನಿಗೆ ಶಿವಸ್ವರೂಪವು ಸರ್ವತ್ರ ಗೋಚರಿಸುತ್ತದೆ.

ಸ್ಥಿತಂ ಶಿವತ್ವಂ ಸರ್ವತ್ರ ವಿಶೇಷಾಚ್ಛೈವವಾದಿನಾಮ್ ।
ಏಕತ್ವೇನ ತತೋ ಜ್ಞೇಯಾ ಶಿವತಾ ಸರ್ವಗೋಚರಾ ॥

(ಆಹ್ನಿಕ ೬, ಶ್ಲೋಕ ೧೨೮)

ಶಕ್ತಿಶ್ಚ ಶಕ್ತಿಮಾಂಶ್ಚೈವ ಪದಾರ್ಥದ್ವಯಮುಚ್ಯತೇ ।
ಶಕ್ತಯಶ್ಚ ಜಗತ್ಸರ್ವಂ ಶಕ್ತಿಮಾಂಸ್ತು ಮಹೇಶ್ವರಃ ॥

ಪರಿಪಾಕವುಳ್ಳ ಸಾಧಕನಿಗೆ ತಾನೇ ಶಿವನೆಂದು ಗುರುತಿಸಲು ಉಪಾಯಗಳು ಬೇಕಾಗಿಲ್ಲ. ಒಂದು ಸಲ ಗುರುವಿನಿಂದಾಗಲಿ ಶಾಸ್ತ್ರದಿಂದಾಗಲಿ ಅಥವಾ ಬೇರೆ ಪ್ರಮಾಣಗಳಿಂದಾಗಲಿ ತಿಳಿದರೆ ಸಾಕು. ತಂದೆತಾಯಿಗಳನ್ನು ಸ್ವಭಾವವಾಗಿ ಗುರುತಿಸುವಂತೆ ಗುರುತಿಸುವನು. ಅವನಿಗೆ ಸಾಧನಗಳ ಆವಶ್ಯಕತೆ ಇಲ್ಲ. ಆದುದರಿಂದ ಉಪಾಯ ಮತ್ತು ಉಪೇಯ, ಪ್ರಾಪ್ಯ ಮತ್ತು ಪ್ರಾಪಕ, ಭೋಕ್ತಾ ಮತ್ತು ಭೋಗ್ಯ ಎಲ್ಲವೂ ಶಿವರೂಪಗಳೇ ಆಗಿರುತ್ತವೆ.

ಏಕವಾರಂ ಪ್ರಮಾಣೇನ ಶಾಸ್ತ್ರಾದ್ವಾ ಗುರುವಾಕ್ಯತಃ
ಜ್ಞಾತೇ ಶಿವತ್ವೇ ಸರ್ವಸ್ಥೇ ಪ್ರತಿಪತ್ತ್ಯಾ ದೃಢಾತ್ಮನಾ
ಕರಣೇನ ನಾಸ್ತಿ ಕೃತ್ಯಂ ಕ್ವಾಪಿ ಭಾವನಯಾಪಿ ವಾ
ಸಕೃದ್ ಜ್ಞಾತೇ ಸುವರ್ಣೇ ಕಿಂ ಭಾವನಾ ಕರಣಾದಿನಾ

(ಆಹ್ನಿಕ-೭, ಶ್ಲೋಕ ೬)

ಸಾಧನಾಭ್ಯಾಸಗಳಿಂದ ನಾನು ಶಿವಸ್ವರೂಪಿಯಾಗಿರುವೆನು, ಶಿವನನ್ನು ಹೊಂದುವೆನು, ಶಿವನಾಗಿ ಹೊಂದುವೆನು. ಶಿವನಾಗಿರುವುದರಿಂದ ಶಿವತ್ತ್ವವನ್ನು ಸಾಧಿಸುವೆನು. ನಾನು ಭಿನ್ನನಾಗಿ ತೋರಿದರೂ ಅಭಿನ್ನನಾಗಿಯೇ ಇರುವೆನು. ವಿಶ್ವವೆಲ್ಲಾ ಶಿವನ ವ್ಯವಹಾರ. ಶಿವನೇ ಅನುಭವಿಸುವವನು, ಶಿವನೇ ಅನುಭವಿಸಲ್ಪಡತಕ್ಕ ವಸ್ತು. ಶಿವಸ್ವರೂಪಿಗಳಲ್ಲಿ ಶಿವನನ್ನು ಸಾಧಿಸುವೆನು. ಶಿವನೇ ಕರ್ತೃ, ಶಿವನೇ ಕರ್ಮ, ನಾನಾ ಕಾರಣಗಳಿಂದ ಕೂಡಿದವನಾಗಿದ್ದರೂ ನಾನು ಶಿವನಾಗಿದ್ದೇನೆ. ಈ ವಿಧವಾದ ಅನವರತ

ಶಿವಭಾವನೆಯಿಂದ ಪರಿಪಾಕಾವಸ್ಥೆಯಲ್ಲಿ ಸಾಧಕನು ಶಿವಭಿನ್ನನಾಗುವನೆಂಬುದೇ ಶಿವದೃಷ್ಟಿಯ ಸಾರಾಂಶ.

ಶಿವೋಽಸ್ಮಿ ಸಾಧನಾವಿಷ್ಟಃ, ಶಿವೋ್ಽಹಂ ಯಾಜಕೋಽಪ್ಯಹಂ
ಶಿವಂ ಯಾಮಿ ಶಿವೋ ಯಾಮಿ ಶಿವೇನ ಶಿವಸಾಧನಃ
ಭಿನ್ನೋಽಪ್ಯಭಿನ್ನ ಏವಾಸ್ಮಿ ಶಿವ ಇತ್ಥಂ ವಿಚೇಷ್ಟನಮ್
ಶಿವೋ ಭೋಕ್ತಾ ಶಿವೋ ಭೋಜ್ಯಂ ಶಿವೇಷು ಶಿವಸಾಧನಃ
ಶಿವಃ ಕರ್ತಾ ಶಿವಃ ಕರ್ಮ ಶಿವೋಽಸ್ಮಿ ಕರಣಾತ್ಮಕಃ
ಸುಖೇ ದುಃಖೇ ವಿಮೋಹೇ ಚ ಸ್ಥಿತೋಽಹಂ ಪರಮಶ್ಶಿವಃ
ಪ್ರತಿಪಾದಿತಮೇತಾವತ್ ಸರ್ವಮೇವ ಶಿವಾತ್ಮಕಂ ॥

(ಶಿವದೃಷ್ಟಿ, ಆಹ್ನಿಕ ೭, ಶ್ಲೋಕ ೯೮-೯೯-೧೦೫.)

ವಸ್ತುತಃ ಶಿವಮಯೇ ಹೃದಿ ಸ್ಫುಟಂ
ಸರ್ವಶಃ ಶಿವಮಯಂ ವಿರಾಜತೇ

ವಾಸ್ತವವಾಗಿ ಹೃದಯವು ಶಿವಮಯವಾದಲ್ಲಿ ಎಲ್ಲೆಲ್ಲೂ ಶಿವಮಯವಾಗಿಯೇ ಬೆಳಗುತ್ತದೆ.

ಅನಂತಶಕ್ತಿಯೋಗಿತ್ವಾದಲುಪ್ತತ್ವಾತ್ ಸ್ವಶಕ್ತಿಷು
ಸ್ಥಿತಂ ಶಿವತ್ವಂ ಸರ್ವತ್ರ ವಿಶೇಷಾಚ್ಛೈವವಾದಿನಾಮ್
ಏಕತ್ವೇನ ತತೋ ಜ್ಞೇಯಾ ಶಿವತಾ ಸರ್ವಗೋಚರಾ ।

(ಶಿವದೃಷ್ಟಿ, ಆಹ್ನಿಕ ೬.)

ಸ್ಪಂದನಿರ್ಣಯ

ಕಾಶ್ಮೀರ ಶೈವಸಂಪ್ರದಾಯಕ್ಕೆ ಮೂಲ ಶಿವಸೂತ್ರಗಳು. ಈ ಸೂತ್ರಗಳಿಗೆ ವ್ಯಾಖ್ಯಾನವನ್ನು ಬರೆದು ಕಾಶ್ಮೀರದಲ್ಲಿ ಶೈವಮತವನ್ನು ಪುನರುತ್ಥಾನ ಮಾಡಿದವನು ಸಿದ್ಧಪುರುಷ ವಸುಗುಪ್ತ. ಶಿವಸೂತ್ರಗಳಲ್ಲಡಗಿರುವ ಮುಖ್ಯಸೂತ್ರಗಳನ್ನು ವಿವರಿಸಿ ೫೧ ಶ್ಲೋಕಗಳ ರೂಪದಲ್ಲಿ 'ಸ್ಪಂದಕಾರಿಕೆ' ಎಂಬ ಗ್ರಂಥವನ್ನು ಬರೆದು ಪ್ರಚುರಪಡಿಸಿದವನು ವಸುಗುಪ್ತನ ಶಿಷ್ಯ ಕಲ್ಲಟನೆಂದು ಪ್ರಸಿದ್ಧವಾಗಿದೆ. ಸ್ಪಂದದ ೫೧ ಶ್ಲೋಕಗಳಲ್ಲಿ ವಿವರಿಸಿರುವ ಸ್ಪಂದತತ್ತ್ವಗಳು ಆಗಮಶಾಸ್ತ್ರ ಮತ್ತು ಸಿದ್ಧಪುರುಷರ ಆಧಾರದ ಮೇಲೆ ಹುಟ್ಟಿದ ಅನುಭವಗಳು. ಈ ಸ್ಪಂದಶಾಸ್ತ್ರವನ್ನು ಸ್ವರೂಪಸ್ಪಂದ, ಸಹಜವಿದ್ಯೋದಯ ಸ್ಪಂದ, ವಿಭೂತಿಸ್ಪಂದ—ಎಂದು ಮೂರು ಭಾಗವಾಗಿ ವಿಂಗಡಿಸಿದ್ದಾರೆ. ಸ್ವರೂಪ ಸ್ಪಂದದಲ್ಲಿ ಪರತತ್ತ್ವ ಯಾವುದು ಎಂಬುದನ್ನು ಉಪಾಧಿಗಳು ಯಾವ ರೀತಿ ನಿಜ ಸ್ವರೂಪವನ್ನು ಮರೆಮಾಚಿವೆ ಎಂಬುದನ್ನು ಹೇಳಿದೆ. ಸಹಜವಿದ್ಯೋದಯಸ್ಪಂದದಲ್ಲಿ

ನಿತ್ಯಾನಿತ್ಯವಿಚಾರಗಳನ್ನೂ, ಸದಾಜಾಗ್ರತನಾಗಿರಬೇಕೆಂಬುದನ್ನೂ, ಸೋಪಜ್ಞತೆಯನ್ನು ಹೊಂದುವ ಬಗೆಯನ್ನೂ ವಿವರಿಸಿದೆ. ವಿಭೂತಿ ಸ್ಪಂದದಲ್ಲಿ ಶಿವನ ಮಹಿಮೆ(ಐಶ್ವರ್ಯ) ಮತ್ತು ಶಿವಸದ್ಭಾವನೆಗಳನ್ನು ಸೂಚಿಸಿದೆ.

ಸ್ಪಂದಸ್ವರೂಪಃ ಸ್ಪಂದತೇ ಮಮ ಚಕ್ಷುಃ–ನನ್ನ ಕಣ್ಣು ಅದುರುತ್ತದೆ. ಘಟಾತ್ ತೈಲಂ ಸ್ಪಂದತೇ—ಗಡಿಗೆಯಿಂದ ಎಣ್ಣೆಯು ಜಿನುಗುತ್ತದೆ—ಎಂಬಿವು ಸ್ಪಂದ ಶಬ್ದದ ಲೌಕಿಕ ಪ್ರಯೋಗಗಳು. ಸ್ಪಂದ, ಸ್ಫೋಟ, ಸ್ಫುರಣ, ಚಲನ, ಕಂಪನ, ಉದಯ, ಉನ್ಮೇಷ, ಆಭಾಸನ, ನಿಷ್ಯಂದ, ಉನ್ಮೀಲನ ಎಂಬ ಪದಗಳನ್ನು ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಉಪಯೋಗಿಸುತ್ತಾರೆ. ಸ್ಪಂದಶಕ್ತಿಯು ಶಂಕರನ ಶಕ್ತ ಸ್ವರೂಪವೇ ಆಗಿದೆ. ಈ ಶುದ್ಧವಾದ ಪರತತ್ತ್ವವು ೩೬ ತತ್ತ್ವಗಳ ಸಂಕೀರ್ಣಸ್ವರೂಪವನ್ನು ಪ್ರತಿಬಿಂಬಿಸುತ್ತದೆ. ಇದು ಎಲ್ಲಾ ಜ್ಞಾನಕ್ಕೂ ಮೂಲಾಧಾರವಾದ ದೈವವಾಗಿದೆ. ಇದು ಮಂತ್ರಗಳ ಪ್ರಾಣಶಕ್ತಿ. ವಿಶ್ವವನ್ನೆಲ್ಲಾ ಆವರಿಸಿರುವ ಚಿಚ್ಛಕ್ತಿಯ ಆವಿರ್ಭಾವ ರೂಪವಾದ ಚೈತನ್ಯ–ಐಶ್ವರ್ಯ.

ಈ ಶೈವಸಿದ್ಧಾಂತದ ಪರಿಭಾಷೆಯಲ್ಲಿ ಸ್ಪಂದ ಎಂಬ ಪದಕ್ಕೆ ವಿಶಿಷ್ಟವಾದ ಅರ್ಥವಿದೆ. ನಿಸ್ತರಂಗವಾಗಿರುವುದು ಚಂಚಲವಾಗುವಿಕೆ ಎಂದು ಸ್ಥೂಲವಾಗಿ ಹೇಳಬಹುದು. ಸ್ಪಂದವು ಅತೀಂದ್ರಿಯವಾದ ಒಂದು ಶಕ್ತಿಸಾಮರ್ಥ್ಯ. ಶಿವನ ಸ್ಫುರತ್ತಾಸಾರವಾದ ಶಕ್ತಿಯೇ ಸ್ಪಂದ. ಪರಿಪೂರ್ಣನಾದ ಶಿವನು ಸ್ಪಂದಶಕ್ತಿಯಿಂದ ವಿಶ್ವವನ್ನು ಹೊರಹೊಮ್ಮಿಸುತ್ತಾನೆ, ಹಾಗೆಯೇ ಉಪಸಂಹರಿಸುತ್ತಾನೆ. 'ಸ್ವಶಕ್ತಿಪ್ರಚಯೋಽಸ್ಯ ವಿಶ್ವಂ'—ಎಂಬ ಶಿವಸೂತ್ರದಂತೆ ಶಿವನ ಶಕ್ತಿಪ್ರಸಾರವೇ ಈ ವಿಶ್ವ. ಹಾಗೆ ಶಕ್ತಿಪ್ರಸಾರ ಮಾಡುವುದರಲ್ಲಿ ಮೊದಲನೆಯ ಸ್ಫುರಣವೇ ಸ್ಪಂದ. ಈ ಸ್ಪಂದಶಕ್ತಿಯು ಶಿವನಲ್ಲಿ ಅಕ್ರಮವಾಗಿದ್ದು ವಿಶ್ವದ ಎಲ್ಲಾ ಆಭಾಸಗಳನ್ನೂ ಹೊರಹೊಮ್ಮಿಸುತ್ತದೆ. ಇದನ್ನೇ ಪಂಡಿತರು ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹ—ಎಂಬ ಶಿವನ ಪಂಚಕೃತ್ಯಗಳೆಂದು ನಿರೂಪಿಸಿರುತ್ತಾರೆ.

ಯಾವನ ಕಣ್ಣು ತೆರೆಯುವುದು, ಮುಚ್ಚುವುದು ಇವುಗಳಿಂದ ಜಗತ್ತಿನ ಸೃಷ್ಟಿ, ಪ್ರಳಯಗಳಾಗುತ್ತವೆಯೋ ಅಂತಹ ಶಕ್ತಿ, ಚಕ್ರ, ಐಶ್ವರ್ಯದಿಂದ ಜಗತ್ತಿನ ವ್ಯಾಪಾರ ನಡೆಸುವ ಶಿವನಿಗೆ ನಮಸ್ಕಾರ.

> ಯಸ್ಯೋನ್ಮೇಷನಿಮೇಷಾಭ್ಯಾಂ ಜಗತಃ ಪ್ರಳಯೋದಯೌ ।
> ತಂ ಶಕ್ತಿಚಕ್ರವಿಭವಪ್ರಭಂ ಶಂಕರಂ ಸ್ತುಮಃ ॥
> (—ಸ್ಪಂದನಿರ್ಣಯ, ನಿಷ್ಯಂದ ೧, ಶ್ಲೋಕ ೧)

> ಯತ್ರಸ್ಥಿತಮಿದಂ ಸರ್ವಂ ಕಾರ್ಯಂ ಯಸ್ಮಾಚ್ಚ ನಿರ್ಗತಂ ।
> ತಸ್ಯಾನಾವೃತರೂಪತ್ವಾನ್ನ ನಿರೋಧೋಽಸ್ತಿ ಕುತ್ರಚಿತ್ ॥
> (—ನಿಷ್ಯಂದ ೧, ಶ್ಲೋಕ ೨)

ಸ್ಪಂದಶಕ್ತಿಯು ಶಿವನಲ್ಲಿ ಅಕ್ರಮವಾಗಿದ್ದು ವಿಶ್ವದ ಎಲ್ಲಾ ಆಭಾಸಗಳನ್ನೂ ಹೊರಹೊಮ್ಮಿಸುತ್ತದೆ. ಯಾವನಲ್ಲಿ ಈ ವಿಶ್ವವೆಲ್ಲಾ ಇದೆಯೋ ಯಾವನಿಂದ ಹೊರ ಹೊಮ್ಮಿದೆಯೋ ಯಾವನಲ್ಲಿ ಲಯವನ್ನು ಹೊಂದುವುದೋ ಅವನ ಸ್ವಭಾವ ಮರೆ ಮಾಚಲ್ಪಟ್ಟಿದ್ದರೂ ಅವನಿಗೆ ಯಾವ ಬಾಧೆಯೂ ಇಲ್ಲ, ನಾಶವೂ ಇಲ್ಲ. ಅವನ ಸ್ವರೂಪಕ್ಕೆ ಯಾವ ಚ್ಯುತಿಯೂ ಇಲ್ಲ. ಇವೆಲ್ಲವೂ ಸ್ಪಂದಶಕ್ತಿಯ ವಿಲಾಸ.

ಸ್ಪಂದಲಕ್ಷಣ : ಒಬ್ಬ ವ್ಯಕ್ತಿಯು ತನ್ನ ಇಚ್ಛಾಮಾತ್ರದಿಂದಲೇ ತಾನು ಇಚ್ಛಿಸಿದ ಕಾರ್ಯವನ್ನು ಮಾಡಲಾರ. ಬರೀ ಇಚ್ಛೆಯಿಂದಲೇ ಕರಣಗಳು (ಇಂದ್ರಿಯಗಳು) ಕೆಲಸ ಮಾಡುವುದಿಲ್ಲ. ನಮ್ಮ ಇಚ್ಛೆಯಂತೆ ಕಾರ್ಯವನ್ನು ನಿರ್ವಹಿಸಲು ಕರಣಗಳ ಸಹಾಯ ಬೇಕು. ಆದರೆ ಆ ಕರಣಗಳಿಗೆ ಕಾರ್ಯೋದ್ಯಮ ಶಕ್ತಿ ಮತ್ತು ಪ್ರೇರಣೆಗಳನ್ನು ಕೊಡತಕ್ಕದ್ದು ಬೇರೆ ಒಂದು ಶಕ್ತಿ. ಆ ಶಕ್ತಿಯೇ ಅಂತರ್ಮುಖವಾಗಿರುವ ಸ್ಪಂದತತ್ತ್ವದ ಚೈತನ್ಯ. ಇದನ್ನೇ ಆತ್ಮಬಲಸ್ಪರ್ಶ ಎನ್ನುವುದು. ಆ ಪರತತ್ತ್ವದ ಬಲಸ್ಪರ್ಶದಿಂದ ಕರಣಗಳು ಕೆಲಸಗಳನ್ನು ನಿರ್ವಹಿಸಲು ಸಮರ್ಥವಾಗುತ್ತವೆ. ಆ ಬಲಸ್ಪರ್ಶವನ್ನೇ ಸ್ಪಂದಶಕ್ತಿ ಎಂದು ವ್ಯವಹರಿಸುವುದು. ಆ ಶಕ್ತಿಯಲ್ಲಿ 'ಸ್ಪರ್ಶ' ಪ್ರಧಾನವಾಗಿರುವುದರಿಂದ ಅದರ ಸ್ಪರ್ಶ ಮತ್ತು ಪ್ರೇರಣೆಗಳಿಂದ ಅದರ ಪ್ರಭಾವವನ್ನರಿಯಬಹುದು.

ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿಯುಕ್ತಃ
ಕೇನೇಷಿತಾಂ ವಾಚಮಿಮಾಂ ವದಂತಿ
ಚಕ್ಷುಃ ಶ್ರೋತ್ರಂ ಕ ಉದೇವೊ ಯುನಕ್ತಿ

(ಕೇನೋಪನಿಷತ್ತು)

ಯಾರ ಇಚ್ಛಾಮಾತ್ರದಿಂದ ಪ್ರೇರಿತವಾಗಿ ಮನಸ್ಸು ಎರಗುವುದೋ, ಯಾವ ಪ್ರವೃತ್ತಿಯಿಂದ ಪ್ರಾಣವು ತನ್ನ ಕಾರ್ಯನಿರ್ವಹಣೆಗೆ ಪ್ರೇರಣೆ ಮಾಡುವುದೋ, ಶಬ್ದ ರೂಪವಾದ ವಾಕ್ಕನ್ನು ಯಾರ ಇಚ್ಛೆಯಂತೆ ಜನರು ಆಡುವರೋ, ಕಣ್ಣುಗಳು ಕಿವಿಗಳು ಯಾವ ದೇವನಿಂದ ಪ್ರೇರಿತವಾಗಿ ಕಾರ್ಯ ಮಾಡುತ್ತವೆಯೋ ಇವೆಲ್ಲವುಗಳಿಗೂ ಕೂಡ ಪ್ರೇರಕವಾಗಿರುವ ಯಾವಶಕ್ತಿ ಇದೆಯೋ ಅದನ್ನು ಸ್ಪಂದಶಕ್ತಿ ಎನ್ನಬಹುದು ಎಂದು ಗುರುವು ಉಪದೇಶಿಸುವನು.

ಸ್ಪಂದ ನಿರ್ದೇಶ : ನಮ್ಮಲ್ಲಾಗುವ ಆಂತರಿಕ ಬದಲಾವಣೆಗಳಿಂದ ಸ್ಪಂದ ತತ್ತ್ವಗಳನ್ನು ಗುರುತಿಸಬಹುದು. ಓದುವುದು, ಓಡುವುದು, ಭಯ, ಮಿತಿಮೀರಿದ ಕೋಪ, ಆಶ್ಚರ್ಯ, ವಿಸರ್ಗೋಚ್ಚಾರಣೆ ಮೊದಲಾದ ಘಟನೆಗಳಲ್ಲಿ ಹೀಗೆ ಎಂದು ಹೇಳಲಿಕ್ಕಾಗದೆ ಇರುವ ಕ್ಷಣಕಾಲ ಮಾತ್ರ ಅನುಭವಕ್ಕೆ ಬರುವ ನಿಸ್ತರಂಗಸ್ಥಿತಿಯಲ್ಲಿ ಸ್ಪಂದವನ್ನು ಗುರುತಿಸಬಹುದು.

ಸಾಚದೃಶ್ಯಾಹೃದುದ್ದೇಶೇ ಕಾರ್ಯಸ್ಮರಣ ಕಾಲತಃ
ಪ್ರಹರ್ಷಾವೇದ ಸಮಯೇ ದರಸಂದರ್ಶನ ಕ್ಷಣೇ
ಅನಾಲೋಚನತೋ ದೃಷ್ಟೇ ವಿಸರ್ಗ ಪ್ರಸರಾಸ್ಪದೇ
ವಿಸರ್ಗೋಕ್ತಿ ಪ್ರಸಂಗೇ ಚ ವಾಚನೇ ಧಾವನೇ ತಥಾ
ಏತಷ್ವೇವ ಪ್ರಸಂಗೇಷು ಸರ್ವಶಕ್ತಿ ವಿಲೋಲತಾ ॥

(ಶಿವದೃಷ್ಟಿ, ಆಹ್ನಿಕ ೧, ಶ್ಲೋಕ ೯, ೧೦)

ವಿಚಿತ್ರ ರಚನೆಗೂ ಕಾರ್ಯಸೃಷ್ಟಿಯನ್ನು ಹೊರಹೊಮ್ಮಿಸುವುದಕ್ಕೂ ಯಾವಾಗ ಔನ್ಮುಖ್ಯ ಉಂಟಾಗುತ್ತದೆಯೋ ಅದೇ ಚಿತ್ತತ್ತ್ವದ ಇಚ್ಛಾಶಕ್ತಿಯ ಮೊದಲನೆಯ ಚಲನ. ಈ ಔನ್ಮುಖ್ಯವೇ ಸ್ಪಂದ.

ವಿಚಿತ್ರ ರಚನಾ ನಾನಾಕಾರ್ಯ ಸೃಷ್ಟಿಪ್ರವರ್ತನೇ ।
ಭವತ್ಯುನ್ಮುಖಿತಾ ಚಿತ್ತಾ ಸ್ವೇಚ್ಛಾಯಾಃ ಪ್ರಥಮಾತ್ರುಟಿಃ ॥

(ಶಿವದೃಷ್ಟಿ, ಆಹ್ನಿಕ ೧, ಶ್ಲೋಕ ೮)

ಸ್ಪಂದಶಕ್ತಿಯ ಅನುಸಂಧಾನ : ಒಂದು ಚಿಂತೆಯಿಂದ ಇನ್ನೊಂದು ಚಿಂತೆಗೆ ಅಥವಾ ಭಾವಕ್ಕೆ ಹೊರಡುವಾಗ ನಮ್ಮಲ್ಲಿ ಏನು ಅನುಭವ ಉಂಟಾಗುತ್ತದೆಯೋ ಅದು "ಉನ್ಮೇಷ". ಇದು ಕೇವಲ ಅನುಭವದಿಂದ ಗುರುತಿಸತಕ್ಕ ವಿಷಯ. ಒಂದು ಸ್ಪಂದದಿಂದ ಇನ್ನೊಂದು ಸ್ಪಂದ ಹುಟ್ಟುತ್ತದೆ. ಸ್ಪಂದದಿಂದ ಬಿಂದು, ನಾದ, ರೂಪ, ರಸ ಮೊದಲಾದುವುಗಳು ಹೊರಹೊಮ್ಮುತ್ತವೆ.

ಏಕ ಚಿಂತಾಪ್ರಸಕ್ತಸ್ಯ ಯತಃ ಸ್ಯಾದಪರೋದಯಃ ।
ಉನ್ಮೇಷಸ್ಸತು ವಿಜ್ಞೇಯಃ ಸ್ವಯಂ ತಮುಪಲಕ್ಷಯೇತ್ ॥

(ಸ್ಪಂದ ನಿರ್ಣಯ, ನಿಷ್ಯಂದ ೩, ಶ್ಲೋಕ ೯)

ದುರ್ಬಲನಾಗಿರುವವನು ಸ್ಪಂದ ಸಮಾವೇಶ ಬಲದಿಂದ ಕೆಲಸದಲ್ಲಿ ತೊಡಗುತ್ತಾನೆ. ತುಂಬಾ ಹಸಿವಾಗಿದ್ದರೂ ಸ್ಪಂದ ಸಮಾವೇಶದಿಂದ ಹಸಿವು ತೋರುವುದಿಲ್ಲ. ಸ್ಪಂದ ತತ್ತ್ವದಿಂದ ಅಧಿಷ್ಠಿತವಾದ ಸರ್ವಜ್ಞತ್ವಾದಿ ಗುಣಗಳು ಸರ್ವತ್ರ 'ಅಹಂ' ಭಾವಾನುಭವ ಉಂಟಾದಾಗ ತೋರುತ್ತವೆ. ಜ್ಞಾನದಿಂದ ತಿಳಿಯತಕ್ಕ ವಿಶ್ವವನ್ನೆಲ್ಲಾ ಅನುಸಂಧಾನ ಮಾಡಿ ತಿಳಿದರೂ ಯಾವಾಗಲೂ ಜಾಗರೂಕನಾಗಿರಬೇಕು. ಆ ಪರತತ್ತ್ವವೊಂದರಲ್ಲೇ ಅನುಸಂಧಾನದಿಂದಿದ್ದರೆ ಬೇರೆಯವರಿಂದ ಪೀಡಿತನಾಗುವುದಿಲ್ಲ.

ಪ್ರಬುದ್ಧಃ ಸರ್ವದಾ ತಿಷ್ಠೇತ್ ಜ್ಞಾನೇನಾಲೋಚ್ಯ ಗೋಚರಂ ।
ಏಕತ್ರಾರೋಪಯೇತ್ಸರ್ವಂ ತತೋSನ್ಯೇನ ನ ಪೀಡ್ಯತೇ ॥

(ಸ್ಪಂದ ನಿರ್ಣಯ, ನಿಷ್ಯಂದ ೩, ಶ್ಲೋಕ ೧೨)

ಶಬ್ದರಾಶಿಯಿಂದ ಉಂಟಾಗುವ ಶಕ್ತಿಗಳು ಅನಂತವಾಗಿವೆ. ಅವುಗಳಿಗೆ ಒಳಪಡುವವನು ಪಶು. ಪಶುವಾದವನಿಗೆ ಪರಾಮೃತ ಭಾವನೆ ಇಲ್ಲದಿರುವುದರಿಂದ ಅಸ್ವತಂತ್ರನು. ಶಬ್ದರಾಶಿಯು ಇವನ ಸ್ವರೂಪವನ್ನು ಮುಚ್ಚಲು ಯಾವಾಗಲೂ ಸಿದ್ಧವಾಗಿರುತ್ತದೆ. ಆ ಶಕ್ತಿಚಕ್ರದ ಪ್ರಭಾವವನ್ನು ತಿಳಿಯದಿದ್ದರೆ ಬಂಧ, ತಿಳಿದರೆ ಸಿದ್ಧಿ. ಮನಸ್ಸು, ಅಹಂಕಾರ ಬುದ್ಧಿ, ಪುರ್ಯಷ್ಟಕಗಳಿಂದ ಬಂಧಿತನಾಗಿ ಪರವಶನಾಗಿ ಸುಖದುಃಖಗಳನ್ನು ಅನುಭವಿಸುತ್ತಾನೆ. ಇದೇ ಸಂಸಾರ. ಯಾವಾಗ ಅಭಿನ್ನವಾದ ಸ್ಪಂದತತ್ತ್ವವನ್ನು ನಿಶ್ಚಲವಾಗಿ ತಾದಾತ್ಮ್ಯದಿಂದ ಭಾವಿಸುವನೋ ಆಗ ಚಕ್ರೇಶ್ವರನಾಗುವನು.

ಸೇಯಂ ಕ್ರಿಯಾತ್ಮಕಾ ಶಕ್ತಿಃ ಶಿವಸ್ಯ ಪಶುವರ್ತಿನೀ ।
ಬಂಧಯಿತ್ರೀ ಸ್ವಮಾರ್ಗಸ್ಥಾ ಜ್ಞಾತಾ ಸಿದ್ಧ್ಯುಪಪಾದಿಕಾ ॥

(ಸ್ಪಂದನಿರ್ಣಯ, ನಿಷ್ಯಂದ ೩, ಶ್ಲೋಕ ೧೬.)

ನಿಜವಾಗಿಯೂ ಜ್ಞಾನದ ಇರುವಿಕೆಯು ಮೂರು ತೆರನಾಗಿರುವುದು. ಸುಖದುಃಖಗಳಲ್ಲಿ ಭೇದರೂಪವಾಗಿರುತ್ತದೆ. ಅನುಭವ ಸ್ಮರಣೆಗಳಲ್ಲಿ ಭೇದಾಭೇದ ರೂಪವಾಗಿರುತ್ತದೆ. ಸ್ವಸ್ವರೂಪಾನುಸಂಧಾನದಲ್ಲಿ ಅಭೇದರೂಪವಾಗಿರುತ್ತದೆ. ಇವೆಲ್ಲಾ ವ್ಯಕ್ತಿಯ ಸ್ಪಂದದ ವೈಚಿತ್ರ್ಯಗಳು. ವಿಶ್ವದ ಭೇದಗಳು ಅನಂತವಾಗಿದ್ದು ಸ್ಪಂದಶಕ್ತಿಯ ಮಹಿಮೆಯಿಂದ ಪ್ರತಿಯೊಂದು ಪದಾರ್ಥವೂ ಭಿನ್ನಭಿನ್ನವಾಗಿ ಗುಣ, ಕ್ರಿಯೆ, ಆಕಾರ, ವ್ಯವಹಾರ, ಪರಿಣಾಮ ಇವುಗಳಿಂದ ಬೇರೆಬೇರೆಯಾಗಿ ಕಂಡುಬರುತ್ತವೆ. ಪದಾರ್ಥಗಳ ತಾರತಮ್ಯವು ಸ್ಪಂದದ ಮಿತಿಯಿಂದ ಅಳೆಯಲ್ಪಟ್ಟದೆಯೇ ಹೊರತು ಅವುಗಳ ಸ್ವಭಾವದಿಂದಲ್ಲ. ಸ್ಪಂದಶಾಸ್ತ್ರದ ತತ್ತ್ವಗಳನ್ನು ಅನುಸಂಧಾನ ಮಾಡುವಾಗ ವ್ಯಕ್ತಿಯ ಏರಿಳಿತಗಳು, ವಿಶ್ವದ ಉಬ್ಬರವಿಳಿತಗಳು ‘ಅಹಂ’ಭಾವ, ‘ಇದಂ’ಭಾವ ಎಂಬ ಎರಡು ಪಂಕ್ತಿಗಳಾಗಿ ಅನುಭವಕ್ಕೆ ಗೋಚರವಾಗುತ್ತವೆ. ವಿಶ್ವಾತ್ಮಕ ಲೀಲೆಯಲ್ಲಿ ‘ಅಹಂತಾ’ ಪ್ರಧಾನವಾಗಿದೆ. ವಿಶ್ವೋತ್ತೀರ್ಣ ಕ್ರಮದಲ್ಲಿ ‘ಪೂರ್ಣಾಹಂತಾ’ ಪ್ರಧಾನವಾಗಿದೆ.

ಮನುಷ್ಯನ ಇಂದ್ರಿಯಗಳು ಯಾವ ರೀತಿಯಲ್ಲಿ ಚೈತನ್ಯಶಕ್ತಿಯ ಬಲದಿಂದ ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸುತ್ತವೆಯೋ ಇದೇ ರೀತಿಯಾಗಿ ಶಾಂತರೂಪಿಗಳಾದ ನಿರಂಜನರಾದ ಪ್ರಮಾತೃಗಳು ಸ್ಪಂದ ತತ್ತ್ವಾತ್ಮಕವಾದ ಬಲವನ್ನು ಅಭೇದ ಭಾವನೆ ಅಥವಾ ದೃಷ್ಟಿಯಿಂದ ಪಡೆದು ಅಭಿವ್ಯಕ್ತರಾಗುತ್ತಾರೆ ಮತ್ತು ಅಲ್ಲಿಯೇ ಲೀನರಾಗುತ್ತಾರೆ. ಈ ಕಾರಣದಿಂದ ಇವರೆಲ್ಲರೂ ಶಿವಧರ್ಮಿಗಳು.

ಜೀವನು ಸರ್ವಮಯನು. ಇವನಲ್ಲಿ ಎಲ್ಲಾ ಭಾವಗಳು ಇವೆ. ಆದುದರಿಂದ ಇವನಿಗೆ ತಾದಾತ್ಮ್ಯಪ್ರತಿಪತ್ತಿ ಇದೆ. ಶಬ್ದ ಮತ್ತು ಅರ್ಥ ಚಿಂತನೆಗಳಲ್ಲಿ ಶಿವನಿಲ್ಲದ ಅವಸ್ಥೆ ಇಲ್ಲ. ಭೋಕ್ತೃವಾಗಿರುವ ಆ ಶಿವನೇ ಭೋಗ್ಯಭಾವದಿಂದ ಯಾವಾಗಲೂ ಎಲ್ಲೆಡೆಗಳಲ್ಲಿಯೂ ತುಂಬಿರುತ್ತಾನೆ.

ಇತಿ ವಾ ಯಸ್ಯ ಸಂವಿತ್ತಿಃ ಕ್ರೀಡಾತ್ವೇನಾಖಿಲಂ ಜಗತ್ ।
ಸ ಪಶ್ಯನ್ ಸತತಂ ಯುಕ್ತೋ ಜೀವನ್ಮುಕ್ತೋ ನ ಸಂಶಯಃ ॥

(ಸ್ಪಂದ ನಿರ್ಣಯ, ನಿಷ್ಯಂದ ೩, ಶ್ಲೋಕ ೫.)

ಹೀಗೆ ಯಾವನು ವಿಶ್ವವನ್ನೆಲ್ಲಾ ಕ್ರೀಡೆಯೆಂದು ತಿಳಿಯುತ್ತಾನೋ ಅವನೇ ಜೀವನ್ಮುಕ್ತ. ಈ ವಿಧವಾದ ಭಾವನೆಯು ಧ್ಯಾನಮಾಡುವವನ ಮನಸ್ಸಿನಲ್ಲಿ ಆವಿರ್ಭವಿಸಿದರೆ ಅದೇ ತಾದಾತ್ಮ್ಯ ಸಮಾಪತ್ತಿ, ಅಮೃತ ಪ್ರಾಪ್ತಿ, ನಿರ್ವಾಣ ದೀಕ್ಷಾ. ಇವೆಲ್ಲಾ ಶಿವಸದ್ಭಾವವನ್ನುಂಟುಮಾಡುವ ಸ್ಥಿತಿಗಳು. ಇದನ್ನೇ ವಿದ್ಯೋದಯ ನಿಷ್ಯಂದ ವೆನ್ನುವುದು.

ಜ್ಞಾನಿಯು ಬಾಹ್ಯಪ್ರಪಂಚದ ವ್ಯತ್ಯಾಸಗಳನ್ನು ಅಷ್ಟಾಗಿ ಗಮನಿಸುವುದಿಲ್ಲ. ಅವನ ದೃಷ್ಟಿ ವ್ಯತ್ಯಾಸವನ್ನು ಪಡೆಯದಿರುವ ಆಂತರ್ಯವಾದ ಸ್ಪಂದತತ್ತ್ವದ ಕಡೆಗಿರುತ್ತದೆ. ಆ ಸ್ಪಂದತತ್ತ್ವದ ಅನುಭವವು ಜಾಗೃತನಾಗಿರುವವನಿಗೆ ಆಗುತ್ತದೆ. ಸಾಮಾನ್ಯನಿಗೆ ಆದಿ ಮತ್ತು ಅಂತ್ಯದಲ್ಲಿ ಹೊರಳುವ ಸ್ಪಂದ ಮಾತ್ರ ಗೋಚರಿಸುತ್ತದೆ.

ಶಿವಶಕ್ತಿ

ಮಾನವನ ತಿಳಿವಳಿಕೆಯಲ್ಲಿ ಶಾಶ್ವತವಾದ ಅನೇಕ ಸತ್ಯಾಂಶಗಳು ಬಳಕೆಯಲ್ಲಿವೆ. ಅವುಗಳನ್ನು ಸಾಮಾನ್ಯವಾದ ನಮ್ಮ ಭಾಷೆಯಲ್ಲಿ ತಿಳಿಯಪಡಿಸುವುದಕ್ಕೆ ಸಾಧ್ಯವಿಲ್ಲ. ಈ ಸತ್ಯಾಂಶಗಳು ಸೂಕ್ಷ್ಮವಾಗಿರುವುದರಿಂದ ಇವುಗಳನ್ನು ತಿಳಿಯುವುದಕ್ಕೆ ಸೂಕ್ಷ್ಮ ದೃಷ್ಟಿ ಬೇಕು. ತಿಳಿಯುವಂತಹ ಬುದ್ಧಿಶಕ್ತಿ ಬೇಕು. ಅಲ್ಲದೆ ಅವುಗಳನ್ನು ಮೆಚ್ಚಿ ಕೊಳ್ಳುವಂತಹ ಮನೋಭಾವನೆಯಿರಬೇಕು. ಹಿರಿಯರು ಇವುಗಳನ್ನು ತಿಳಿಯಲಿಕ್ಕೆ ಭಾಷೆಯ ಶಕ್ತಿಯು ಸಾಲದೆಂದು ಮನಗಂಡು ಕೆಲವು ಸಂಕೇತಗಳನ್ನು ಪಾರಿಭಾಷಾ ಪದಗಳನ್ನು ಉಪಯೋಗಿಸಿರುತ್ತಾರೆ. ಗಹನವಾದ ವಿಷಯಗಳನ್ನು ತಿಳಿಯಲು ಇಂತಹ ತೊಡಕುಗಳಿವೆ. ಪ್ರಕೃತದಲ್ಲಿ 'ಶಿವಶಕ್ತಿ' ಎಂಬ ಅಭಿಪ್ರಾಯ ಬಹಳ ಸರಳವಾಗಿದೆ, ಹಾಗೆಯೇ ಗಹನವಾಗಿಯೂ ಇದೆ. ಶಿವಶಕ್ತಿ ಎನ್ನುವ ಪರಿಭಾಷೆಯನ್ನು ತಿಳಿಯ ಬೇಕಾದರೆ ಇವರ ಮೂಲವೇನೆಂದು ವಿಚಾರಿಸಬೇಕು. ಆಗ ಅನೇಕ ಅಂಶಗಳು ತಲೆದೋರುತ್ತವೆ. ಆಧ್ಯಾತ್ಮಿಕ ನಿಶ್ಚಯ, ದಾರ್ಶನಿಕ ವಿವರಣೆ, ಮಾನಸಿಕ ಕಲ್ಪನೆ, ಶ್ರದ್ಧೆ ಮತ್ತು ನಂಬಿಕೆಗೆ ಆಶ್ರಯವಾಗಿರುವ ಮತಗಳ ಸಂಪ್ರದಾಯಗಳ ಅನುಭವಗಳ ಧೋರಣೆ ಇವೆಲ್ಲವನ್ನೂ ನಾವು ಗಮನಿಸಬೇಕಾಗುತ್ತದೆ. ಆಗಲೇ ಶಿವಶಕ್ತಿ ಎಂಬ ಪರಿಭಾಷೆಯ ಪೂರ್ಣ ಪರಿಚಯ ನಮಗೆ ಉಂಟಾಗುವುದು.

ಸ್ಥೂಲಪ್ರಪಂಚ ಮತ್ತು ಸೂಕ್ಷ್ಮಪ್ರಪಂಚ ಎಂದು ನಮ್ಮ ಅನುಕೂಲಕ್ಕಾಗಿ ಎರಡು ಭಾಗಗಳನ್ನಾಗಿ ಮಾಡಿಕೊಳ್ಳಬೇಕು. ಸೂಕ್ಷ್ಮ ಎಂದರೆ ನಮ್ಮ ಮನಸ್ಸಿಗೆ ಸಾಮಾನ್ಯವಾಗಿ ತಿಳಿಯದಿರುವ ವಿಷಯ. ತಿಳಿಯದಿರುವ ವಿಷಯವನ್ನು ವಿಚಾರ

ಮಾಡಲು ಸಾಧ್ಯವೆ ? ನಾವು ಒಂದು ಗಂಟೆಗೆ ಮೂರು ಮೈಲಿ ಸಂಚರಿಸುತ್ತೇವೆ. ಲಕ್ಷ ಗಟ್ಟಲೆ ಓಟದ ಕಲ್ಪನೆಯನ್ನು ಮಾಡಬಹುದು ; ಹಾಗೆಯೇ ಎಂದೂ ತಿಳಿವಳಿಕೆಗೆ ಒಳಪಡದ ವಿಷಯವನ್ನು ವಿಚಾರ ಮಾಡಬಹುದು. ಅಂತಹ ವಿಚಾರಸರಣಿಯಿಂದ ಅನಂತ ವ್ಯಾಪ್ತಿಯುಳ್ಳ ತತ್ತ್ವದಲ್ಲಿ ನಾವು ಸ್ಥೈರ್ಯವನ್ನು ಸಂಪಾದಿಸಬಹುದು. ಅದು ಆ ವಿಧವಾದ ಸ್ಥೈರ್ಯಮನೋಧರ್ಮವಾಗಿರದೆ ಜ್ಞಾನಧರ್ಮವಾಗಿರುವುದರಿಂದ ಅದು ನಮ್ಮ ಸ್ವರೂಪ ಸಾಕ್ಷಾತ್ಕಾರದ ವಲಯವನ್ನು ಮುಟ್ಟುತ್ತದೆ. ಆ ವಿಧವಾದ ಜ್ಞಾನಶಕ್ತಿಯ ವಿಕಾಸಗಳನ್ನು ಪಡೆದಿರುವ ಜ್ಞಾನಿಗಳಿಗೆ ಅನುಭವಸಿದ್ಧವಾಗಿರುತ್ತದೆ. ಇತರರಿಗೆ ಪರಿಭಾಷೆಯ ಶಬ್ದ ಮಾತ್ರ ತಿಳಿದಿರುತ್ತದೆ. ಹೀಗೆ ಅಧ್ಯಾತ್ಮ ವಿಷಯಗಳು ತಿಳಿಯದಿದ್ದ ಮಾತ್ರಕ್ಕೆ ಅವುಗಳು ನಮ್ಮಲ್ಲಿಲ್ಲವೆಂಬರ್ಥವಲ್ಲ. ಕಾಲಕ್ರಮದಲ್ಲಿ ಈ ಪರಿಭಾಷೆಯೇ ತತ್ತ್ವಸಾಕ್ಷಾತ್ಕಾರಕ್ಕೆ ಸಹಾಯಕಾರಿಯಾಗುತ್ತದೆ. ಈ ಅಂಶವನ್ನು ಅನೇಕಬಾರಿ ಒತ್ತಿ ಹೇಳುತ್ತ 'ಪ್ರಕಾಶ ವಿಮರ್ಶಮಯ' ಸಂಜ್ಞೆ ಮೂಲಕ ಸ್ವಯಂಪ್ರಕಾಶ ವಾದ ಚಿದಾನಂದಮೂರ್ತಿ ತತ್ತ್ವವನ್ನು ಸರ್ವಾವಸ್ಥೆಯಲ್ಲಿಯೂ ನೆನೆಯಬೇಕೆಂದು ಸೂಚಿಸಲಾಗಿದೆ. ವಿಶ್ವಾತೀತ ಸ್ಥಿತಿಯನ್ನು ಅನುಸಂಧಾನಮಾಡಲು ಸಾಧ್ಯವಾಗ ದಿದ್ದಲ್ಲಿ ವಿಶ್ವಾತ್ಮಕ ಸ್ಥಿತಿಯನ್ನು ಅನುಸಂಧಾನಮಾಡಬೇಕು. ಜ್ಞಾನವಿಕಾಸ ವೇರ್ಪಟ್ಟಿರುವವರು ಆ ಪರತತ್ತ್ವವನ್ನು 'ಚಿನ್ಮಯ' ಮತ್ತು 'ಚಿದ್ಘನ' ಎಂದು ಗುರುತಿಸಿಕೊಂಡು ಅನುಸಂಧಾನ ಮಾಡುತ್ತಾರೆ. ಈ ಅನುಸಂಧಾನದಲ್ಲಿ ಯಾವ ಸಾಧಕನು ವಿಶ್ವವ್ಯಾಪಾರಗಳನ್ನು ಆ ಪರತತ್ತ್ವದ ಶಕ್ತಿವಿಲಾಸವೆಂದು ಸಾಕ್ಷಾತ್ಕರಿಸಿಕೊಳ್ಳುವನೋ ಆತನಿಗೆ ಆ ಶಕ್ತಿ ಮತ್ತು ಪರತತ್ತ್ವದ ಅಸ್ತಿತ್ವದ ಪೂರ್ಣಪರಿಚಯವೇರ್ಪಡುತ್ತದೆ.

ಯಾವ ವಿಷಯವನ್ನೇ ತಿಳಿಯಲಿ ಆ ವಿಷಯದಲ್ಲಿ ನಮ್ಮ ತಿಳಿವಳಿಕೆಯು ಅಪೂರ್ಣವಾಗಿದ್ದರೂ ವಿಶದವಾಗಿರಬೇಕು. ಕೆಲವು ವಿಷಯಗಳ ಪರಿಪೂರ್ಣವಾದ ತಿಳಿವಳಿಕೆ ಸಾಮಾನ್ಯವಾಗಿ ಉಂಟಾಗುವುದಿಲ್ಲ. ಪೂರ್ಣವಿಕಾಸವನ್ನು ಪಡೆದಿರುವ ಜ್ಞಾನಿಯು ಅಂತಹ ಗಹನವಾದ ವಿಷಯಗಳನ್ನು ಅರಿಯಬಹುದಾದರೂ ಆತನ ಅರಿವನ್ನು ಒಮ್ಮೆಯೇ ಸಾಮಾನ್ಯ ಮನುಷ್ಯನಿಗೆ ತಿಳಿಯಪಡಿಸುವುದು ಅಸಾಧ್ಯವಾಗಿರುತ್ತದೆ. ಈ ತೊಡಕು ಅನಾದಿಕಾಲದಿಂದಲೂ ಜ್ಞಾನಿಗಳಿಗೂ ಪಂಡಿತರಿಗೂ ಸಮಸ್ಯೆಯಾಗಿಯೇ ಉಳಿದಿದೆ. ಅತಿ ಪ್ರಾಚೀನ ವೇದವಾಙ್ಮಯ ಮೊದಲ್ಗೊಂಡು ಇಂದಿನವರೆಗೂ ಭಾಷೆಯ ಮೂಲಕ ತಾವು ತಿಳಿಸಬೇಕಾದ ವಿಷಯಗಳನ್ನು ತಿಳಿಸಲು ಅಸಾಧ್ಯವಾಗಿ ತೋರಿದಾಗ ಕೆಲವು ಸಂಕೇತಗಳ ಮೂಲಕ ತಿಳಿಸಲು ಪ್ರಯತ್ನಪಡುವುದು ದಾರ್ಶನಿಕರ ಸಂಪ್ರದಾಯ ವಾಗಿದೆ. ಆ ಸಂಕೇತಗಳಿಗೆ ವಿವರಣೆಯನ್ನು ಕೊಡುವಾಗಲೂ ಭಿನ್ನಾಭಿಪ್ರಾಯಗಳು ಕಾಲಕ್ರಮದಲ್ಲಿ ತಲೆದೋರುತ್ತವೆ. ಆದುದರಿಂದ ನಿಜವಾದ ಜಿಜ್ಞಾಸುವಾದವನು ತನ್ನ ತಿಳಿವಳಿಕೆಯ ವೈವಿಧ್ಯಕ್ಕೆ ಮೊದಲು ಗಮನ ಕೊಡಬೇಕು.

ಪರವಸ್ತುವನ್ನು ಭಾಷೆಯಿಂದ ತಿಳಿಸಲಿಕ್ಕೆ ಸಾಧ್ಯವಿಲ್ಲ. ಮನಸ್ಸಿನಿಂದ ಅದರ ಸ್ವರೂಪ ಸ್ವಭಾವಗಳನ್ನು ನಿರ್ಣಯಿಸುವುದಕ್ಕೂ ಆಗುವುದಿಲ್ಲ ಎಂದು ಹಿಂದಿನಿಂದಲೂ

ಹೇಳಿಕೊಂಡು ಬಂದಿದ್ದಾರೆ. ಪರವಸ್ತು, ಪರಾಶಕ್ತಿ, ಪರಮಶಿವ, ಶಕ್ತಿಚಕ್ರಾಧಿಪತಿ ಮೊದಲಾದ ಪರಿಭಾಷೆಗಳಿಂದ ವಿಶ್ವಕ್ಕೆ ಮೂಲಕಾರಣವಾದ ತತ್ತ್ವವನ್ನು ಪಂಡಿತರು ಸೂಚಿಸಿರುತ್ತಾರೆ. ಇಲ್ಲಿ ಸೂಚಿಸುವ ಪದಗಳಿಂದ ಬರುವ ಅರ್ಥವನ್ನು ಸಾಧಕನು ಮೊದಲು ಗ್ರಹಿಸಬೇಕು. ಆ ಅರ್ಥವು ಅಪೂರ್ಣವಾಗಿದ್ದರೂ ಅದನ್ನು ಉದಾಸೀನ ಮಾಡಕೂಡದು. ಕೇಳಿದ ಅರ್ಥವನ್ನು ಮನಸ್ಸಿನಲ್ಲಿ ಮನನಮಾಡಿದರೆ ಆ ತತ್ತ್ವದ ಸ್ವರೂಪ ಸ್ವಭಾವಗಳು ಇವನಿಗೆ ಕಾಲಕ್ರಮದಲ್ಲಿ ಪ್ರಸನ್ನವಾಗಿ ಗೋಚರಿಸುತ್ತವೆ. ರಾಮ ರಾಜ್ಯದಲ್ಲಿ ಎಲ್ಲರೂ ತೃಪ್ತರಾಗಿದ್ದರು ಎಂದು ಕೇಳಿದರೆ, ತೃಪ್ತಿ ಎಂದರೆ ಏನು ಎಂದು ನಾವು ಯೋಚನೆ ಮಾಡಬೇಕು. ಹಾಗೆಯೇ ಜನಸಾಮಾನ್ಯರಲ್ಲಿ ಅದು ಯಾವರೀತಿ ನೆಲೆಗೊಂಡಿದೆ ಎಂಬುದನ್ನು ನಾವು ಊಹಿಸಬೇಕು. ಅಂತಹ ಊಹೆಯಿಂದ ರಾಮ ರಾಜ್ಯದಲ್ಲಿ ಅಂತಹ ಸಾರ್ವಭೌಮತ್ತ್ವವನ್ನು ಕಲ್ಪಿಸಬಹುದು. ಇದೇ ದೃಷ್ಟಾಂತದಿಂದಲೇ ಆ ಪರವಸ್ತುವು ಸರ್ವತ್ರ ವ್ಯಾಪಿಸಿದೆ, ಎಂದರೆ ಸರ್ವತ್ರಸಮನಾಗಿ ಎಡಬಿಡದೆ ಅನಾದಿ ಕಾಲದಿಂದ ಅನಂತವಾಗಿದೆ ಎಂಬ ಕಲ್ಪನೆ ನಮ್ಮ ಮನಸ್ಸಿನ ಸಂಕೋಚಸ್ಥಿತಿಯನ್ನು ಅತಿಕ್ರಮಿಸುತ್ತದೆ. ಆಗ ವಿಶ್ವವ್ಯಾಪಾರವನ್ನು ನಿರ್ವಹಿಸುವ ಪ್ರಯೋಗದಲ್ಲಿ ಸಮರ್ಥ ವಾಗಿರುವ ಅನಂತ ಶಕ್ತಿಗಳ ಕಲ್ಪನೆ ನಮಗೆ ಸಾಮೂಹಿಕವಾಗಿ ಉಂಟಾಗುತ್ತದೆ. ಪ್ರತ್ಯೇಕವಾಗಿ ಅಸಂಖ್ಯಾತಗಳಾಗಿರುವ ಶಕ್ತಿಗಳ ಸ್ವರೂಪವನ್ನು ಬೇರೆಬೇರೆಯಾಗಿ ತಿಳಿಸು ವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಹಿರಿಯರು ಈ ವಿಷಯದಲ್ಲಿ ಬಹಳ ಚಿಂತನೆಮಾಡಿ ವಿಶ್ವದ ವ್ಯಾಪಾರವನ್ನು ನಿರ್ವಹಿಸುತ್ತಿರುವ ಈ ಪ್ರಯೋಗಶಕ್ತಿಯನ್ನು ಆ ಪರತತ್ತ್ವದ ಹೃದಯಸಾರ 'ಹೃದಯಂ ಪರಮೇಷ್ಟಿನಃ' ಎಂದು ಕರೆದಿದ್ದಾರೆ. ಎಷ್ಟು ಪದಗಳನ್ನು ಉಪಯೋಗಿಸಿದರೂ ಅವು ಒಂದೇ ಅರ್ಥವನ್ನು ಕೊಡುತ್ತವೆ.

'ಶಿವಶಕ್ತಿ'ಗಳ ವಿಷಯವನ್ನು ವಿಚಾರ ಮಾಡುತ್ತಾ ಹೋದರೆ ಶಕ್ತಿಯು ಸ್ವರೂಪ ದಲ್ಲಿ ಶಿವನಿಂದ ಭಿನ್ನವಾಗಿಲ್ಲ. ಸ್ವರೂಪಾಭಿನ್ನವಾಗಿರುವ ತತ್ತ್ವವು ಬೇರ್ಪಡುವ ಪ್ರಶ್ನೆಯೇ ಇಲ್ಲ. ಸಚ್ಚಿದಾನಂದ ಸ್ವರೂಪವಾಗಿರುವ ತತ್ತ್ವವನ್ನು ಸ್ವರೂಪಸ್ಥಿತಿಯಲ್ಲಿ ಆನಂದ ಮಯವೆಂದೂ ನಿರ್ವಿಕಾರವೆಂದೂ ಭೋಕ್ತೃವೆಂದೂ ಸಂಬೋಧಿಸಿರುತ್ತಾರೆ. ನಿರ್ವಿಕಾರ ವಾಗಿರುವ ತತ್ತ್ವ ಭೋಕ್ತೃವಾಗಬೇಕಾದರೆ ಭೋಗ್ಯವಸ್ತುಬೇಕು. ಪರತತ್ತ್ವದಿಂದ ಭಿನ್ನವಾಗಿ ಯಾವುದೂ ಇಲ್ಲದಿರುವುದರಿಂದ ಆ ಪರತತ್ತ್ವವೇ ತನ್ನ ಸಂಕಲ್ಪದಿಂದ ವಿಶ್ವಾತ್ಮಕ ಭಾವವನ್ನು ಅಂಗೀಕರಿಸಿದಾಗ ಶಕ್ತಿಯ ಆವಿರ್ಭಾವವುಂಟಾಗುತ್ತದೆ. ತನ್ನ ಶಕ್ತಿಯ ವಿಲಾಸರೂಪವಾದ ಈ ಲೀಲೆ ಪೂರ್ಣ ಸ್ವಾತಂತ್ರ್ಯದಿಂದ ನಡೆಯುತ್ತಲಿದೆ. ಚಿದಾನಂದವೂ ನಿರ್ವಿಕಾರವೂ ಆದ ಆ ಪರತತ್ತ್ವದಲ್ಲಿ ಎಲ್ಲವೂ ಅಡಗಿರಲು ಸಾಧ್ಯ. ಶಕ್ತಿಯ ವಿಲಾಸ ಪರತತ್ತ್ವದ ಸಂಕಲ್ಪಕ್ಕೆ ಅಧೀನವಾಗಿದೆ. ನಮ್ಮ ಮನವರಿಕೆಗೋಸ್ಕರ ನಾವು ಶಕ್ತಿವಿಲಾಸ ರೂಪವಾದ ವಿಶ್ವವ್ಯಾಪಾರಗಳನ್ನು ಬೇರೆಯಾಗದಿದ್ದರೂ ಬೇರೆ ಯಾಗಿದ್ದಂತೆ ಭಾವಿಸುತ್ತೇವೆ. ವ್ಯವಹಾರ ದೃಷ್ಟಿಯಲ್ಲಿ ಇದನ್ನು ಆನಂದರೂಪವಾಗಿಯೇ ಮನನ ಮಾಡುವುದರಿಂದ ಈಶ್ವರನ ಲೀಲೆಯೆಂದು ನಾವು ಭಾವಿಸುತ್ತೇವೆ. ಎಲ್ಲಾ

ಸ್ಥಿತಿಗಳಲ್ಲಿಯೂ ಅವಸ್ಥೆಗಳಲ್ಲಿಯೂ ಎಲ್ಲಾ ವಿಕಾಸ ಪರಿವರ್ತನೆಗಳಲ್ಲಿಯೂ ಪರಮಾನಂದ ಸ್ವರೂಪವಾಗಿರುವ ಪರತತ್ತ್ವವು ಸಮನಾಗಿ ತನ್ನ ಶಕ್ತಿಯ ಮೂಲಕ ಉಪಸ್ಥಿತವಾಗಿದೆ ಎಂಬ ವಿಷಯದಲ್ಲಿ ಜ್ಞಾನಿಗಳಲ್ಲಿ ಒಮ್ಮತವಿದೆ.

ಸಮತಾ ಸರ್ವಭಾವಾನಾಂ ವೃತ್ತೀನಾಂ ಚೈವ ಸರ್ವಶಃ
ಸಮತಾ ಸರ್ವದೃಷ್ಟೀನಾಂ ದ್ರವ್ಯಾಣಾಂಚೈವ ಸರ್ವಶಃ ॥
ಭೂಮಿಕಾನಾಂ ಚ ಸರ್ವಾಸಾಮೋವಲ್ಲೀನಾಂ ಚ ಸರ್ವಶಃ
ಸಮತಾ ಸರ್ವದೇವಾನಾಂ ವರ್ಣಾನಾಂ ಚೈವ ಸರ್ವಶಃ

(ಮಹಾರ್ಥಮಂಜರಿ-ಪುಟ ೧೭೪)

ಶಕ್ತಿಯು ವಿಶ್ವವ್ಯವಹಾರಗಳ ನಿರ್ವಹಣೆಗೆ ಕಾರಣವಾಗಿರುವುದರಿಂದ ಈ ಸಂಪ್ರದಾಯದಲ್ಲಿ ಎಲ್ಲವನ್ನೂ ಒಳಗೊಂಡಿರುವ ವಿಮರ್ಶ ಎಂಬ ಪರಿಭಾಷೆಯಿಂದ ಸಂಬೋಧಿಸಲಾಗಿದೆ. ಸಂಕ್ಷೇಪವಾಗಿ ಹೇಳುವುದಾದರೆ ತೃಪ್ತಿಯೂ ಈಶ್ವರನ ಸಂಕಲ್ಪ ಶಕ್ತಿಯೇ ಆಗಿದೆ. ಹಾಗೆಯೇ ಪ್ರಭುತ್ತ್ವವೆನ್ನುವುದು ಒಂದು ಮುಖ್ಯ ವಿಷಯವಾಗಿದೆ. "ಪ್ರಕರ್ಷೇಣ ಭುನಕ್ತಿ ಭುಂಜತೆ ಇತಿ ಪ್ರಭುಃ" ಮಹೇಶ್ವರನು ಪ್ರಭುವು ಸರ್ವಾತ್ಮನಾಗಿ ತಾನೇ ಅನುಭವಿಸುತ್ತಾನೆ ಎಂದು ಇದರ ತಾತ್ಪರ್ಯ. ಆತನು ಯಾರ ಪ್ರಭುತ್ವಕ್ಕೂ ಒಳಗಾಗಿಲ್ಲ. ಆತನೇ ಎಲ್ಲಕ್ಕೂ ಒಬ್ಬನೇ ಪ್ರಭುವಾಗಿದ್ದಾನೆ. ಸರ್ವವ್ಯಾಪಿಯಾಗಿದ್ದರೂ ಆನಂದಮಯನಾಗಿದ್ದಾನೆ. ನಿರ್ವಿಕಾರನಾಗಿದ್ದರೂ ವಿಶ್ವವ್ಯಾಪಾರಗಳಲ್ಲಿ ಕಾರಣನಾಗಿದ್ದಾನೆ. ಹೀಗೆ ಪರಸ್ಪರ ವಿರುದ್ಧವಾಗಿ ಕಾಣುವ ಧರ್ಮವು ಪರತತ್ತ್ವದಲ್ಲಿರಬಹುದು. ಆತನು ಸೂಕ್ಷ್ಮಕ್ಕಿಂತಲೂ ಸೂಕ್ಷ್ಮ. ಮಹತ್ವಕ್ಕಿಂತ ಮಹಾನ್. ಮೂಲದಲ್ಲಿ ಎಲ್ಲವೂ ಅಭಿನ್ನವಾಗಿದ್ದರೂ ವ್ಯವಹಾರದಲ್ಲಿ ಅನಂತ ಭೇದಭಾವ ತೋರುತ್ತದೆ. ಹೀಗೆ ಪರತತ್ತ್ವದ ಸ್ಥಿತಿ ಮತ್ತು ಕಾರ್ಯಪ್ರವಾಹ ಇವೆರಡೂ ಒಂದಕ್ಕೊಂದು ವಿರುದ್ಧವಾಗಿ ಕಂಡರೂ ಶಕ್ತಿಯ ವಿಲಾಸವು ಯಾವ ಕಡೆಯೂ ಇಲ್ಲದೆ ಸಾಗುತ್ತದೆ.

ಆತ್ಮೈವ ಸರ್ವಭಾವೇಷು ಸ್ಫುರನ್ನಿರ್ವೃತ ಚಿದ್ವಿಭುಃ ।
ಅನಿರುದ್ಧೇಚ್ಛಾ ಪ್ರಸರಃ ಪ್ರಸರದ್ದೃಕ್ರಿಯಃ ಶಿವಃ ॥

(ಶಿವದೃಷ್ಟಿ ೧-೨)

ವಿಶ್ವಕ್ಕೆ ಮೂಲಕಾರಣವಾಗಿರುವ 'ಪರವಸ್ತು' ಹೇಗಿದೆ ಎಂಬ ಪ್ರಶ್ನೆಯನ್ನು ಕಾಶ್ಮೀರಶೈವ ಪಂಡಿತರು ಒಂದು ರೀತಿಯಾಗಿ ವರ್ಣಿಸಿರುತ್ತಾರೆ. ಪರವಸ್ತು ಅಥವಾ ಪರತತ್ತ್ವ-ಅದು ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ—ಪ್ರಕಾಶಿಸುತ್ತದೆ. ಆ ಪರವಸ್ತು ಕಾಲ ದೇಶ ದಶೆಗಳಿಗೆ ಒಳಪಡುವುದಿಲ್ಲ. ಅದರ ಪ್ರಕಾಶ ಸ್ವತಂತ್ರವಾದುದು. ಅನಂತವಾದ ವಿಸ್ತಾರವುಳ್ಳದ್ದು. ಅದು ಸತ್ಯಸ್ವರೂಪವಾಗಿ ತಾನು ಒಂದೇ ಆಗಿದ್ದರೂ ವಿಶಿಷ್ಟವಾದ ಅನಂತ ರೂಪಗಳನ್ನುಳ್ಳದ್ದಾಗಿದೆ. ಎಷ್ಟು ಭೇದಗಳನ್ನುಳ್ಳದ್ದಾಗಿದ್ದರೂ ತನ್ನ

ಏಕತ್ವಕ್ಕೆ ಚ್ಯುತಿಯಿಲ್ಲ. ಆ ಪರವಸ್ತುವು ಕರ್ತೃರೂಪವಾಗಿಯೂ ಕರ್ಮರೂಪವಾಗಿಯೂ ಪರಿಣಮಿಸಿ ಅಭಿವ್ಯಕ್ತವಾಗುತ್ತದೆ. ಕರ್ತೃ ಮತ್ತು ಕರ್ಮಗಳು ತಿಳಿದುಕೊಳ್ಳುವ ತಿಳಿಯಲ್ಪಡುವ ಅಂಶಗಳನ್ನು ಸೂಚಿಸುತ್ತದೆ. ಪರವಸ್ತುವು ಭೇದಾತ್ಮಕವಾದ ವಿಶ್ವವನ್ನು ತೋರ್ಪಡಿಸದಿರುವಾಗ ಕರ್ತೃ ಮತ್ತು ಕರ್ಮಶಕ್ತಿಗಳನ್ನೊಳಗೊಂಡಿದ್ದು ಪೂರ್ಣಾಹಂತಾ ಎಂಬ ಶಾಸ್ತ್ರೀಯ ಪರಿಭಾಷೆಯಿಂದ ತಿಳಿಯತಕ್ಕದ್ದಾಗಿದೆ. ಅದು ಜೀವಾತ್ಮನ ಸ್ವರೂಪ ವನ್ನು ಅಂಗೀಕರಿಸಿದಾಗ ಸಂಕುಚಿತವಾದ ಅಹಂಭಾವಾಪನ್ನವಾದ ಶಕ್ತಿಸಾಮರ್ಥ್ಯಗಳ ನ್ನೊಳಗೊಂಡಿರುತ್ತದೆ. ಈ ಸಂಕೋಚಾವಸ್ಥೆಯಲ್ಲಿ ಜೀವಾತ್ಮನು ತನ್ನ ಅಸ್ತಿತ್ವವನ್ನು ಅಂಶತಃ ಅರಿಯಬಲ್ಲನೇ ಹೊರತು ಪೂರ್ಣವಾಗಿ ಅರಿಯಲಾರನು. ಈ ಸ್ಥಿತಿಯನ್ನು ಅಲ್ಪಾಹಂತಾ ಎಂದು ಕರೆಯುತ್ತಾರೆ. ವಿಶಾಲ ದೃಷ್ಟಿಯಿಂದ ವಿವೇಚನೆ ಮಾಡಿದರೆ ಈ ಅಲ್ಪಾಹಂತಾ ಆ ಪರವಸ್ತುವಿನ ಪೂರ್ಣಾಹಂತಾಸ್ಥಿತಿಯನ್ನು ಒಳಗೊಂಡಿದೆ. ಸಂಕೋಚ ಸ್ಥಿತಿ ಅನಂತಸ್ಥಿತಿ ಇವೆರಡು ಅಭಿನ್ನವಾಗಿರುವುದರಿಂದ–ಹಾಗೂ ಸಂಕೋಚಸ್ಥಿತಿ ಯಾವ ರೀತಿಯಲ್ಲಿ ಅನಂತವ್ಯಾಪ್ತಿಯುಳ್ಳ ಪರವಸ್ತುವಿನಿಂದ ಉಂಟಾಗಿದೆ ಎಂದು ಅರಿಯಬೇಕು. ಆಗ ಜೀವಾತ್ಮನ ಸಹಜಸ್ಥಿತಿಯು ಗೋಚರವಾಗಿ ಸ್ವಯಂಪ್ರೇರಕ ಶಕ್ತಿಗಳು ಸಾಕ್ಷಾ ತ್ಕಾರವಾದರೆ ಇವನು ಪೂರ್ಣಾಹಂತಾ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

ಒಂದು ಪದಾರ್ಥವನ್ನು ನಾವು ತಿಳಿಯಬೇಕಾದರೆ ಅದರ ಆಶ್ರಯ ಮತ್ತು ಸ್ವರೂಪ ಗಳನ್ನು ಇಂದ್ರಿಯಗಳ ಮೂಲಕ ತಿಳಿಯಬೇಕಾಗುತ್ತದೆ. ಇಂದ್ರಿಯಗಳಿಂದ ತಿಳಿಯ ಬೇಕಾದ ವಿಷಯಗಳನ್ನು ಮನಸ್ಸಿನಿಂದ ನಿರ್ಣಯಿಸುವುದಕ್ಕೆ ಸಾಧ್ಯವಿಲ್ಲ. ಮನಸ್ಸಿಲ್ಲದೆ ಇಂದ್ರಿಯಗಳು ಕೆಲಸಮಾಡಲಾರವು. ಇಂದ್ರಿಯಾತೀತ ವಿಷಯಗಳು ಕೇವಲ ಅಗಮ್ಯ ವಾದವುಗಳು. ಆದರೂ ಇಂದ್ರಿಯಗಳಿಗೆ ಬಾಹ್ಯವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ಮುಖ್ಯಸ್ಥಾನವಿದೆ. ಈ ಕರಣಗಳಿಂದ ಗಮ್ಯವಾಗಿರುವ ಕ್ಷೇತ್ರವನ್ನು ಗುರುತಿಸಬೇಕು. ಪರವಸ್ತುವನ್ನು ಗುರುತಿಸುವುದಕ್ಕೆ ಗಮ್ಯವಾಗಿರುವುದು ಈ ವಿಶ್ವ. ಅಂತರ್ಯವಾಗಿಯೂ ಬಾಹ್ಯವ್ಯವಹಾರಕ್ಕೆ ಆಶ್ರಯವಾಗಿಯೂ ಇರುವ ಈ ವಿಶ್ವ ಕಾಲಪ್ರವಾಹಕ್ಕೆ ಅಧೀನವಾಗಿ ನಡೆಯುವುದು ಈಶ್ವರನ ಒಂದು ಅಂಶ. ಈಶ್ವರ ಅಂದರೆ ಒಡೆಯ. ಕಾಲಕ್ಕೆ ಈಶ್ವರನ ಮೇಲೆ ಅಧಿಕಾರ ನಡೆಸುವ ಯೋಗ್ಯತೆ ಇಲ್ಲ. ಕಾಲವು ಪರವಸ್ತುವಿನ ಶಕ್ತಿಯ ಸಂಕೇತವಾಗಿದೆ. ಮಿಕ್ಕ ಎಲ್ಲಾ ಶಕ್ತಿಸಮೂಹಗಳೂ ಕಾಲಕ್ಕೆ ಒಳಪಟ್ಟು ನಡೆಯುತ್ತವೆ. ಕಾಲವು ಮುಖ್ಯ ವಾದುದೂ ಪ್ರಬಲವಾದುದೂ ಆಗಿದೆ. ಕಾಲಪ್ರವಾಹಕ್ಕೆ ಅಧೀನವಾಗಿರುವ ಸೃಷ್ಟಿಕ್ರಮ ದಲ್ಲಿ ಸಂಕುಚಿತಶಕ್ತಿ ಮತ್ತು ಸ್ವಾತಂತ್ರ್ಯಗಳಿರುತ್ತವೆ. ಇದು ಜೀವಾತ್ಮನ ಅನುಭವದ ವಿಷಯ. ಶಕ್ತಿ ಚಕ್ರವಿಲಾಸರೂಪವಾಗಿರುವ ವಿಶ್ವವೆಲ್ಲಾ ಕಾಲಾಧೀನವಾಗಿರುವುದು.

ಪ್ರಾರಂಭದಲ್ಲಿ ಅನಿರ್ದಿಷ್ಟವಾದ ಪರಿಶುದ್ಧವಾದ 'ಶಿವ' ಒಂದೇ ಇದ್ದಿತು. ಅದು ವಿಶ್ವೋತ್ತೀರ್ಣವಾದ ಶಿವ (ಅಪರಂಪರಂ). ಅದು ಶುದ್ಧ ಚಿನ್ಮಾತ್ರ (ಇಚ್ಛಾಮಾತ್ರ). ಅದು ನಿತ್ಯ, ಪೂರ್ಣ, ನಿಶ್ಚಲ, ಆಕಾರರಹಿತ. ಆದರೆ ಪ್ರಕಾಶೌನ್ಮುಖ್ಯವಾಗಿರುವುದು. ಈ ಒಳಗಿನ ಚಲನವೇ ಸ್ಪಂದ. ಈ ಸ್ಪಂದಶಕ್ತಿಯು ಚಲನವಿಲ್ಲದೆ ಖಚಿತವಾಗಿದ್ದರೂ

ಪ್ರತ್ಯೇಕಿಸುವ ಗುಣಗಳಿಂದ ಕೂಡಿರುವುದಿಲ್ಲ. ಈ ಸೂಕ್ಷ್ಮಸ್ಥಿತಿಯಲ್ಲಿ ತನ್ನನ್ನು ತಾನು ಅರಿಯುವ ಶಕ್ತಿಯುಳ್ಳದ್ದಾಗಿರುವುದಲ್ಲದೆ ಇಚ್ಛಾಜ್ಞಾನ ಕ್ರಿಯಾಶಕ್ತಿಗಳ ಮೂಲಕ ವೇದನಾಶೀಲವಾಗಿರುವುದು. ಕ್ರಿಯಾಶಕ್ತ್ಯೈಸ್ಮುಖ್ಯವಾಗಿರುವುದು. ಇದನ್ನೇ 'ಮಾತೃಕಾ' ಎನ್ನುವುದು. ಇದು ಶಿವನ ಸ್ವರೂಪವನ್ನು ವ್ಯಕ್ತಪಡಿಸುವಂಥಾದ್ದು. ಈ ಸ್ಥಿತಿಯಲ್ಲಿ ಶಿವನ ಪರಿಪೂರ್ಣಭಾವರೂಪದಲ್ಲಿಯೇ ವ್ಯಕ್ತಪಡುವುದು. ಒಟ್ಟಿನಲ್ಲಿ ಹೇಳುವುದಾದರೆ ಶಕ್ತಿಯು ಯಾವ ರೀತಿಯಾಗಿ ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ಗುಣಗಳಿಂದ ನಿಲವುಗಳಿಂದ ಪ್ರಕಾಶಿತವಾಗುವುದೋ ಅದೇ ರೀತಿ ಶಿವನೂ ಕೂಡ ತನ್ನ ಪ್ರತಿಯೊಂದು ನಿಲವಿನಲ್ಲಿಯೂ ಬೇರೆ ಬೇರೆ ಗುಣಗಳಿಂದ ಪ್ರಕಾಶಿತನಾಗುವನು. ಸಮಷ್ಟಿಜಗತ್ತಿನಲ್ಲಿ ಹೇಗೆ ಶಿವಶಕ್ತಿಗಳು ಕ್ರಮಪ್ರಾಪ್ತವಾಗಿ ಆವಿರ್ಭಾವವಾಗಿವೆಯೋ ಹಾಗೆಯೇ ವೃತ್ತಿಸೃಷ್ಟಿಯಲ್ಲಿಯೂ ಪರಿಣಾಮಕ್ರಮವಾಗಿ ಅಭಿವ್ಯಕ್ತವಾಗಿವೆ.

ನಿಸ್ತರಂಗವಾದ ಸಮುದ್ರದಲ್ಲಿ ಸೂಕ್ಷ್ಮವಾದ ಅಲೆಗಳುಂಟಾಗುವಂತೆ ಜ್ವಾಲೆಯಿಂದ ಹೊರಟ ಕಾಂತಿಯಂತೆ ಹೊರಹೊಮ್ಮಿರುವ ಚಿತ್ ಸಮುದ್ರದ ಚಲನವೇ ಶಕ್ತಿ ಅಥವಾ ಚಿಚ್ಛಕ್ತಿ.

" ಚಿದೇವ ಭಗವತೀ ತತ್ತದನಂತ ಜಗದಾತ್ಮನಾಸ್ಫುರತಿ "

ಈ ರೂಪದಲ್ಲಿ ಶಕ್ತಿಯು ಸಂಬೋಧಿತವಾಗುತ್ತದೆ. ಪರಿಪೂರ್ಣನಾಗಿರುವ ಪರಶಿವನು ತನ್ನ ಸ್ವಾತಂತ್ರ್ಯಶಕ್ತಿ ವಿಲಾಸದಿಂದ ವಿಶ್ವವನ್ನು ಹೊರಹೊಮ್ಮಿಸುವುದಕ್ಕೋಸ್ಕರ ಶಿವ-ಶಕ್ತಿ ಈ ದ್ವಂದ್ವರೂಪಗಳನ್ನು ತನ್ನಲ್ಲಿಯೇ ತೋರ್ಪಡಿಸಿಕೊಳ್ಳುತ್ತಾನೆ. ಇವೆರಡೂ ಒಂದನ್ನೊಂದು ಬಿಟ್ಟಿರುವುದಿಲ್ಲ. ಈ ಎರಡು ತತ್ತ್ವಗಳ ಸಂಘಟ್ಟರೂಪವಾದ ಚಲನ ಅಥವಾ ಸ್ಪಂದನವೇ ' ಸ್ವಾತ್ಮೋಚ್ಛಲತ್ವ ' ಎನ್ನಿಸಿಕೊಳ್ಳುತ್ತದೆ. ' ಸ್ವಾತ್ಮೋಚ್ಛಲತ್ವ' ಎಂದರೆ ತನ್ನ ಸ್ವರೂಪದ ಸ್ಫುರಣ.

ಚಿಚ್ಛಕ್ತಿಯ ಮೊದಲನೆಯ ಚಲನಕ್ಕೆ ಸ್ಪಂದ, ಸ್ಫುರತ್ತಾ, ಉನ್ಮೇಷ, ಉದಯ ಎಂದು ಹೇಳುವುದು. ಇದರಿಂದಲೇ ಪ್ರಪಂಚಸೃಷ್ಟಿ.

' ಸ್ವಶಕ್ತಿಪ್ರಚಯೋಸ್ಯವಿಶ್ವಂ '

ಈ ಚಿಚ್ಛಕ್ತಿ ಅಥವಾ ಪರಾಶಕ್ತಿಯು ವಿಶ್ವೋತ್ತೀರ್ಣವಾಗಿಯೂ ವಿಶ್ವಮಯವಾಗಿಯೂ ವಿರಾಜಿಸುತ್ತದೆ. ಚಿದ್ಘನನಾಗಿರುವ ಪರಶಿವನು ಇಚ್ಛಾಜ್ಞಾನ ಕ್ರಿಯಾಶಕ್ತಿಗಳಿಂದ ಕೂಡಿದ್ದರೂ ಶಿವನಿಗೆ ಶಕ್ತಿಪ್ರಸರವಿರುವ ಸ್ಥಿತಿ ಒಂದು, ಶಕ್ತಿಪ್ರಸರವಿಲ್ಲದ ಸ್ಥಿತಿ ಒಂದು. ಶಕ್ತಿಪ್ರಸರವಿರುವ ಸ್ಥಿತಿ ಎಂದರೆ ಶಿವನಿಂದ ಭೂಮಿಯವರೆಗಿರುವ ಮೂವತ್ತಾರು ತತ್ತ್ವವಿಭಾಗಗಳನ್ನೊಳಗೊಂಡದ್ದಾಗಿ ವಿಶ್ವಾತ್ಮಕ ಸ್ಥಿತಿ.

ಶಿವನು ಚಿನ್ಮೂರ್ತಿಯಾಗಿದ್ದಾನೆ. ಎಲ್ಲಾ ಪದಾರ್ಥಗಳಲ್ಲಿಯೂ ಚಿದಾತ್ಮಕನಾಗಿ ಸ್ಫುರಿಸುತ್ತಲಿದ್ದಾನೆ. ಯಾವ ಬಗೆಯ ಪ್ರತಿಬಂಧಕವೂ ಇಲ್ಲದೆ ಇಚ್ಛಾ ಮತ್ತು ಕ್ರಿಯಾಶಕ್ತಿಗಳ ಪ್ರಸಾರವುಳ್ಳವನಾಗಿದ್ದಾನೆ.

ಆತ್ಮೈವ ಸರ್ವಭಾವೇಷು ಸ್ಫುರನ್ನಿವೃತ ಚಿದ್ವಿಭುಃ
ಅನಿರುದ್ಧೇಚ್ಛಾಪ್ರಸರಃ ದೃಕ್ರಿಯಃ ಶಿವಃ ।

(ಶಿವದೃಷ್ಟಿ ಅನ್ಹಿಕ ೧, ಶ್ಲೋಕ ೨)

ಶಿವನು ಶಕ್ತಿಯಿಂದ ಬೇರೆಯಲ್ಲ. ಶಿವನು ಶಕ್ತಿಯುಳ್ಳವನಾದುದರಿಂದಲೇ ಶಕ್ತಿಯ ಮೂಲಕ ಅನಂತವಾದ ಕಾರ್ಯಪ್ರಪಂಚವನ್ನು ನಿರ್ವಹಿಸುವನು. ಸಾಕಾರ ಪದಾರ್ಥಗಳಲ್ಲಿಯೂ ನಿರಾಕಾರ ಭಾವನೆಗಳಲ್ಲಿಯೂ ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳ ಸಮಾವೇಶ ಇದ್ದೇ ಇರುತ್ತದೆ. ಶಿವನು ಎಲ್ಲಾ ತಿಳಿವಳಿಕೆಗಳಲ್ಲಿಯೂ ಎಲ್ಲಾ ಆಕಾರಗಳಲ್ಲಿಯೂ ತನ್ನ ಶಕ್ತಿಯ ಆವೇಶದಿಂದಿದ್ದರೂ ಪರಿಪೂರ್ಣನಾಗಿಯೇ ಇದ್ದಾನೆ. ಪರಶಿವನಿಗೆ ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು ನಿತ್ಯವಾಗಿರುತ್ತವೆ. ಸ್ವಯಂಪ್ರಕಾಶ ಶಕ್ತಿಯನ್ನೇ ಚಿಚ್ಛಕ್ತಿ ಎನ್ನುವುದು. ಇದನ್ನೇ ಪ್ರಜ್ಞಾ ಬೆಳಕು ಎನ್ನುವುದು. ಸಚ್ಚಿದಾನಂದ ಪರಶಿವನು ಸ್ವಯಂಪ್ರಕಾಶನು. ಆ ಪ್ರಕಾಶದ ನಿತ್ಯವಾದ ಎಚ್ಚರಿಕೆಯಿಂದ ವಿಮರ್ಶಶಕ್ತಿಯುಳ್ಳವನಾಗಿರುವನು. ತನ್ನನ್ನು ತಾನೇ ನೆನೆಯುತ್ತಿರುವ ' ಚಿತ್ ' ಸಾಮರ್ಥ್ಯವೇ ಚಿಚ್ಛಕ್ತಿ.

ಶಕ್ತಿಗಳು ಅನೇಕ ಬಗೆಯಾಗಿವೆ, ಅನಂತವಾಗಿವೆ. ಇದು ಅನಂತವಾಗಿರುವುದರಿಂದ ಇದರ ವಿವರಣೆ ಅಸಾಧ್ಯ. ಆದರೂ ನಮ್ಮ ಬುದ್ಧಿಯ ಅಳತೆಗೆ ಸಿಕ್ಕುವಂತೆ ಸಂಕಲ್ಪಶಕ್ತಿ, ನಿರ್ಮಾಣಶಕ್ತಿ ಎಂಬ ಪದಗಳನ್ನು ನಾವು ಉಪಯೋಗಿಸಬಹುದು. ಈ ಸಂಪ್ರದಾಯದಂತೆ ವಿಮರ್ಶಾಶಕ್ತಿಯು ಎಲ್ಲವನ್ನೂ ಹೊರಹೊಮ್ಮಿಸುತ್ತದೆ. ಎಲ್ಲವನ್ನೂ ಉಪಸಂಹರಿಸುತ್ತದೆ. ಹಾಗೆಯೇ ವಿಶ್ವವನ್ನು ತನ್ನಲ್ಲಿ ಸಾತ್ಮೀಕರಣಮಾಡಿಕೊಳ್ಳುತ್ತದೆ. ಪ್ರಳಯಾವಸ್ಥೆಯಲ್ಲಿ ಏಕತ್ವಕ್ಕೆ ಭಂಗ ಬರದಂತೆ ಭೇದರಹಿತವಾದ ಪರಿಪೂರ್ಣತೆಯನ್ನು ಪಡೆದಿರುತ್ತದೆ. ಅಭಿವ್ಯಕ್ತಾವಸ್ಥೆಯಲ್ಲಿ ಭೇದವು ಹೇಗೆ ನಿಯಮವಾಗಿರುತ್ತದೆಯೋ ಉಪಸಂಹಾರದಶೆಯಲ್ಲಿಯೂ ಅದೇರೀತಿಯಾದ ನಿಯಮವನ್ನನುಸರಿಸಿಕೊಂಡಿರುತ್ತದೆ. ಹೀಗೆ ಭೇದಾಭೇದಗಳ ಉಗಮ ಉಪಸಂಹಾರಗಳು ಅನಂತವಾಗಿವೆ. ಹೀಗೆ ಆ ಪರವಸ್ತುವಿನ ಮೂಲಸ್ವಭಾವ ಶಕ್ತಿಚಕ್ರಾಧಿಪತ್ಯ. ವಿಶ್ವಾತ್ಮಕ ವಿಶ್ವಾತೀತ ಸ್ಥಿತಿಗಳ ಮನವರಿಕೆಯಾದರೆ ' ಶಿವಶಕ್ತಿ ' ಎಂಬ ಪರಿಭಾಷೆಯ ಅರಿವು ನಮಗಾಗುತ್ತದೆ. ಈ ವಿಷಯವನ್ನು ಪ್ರತ್ಯಭಿಜ್ಞಾವಿಮರ್ಶಿನಿ ಎಂಬ ಗ್ರಂಥದಲ್ಲಿ ಈ ರೀತಿ ವಿವರಿಸಿರುತ್ತಾರೆ.

ವಿಮರ್ಶೋಹಿ ಸರ್ವಂ ಸಹಃ
ಪರಮಪಿ ಆತ್ಮೀಕರೋತಿ
ಆತ್ಮಾನಂಚ ಪರೀಕರೋತಿ
ಉಭಯಂ ಏಕೀಕರೋತಿ
ಏಕೀಕೃತಂ ದ್ವಯಮಪಿ
ನ್ಯಗ್ಭಾವಯತಿ
ಇತ್ಯೇವಂ ಸ್ವಭಾವಃ

(ಈಶ್ವರಪ್ರತ್ಯಭಿಜ್ಞಾ ವಿಮರ್ಶಿನಿ) ।

ಪರಮಾತ್ಮನು ವಿಶ್ವವನ್ನು ಹೊರಹೊಮ್ಮಿಸಬೇಕೆಂದು ಸಂಕಲ್ಪಿಸಿದಾಗ ಆ ಚಿದ್ಘನ ಭೂಮಿಯಿಂದ ಶಕ್ತಿಸಮೂಹಗಳು ಹೊರಹೊಮ್ಮುತ್ತವೆ. ಈ ಶಕ್ತಿಗಳು ಪರಮಾತ್ಮ ಸ್ವರೂಪಾಭಿನ್ನವಾಗಿದ್ದು ಅನಂತರ ಸ್ವರೂಪದಿಂದ ಭಿನ್ನವಾಗಿರುವ ಹಾಗೆ ತೋರುತ್ತವೆ. ಇದು ಪ್ರಯೋಗ ಪ್ರಧಾನವಾದ ಸ್ಥಿತಿಯಲ್ಲಿ ಆಗುವ ತೋರುವ ವ್ಯತ್ಯಾಸವಾಗಿದೆ. ಉತ್ಪಲದೇವಾಚಾರ್ಯರು ತಮ್ಮ ಸ್ತೋತ್ರಗಳಲ್ಲಿ ಹೀಗೆ ಹೇಳಿದ್ದಾರೆ.

ಆನಂದೋಚ್ಚಲಿತಾಶಕ್ತಿಃ ಸೃಜತ್ಯಾತ್ಮಾನಮಾತ್ಮನಾ

ಆ ಪರವಸ್ತುವು ತನ್ನ ಸೌಂದರ್ಯವನ್ನು ತಾನೇ ನೋಡಿಕೊಳ್ಳುವುದಕ್ಕೆ ಈ ವಿಶ್ವದ ಸೃಷ್ಟಿಯು ಶಕ್ತಿಯ ವಿಲಾಸವೆಂದೂ ಅದೇ ವಿಶ್ವವ್ಯಾಪಾರಗಳ ಪ್ರವಾಹವೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಸಮುದ್ರವು ಉಕ್ಕಿದಂತೆ ಚಿತ್ಸಮುದ್ರದ ಆನಂದದ ಉಕ್ಕುವಿಕೆಯಿಂದಲೇ ವಿಶ್ವಸೃಷ್ಟಿ ವ್ಯವಹಾರಗಳುಂಟಾಗುತ್ತವೆ. ಕಣ್ಣುಮುಚ್ಚಿ ಕಣ್ಣು ತೆರೆದಂತೆ ಈ ವಿಶ್ವದ ಆಗುಹೋಗುಗಳು ನಡೆಯುತ್ತವೆ.

ಯಸ್ಯೋನ್ಮೇಷ ನಿಮೇಷಾಭ್ಯಾಂ ಜಗತಃ ಪ್ರಳಯೋದಯೌ ।
ತಂ ಶಕ್ತಿಚಕ್ರ ವಿಭವ ಪ್ರಭವಂ ಶಂಕರಂ ಸ್ತುಮಃ ॥

ಭೋಕ್ತೃಭಾವವನ್ನು ವಿಶ್ವದಲ್ಲಿ ಕಂಡಾಗ ಅದೇ ಉನ್ಮೇಷಾವಸ್ಥೆ. ಕೇವಲ ಆನಂದಾನುಭವವೇ ಇದ್ದರೆ ಅದು ನಿಮೇಷಾವಸ್ಥೆ. ಕಾರ್ಯಕಾರಣ ಎರಡೂ ಪರವಸ್ತುವೇ ಆಗಿರುವುದರಿಂದ ನಮ್ಮ ಲೌಕಿಕ ದೃಷ್ಟಾಂತಗಳಿಗನುಸಾರವಾಗಿ ಮೇಲ್ಕಂಡ ರೀತಿ ವಿವರಿಸಿದ್ದಾರೆ. ಆದರೆ ಈ ಕೆಳಗೆ ಕಂಡಂತೆ ವಿಲಕ್ಷಣ ಚಮತ್ಕಾರ ಸ್ವಭಾವವುಳ್ಳ ಮಹೇಶ್ವರ ನನ್ನು ಈ ರೀತಿ ವಿವರಿಸಿದ್ದಾರೆ.

ಇಹ ಖಲು ನಿಖಿಲ ಜಗದಾತ್ಮಾ ಸರ್ವೋತ್ತೀರ್ಣಶ್ಚ ಸರ್ವಮಯಶ್ಚ
ನಿಕಲ್ಪಾ ಸಂಕುಚಿತ ಸಂವಿತ್ಪ್ರಕಾಶರೂಪಃ ಅನವಚ್ಛಿನ್ನ ಚಿದಾನಂದ
ವಿಶ್ರಾಂತಃ ಪ್ರಸರದವಿರಳ ವಿಚಿತ್ರ ಪಂಚವಾಹ ವಾಹ ವಾಹಿನೀ
ಮಹೋದಧಿಃ ನಿರತಿಶಯ ಸ್ವಾತಂತ್ರ್ಯಸೀಮನಿ ಪ್ರಭಳ್ಪಮಾನಃ
ಸರ್ವಶಕ್ತಿ ಖಚಿತಃ ಏಕ ಏವ ಅಸ್ತಿ ಸಂವಿದಾತ್ಮಾ ಮಹೇಶ್ವರಃ

(ಜನ್ಮಮರಣ ವಿಚಾರ ಗ್ರಂಥ)

ಮಾಯಾ :

ಪರಮಾತ್ಮನು ಸಚ್ಚಿದಾನಂದಸ್ವರೂಪಿ ಎಂಬುದು ಎಲ್ಲಾ ದಾರ್ಶನಿಕರಿಗೂ ಸಮ್ಮತವಾದ ವಿಷಯ. ಸತ್ ಚಿತ್ ಆನಂದ ಈ ಮೂರು ಗುಣಗಳ ವಿಷಯಗಳಲ್ಲಿ ಭಿನ್ನಾಭಿಪ್ರಾಯವನ್ನು ಸೂಚಿಸುತ್ತಾರೆ. ಪೂರ್ಣಸ್ವಾತಂತ್ರ್ಯ ಶಕ್ತಿಗಳ ಸಂಪೂರ್ಣ ವಿಕಾಸವು ವಿಶ್ವಾತೀತ ಸ್ಥಿತಿಯಲ್ಲಿ ಪರಮಾತ್ಮನಲ್ಲಿವೆ. ಈ ಸ್ಥಿತಿಯನ್ನು 'ಪರಶಿವ' ಎಂದು ಸಂಬೋಧಿಸಲಾಗಿದೆ. ಕ್ರಮಕ್ರಮವಾಗಿ ಸೃಷ್ಟಿಗೆ ಉನ್ಮುಖವಾದ ಸ್ಥಿತಿಯಲ್ಲಿ

ಶಕ್ತಿಕ್ಷೇತ್ರವು ಅನಂತ ವ್ಯಾಪ್ತಿಯುಳ್ಳದ್ದಾದರೂ ವ್ಯವಹಾರಕ್ಕೆ ತಕ್ಕಂತೆ ಸಂಕೋಚವನ್ನು ಪಡೆದಿರುತ್ತದೆ. ಹೀಗೆ ಸಂಕೋಚವನ್ನು ಪಡೆದಿರುವ ಶಕ್ತಿಗಳಲ್ಲಿ ಬಹಳ ವ್ಯಾಪಕವಾದ ಬಾಹ್ಯಸೃಷ್ಟಿಗೆ ಮೂಲವಾದ ಶಕ್ತಿ ಎಂದರೆ 'ಮಾಯಾಶಕ್ತಿ'. ಪರಮಾತ್ಮನು ಭೇದ ಭಾವವನ್ನು ಅಂಗೀಕರಿಸಿದ ನಂತರ ಶಕ್ತಿಗಳ ಮೂಲಕ ವಿಶ್ವರಚನೆಯನ್ನು ನಡೆಸುತ್ತಿರುವಾಗ ಈ ಮಾಯಾತತ್ತ್ವವು ರೂಪುಗೊಳ್ಳುತ್ತದೆ. ಇದು ಶುದ್ಧ ವಿದ್ಯಾತತ್ತ್ವಗಳಿಗೂ ಪ್ರಕೃತಿಯ ವಿಚಲಿತ ಸೃಷ್ಟಿಗೂ ಮಧ್ಯೆ ಇರುವ ತತ್ತ್ವವಾಗಿದೆ. ಈ ಸಿದ್ಧಾಂತದಂತೆ '**ಮಾಯಾ**' ಎಂಬ ಪರಿಭಾಷೆಯು ಸುಳ್ಳು ಮಿಥ್ಯೆ ಎಂಬ ಅರ್ಥವನ್ನು ಕೊಡುವುದಿಲ್ಲ. ಪರಶಿವನು ಪೂರ್ಣತ್ವದಿಂದ ಸಂಕುಚಿತಾವಸ್ಥೆಗೆ ಬರುವಾಗ ಈ ಮಾಯಾತತ್ತ್ವದಿಂದ ಹೊರಹೊಮ್ಮಿದ ಇತರ ತತ್ತ್ವಗಳ ಸೃಷ್ಟಿಯ ಕ್ರಮವನ್ನನುಸರಿಸಿ ಸಂಕೋಚ ವಿಕಾಸಗಳಿಗೆ ಕಾರಣವಾಗುತ್ತದೆ. 'ಮಾ' ಎಂಬ ಧಾತುವಿನಿಂದ ರೂಪುಗೊಂಡಿರುವ ಮಾಯಾ ಪದವು 'ಮಾ' ಅಂದರೆ ಅಳತೆ ಎಂಬ ಅರ್ಥವನ್ನು ಕೊಡುತ್ತದೆ. ಅಳತೆಯು ಸುಳ್ಳಾಗುವುದಿಲ್ಲ, ಮಿಥ್ಯೆಯಾಗುವುದಿಲ್ಲ. ಅಳತೆಯಿಂದ ಸತ್ಯವನ್ನು ಅರಿಯಬೇಕು. ಅಳತೆಯಿಂದ ಸಂಶಯಗಳು ನಿವಾರಣೆಯಾಗಬೇಕು. ಅಳತೆಯು ಸುಳ್ಳನ್ನು ಸೂಚಿಸಲಾರದು. ಸುಳ್ಳು ಎಂಬ ತಿಳಿವಳಿಕೆ ಇದ್ದರೆ ಅದನ್ನು ನಿವಾರಣೆಮಾಡುವುದು. ಹೀಗೆ ಮಾಯಾ ಎಂಬ ಪದಕ್ಕೆ ಬೇರೆ ಬೇರೆ ಅರ್ಥಗಳಿವೆ. ಕಾಶ್ಮೀರಶೈವ ಸಂಪ್ರದಾಯದಲ್ಲಿ ಅಶುದ್ಧ ಸೃಷ್ಟಿಗೆ ಮಾಯಾ ಎಂಬುದು ಮೂಲ. ಚೇತನವಾಗಿಯೂ ಅಚೇತನವಾಗಿಯೂ ಇರುವ ಎಲ್ಲವನ್ನೂ ಒಳಗೊಂಡಿದ್ದು, ಹೊರಹೊಮ್ಮಿಸಿ, ಪುನಃ ಉಪಸಂಹರಿಸಿಕೊಳ್ಳುವ ಸಾಮರ್ಥ್ಯವಿರುವ ತತ್ತ್ವಕ್ಕೆ 'ಮಾಯಾ' ಎಂಬುದು ಸಾಮಾನ್ಯವಾಗಿ ಶೈವಸಂಪ್ರದಾಯದವರ ಅಭಿಪ್ರಾಯ.

ಶಿವ ಮತ್ತು ಶಕ್ತಿಗಳಿಗೆ ಇರುವ ಸಂಬಂಧವನ್ನು ಕುರಿತು ಶಾಸ್ತ್ರೀಯವಾದ ಸಂಪ್ರದಾಯ ಕೆಲವು ಪರಿಭಾಷೆಗಳನ್ನು ಅವಲಂಬಿಸಿಕೊಂಡಿದೆ. ಬೇರ್ಪಡಿಸುವುದಕ್ಕೆ ಆಗದಿದ್ದರೂ ಸ್ವರೂಪಾಭಿನ್ನವಾಗಿಯೂ ಸ್ವರೂಪದಿಂದ ಬೇರೆ ಇದ್ದಂತೆ ಭಿನ್ನವಾಗಿ ತೋರುವುದೇ ಇದರ ವೈಶಿಷ್ಟ್ಯ. ಹೀಗೆ ಭೇದಾಭೇದ ತತ್ತ್ವವು ಶಿವಶಕ್ತಿಯಲ್ಲಡಗಿರುವುದನ್ನು ನಾವು ಮನಗಾಣಬೇಕು.

ಲಿಂಗಂ ಶೈವಂ ಇದಂ ಸಾಕ್ಷಾತ್ ಶಿವಶಕ್ತ್ಯುಭಯಾತ್ಮಕಂ

(ಸೂಕ್ಷ್ಮಾಗಮ vii-8.)

ಈ ವಿಷಯವನ್ನು ಸೂಚಿಸುವುದಕ್ಕೆ ತಾದಾತ್ಮ್ಯ ಸಾಮರಸ್ಯ ಎಂಬ ಎರಡು ಪರಿಭಾಷೆಗಳನ್ನು ಸೂಚಿಸಿರುತ್ತಾರೆ. ಹಾಲಿನಲ್ಲಿ ನೀರು ಬೆರಸಿದಹಾಗೆ, ನೀರಿನಲ್ಲಿ ಉಪ್ಪು ಬೆರೆತಹಾಗೆ ಎಂದು ಲೌಕಿಕ ದೃಷ್ಟಾಂತಗಳನ್ನು ಇಲ್ಲಿ ಉದಾಹರಿಸುತ್ತಾರೆ. ಉಪ್ಪು ನೀರಿನಲ್ಲಿ ಕರಗಿದರೆ ಅದು ತಾದಾತ್ಮ್ಯ, ಹಾಲು ನೀರಿನಲ್ಲಿ ಬೆರೆದರೆ ಅದು ಸಾಮರಸ್ಯ, ಎಂದು ಪಂಡಿತರ ವಿವರಣೆ. ಉಪ್ಪು ನೀರಿನಲ್ಲಿ ಹಾಲು ನೀರಿನಲ್ಲಿ ಬೆರೆಯುವುದು

ಎನ್ನುವುದು ಜ್ಞಾಪಕ ಹೇತುಗಳು. ಜ್ಞಾಪಕದೃಷ್ಟಾಂತಗಳು ಸ್ವರೂಪಜ್ಞಾನದಿಂದ ಪರಿಪೂರ್ಣಗೊಳ್ಳುತ್ತವೆ.

ಶಿವಶಕ್ತಿಗಳು ಒಂದನ್ನು ಬಿಟ್ಟು ಒಂದು ಇರದೆ ಪುಷ್ಪ ಗಂಧಗಳಂತೆ ಚಂದ್ರ ಬೆಳದಿಂಗಳಂತೆ ಹಾಲುರುಚಿಯಂತೆ ಯಾವಾಗಲೂ ಕೂಡಿಕೊಂಡಿರುತ್ತವೆ.

ಇಂಗಡಲೊಳಿಂಪು ಬೆಳದಿಂಗಳೊಳು ತಂಪು
ಕುಸುಮಂಗಳೊಳು ಕಂಪು ಬೆರೆದಂತೆ ಪರಮನೊಳು
ಪಿಂಗದಗಸುತೆಗೆ ನತನಪ್ಪೆಂ

ಎಂದುಶ್ರೀಮನ್ನಿಜಗುಣಶಿವಯೋಗಿಯು ಶಿವಶಕ್ತಿಯರಿಗಿರುವ ಅವಿನಾಭಾವ ಸಂಬಂಧ ವನ್ನು ಹೃದಯಂಗಮವಾಗಿ ವರ್ಣಿಸಿರುವರು.

ಪರಮಶಿವನು ಸಂಕಲ್ಪಮಾತ್ರದಿಂದ ತನ್ನಿಷ್ಟದಂತೆ ಜಗವನ್ನು ನಿರ್ಮಿಸಬಲ್ಲನು. ಅವನಿಗೆ ಕಾಣಬಾರದ ಕಾಯ ನೋಡಲಸದಳವಲ್ಲದ ತೇಜ ಉಪಮಿಸಬಾರದ ನಿಲವುಂಟು. ಜಗತ್ಸೃಷ್ಟಿಯು ಅವನ ಲೀಲೆ.

ಲೀಲೆಯಾದೊಡೆ ಉಮಾಪತಿ
ಲೀಲೆ ತಪ್ಪಿದೊಡೆ ಸ್ವಯಂಭೂ

ಸರ್ವಸ್ವತಂತ್ರನೂ ಅನಂತಶಕ್ತಿವಿಶಿಷ್ಟನೂ ಆದ ಪರಶಿವನು ತನ್ನ ಕೇವಲಾವಸ್ಥೆಯನ್ನು ಬಿಟ್ಟು ಲೀಲಾವಸ್ಥೆಗೆ ಬಂದು ತನ್ನಲ್ಲಿರುವ ಶಕ್ತಿಯ ಬಲದಿಂದಲೇ ಶಿವಾದಿ ಭೂಮ್ಯಂತ ಗಳಾದ ಮೂವತ್ತಾರು ತತ್ತ್ವರೂಪದ ಜಗದಾಕಾರದಿಂದ ಪರಿಣಮಿಸಿ ಬಹುರೂಪ ಗಳನ್ನು ಪಡೆದು ಕ್ರೀಡಾರಸವನ್ನನುಭವಿಸುತ್ತಿರುವನು.

ಪ್ರಾಣಶಕ್ತಿ

ಪ್ರಾಣಿಗಳ ಜೀವನವು ಜಡತತ್ತ್ವಗಳ ಉಪಕರಣಗಳಿಂದ ನಡೆಯುತ್ತಲಿದೆ. ಪ್ರತ್ಯಕ್ಷವಾಗಿರುವ ದೇಹ, ಶ್ವಾಸೋಚ್ಛ್ವಾಸಗಳಿಂದ ಅನುಮಾನ ಮಾಡುವುದಕ್ಕೆ ಸಾಧ್ಯ ವಾಗಿರುವ ಪ್ರಾಣಶಕ್ತಿ, ಶಾಸ್ತ್ರಗಳಿಂದ ತಿಳಿಯತಕ್ಕ ಇತರ ತತ್ತ್ವಗಳು ಇವುಗಳ ಸಂಪುಟ ವಾಗಿ ಪ್ರಪಂಚದ ವ್ಯವಹಾರವು ನಡೆಯುತ್ತಲಿದೆ. ಚಲನವಲನಾದಿ ಚೇಷ್ಟೆಗಳಿಂದ ಬೇಕಾದ ವಸ್ತುವನ್ನು ಪರಿಗ್ರಹಿಸುವುದು, ಬೇಡದಿರುವ ವಸ್ತುವನ್ನು ನಿರಾಕರಿಸುವುದು ಹೀಗೆ ನಡೆಯುತ್ತದೆ. ಸರ್ವವ್ಯಾಪಿಯಾದ ಚಿಚ್ಛಕ್ತಿಯು ಮೊದಲು ಸೃಷ್ಟಿಕ್ರಮದಲ್ಲಿ ಸ್ವಾತಂತ್ರ್ಯರೋಪಸಾರವಾಗಿರುತ್ತಾ ಪ್ರಾಣಶಕ್ತಿಯಾಗಿ ಸ್ಥೂಲಪ್ರಪಂಚವನ್ನಾಕ್ರಮಿಸಿರು ತ್ತದೆ. ಇದಿಲ್ಲದಿದ್ದರೆ ಯಾವ ಪದಾರ್ಥದಲ್ಲಿಯೂ ವಿಕಾರವಾಗಲಿ, ಪರಿಣಾಮವಾಗಲಿ, ಸ್ಪಂದವಾಗಲಿ ಏರ್ಪಡಲಾರದು. ವ್ಯಕ್ತಿಜೀವನದಲ್ಲಿ ಈ ಶಕ್ತಿಯು ಪ್ರಾಣಾಪಾನ ಸಮಾನೋದಾನ ವ್ಯಾನಗಳೆಂಬ ಐದು ಭೇದಗಳಿಂದ ಉಪಸ್ಥಿತವಾಗಿದೆ. ಶರೀರದಲ್ಲಿ ಪ್ರಾಣ ಮತ್ತು ಅಪಾನಗಳ ಸಂಚಾರವು ಜಾಗ್ರತ್ ಮತ್ತು ಸ್ವಪ್ನಾವಸ್ಥೆಗಳಲ್ಲಿ

ಏಕರೀತಿಯದಾಗಿರುತ್ತದೆ. ಸುಷುಪ್ತ್ಯವಸ್ಥೆಯಲ್ಲಿ ಪ್ರಾಣಾಪಾನಗಳ ಪ್ರಭಾವವು ಕಡಮೆಯಾಗಿ ಸಮಾನ ವಾಯುವಿನ ಪ್ರಭಾವವು ಪ್ರಧಾನವಾಗಿರುತ್ತದೆ. ಪ್ರಾಣಾಪಾನಗಳು ಸೂಕ್ಷ್ಮರೂಪದಿಂದಿರುತ್ತವೆ. ಆದುದರಿಂದ ಸುಷುಪ್ತಿಯಲ್ಲಿ ಹಾನ, ಆದಾನ (ಬಿಟ್ಟು ಬಿಡುವುದು, ತೆಗೆದುಕೊಳ್ಳುವುದು)ಭಾವಗಳಿರುವುದಿಲ್ಲ. ಸಕಲ, ಪ್ರಳಯಾಕಲ-ಈ ಎರಡು ಪ್ರಮಾತೃ ವರ್ಗಗಳ ಸ್ಥಿತಿಯು ಪ್ರಾಣ, ಅಪಾನ, ಸಮಾನ-ಈ ಮೂರು ವಾಯು ಸಂಚಾರಗಳ ಪ್ರಭಾವಕ್ಕೊಳಗಾಗಿರುತ್ತದೆ. ಯಾವಾಗ ಪ್ರಾಣ ಅಪಾನಗಳು ಬಲ ಮತ್ತು ಎಡಮಾರ್ಗಗಳಿಂದ ಸಂಚರಿಸುವುದನ್ನು ಬಿಟ್ಟು ಮಧ್ಯಮಾರ್ಗದಲ್ಲಿ ಪ್ರವೇಶಿಸಲ್ಪಡುತ್ತವೆಯೋ ಆಗ ಉದಾನ ಮತ್ತು ವ್ಯಾನ-ಈ ಪ್ರಾಣಶಕ್ತಿಗಳ ಪ್ರಭಾವವು ಏರ್ಪಡುತ್ತದೆ. ಆಗಲೇ ವಿಜ್ಞಾನಾಕಲ ಪ್ರಮಾತೃ ಮೊದಲ್ಗೊಂಡು ಶಿವಪ್ರಮಾತೃವರೆಗೆ ಪ್ರಮಾತೃವರ್ಗದ ಸ್ಥಿತಿಗಳು ಸಾಕ್ಷಾತ್ಕರಿಸಲ್ಪಡುತ್ತವೆ.

ಪ್ರಾಣಾಪಾನಮಯಃ ಪ್ರಾಣಃ ಪ್ರತ್ಯೇಕಂ ಸುಪ್ತಜಾಗ್ರತೋಃ ।
ತಚ್ಛೇದಾತ್ಮಾ ಸಮಾನಾಖ್ಯಃ ಸೌಷುಪ್ತೇ ವಿಷುವತ್ಸ್ವಿವ ॥
ಮಧ್ಯೋರ್ಧ್ವಗಾಮ್ಯುದಾನಾಖ್ಯಃ ತುರ್ಯಗೋಹುತಭುಙ್ಮಯಃ ।
ವಿಜ್ಞಾನಾಕಲಮಂತ್ರೇಶೋ ವ್ಯಾನೋ ವಿಶ್ವಾತ್ಮಕಃ ಪರಃ ॥

(ಈ. ಪ್ರ. ಅಧ್ಯಾಯ ೩, ಅನ್ಹಿಕ ೨, ಕಾರಿಕಾ ೧೯-೨೦.)

ತುರೀಯಾ, ತುರೀಯಾತೀತ ಅವಸ್ಥೆಗಳು ಈ ಸ್ಥಿತಿಗೆ ಆಶ್ರಯಗಳಾಗಿವೆ. ಮರಳಿ ಮಾಯಾಪ್ರಮಾತೃವು ಸಮಾಧಿಯಿಂದ ಹಿಂದಿರುಗಿ ಸಕಲ ಪ್ರಮಾತೃವನ್ನು ಅನುಭವಿಸುತ್ತಾನೆ. ಈ ಅಭಿಪ್ರಾಯಗಳನ್ನು ಮನಗಂಡು 'ತ್ರಯಂ ಹೇಯಂ' ಎಂದು ಜಾಗ್ರತ್ ಸ್ವಪ್ನ, ಸುಷುಪ್ತಿ-ಈ ಮೂರು ಅವಸ್ಥೆಗಳನ್ನೂ ಹೇಯವೆಂದು ಪರಿಗಣಿಸಿದರು.

ಪ್ರಾಣಶಕ್ತಿಯು ಎರಡು ಮುಖಗಳುಳ್ಳದ್ದಾಗಿದೆ. ಚಿಚ್ಛಕ್ತಿಯೇ ಅವರೋಹಣ ಕ್ರಮದಿಂದ ಬಾಹ್ಯರೂಪದಲ್ಲಿ ಮೊದಲು ಪ್ರಾಣಶಕ್ತಿ ಎನ್ನಿಸಿಕೊಳ್ಳುತ್ತದೆ. ಶಾಸ್ತ್ರಜ್ಞರು ಈ ವಿಷಯವನ್ನು 'ಪ್ರಾಕ್ ಸಂವಿತ್ ಪ್ರಾಣೇ ಪರಿಣತಾ' ಎಂದು ಸೂಚಿಸಿರುತ್ತಾರೆ. ಅದಕ್ಕಿಂತಲೂ ಬಾಹ್ಯರೂಪವು ಅಪಾನ. ಈ ಅಪಾನ ಶಕ್ತಿಯು ಪ್ರಮಾತೃಗಳಿಗೆ ರಕ್ಷಕವಾಗಿಯೂ ಧಾರಕವಾಗಿಯೂ ಇದೆ. ಇದರ ಪ್ರಭಾವದಿಂದ ಪ್ರಮಾತೃಗಳಿಗೆ ಪ್ರಮೇಯ ಗ್ರಹಣ ಸಾಮರ್ಥ್ಯವುಂಟಾಗುತ್ತದೆ. ಮುಂದಿನ ಬದಲಾವಣೆಯೇ ಉದಾನಶಕ್ತಿ. ಈ ಸ್ಥಿತಿಯಲ್ಲಿ ಪ್ರಮಾತೃ ಪ್ರಮೇಯ ಮೊದಲಾದುವುಗಳ ಸಂಕಲನ ಶಕ್ತಿಯು ಒಳಗೊಂಡಿರುತ್ತದೆ. ಕೊನೆಯದಾಗಿ ಜ್ಞಾನಶಕ್ತಿ. ಇದರ ಆವಿರ್ಭಾವವಾದರೆ ಎಲ್ಲಾ ಭೇದಜ್ಞಾನಗಳೂ ನಶಿಸಿ ಅಖಂಡ ಜ್ಞಾನಾನುಭವವುಂಟಾಗುತ್ತದೆ. ಹೀಗೆ ಪ್ರಾಣವಾಯುಗಳು ಕ್ರಮವಾಗಿ ನಿಜಾನಂದ, ನಿರಾನಂದ, ಪರಾನಂದ, ಬ್ರಹ್ಮಾನಂದ, ಮಹಾನಂದ, ಚಿದಾನಂದ ಎಂಬ ಆರು ವಿಶ್ರಾಂತಿರೂಪಗಳಾದ ಆನಂದಭೂಮಿಗಳೆಂದು ಉಪದೇಶಿಸಲ್ಪಟ್ಟಿದೆ.

ಪ್ರಾಣಶಕ್ತಿಯ ಎರಡನೇ ಮುಖವು ವರ್ಣರೂಪವಾಗಿದೆ. ವರ್ಣವೆಂದರೆ 'ಅವ್ಯಕ್ತ ಅನುಕೃತಿಪ್ರಾಯವಾದ ಧ್ವನಿ'. ಕಕಾರದಿಂದ ಮಕಾರದವರೆಗಿನ ವರ್ಣಗಳು ಸಾಚ್ಕ ವಾಗಿಯೂ ಅನಚ್ಕವಾಗಿಯೂ ಇರುತ್ತವೆ. ಇವುಗಳನ್ನು ಉಚ್ಚರಿಸಿದರೂ ನೆನೆದರೂ ಸಮುಯಾಪೇಕ್ಷೆಯಿಂದ ಉಪಯೋಗಿಸಿದರೂ ಸಂವಿತ್ ಸ್ಪಂದಸ್ಪರ್ಶವಿದ್ದೇ ಇರುತ್ತದೆ. ಈ ರೀತಿಯಾಗಿ ಅನುಸಂಧಾನ ಮಾಡುವುದೇ ವರ್ಣರಹಸ್ಯ.

ಸಾಧಕನು ಯಾವ ಉಪಾಯದಿಂದ-ಅಂದರೆ ಪ್ರಾಣವಾಯುಗಳ ಅಥವಾ ವರ್ಣಗಳ ಅನುಸಂಧಾನದಿಂದ ಸಿದ್ಧಿಯನ್ನು ಪಡೆದರೂ ಅವನ ಭಾವನಾಪ್ರಪಂಚವು ಒಂದೇ ರೀತಿಯದಾಗಿರುತ್ತದೆ. ಈ ಜನ್ಮದಲ್ಲಿ ಬದುಕಿರುವಾಗಲೇ ಸಿದ್ಧಿಯನ್ನು ಪಡೆಯಬೇಕು. ಈ ಸಿದ್ಧನು ಪ್ರಪಂಚ ವ್ಯವಹಾರವನ್ನು ಬಿಡಬೇಕಾಗಿಲ್ಲ. ಅವನು ಕರ್ಮಶೇಷದಿಂದ ಬಂದಿರುವ ಈ ಶರೀರವಿರುವವರೆಗೂ ಸಾಮಾನ್ಯನಾದವನಂತೆಯೇ ಇರಬೇಕು. ಇವನು ಶರೀರದಿಂದಿರುವಿಕೆಯೇ ಒಂದು ವ್ರತ. ಇವನು ಲೋಕಾನುಗ್ರಹಕ್ಕೋಸ್ಕರವಾಗಿ ಜ್ಞಾನ ದಾನವನ್ನು ಮಾಡುತ್ತಾನೆ. ಶರೀರವು ಕಳಚಿಹೋದನಂತರ ಶಿವನೇ ಆಗುತ್ತಾನೆ. ಶರೀರವಿರುವವರೆಗೆ ಶಿವನಿಗೆ ಸಮಾನವಾಗಿರುತ್ತಾನೆ. ಇವನು ಬದುಕಿರುವವರೆಗೂ ಇವನಿಗೆ ಒದಗಬಹುದಾದ ಸುಖದುಃಖಗಳನ್ನು 'ಇದಂ' ಭಾವನೆಯಿಂದ ನೋಡುತ್ತಾನೆ. 'ಅಹಂ' ಭಾವನೆಯಿಂದ ನೋಡುವುದಿಲ್ಲ.

ಜ್ಞಾನಸ್ವರೂಪ-ಭಾವನೆಗಳು (ಈಶ್ವರಪ್ರತ್ಯಭಿಜ್ಞಾ)

ಯಾವ ವಿಷಯವನ್ನು ಪ್ರತಿಪಾದಿಸಿದರೂ ಅದು ಅನುಭವಕ್ಕೆ ಹೊಂದಬೇಕು. ಉಪದೇಶ, ಗ್ರಂಥವಿಮರ್ಶೆ, ಯುಕ್ತಿಸಂಚಾರ ಇವುಗಳು ತತ್ತ್ವಜ್ಞಾನವನ್ನು ತಿಳಿಯಲು ಸಾಧನಗಳು. ಸಾಧನಗಳು ಸಾಧ್ಯವನ್ನು ಹೊಂದಲು ಸಹಕರಿಸುತ್ತವೆ. ಆದರೆ ಇವೇ ಫಲಗಳಲ್ಲ. ಸಾಧ್ಯ ಸಿದ್ಧಿಯಾದಾಗ ಸಾಧನಗಳು ಕಣ್ಮರೆಯಾಗುತ್ತವೆ. ಒಂದುವೇಳೆ ಇದ್ದರೂ ಪ್ರಯೋಜನವಿಲ್ಲ. ನಾವು ನೋಡಿದ ಪದಾರ್ಥಗಳು, ಕೇಳಿದ ವಿಷಯಗಳ ತಿಳಿವಳಿಕೆಗಳು ತತ್ಕಾಲದಲ್ಲಿ ಚಿತ್ರರೂಪವಾಗಿ ತೋರುತ್ತವೆ. ಕಾಲಾಂತರದಲ್ಲಿ ಅವು ನೆನಪಿಗೆ ಬರುತ್ತವೆ. ಆದರೆ ಅವುಗಳಿಗೆ ತಕ್ಕ ಪ್ರಸಂಗ ಒದಗಬೇಕು. ಅನುಕೂಲ ಪರಿಸ್ಥಿತಿ ಇರಬೇಕು. ನೋಡಿದ, ಕೇಳಿದ, ತಿಳಿದ ವಿಷಯಗಳು ಕಾಲಾಂತರದಲ್ಲಿ ನೆನಪಿಗೆ ಬರುವುದಕ್ಕೆ ಕಾರಣವನ್ನು ಯುಕ್ತಿಯಿಂದ ತಿಳಿಯಬೇಕು. ಪ್ರಮಾಣದಿಂದ ಒಪ್ಪಬೇಕು. ಅನುಭವದಿಂದ ಗುರುತಿಸಬೇಕು. ಕೆಲವು ವಿಷಯಗಳು ಜ್ಞಾಪಕಕ್ಕೆ ಬರುವುದಿಲ್ಲ. ಬಂದರೂ ಯಾವಾಗಲೋ ಒಂದು ಸಾರಿ ಬರುತ್ತವೆ. ಹೀಗೆ ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಬಂದ ಅನುಭವಗಳಲ್ಲಿ ತಪ್ಪು ತಿಳಿವಳಿಕೆಗಳುಂಟಾಗುವುದು ಅನುಭವವಲ್ಲ. ಸರಿಯಾದ ತಿಳಿವಳಿಕೆಗಳಿಂದ ತಪ್ಪು ತಿಳಿವಳಿಕೆಗಳನ್ನು ತಿದ್ದುವುದು ಒಳ್ಳೆಯದು. ಆಧ್ಯಾತ್ಮಶಾಸ್ತ್ರಗಳು ತಮ್ಮ ಕ್ಷೇತ್ರದಲ್ಲಿ ತಪ್ಪು ತಿಳಿವಳಿಕೆಗಳನ್ನು ತಿದ್ದುವ ಸಾಧನಗಳಾಗಿವೆ. ಇಷ್ಟೊಂದು ಸಾಧನಗಳಿದ್ದರೂ ಸರಿಯಾದ ತಿಳಿವಳಿಕೆ ಬೆಳಗುವುದು ಕಷ್ಟಸಾಧ್ಯವಾಗಿದೆ. ಇದು ತಪ್ಪು ತಿಳಿವಳಿಕೆ, ಇದು ಸರಿಯಾದ ತಿಳಿವಳಿಕೆ ಎಂಬ ಈ

ಎರಡು ತಿಳಿವಳಿಕೆಗಳು ಫಲತಃ ಬೇರೆಯಾಗಿದ್ದರೂ ಮೂಲದಲ್ಲಿ ಸ್ವರೂಪತಃ ಬೇರೆಯಾಗಿರುವುದಿಲ್ಲ. ಬಗೆಬಗೆಯಾಗಿರುವ ತಿಳಿವಳಿಕೆಗಳು ಒಂದಕ್ಕೊಂದು ಸಂಬಂಧಿಸದೆ ಇದ್ದರೂ ಒಂದೇ ತತ್ತ್ವವನ್ನು ಆಧಾರವಾಗಿ ಪಡೆಯದಿರಬಹುದು. ಈ ಎಲ್ಲಾ ತಿಳಿವಳಿಕೆಗಳಿಗೂ ಆಶ್ರಯವಾಗಿ ಒಂದು ತತ್ತ್ವವಿಲ್ಲದಿದ್ದಲ್ಲಿ ಈ ಬೇರೆ ಬೇರೆ ತಿಳಿವಳಿಕೆಗಳು ಪರಸ್ಪರ ಸಹಕಾರದಿಂದ ವರ್ತಿಸಲಿಕ್ಕಾಗುತ್ತಿರಲಿಲ್ಲ.

ಏವಮನ್ಯೋನ್ಯ ಭಿನ್ನಾನಾಂ ಅಪರಸ್ಪರ ವೇದಿನಾಂ ।
ಜ್ಞಾನಾನಾಮನುಸಂಧಾನ ಜನ್ಮಾನಶ್ಯೇದ್ ಜನಸ್ಥಿತಿಃ ॥

(ಈಶ್ವರ ಪ್ರತ್ಯಭಿಜ್ಞಾ, ಅಧ್ಯಾಯ ೧, ಆಹ್ನಿಕ ೩, ಕಾರಿಕಾ ೬.)

ಲೋಕವ್ಯವಹಾರಗಳೆಲ್ಲಾ ಅನೇಕ ಮುಖಗಳಾಗಿರುವ ತಿಳಿವಳಿಕೆಗಳ ಸಹಕಾರವನ್ನಾಶ್ರಯಿಸಿರುತ್ತವೆ. ಈ ಸಹಕಾರವಿಲ್ಲದಿದ್ದಲ್ಲಿ ಪ್ರಾಣಿಗಳ ಜೀವನವೇ ಕುಂಠಿತವಾಗುತ್ತದೆ. ಈ ಸಹಕಾರ ಕಾರಣವಾಗಿರುವ ತತ್ತ್ವವು ಜ್ಞಾನಶಕ್ತಿ, ಸ್ಮೃತಿಶಕ್ತಿ, ಅಪೋಹನ ಶಕ್ತಿಗಳಿಂದ ಕೂಡಿದ್ದಾಗಿದೆ. ಆ ತತ್ತ್ವದ ಮಹಿಮೆಯಿಂದ ಪರಸ್ಪರ ಭಿನ್ನವಾಗಿರುವ ತಿಳಿವಳಿಕೆಗಳ ಉತ್ಪತ್ತಿ, ಸ್ಥಿತಿ, ಪ್ರವೃತ್ತಿಗಳು ನಡೆಯುತ್ತಿರುತ್ತವೆ. ಅವುಗಳ ಸಹಕಾರದಿಂದ ತಪ್ಪು ತಿಳಿವಳಿಕೆಗಳು ಅಳಿದು ಸರಿಯಾದ ತಿಳಿವಳಿಕೆಗಳ ಉಗಮಕ್ಕೆ ಅವಕಾಶವಾಗುತ್ತದೆ.

ಪದಾರ್ಥಗಳನ್ನು ನೋಡುವುದರಿಂದುಂಟಾಗುವ ತಿಳಿವಳಿಕೆಗಳು ಎಲ್ಲಿಂದ ಹೊರಹೊಮ್ಮುತ್ತವೆಂಬ ಪ್ರಶ್ನೆ ಏಳುವುದು ಸಹಜ. ಬಾಹ್ಯಪದಾರ್ಥಗಳ ಸಂಪರ್ಕವಿದ್ದರೂ ಕೆಲವರಿಗೆ ಆ ಪದಾರ್ಥಗಳ ತಿಳಿವಳಿಕೆಯುಂಟಾಗುವುದಿಲ್ಲ. ಅವರು ವಿಷಯಗಳಲ್ಲಿ ಉದಾಸೀನರಾಗಿರಬಹುದು. ಮತ್ತೆ ಕೆಲವರು ಪ್ರಯತ್ನಪಟ್ಟರೂ ವಿಷಯಗಳು ಅವರಿಗೆ ಪ್ರತಿಫಲಿಸದಿರಬಹುದು. ನಮಗೆ ತಿಳಿವಳಿಕೆಯುಂಟಾಗುವುದಕ್ಕೆ ಪದಾರ್ಥಗಳಿರಲೇಬೇಕೆಂಬ ನಿಯಮವಿಲ್ಲ. ಶಾರೀರಿಕವಾದ ಸ್ಪರ್ಶದ ಮೂಲಕ ಸಂತೋಷವನ್ನೋ ಸಂತಾಪವನ್ನೋ ಉಂಟುಮಾಡಬೇಕಾದರೆ ಹೊರಗಿನ ಪದಾರ್ಥಗಳ ಸ್ಥೂಲರೂಪದ ಅವಶ್ಯಕತೆ ಇರುತ್ತದೆ. ಸ್ವರ್ಗ, ನರಕ, ಕೈಲಾಸ, ವೈಕುಂಠ–ಇಂತಹ ಪದಗಳಿಂದ ಬರುವ ತಿಳಿವಳಿಕೆಗಳಿಗೆ ಸ್ಥೂಲರೂಪವಾದ ಪದಾರ್ಥಗಳ ಅವಶ್ಯಕತೆ ಇಲ್ಲ. ಈ ರೀತಿಯಾದ ತಿಳಿವಳಿಕೆಗಳಿಗೆ ನಮ್ಮ ಭಾವನಾಪ್ರಪಂಚದಲ್ಲಿ ಒಂದು ನಿಶ್ಚಿತವಾದ ಸ್ಥಾನವಿದೆ. ಆದರೆ ಬಾಹ್ಯಪದಾರ್ಥಗಳ ಸಂಬಂಧದಿಂದ ಉಂಟಾಗುವ ಜ್ಞಾನಕ್ಕೆ ಬೇಕಾಗುವ ಆಲಂಬನ ಅಥವಾ ಆಶ್ರಯ ಬೇಕಾಗಿಲ್ಲ. ನಮ್ಮ ಜೀವನದ ಮುಖ್ಯದೃಷ್ಟಿ ಪುಣ್ಯ ಪಾಪಗಳಲ್ಲಿರುವ ನಂಬಿಕೆ. ಪಾಪಕರ್ಮಾಚರಣೆ ತಪ್ಪು, ಪುಣ್ಯಕರ್ಮಾಚರಣೆ ಸರಿ ಎಂಬ ಪ್ರವೃತ್ತಿಯನ್ನು ನಡೆಯಿಸುವ ತಿಳಿವಳಿಕೆಗೆ ಬೇರೆ ಆಶ್ರಯ ಬೇಕಾಗಿಲ್ಲ. ಇವುಗಳು ಸತ್ತಾಮಾತ್ರದಿಂದಲೇ ತಿಳಿಯುವವುಗಳಾಗಿವೆ, ಪ್ರೇರಕಗಳಾಗಿವೆ. ಭಾವುಕನಿಗೆ ಅವನ ಪ್ರವೃತ್ತಿರೂಪವಾದ ಶಕ್ತಿಯಿಂದ ಬೇರೆಯಾಗದಿವೆ. ಈ ತಿಳಿವಳಿಕೆಗಳು ಸತ್ತಾಮಾತ್ರವಾಗಿರುವ ಆ ಪರತತ್ತ್ವದಿಂದ ಬೇರೆಯಲ್ಲವೆಂದು ಸಿದ್ಧವಾಗುತ್ತವೆ.

ಯೋಗಿಗಳಿಗೂ ಕೂಡ ಅವರ ತಿಳಿವಳಿಕೆಗಳು ತಮ್ಮ ಸ್ವರೂಪವಾದ ತತ್ತ್ವಕ್ಕಿಂತ ಬೇರೆಯಾಗಿ ತೋರುವುದಿಲ್ಲ. ಇದರಿಂದ ನಮಗುಂಟಾಗುವ ತಿಳಿವಳಿಕೆಗಳು ಹೊರಗಿನ ಪದಾರ್ಥಗಳಿಂದಲ್ಲ. ಅಂತರ್ಯವಾದ ತತ್ತ್ವವು ತನ್ನ ಸ್ಫುರಣದಿಂದ ಈ ಪದಾರ್ಥಗಳಿಗೆ ಒಂದು ಪರಿಮಿತವಾದ ಆಕಾರವನ್ನು ಕೊಡುತ್ತದೆ. ಇದು ಮಾವಿನಹಣ್ಣು, ಕೆಂಪುಬಣ್ಣ ವಾಗಿದೆ, ಎರಡು ಸೇರು ತೂಕವುಳ್ಳದ್ದು, ಗುಂಡಗಿದೆ ಮೊದಲಾದ ಆಕಾರಗಳು ಈ ಚಿತ್ತತ್ತ್ವದ ಜ್ಞಾನಶಕ್ತಿಯ ಸ್ಫುರಣದ ಪರಿಣಾಮಗಳು. ಜ್ಞಾನಶಕ್ತಿಯ ವಿಲಾಸರೂಪ ವಾದ ಈ ಪರಿಣಾಮವು ಆ ಚಿತ್ತತ್ತ್ವದಿಂದ ಬೇರೆಯಲ್ಲ. ಈ ಕಾರಣದಿಂದ ಅದರ ಸ್ಫುರಣವು ಪರಿಮಿತವಾದಾಗ ಆ ಪದಾರ್ಥಗಳನ್ನು ಸಂಕುಚಿತವಾದ ದೃಷ್ಟಿಯಿಂದಲೇ ಗ್ರಹಿಸುತ್ತದೆ. ಈ ತಿಳಿವಳಿಕೆಯನ್ನು 'ಗ್ರಾಹ್ಯಭಾವಗ್ರಹ'ವೆನ್ನುತ್ತಾರೆ. ನಾನು ಈ ಪದಾರ್ಥವನ್ನು ನೋಡುತ್ತೇನೆ ಎನ್ನುವಾಗ 'ನಾನು' ಎನ್ನುವುದು ಗ್ರಾಹಕಭಾವ. ಈ ಪದಾರ್ಥವನ್ನು ಎನ್ನುವುದು ಗ್ರಾಹ್ಯಭಾವ. ಗ್ರಾಹಕ, ಗ್ರಾಹ್ಯ ಈ ಎರಡು ಭಾವಗಳು ಆ ಪ್ರಮಾತೃವಿನಲ್ಲಿ ಸ್ಫುರಿಸುತ್ತವೆ. ಈ ಭೇದಗಳು ಸತ್ಯವಾದ ಸ್ಫುರಣಮಾತ್ರ ಗಳಾಗಿವೆ. ಇದು ಪರ್ವತ, ಇದು ಹಣ್ಣು, ಇವನು ಮನುಷ್ಯ ಎಂಬ ಬೇರೆ ಬೇರೆ ತಿಳಿವಳಿಕೆಗಳು ಬರುತ್ತವೆ.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯುತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಅದು ಪೂರ್ಣ, ಇದು ಪೂರ್ಣ. ಪೂರ್ಣದಿಂದ ಪೂರ್ಣ ಹುಟ್ಟುತ್ತದೆ. ಪೂರ್ಣದಿಂದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿಯುವುದು. ಒಂದು ದೀಪದಿಂದ ಅನೇಕ ದೀಪಗಳನ್ನು ಹೊತ್ತಿಸಬಹುದು. ಯಾವ ಒಂದು ದೀಪದಿಂದ ಹೊರಟ ಪ್ರಕಾಶವು ಅನೇಕ ದೀಪಗಳಲ್ಲಿ ಪ್ರಕಾಶವನ್ನುಂಟುಮಾಡಿದರೂ ಮೊದಲಿನ ಪ್ರಕಾಶಕ್ಕೆ ಯಾವ ಚ್ಯುತಿಯೂ ಇಲ್ಲ. ಹಾಗೆಯೇ ಆನಂದ. ಒಬ್ಬನಲ್ಲಾದ ಆನಂದ ಅಥವಾ ಸಂತೋಷವು ಇತರರಲ್ಲಿ ಸಂತೋಷವನ್ನುಂಟುಮಾಡಿದರೂ ಮೊದಲು ಉದ್ಭವವಾದ ಆನಂದಕ್ಕೆ ಯಾವ ಚ್ಯುತಿಯೂ ಇಲ್ಲ, ಕುಂದೂ ಇಲ್ಲ. ಪ್ರಕಾಶವು (ಆನಂದವು) ತಾನಾಗಿಯೇ ಬೆಳಗುವುದು. ಜ್ಞಾನಿಯು ತನ್ನ ಜ್ಞಾನವನ್ನು ಇತರರಿಗೆ ಎಷ್ಟು ಕೊಟ್ಟರೂ ತನ್ನ ಜ್ಞಾನಾಂಶವು ಕುಂದುವುದಿಲ್ಲ, ಕಡಿಮೆಯಾಗುವುದಿಲ್ಲ. ತನ್ನ ನಿಜ ಸ್ವರೂಪವನ್ನು ಉಳಿಸಿಕೊಂಡೇ ಇರುತ್ತದೆ. ತನ್ನ ಜ್ಞಾನಾಂಶದ ಪೂರ್ಣತೆ ಇದ್ದೇ ಇರುತ್ತದೆ. ಹೀಗೆ ಚಿದಂಶಗಳ ವಿಲಾಸದಲ್ಲಿ ಕೊರತೆಗೆ ಅವಕಾಶವಿಲ್ಲ.

ವರ್ತಮಾನಾವಭಾಸಾನಾಂ ಭಾವಾನಾಮವಭಾಸನಂ ।
ಅಂತಃಸ್ಥಿತವತಾಮೇವ ಘಟತೇಬಹಿರಾತ್ಮನಾ ॥

(ಈ. ಪ್ರ. ಅಧ್ಯಾಯ ೧, ಅಹ್ನಿಕ ೫, ಕಾರಿಕಾ ೧.)

ವರ್ತಮಾನ ಕಾಲದ ವಿಷಯಜ್ಞಾನಗಳು ಮೊದಲು ಪ್ರಮಾತೃವಿನಲ್ಲಿ ಇದ್ದೇ ಇರುತ್ತವೆ. ಹಿಂದೆ ಯಾವಾಗಲೂ ತೋರುತ್ತಿರುವ ತಿಳಿವಳಿಕೆಗಳು ಭಾವಗಳು ಒಳಗಿರುವಂತೆ ಹೊರಗೆ ಪ್ರಕಾಶಿಸುತ್ತವೆ. ಕಾರಣ ಯಾವ ಜಾತಿಯದೋ ಕಾರ್ಯವು ಅದೇ ಜಾತೀಯವಾಗಿ ಪರಿಣಮಿಸುತ್ತದೆ. ಪ್ರಮಾತೃವು ತನ್ನಲ್ಲಿರುವ ಭಾವನೆಗಳನ್ನು ಅಂತಃ ಪರಿಶೀಲಿಸುವಿಕೆಯೇ ವಿಮರ್ಶವೆನಿಸುತ್ತದೆ.

> **ವಿಮರ್ಶೋಹಿ ಸರ್ವಂ ಸಹಃ**
> **ಪರಮಪಿ ಆತ್ಮೀಕರೋತಿ**
> **ಆತ್ಮಾನಂ ಚ ಪರೀಕರೋತಿ**
> **ಉಭಯಂ ಏಕೀಕರೋತಿ**
> **ಏಕೀಕೃತಿಂ ದ್ವಯಮಪಿ ನ್ಯಗ್ಭಾವಯತಿ**
> **ಇತ್ಯೇವಂ ಸ್ವಭಾವಃ**

ಈ ವಿಮರ್ಶೆಯು ಚಿತ್ತಿನ ಕ್ರಿಯೆ. ಜಡಪದಾರ್ಥಗಳಿಗೂ ಚೇತನ ತತ್ತ್ವಕ್ಕೂ ಇರುವ ವ್ಯತ್ಯಾಸವೇ ಇದು. ಜಡವಾಗಿರುವ ಕಲ್ಲು 'ನಾನು' ಎಂದು ವಿಮರ್ಶಿಸಿಕೊಳ್ಳುವುದಿಲ್ಲ. ಚಿದ್ವಿಮರ್ಶನೆ ಅಲ್ಲಿಲ್ಲ ಎಂದು ತಾತ್ಪರ್ಯ. ತಾನು ಅಪರಿಚ್ಛಿನ್ನವಾಗಿರುವೆನೆಂದು ವಿಮರ್ಶನೆಯಿಲ್ಲದಿರುವುದರಿಂದ ಇದು ಜಡವಾಗಿರುವುದು. ಇದಕ್ಕೆ ವಿರುದ್ಧವಾಗಿರುವುದು ಪ್ರಮಾತೃವು. ಇವನು ತನ್ನನ್ನು ಅಹಂ ಎಂದು ವಿಮರ್ಶಿಸುವನು.

ಚಿತ್ತು ಅಂತರ್ಮುಖವಾಗಿ ಎಲ್ಲವನ್ನೂ ಸಹಿಸುವಂಥಾದ್ದು. ಹೇಗೆಂದರೆ 'ಇದಂತಾ' ಸ್ಪದವಾದ ವ್ಯವಹಾರವನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ತನ್ನನ್ನು ದೇಹ ಇಂದ್ರಿಯ, ಮನಸ್ಸು ಇವುಗಳ ಮಟ್ಟಕ್ಕೆ ಇಳಿದು 'ಅಹಂ', 'ಇದಂ' ರೂಪ ತಾಳಿದರೂ ಶುದ್ಧ ವಿದ್ಯಾಸ್ಥಿತಿಯಲ್ಲಿ ಒಂದಾಗಿಟ್ಟುಕೊಂಡಿರುತ್ತದೆ. ಬೇರೆಯಾಗಿದ್ದರೂ ಕೂಡಿಕೊಂಡಿರುತ್ತದೆ. ಭೇದವಿಲ್ಲದೆಯೂ ಇರುತ್ತದೆ. ಇದು ಅದರ ಸ್ವಭಾವ. ಅದೇ ಚಿತ್ತು ಪರಾವಾಕ್ ರೂಪದಲ್ಲಿ ನಿತ್ಯೋದಿತವಾಗಿರುತ್ತದೆ, ಆರಿಹೋಗುವುದಿಲ್ಲ. ಅಂದರೆ ಅದು ತನ್ನ ಸ್ವಭಾವವನ್ನು ಉಳಿಸಿಕೊಂಡಿರುತ್ತದೆ.

> **ಸಾಸ್ಫುರತ್ತಾ ಮಹಾಸತ್ತಾ ದೇಶಕಾಲಾ ವಿಶೇಷಿಣೀ ।**
> **ಸೈಷಾ ಸಾರತಯಾ ಪ್ರೋಕ್ತಾ ಹೃದಯಂ ಪರಮೇಷ್ಠಿನಃ ॥**

(ಈ. ಪ್ರ. ಅಧ್ಯಾಯ ೧, ಅಹ್ನಿಕ ೫, ಕಾರಿಕಾ ೧೬)

ಪರಾವಾಕ್ಕು : ದೇಶಕಾಲಗಳಿಂದ ಅಳಿಯುವುದಕ್ಕಾಗುವುದಿಲ್ಲ. ಅದು ಸಾರಭೂತವಾಗಿದ್ದು ಶಕ್ತಿಮಯವಾದುದ್ದು. ಆ ಶಕ್ತಿಯಿಲ್ಲದಿದ್ದರೆ ಮುಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಅದು ಸ್ವಾತಂತ್ರ್ಯ ಐಶ್ವರ್ಯಗಳಿಂದ ಕೂಡಿದ್ದು, ಸರ್ವವ್ಯಾಪಿ, ಎಲ್ಲದರಲ್ಲಿಯೂ ಇದೆ. ಇನ್ನೊಂದರ ಸಹಾಯವಿಲ್ಲದೆ ಯಾವ ಕೆಲಸವನ್ನಾದರೂ ತಾನೇ ನಿರ್ವಹಿಸಬಲ್ಲದು.

ಸ್ಮೃತಿ : ಜ್ಞಾಪಕಶಕ್ತಿ ಕಾಲಕ್ಕೆ ತುತ್ತಾಗದೆ ಇರುವಂಥಾದ್ದು. ಕಾಲದಿಂದ ಸ್ಮೃತಿ ಬದಲಾಗುವುದಿಲ್ಲ. ನಾವು ಹಿಂದೆ ನೋಡಿದ್ದು ಚಿತ್ತಿನಲ್ಲಿ ಆವರಿಸಿರುವ ಮುಸುಕನ್ನು ತೆಗೆದರೆ ಅದು ಸ್ವಸ್ವರೂಪದಲ್ಲೇ ಕಾಣಿಸಿಕೊಳ್ಳುತ್ತದೆ. ವಿಮರ್ಶನ ಶಕ್ತಿಯಿಲ್ಲ ದಿದ್ದರೆ ಚಿತ್ತಿಗೆ ಮುಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಸ್ಮೃತಿಯು ವಿದ್ಯಾ ಅವಿದ್ಯಾ ಇವೆರಡರ ಸಂಕರ. ಮಂತ್ರ ಜಪ ಧ್ಯಾನ ಮೊದಲಾದ ಶುದ್ಧ ವಿದ್ಯಾನುಸಂಧಾನದಿಂದ ಅವಿದ್ಯೆಯು ಮಾಯವಾಗುತ್ತದೆ. ಸ್ಮರಣದಲ್ಲಿ ಜ್ಞಾಪಕಶಕ್ತಿಯಲ್ಲಿ ಭೇದ ಕಂಡುಬಂದರೂ ಅದರ ಹಿಂದೆ ಅಭೇದ ಇದ್ದೇ ಇರುತ್ತದೆ. ' ಅಹಂ ' ಇಲ್ಲದೆ ' ಇದಂ ' ಇಲ್ಲ. ' ಅಹಂ ' ಎಂಬುದು ' ವಿಚ್ಛೇದನ ಶೂನ್ಯತಾ '. ದೇಶ ಕಾಲಗಳಿಂದ ಬರುವ ಭೇದಜ್ಞಾನವನ್ನು ವಿಚ್ಛೇದನಮಾಡುವುದು, ಹೋಗಲಾಡಿಸುವುದು.

ಅಖಂಡವಾದ ಚಿತ್ತು ನಿಮುಗ್ನಾವಸ್ಥೆಯಿಂದ (ನಿರಾಕಾರಾವಸ್ಥೆ) ಉನ್ಮಗ್ನಾವಸ್ಥೆ (ಬಹಿರ್ಮುಖಾವಸ್ಥೆ)ಗೆ ಅಂದರೆ ಮಾಯಾ ಪ್ರಮಾತೃವಿನ ಆಕಾರವನ್ನು ತಳೆಯುವ ವೇಳೆಗೆ ಸ್ಮೃತಿಶಕ್ತಿಯಾಗಿ ಪರಿಣಮಿಸಿ, ವಿದ್ಯಾ-ಅವಿದ್ಯಾ ಸಂಕರದಿಂದ ತನ್ಮಯವಾಗುತ್ತದೆ. ದೇಶ ಕಾಲ ಆಕರಗಳಿಂದಲೂ ಕೂಡಿರುತ್ತದೆ. ಹೀಗೆ ಪರಿವರ್ತನವಾಗಿ ಬಹಿರ್ಮುಖ ವಾಗಿ ಶಬ್ದರೂಪವಾಗಿ ಈಚೆಗೆ ಬಂದದ್ದೇ **ಸ್ಮೃತಿಶಕ್ತಿ**.

ಶುದ್ಧಚಿತ್ತಾದ ಅಂತರ್ಮುಖವಾದ ಚಿತ್ತು ವಿಮರ್ಶಶಕ್ತಿಯೂ ಒಳಗಿನವು. ಇವೆರಡರ ಅಭಿವ್ಯಕ್ತರೂಪವಾದದ್ದೇ ಸ್ಮೃತಿ. ಜ್ಞಾನಶಕ್ತಿಯಿಂದ ನೀರಿನಲ್ಲಿ ತೇಲುವಂತೆ ಸ್ಮೃತಿಶಕ್ತಿಯು ಬಹಿರ್ಮುಖವಾಯಿತು.

ಅಪೋಹನಶಕ್ತಿ : ಸ್ಮೃತಿಶಕ್ತಿಯಿಂದ ಪರಿಚ್ಛಿನ್ನವಾಗಿ ಬಹಿರ್ಮುಖವಾಗಿ ಅಪೋಹನಶಕ್ತಿಯಾಗಿ ಉಚ್ಚರಿಸಲ್ಪಟ್ಟಿತು. ಚಿತ್ತಿನಲ್ಲಿರುವುದು ಅನಂತ. ವ್ಯವಹಾರದಲ್ಲಿ ಗ್ರಾಹ್ಯಗ್ರಾಹಕ ಭಾವರೂಪವಾಗಿರುವುದರಿಂದ ಸ್ಮರಿಸುವುದು ಸಾಧ್ಯ.

ಚಿತ್ತು ನಿಮುಗ್ನಾವಸ್ಥೆಯಲ್ಲಿ ಅಲೆಗಳಿಲ್ಲದಹಾಗೆ ನಿಸ್ತರಂಗವಾಗಿರುತ್ತದೆ. ಉನ್ಮಗ್ನಾ ವಸ್ಥೆಯಲ್ಲಿ ಜ್ಞಾನಶಕ್ತಿಯಾಗಿ ಪರಿಣಮಿಸಿದರೂ ಆಕಾರವಿಲ್ಲ. ಅದು ಬಹಿರ್ಮುಖವಾಗಿ ಸ್ಮೃತಿಶಕ್ತಿಯಾಗಿ ಆಕಾರವನ್ನು ತಾಳುತ್ತದೆ. ಅನಂತರ ಅಭಿಲಾಪ ಮಾಡುವಾಗ್ಗೆ ಶಬ್ದ ರೂಪವಾಗಿ ಈಚೆಗೆ ಬಂತು. ಅದು ಬುದ್ಧಿಮಟ್ಟದಲ್ಲಿ ನಮಗೆ ಸುಖದುಃಖಗಳನ್ನು ಗೋಚರಿಸುತ್ತದೆ. ಚಿತ್ತಿನ ಮೂಲಸ್ವರೂಪವು ಎಲ್ಲವನ್ನು ಒಳಗೊಂಡಿದ್ದರೂ ಅಲ್ಲಿ ಸುಖದುಃಖಗಳೆಂಬುದು ಕಂಡುಬರುವುದಿಲ್ಲ. ಎಲ್ಲಾ ಸುಖದುಃಖಗಳು ಕಂಡುಬರುವುದೂ ಜ್ಞಾನದಲ್ಲಿಯೇ ಹೊರತು ಅರ್ಥದಲ್ಲಲ್ಲ. ಸ್ಮೃತಿ ಅಭಿಲಾಪಗಳಿಂದಲೇ ಸುಖ ದುಃಖ ಗಳು ಗೋಚರವಾಗುವುವು. ಜ್ಞಾನ, ಸ್ಮೃತಿ, ಅಪೋಹನ ಶಕ್ತಿಗಳ ಮೂಲಕ ಈಶ್ವರನೇ ಜ್ಞಾನ, ಸ್ಮೃತಿ, ಅಪೋಹನ ಶಕ್ತಿಗಳನ್ನು ತನ್ನ ಸ್ವಾತಂತ್ರ್ಯದಿಂದಲೇ ನಡೆಸುತ್ತಾನೆ.

ಜ್ಞಾತೃ, ಜ್ಞೇಯ, ಪ್ರಮಾತೃ, ಪ್ರಮೇಯ ಇವುಗಳ ಮೂಲ ತತ್ತ್ವಗಳ ಶೋಧನೆಗೆ ಹೊರಟಾಗಲೇ ಒಂದು ಕಡೆ ಜ್ಞಾನದ ಉಪಕರಣಗಳಾದ ಇಂದ್ರಿಯಗಳು,

ಅಂತಃಕರಣವಾದ ಮನಸ್ಸು ಇವುಗಳ ಮೂಲವಾದ ಸಾಕ್ಷಿ ಮತ್ತು ಇವುಗಳ ಸ್ವರೂಪ ಪರಿಜ್ಞಾನವಾಗುವುದು. ಜ್ಞಾತೃ, ಜ್ಞೇಯಗಳ ರಹಸ್ಯವೇನೆಂಬುದೇ ಪ್ರತ್ಯಭಿಜ್ಞಾ ಶಾಸ್ತ್ರದ ವಿಮರ್ಶನೀಯ ವಿಷಯ. ಅನಂತ ವಿಶ್ವರೂಪನಾದ ಚಿಚ್ಛರೀರಿಯಾದ ಶಕ್ತಿಯುಳ್ಳ ಮಹೇಶ್ವರನು ಇಲ್ಲದೆ ಇದ್ದರೆ ಜ್ಞಾನ, ಸ್ಮೃತಿ, ಅಪೋಹನಶಕ್ತಿ ಇವು ಮೂರಕ್ಕೂ ಐಕ್ಯ ಹೇಗೆ ಸಂಭವಿಸೀತು ?

ಜ್ಞಾನವು ಒಳಗೂ ಹೊರಗೂ ಆಯಾ ಅನುಕೂಲಗಳಿಂದ ಪ್ರಕಾಶಿಸುತ್ತದೆ. ಜ್ಞಾನವಿಲ್ಲದೆ ಯಾವ ವಿಷಯವು ಯಾರಿಗೂ ತಿಳಿಯುವುದಿಲ್ಲ. ಆದುದರಿಂದ ಪದಾರ್ಥವು ಜ್ಞಾನಾತ್ಮಕವೆಂದೇ ಸಿದ್ಧವಾಗುತ್ತದೆ. ಇದು ಇದೆ, ಇದು ಇಲ್ಲ, ಇದನ್ನು ಮಾಡಬೇಕು, ಇದನ್ನು ಮಾಡಬಾರದು ಮೊದಲಾದುವುಗಳೆಲ್ಲಾ ಜ್ಞಾನಕ್ಕೆ ಸೇರಿದವುಗಳೇ ಹೊರತು ಜ್ಞೇಯಗಳಾದ ಪದಾರ್ಥಗಳಿಗೆ ಸೇರಿದವುಗಳಲ್ಲ. ಜ್ಞಾನ, ಜ್ಞೇಯ ಎರಡೂ ಒಂದೇ ಕಾಲದಲ್ಲಿ ಗೋಚರಿಸುವುದರಿಂದ ಒಂದೇ ರೂಪದಿಂದಿರುವುವು. ಕೇವಲ ಸೃಷ್ಟಿಯಲ್ಲಿ ಈ ವಿಶ್ವವು ನಿಜಶಕ್ತಿ ವಿಲಾಸರೂಪವಾಗಿದೆಯೆಂದು ಹೇಳಬೇಕಾಗಿಲ್ಲ.

ವ್ಯವಹಾರವೆಲ್ಲಾ ಜ್ಞಾನದಿಂದ ನಡೆಯುತ್ತದೆ. ಪದಾರ್ಥಗಳಿಲ್ಲದಿದ್ದರೂ ಪದಾರ್ಥಜ್ಞಾನವಿರುತ್ತದೆ. ಜ್ಞಾನಮಾತ್ರವೇ ನಮಗೆ ಗೋಚರಿಸುವುದು. ಜ್ಞಾನವಿಲ್ಲ ದಿದ್ದರೆ ಪದಾರ್ಥ ಇದ್ದರೂ ಇಲ್ಲದಹಾಗೆ. ಜ್ಞಾನದಿಂದ ಅನಂತವಾದ ವ್ಯವಹಾರ ಮಾಡುತ್ತೇವೆ. ನಮಗೆ ಪ್ರಾಪ್ತವಾಗುವ ಸುಖದುಃಖಗಳೆಲ್ಲವೂ ಜ್ಞಾನದಿಂದಲೇ ಹೊರತು ಪದಾರ್ಥಗಳಿಂದಲ್ಲ. ಉದಾಹರಣೆಗೆ ಮಕ್ಕಳಾಗಲಿಲ್ಲ ಅಂತ ದುಃಖವಿರ ಬಹುದು. ಮಕ್ಕಳು ಹುಟ್ಟಿ ಸತ್ತರೂ ಅಂತ ತಿಳಿದರೂ ದುಃಖ ಪ್ರಾಪ್ತಿಯಾಗು ತ್ತದೆ. ಈ ಸಂದರ್ಭಗಳಲ್ಲಿ ಪದಾಥಗಳಿಲ್ಲದಿದ್ದರೂ ದುಃಖ ಸುಖಗಳೇರ್ಪಡಬಹುದು. ನಮ್ಮ ಆಪ್ತರೊಬ್ಬರು ಸತ್ತುಹೋದರೆಂಬ ಸುದ್ದಿಯು ತಿಳಿಯದಿದ್ದರೆ ನಮಗೆ ದುಃಖವಿಲ್ಲ. ಅವರು ಬದುಕಿದ್ದರೂ ಯಾವನೋ ಒಬ್ಬನು ಬಂದು ಸತ್ತುಹೋದನೆಂದು ಹೇಳಿದರೆ ನಮಗೆ ದುಃಖವಾಗುತ್ತದೆ. ಕಾರಣ ಇಷ್ಟೆ. ಸ್ಮೃತಿಶಕ್ತಿಯು ಸುಪ್ತಾವಸ್ಥೆಯಲ್ಲಿರು ವುದನ್ನು ಬಹಿರ್ಮುಖಮಾಡುವುದು. ಇಂತಹ ಸಂದರ್ಭಗಳಲ್ಲಿ ಜ್ಞಾನವೇ ಸುಖಗಳಿಗೆ ಕಾರಣವಾಗುತ್ತದೆ. ಪದಾರ್ಥವು ವಸ್ತುತಃ ಸ್ವಸ್ವರೂಪದಿಂದ ದುಃಖವೂ ಅಲ್ಲ, ಸುಖವೂ ಅಲ್ಲ. ಅದು ಜ್ಞಾನಕ್ಕೆ ಸಂಬಂಧಿಸಿದಾಗಲೇ, ಶರೀರಕ್ಕೆ ಸಂಬಂಧಿಸಿದಾಗಲೇ ನಮಗೆ ಸುಖವೋ ದುಃಖವೋ ಗೋಚರಿಸುವುದು. ನಮಗೆ ಒಂದು ವಿಷಯ ತಿಳಿಯುವುದ ರಿಂದಾಗಲಿ, ಸಂಶಯದಿಂದಾಗಲಿ, ತಪ್ಪುತಿಳಿವಳಿಕೆಯಿಂದಾಗಲಿ ತಿಳಿಯುವುದರಿಂದ ನಮಗೆ ದುಃಖಗಳು ಪ್ರಾಪ್ತವಾಗುತ್ತವೆ. ಹಾಗೆಯೇ ಊಹಿಸಿಕೊಂಡು ಕಳೆದದ್ದನ್ನು ನೆನೆದುಕೊಂಡು ನಾವು ದುಃಖವನ್ನೋ ಸುಖವನ್ನೋ ಅನುಭವಿಸುತ್ತೇವೆ. ಹಾಗೆಯೇ ಒಬ್ಬನಿಗೆ ಸುಖವಾಗಿರುವುದು ಇನ್ನೊಬ್ಬನಿಗೆ ದುಃಖವಾಗಿ ಪರಿಣಮಿಸಬಹುದು. ಸುಖ ದುಃಖಗಳು ತ್ರೈಕಾಲಿಕವಾಗಿವೆ. ಇದರಲ್ಲಿ ಹಿಂದಿನದನ್ನು ಮುಂದಿನದನ್ನು ನೆನೆದು ಸುಖದುಃಖಗಳನ್ನನುಭವಿಸುತ್ತೇವೆ. ಇದರಲ್ಲಿ ವರ್ತಮಾನಕಾಲದ್ದು ಸ್ವಲ್ಪ. ಅನುಕೂಲ

ವೇದನೆಯು ಸುಖ, ಪ್ರತಿಕೂಲತೆಯು ದುಃಖ. ಸುಖದ ಅನುಭವಕ್ಕಿಂತಲೂ ಸುಖವನ್ನು ನೆನೆಯುವುದರಲ್ಲಿ ಸುಖವನ್ನು ಅಪೇಕ್ಷಿಸುತ್ತೇವೆ. ನಿಜವಾದ ಸುಖ ಪ್ರಾಪಂಚಿಕವಾದ ಪದಾರ್ಥಗಳ ಸಂಬಂಧದಿಂದ ಬಾರದಿರಬಹುದು. ಇಂದ್ರಿಯಗಳಿಂದ ಅಥವಾ ಮನಸ್ಸಿನಿಂದಲೇ ಬರುವ ಸುಖದುಃಖಗಳು ಕ್ಷಣಿಕವಾದವುಗಳು, ದುಃಖಮಿಶ್ರವಾದವುಗಳು. ನಿಜವಾದ ಸುಖವು ಪ್ರಾಪಂಚಿಕವಾದ ಪದಾರ್ಥಗಳ ಸಂಬಂಧದಿಂದಲೇ ಬರುವುದಿಲ್ಲ. ಅದು ಜ್ಞಾನರೂಪವಾದದ್ದು. ಸುಖದುಃಖಗಳು ಒಳಗೇ ಇವೆ. ಜ್ಞಾನ ವಿಕಾಸವೇ ಸುಖ. ಸಂತೋಷವು ಕ್ಷಣಿಕವಾದದ್ದು. ಆನಂದವು ಅಂದರೆ ಸ್ವಾತ್ಮಾನಂದವು ತೃಪ್ತಿಯಿಂದ ಪ್ರಾಪ್ತವಾಗತಕ್ಕದ್ದು.

ಶಿವಸೂತ್ರಗಳಲ್ಲಿ ಬೇರೆ ಬೇರೆ ಪ್ರಕರಣಗಳಲ್ಲಿ ಒಂದೇ ಪದವನ್ನು ಬಗೆಬಗೆಯ ಅರ್ಥದಲ್ಲಿ ಬಳಸಿರುವುದನ್ನು ಕಾಣಬಹುದು. ಇಲ್ಲಿ ಒಂದು ಪದಕ್ಕೆ ನಿರ್ದಿಷ್ಟವಾದ ಒಂದೇ ಅರ್ಥವನ್ನಿಟ್ಟುಕೊಂಡು ತಾತ್ಪರ್ಯವನ್ನು ನಿರ್ಣಯಿಸುವುದಕ್ಕಾಗುವುದಿಲ್ಲ. ಪ್ರಕರಣವಶಾತ್ ಪದಗಳ ಅರ್ಥವು ಬೇರೆಬೇರೆಯಾಗಿರುತ್ತದೆ. ಉದಾಹರಣೆಗೆ ಶಿವಸೂತ್ರಗಳಲ್ಲಿ ಪ್ರಯೋಗಿಸಿರುವ 'ಜ್ಞಾನ' ಎಂಬ ಪದವನ್ನು ತೆಗೆದುಕೊಳ್ಳಬಹುದು. ಜ್ಞಾನ ಪದವು ನಾಲ್ಕು ಕಡೆ ನಾಲ್ಕು ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು.

ಜ್ಞಾನಂಬಂಧಃ : ಎನ್ನುವ ಸೂತ್ರದಲ್ಲಿ 'ಜ್ಞಾನಂ' ಎಂಬ ಪದವನ್ನು ಶಿವನು ತನ್ನ ಸ್ವಾತಂತ್ರ್ಯಶಕ್ತಿಯಿಂದ ಸಂಕೋಚ ಮಾಡಿಕೊಂಡಿರುವ "ಅಖ್ಯಾತಿ" ಎಂಬರ್ಥದಲ್ಲಿ ಉಪಯೋಗಿಸಿದೆ.

ಜ್ಞಾನಂಜಾಗ್ರತ್ : ಎನ್ನುವ ಸೂತ್ರದಲ್ಲಿ ಬಾಹ್ಯೇಂದ್ರಿಯಗಳಿಂದುಟಾಗುವ ತಿಳಿವಳಿಕೆಯುಳ್ಳ ಸ್ಥಿತಿ ಎಂದು ಅರ್ಥವಾಗುತ್ತದೆ.

ಜ್ಞಾನಮನ್ನಂ : ಎಂಬ ಸೂತ್ರವು ಸ್ವಸ್ವರೂಪ ವಿಮರ್ಶೆಯೇ ಯೋಗಿಗೆ ತೃಪ್ತಿಸಾಧನವೆಂದು ತಿಳಿಯಪಡಿಸುತ್ತದೆ.

ಜ್ಞಾನಾಧಿಷ್ಠಾನಂ ಮಾತೃಕಾ: ಎನ್ನುವುದರಲ್ಲಿ ನಮ್ಮ ವ್ಯವಹಾರಕ್ಕೆ ಕಾರಣವಾಗಿರುವ 'ಅ' ಕಾರದಿಂದ 'ಹ' ಕಾರದವರೆಗಿರುವ ೫೧ ಅಕ್ಷರಗಳೇ ನಮಗೆ ಸಂಕುಚಿತವಾದ ಜ್ಞಾನವನ್ನುಂಟುಮಾಡುವುದಕ್ಕೆ ಕಾರಣವಾಗುತ್ತದೆ ಎಂಬ ಸೂಚನೆಯಿದೆ.

ಹೀಗೆಯೇ ಶಿವಸೂತ್ರಗಳಲ್ಲಿ ಉಪಯೋಗಿಸಲ್ಪಟ್ಟಿರುವ ಚಿತ್ತ, ಚೈತನ್ಯ, ಪ್ರಾಣ ಮೊದಲಾದ ಪದಗಳ ಅರ್ಥವು ಸಂದರ್ಭೋಚಿತವಾಗಿ ಬೇರೆಬೇರೆಯಾಗಿ ಕಾಣುವುದನ್ನು ಗಮನಿಸಬಹುದು.

ನಿಜವಾದ ಸುಖವು ಪ್ರಾಪಂಚಿಕವಾದ ಪದಾರ್ಥಗಳ ಸಂಬಂಧದಿಂದಲೇ ಬರುವುದಿಲ್ಲ. ಅದು ಜ್ಞಾನರೂಪವಾದದ್ದು. ಸುಖದುಃಖಗಳು ಒಳಗೇ ಇವೆ. ಜ್ಞಾನ ವಿಕಾಸವೇ ಸುಖ.

ಏತೆ ಸಂಸ್ಪರ್ಶಜಾಭೋಗಾಹದುಃಖವ್ರೋ ನಯಹೇವತೇ
ಆದ್ಯಂತವಂತಹ ಕೌಂತೇಯು ನ ಕೇಶುರ ಮತೇ ಬುಧಹಾ

ಈ ಸುಖದುಃಖಗಳು ಆದಿ ಅಂತ ಇರುವಂತಹವುಗಳು. ದುಃಖವನ್ನುಂಟು ಮಾಡುವವುಗಳು. ಆದ್ದರಿಂದ ಬುದ್ಧಿವಂತನು ಅದರಲ್ಲಿಯೇ ತೃಪ್ತಿಪಡುವುದಿಲ್ಲ. ನಿಜವಾದ ಸುಖವು ಪ್ರಾಪಂಚಿಕವಾದ ಪದಾರ್ಥಗಳ ಸಂಬಂಧದಿಂದಲೇ ಬರುವುದಿಲ್ಲ. ಅದು ಜ್ಞಾನರೂಪವಾದುದು.

ಅವಭಾಸ-ಆಭಾಸದೃಷ್ಟಿ

ವರ್ತಮಾನಕಾಲದ ವಿಷಯ ಜ್ಞಾನಗಳು ಮೊದಲು ಪ್ರಮಾತೃವಿನಲ್ಲಿ ಇದ್ದೇ ಇರುತ್ತವೆ, ಅವೇ ಹೊರಗೆ ತೋರುತ್ತವೆ. ಇರುವುದೇ ತೋರುವುದರಿಂದ ಅವಭಾಸ ಅಥವಾ ಆಭಾಸ ಎನ್ನಿಸಿಕೊಳ್ಳುತ್ತದೆ. ಇದರ ಮುಖ್ಯ ಲಕ್ಷಣ ಅಸಾಂಕರ್ಯ. ಅಸಾಂಕರ್ಯ ಅಂದರೆ ನಮಗೆ ಉಂಟಾಗುವ ಅಥವಾ ತೋರುವ ತಿಳಿವಳಿಕೆಗಳು ಪರಸ್ಪರ ವಿರುದ್ಧವಾಗಿರಲಿ ಅಥವಾ ಬೇರೆ ಬೇರೆ ಇರಲಿ, ಒಂದರೊಡನೆ ಇನ್ನೊಂದು ಇರುವುದು. ಸಾಂಕರ್ಯ ವೇರ್ಪಡಬೇಕಾದರೆ ಎರಡು ಜಾತಿಯ ಪದಾರ್ಥಗಳು ಒಕ್ಕೂಟವಾಗಬೇಕು. ಇಲ್ಲಿ ಪದಾರ್ಥಗಳ ತಿಳಿವಳಿಕೆಗಳು (ಭಾವಾವಭಾಸಗಳು) ಬೇರೆಬೇರೆಯಾಗಿ ಗ್ರಾಹ್ಯದೃಷ್ಟಿಯಿಂದ ತೋರುತ್ತವೆ. ಆದರೂ ಅವಭಾಸಸ್ಥಿತಿ ಮತ್ತು ಆಶಯ ಏಕರೂಪವಾಗಿರುವುದರಿಂದ ಅಭಿನ್ನವಾಗಿರುತ್ತವೆ. ಪ್ರಕಾಶ್ಯವಾದ ಪದಾರ್ಥ ಬೇರೆಯಾಗಿದ್ದರೂ ಪ್ರಕಾಶ ಮಾತ್ರ ಅಭಿನ್ನವಾಗಿರುತ್ತದೆ. ಆದುದರಿಂದ ನಮಗುಂಟಾಗುವ ಪದಾರ್ಥಗಳ ತಿಳಿವಳಿಕೆಯು ಅನುಮಾನವೂ ಅಲ್ಲ, ವಾಸನಾಪ್ರಬೋಧವೂ ಅಲ್ಲ.

ಚಿದಾತ್ಮಕನಾದ ಪ್ರಮಾತೃವು ಯಾವ ಸಾಧನೆಗಳಿಲ್ಲದಿದ್ದರೂ ತನ್ನಲ್ಲಿರುವ ಅನಂತವಾದ ವಿಶ್ವವನ್ನು ತೋರ್ಪಡಿಸುತ್ತಾನೆ. ಇದು ಆತನ ಇಚ್ಛಾಶಕ್ತಿಯ ವಿಲಾಸ. ಯೋಗಿಗಳು ಸಿದ್ಧರು ತಮ್ಮ ಇಚ್ಛೆಯಿಂದಲೇ ಲೋಕಗಳನ್ನೇ ಸೃಷ್ಟಿಮಾಡಿದರು ಎಂಬ ಕಥೆಗಳಿವೆ. ಅದರಂತೆಯೇ ವಸ್ತುಗಳ ಅವಭಾಸಗಳು ಒಳಗಿರುವವುಗಳೇ ಹೊರಗೆ ತೋರುತ್ತವೆ.

ವರ್ತಮಾನಾವಭಾಸಾನಾಂ ಭಾವಾನಾಮವಭಾಸನಂ ।
ಅಂತಸ್ಥಿತವತಾಮೇವ ಘಟತೇ ಬಹಿರಾತ್ಮನಾ ॥
ಚಿದಾತ್ಮೈವ ಹಿ ದೇವೋಽಂತಸ್ಥಿತಮಿಚ್ಛಾವಶಾದ್ಬಹಿಃ ।
ಯೋಗೀವ ನಿರುಪಾದಾನಮರ್ಥಜಾತಃ ಪ್ರಕಾಶಯೇತ್ ॥

(ಈ. ಪ್ರ. ಅಧ್ಯಾಯ ೧, ಆಹ್ನಿಕ ೫, ಕಾರಿಕಾ ೧, ೭)

ಪ್ರಮಾತೃವು ತನ್ನಲ್ಲಿರುವ ಭಾವಗಳನ್ನು ಅಂತಃಪರಿಶೀಲಿಸುವಿಕೆಯೇ ವಿಮರ್ಶೆ ಎನ್ನಿಸುತ್ತದೆ.

ಈ ವಿಮರ್ಶನೆಯು ಚಿತ್ತಿನ ಕ್ರಿಯೆ. ಜಡಪದಾರ್ಥಗಳಿಗೂ ಚೇತನತತ್ತ್ವಕ್ಕೂ ಇರುವ ವ್ಯತ್ಯಾಸವೇ ಇದು. ಜಡವಾಗಿರುವ ಕಲ್ಲು ನಾನು ಎಂದು ತನ್ನನ್ನು ವಿಮರ್ಶಿಸಿ

ಕೊಳ್ಳುವುದಿಲ್ಲ. ಚಿದ್ವಿಮರ್ಶನೆ ಅಲ್ಲಿಲ್ಲ ಎಂದು ತಾತ್ಪರ್ಯ. ನಾನು ಅಪರಿಚ್ಛಿನ್ನವಾಗಿರುವೆನೆಂದು ವಿಮರ್ಶನೆ ಇಲ್ಲದಿರುವುದರಿಂದ ಇದು ಜಡವಾಗಿರುವುದು. ಇದಕ್ಕೆ ವಿಶುದ್ಧವಾಗಿರುವುದು ಪ್ರಮಾತೃವು. ಇವನು ತನ್ನನ್ನು 'ಅಹಂ' ಎಂದು ವಿಮರ್ಶಿಸುವನು. ಈ ಜಡವಾದ ಪ್ರಪಂಚಗಳನ್ನು 'ಇದಂ' ಎಂದು ವಿಮರ್ಶಿಸುವನು. ಈ ವಿಮರ್ಶಶಕ್ತಿಯ ವಿಲಾಸವು ಅನಂತವಾದುದು.

ಈ ವಿಮರ್ಶನಶಕ್ತಿಯು ಅಂತರ್ಯವಾಗಿ ಅಭಿಲಾಪಾತ್ಮಕ ಸ್ಥಿತಿಯನ್ನು ಪಡೆಯುತ್ತದೆ.

ಚಿತಿಃ ಪ್ರತ್ಯವಮರ್ಶಾತ್ಮಾ ಪರಾವಾಕ್ ಸ್ವರಸೋದಿತಾ ।
ಸ್ವಾತಂತ್ರ್ಯಮೇತನ್ಮುಖ್ಯಂ ತದೈಶ್ವರ್ಯಂ ಪರಮಾತ್ಮನಃ ॥
ಸಾಸ್ಫುರತ್ತಾ ಮಹಾಸತ್ತಾ ದೇಶಕಾಲಾ ವಿಶೇಷಿಣೀ ।
ಸೈಷಾ ಸಾರತಯಾ ಪ್ರೋಕ್ತಾ ಹೃದಯಂ ಪರಮೇಷ್ಠಿನಃ ॥

(ಈ. ಪ್ರ. ಅಧ್ಯಾಯ ೧, ಆಹ್ನಿಕ ೫, ಕಾರಿಕಾ ೧೩–೧೪)

ಆ ಸ್ಥಿತಿಯಲ್ಲಿ ಇದು ನಾವೆಲ್ಲಾ ಬಳಕೆಯಲ್ಲಿಟ್ಟುಕೊಂಡಿರುವ ಶಬ್ದರೂಪವನ್ನು ಪಡೆಯದೆ ಆಕೂತರೂಪದಲ್ಲಿರುತ್ತದೆ, ಅಭಿನ್ನವಾಗಿಯೂ ಇರುತ್ತದೆ. ಇದು ಮಾಯೀಯ ಸಂಕೇತಗಳಾಗಿರುವ ಅಕ್ಷರಗಳ ಸಮವಾಯವಾದ ವ್ಯವಹಾರಕ್ಕೆ ಕಾರಣವಾಗಿರುತ್ತದೆ. ಅದರ ಉಗಮ ಅಭಿವ್ಯಕ್ತಿಗಳು ಸ್ವಾತಂತ್ರ್ಯ ಸ್ವರೂಪ ಸ್ವಭಾವಗಳು. ಇಲ್ಲಿ ಪರಾಪೇಕ್ಷೆ ಇಲ್ಲ. ಆಗಮಗಳಲ್ಲಿ ಇದರ ವಿಷಯ ವಿಸ್ತಾರವಾಗಿ ಉಲ್ಲೇಖಿಸಿರುತ್ತದೆ. ಈ ಪದಾರ್ಥವು ನನಗೆ ತೋರುತ್ತದೆ ಅಂದರೆ ಇದು ನನ್ನ ಜ್ಞಾನಶಕ್ತಿಯ ಸ್ಫುರಣ ಎಂದು ತಾತ್ಪರ್ಯ. ಇದೇ ಸ್ಪಂದ. ಹೀಗೆ ಸ್ಪಂದ ಅಂದರೆ 'ಈಶಚ್ಚಲನ' ಎಂದರ್ಥ. ಅಲ್ಪಾಂಶಸ್ಫುರಣದಿಂದ ವಿಭಿನ್ನವಾದ ಪದಾರ್ಥಜ್ಞಾನವುಂಟಾಗುತ್ತದೆ.

ಈ ವಿಮರ್ಶಶಕ್ತಿಯೇ ಮಾಯಾಶಕ್ತಿರೂಪದಿಂದ ಹೊರಹೊಮ್ಮುತ್ತದೆ. ಆಗ ಭೇದಜ್ಞಾನವನ್ನು ತೋರ್ಪಡಿಸುತ್ತಾ ಜ್ಞಾನಸಂಕಲ್ಪ ಅಧ್ಯವಸಾಯ ಮೊದಲಾದ ಪದಗಳಿಂದ ವ್ಯವಹಾರದಲ್ಲಿ ಗೋಚರಿಸುತ್ತದೆ. ನಮಗೆ ಬರುವ ತಿಳಿವಳಿಕೆಗಳನ್ನು ಸೂಕ್ಷ್ಮವಾಗಿ ವಿಮರ್ಶೆಮಾಡಿದರೆ ಎರಡು ಅಂಶಗಳು ಎದ್ದು ಕಾಣುತ್ತವೆ. ನಾಮ ಮತ್ತು ರೂಪಗಳಿಂದ ಅಳೆಯಲು ಸಾಧ್ಯವಿಲ್ಲದೆ ಕೇವಲ ಸತ್ತಾಮಾತ್ರವಾಗಿ ಗೋಚರಿಸುವ ತಿಳಿವಳಿಕೆ ಇನ್ನೊಂದು. ಸತ್ ಎಂಬ ಪದಕ್ಕೆ ನಿರ್ದಿಷ್ಟವಾದ ಅರ್ಥವನ್ನು ಹೇಳಲಿಕ್ಕಾಗುವುದಿಲ್ಲ. ಸತ್ ಎಂದರೆ ಇರುವಿಕೆ ಎಂದರ್ಥ. ಇದು ಎಲ್ಲಾ ಪದಾರ್ಥಗಳಿಗೂ ಅನ್ವಯಿಸುತ್ತದೆ. ಆದರೆ ನಿರೂಪಿಸುವುದಕ್ಕಾಗುವುದಿಲ್ಲ. ನಮ್ಮ ವ್ಯವಹಾರ ಜ್ಞಾನವು ನಾಮರೂಪಗಳಿಲ್ಲದ ತತ್ತ್ವವನ್ನು ಗ್ರಹಿಸಲಾರದು. 'ಸತ್' ವ್ಯವಹಾರ ಜ್ಞಾನದಲ್ಲಿಯೂ ಇದೆ, ತೋರುತ್ತದೆ. ಆದುದರಿಂದ ಹಿರಿಯರು 'ಅಸ್ತಿ, ಭಾತಿ, ಪ್ರಿಯಂ, ನಾಮ, ರೂಪಂ' ಎಂಬ ಐದು ಅಂಶಗಳು ವ್ಯವಹಾರಕ್ಕೆ ಗೋಚರಿಸುವ ಪದಾರ್ಥಗಳಲ್ಲಿರುತ್ತವೆ ಎಂದು ಹೇಳಿರುತ್ತಾರೆ. ಪ್ರಿಯಂ, ನಾಮ, ರೂಪ ಇವು ಮೂರೂ ಗ್ರಾಹ್ಯಾಂಶಗಳು. ಅಸ್ತಿ, ಭಾತಿ

ಎಂಬಿವು ಪರತತ್ತ್ವಕ್ಕೆ ಸಂಬಂಧಪಟ್ಟವುಗಳು. ಸತ್ತಾಮಾತ್ರ ಎನ್ನುವುದು ದೇಶ ಕಾಲಗಳಿಗೆ ಒಳಪಡದ ವಿಷಯವೂ ಹೌದು, ದೇಶಕಾಲಗಳೊಡನೆ ಕೂಡಿರುವುದೂ ಹೌದು. ಸತ್ತಾಮಾತ್ರವಾಗಿರುವ ಆ ತತ್ತ್ವವು ನಾಮರೂಪಗಳಿಂದ 'ಇದಂ' ರೂಪವಾಗಿ ತೋರುವುದಿಲ್ಲ. ಆದರೆ ಜ್ಞಾನ ಸ್ಮೃತಿ ಅಪೋಹನ ಶಕ್ತಿಗಳಿಂದ 'ಇದಂ' ರೂಪವಾಗಿಯೂ ಭಿನ್ನವಾಗಿಯೂ ತೋರುತ್ತದೆ.

ಘಟೋಽಯಮಿತ್ಯಧ್ಯವಸಾ ನಾಮರೂಪಾತಿರೇಕಿಣೀ ।
ಪರೇಶಶಕ್ತಿರಾತ್ಮೇವ ಭಾಸತೇ ನ ತ್ವಿದಂತಯಾ ॥
ಕೇವಲಂ ಭಿನ್ನಸಂವೇದ್ಯದೇಶಕಾಲಾನುರೋಧತಃ ।
ಜ್ಞಾನಸ್ಮೃತ್ಯವಸಾಯಾದಿ ಸಕ್ರಮಂ ಪ್ರತಿಭಾಸತೇ ॥

(ಈ. ಪ್ರ. ಅಧ್ಯಾಯ ೧, ಅಹ್ನಿಕ ೫, ಕಾರಿಕಾ ೨೦-೨೧).

ಇದರಿಂದ ಅನಂತವಾದ ಅವಭಾಸಗಳು ಆ ಚಿಚ್ಛಕ್ತಿಯ ವಿಲಾಸಗಳೆಂದು ಸಿದ್ಧವಾಗುತ್ತದೆ.

ವಿಕಲ್ಪಗಳು

ವಿಕಲ್ಪಕ್ಕೆ ಸಂಸ್ಕಾರವಾಗಿ ಅದಕ್ಕೆ ಪ್ರತಿಯಿಲ್ಲದ ಸ್ಥಿತಿಯಲ್ಲಿ ನಿಂತರೆ ಅದು ಭೋಗಕ್ಕೂ ಮೋಕ್ಷಕ್ಕೂ ;ಕಾರಣವಾಗುತ್ತದೆ. ಭೂತ ಭವಿಷ್ಯ ವರ್ತಮಾನದ್ದು ಜ್ಞಾಪಕಕ್ಕೆ ಬಂದು ವಿಕಲ್ಪವುಂಟಾಗುತ್ತದೆ. ವಿಕಲ್ಪವೆಂದರೆ ಬೇರೆಬೇರೆಯಾಗಿ ಬರುವ ಚಿತ್ತವೃತ್ತಿಗಳು. ಸಂಸ್ಕಾರವೆಂದರೆ ಪ್ರವಾಹರೂಪವಾದ ವೃತ್ತಿಗಳನ್ನು ನಮ್ಮ ಅನುಕೂಲಕ್ಕನುಸಾರವಾಗಿ ಪಳಗಿಸುವುದು. ವೃತ್ತಿಗಳು ಕಲ್ಪಿತವಾಗಿರಬಹುದು ಅಕಲ್ಪಿತವಾಗಿರಬಹುದು. ಅಕಲ್ಪಿತವಾಗಿರುವ ಸ್ಥಿತಿ ಯೋಚಿದನುಭವ. ಕಲ್ಪಿತವೃತ್ತಿಗಳಲ್ಲಿ ಈ ವಿಶ್ವವೆಲ್ಲಾ ಈಶ್ವರಮಯವೆಂಬ ರೀತಿಯಲ್ಲಿ ಅಕಲ್ಪಿತವಾದ ಅಖಂಡ ಚಿತ್ಸ್ವರೂಪವನ್ನು ಅನುಸಂಧಾನ ಮಾಡುವುದು ಒಂದು ಬಗೆ. ಎಲ್ಲಾ ಈಶ್ವರಮಯವೆಂಬ ತೆರೆಹಾಕಿ ಅಕಲ್ಪಿತವೃತ್ತಿಯನ್ನು ಅನುಸಂಧಾನ ಮಾಡುವುದೇ ಧ್ಯಾನ. ಈ ರೀತಿ ವಿಕಲ್ಪ ಸಂಸ್ಕಾರಗಳು ಕೆಲವರಿಗೆ ಸ್ವತಃ ಸಿದ್ಧವಾಗಬಹುದು. ಬೇರೆ ರೀತಿ ವಿಕಲ್ಪಗಳ ಸಂಸ್ಕಾರಗಳನ್ನು ಪಡೆಯುವ ರೀತಿಯನ್ನು ಶಾಕ್ತೋಪಾಯದ ರೀತಿಯಲ್ಲಿ ಅನುಸರಿಸಬಹುದು.

ಆಣವೋಪಾಯಕ್ಕೆ ಸೇರಿದ ಈ ನಾಲ್ಕು ಮೆಟ್ಟಿಲುಗಳಲ್ಲಿ ಸಾಧನೆಮಾಡಿ ವಿಕಲ್ಪ ಸಂಸ್ಕಾರ ಮಾಡಿಕೊಳ್ಳಬಹುದು. ದೇಹಗತವಾದ ಆಸನ ಪ್ರಾಣಾಯಾಮಾದಿಗಳು ದೇಹಸಾಧನಗಳು. ಇಂದ್ರಿಯಗತವಾದ ಉಪಾಯಗಳು ಪ್ರತ್ಯಾಹಾರ್ಯ. ಬುದ್ಧಿಧ್ಯಾನಾದಿಗಳು ಉಪಾಯಗಳಾಗಿ ಪರಿಣಮಿಸುತ್ತವೆ. ಪ್ರಾಣಶಕ್ತಿಯಿಂದ ಅನಚ್ಕ ಉಚ್ಚಾರಣಾದಿಗಳಿಂದ ಸಂಸ್ಕರಿಸಿಕೊಳ್ಳಬಹುದು. ಸಾಧಕನಿಗೆ ಯಾವುದು ಪ್ರತಿಬಂಧಕ ಎಂದು ವಿಚಾರ ಮಾಡಿ ಯಾವುದು ಪ್ರತಿಬಂಧಕವೋ ಅದನ್ನು ಹದಮಾಡಿ ಸಾಧಿಸಬಹುದು.

ಉಪಾಯುಗಳು ಅನೇಕವಾಗಿವೆ. ಕೆಲವು ದೂರವಾಗಿವೆ, ಕೆಲವು ಹತ್ತಿರವಾಗಿವೆ. ಚಿತ್ತಿನ ಹತ್ತಿರವಿರುವುದು ಪ್ರಾಣಶಕ್ತಿ. ಆದರಿಂದ ಉಚ್ಚಾರಣೆ ಮುಂತಾದುವುಗಳು ನಡೆಯುತ್ತವೆ. ಸ್ವಲ್ಪ ದೂರವಾಗಿರತಕ್ಕದ್ದು ಬುದ್ಧಿ. ಇದು ಧ್ಯಾನಾದಿಗಳಿಗೆ ಉಪಕರಿಸು ತ್ತದೆ. ಇನ್ನೂ ದೂರವಾಗಿರುವುದು ಇಂದ್ರಿಯಗಳು. ಇವುಗಳು ವಿಕಲ್ಪ ಸಂಸ್ಕಾರಕ್ಕೆ ಉಪಕರಿಸುತ್ತವೆ.

ಬುದ್ಧಿರ್ಧ್ಯಾನಮಯೀ ತತ್ರ ಪ್ರಾಣ ಉಚ್ಚಾರಣಾತ್ಮಕಃ ।
ಉಚ್ಚಾರಣಂ ಚ ಪ್ರಾಣಾದ್ಯಾಃ ವ್ಯಾನಾಂತಾಃ ಪಂಚವೃತ್ತಯಃ ।
ಆದ್ಯಾ ತು ಪ್ರಾಣನಾಭಿಖ್ಯಾ ಪರೋಚ್ಚಾರಾತ್ಮಿಕಾ ಭವೇತ್ ।

ಪ್ರಾಣಶಕ್ತಿ ಎರಡುಬಗೆಯಾಗಿದೆ. ಒಂದು ಜೀವನ ಮಾತ್ರ ರೂಪದ್ದು. ಇನ್ನೊಂದು ಉಚ್ಚಾರಣೆಗೆ ಆಶ್ರಯವಾಗಿ ಶಬ್ದ ರೂಪವಾಗಿರುವುದು.

ಹೃದಿ ಪ್ರಾಣಃ ಗುದೆ ಅಪಾನಃ ವ್ಯಾನಃ ಸರ್ವ ಶರೀರಕಃ
ಉದಾನಕಂಠದೇಶಸ್ಥೋ ಸಮಾನೋನಾಭಿ ಸಂಸ್ಥಿತಃ ॥

ಶುದ್ಧವಾದ ಚಿತ್ತಿನ ವಿಮರ್ಶೆಯು ‘ ಅಹಂ ಪ್ರತ್ಯವಮರ್ಶೆ ’ ಎನ್ನಿಸುತ್ತದೆ. ಇದು ಸ್ವಯಂಪ್ರಕಾಶವಾಗಿದ್ದರೂ ವಾಕ್ಕಿನ ಮೂಲಕ ಹೊರಹೊಮ್ಮುವುದಾಗಿರುತ್ತದೆ. ಅಭಿ ಲಾಪರೂಪವಾದ ವಾಕ್ಕಿನಿಂದ ವಿಶೇಷ ವಿಕಲ್ಪಗಳು ಹೊರಹೊಮ್ಮುತ್ತವೆ. ವಿಕಲ್ಪ ವುಂಟಾಗಬೇಕಾದರೆ ಒಂದು ವಿಷಯ ಬೇಕು. ಅಂದರೆ ಚಿತ್ತಿನ ಸ್ಫುರಣವು ಆ ವಿಷಯ ದಾಕಾರದಂತೆ ಪರಿಚ್ಛಿನ್ನವಾಗಬೇಕು. ಈ ರೀತಿಯಾದ ಸಂಕೋಚವುಂಟಾದಾಗ ವಿಕಲ್ಪ ವೃತ್ತಿಗಳುಂಟಾಗುತ್ತವೆ. ಇದು ಅಪೋಹನ ಶಕ್ತಿಯ ವಿಲಾಸ. ಕೇವಲ ವಿಷಯ ಜ್ಞಾನ ವೃತ್ತಿಗಳು ಮಾತ್ರ ವಿಕಲ್ಪಗಳಲ್ಲ. ಸಾಮಾನ್ಯವಾಗಿ ಉಂಟಾಗುವ ತಿಳಿವಳಿಕೆಗಳೂ ಹಿಂದೆ ಕಾಲಾಂತರದಲ್ಲಿ ಉಂಟಾದ ತಿಳಿವಳಿಕೆಗಳೂ ವಿಕಲ್ಪಗಳೇ ಆಗಿರುತ್ತವೆ. ಸಂಸ್ಕಾರ ದಿಂದ ನೆನವು ಉಂಟಾಗುತ್ತದೆ ಎಂಬ ಮಾತೂ ಕೂಡ ಬೇರೆ ಬೇರೆಯಾಗಿ ತೋರಿದ ವಿಕಲ್ಪಗಳೇ. ಇವಲ್ಲದೆ ಮರ, ಬಳ್ಳಿ, ಪರ್ವತ, ನದಿ ಈ ರೀತಿಯಾಗಿ ಬೇರೆ ಬೇರೆಯಾ ಗಿರುವ ತಿಳಿವಳಿಕೆಗಳೂ ವಿಕಲ್ಪಗಳೇ ಆಗಿರುತ್ತವೆ. ವ್ಯವಹಾರದಲ್ಲಿ ಇವನು ಮನುಷ್ಯ, ಇವನು ಮನುಷ್ಯನಲ್ಲ, ಇದುಸರಿ, ಇದುತಪ್ಪು ಎನ್ನುವ ವಿಧಿ ನಿಷೇಧರೂಪವಾದ ತಿಳಿವಳಿಕೆಗಳೂ ವಿಕಲ್ಪಗಳೇ ಆಗಿವೆ. ಚಿತ್ತತ್ತ್ವವು ತನ್ನ ಮಾಯಾಶಕ್ತಿಯಿಂದ ಅನೇಕ ಮುಖದಿಂದ ಅಭೇದವ್ಯಾಪ್ತಿಯನ್ನು ಮಾಡುತ್ತದೆ. ಆದುದರಿಂದ ನಾವು ಶರೀರದಲ್ಲಿ, ಬುದ್ಧಿಯಲ್ಲಿ, ಪ್ರಾಣ ಮೊದಲಾದ ಪದಾರ್ಥ ವಿಭಾಗಗಳಲ್ಲಿ ಆಕಾಶವನ್ನು ಬೇರೆ ಬೇರೆ ಯಾಗಿ ಪರಿಗಣಿಸಿ ನೋಡುತ್ತೇವೆ. ದೇಶಭೇದದಿಂದ ನಾವು ಆಕಾಶವನ್ನೂ ಸಮುದ್ರ ವನ್ನೂ ಬೇರೆ ಬೇರೆಯಾಗಿ ಎಣಿಸುತ್ತೇವೆ. ವಿಶ್ವವು ಅಭಿನ್ನವಾಗಿದ್ದರೂ ‘ ಅಹಂ ’ (ನಾನು)ಇತರ ವಸ್ತುಗಳಿಗಿಂತ ಬೇರೆ ಎಂಬ ವಿಕಲ್ಪವೇರ್ಪಡುತ್ತದೆ. ಎಲ್ಲಾ ಪದಾರ್ಥಗಳೂ ತಮ್ಮಷ್ಟಕ್ಕೆ ತಾವು ಪ್ರಕಾಶಿಸುತ್ತಲೇ ಇವೆ. ವ್ಯವಹಾರದಲ್ಲಿ ಚಿತ್ತತ್ತ್ವವು ತನ್ನಲ್ಲಿಯೇ

ಅಂತರ್ಯವಾಗಿ ಪ್ರಕಾಶಿಸುತ್ತಿರುವ ಪದಾರ್ಥಗಳನ್ನೂ ಹೊರಗೂ ಪ್ರಕಾಶಿಸುತ್ತದೆ. ಅಪೋಹನ ಶಕ್ತಿಯಿಂದ ಒಳಗಿರುವ ವಿಷಯಪುಂಜವೇ ಹೊರಗೆ ಪ್ರಕಾಶಿಸುವಾಗ ವಿಕಲ್ಪತ್ವವನ್ನು ಪಡೆಯುತ್ತದೆ. ಬುದ್ಧಿಗೆ ಗೋಚರಿಸುವ ಪದಾರ್ಥಗಳು ಅನೇಕವಾಗಿರ ಬಹುದು, ವಿಚಿತ್ರವಾಗಿಯೂ ಇರಬಹುದು, ಯಥೇಚ್ಛವಾಗಿಯೂ ಇರಬಹುದು. ಅನಂತ ವಾದ ಈ ಉಲ್ಲೇಖಗಳ ವಿಕಲ್ಪಗಳನ್ನು ವಿಮರ್ಶಿಸಿದರೆ ಜೀವಿಸಿರುವ ಎಲ್ಲಾ ಪ್ರಾಣಿ ಗಳಿಗೂ ಜ್ಞಾನಶಕ್ತಿ ಕ್ರಿಯಾಶಕ್ತಿಗಳಿರುವುವೆಂದು ಸ್ಫುಟವಾಗುತ್ತದೆ.

ಅತ ಏವ ಯಥಾಭೀಷ್ಟಸಮುಲ್ಲೇಖಾವಭಾಸನಾತ್
ಜ್ಞಾನಕ್ರಿಯೇ ಸ್ಫುಟೇ ಏವ ಸಿದ್ಧೇ ಸರ್ವಸ್ಯ ಜೀವತಃ ॥

(ಈ. ಪ್ರ. ಅಧ್ಯಾಯ ೧, ಆಹ್ನಿಕ ೬, ಕಾರಿಕಾ ೧೧)

ಅಭಿನವಗುಪ್ತಾಚಾರ್ಯರು ತಂತ್ರಾಲೋಕದಲ್ಲಿ ನಿರೂಪಿಸಿರುವ ವಿಕಲ್ಪಗಳ ವಿವರ ಣೆಯ ಸಾರಾಂಶವನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಭೂಮಿಯು ಮೊದಲು ಶಿವತತ್ತ್ವದವರೆಗೂ ಇರುವ ತತ್ತ್ವಗಳ ತಿಳಿವಳಿಕೆಗಳೆಲ್ಲಾ ವಿಕಲ್ಪಗಳೇ ಆಗಿವೆ. ಜ್ಞಾನವಿಲ್ಲದ ಈ ವಿಕಲ್ಪಗಳ ಮಹಿಮೆಯಿಂದಲೇ ನಾನು, ನನ್ನದು, ನಾನು ಬೇರೆ ಎಂಬ ಭಾವನೆಗಳು ನಿಂತಿರುತ್ತವೆ. ಶಾಸ್ತ್ರಜ್ಞರು ದೇಶ, ಕಾಲ, ಆಕಾರ ಈ ಮೂರು ಅಂಶಗಳಿಗೆ ಒಳಪಟ್ಟಿರುವುದೆಲ್ಲಾ ವಿಕಲ್ಪಗಳೆಂದೂ ಅದಿಲ್ಲದ ಸ್ಥಿತಿಯು ನಿರ್ವಿಕಲ್ಪ ವೆಂದೂ ಹೇಳುತ್ತಾರೆ. ಈ ವಿಕಲ್ಪ ಪ್ರವಾಹದಿಂದಲೇ ಶಕ್ತಿಸಂಕೋಚವಾಗಿ ಬದ್ಧಾವಸ್ಥೆ ಯುಂಟಾಗಿದೆ. ಈ ಅವಸ್ಥೆಯಲ್ಲಿ ವಿಕಲ್ಪ ಪ್ರಭಾವವು ರಾಗದ್ವೇಷಗಳಿಗೂ ಸುಖದುಃಖ ಗಳಿಗೂ ಕಾರಣವಾಗಿದೆ.

ಹೊರಗಿನ ಪ್ರಪಂಚದಲ್ಲಿ ನಮ್ಮ ಜೀವನ ವ್ಯವಹಾರವನ್ನು ಸಾಗಿಸುವುದಕ್ಕೆ ಆಶ್ರಯ ವಾಗಿರುವ ವಿಕಲ್ಪಗಳ ಗುಂಪೊಂದು ನಮ್ಮ ಸ್ವಸ್ವರೂಪವಿಕಾಸವನ್ನು ಪಡೆಯುವುದ ಕ್ಕೋಸ್ಕರ ನಾವು ತಿಳಿಯುವ ಪರಾ, ಪರಾಪರಾ, ಅಪರಾ ಎಂಬ ಮೂರು ತೆರನಾದ ತತ್ತ್ವಗಳ ವಿಮರ್ಶನಾರೂಪವಾದ ವಿಕಲ್ಪಗಳ ಗುಂಪೊಂದು ಶಿವನಿಗಿಂತ ಬೇರೆ ಯಾವ ವಿಕಲ್ಪವಿಲ್ಲದಿದ್ದರೂ ಅಖ್ಯಾತಿಯ ಬಲದಿಂದ ರೂಪುಗೊಂಡಿರುವ ಭಿನ್ನವೇದ್ಯಪೃಥಾತ್ಮಕ ವಾಗಿರುವ ಈ ವಿಶ್ವದ ಪದಾರ್ಥವಿಕಲ್ಪಗಳನ್ನು ತೊಡೆದುಹಾಕಬೇಕು. ಹಾಗೆಯೇ ಅಖ್ಯಾತಿಯಿಂದ ಕಲುಷಿತವಾದ ಸ್ವಯಂಪ್ರಕಾಶವಾದ ಸ್ವಸ್ವರೂಪ ವಿಕಾಸಾತ್ಮಕವಾದ ಸ್ಥಿತಿಯನ್ನು ಪಡೆಯಲಿಕ್ಕೋಸ್ಕರ ಮಾಡುವ ಅನುಸಂಧಾನವೇ ನಿರ್ವಿಕಲ್ಪಭೂಮಿ. ದ್ವೈತಭಾವನೆಯಿಂದಿರುವ ವಿಕಲ್ಪ ಭೂಮಿಗಳನ್ನು ತೊಡೆದುಹಾಕುವುದಕ್ಕೆ ನಾವು ಉಪಯೋಗಿಸುವ ವಿಕಲ್ಪವು, ವಿಕಲ್ಪಗಳನ್ನು ತೊಡೆದುಹಾಕಿ ತಾನು ಮಾಯವಾಗುತ್ತದೆ. ಚಿತ್ಸ್ವರೂಪದಲ್ಲಿ ಯಾವ ಅಂಶವನ್ನೂ ತೆಗೆದುಹಾಕುವ ಹಾಗಿಲ್ಲ, ಹೊಸ ಅಂಶವನ್ನು ಸೇರಿಸುವ ಹಾಗಿಲ್ಲ. ಅದರ ಅನುಭವವು ಸ್ಫುಟವಾಗುವುದೊಂದೇ ಗುರಿ. ಸತ್ತರ್ಕ, ಸದಾಗಮ, ಸದ್ಗುರೂಪದೇಶಗಳಿಂದ ಉಂಟಾದ ಶುದ್ಧವಿದ್ಯಾ ವಿಮರ್ಶೆಯಿಂದ ಸ್ವಸ್ವರೂಪ

ವಿಕಾಸವನ್ನುಂಟುಮಾಡುವ ಕ್ರಮವನ್ನು ನಿರ್ಣಯಿಸಬಹುದು. ಪ್ರತ್ಯಾಹಾರ ಧ್ಯಾನ ಧಾರಣ ಮೊದಲಾದ ಸಾಧನಗಳಿಂದ ವಿಕಲ್ಪಗಳನ್ನು ಹದಗೊಳಿಸಬಹುದು. ವಿಕಲ್ಪ ಸಂಸ್ಕಾರಗಳಿಂದಲೂ ಅಭೇದ ದೃಷ್ಟಿಯಿಂದಲೂ ನಿರ್ವಿಕಲ್ಪ ಭೂಮಿಕೆಯನ್ನು ಸಂಪಾದಿಸುವುದರ ಮೂಲಕ ಸಾಕ್ಷಾತ್ಕಾರವನ್ನು ಪಡೆಯಬಹುದು.

ಸಂವಿತ್ ಪರಾಮರ್ಶೆ

ನಮ್ಮ ಅನುಭವದಲ್ಲಿ ಜಡಪದಾರ್ಥಗಳು ಚೇತನ ಶಕ್ತಿಯಲ್ಲಿ ಲೀನವಾದಂತೆ ತೋರುತ್ತವೆ. ' ಇದಂ ' ಎಂಬ ಜಡಪದಾರ್ಥಗಳ ಅನುಭವವು ಸಂವಿತ್ ಪರಾಮರ್ಶೆ ದಲ್ಲಿಯೇ ಪರಿಣಮಿಸುತ್ತದೆ. ಈ ಕಾರಣದಿಂದ ಜಡಪದಾರ್ಥಗಳು ಚೈತನ್ಯವಿಲ್ಲದವು ಗಳೆಂದೂ ಜೀವಾತ್ಮರುಗಳು ಚೈತನ್ಯ ಶಕ್ತಿರೂಪಿಗಳೆಂದೂ ತಿಳಿಯುತ್ತೇವೆ. ಈ ಎರಡು ಅನುಭವಗಳೂ ವಿಶ್ವರೂಪಿಯಾದ ಒಬ್ಬನೇ ಆಗಿರುವ ಪರಮೇಶ್ವರನ ವಿಲಾಸವಾಗಿದೆ. ಇದಂ ಅಹಂ ಎಂಬ ಅಖಂಡಾಮರ್ಶವು ಈತನ ಸ್ವಾತಂತ್ರ್ಯ ಶಕ್ತಿಯ ವಿಲಾಸ, ದೇಶ ಕಾಲ ಭೇದಗಳಿಲ್ಲದಿರುವುದು ಸಂವಿದನುಭವ. ದೇಶ ಕಾಲಗಳಿಂದ ಕೂಡಿರುವುದು ಗ್ರಾಹ್ಯಪ್ರಪಂಚ—ಇಷ್ಟೇ ವ್ಯತ್ಯಾಸ. ತತ್ತ್ವಸ್ಥಿತಿ ಹೀಗಿದ್ದರೂ ಆ ಮಹೇಶ್ವರನೇ ತನ್ನ ಶಕ್ತಿಸಂಕೋಚದಿಂದ ಸೃಷ್ಟಿಮಾಡಿರುವುದು ' ಇದಂ ' ಎಂಬ ಅಂಶ. ಇದು ಬುದ್ಧಿ, ಪ್ರಾಣ, ದೇಹ ಮೊದಲಾದ ಅನೇಕ ರೂಪಗಳಲ್ಲಿದೆ. ಈ ಭೇದಜ್ಞಾನಕ್ಕೆ ಒಳಪಟ್ಟಿರುವ ಅಪೂರ್ಣವಾದ ' ಅಹಂ ' ಭಾವದಿಂದ " ನಾನು ಬೇರೆ " ಎಂಬ ತಿಳಿವಳಿಕೆಯುಂಟಾಗಿದೆ. ಈ ಬಗೆಯ ಸ್ವಸ್ವರೂಪಜ್ಞಾನವಿಲ್ಲದಿರಲಾಗಿ ' ನಾವು ಅನೇಕರು ' ಎಂಬ ಭೇದಜ್ಞಾನವು ಸ್ಥಿರವಾಗಿದೆ. ಹಾಗೆಯೇ ' ನಾನು ಅನುಭವಿಸುತ್ತಿರುವವನು ' ' ಇದು ಸುಖ ಇದು ದುಃಖ ' ಎಂಬ ವ್ಯತ್ಯಾಸಗಳು ಪ್ರಸಿದ್ಧವಾಗಿವೆ.

ಶಿವ ಸಮಾವೇಶ

ಜ್ಞಾನ ಇಚ್ಛಾ ಕ್ರಿಯಾಶಕ್ತಿಗಳು ಮಹೇಶ್ವರನಲ್ಲಿ ಶುದ್ಧವಾಗಿರುತ್ತವೆ. ಬದ್ಧಾತ್ಮ ನಲ್ಲಿ ಅಶುದ್ಧವಾಗಿರುತ್ತವೆ. ಈ ಸ್ಥಿತಿಯಲ್ಲಿ ಪ್ರಕಾಶ ಅಪ್ರಕಾಶ ಅನಪ್ರಕಾಶ, ಸುಖ ದುಃಖ ಮೋಹಪ್ರಕಾಶ, ಕ್ರಿಯಾನಿಯಮನ ಈ ರೀತಿಯಾದ ಮೂರು ಭೇದ ಗಳಿಂದಲೂ ಕ್ರಮವಾಗಿ ಸತ್ತ್ವ ರಜಸ್ತಮೋಗುಣಗಳಿಂದಲೂ ಅನುಭವದಲ್ಲಿರುತ್ತವೆ. ಸತ್ತ್ವದಿಂದ ಸುಖ, ರಜಸ್ಸಿನಿಂದ ದುಃಖ, ತಮಸ್ಸಿನಿಂದ ಮೋಹ ತಪ್ಪುತಿಳಿವಳಿಕೆ ಗಳುಂಟಾಗುತ್ತವೆ. ಇವೆಲ್ಲಾ ಆ ಪರಮೇಶ್ವರನ ಶಕ್ತಿಯ ಆಭಾಸಗಳಾಗಿವೆ. ಇದು ಪಾಶವೀಸೃಷ್ಟಿ. ಸೃಷ್ಟಿಯು ಎರಡುಬಗೆ. ಘಟಪಟಾದಿಗಳ ರೂಪದಿಂದ ಒಂದುಬಗೆ. ಕಲ್ಪಿತವಾದ ಹಗ್ಗದಲ್ಲಿ ಹಾವು ಮೊದಲಾದ ತಿಳಿವಳಿಕೆಗಳಿಂದ ಇನ್ನೊಂದು ಬಗೆ. ಇವೆರಡೂ ವಿಕಲ್ಪಗಳೇ. ಯಾವಾಗ ಈ ವಿಕಲ್ಪಗಳು ಭಾವನಾಬಲದಿಂದ ಕಡಿಮೆಯಾಗು ತ್ತವೆಯೋ ಆಗ ವಿಶ್ವವೆಲ್ಲಾ ಈಶ್ವರನೊಡನೆ ತಾದಾತ್ಮ್ಯದಿಂದ ಇದೆ ಎಂಬ ನಿಶ್ಚಯಜ್ಞಾನ

ಉಂಟಾಗುತ್ತದೆ. ಈ ವಿಶ್ವಾತ್ಮಕ ಜ್ಞಾನವು ಸ್ಥಿರವಾದರೆ ವಿಕಲ್ಪ ಜ್ಞಾನಗಳು ಬೇರೆ ಬೇರೆಯಾಗಿ ಬರುತ್ತಿದ್ದರೂ ಸಾಧಕನು ಮುಕ್ತನೇ ಆಗಿರುವನು.

ಸರ್ವೋಮಮಾಯಂ ವಿಭವಃ ಇತ್ಯೇವಂ ಪರಿಜಾನತಃ
ವಿಶ್ವಾತ್ಮನೋ ವಿಕಲ್ಪಾನಾಂ ಪ್ರಸರೇಽಪಿ ಮಹೇಶತಾ ॥

(ಈ. ಪ್ರ. ಅಧ್ಯಾಯ ೪, ಅನ್ಹಿಕ ೧, ಕಾರಿಕಾ ೧೨)

ಮಾಯಾಪ್ರಮಾತೃ

ಜ್ಞಾನಶಕ್ತಿ, ಕ್ರಿಯಾಶಕ್ತಿ, ಸ್ಮೃತಿಶಕ್ತಿ, ಅಪೋಹನಶಕ್ತಿ ಈ ನಾಲ್ಕು ಶಕ್ತಿಗಳೂ ಈ ವಿಶ್ವವ್ಯಾಪಾರಕ್ಕೆ ಕಾರಣಗಳಾಗಿವೆ. ಈ ವಿಶ್ವವೇ ಪರಮಾತ್ಮನಲ್ಲಿ ಆಭಾಸರೂಪದಿಂದ ಅಭಿವ್ಯಕ್ತವಾಗುತ್ತದೆ. ಈ ಆಭಾಸಗಳು ಜಡ ಚೇತನ ರೂಪವಾಗಿ ಅಸಂಖ್ಯಾತ ರೂಪ ಗಳಿಂದಿರುತ್ತವೆ. ಗ್ರಾಹ್ಯಭಾವದಲ್ಲಿ ಅಸಂಖ್ಯಾತ ರೂಪವಾಗಿದ್ದರೂ ಗ್ರಾಹಕಭಾವದಲ್ಲಿ ಅಭೇದವನ್ನು ಪಡೆಯುತ್ತವೆ. ಇವುಗಳನ್ನೆಲ್ಲಾ ಪೂರ್ಣವಾಗಿ ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳಿಂದ ತಿಳಿಯಲು ಸಾಧ್ಯವಿಲ್ಲ. ಆಗಮಗಳಿಂದ ಈ ವಿಷಯ ಗಳನ್ನು ವಿಶದಪಡಿಸಿಕೊಳ್ಳಬೇಕು. ಆಂತರ್ಯವಾದ ಆಭಾಸಗಳು ಚಿಚ್ಛಕ್ತಿಯ ಸ್ಫುರಣ ರೂಪವಾಗಿರುತ್ತವೆ. ಕ್ರಿಯಾಶಕ್ತಿಯ ವಿಲಾಸದಿಂದ ವಿಭಿನ್ನವಾದ ವೃತ್ತಿ ರೂಪಗಳನ್ನು ಪಡೆಯುತ್ತವೆ. ಬಾಹ್ಯಸ್ಥಿತಿಯಲ್ಲಿ ಅಪೋಹನ ಶಕ್ತಿಯಿಂದ ಪರಿಮಿತವಾದ ತಿಳಿವಳಿಕೆ ಯನ್ನುಂಟುಮಾಡುತ್ತವೆ. ಇಷ್ಟಲ್ಲದೆ ಗ್ರಾಹ್ಯ ಸಮೂಹವು ಗ್ರಾಹಕನಿಂದ ಬೇರೆಯೆಂದೂ ಪರಸ್ಪರ ವಿಲಕ್ಷಣವಾಗಿರುವುದೆಂದೂ ಮನವರಿಕೆಯಾಗುತ್ತದೆ. ಹೀಗೆ ವಿಶ್ವವನ್ನು ಆಗಮಗಳಲ್ಲಿ ಅಂತರ ಮತ್ತು ಬಾಹ್ಯ, ಸ್ಥೂಲ ಮತ್ತು ಸೂಕ್ಷ್ಮಭೇದಗಳಿಂದ ವಿವರಿಸಿರುತ್ತಾರೆ.

ಏಕಾತ್ಮನೋ ವಿಭೇದಶ್ಚ ಕ್ರಿಯಾಕಾಲಸಮಾನುಗಾ
ತಥಾ ಸ್ಯಾತ್ ಕರ್ತೃತೈವೈವಂ ತಥಾ ಪರಿಣಮತ್ತಯಾ ॥
ನ ಚ ಯುಕ್ತಂ ಜಡಸ್ಯೈವಂ ಭೇದಾಭೇದ ವಿರೋಧತಃ
ಆಭಾಸಭೇದಾದೇಕತ್ರ ಚಿದಾತ್ಮನಿ ತು ಯುಜ್ಯತೇ ॥

(ಈ. ಪ್ರ. ಅಧ್ಯಾಯ ೨, ಅನ್ಹಿಕ ೪, ಕಾರಿಕಾ ೧೭-೧೮)

ಏವಮಂತರ್ಬಹಿರ್ವೃತ್ತಿಃ ಕ್ರಿಯಾಕಾಲಕ್ರಮಾನುಗಾ
ಮಾತುರೇವ ತದನ್ಯೋನ್ಯಾವಿಯುಕ್ತೇ ಜ್ಞಾನಕರ್ಮಣಿ ॥

(ಈ. ಪ್ರ. ಅಧ್ಯಾಯ ೩, ಅನ್ಹಿಕ ೧, ಕಾರಿಕಾ ೧)

ಈ ಪರತತ್ತ್ವದಲ್ಲಿ ಸಾದಾಖ್ಯವೆಂಬ ತತ್ತ್ವವು ಮೊದಲು ರೂಪುಗೊಳ್ಳುತ್ತದೆ. ಇದನ್ನೇ ಸದಾಶಿವತತ್ತ್ವವೆಂದು ಹೇಳುವುದು. ಇಲ್ಲಿ ‘ ಅಹಂ ’ ‘ ಇದಂ ’ ಎಂಬ ಎರಡು

ತತ್ತ್ವಗಳು ಸಮಾನಾಧಿಕರಣ್ಯದಿಂದಿರುತ್ತವೆ. ಮುಂದಿನ ಈಶ್ವರ ತತ್ತ್ವದಲ್ಲಿ ‘ಇದಂ’ ‘ಅಹಂ’ ಎಂಬ ಅನುಭವವು ಅದೇ ರೀತಿಯಲ್ಲಿರುತ್ತದೆ. ಶುದ್ಧವಿದ್ಯಾತತ್ತ್ವದಲ್ಲಿ ಗ್ರಾಹ್ಯಗ್ರಾಹಕಗಳಾಗಿರುವ ‘ಅಹಂ’ ‘ಇದಂ’ ಎಂಬ ಭಾವಗಳು ಸಮಾನಾಧಿಕರಣ್ಯ ದಿಂದಿರುವಿಕೆಯೇ ವೈಶಿಷ್ಟ್ಯ. ಇದಕ್ಕೆ ಬದಲಾಗಿ ಮಾಯಾ ಪ್ರಮಾತೃ ‘ಅಹಂ’ ಎಂಬುವುದು ಗ್ರಾಹಕ ಸ್ವರೂಪವಾಗಿಯೂ ‘ಇದಂ’ ಎಂಬುವುದು ಗ್ರಾಹ್ಯ ಸ್ವರೂಪ ವಾಗಿಯೂ ಪರಸ್ಪರ ವೈಯ್ಯಧಿಕರಣ್ಯದಿಂದ ತೋರುತ್ತದೆ. ಆದುದರಿಂದ ಇದು ಅಶುದ್ಧ ಸೃಷ್ಟಿಯ ಅನುಭವ. ಅಶುದ್ಧ ಸೃಷ್ಟಿಯಲ್ಲಿ ಪ್ರತಿಯೊಂದು ಪದಾರ್ಥವೂ ಬೇರೆಬೇರೆ ಯಾದ ಸಂಖ್ಯಾ, ಪರಿಮಾಣ, ಪೃಥಕ್ತ್ವ ಮೊದಲಾದ ಗುಣಗಳಿಂದ ಅನುಭವ ಗೋಚರ ವಾಗುತ್ತವೆ. ಮಾಯಾಪ್ರಮಾತೃವಿನಲ್ಲಿ ತಿರೋಧಾನವು ಮಾಯಾಶಕ್ತಿಯಿಂದ ಉಂಟಾಗುತ್ತದೆ. ಆದರ ಪ್ರಭಾವದಿಂದ ಇವನ ಚಲನವಲನಗಳು ಬೇರೆಬೇರೆಯಾಗಿ ತಿಳಿಯುತ್ತವೆ.

ಈಶ್ವರೋ ಬಹಿರುನ್ಮೇಷೋ ನಿಮಿಷೋಽಂತಸ್ಸದಾಶಿವಃ
ಸಮಾನಾಧಿಕರಣ್ಯಂ ಚ ಸದ್ವಿದ್ಯಾಹಮಿದಂ ಧಿ ಯೋಃ ॥
ಭೇದತ್ವೇಕರ ಸೇ ಭಾತೇ ಽಹಂತಯಾನಾತ್ಮನೀಕ್ಷಿತೇ
ಶೂನ್ಯೆಬುದ್ಧೌ ಶರೀರೇವಾ ಮಾಯಾಶಕ್ತಿಃ ವಿಜೃಂಭತೇ ॥

(ಈ. ಪ್ರ. ಅಧ್ಯಾಯ ೩, ಆಹ್ನಿಕ ೧, ಕಾರಿಕಾ ೩, ೮.)

ಏಷ ಪ್ರಮಾತಾ ಮಾಯಾಂಧಃ ಸಂಸಾರೀ ಕರ್ಮಬಂಧನಃ
ವಿದ್ಯಾಭಿಜ್ಞಾ ಪಿತೈಶ್ವರ್ಯಃ ಚಿದ್ಘನೋಮುಕ್ತ ಉಚ್ಯ್ಯತೇ ॥
ಸಾಂಗರೂಪೇಷು ಭಾವೇಷು ಪ್ರಮಾತಾ ಕಥ್ಯತೇಪತಾಂ
ಮಾಯಾತೋಭೇದಿಷು ಕ್ಲೇಶಕರ್ಮಾದಿಕಲುಷಃ ಪಶುಃ ॥

(ಈ. ಪ್ರ. ಅಧ್ಯಾಯ ೩, ಆಹ್ನಿಕ ೨, ಕಾರಿಕಾ ೨, ೩.)

ಪ್ರತಿಭಾ

ಯಾವ ಶಕ್ತಿಯಿಂದ ನಮಗೆ ಇದು ಪದಾರ್ಥ ಅಥವಾ ತಿಳಿವಳಿಕೆ ಎಂದು ತಿಳಿಯುತ್ತದೆಯೋ ಆ ಶಕ್ತಿಯನ್ನು ಪ್ರತಿಭಾ ಎನ್ನುತ್ತೇವೆ. ಪ್ರತಿಭಾ ಎನ್ನುವ ಶಕ್ತಿಯು ಪ್ರಮಾತೃವನ್ನು ಎಡೆಬಿಡದಿರಬಹುದು. ಪದಾರ್ಥಜ್ಞಾನಗಳು ಒಂದಾದ ನಂತರ ಒಂದು ಕ್ರಮವಾಗಿ ಬರುತ್ತವೆ. ಒಂದು ವಿಷಯವನ್ನು ನಾವು ಚರ್ಚಿಸುವಾಗ ಇನ್ನೊಂದು ವಿಷಯವು ಬರುವುದಿಲ್ಲ. ಒಂದು ಪದಾರ್ಥದ ತಿಳಿವಳಿಕೆ ಇರುವಾಗ ಇನ್ನೊಂದು ಪದಾರ್ಥದ ತಿಳಿವಳಿಕೆ ಉಂಟಾಗುವುದಿಲ್ಲ. ಅರಣ್ಯ, ಸಮುದ್ರ, ಅನೇಕ ಬಣ್ಣಗಳಿಂದ ಕೂಡಿದ ಚಿತ್ರ, ಮರ, ಬಳ್ಳಿ ಇಂಥವುಗಳನ್ನು ನೋಡಿದಾಗ ಯಾವುದರಲ್ಲಿಯೂ ವಿಶದ ವಾದ ಜ್ಞಾನವು ಬಾರದೆ ಸಮೂಹಾಲಂಬನ ಜ್ಞಾನ ಉಂಟಾಗುತ್ತದೆ.

ವಿಶದವಾಗಿ ಅಂಶತಃ ಅಂದರೆ ಅವುಗಳ ಒಂದೊಂದು ಅಂಶವನ್ನೇ ಗಮನಿಸುವ ಕ್ಷಣದಲ್ಲಿ ಹಿಂದಿನ ಸಮೂಹಾಲಂಬನ ಜ್ಞಾನವನ್ನು ಮರೆಯುತ್ತೇವೆ. ಹೀಗೆ ಕ್ರಮವಾಗಿ ಬರುವ ತಿಳಿವಳಿಕೆಗಳಲ್ಲಿ ಅಕ್ರಮವಾಗಿ ಆಶ್ರಯವಾಗಿ ಅಭಿನ್ನವಾಗಿರುವುದು ಪ್ರತಿಭಾ. ಇದೇ ಪ್ರಮಾತಾ, ಇದೇ ಮಹೇಶ್ವರ.

ಯಾ ಚೈಷಾ ಪ್ರತಿಭಾ ತತ್ತ್ವತ್ಪದಾರ್ಥ ಕ್ರಮರೂಷಿತಾ
ಅಕ್ರಮಾನಂತ ಚಿದ್ರೂಪಃ ಪ್ರಮಾತಾ ಸ ಮಹೇಶ್ವರಃ ॥

(ಈ. ಪ್ರ. ಅಧ್ಯಾಯ, ೨. ಆಹ್ನಿಕ ೭, ಕಾರಿಕಾ ೧೪)

ಇತ್ಥಮುತ್ಥರ್ಥ ಭಿನ್ನಾರ್ಥವಭಾಸ ಖಚಿತೇ ವಿಭೌ ।
ಸಮಲೋ ವಿಮಲೋ ವಾಪಿ ವ್ಯವಹಾರೋಽನುಭೂಯತೇ ॥

(ಈ. ಪ್ರ. ಅಧ್ಯಾಯ ೨, ಆಹ್ನಿಕ ೭, ಕಾರಿಕಾ ೧೪).

ಅನೇಕ ಜ್ಞಾನಗಳಿಂದ ವ್ಯವಹಾರವನ್ನು ನಡೆಯಿಸುವವನು ಜ್ಞಾತಾ ಎನ್ನಿಸಿಕೊಳ್ಳುವನು. ಕಳೆದುಹೋದದ್ದು, ಈಗಿರುವುದು, ನೋಡಿದ್ದು, ಗೋಚರಿಸುವುದು ಮೊದಲಾದ ಭಿನ್ನವಾದ ಅಂಶಗಳನ್ನು ಕ್ರೋಡೀಕರಿಸಿ ಕಾರ್ಯಕಾರಣ ಭಾವಗಳನ್ನು ನಿಶ್ಚಯಿಸುವುದು ಜ್ಞಾತೃತ್ವ. ಇದೇ ರೀತಿಯಲ್ಲಿ ಭಾವಾಭಾವ ಜ್ಞಾನಗಳು ಬರುತ್ತವೆ. ಬಾಧ್ಯಬಾಧಕ ಸ್ಥಿತಿಗಳು ತಿಳಿಯುತ್ತವೆ. ಆಲೋಚನೆಯಿಂದ ಹೊಸಹೊಸ ಭಾವಗಳು ಸ್ಫುರಿಸುತ್ತವೆ. ಇದು ಧರ್ಮ, ಇದು ಧರ್ಮಿ ಎಂಬ ವಿವೇಚನೆಯುಂಟಾಗುತ್ತದೆ. ಹೀಗೆ ಒಂದಕ್ಕೊಂದು ವಿರುದ್ಧವಾದ ಬೇರೆಬೇರೆಯಾದ ತಿಳಿವಳಿಕೆಗಳಿಂದ ಕೂಡಿರುವ ಆ ಪ್ರತಿಭಾ ತತ್ತ್ವದಲ್ಲಿ ಒಳ್ಳೆಯದಾಗಿರುವ ಕಶ್ಮಲವಾಗಿರುವ ವ್ಯವಹಾರಗಳು ನಡೆಯುತ್ತವೆ.

ನಮಗುಂಟಾಗುವ ತಿಳಿವಳಿಕೆಗಳು ತಾತ್ಕಾಲಿಕವಾಗಿರುತ್ತವೆ. ಇವೆಲ್ಲಾ ಸಾಪೇಕ್ಷಿಗಳು. ಇವೇ ಅಭಾಸಗಳು. ವಿಕಲ್ಪಗಳು ಬೇರೆ ರೂಪದಲ್ಲಿದ್ದರೂ ಭೂತ ಭವಿಷ್ಯತ್ ವರ್ತಮಾನಕಾಲಗಳ ಭೇದಗಳಿಂದ ಕೂಡಿದ್ದರೂ ಇವುಗಳಿಗಾಶ್ರಯವಾಗಿರುವ ಸತ್ತಾ ಒಂದೇ ರೂಪವಾಗಿರುತ್ತದೆ. ನಮ್ಮ ಅನುಭವಗಳನ್ನೆಲ್ಲಾ ಮುಖ್ಯವಾಗಿ ನಾಲ್ಕು ಭೇದಗಳಿಂದ ವಿಂಗಡಿಸಬಹುದು. ಸುಖ, ಸುಖಕ್ಕೆ ಕಾರಣ. ದುಃಖ, ದುಃಖಕ್ಕೆ ಕಾರಣ ಎಂಬಿವೇ ನಾಲ್ಕು ಭೇದಗಳು. ಐಶ್ವರ್ಯವೇ ಮೊದಲಾದವುಗಳು ನಮ್ಮ ಸುಖಕ್ಕೆ ಕಾರಣವೆಂದು ನಮ್ಮ ನಂಬಿಕೆ. ಪದಾರ್ಥಗಳ ಸಂಬಂಧದಿಂದ ಸುಖ ದುಃಖಗಳಿಂದುಂಟಾಗುತ್ತವೆ. ಸುಖವೆಂದರೆ ತನಗೆ ಇಷ್ಟವಾದ ಪದಾರ್ಥಗಳ ಪ್ರಾಪ್ತಿಯಿಂದ ಉಂಟಾಗುವ ಅನುಭವ. ಅದು ಪ್ರಾಪ್ತಿಯಾಗುವವರೆಗೂ ಸುಖವಿಲ್ಲ. ಇದನ್ನು ಎಲ್ಲರೂ ಒಪ್ಪತಕ್ಕದ್ದಾಗಿದೆ. ಆದರೂ ನಮ್ಮ ಇಷ್ಟಕ್ಕನುಗುಣವಾಗಿ ಯಾವ ಸುಖವನ್ನಪೇಕ್ಷಿಸುತ್ತೇವೆಯೋ ಅದಕ್ಕೋಸ್ಕರ ಮಾಡುವ ಪ್ರಯತ್ನಗಳೂ, ಪಡುವ ಕಷ್ಟಗಳೂ ಕೂಡ ಸುಖವೆಂದೇ ಭ್ರಮಿಸುತ್ತೇವೆ. ಪದಾರ್ಥಪ್ರಾಪ್ತಿಯಾದನಂತರ ಅದರ ವಿಕಲ್ಪಭಾಸಮಾತ್ರವಿರುತ್ತದೆ.

ಅದನ್ನೇ ಸುಖವೆಂದು ಭ್ರಮಿಸುತ್ತೇವೆ. ಒಟ್ಟಿನಲ್ಲಿ ಸುಖವೆಂಬುದು ಜ್ಞಾನಶಕ್ತಿಯ ಸ್ಫುರಣರೂಪವಾದ ಅಭಾಸಮಾತ್ರವೇ ಹೊರತು ಪದಾರ್ಥಗಳಿಗೆ ಸೇರಿದ್ದಲ್ಲ. ಐಶ್ವರ್ಯದ ಮೇಲೆ ಅಧಿಕಾರವು ಲುಬ್ಧನಿಗೂ ವಿರಕ್ತನಿಗೂ ಸಮಾನವಾಗಿದ್ದರೂ ವಿರಕ್ತನು ತ್ಯಾಗವೇ ಪ್ರಧಾನವೆಂದೂ ಲೋಭಿಯು ಭೋಗವೇ ಪ್ರಧಾನವೆಂದೂ ಎಣಿಸುವನು. ನಾವು ಎಷ್ಟು ವಿಮರ್ಶಿಸಿದರೂ ಅಷ್ಟು ಸುಖದುಃಖಗಳೂ ಅಭಾಸಮಾತ್ರವೆಂದೇ ಸಿದ್ಧವಾಗುತ್ತದೆ.

ಸುಖಾದಿಷು ಚ ಸೌಖ್ಯಾದಿ ಹೇತುಷ್ವಪಿ ಚ ವಸ್ತುಷು
ಅವಭಾಸಸ್ಯ ಸದ್ಭಾವೇಽಪ್ಯತೀತತ್ವಾತ್ತಥಾಸ್ಥಿತಿಃ ॥

(ಈ. ಪ್ರ. ಅಧ್ಯಾಯ ೧, ಅಹ್ನಿಕ ೮, ಕಾರಿಕಾ ೩)

ಹೊರಗಿನ ಪದಾರ್ಥಗಳ ವಿಷಯಗಳ ವಿಷಯದಲ್ಲಿ ಇವೆ, ಇಲ್ಲ, ಬರುತ್ತವೆ, ಹೋಗುತ್ತವೆ, ಹುಟ್ಟುತ್ತವೆ ಎಂಬ ಭೇದಗಳುಂಟು. ಅವುಗಳ ಸ್ವರೂಪವು ಸತ್ತಾ ಮಾತ್ರವಲ್ಲ. ಆಂತರ್ಯವಾದ ತತ್ತ್ವವು ಸತ್ತಾರೂಪವಾಗಿರುವುದರಿಂದ ಅಲ್ಲಿ ಸ್ಫುರಣಗಳ ವ್ಯತ್ಯಾಸವೇ ಹೊರತು ತತ್ತ್ವದಲ್ಲಿ ವೈಪರೀತ್ಯವಲ್ಲ. ಚಿನ್ಮಯವಾದ ಅವಭಾಸಗಳು ಆಂತರ್ಯವಾಗಿಯೇ ಇರುತ್ತವೆ. ಹೊಮ್ಮುತ್ತಲಿರುವ ಅವಭಾಸಗಳು ವಿಕಲ್ಪರೂಪ ಗಳಾಗಿ ಹೊರಗಿನವುಗಳಾಗುತ್ತವೆ. ಹೊರಗಿನ ಪದಾರ್ಥಗಳಿಂದುಂಟಾಗುವ ಸುಖ ದುಃಖ ಗಳನ್ನು ಉಲ್ಲೇಖಿಸುವುದೂ ಕೂಡ ಆಂತರ್ಯವಾಗಿರುವ ಪ್ರಮಾತೃವಿನ ಇಚ್ಛಾಶಕ್ತಿ. ಹೀಗೆ ಆ ಪ್ರಮಾತೃವಿನ ಶಕ್ತಿಗಳ ಹೊರಹೊಮ್ಮುವಿಕೆಯಿಂದ ಬಾಹ್ಯ ಮತ್ತು ಆಂತರ್ಯ ವಾದ ವ್ಯವಹಾರಗಳು ನಡೆಯುತ್ತವೆ. ಈ ವಿಮರ್ಶನೆಯು ಶುದ್ಧವಾದ ಜ್ಞಾನಕ್ರಿಯಾ ಶಕ್ತಿಗಳಿಂದ ನಡೆಯುತ್ತದೆ.

ಪ್ರತಿಭೆಯು ಅಂತಃಸ್ಫೂರ್ತಿಯ ಒತ್ತಾಯ. ಅಪೂರ್ವವಾದ ಪ್ರಕಾಶ. ಅತಿಶಯವಾದ ಅನುಭವ. ಇದು ಪರಮೇಶ್ವರನ ಆತ್ಮಪ್ರಕಾಶಶಕ್ತಿ. ಇದು ಪರಮೇಶ್ವರ ನಲ್ಲಿ ನಿತ್ಯವಾಗಿ ನೆಲೆಗೊಂಡಿದೆ. ಇದು ಉನ್ಮೀಲನವಾಯಿತೆಂದರೆ ಆ ಕ್ಷಣದಲ್ಲಿ ವಿಶ್ವವಷ್ಟೂ ಉನ್ಮೀಲನವಾಗುವುದು.

ವಿಕಲ್ಪಗಳ ಉಪಶಮನ ಅಥವಾ ಸಂಸ್ಕಾರದಿಂದ ಪ್ರತಿಭೆಯನ್ನು ಪಡೆಯಬಹುದು. ಶಕ್ತಿಪಾತ ಅಥವಾ ಶಿವಾನುಗ್ರಹದಿಂದ ಪ್ರತಿಭೆಯನ್ನು ಹೊಂದಬಹುದು. ಪ್ರತಿಭೆಯನ್ನು ಹೊಂದಿದವನು ನಿಜಸ್ವರೂಪವನ್ನು ಕಾಣುವುದಕ್ಕೆ ಪ್ರತಿಬಂಧಕಗಳಾಗಿರುವ ತೊಡಕು ಗಳನ್ನು ನಿವಾರಿಸಬಲ್ಲನು. ವಿಚಾರ ಪರಂಪರೆಗಳನ್ನೂ ಅನುಭವಗಳನ್ನೂ ಸಮನ್ವಯ ಗೊಳಿಸಬಲ್ಲನು. ಭೂತಭವಿಷ್ಯದ್ವರ್ತಮಾನಗಳನ್ನು ಸಾಕ್ಷಾತ್ತಾಗಿ ತಿಳಿಯಬಲ್ಲನು. ಹೊಸ ಸೃಷ್ಟಿಯನ್ನು ಮಾಡಬಲ್ಲನು. ಪ್ರತಿಭೆ 'ನವನವೋಲ್ಲೇಖಶಾಲಿನಿ'

ಕಾಲ : ಸೃಷ್ಟಿ ಸಂಹಾರಗಳು ಸಕ್ರಮವಾಗಿ ನಡೆಯುತ್ತಿದ್ದರೂ ಅದಕ್ಕೆ ಕಾರಣ ವಾಗಿರುವ ತತ್ತ್ವವು ಅಕ್ರಮವಾಗಿರುತ್ತದೆ. ಲೌಕಿಕವಾದ ಘಟನೆಗಳಿಗೆ ಸಕ್ರಮತ್ವ ನಿಯಮವಾಗಿದೆ. ಈ ಕ್ರಿಯೆಗಳು ಕಾಲಕ್ಕೆ ಅಧೀನವಾಗಿರುತ್ತವೆ. ಕಾಲವು ಕ್ರಮವನ್ನು

ತೋರಿಸುವ ಶಕ್ತಿ ಅಥವಾ ತತ್ತ್ವವಾಗಿದೆ. ಹಿಂದೆ ನಡೆಯಿತು, ಈಗ ನಡೆಯುತ್ತಿದೆ, ಮುಂದೆ ನಡೆಯಬೇಕಾಗಿದೆ ಎಂದರೆ ಭೇದಭಾವವಿರಬೇಕು ಎಂದಹಾಗಾಯಿತು. ಆದುದರಿಂದ ಕ್ರಮವು ಭೇದಾಶ್ರಯವಾಗಿದೆ. ಕಾಲಾತೀತವಾದ ತತ್ತ್ವವು ಅಭಿನ್ನವಾಗಿರುತ್ತದೆ. ಆಭಾಸಗಳ ಇರುವಿಕೆ, ಇಲ್ಲದಿರುವಿಕೆ ಇವೆರಡು ಚಿತ್ರಪಟಶಕ್ತಿ ಪರತತ್ತ್ವದಲ್ಲಡಗಿರುತ್ತವೆ. ಆಕಾರಭೇದದಿಂದ ದೇಶಭೇದವುಂಟಾಗುತ್ತದೆ. ಕ್ರಿಯೆಯ ವೈಲಕ್ಷಣ್ಯದಿಂದ ಕಾಲಕ್ರಮವು ರೂಪುಗೊಳ್ಳುತ್ತದೆ. ಹೀಗೆ ದೇಶಕಾಲಗಳಿಂದ ನಡೆಯುವ ವೈಚಿತ್ರ್ಯಗಳು ಈಶ್ವರ ಶಕ್ತಿಯಿಂದ ನಡೆಯತಕ್ಕವುಗಳಾಗಿವೆ. ಭಿನ್ನಾಭಿನ್ನವಾಗಿರುವ ಕಾಲಪ್ರಭಾವದಿಂದ ನಡೆಯುವ ಈ ಎಲ್ಲ ವ್ಯವಹಾರಗಳೂ ಆ ನಿರ್ಮಾಣಶಕ್ತಿಯ ಪರತತ್ತ್ವದಲ್ಲಡಗಿವೆ. ಪರಪ್ರಮಾತೃವಿಗೆ ಅನಂತವಾದ ವಿಶ್ವಸ್ಫುರಣೆ ಇರುವಂತೆ ಮಿತಪ್ರಮಾತೃವಿಗೆ ವಿಷಯಜ್ಞಾನವಿರುತ್ತದೆ.

> **ದೇಶ ಕ್ರಮೋಪಿ ಭಾವೇಷು ಭಾತಿಮಾತುರ್ಮಿತಾತ್ಮನಃ**
> **ಸ್ವಾತ್ಮೇವ ಸ್ವಾತ್ಮನಾ ಪೂರ್ಣಾಭಾವಾಭಾಂತ್ಯಮಿತಸ್ಯತು ॥**
>
> **(ಈ. ಪ್ರ, ಅಧ್ಯಾಯ ೨, ಅಹ್ನಿಕ ೧, ಕಾರಿಕಾ ೭)**

ಮಹಾಸತ್ತಾ : ದ್ರವ್ಯ, ದಿಕ್ಕು, ಕಾಲ ಇವುಗಳೊಡನೆ ಕ್ರಿಯೆಯು ಸಂಭವಿಸಿರುತ್ತದೆ. ಸಂವಿತತ್ತ್ವದಲ್ಲಿ ಈ ಕ್ರಿಯಾಸಂತಾನವು ಕೇಂದ್ರೀಕರಿಸುತ್ತದೆ. ಅಭಿನ್ನವಾದ ಈ ಸ್ಥಿತಿಯಲ್ಲಿ ದೃಢವಾಗಿರುವ ಈ ಶಕ್ತಿಯು ಆ ಸ್ಥಿತಿಯಲ್ಲಿ ಏಕಾಶ್ರಯವಾಗಿರುತ್ತದೆ. ಬಾಹ್ಯವಿಷಯವನ್ನು ಅನುಸರಿಸುವಾಗ ಅನೇಕಾಶ್ರಯವಾಗಿರುತ್ತದೆ. ಆಂತರ್ಯವಾಗಿ ಒಂದೇ ಆಗಿದ್ದ ತತ್ತ್ವವು ಇಂದ್ರಿಯಗಳಿಂದ ವಿಷಯ ಸ್ವರೂಪಗಳನ್ನನುಸರಿಸಿ ದೇಶ, ಕಾಲ, ಆಕಾರ ಮೊದಲಾದ ವ್ಯತ್ಯಾಸಗಳನ್ನು ಪಡೆಯುತ್ತದೆ. ಶಿವಾತ್ಮಕವಾಗಿರುವ ಈ ಪಶುವು ಭೇದಾಭೇದ ಅವಲಂಬಕವಾಗಿರುವ ಈ ಶಕ್ತಿಗಳಿಂದ ಮನಸ್ಸಿನ ಮೂಲಕ ಉಲ್ಲಸಿಸುವಾಗ ಅನಂತ ಪದಾರ್ಥಗಳೂ ಕ್ರಿಯೆಗಳೂ ಗೋಚರಿಸುತ್ತವೆ. ವಿಮರ್ಶೆಯಿಂದ ಸ್ವಚ್ಛವಾಗಿ ಪ್ರಮಾತೃವಿನಲ್ಲಿರುವ ಶಕ್ತಿಯು ಭೇದಜ್ಞಾನಕ್ಕೂ ಅಭೇದ ಜ್ಞಾನಕ್ಕೂ ಸಂಬಂಧವನ್ನು ತೋರ್ಪಡಿಸುತ್ತದೆ.

ಉದಾಹರಣೆಗೆ ಪ್ರಪಂಚದಲ್ಲಿರುವ ಮನುಷ್ಯರನ್ನೆಲ್ಲಾ ನಾವು ನೋಡಲಾರೆವು. ಆದರೂ 'ಮನುಷ್ಯ' ಇಂಥವನೆಂದು ಒಂದು ಸಾಮಾನ್ಯ ಜ್ಞಾನ ಉಂಟು. ಇದಕ್ಕೆ ಮನುಷ್ಯತ್ವ ಎನ್ನುತ್ತೇವೆ. ಮನುಷ್ಯತ್ವವೆಂಬ ಈ ಶಬ್ದವು ಮನುಷ್ಯನ ಗುಣಕ್ರಿಯೆ ಮೊದಲಾದ ಸಮಷ್ಟಿ ತಿಳಿವಳಿಕೆಯನ್ನುಂಟುಮಾಡುತ್ತದೆ. ಕಲ್ಲಿನಲ್ಲಿಯೋ ಲೋಹದಲ್ಲಿಯೋ ಒಂದು ಬೊಂಬೆಯನ್ನು ಮಾಡಿದರೆ ಅಲ್ಲಿ ಆಕಾರ ಮಾತ್ರ ಬರುತ್ತದೆ. ಅಲ್ಲಿ ಮನುಷ್ಯನ ಕ್ರಿಯೆ ಮತ್ತು ಗುಣಗಳು ಬರುವುದಿಲ್ಲ. ಹೀಗೆಯೇ ಮನುಷ್ಯನ ಕೆಲಸಗಳನ್ನು ಇತರ ಪ್ರಾಣಿಗಳು ನಿರ್ವಹಿಸಿದರೂ ಕೆಲವು ಕ್ರಿಯೆಗಳು ವ್ಯಕ್ತವಾದ ಹಾಗಾಯಿತು. ಗುಣ ಮತ್ತು ಆಕಾರ ಅಲ್ಲಿ ಬರುವುದಿಲ್ಲ. ಆ ಪಂಗಡಕ್ಕೆ ಮೀಸಲಾಗಿರುವ

ಗುಣ, ಕ್ರಿಯೆ, ಆಕಾರ ಈ ಮೂರೂ ತಪ್ಪದೆ ಎಲ್ಲಿ ಬರುತ್ತವೆಯೋ ಅದಕ್ಕೆ ಮನುಷ್ಯತ್ವ ಎಂದು ಹೆಸರು. ಮನುಷ್ಯತ್ವಕ್ಕೆ ಕಾಲ ನಿಯಮವಿಲ್ಲ. ಮನುಷ್ಯ ಜಾತಿ ಇರುವವರೆಗೂ ಮನುಷ್ಯತ್ವ ಒಂದೇ ಇರುತ್ತದೆ. ಮನುಷ್ಯತ್ವ ಮನುಷ್ಯ ಜಾತಿಯೊಡನೆ ಬಂದಿದೆ. ಮನುಷ್ಯಜಾತಿ ನಿರ್ನಾಮವಾದರೆ ಮನುಷ್ಯತ್ವ ಹೋಗುತ್ತದೆ. ಒಂದು ವ್ಯಕ್ತಿ ಇದ್ದರೂ ಮನುಷ್ಯತ್ವಕ್ಕೆ ತೊಂದರೆ ಬರುವುದಿಲ್ಲ. ಕೋಟ್ಯಂತರ ಸಂಖ್ಯೆ ಹೆಚ್ಚಿದರೂ ಅದು ಬೆಳೆಯುವುದಿಲ್ಲ. ಬುದ್ಧಿಬಲದಿಂದ ಕಲ್ಪಿಸಿರುವ ಈ ಪರಿಭಾಷೆಯು ಅಭಿನ್ನವಾಗಿರುವ ಒಂದು ತತ್ತ್ವವು ಹೇಗೆ ಭಿನ್ನವಾಗಿರುವ ವಸ್ತುಗಳಿಗೆ ಆಶ್ರಯವಾಗಿರುವುದೆಂಬುದನ್ನು ತೋರಿಸುತ್ತದೆ. ಇದು ಇಂದ್ರಿಯಗೋಚರವಲ್ಲ. ಇದನ್ನೇ ಸತ್ತಾ, ಸಾಮಾನ್ಯಜಾತಿ ಮೊದಲಾದ ಶಬ್ದಗಳಿಂದ ಹೇಳುತ್ತಾರೆ. ದಾರ್ಶನಿಕ ಸಂಪ್ರದಾಯದಲ್ಲಿ ಪಶುತ್ವ, ಮನುಷ್ಯತ್ವ ಮೊದಲಾದುವುಗಳು ಒಂದೊಂದು ಪಂಗಡವನ್ನು ಸೂಚಿಸುವ ಜಾತಿಗಳು. ವಿಶ್ವದ ಎಲ್ಲಾ ಪದಾರ್ಥಗಳ ಜಾತಿಯಲ್ಲಿ ಅಡಗಿರುವ ಅಭಿನ್ನವಾದ ತತ್ತ್ವವನ್ನೇ ಮಹಾ ಸತ್ತಾ ಬ್ರಹ್ಮ ಎಂದು ಹೇಳುತ್ತಾರೆ. ಈ ಪದಾರ್ಥ ಈ ರೀತಿಯಾಗಿದೆ ಎಂದು ನಾವು ಹೇಳುತ್ತೇವೆ. ಅದು ಸ್ವಾತ್ಮಾವಭಾಸರೂಪವಾಗಿದೆ. ದೇಶಕಾಲಗಳಿಗೆ ಒಳಪಡದಿರುವ ತತ್ತ್ವದಲ್ಲಿ ಈ ಅಂತರ್ವಿಮರ್ಶೆಯು ಕಂಗೊಳಿಸುತ್ತದೆ. ಇದು ಇಂಥಾದ್ದು ಇದು ಯಾವುದರಿಂದ ನಿಂತಿದೆಯೋ ಆ ವಸ್ತುವೂ ಅದರ ಇರುವಿಕೆಯೂ ಪರಮಾತ್ಮನ ಆಭಾಸಗಳೇ.

> **ಇದಮೇತಾದೃಗಿತ್ಯೇವಂ ಯದ್ವಶಾದ್ವ್ಯವತಿಷ್ಠತೇ**
> **ವಸ್ತುಪ್ರಮಾಣಂ ತತ್ಸೋಽಪಿ ಸ್ವಾಭಾಸೋಽಭಿನವೋದಯಃ ॥**

(ಈ. ಪ್ರ. ಅಧ್ಯಾಯ ೨, ಆಹ್ನಿಕ ೩, ಕಾರಿಕಾ ೨.)

> **ಸೋಽಂತಸ್ತಥಾ ವಿಮರ್ಶಾತ್ಮಾ ದೇಶಕಾಲಾದ್ಯಭೇದಿನೀ**
> **ಏಕಾಭಿಧಾನ ವಿಷಯೇಮಿತಿರ್ವಸ್ತ್ವಬಾಧಿತಾ ॥**

(ಈ. ಪ್ರ. ಅಧ್ಯಾಯ ೨, ಆಹ್ನಿಕ ೩ ಕಾರಿಕಾ ೨.)

ಸಾಮಾನಾಧಿಕರಣ್ಯ: ಪ್ರತಿಯೊಬ್ಬನ ಅಭಿರುಚಿಗೆ ತಕ್ಕಹಾಗೆ ಪದಾರ್ಥಗಳು ತಿಳಿಯುತ್ತವೆ. ಈ ಆಭಾಸಭೇದಗಳು ಎಷ್ಟಿದ್ದರೂ ಅವುಗಳ ಪ್ರಯೋಜನ ಮತ್ತು ಕ್ರಿಯೆಗಳು ನಿರ್ದಿಷ್ಟವಾಗಿರುತ್ತವೆ. ಅಭಿನ್ನವಾದ ಗ್ರಾಹಕಶಕ್ತಿಯು ಭಿನ್ನವಾಗಿರುವ ಗ್ರಾಹ್ಯಗಳಿಗೆ ಆಶ್ರಯವಾಗಿದ್ದು ತೋರುತ್ತಿರುತ್ತದೆ. ಈ ತೋರುವಿಕೆಗೆ ಸಾಮಾನಾಧಿಕರಣ್ಯ ಎಂದು ಶಾಸ್ತ್ರೀಯ ಪರಿಭಾಷೆ. "ಸಮಾನಂ ಅಧಿಕರಣಂ ಏಷಾಂ ತತ ಸಾಮಾನಾಧಿಕರಣ್ಯಂ." ರಾಮನು ಬುದ್ಧಿಶಾಲಿ, ಆರೋಗ್ಯವಂತ, ದಯಾದಾಕ್ಷಿಣ್ಯಪರ, ಅಲಂಕಾರ ಪ್ರಿಯ, ಕಲಾವಂತ ಎಂದು ಹೇಳುತ್ತಾ ಹೋದರೆ ಅವನನ್ನು ವರ್ಣಿಸಿದ ಹಾಗಾಗುತ್ತದೆ. ಅವನಲ್ಲಿ ಇನ್ನೂ ಅನೇಕ ಧರ್ಮಗಳಿರಬಹುದು. ಇಷ್ಟು ಭಿನ್ನಭಿನ್ನವಾದ ಧರ್ಮಗಳಿಗೆ

ಆಶ್ರಯವಾಗಿರುವವನು ಒಬ್ಬನೇ ಎಂದು ತಿಳಿಸುವಿಕೆಯೇ ಸಾಮಾನಾಧಿಕರಣ್ಯ. ಒಂದರಲ್ಲಿ ಅನೇಕ ಇವೆ ಎಂಬುದೇ ಇದರ ತಾತ್ಪರ್ಯ.

ಪ್ರತ್ಯವಮರ್ಶ : ಇದೇರೀತಿ ದೂರ, ಹತ್ತಿರ, ಪರೋಕ್ಷ, ಪ್ರತ್ಯಕ್ಷ, ಬಾಹ್ಯ, ಅಂತರ ಮೊದಲಾದ ಮುಖ್ಯಭೇದಗಳಿಂದ ಬೇರೆಬೇರೆಯಾಗಿ ತೋರುವ ಎಲ್ಲಾ ಅಭಾಸಗಳೂ ಒಂದೇ ತತ್ತ್ವದ ಪ್ರತ್ಯವಮರ್ಶರೂಪವಾಗಿರುವುದರಿಂದ ಅಭಿನ್ನವಾಗಿರುತ್ತವೆ.

ಅವುಗಳ ಉಪಯೋಗವೂ ಕೂಡ ಈಶ್ವರೇಚ್ಛೆಯಿಲ್ಲದೆ ನಡೆಯುವುದಿಲ್ಲ. ಆದುದರಿಂದ ಈ ಪದಾರ್ಥಗಳು ಈಶ್ವರನ ಕ್ರಿಯಾಶಕ್ತಿಯಿಂದ ಬೇರೆಯಲ್ಲ. ಜಾತಿ ಆಕಾರವ್ಯಕ್ತಿ ಮೊದಲಾದುವುಗಳಿಂದ ಪದಾರ್ಥಗಳು ಬೇರೆಬೇರೆಯಾಗಿ ತೋರುತ್ತವೆ. ವಿಶ್ವವೈಚಿತ್ರ್ಯಗಳನ್ನೊಳಗೊಂಡಿರುವ ಎಲ್ಲಾ ಭಾವಗಳಿಗೂ ಆಶ್ರಯವಾಗಿರುವ ಪರಮಾರ್ಥಸದ್ರೂಪಿಯಾಗಿರುವ ಈಶ್ವರನಲ್ಲಿ ವಿರೋಧಕ್ಕೂ ಭೇದಕ್ಕೂ ಅವಕಾಶವಿಲ್ಲ. ಜಡತತ್ತ್ವಕ್ಕೆ ಇಂತಹ ಅನಂತವಾದ ಶಕ್ತಿ ಇರಲಾರದು. ಅಸತ್ತಾಗಿರುವುದು ಸತ್ತಾಗಲಾರದು. ಕ್ರಿಯಾಶಕ್ತಿಯೊಂದೇ ಅಂತರ್ಯವಾಗಿ ಅಭಿನ್ನವಾಗಿಯೂ ಬಹಿರ್ಭಿನ್ನವಾಗಿಯೂ ಇರುವುದು. ಆದುದರಿಂದ ಕಾರ್ಯಕಾರಣಗಳೆರಡೂ ಅಭಿನ್ನವಾಗಿರುತ್ತವೆ. ಅಭಿನ್ನವಾದ ಸತ್ವವು ಕಾಲಕ್ರಮದಿಂದ ಕ್ರಿಯಾಭೇದವೆಂದು ವ್ಯವಹರಿಸಿತು. ವಾಸ್ತವವಾಗಿ ಚಿತ್ತು ಒಂದೇ ಎಂದು ಸಾಕ್ಷಾತ್ಕಾರವನ್ನು ಪಡೆದಿರುವವರಿಗೆ ಎಲ್ಲವೂ ಅಭಿನ್ನವಾಗಿ ತೋರುತ್ತದೆ.

ಭೇದಾಭೇ ವಿಶಿಷ್ಟಾವಸ್ಥಾ : ಕಾರಣವಿದ್ದಲ್ಲಿ ಕಾರ್ಯ ಉಂಟಾಗಬೇಕೆಂಬ ನಿಯಮವೇ ಕಾರ್ಯಕಾರಣ ಭಾವ. ಕಾರ್ಯಸಿದ್ಧಿಯಾಗದಿದ್ದಲ್ಲಿ ಸಕಾರಣಗಳಿಲ್ಲ ಎಂಬ ತಿಳಿವಳಿಕೆಯುಂಟಾಗುತ್ತದೆ. ಈ ಬಗೆಯಾದ ತಿಳಿವಳಿಕೆಯಲ್ಲಿ ಒಂದು ನಿಶ್ಚಿತವಾದ ನಿಯಮವನ್ನನುಸರಿಸಬೇಕು. ಕಾರ್ಯಸಿದ್ಧಿಯಾಗದಿದ್ದರೂ ಕಾರಣಗಳಿರಬಹುದು. ಅನೇಕ ಕಾರಣಗಳಿಂದ ರೂಪುಗೊಳ್ಳತಕ್ಕ ಕಾರ್ಯವು ಯಾವುದೋ ಒಂದು ಅಲ್ಪಕಾರಣವಿಲ್ಲದಿದ್ದರೂ ಸಿದ್ಧಿಸುವುದಿಲ್ಲ. ಕಾರ್ಯಕಾರಣ ಭಾವವು ಭೇದವಾಗಿರುವ ತತ್ತ್ವವನ್ನಪೇಕ್ಷಿಸುತ್ತದೆ. ಅಭಿನ್ನವಾದ ತತ್ತ್ವದಲ್ಲಿ ಕಾರ್ಯಕಾರಣಭಾವವು ಭೇದವನ್ನುಂಟುಮಾಡಲಾರದು. ಅಭಿನ್ನವಾದ ತತ್ತ್ವಕ್ಕೆ ಭೇದ ಸ್ಥಿತಿ ಕಾಲಕ್ರಮವನ್ನನುಸರಿಸಿಬರುತ್ತದೆ. ಈ ತತ್ತ್ವಕ್ಕೆ ಕರ್ತೃತ್ವ ಮತ್ತು ಪರಿಣಾಮಗಳುಂಟು. ಭೇದ ಮತ್ತು ಅಭೇದ ಇವೆರಡೂ ಪರಸ್ಪರ ವಿರುದ್ಧವಾದ ಭಾವಗಳು. ಒಮ್ಮೆ ಅಭಿನ್ನವಾದ ತತ್ತ್ವವು ಭಿನ್ನವಾಯಿತೆಂದರೆ ಮರಳಿ ಅಭಿನ್ನವಾಗಲಾರದು. ಸಂಖ್ಯಾ ಮತ್ತು ಪರಿಣಾಮಗಳಿಂದ ಜಡಪದಾರ್ಥಗಳು ಭೇದಾಭೇದ ರೂಪಗಳನ್ನು ಪಡೆಯುವಾಗ ವ್ಯತ್ಯಾಸವನ್ನು ಹೊಂದುತ್ತವೆ. ಸಮುದ್ರಕ್ಕೆ ನದಿಗಳು ಸೇರಿದರೆ ಅಭಿನ್ನವಾಗುತ್ತವೆ ಎನ್ನುವುದು ಉಪಚಾರೋಕ್ತಿಯಾಗುತ್ತದೆ. ಹೀಗೆ ಜೇನುತುಪ್ಪದಲ್ಲಿ ಅನೇಕ ಪುಷ್ಪಗಳು ರಸಗಳು ಮಿಳಿತವಾಗಿರುತ್ತವೆ. ಈ ಎರಡು ಸ್ಥಳಗಳಲ್ಲಿಯೂ ಸಂಖ್ಯೆ, ಪರಿಮಾಣ, ಗುರುತ್ವ ಇವುಗಳಲ್ಲಿ ವ್ಯತ್ಯಾಸವಿದ್ದೇ ಇರುತ್ತದೆ. ಸಮುದ್ರದಿಂದ ನದಿಗಳ ನೀರನ್ನು ಬೇರ್ಪಡಿಸುವುದಕ್ಕಾಗದಿರಬಹುದು. ಜೇನಿನಲ್ಲಿ ಬೇರೆ

ಬೇರೆ ಪುಷ್ಪಗಳ ರಸವನ್ನು ವಿಂಗಡಿಸುವುದಕ್ಕಾಗದೆ ಇರಬಹುದು. ಆದರೂ ಅವು ಅಭೇದ ರೂಪವನ್ನು ಪಡೆದಿದೆಯೇ ಹೊರತು ತಾತ್ತ್ವಿಕವಾಗಿ ವಿಶಿಷ್ಟಗಳಾಗಿರುತ್ತವೆ. ಜಡ ಪದಾರ್ಥಗಳಲ್ಲಿ ಈ ನಿಯಮಗಳು ಪರಸ್ಪರ ವಿರುದ್ಧವಾಗಿರುತ್ತವೆ. ವಿಶಿಷ್ಟವಾಗಿರುವ ಈ ತತ್ತ್ವ ಅನೇಕ ಧರ್ಮಗಳಿಂದ ಕೂಡಿರುತ್ತದೆ. ಚಿತ್ತತ್ತ್ವದಲ್ಲಿ ಭೇದ ಮತ್ತು ಅಭೇದ ವ್ಯಾಪ್ತಿಗಳಿಗೆ ವಿರೋಧವಿಲ್ಲ. ಅಭಾಸಗಳು ಅನಂತ ಭೇದಗಳನ್ನು ತಾಳಬಹುದು. ಮರಳಿ ಅಭಿನ್ನವಾಗಿಯೂ ಇರಬಹುದು.

ಕರ್ಮಮೀಮಾಂಸೆ

ಪರಮೇಶ್ವರನ ಸರ್ವಕರ್ತೃತ್ವವು ಶಕ್ತಿ, ಸ್ಪಂದ, ವಿಮರ್ಶಾ, ಸ್ವತಂತ್ರತೆ, ಓಜಸ್ಸು, ಕಲಾ ಮೊದಲಾದ ಪದಗಳಿಂದ ಸೂಚಿಸಲ್ಪಟ್ಟಿದೆ. ಹೀಗೆ ಪರಮೇಶ್ವರನಿಂದ ಪ್ರಕಾಶವಾದ ಜಗತ್ತು ಸತ್ಯವೇ ಹೊರತು ಮಿಥ್ಯೆಯಲ್ಲ. ಭುಕ್ತಿಯು ಮುಕ್ತಿಗೆ ಮಾರಕವಲ್ಲ. ಭುಕ್ತಿ ಮುಕ್ತಿಗಳ ಸಾಮರಸ್ಯವೇ ಪ್ರತ್ಯಭಿಜ್ಞಾದರ್ಶನದ ಮೇಲ್ಮೆ.

ಏಕದೇವಹ್ಯಸ್ಯ ದರ್ಶನಾಂತರೇಭ್ಯೋ
ವೈಶಿಷ್ಟ್ಯಂ ಮದ್‌ಭೋಗಮೋಕ್ಷದಿತಯಾನುಭೂತಿ
ಸಾಮರಸ್ಯಂ ನಾಮಂ

(ಮಹಾರ್ಥಮಂಜರಿ)

ಪ್ರವೃತ್ತಿಭಾವ : ಜೀವನದಲ್ಲಿರುವ ಶಕ್ತಿಸಂಕೋಚವು ಪ್ರಸಿದ್ಧವಾಗಿದೆ. ಮಿತಿಯಿಲ್ಲದ ಆಸೆ ಒಂದಲ್ಲ ಒಂದು ರೀತಿ ಕಾಡುತ್ತದೆ. ಆಸೆಗಳನ್ನು ತೃಪ್ತಿಪಡಿಸುವುದು ಸುಲಭಸಾಧ್ಯವಲ್ಲ. ತೃಪ್ತಿಗೆ ಎಷ್ಟುಬಗೆಯ ಸಾಧನೆಗಳನ್ನು ಪಡೆದರೂ ಆಸೆಯು ಬೆಳೆಯುತ್ತಲೇ ಇರುತ್ತದೆ. ಶಾರೀರಕವಾದ ತೃಪ್ತಿಯನ್ನು ಪಡೆದರೂ ಮಾನಸಿಕವಾದ ಆಕಾಂಕ್ಷೆಗಳು ಬೆಳೆಯುತ್ತಲೇ ಇರುತ್ತವೆ. ಪರಿಚ್ಛಿನ್ನವಾದ ಈ ವಿಷಯಗಳಲ್ಲಿ ಈ ಆಕಾಂಕ್ಷೆಗಳನ್ನು ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಅನಂತವಾದ ತತ್ತ್ವದಲ್ಲಿ ಮಾತ್ರ ಈ ಆಕಾಂಕ್ಷೆಗಳು ಕೊನೆಗೊಳ್ಳುತ್ತವೆ. ಈ ಸಾರ್ವಭೌಮಸ್ಥಿತಿಯನ್ನು ಪಡೆಯುವುದಕ್ಕೆ ಮೋಕ್ಷ ಎಂದು ಹೆಸರು. ಬಹುಕಾಲದಿಂದಲೂ ಅಲ್ಪವಾದ ವಿಷಯಗಳ ಹೊಯ್ದಾಟಗಳು ಶಾಂತಿಯನ್ನುಂಟುಮಾಡಲಾರವೆಂದೂ ಇವುಗಳನ್ನು ತಿರಸ್ಕರಿಸುವುದೇ ಲೇಸೆಂದು ಒಂದು ವಾದವಿದೆ. ಅದರ ತೀವ್ರಸ್ಥಿತಿಯಲ್ಲಿ ವ್ಯವಹಾರಜೀವನವನ್ನು ಬಾಹ್ಯಪ್ರಪಂಚವನ್ನು ತೃಣೀಕರಿಸುವ ಭರದಲ್ಲಿ ಪಂಡಿತರು ವಿಶ್ವವನ್ನೇ ತೆಗಳುತ್ತಾರೆ. ತೆಗಳುವುದರಲ್ಲಿ ಅನಿತ್ಯವಾದ ಅಲ್ಪವಾದ ಸುಖದುಃಖಗಳು ಕೇವಲ ಭ್ರಾಂತಿಯೆಂದೂ ಕಲ್ಪಿತವಾದುವುಗಳೆಂದೂ ವಿವರಣೆಯನ್ನು ಕೊಟ್ಟಿರುತ್ತಾರೆ. ಏನು ವ್ಯಾಖ್ಯಾನಗಳನ್ನು ಮಾಡಿದರೂ ಹುಟ್ಟಿದಾಗಲಿಂದ ಸಾಯುವವರೆಗೂ ಪ್ರಾಣಿಯು ಮನುಷ್ಯ ಕಲ್ಪಿತವಾದ ಮತ್ತು ಸ್ವಭಾವ ನಿರ್ಮಿತವಾದ ಪರಿಮಿತಿಯನ್ನೂ ಮತ್ತು ಅವುಗಳಿಂದುಂಟಾಗುವ ಸುಖದುಃಖಗಳನ್ನು ತಪ್ಪಿಸಿಕೊಳ್ಳಲಾರನು.

ಸುಖದುಃಖಗಳನ್ನನುಭವಿಸುವವನು ಪರಾಧೀನನಾಗಿರಬೇಕು. ಅಲ್ಲದೆ ಇದನ್ನನುಭವಿಸುವ ಪ್ರಾಣಿಗಳು ಪರಸ್ಪರ ಭಿನ್ನವಾಗಿರಬೇಕು. ಪ್ರತಿಯೊಬ್ಬನ ಅನುಭವವೂ ಬೇರೆ ಬೇರೆಯಾಗಿರುತ್ತದೆ. ಸಮಾನವಾದ ಅನುಕೂಲ ಮತ್ತು ಅವಕಾಶಗಳನ್ನು ಕಲ್ಪಿಸಿದರೂ ವ್ಯಕ್ತಿಗಳ ಭಾವನೆಗಳೂ ಯೋಗ್ಯತೆಗಳೂ ವ್ಯತ್ಯಾಸವಾಗಿರುತ್ತವೆ. ಇದರಿಂದ ಮನುಷ್ಯ ಕಲ್ಪಿತವಾದ ವ್ಯವಸ್ಥೆಗಳಿಗಿಂತ ಬೇರೆ ಯಾವುದೋ ಮಹತ್ತರವಾದ ಕಾರಣ ಈ ವೈಚಿತ್ರ್ಯಕ್ಕೆ ಇದೆ ಎಂದು ಸಿದ್ಧವಾಗುತ್ತದೆ. ಇದನ್ನೇ 'ಕರ್ಮ'ವೆಂದು ವ್ಯವಹರಿಸುವರು. ಕರ್ಮಬದ್ಧನಾಗಿರುವವನು ಜೀವಾತ್ಮನು. ಈ ಕರ್ಮಗಳ ಸಂಪೂರ್ಣ ವಿನಾಶವೇ ಬಿಡುಗಡೆ ಎಂದು ಹಿರಿಯರು ನಿಶ್ಚಯಿಸಿರುವರು. ಕರ್ಮಗಳ ನಾಶವು ಕರ್ಮಗಳಿಂದಲೇ ಆಗಬೇಕೆಂಬ ಅಂಶವು ಅನೇಕ ರೀತಿಯಾಗಿ ಸಾವಿರಾರು ವರ್ಷಗಳಿಂದಲೂ ವಿವೇಚಿಸಲ್ಪಟ್ಟಿರುತ್ತದೆ. ಈ ವಿಷಯದಲ್ಲಿ ಎರಡು ಅಂಶಗಳು ಪ್ರಧಾನವಾಗಿವೆ. ಜೀವಾತ್ಮರು ಪರಸ್ಪರ ಬೇರೆಯಾಗಿದ್ದಾರೆ. ಅವರ ಹಿಂದಿನ ಕರ್ಮಾನುಸಾರ ಅವರ ಸ್ಥಿತಿಗಳು ರೂಪುಗೊಳ್ಳುತ್ತವೆ ಎಂಬ ವಿಷಯದಲ್ಲಿ ಎಲ್ಲರಲ್ಲಿಯೂ ಒಮ್ಮತವಿದೆ. ಪ್ರಾಣಿಯು ಒಂದು ಜನ್ಮದಲ್ಲಿ ಕರ್ಮವನ್ನಾಚರಿಸಿ ಇನ್ನೊಂದು ಜನ್ಮವನ್ನು ತಾಳಿದಾಗ ಈ ಕರ್ಮದ ಫಲವು ಆ ಜೀವಿಗೆ ತಲುಪುವುದು ಹೇಗೆ ಎಂಬ ಪ್ರಶ್ನೆಗೆ ಸರ್ವಾಂತರ್ಯಾಮಿಯಾದ ಈಶ್ವರನನ್ನು ಒಪ್ಪದಿರುವವರಿಗೆ ಸಮಂಜಸವಾದ ಉತ್ತರವು ಬರುವುದಿಲ್ಲ. ಕರ್ಮಕ್ಕೇನೆ ಆ ಶಕ್ತಿಯನ್ನು ಗೌರವವನ್ನು ಕೊಟ್ಟು ಯುಕ್ತಿಗಳಿಂದ ಸಮರ್ಥಿಸುವವರು ನಿರೀಶ್ವರವಾದಿಗಳು ಎನ್ನಿಸಿಕೊಂಡಿರುತ್ತಾರೆ. ಜೈನರು ಬೌದ್ಧರು ಮೀಮಾಂಸಕರು ಈ ಗುಂಪಿಗೆ ಸೇರಿದವರು.

ಅದ್ವೈತ ಭಾವ : ಜೀವಾತ್ಮನು ಕರ್ಮವನ್ನಾಚರಿಸಿದರೂ ಫಲವು ಪರಮಾತ್ಮನ ನಿರ್ಣಯದಿಂದ ದೊರಕುವುದೆಂದು ಹೇಳುವವರ ಗುಂಪೊಂದು ಸಾಮಾನ್ಯವಾಗಿ ನ್ಯಾಯ ವೈಶೇಷಿಕ, ಯೋಗ ಮೊದಲಾದವರು ಈ ಗುಂಪಿಗೆ ಸೇರಿದವರೆಂದು ಹೇಳಬಹುದು. ಈ ದಾರ್ಶನಿಕರು ದ್ವೈತಭಾವವನ್ನು ಪುಷ್ಟೀಕರಿಸಿ ಪರಮಾತ್ಮನಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಅಂಗೀಕರಿಸಿರುತ್ತಾರೆ. ವಿಶ್ವಕ್ಕೆಲ್ಲಾ ಮೂಲಕಾರಣವಾಗಿರುವ ಪರತತ್ತ್ವ ಒಂದೇ. ಅದೇ ಪರತತ್ತ್ವ (ಪರಮಶಿವ) ತನ್ನ ಸ್ವಾತಂತ್ರ್ಯ ಶಕ್ತಿಯಿಂದಲೇ ಅನಂತ ವಿಕಾರಗಳುಳ್ಳ ಜಡರೂಪದಿಂದ ವಿಶ್ವರೂಪವಾಗಿಯೂ ಅಸಂಖ್ಯಾತವಾದ ಚಿತ್ಸ್ವರೂಪಿಗಳಾದ ಜೀವಾತ್ಮರುಗಳಾಗಿಯೂ ಇದ್ದಾರೆನ್ನುವುದು ಇನ್ನೊಂದು ಗುಂಪು. ಈ ಅಭಿಪ್ರಾಯವನ್ನೇ ಅದ್ವೈತ ಸಂಪ್ರದಾಯ ಮುಖ್ಯವಾಗಿ ಅಂಗೀಕರಿಸಿದೆ.

ಒಂದೇ ಇದೆ ಎರಡಿಲ್ಲ ಎಂಬುದಕ್ಕೆ ಅದ್ವೈತ ಎಂದು ಹೆಸರು. ಮಾಧ್ಯಮಿಕರು ಶೂನ್ಯಾದ್ವೈತಿಗಳು, ಯೋಗಾಚಾರರು ವಿಜ್ಞಾನಾದ್ವೈತಿಗಳು. ವಿವರ್ತವಾದಿಗಳು ನಿರ್ವಿಶೇಷಾದ್ವೈತಿಗಳು, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತಿಗಳು–ಇವೆರಡು ಪಂಗಡದವರು ಸವಿಶೇಷಾದ್ವೈತಿಗಳು. ಯಾದವ ಪ್ರಕಾಶಾಚಾರ್ಯರು ಬ್ರಹ್ಮಾದ್ವೈತಿಗಳು. ಕಾಶ್ಮೀರ ಶೈವಸಂಪ್ರದಾಯದವರು ಭೇದಾಭೇದರೂಪವಾದ ಅದ್ವೈತಿಗಳು. ಹೀಗೆ

ಅದ್ವೈತ ಪದವು ಎಲ್ಲಾ ದಾರ್ಶನಿಕರ ಸ್ವತ್ತಾಗಿರುತ್ತದೆ. ವಿವರ್ತವಾದ ಒಂದನ್ನು ಬಿಟ್ಟರೆ ಮಿಕ್ಕ ಅದ್ವೈತವಾದಿಗಳೆಲ್ಲಾ ಒಂದಲ್ಲ ಒಂದು ರೀತಿ ಜಗತ್ತು, ಪುಣ್ಯಪಾಪಗಳು ಬಂಧ ಮೋಕ್ಷಗಳು ಸತ್ಯವಾಗಿವೆಯೆನ್ನುತ್ತಾರೆ. ಸತ್ಯವಾದ ವಿಶ್ವದಲ್ಲಿ ಕರ್ಮಪ್ರಭಾವವು ಅನಾದಿ ಕಾಲದಿಂದಲೂ ಹರಿದು ಬಂದು ಮೋಕ್ಷದೊಡನೆ ಕೊನೆಗೊಳ್ಳುತ್ತದೆ ಎಂಬುದೇ ಇವರ ಮುಖ್ಯ ಅಭಿಪ್ರಾಯ. ಜಗತ್ತು ಪರಬ್ರಹ್ಮನಿಂದ ಬೇರೆಯಲ್ಲವೆಂದೂ ಅಭಿನ್ನ ವಾಗಿಯೂ ಭಿನ್ನವಾಗಿಯೂ ಇರುವುದೆಂದೂ ಅದೇ ಪರವಸ್ತುವಿನ ಶಕ್ತಿ ಪರಿಣಾಮ ರೂಪವಾಗಿರುವುದೆಂದೂ ಹೇಳುವವರ ಪಂಕ್ತಿಯಲ್ಲಿ ಕಾಶ್ಮೀರ ಶೈವಸಂಪ್ರದಾಯದವರು ಸೇರಿರುತ್ತಾರೆ. ಇಲ್ಲಿ ಕರ್ಮಸ್ವರೂಪವು ಒಂದು ವಿಲಕ್ಷಣವಾದ ರೀತಿಯಲ್ಲಿ ವಿವರಿಸಲ್ಪಟ್ಟಿದೆ. ಪರಿಪೂರ್ಣವಾದ ಪಂಚಶಕ್ತಿಗಳಿಂದ ಕೂಡಿದ ಆ ಪರಶಿವನು ತನ್ನ ಸ್ವಾತಂತ್ರ್ಯಶಕ್ತಿ ಯಿಂದಲೇ ವಿಶ್ವಾತೀತನಾಗಿಯೂ ವಿಶ್ವಾತ್ಮಕನಾಗಿಯೂ ವಿರಾಜಿಸುವನು ಎಂಬುದು ಮೊದಲನೆಯ ಅಂಶ. ವಿಶ್ವಾತೀತ ಸ್ಥಿತಿಯಲ್ಲಿ ಯಾವ ಉಬ್ಬರವಿಳಿತಗಳಿಲ್ಲದೆ ಪ್ರಶಾಂತ ಸ್ಥಿತಿಯಲ್ಲಿರುತ್ತಾನೆ. ವಿಶ್ವಾತ್ಮಕಸ್ಥಿತಿಯಲ್ಲಿ ಗ್ರಾಹಕರಿಂದ ಜೀವಾತ್ಮರುಗಳೂ ಗ್ರಾಹ್ಯ ವಾದ ಜಗತ್ತೂ ಗ್ರಹಣ ಸಾಧನಗಳಾಗಿರುವ ಶರೀರ ಮತ್ತು ಇಂದ್ರಿಯಗಳೂ ಬೇರೆ ಬೇರೆ ವಿಭಿನ್ನಸ್ವಭಾವಗಳಿಂದ ತೋರುತ್ತವೆ. ಇದಕ್ಕೆ ಕಾರಣಗಳು ನಾನಾ ಬಗೆಯಾಗಿವೆ. ಜೀವಾತ್ಮರುಗಳು ಶುಭಾಶುಭ ಕರ್ಮವನ್ನಾಚರಿಸುತ್ತಾರೆ, ಅನುಭವಿಸುತ್ತಾರೆ. ಇವು ಸುಖ ದುಃಖಗಳ ರೂಪವಾಗಿ ಅನುಭವಕ್ಕೆ ಬರುತ್ತವೆ. ಇದನ್ನೇ ಕಾರ್ಮಮಲವೆಂದು ಕರೆಯುವುದು.

ಸ್ಥೂಲವಾದ ಶರೀರ, ಸೂಕ್ಷ್ಮವಾದ ಇಂದ್ರಿಯಗಳು ಇವುಗಳ ಸಂಘಟನೆಗೆ ಆಶ್ರಯವಾದ ಪುರ್ಯಷ್ಟಕ ಇವುಗಳ ಸಂಬಂಧದಿಂದ ಆಚರಿಸುವ ಕರ್ಮವು ಅನೇಕ ಮುಖವಾಗಿರುತ್ತದೆ. ಈ ಕರ್ಮಗಳೇ ಜ್ಞಾನವಿಕಾಸಕ್ಕೆ ಕಾರಣಗಳಾಗಿ ಶ್ರೇಯಸ್ಸನ್ನುಂಟು ಮಾಡುತ್ತವೆ. ಹಾಗೆಯೇ ಅಧೋಗತಿಗೆ ಕಾರಣಗಳಾಗುತ್ತವೆ. ಕರ್ಮಗಳು ಸಾಕ್ಷಾತ್ತಾಗಿ ಜ್ಞಾನವಿಕಾಸಕ್ಕೆ ಕಾರಣಗಳಲ್ಲ. ಪರಂಪರೆಯಾಗಿ ಜ್ಞಾನವಿಕಾಸವನ್ನು ಪಡೆಯುವ ಯೋಗ್ಯತೆಯನ್ನುಂಟುಮಾಡುತ್ತವೆ. ಕರ್ಮಾಚರಣೆಯು ಎಲ್ಲಿಯವರೆಗಿರುತ್ತದೆ, ಎಲ್ಲಿ ನಿಲ್ಲುತ್ತದೆ ಎಂಬ ವಿಷಯದಲ್ಲಿ ಬಹಳ ಗೊಂದಲವಿದೆ. ಕರ್ಮಶಬ್ದಕ್ಕೆ ತವುಗಿಷ್ಟಬಂದ ಅರ್ಥವನ್ನು ಹೇಳಿಕೊಂಡು ವಿವರಣೆ ಕೊಡುತ್ತಾರೆ. ಈ ಕಾಶ್ಮೀರ ಶೈವಸಂಪ್ರದಾಯದಲ್ಲಿ ಕ್ರಿಯಾಶಕ್ತಿ ವಿಲಾಸರೂಪವಾದ ಕರ್ಮಾಚರಣೆಯು ಚಿತ್ತತ್ತ್ವದ ಶಕ್ತಿವಿಲಾಸ. ಹೀಗೆ ತಿಳಿದರೆ ಮತ್ತು ಅನುಸಂಧಾನದಿಂದ ಕರ್ಮವನ್ನಾಚರಿಸಿದರೆ ಜೀವನಿಗೆ ಬಂಧಕಗಳಾಗು ವುದಿಲ್ಲ. ತಿಳಿಯದೆ ಅಹಂಕಾರ ಮಮಕಾರಗಳಿಂದ ಕೂಡಿದ್ದರೆ ಬಂಧಕಗಳಾಗುವುವು ಎಂಬುದು ಇವರ ತೀರ್ಮಾನ.

ಪರಮಾತ್ಮನ ಸೇವೆಯಿಂದ ಕರ್ಮಗಳನ್ನು ಮಾಡುವುದು ; ಫಲ, ಸಂಗ, ಕರ್ತೃತ್ವ ಈ ಮೂರನ್ನೂ ತ್ಯಜಿಸಿ ಕರ್ಮಾಚರಣೆಯನ್ನು ಮಾಡುವುದು; ಪ್ರಕೃತಿಯ ಧರ್ಮವೆಂದು ತಿಳಿದು ನಿರ್ಲಿಪ್ತಭಾವನೆಯಿಂದ ಕರ್ಮಗಳನ್ನಾಚರಿಸುವುದು ; ಲೌಕಿಕ ಮತ್ತು ವೈದಿಕ

ಕರ್ಮಗಳನ್ನು ಸಮಪ್ರಧಾನವಾಗಿ ಎಣಿಸುವುದು ಇವೇ ಮೊದಲಾದ ಮತಭೇದಗಳೂ ಮತಿಭೇದಗಳೂ ಇವೆ. ಚಿತ್ತತ್ತ್ವಕ್ಕೆ ಆಣವಮಲದಿಂದ ಸಂಕೋಚ, ಮಾಯಿಯ ಮಲ ದಿಂದ ಕರಣ ಕಳೇಬರ ಪ್ರಾಪ್ತಿ ; ಕ್ರಿಯಾಶಕ್ತಿಯಿಂದ ಶುಭಾಶುಭ ಕರ್ಮಾಚರಣೆ. ಇದರ ರಹಸ್ಯವನ್ನು ತಿಳಿದವನು ಶಿವನೇ ತನ್ನ ಲೀಲೆಯಿಂದ ಈ ವ್ಯಾಪಾರ ನಡೆಸುವನೆಂದು ತಿಳಿಯುತ್ತಾನೆ. ಈ ತಿಳಿವಳಿಕೆಯಿಂದ ಅಭೇದದಲ್ಲಿ ಭೇದವನ್ನೂ ಭೇದದಲ್ಲಿ ಅಭೇದ ವನ್ನೂ ಚಮತ್ಕಾರವೆಂದು ಅನುಸಂಧಾನಮಾಡಿ ಕೊನೆಗೆ ಅಭೇದ ವ್ಯಾಪ್ತಿಸಾರವಾದ ಪೂರ್ಣಾಹಂತಾನುಭವನ್ನು ಪಡೆಯುತ್ತಾನೆ. ಎದುವರೆಗೆ ಈ ವಿಶ್ವದ ಮತ್ತು ತನ್ನ ಸ್ವರೂಪಗಳ ಅರಿವಾಗುವುದಿಲ್ಲವೋ, ಎದುವರೆಗೆ ಈ ಉಬ್ಬರವಿಳಿತಗಳೆಲ್ಲಾ ಶಕ್ತಿಚಕ್ರ ವಿಲಾಸವೆಂದು ಅನುಭವಕ್ಕೆ ಬರುವುದಿಲ್ಲವೋ ಅದುವರೆಗೆ ಕರ್ಮಬಂಧಕವಾಗುತ್ತದೆ. ತತ್ತ್ವಜ್ಞಾನವುಂಟಾದ ನಂತರ ಕರ್ಮವೇ ಜ್ಞಾನವಿಕಾಸಕ್ಕೆ ಸಹಕಾರಿಯಾಗುತ್ತದೆ. ಶಾರೀರಿಕವಾದ ಕರ್ಮ ಪ್ರಸಿದ್ಧವಾಗಿದೆ. ಮಾನಸಿಕವಾದ ಭಾವನೆಗಳು ಅನುಭವದಲ್ಲಿವೆ. ಇವೆರಡೂ ಇಲ್ಲದಿರುವ ಪ್ರಶಾಂತ ಸ್ಥಿತಿಯೇ ಸ್ವಸ್ವರೂಪವೆಂದೂ ಮಾನಸಿಕ ಮತ್ತು ಶಾರೀರಿಕ ಚಲನವಲನಗಳಿಗೆ ಪ್ರಶಾಂತವಾದ ಚಿತ್ತತ್ತ್ವವೇ ಆಶ್ರಯವೆಂದೂ ವಿಮರ್ಶೆ ಯಿಂದ ಅನುಭವಕ್ಕೆ ಬರಬೇಕು. ಇದನ್ನೇ 'ಸ್ವಾತ್ಮ ವಿಮರ್ಶೆ' ಎನ್ನುವುದು. ತನ್ನನ್ನು ತಾನು ತಿಳಿಯಬೇಕು ಎಂಬುದನ್ನು ಅಂತರ್ಮುಖತ್ವ ಮೊದಲಾದ ಪದಗಳಿಂದ ಹೇಳುತ್ತಾರೆ. ಇತರ ಸಂಪ್ರದಾಯಗಳಿಂದ ಇಲ್ಲಿರುವ ವಿಶೇಷವೇನೆಂದರೆ ತಾನೆ ಶಿವನೆಂಬ ಭಾವನೆ. ಈ ವಿರಾಡ್ಭಾವನೆಯಿಂದ ಆರಂಭಾವಸ್ಥೆಯಲ್ಲಿ ಎಲ್ಲಾ ವಿಷಯಗಳಲ್ಲಿಯೂ ಪರಶಿವನನ್ನು ಕಾಣುತ್ತಾನೆ. ಪರಿಪಾಕಾವಸ್ಥೆಯಲ್ಲಿ ತಾನು ಶಿವಾಭಿನ್ನನೆಂದು ಗುರುತಿಸು ವನು. ಈ ಅಭೇದಕ್ರಮವನ್ನು ಅನುಭವಕ್ಕೆ ತಂದುಕೊಳ್ಳಲು ಮುಖಭೇದದಿಂದ ಶಾಸ್ತ್ರೀಯ ವಿವರಣೆಗಳುಂಟು. ವಿಶ್ವಕ್ಕೂ ತನಗೂ ಇರುವ ಸಂಬಂಧ, ತಾನು ಯಾವ ರೀತಿ ವಿಶ್ವದೊಡನೆ ಸಂಪರ್ಕವಿಟ್ಟುಕೊಂಡಿರಬೇಕು, ಸಾಧಕನ ಯೋಗ್ಯತಾನುಸಾರವಾಗಿ ಅನೇಕ ಬಗೆಯಾದ ನಿರೂಪಣೆಗಳಿರುತ್ತವೆ. ಈ ಹಿನ್ನೆಲೆಯಿಂದ ತಿಳಿಯಬೇಕಾಗಿರುವ ತತ್ತ್ವ ಒಂದೇ ಆದರೂ ಅದು ಅಭಿನ್ನವಾಗಿಯೇ ಇದ್ದರೂ ಭೇದಾಭೇದರೂಪವನ್ನು ಹೇಗೆ ಪಡೆಯಿತು ಎಂಬ ಶಂಕೆಗಳಿಗೆ ಸಮಾಧಾನಗಳನ್ನು ಶಿವದೃಷ್ಟಿ ಈಶ್ವರ ಪ್ರತ್ಯಭಿಜ್ಞಾ, ಸ್ಪಂದಶಾಸ್ತ್ರ ಗ್ರಂಥಗಳ ಸಂಕ್ಷಿಪ್ತ ವಿವರಣೆಯಿಂದ ತಿಳಿಯಬಹುದು.

ಭಕ್ತಿ

ಪರಮೇಶ್ವರನಲ್ಲಿಟ್ಟಿರುವ ಪರಾನುರಾಗವೇ ಭಕ್ತಿ. ಪರಮೇಶ್ವರನಲ್ಲಿ ಮನಸ್ಸನ್ನು ಸ್ಥಿರಗೊಳಿಸುವುದಕ್ಕೆ ಏಕಾಗ್ರತೆ ಬೇಕು. ಏಕಾಗ್ರತೆಯು ಅಭ್ಯಾಸದಿಂದ ಸಿದ್ಧಿಸುತ್ತದೆ. ಅಭ್ಯಾಸಕ್ಕೆ ಜ್ಞಾನಮಾರ್ಗವೂ ಅದಕ್ಕೆ ತಕ್ಕ ಧ್ಯಾನ ಮತ್ತು ಕರ್ಮಫಲ ತ್ಯಾಗರೂಪ ವಾದ ಭಕ್ತಿಯೂ ಕಾರಣವಾಗಿದೆ. ಭಕ್ತಿಯಿಂದ ಚಿರಶಾಂತಿ ಲಭಿಸುವುದೆಂದು ಸ್ಪಷ್ಟ ಪಡಿಸಲಾಗಿದೆ. (ಗೀತೆ ೧೨-೨-೧೨)

ಅನನ್ಯತೆಯಿಂದ ನನ್ನನ್ನು ಉಪಾಸಿಸಿದ ಪಕ್ಷದಲ್ಲಿ ಅವರ ಯೋಗಕ್ಷೇಮ ನನ್ನದು (೯-೨೨) ಪತ್ರ ಪುಷ್ಪ ಫಲ ಯಾವುದನ್ನಾದರೂ ಭಕ್ತಿಯಿಂದಿತ್ತರೆ ಸಾಕು (೯-೨೬) ಇಂದ್ರಿಯಗಳಿಂದ ಸೇವಿಸುವುದನ್ನೆಲ್ಲಾ ನನಗೆ ಅರ್ಪಿಸು (೯-೨೭) ನನ್ನನ್ನು ತಿಳಿಯುವುದಕ್ಕೂ ದರ್ಶನ ಮಾಡುವುದಕ್ಕೂ ನನ್ನಲ್ಲಿ ಪ್ರವೇಶಿಸುವುದಕ್ಕೂ ಅನನ್ಯ ಭಕ್ತಿಯೇ ಸಾಧನ. ಪರಮ ಗೂಢವಾದ ಜ್ಞಾನವನ್ನು ಹೊಂದಿದವನೂ ನನ್ನಲ್ಲಿ ಪರಮ ಭಕ್ತಿಗೈಯ್ಯುವುದರಿಂದ ನಿಸ್ಸಂದೇಹವಾಗಿ ನನ್ನನ್ನು ಹೊಂದುವನು. (ಗೀತೆ. ೧೮-೬೮)

'ಶ್ರದ್ಧಾಭಕ್ತಿಧ್ಯಾನ ಯೋಗಾದವೇಹಿ'

(ಕೈವಲ್ಯೋಪನಿಷತ್ ೧-೨.)

ಬ್ರಹ್ಮಸಾಧನ ಸಾಮಗ್ರಿಯಲ್ಲಿ ಭಕ್ತಿಯು ಮಧ್ಯಮಣಿಯಂತೆ ಸೇರಿರುವುದು ಭಕ್ತಿಯ ಶ್ರೇಷ್ಠತೆಯನ್ನು ಸೂಚಿಸುವುದು. ಗೀತೆಯಲ್ಲಿ ಭಕ್ತಿಯನ್ನು ಯೋಗವೆಂದೇ ಕರೆಯಲಾಗಿದೆ.

ಯಸ್ಯದೇವೆ ಪರಾಭಕ್ತಿಃ ಯಥಾ ದೇವೆ ತಥಾ ಗುರೌ

(ಶ್ವೇತಾಶ್ವತರ ೬-೨೭.)

ನಿಷ್ಕಾಮವೂ ಅನನ್ಯವೂ ನಿರತಿಶಯಪ್ರೇಮವೂ ಪರಮೇಶ್ವರನಲ್ಲಿ ತುಂಬಿರುವುದೇ ಭಕ್ತಿ. ಭಕ್ತಿಯು ಪೂಜೆ ಮೊದಲಾದ ಬಾಹ್ಯಕರ್ಮಗಳಿಂದ ಆರಂಭವಾಗಿ, ಕೀರ್ತನ ಮೊದಲಾದ ವಾಚಿಕ ಕರ್ಮರೂಪದಿಂದ ತಳೆದು ಸರ್ವಸಮರ್ಪಣ ಭಾವವನ್ನು ನೆಲೆಗೊಳಿಸುವುದರ ಮೂಲಕ ಪರಿಣಾಮ ಹೊಂದಿ ಅದು ಆತ್ಮನಿವೇದನೆಯಲ್ಲಿ ಪರ್ಯವಸಾನವಾಗುವುದು.

ಉಪನಿಷತ್ತು ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳ ಆಧಾರದಮೇಲೆ ಸ್ಥಾಪಿತವಾಗಿರುವ ವೈದಿಕ ಮತಗಳಿಗೆ ಭಕ್ತಿಯೇ ಬಲವಾದ ತಳಹದಿ.

'ಮೋಕ್ಷಕಾರಣ ಸಾಮಗ್ರ್ಯಾಂ ಭಕ್ತಿರೇವ ಗರೀಯಸಿ'

ಮೋಕ್ಷೋಪಾಯ ಸಾಮಗ್ರಿಯಲ್ಲಿ ಭಕ್ತಿಯೇ ಶ್ರೇಷ್ಠವಾದದ್ದೆಂದು ಶ್ರೀ ಶಂಕರಾಚಾರ್ಯರು ಉಪದೇಶಿಸುತ್ತಾ ಭಕ್ತಿಯ ನಾನಾ ಸ್ವರೂಪವನ್ನು ವಿವರಿಸಿರುವರು.

ಅಂಕೋಲಂ ನಿಜಸಂತತಿರಯಸ್ಕಾಂತೋಪಲಂ ಸೂಚಿಕಾ
ಸಾಧ್ವೀ ನೈಜವಿಭುಂ ಲತಾಕ್ಷಿತಿರುಹಂ ಸಿಂಧುಸರಿದ್ವಲ್ಲಭಂ ।
ಪ್ರಾಪ್ನೋತೀಹ ಯಥಾತಥಾ ಪಶುಪತೇಃ ಪಾದಾರವಿಂದದ್ವಯಂ
ಚೇತೋವೃತ್ತಿರುಪೇತ್ಯತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೆ ॥

(ಶಿವಾನಂದಲಹರಿ, ಶಂಕರಾಚಾರ್ಯ)

ಅಂಕೋಲವೃಕ್ಷದ ಹಣ್ಣುಗಳು ಮರದಿಂದ ನೆಲದ ಮೇಲೆ ಬಿದ್ದಾಗ ಆ ಹಣ್ಣಿನಿಂದ ಕಳಚಿಕೊಂಡ ಬೀಜಗಳು ಯಾವುದೋ ಒಂದು ವಿಧವಾದ ಆಕರ್ಷಣ ಶಕ್ತಿಯ ಬಲದಿಂದ ಬುಡಕ್ಕೆ ಸೆಳೆಯಲ್ಪಟ್ಟು ಕ್ರಮೇಣ ಮರದ ಮೇಲಕ್ಕೆ ಹತ್ತಿ ಮರವನ್ನು ಬಿಡದೆ ಅಂಟಿಕೊಂಡಿರುತ್ತವೆ. ಹಾಗೆಯೇ ನಿಜಭಕ್ತನ ಮನಸ್ಸು ಯಾವಾಗಲಾದರೂ ಚಂಚಲವಾಗಿ ಬೇರೆಕಡೆ ನುಗ್ಗಿದರೂ ಪುನಃ ಪಶುಪತಿಯಲ್ಲಿಯೇ ನೆಲೆಸಿರಲು ಪ್ರಯತ್ನಿಸುತ್ತದೆ.

ಅಯಸ್ಕಾಂತಮಣಿ (ಸೂಜಿಗಲ್ಲು)ಗೆ ಸೂಜಿಯನ್ನು ಸಮೀಪಕ್ಕೆ ಹಿಡಿದ ಹಾಗೆಲ್ಲಾ ಹೇಗೆ ಆಕರ್ಷಿಸಲ್ಪಟ್ಟು ಅದರಲ್ಲಿ ಕಚ್ಚಿಕೊಳ್ಳುತ್ತದೆಯೋ ಹಾಗೆ ಭಕ್ತನ ಮನಸ್ಸು ಎಷ್ಟೆಷ್ಟರ ಮಟ್ಟಿಗೆ ಪರಮಾತ್ಮನ ಕಡೆಗೆ ಒಲಿಯುತ್ತದೆಯೋ ಅಷ್ಟಷ್ಟರ ಮಟ್ಟಿಗೆ ಹತ್ತಿರ ಸಮೀಪಿಸಿ ಪರಮಾತ್ಮನಲ್ಲಿ ನೆಲೆಸುತ್ತದೆ. ಸೂಜಿ ಅಥವಾ ಕಬ್ಬಿಣದ ತುಂಡು ಕೊಳೆಯಿಂದ ಕೂಡಿರದೆ ಶುಭ್ರವಾಗಿರಬೇಕೆಂಬ ಅಂಶವನ್ನು ಗಮನಿಸಬೇಕು. ಹಾಗೆಯೇ ಭಕ್ತನ ಮನಸ್ಸು ರಾಗದ್ವೇಷಗಳಿಂದ ದೂರವಾಗಿ ಶುಭ್ರವಾಗಿರಬೇಕು. ಎಷ್ಟು ಸ್ವಚ್ಛವಾಗಿದ್ದರೆ ಅಷ್ಟು ಸಮೀಪವಾಗಿ ಆಕರ್ಷಿಸಲ್ಪಡುತ್ತಾನೆ. ಭಕ್ತಿಭಾವವು ತೀವ್ರವಾದಷ್ಟು ದೇವರ ಸಾನ್ನಿಧ್ಯ ಹತ್ತಿರವಾಗುತ್ತದೆ. ದೇವರ ಸಮೀಪಕ್ಕೆ ಹೋದ ಹಾಗೆಲ್ಲಾ ಆಕರ್ಷಿಸಲ್ಪಟ್ಟು ಅನುಗ್ರಹಿಸಲ್ಪಡುತ್ತಾನೆ. ಇಲ್ಲಿ ಭಕ್ತಿಭಾವದ ತೀಕ್ಷ್ಣತೆ ಪ್ರಧಾನ.

ಪತಿವ್ರತೆಯಾದ ಸಾಧ್ವೀಮಣಿಯು ತಾನೆಲ್ಲಿದ್ದರೂ ಏನು ಕೆಲಸ ಮಾಡುತ್ತಿದ್ದರೂ ಆಕೆಯ ಒಲವು ಪತಿಯ ಸ್ಮರಣೆಯನ್ನು ಬಿಡುವುದಿಲ್ಲವೋ ಹಾಗೆ ಭಕ್ತನು ತಾನು ಯಾವ ಕೆಲಸದಲ್ಲಿದ್ದರೂ ತನ್ನ ಸುತ್ತಮುತ್ತಲಿರುವ ಎಲ್ಲಾ ಕಡೆಯೂ ದೇವರ ಸಾನ್ನಿಧ್ಯವನ್ನು ಅನುಭವಿಸುತ್ತಿರುತ್ತಾನೆ. ಇಲ್ಲಿ ಭಕ್ತನ ಮನಸ್ಸಿನ ಅವಧಾನ ದೇವರ ಕಡೆಗಿರುವುದನ್ನು ಗಮನಿಸಬಹುದು.

ಲತಾಕ್ಷಿತಿರುಹಂ : ಬಳ್ಳಿಗೆ ಮರದಾಶ್ರಯಬೇಕು. ಹಾಗೆ ಭಕ್ತನಿಗೆ ಪರಮಾತ್ಮನ ಆಶ್ರಯಬೇಕು. ಬಳ್ಳಿಯು ಚಿಗುರಿದ ಹಾಗೆಲ್ಲಾ ತನ್ನ ಚಿಗುರಿದ ಕವಲುಗಳನ್ನು ಅಲ್ಲಿ ಇಲ್ಲಿ ಚದುರಿಸುತ್ತಾ ಯಾವುದಾದರೂ ಮರದ ಆಶ್ರಯ ಸಿಕ್ಕಿದರೆ ಅದಕ್ಕೆ ಸುತ್ತಿಕೊಂಡು ಗಟ್ಟಿಯಾಗಿ ಕಚ್ಚಿಕೊಂಡಿರುತ್ತದೆ. ಒಂದುವೇಳೆ ಆ ಬಳ್ಳಿಯನ್ನು ಮರದಿಂದ ಬಿಡಿಸಿದರೂ ಪುನಃ ಮರದ ಸಮೀಪಕ್ಕೆ ಹೋಗಿ ಕಚ್ಚಿಕೊಳ್ಳುವುದು. ಹಾಗೆಯೇ ಭಕ್ತನ ಮನಸ್ಸು ಈಶ್ವರನನ್ನು ಆರಾಧಿಸುತ್ತಾ ಮಧ್ಯೆ ಎಡರು ತೊಡರುಗಳು ಬಂದರೂ ಎಡಬಿಡದೆ ಬಳ್ಳಿಯ ಹಾಗೆ ಪರಮೇಶ್ವರನಲ್ಲಿಯೇ ಅವುಚಿಕೊಂಡಿರುತ್ತದೆ. ನಮ್ಮ ಆಗುಹೋಗುಗಳಿಗೆ ಮಹದಾಶ್ರಯವಾದ ಪರಮೇಶ್ವರನ ಬೆಂಬಲ ಬೇಕು. ಆದುದರಿಂದ ಅವನನ್ನು ಪೂರ್ಣವಿಶ್ವಾಸದಿಂದ ನಂಬಬೇಕು. ನಂಬುಗೆಯು ಕಾರಣವು ಸಾಂಬನೊಲಿವುವುದಕ್ಕೆ, ನದಿಯು ಬೆಟ್ಟದಲ್ಲಿ ಎಲ್ಲಿಯೋ ಹುಟ್ಟುತ್ತದೆ. ಕೆಳಗೆ ಹರಿಯುವಾಗ್ಗೆ ಬಾಲ್ಯದಲ್ಲಿ ಮಕ್ಕಳು ಹೇಗೆ ಶಬ್ದಮಾಡಿಕೊಂಡು ನೆಗೆಯುತ್ತಾ, ಕುಣಿಯುತ್ತಾ ಆಟವಾಡುತ್ತಿ

ರುತ್ತಾರೋ ಹಾಗೆ ನದಿಯು ಬೆಟ್ಟದಲ್ಲಿ ಹುಟ್ಟಿ ಬಂಡೆಗಳ ಮೇಲೆ ನೆಗೆಯುತ್ತಾ ಹಾರುತ್ತಾ ಸಮಭೂಮಿಗೆ ಬಂದಾಗ್ಗೆ ಶಾಂತವಾಗಿ ಹರಿದು ಕೊನೆಗೆ ಸಮುದ್ರವನ್ನು ಸೇರುವ ಆತುರತೆಯನ್ನು ಸೂಚಿಸುತ್ತದೆ.ಪ್ರೇಮದ ಗಂಡನು ಆಹ್ವಾನಿಸುವ ಹಾಗೆ; ಸಮುದ್ರವು ನದೀಮುಖದ ಕಡೆಗೆ ನುಗ್ಗಿ ಬಾಚಿ ತಬ್ಬಿಕೊಳ್ಳುವುದೋ ಎನ್ನುವಹಾಗೆ ತಬ್ಬಿಕೊಂಡು ಸಮುದ್ರದೊಳಕ್ಕೆ ಕರೆದುಕೊಂಡು ಹೋಗುತ್ತದೆ. ಅಲ್ಲಿ ನದಿಯು ವಿಶ್ರಾಂತಿಯನ್ನು ಪಡೆಯುತ್ತದೆ. ಭಕ್ತನ ಮನಸ್ಸು ದೇವರ ಕಡೆಗೆ ಹೋದಹಾಗೆಲ್ಲಾ ಶಾಂತವಾಗಿ ಪವಿತ್ರತೆಯನ್ನು ಹೊಂದುತ್ತದೆ. ಆಗ ದೇವರು ಅನುಗ್ರಹಿಸಿ ತನ್ನಲ್ಲಿಗೆ ಬರಮಾಡಿಕೊಳ್ಳುತ್ತಾನೆ. ಆಗ ಭಕ್ತನ ಮನಸ್ಸು ಆನಂದದಲ್ಲಿ ಪರ್ಯವಸಾನವಾನ ವಾಗುತ್ತದೆ. ಇದೇ ಶಿವಾನುಗ್ರಹ.

ಸತ್ಯವನ್ನು ಭಾವಿಸುವುದು ಭಕ್ತಿ. ಅದನ್ನು ನಿಚ್ಚಳವಾಗಿ ಕಾಣುವುದು ಜ್ಞಾನ. ಸತ್ಯದಂತೆ ನಡೆಯುವುದು ಕ್ರಿಯೆ. ಬಂಧಮೋಕ್ಷಗಳು ಶಿವ–ಶಕ್ತಿಗಳ ಸಂಕೋಚ ವಿಕಾಸ ಭಾವಗಳು. ಅಂತಹ ಸಂಕೋಚ ವಿಕಾಸಗಳ ಪರಿವೆಯಿಲ್ಲದೆ ಸರ್ವತೋಮುಖವಾಗಿ ಬೆಳಗುವ ಶಿವಮಯಪ್ರಕಾಶವೇ ಭಕ್ತಿ. ಎಲ್ಲಕ್ಕೂ ಪರಮೇಶ್ವರನೇ ಕರ್ತೃ ಮತ್ತು ಸಾಕ್ಷಿ ಎಂಬ ಅಭಿಮಾನರಾಹಿತ್ಯವೇ ಭಕ್ತಿಕಾಂಡದ ವೈಶಿಷ್ಟ್ಯ. ಈ ವಿಷಯದಲ್ಲಿ ಒಂದು ಸುಂದರ ಉದಾಹರಣೆ—

ಶುಕ್ತಿಃ ಕರ್ಮಪದಂ ಸರೋರುಹದಲಂ ಜ್ಞಾನಂ ಪದಂ ಭೌಕ್ತಿಕಂ
ತಪ್ತಾಯೋ ಘನಸೇಷು ಸಂಸ್ಕೃತಿ ಪಯೋಬಿಂದು ಸ್ಥಿತಸ್ತತ್ಕ್ರಮಾತ್ ॥
ಸಾಫಲ್ಯಂ ವಿಪಲತ್ವಮಾಕೃತಿಃಯಾ ಪ್ರಾಯೇಣ ನಾಶಂಗತೋ
ನಾಮ್ನಾಪ್ಯೈವ ಶಿವಾತ್ಮಿಕಾಂ ಪರತರಾಂ ಭಕ್ತಿಂ ಕಿಮಾಚಕ್ಷ್ಮಹೆ ॥

ಕರ್ಮ ಜ್ಞಾನ ಭಕ್ತಿಗಳು ಕ್ರಮವಾಗಿ ಮುತ್ತಿನ ಚಿಪ್ಪು, ಕಮಲ ದಳ ಮತ್ತು ಕಾಯ್ದ ಕಬ್ಬಿಣವಿದ್ದಂತೆ. ಮಳೆಬಿದ್ದಾಗ ಮುತ್ತಿನ ಚಿಪ್ಪಿನಲ್ಲಿ ಬಿದ್ದ ನೀರು ಸಫಲವೆಂದರೆ ಮುತ್ತಾಗುತ್ತದೆ. ಕಮಲದಳದಲ್ಲಿ ಬಿದ್ದ ನೀರು ದಳಗಳ ಆಕಾರ ತಳೆಯುತ್ತದೆ. ಆದರೆ ನಿರ್ಲಿಪ್ತವಾಗಿರುತ್ತದೆ. ಕಾಯ್ದ ಕಬ್ಬಿಣದಲ್ಲಿ ಬಿದ್ದ ನೀರು ಪ್ರಾಯಃ ನಾಶವಾಗುತ್ತದೆ. ಅದರಂತೆ ಕರ್ಮಮಾರ್ಗದಲ್ಲಿ ಮಾನವನಿಗೆ ಸ್ವರ್ಗಾದಿ ಫಲಗಳು ಲಭಿಸುತ್ತವೆ. ಜ್ಞಾನ ಮಾರ್ಗದಿಂದ ನಿರ್ಲಿಪ್ತತ್ವವು ಲಭಿಸುತ್ತದೆ. ಭಕ್ತಿಯಿಂದ ‘ ತಾನು ’ ಎಂಬ ಅಭಿಮಾನ ಅಳಿದು ಅನನ್ಯಭಾವವುದಿಸಿ ತನ್ಮಯತ್ವವು ಸಿದ್ಧಿಸುತ್ತದೆ.

ಭಕ್ತಿಯು ಬಾಹ್ಯ ಮತ್ತು ಆಂತರ ಎಂದು ಎರಡು ವಿಧ. ಪ್ರಸಾದ (ಪ್ರಸನ್ನತೆ) ಮತ್ತು ಭಕ್ತಿಗೆ ಬೀಜಾಂಕುರ ನ್ಯಾಯದಂತೆ ಸಂಬಂಧವಿದೆ. ಭಕ್ತಿಯು ಕಾಯಿಕ ವಾಚಿಕ ಮಾನಸಿಕ ಎಂದು ಮೂರು ವಿಧ. ಭಗವಚ್ಚಿಂತನ ಮಾನಸಿಕ ಭಕ್ತಿ, ಭಗವನ್ಮಂತ್ರ ಜಪ ವಾಚಿಕಭಕ್ತಿ, ಪೂಜಾದಿಗಳು ಕಾಯಿಕಭಕ್ತಿ ಎಂದು ಸಿದ್ಧಾಂತಶಿಖಾಮಣಿಯಲ್ಲಿ ಉಕ್ತವಾಗಿದೆ.

ಶಿವಾಂಶಭೂತನಾದ ಜೀವನ ಉದ್ಧಾರಕ್ಕಾಗಿ ಶಕ್ತಿಯೇ ಮಾತೃಸ್ವರೂಪಿಣಿಯಾಗಿ ಭಕ್ತಿಯೆನಿಸಿತು. ಸಾಧಕನು ಶಕ್ತಿಗಿಂತ ಹೆಚ್ಚಾಗಿ ಭಕ್ತಿಯನ್ನೇ ಆಶ್ರಯಿಸುತ್ತಾನೆ. ಪ್ರಪಂಚ ಸೃಷ್ಟಿಗೆ ಮೂಲಕಾರಣವಾದ ಶಕ್ತಿಯನ್ನು ಪ್ರಜ್ವಲಿಸುವ ಅಗ್ನಿಯೆಂದು ಭಾವಿಸಿದರೆ ಭಕ್ತಿಯು ಅದೇ ಬೆಂಕಿಯಿಂದ ಹೊತ್ತಿಸಿದ ಸಣ್ಣ ದೀಪದಂತೆ ಮನೆಯನ್ನು ಬೆಳಗುವುದು; ಅಂದರೆ ಶಿವನಲ್ಲಿರುವ ಶಕ್ತಿಯೇ ಭಕ್ತನ ಉದ್ಧಾರಕ್ಕಾಗಿ ಭಕ್ತಿಯಾಯಿತು. ಶಕ್ತಿಯು ಪ್ರವೃತ್ತಿರೂಪ, ಭಕ್ತಿ ನಿವೃತ್ತಿ ರೂಪ. ಶಕ್ತಿಯಿಂದ ಜಗತ್‌ಸೃಷ್ಟಿ, ಭಕ್ತಿಯಿಂದ ಜಗತ್‌ಪ್ರಳಯ. ಶಕ್ತಿಯ ವೈಚಿತ್ರ್ಯದಿಂದ ರೂಪಾವಿರ್ಭಾವ. ಭಕ್ತಿಯಿಂದ ರೂಪ ರಾಹಿತ್ಯ. ಶಕ್ತಿ ಮಾಯೆ, ಭಕ್ತಿ ನಿರ್ಮಾಯೆ. ಶಕ್ತಿ ಉಪಾಸ್ಯ, ಭಕ್ತಿ ಉಪಾಸಕ—ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಶಕ್ತಿಗಿಂತ ಭಕ್ತಿಗೆ ಶರಣರು ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ.

ಶಕ್ತಿ ಭಕ್ತ್ಯೋರ್ಯನಭೇದೋಸ್ತಿ
ಪರಮಾರ್ಥ ನಿರೂಪಣೇ।
ಶಕ್ತಿಃ ಪ್ರವೃತ್ತಿರಾಖ್ಯಾತಾ
ನಿವೃತ್ತಿಃ ಭಕ್ತಿರೀರಿತಾ ॥ (ಅನುಭವಸೂತ್ರ)

ಭಕ್ತಿಯು ಸಮನ್ವಯ ಯೋಗ. ಭಕ್ತಿಯು ಜೀವನ (ಸಾಧಕನ) ಸ್ವಭಾವಕ್ಕೆ ಸುಲಭವಾಗಿ ಆಚರಿಸಲು ಯೋಗ್ಯವಾದದ್ದು. ಇದರಲ್ಲಿ ಪ್ರೇಮ ಜ್ಞಾನ ಕ್ರಿಯೆಗಳ ಸಮನ್ವಯವನ್ನು ಕಾಣಬಹುದು. ಕವಿಗಳೂ ಶಾಸ್ತ್ರಕಾರರೂ ಅನುಸರಿಸಿರುವುದನ್ನು ಶ್ರುತಿ ಸಮ್ಮತಿ ಭಕ್ತಿಪಥಾ ಎಂದೂ ಮೂರ್ತಿಪೂಜಾದಿಗಳನ್ನು ಸಗುಣಭಕ್ತ್ಯೋಪಾಸನೆಯೆಂದೂ ಧ್ಯಾನಾದಿಗಳಿಂದ ಆರಾಧಿಸುವುದನ್ನು ನಿರ್ಗುಣ ಭಕ್ತಿಪಥಾ ಎಂದೂ ಅವರವರ ಮನೋವೃತ್ತಿಗಳಿಗೆ ಅನುಕೂಲಿಸುವ ಸಾಧನೆಗಳನ್ನು ಸ್ವಚ್ಛಂದಭಕ್ತಿಪಥಾ ಎಂದು ನಾನಾ ರೀತಿಯಲ್ಲಿ ನಿರೂಪಿಸಿರುವರು. ಭರ್ತೃಹರಿಯು ತನ್ನ ಶೃಂಗಾರ ಶತಕದಲ್ಲಿ ಒಂದು ಸುಂದರವಾದ ಉಪಮಾನದಿಂದ ಭಕ್ತಿಯ ಭಾವಗಳನ್ನು ನಿರೂಪಿಸಿರುವನು.

ಅದರ್ಶನೆ ದರ್ಶನ ಮಾತ್ರ ಕಾಮಾ
ದೃಷ್ಟೇ ಪರಿಷ್ವಂಗ ರಸೈಕ ಲೋಲಾ ॥
ಆಲಿಂಗಿತಾಯಾಂ ಪುನರಾಯತಾಕ್ಷ್ಯಾಂ
ಆಶಾಸ್ಮಹೆ ವಿಗ್ರಹಯೋರಭೇದಃ ॥

(ಶೃಂಗಾರಶತಕ–ಭರ್ತೃಹರಿ)

ನೋಡದೆ ಇರುವಾಗ್ಗೆ ನನಗೆ ಆ ಪರಮಾತ್ಮನ ದರ್ಶನ ಒಂದು ಸಿಕ್ಕಿದರೆ ಸಾಕು ಎಂಬ ಹಂಬಲ. ಒಮ್ಮೆ ದರ್ಶನಲಾಭವಾದರೆ ಆಲಿಂಗನ ಮಾಡಿಕೊಂಡು ರಸೈಕಲೋಲನಾಗಬೇಕೆಂಬ ಉತ್ಕಟೇಚ್ಛೆ. ಹಾಗೆ ರಸಾಸ್ವಾದನವಾದಮೇಲೆ ಪುನಃ ಬಿಡದಿರುವಂತೆ ಆಲಿಂಗಿಸಿರುವ ಆಸೆ. ಈರೀತಿಯಲ್ಲಿ ಜೀವಾತ್ಮ ಪರಮಾತ್ಮರುಗಳ ಅಭೇದ ವ್ಯಾಪ್ತಿಯನ್ನು ಶೃಂಗಾರವಾಗಿ ರೂಪಿಸಿರುವುದನ್ನು ಕಾಣಬಹುದು.

ಪ್ರಾರ್ಥನೆಯ ಸ್ವರೂಪ

ಪರಮಾತ್ಮನ ನಿಕಟಸಂಬಂಧವನ್ನಿಟ್ಟುಕೊಳ್ಳುವುದಕ್ಕೆ ಪ್ರಾರ್ಥನೆಯು ಬಹಳ ಸುಲಭವಾದ ಮತ್ತು ನೇರವಾದ ಸಾಧನ. ಇದನ್ನು ಆತ್ಮಸಂತೋಷದಿಂದ ಹುಟ್ಟುವ ಆಧ್ಯಾತ್ಮಿಕ ಶಿಷ್ಟಾಚಾರವೆನ್ನುವರು. ಸಂಕಟಪ್ರಾಪ್ತವಾದಾಗ ಮನಃಕ್ಲೇಶವುಂಟಾದಾಗ ಜೀವನ ಸಮಸ್ಯೆಗಳನ್ನು ಬಿಡಿಸಬೇಕಾದಾಗ ಅಸಹಾಯಕನಾದ ಮಾನವನು ಸರ್ವಶಕ್ತನಾದ ಪರಮಾತ್ಮನಲ್ಲಿ ಮೊರೆಯಿಟ್ಟು ಪರಿಹಾರವನ್ನು ಅಪೇಕ್ಷಿಸುತ್ತಾನೆ. ಈ ರೀತಿ ಮೊರೆಯಿಡುವುದೇ ಪ್ರಾರ್ಥನೆ. ಇದು ಪರಮಾತ್ಮನಿಗೂ ಜೀವಾತ್ಮನಿಗೂ ಇರುವ ಅಂತರವನ್ನು ಕೂಡಿಸುವ ಸೇತುವೆಯಾಗಿದೆ.

ಕರುಣಾಸಮುದ್ರನಾದ ಪರಮಾತ್ಮನಲ್ಲಿ ಮೊದಲು ನಾವು ವರಗಳನ್ನು ಬೇಡುತ್ತೇವೆ. ಆ ಪರಮಾತ್ಮನ ಶಕ್ತಿಗಳು ಗುಣಗಳು ಕರುಣೆ ಅನುಗ್ರಹ ಮೊದಲಾದವುಗಳನ್ನು ಎಡಬಿಡದೆ ನೆನೆಯುವುದರ ಮೂಲಕ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ. ಈ ರೀತಿಯಾದ ಮೌನದ ನುಡಿಯೇ ಪ್ರಾರ್ಥನೆ ಎನ್ನಿಸಿಕೊಳ್ಳುತ್ತದೆ. ಪ್ರಾರ್ಥನೆಯ ಮೂಲಕ ನಮ್ಮ !ಚಿತ್ತಶುದ್ಧಿಯು ಬಲಗೊಂಡಮೇಲೆ ಪರಮಾತ್ಮನಲ್ಲಿ ಐಕ್ಯವಾಗುವ ಹಂಬಲವು ತೀವ್ರವಾಗುತ್ತದೆ. ಈ ರೀತಿಯಾಗಿ ಉಂಟಾದ ಹೃದಯಪೂರ್ವಕವಾದ ಉತ್ಕಟೇಚ್ಛೆಯು ಕೊನೆಗೆ ಮೌನರೂಪವನ್ನು ತಾಳುತ್ತದೆ. ಕಟ್ಟಕಡೆಯದಾಗಿ ಪ್ರಾಪ್ತವಾದ ಪರಮಾತ್ಮನ ಸಾಕ್ಷಾತ್ಕಾರಾವಸ್ಥೆಯಲ್ಲಿ ಅಪಾರವಾದ ಪ್ರೇಮವೂ ಶ್ರೇಷ್ಠವಾದ ವಿವೇಕವೂ ಶಾಂತಿಯೂ ಮೂಡುತ್ತವೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಪ್ರಾರ್ಥನೆ ಮತ್ತು ಪ್ರಾರ್ಥನೆಯಿಂದಾಗುವ ಫಲ ಇವೆರಡಕ್ಕೂ ಒಂದೇ ಮೂಲವೆಂದು ತಿಳಿದುಬಂದರೆ ಆಗ ಭಕ್ತನ ಪ್ರಾರ್ಥನೆಯು ಭಗವದಿಚ್ಛೆಯು ಒಂದಾಗುತ್ತದೆ. ಪರಮೇಶ್ವರನು ನಮ್ಮ ಬೇಡಿಕೆಗಳನ್ನು ಸಲ್ಲಿಸಬಹುದು ಬಿಡಬಹುದು. ಆದರೆ ಜೀವನು ಪರಿಶುದ್ಧನಾಗುವುದಲ್ಲದೆ ಶಾಂತಿಸಮಾಧಾನಗಳನ್ನು ಹೊಂದುತ್ತಾನೆ.

ಆಧ್ಯಾತ್ಮಿಕ ಸಾಧನೆಯಲ್ಲಿ ಯಾವುದೊಂದು ಪೂಜೆಯೂ ಪ್ರಾರ್ಥನೆಯಿಂದ ಪ್ರಾರಂಭವಾಗುತ್ತದೆ. ಹೃದಯಾಂತರಾಳದಿಂದ ಪ್ರಾರ್ಥನೆಯು ಹೊರಟಿದ್ದಾದರೆ ತುಟಿಗಳು ಮುಚ್ಚಲ್ಪಡುತ್ತವೆ, ಮನಸ್ಸು ಸ್ಥಿಮಿತಗೊಳ್ಳುತ್ತದೆ. ತನ್ನ ತಪ್ಪುಗಳನ್ನು ಕ್ಷಮಿಸುವಂತೆ ಪಶ್ಚಾತ್ತಾಪಬುದ್ಧಿಯಿಂದ ಕೂಡಿ ಋಜುಮಾರ್ಗದಲ್ಲಿ ನಡೆಯಬೇಕೆಂಬ ಬುದ್ಧಿ ಪ್ರಚೋದಿತವಾಗುತ್ತದೆ. ಒಂದೇಸಮನಾಗಿ ಎಡಬಿಡದೆ ಮಾಡುವ ಪ್ರಾರ್ಥನೆಯಿಂದ ಘರ್ಷಣೆಗೊಂಡ ಇಂದ್ರಿಯ ವ್ಯಾಪಾರಗಳು, ವಿಪರ್ಯಾಸಗೊಂಡ ಬುದ್ಧಿ, ತಲ್ಲಣಗೊಂಡ ಮನಸ್ಸು—ಇವುಗಳೆಲ್ಲ ನೆಮ್ಮದಿಯನ್ನು ಹೊಂದುತ್ತವೆ. ಪ್ರಾರ್ಥನೆಯು ನೊಂದವರಿಗೆ ಸಮಾಧಾನವನ್ನುಂಟುಮಾಡುವುದಾಗಿಯೂ ಶಾರೀರಕ ಮತ್ತು ಮಾನಸಿಕ ಜಾಡ್ಯಗಳಿಗೆ ರೋಗಾಪಹಾರವಾಗಿ ಪರಿಣಮಿಸಿರುವುದೂ ಉಂಟು.

ಪ್ರಾರ್ಥನಾರೂಪಗಳು

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ
ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ॥
ತಂ ದೇವಮಾತ್ಮಬುದ್ಧಿಪ್ರಕಾಶಂ
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೆ ॥

ಯಾವ ಪರಮೇಶ್ವರನು ಮೊದಲು ಬ್ರಹ್ಮನನ್ನು ಉಂಟುಮಾಡಿದನೋ ಯಾವನು ಅವನಿಗೆ ವೇದಗಳನ್ನು ಉಪದೇಶಿಸಿದನೋ ಯಾವನು ಆತ್ಮಬುದ್ಧಿಗಳಿಗೆ ಪ್ರಕಾಶವನ್ನು ಕೊಡುತ್ತಾನೆಯೋ ಆ ದೇವನಿಗೆ ಮುಮುಕ್ಷುವಾದ ನಾನು ಶರಣುಹೋಗುತ್ತೇನೆ.

ಜಾನಾಮಿ ಧರ್ಮಂ ನ ಚ ಮೆ ಪ್ರವೃತ್ತಿಃ
ಜಾನಾಮ್ಯಧರ್ಮಂ ನ ಚ ಮೆ ನಿವೃತಿಃ ।
ತ್ವಯಾ ಹೃಷಿಕೇಶ ಹೃದಿ ಸ್ಥಿತೇನ
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ॥

ನನಗೆ ಧರ್ಮ ಇಂಥಾದ್ದು ಎಂದು ಗೊತ್ತು. ಆದರೆ ಅದರಲ್ಲಿ ಪ್ರವೃತ್ತಿಯಿಲ್ಲ. ಅಧರ್ಮ ಇಂಥಾದ್ದು ಎಂದು ಗೊತ್ತು. ಅದರಲ್ಲಿ ನಿವೃತ್ತಿ ಇಲ್ಲ. ನೀನು ನನ್ನ ಹೃದಯ ದಲ್ಲಿ ನೆಲೆಸಿರುವೆ. ನೀನು ಯಾವ ರೀತಿ ನಿಯೋಜಿಸುತ್ತೀಯೋ ಹಾಗೆ ನಡೆಯುತ್ತೇನೆ.

ಇಲ್ಲಿ ಜೀವನು ತನ್ನ ದೌರ್ಬಲ್ಯವನ್ನು ತೋರಿಸಿಕೊಂಡು ತನ್ನ ಆಗುಹೋಗು ಗಳೆಲ್ಲಾ ನಿನ್ನನ್ನೇ ಹೊಂದಿವೆಯೆಂಬ ಧೃಡಭಾವನೆಯಿಂದ ಪರಮೇಶ್ವರನನ್ನು ಶರಣಾಗತಿ ಮಾಡುವನು.

ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ
ತಸ್ಮಾತ್ ಕಾರುಣ್ಯಭಾವೇನ ರಕ್ಷ ರಕ್ಷ ಮಹೇಶ್ವರ ॥
ಶಿವ ತದ್ದಾಸದಾಸೋಽಯಂ ತದ್ದಾಸೋಽಸ್ಮೀತಿ ಯಾ ಸುಧೀಃ
ತಾಂ ದತ್ವಾ ಕೃಪಯಾ ಪಾಹಿ ಜನ್ಮಜನ್ಮಾಂತರೇಷು ॥

ನಾನು ನಿನ್ನನ್ನು ಮರೆಹೊಗುವುದನ್ನು ಬಿಟ್ಟು ನನಗೆ ಬೇರೆ ಮಾರ್ಗವೇ ಇಲ್ಲ. ನನಗೆ ನೀನೆ ಗತಿಯು ಮತಿಯು. ನಾನು ನಿನ್ನನ್ನು ಶರಣುಹೊಕ್ಕಿದ್ದೇನೆ. ನಿನ್ನ ದಾಸ ದಾಸನಾಗಿ ವರ್ತಿಸುತ್ತೇನೆ. ನಿನ್ನ ಸೇವೆಯಲ್ಲೇ ಇರುತ್ತೇನೆ. ಜನ್ಮಜನ್ಮಗಳಲ್ಲಿಯೂ ನಿನ್ನ ಸೇವೆಯನ್ನೇ ದಯಪಾಲಿಸು ಎಂದು ದೈನ್ಯಭಾವದಿಂದ ಕಿಂಕರನಾಗಿ ಶರಣು ಹೋಗುತ್ತೇನೆ.

ನಾನು ನಿನ್ನ ಅಂಶೀಭೂತನಾಗಿದ್ದೇನೆ. ನಾನು ನಿನ್ನಿಂದ ಬೇರೆಯಲ್ಲ. ನನ್ನ ಸರ್ವಸ್ವವೂ ನಿನ್ನದೇ ಆಗಿರುತ್ತದೆ. ನಿನ್ನನ್ನು ಬಿಟ್ಟು ನನಗೆ ಬೇರೆ ಅಸ್ತಿತ್ವವಿಲ್ಲ. ನನ್ನ ಸರ್ವಸ್ವವನ್ನು ನಿನಗೆ ಅರ್ಪಿಸುತ್ತೇನೆ.

ತಾವಕೇ ವಪುಷಿ ವಿಶ್ವನಿರ್ಭರೇ ಚಿತ್ಸುಧಾರಸಮಯೇ
ತಿಷ್ಠತಿ ಸತತಂ ಅರ್ಚತಃ ಪ್ರಭುಂ ಜೀವಿತಂ
ಮೃತಂ ಅಥಾನ್ಯದ್ ಅಸ್ತು ಮೇ

ಅನಂತವಾದ ಚಿದೈಕರಸನಾದ ಪರಮೇಶ್ವರನೇ ನೀನು ನನ್ನ ಶರೀರದಲ್ಲಿದ್ದೀ. ನಿನ್ನನ್ನು ಪೂಜಿಸುತ್ತಿರುವ ನನಗೆ ಮರಣವಾಗಲಿ ಜೀವಿತವಾಗಲಿ ಅನ್ಯಥಾ ಬೇರೆ ಯಾವ ಅವಸ್ಥೆಗಳಾಗಲಿ ಏನೂ ವ್ಯತ್ಯಾಸವಿಲ್ಲ.

"ಶಿವನೊಳಗೆ ವಿಶ್ವಾಸ ಶಿವನೊಳಗೆ ನಂಬಿಕೆಯು
ಶಿವನೊಳಗೆ ಮೋಹವಿರೆ ತಾನೆ ಶಿವನು"

ಪ್ರಾಜ್ಞ, ತೈಜಸ, ವಿಶ್ವರೆಂಬ ಹಂತಗಳನ್ನು ಹತ್ತಿ ಶಿವನೇ ಆಗುವನು. ಈ ಸಂಪ್ರದಾಯದಲ್ಲಿ ತರ್ಕಕ್ಕಿಂತ ಅನುಭವಕ್ಕೆ ಹೆಚ್ಚಿನ ಪ್ರಾಮುಖ್ಯತೆ ಮನ್ನಣೆ. ತರ್ಕದ ಸ್ಥಳ ಶಿರಸ್ಸು. ಅನುಭವದ ಸ್ಥಳ ಹೃದಯ. ಇವೆರಡೂ ಇಲ್ಲಿ ಸಮನ್ವಯವಾಗಿ ಆಚರಣೆಯಲ್ಲಿರುವುದರಿಂದ ಇದಕ್ಕೆ ಸಮನ್ವಯಯೋಗ ಅಥವಾ ಶಿವಯೋಗವೆನ್ನುವರು.

ಭಕ್ತಿಯು ಪಂಚಮಪುರುಷಾರ್ಥ :

ಪರಶಿವನಲ್ಲಿ ಅವಿನಾಭಾವದಿಂದಿದ್ದು ಜಗತ್‌ಸೃಷ್ಟಿಗೆ ಮೂಲವಾದ ಶಕ್ತಿಯೇ ಭಕ್ತಿಯಾಗಿ ಪರಿಣಮಿಸುತ್ತದೆ. ಶಿವಾಂಶಭೂತನಾದ ಜೀವನ ಉದ್ಧಾರಕಾಗಿ ಶಕ್ತಿಯೇ ಮಾತೃಸ್ವರೂಪಿಣಿಯಾಗಿ ಭಕ್ತಿಯೆನಿಸಿತು. ಆದುದರಿಂದ ಭಕ್ತಿಯು ಪಂಚಮ ಪುರುಷಾರ್ಥವೆನಿಸಿದೆ. ಇದರಿಂದ ಸಾಧಕನು ಶಕ್ತಿಗಿಂತ ಹೆಚ್ಚಾಗಿ ಭಕ್ತಿಯನ್ನೇ ಆಶ್ರಯಿಸುತ್ತಾನೆ. ಪ್ರಪಂಚ ಸೃಷ್ಟಿಗೆ ಮೂಲಕಾರಣವಾದ ಶಕ್ತಿಯು ಪ್ರಜ್ವಲಿಸುವ ಅಗ್ನಿಯೆಂದು ಭಾವಿಸಿದರೆ ಭಕ್ತಿಯು ಅದೇ ಬೆಂಕಿಯಿಂದ ಹೊತ್ತಿಸಿದ ಮನೆಯನ್ನು ಬೆಳಗುವ ಸಣ್ಣ ದೀಪದಂತೆ. ಅಂದರೆ ಮಹೇಶ್ವರನಲ್ಲಿನ ಶಕ್ತಿಯೇ ಭಕ್ತನ ಉದ್ಧಾರಕ್ಕಾಗಿ ಭಕ್ತಿಯಾಯಿತು. ಅದರಲ್ಲಿರುವ ಹೊಗೆಧಗೆಗಳು ಇಲ್ಲದೆ ಅದು ನಿರ್ಮಲಪ್ರಕಾಶದಿಂದ ಬೆಳಗುವಂತೆ ಭಕ್ತಿಯು ಶಕ್ತಿಯಲ್ಲಿರುವ ಪ್ರವೃತಿರೂಪ ವಾಸನೆಗಳಿಂದ ದೂರವಾಗಿದೆ.

ಶಕ್ತಿಭಕ್ತಿಗಳಿಗಿರುವ ವ್ಯತ್ಯಾಸ :

ಶಕ್ತಿಯು ಪ್ರವೃತ್ತಿರೂಪ. ಭಕ್ತಿ ನಿವೃತ್ತಿರೂಪ. ಶಕ್ತಿಯಿಂದ ಪ್ರಪಂಚ ಸೃಷ್ಟಿ. ಭಕ್ತಿಯಿಂದ ಪ್ರಪಂಚ ಲಯ. ಶಕ್ತಿವೈಚಿತ್ರ್ಯದಿಂದ ರೂಪಾವಿರ್ಭಾವ. ಭಕ್ತಿಯಿಂದ ರೂಪರಾಹಿತ್ಯ. ಶಕ್ತಿಗೆ ಜಗತ್ತಿನ ವೃದ್ಧಿಯಪೇಕ್ಷೆ. ಭಕ್ತಿಗೆ ಜಗತ್ತಿನ ಲಯಾಪೇಕ್ಷೆ. ಶಕ್ತಿ ಅಧೋಮುಖಿ. ಭಕ್ತಿ ಊರ್ಧ್ವಮುಖಿ. ಶಕ್ತಿ ಮಾಯೆ. ಭಕ್ತಿ ನಿರ್ಮಾಯೆ. ಶಕ್ತಿಯು ಉಪಾಸ್ಯ. ಭಕ್ತಿ ಉಪಾಸಕ. ಹೀಗೆ ಯುಕ್ತಿಪ್ರಮಾಣ ಯಾವ ದೃಷ್ಟಿಯಿಂದ ನೋಡಿದರೂ ಶಕ್ತಿಗಿಂತ ಭಕ್ತಿಗೆ ಪ್ರಾಶಸ್ತ್ಯ ಹೆಚ್ಚು. ಭಕ್ತಿಯು ಸಮನ್ವಯಯೋಗ. ಭಕ್ತಿಯು ಸಾಧಕನ ಸ್ವಭಾವಕ್ಕೆ ಸೇರಿದ್ದು. ಇದರಲ್ಲಿ ಪ್ರೇಮ, ಜ್ಞಾನ, ಕ್ರಿಯೆಗಳ ಸಮನ್ವಯವು

ಕಂಡುಬರುತ್ತದೆ. ಜ್ಞಾನಕ್ರಿಯೆಗಳು ಭಕ್ತಿಯಲ್ಲಿ ಅಂತರ್ಗತವಾಗುತ್ತವೆ. ಉದಾಹರಣೆಗೆ ಸತ್ಯವನ್ನು ಭಾವಿಸುವುದು ಭಕ್ತಿ. ಅದನ್ನು ನಿಚ್ಚಳವಾಗಿ ಕಾಣುವುದು ಜ್ಞಾನ. ಸತ್ಯದಂತೆ ನಡೆಯುವುದು ಕ್ರಿಯೆ. ಭಕ್ತಿ ಅನುಭವಸಿದ್ಧಾಂತದ ಮೂಲ. ಬಂಧ ಮೋಕ್ಷಗಳು ಶಿವಶಕ್ತಿಗಳ ಸಂಕೋಚ ವಿಕಾಸಭಾವಗಳು. ಅಂತಹ ಸಂಕೋಚ ವಿಕಾಸಗಳ ಪರಿವೆಯಿಲ್ಲದೆ ಸರ್ವತೋಮುಖವಾಗಿ ಬೆಳಗುವ ಶಿವಮಯ ಪ್ರಕಾಶವೇ ಭಕ್ತಿ.

ಭಕ್ತಿಸ್ವರೂಪ—ಸತಿಪತಿಭಾವ

ಭರ್ತೃಹರಿಯು ಸಾಮಾನ್ಯಜನರಿಗೂ ಆಕರ್ಷಿತವಾಗಿ ಮನದಟ್ಟಾಗುವುದ ಕ್ಕೋಸ್ಕರ ಕಾಮಶಬ್ದದಿಂದ ವ್ಯವಹರಿಸಿ ಅದರ ಮೂರುಭೇದಗಳನ್ನು ಬಹಳ ಚಮತ್ಕಾರ ವಾಗಿ ತೋರಿಸಿರುವರು.

ಅದರ್ಶನೆ ದರ್ಶನಮಾತ್ರಕಾಮಾ
ದೃಷ್ಟ್ವೆ ಪರಿಷ್ವಂಗರಸೈಕಲೋಲಾ
ಆಲಿಂಗಿತಾಯಾಂ ಪುನರಾಯತಾಕ್ಷ
ಆಶಾಸ್ಮಹೆ ವಿಗ್ರಹಯೋರಭೇದಃ

ಮೊದಲನೆಯ ಪಾದದಲ್ಲಿ ಕಾಮ ಶಬ್ದದಿಂದ ಪರಭಕ್ತಿರೂಪವಾದ ಮೊದಲನೆಯ ಜ್ಞಾನಾವಸ್ಥೆಯನ್ನೂ ಎರಡನೆಯ ಪಾದದಲ್ಲಿ ರಸಶಬ್ದದಿಂದ ಪರಜ್ಞಾನರೂಪವಾದ ಎರಡನೆಯ ಜ್ಞಾನಾವಸ್ಥೆಯನ್ನೂ ಮೂರನೆಯ ಪಾದದಲ್ಲಿ ಪರಮಭಕ್ತಿರೂಪವಾದ ಜ್ಞಾನಾವಸ್ಥೆಯನ್ನೂ ತೋರಿಸಿ ಐಕ್ಯಾನುಸಂಧಾನವನ್ನು ನಿರೂಪಿಸಿರುವನು. ಇದರಿಂದ ತಿಳಿಯಬರುವುದೇನೆಂದರೆ ತನ್ನನ್ನು ಸತಿಭಾವದಿಂದಲೂ ಪರಮಾತ್ಮನನ್ನು ಪತಿಭಾವ ದಿಂದಲೂ ಭಾವಿಸುತ್ತಾ ಐಕ್ಯಾನುಸಂಧಾನವನ್ನು ಮಾಡಬೇಕೆನ್ನುವುದು. ಈ ಸೌಂದ ರ್ಯಾನುಭವವನ್ನು ಸ್ವಾನುಭವದ ಅರಿವು, ಆತ್ಮಸಮರ್ಪಣೆ, ತನ್ನ ವ್ಯಕ್ತಿತ್ವವನ್ನು ಮರೆಯುವುದು, ಗ್ರಾಹ್ಯಗ್ರಾಹಕಸಂವಿತ್ತಿ, ದೈವಿಕಾನುಭವದಲ್ಲಿಯೂ ಕಾಣಬಹುದೆಂದು ಅನುಭಾವಿಗಳು ಹೇಳಿರುವರು.

ಯೋಗಸಂಪ್ರದಾಯದಂತೆ ಶರೀರದ ಚಲನವಲನಗಳು, ಇಂದ್ರಿಯವ್ಯಾಪಾರಗಳು, ಮನಸ್ಸಿನ ವೃತ್ತಿಗಳು, ಪ್ರಾಣದ ಪ್ರೇರಣೆಗಳು ಇವುಗಳನ್ನು ನಿಲ್ಲಿಸಿ ಧ್ಯಾನಾಸಕ್ತನಾದರೆ ಆತ್ಮಸಾಕ್ಷಾತ್ಕಾರವಾಗುವುದು. ಇವುಗಳನ್ನು ಸಾಧಿಸುವ ಭಕ್ತಿಯನ್ನು ಈ ಕೆಳಗೆ ಕಂಡಂತೆ ವಿವರಿಸಿದೆ—

ವೇದನಂ ಧ್ಯಾನವಿಶ್ರಾಂತಂ
ಧ್ಯಾನಂ ಶ್ರಾಂತಂ ಧೃವಸ್ಮೃತೌ ॥
ಸಾ ಚ ದೃಷ್ಟಿತ್ವಮಭ್ಯೇತಿ
ದೃಷ್ಟಿಃ ಭಕ್ತಿತ್ವಮುಚ್ಛ್ರತಿ ॥

ಭಕ್ತಿಯ ಬಾಹ್ಯಚಿಹ್ನೆಗಳು :

ಬಹುವಿಧಪರಿತೋಷ ಬಾಷ್ಪಪೂರಸ್ಫುಟಪುಲಕಾಂಕಿತ ಚಾರುಭೋಗ ಭೂಮಿಮ್
ಚಿರಪದ ಫಲಕಾಂಕ್ಷಿ ಸೇವ್ಯಮಾನಾಂ ಪರಮಸದಾಶಿವಭಾವನಾಂ ಪ್ರಪದ್ಯೆ

ಕವಿಗಳು ಶಾಸ್ತ್ರಕಾರರು ಅನುಸರಿಸಿರುವ ಮಾರ್ಗವನ್ನು ಶ್ರುತಿಸಮ್ಮತಭಕ್ತಿಪಥ ಎಂದೂ ವ್ಯಕ್ತಿಗಳ ಸಾಧನೆಗಳು ಮತ್ತು ಅನುಭವಿಗಳ ಮಾರ್ಗವನ್ನು ಸ್ವಚ್ಛಂದ ಭಕ್ತಿಯೆಂದೂ ಮೂರ್ತಿಪೂಜೆಯನ್ನು ಸಗುಣಭಕ್ತಿಯೆಂದೂ ಮೂರ್ತಿಯಿಲ್ಲದ ಧ್ಯಾನವನ್ನು ನಿರ್ಗುಣಭಕ್ತಿಯೆಂದೂ ವಿವರಿಸಿದ್ದಾರೆ. ಷಟ್ಸ್ಥಲಮಾರ್ಗಗಳ ಅನುಷ್ಠಾನದಿಂದ ಶಿವತತ್ತ್ವವನ್ನು ಹೊಂದಬೇಕೆಂಬುದೇ ವೀರಶೈವ ಮತದ ಗುರಿ. ಈ ಮತದಲ್ಲಿ ಭಕ್ತಿಗೆ ಪ್ರಾಮುಖ್ಯವು ಹೆಚ್ಚು. ಶಿವನ ಸ್ವಪ್ರಕಾಶವಾದ ಶಕ್ತಿಯೇ ಅಂಗಗತವಾಗಿ ಭಕ್ತಿ ಎನ್ನಿಸಿಕೊಳ್ಳುವುದು. ಈ ಭಕ್ತಿಯು ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ ಎಂದು ಆರು ವಿಧವಾಗಿದೆ. ಈ ಭಕ್ತಿಮಾರ್ಗವನ್ನು ಅನುಸರಿಸುತ್ತಾ ಹೋದರೆ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಆರು ಆಧ್ಯಾತ್ಮಿಕ ಸ್ಥಾನಗಳನ್ನು ಹೊಂದುತ್ತಾನೆ. ಈ ಸಂಪ್ರದಾಯದಲ್ಲಿ ಅನುಸರಿಸುವ ಭಕ್ತಿಯೋಗದಲ್ಲಿ ಜ್ಞಾನಕ್ರಿಯೆಗಳೆರಡೂ ಸಮಪ್ರಧಾನವಾಗಿವೆ. ಭಕ್ತನು ಮಾಡುವ ಜ್ಞಾನಕ್ರಿಯಾತ್ಮಕವಾದ ಕರ್ಮಗಳೆಲ್ಲವನ್ನೂ ಲಿಂಗಭಾವದಿಂದ ಮಾಡುವುದೇ ಈ ಮತದ ಸಾಧನಗಳಲ್ಲಿ ಅಡಗಿರುವ ತತ್ತ್ವ. ಜೀವಾತ್ಮನು ಲಿಂಗಸ್ವರೂಪವನ್ನು ಪಡೆಯುವುದಕ್ಕಾಗಿ ಯೋಗಾಂಗಿಯಾಗಿ ಶಿವನಲ್ಲಿ ಸಾಮರಸ್ಯ ಸುಖವನ್ನು ಹೊಂದಲು ಪ್ರಯತ್ನಪಡುವನು. ಹಾಗೆಯೇ ಭೋಗಾಂಗಿಯಾಗಿ ತನ್ನ ಭೋಗವೆಲ್ಲವನ್ನೂ ಶಿವನಿಗರ್ಪಿಸಿ ಶಿವಪ್ರಸಾದರೂಪದಿಂದ ಸ್ವೀಕರಿಸುವನು. ತ್ಯಾಗಾಂಗಿಯಾಗಿ ಶಿವದೀಕ್ಷೆ, ಶಿವಪೂಜೆ, ಶಿವಧ್ಯಾನದ ಮೂಲಕ ಸಂಸಾರಭ್ರಾಂತಿಯನ್ನು ತ್ಯಾಗಮಾಡುವನು. ಈ ರೀತಿಯಾದ ಪರಾವಾಕ್ ಸತತಮೇವ ವರ್ತಮಾನ ರೂಪಾ ಪರಾಪಶ್ಯಂತಿ ಮಧ್ಯಮಾ ವೈಖರಿ ಇವು ವಾಗ್ದೇವಿಯ ನಾಲ್ಕು ರೂಪಗಳು. ಅಭಿನ್ನಾವಸ್ಥೆಯಲ್ಲಿ ಪ್ರಶಾಂತಸ್ಥಿತಿಗೆ ಪರಾ ಎಂದು ಹೆಸರು. ಪ್ರೇರಣೆಯುಂಟಾಗಿ ಆಕೂತದಿಂದ ಕೂಡಿರುವುದಕ್ಕೆ ಪಶ್ಯಂತಿ ಎಂದು ಸಂಜ್ಞೆ. ಗ್ರಾಹ್ಯ ಗ್ರಾಹಕ ವಿಭಾಗವನ್ನು ಪಡೆದು ನಾದರೂಪವನ್ನು ಹೊಂದಿ ಭೇದರೂಪದಿಂದ ಹೊರಹೊಮ್ಮಿರುವ ಸ್ಥಿತಿಗೆ ಮಧ್ಯಮಾ ಎಂದು ಪರಿಭಾಷೆ. ಈಗ ಅಕ್ಷರ ರೂಪವಾಗಿ ಹೊರಹೊಮ್ಮುವ ಹಂತಕ್ಕೆ ವೈಖರಿ ಎಂಬ ಶಾಸ್ತ್ರೀಯ ಸಂಜ್ಞೆ. ಅಭಿನ್ನವಾದ ಆ ಪರಾಶಕ್ತಿಯ ಐಶ್ವರ್ಯವೇ ಈ ವಿಚಿತ್ರವಾದ ಅನಂತವಾದ ಭೇದಪ್ರಪಂಚ.

ಭಕ್ತಿಯ ಸಾಧನ ಪ್ರಕ್ರಿಯೆಗಳು—

ತೈಲಧಾರಾವತ್ ಅವಿಚ್ಛಿನ ಸ್ಮೃತಿರೂಪಾ ಭಕ್ತಿಃ

ಯಥಾ ದೀಪೋ ನಿವಾತಸ್ಥೋ ನೇಂಗತೆ ಸೋಪಮಾ ಸ್ಮೃತಾ ಗೀತೆ

ಮುಗ್ಗೆಯ ಮಾಯಿದೇವರು ತಮ್ಮ ಶಿವಾನುಭವ ಶತಕದಲ್ಲಿ ಪರತತ್ತ್ವ ಸಾಕ್ಷಾತ್ಕಾರಕ್ಕೆಭಕ್ತಿಯನ್ನೇ ಸಾಧನವಾಗಿಟ್ಟುಕೊಂಡು ಭಕ್ತಿಗೂ ಪರಾ, ಪಶ್ಯಂತಿ, ಮಧ್ಯಮಾ, ವೈಖರಿಗೂ ಸಂಬಂಧವನ್ನು ಕಲ್ಪಿಸಿ 'ಪರಾ' ಎನ್ನುವುದು ಧ್ಯಾನದ ಪರಮಾವಧಿಯೆಂದೂ ಪಶ್ಯಂತಿ ಎನ್ನುವುದು ಮಾನಸಿಕ ದೃಶ್ಯರೂಪವಾದ ಭಕ್ತಿಯೆಂದೂ ಮಧ್ಯಮಾ ಎನ್ನುವುದು ಗುಣಗಾನವೆಂದೂ ವೈಖರಿಯು ಕೈಕರಣಗಳ ಪೂಜಾತಂತ್ರಕ್ರಿಯೆಯೆಂದೂ ವಿವರಿಸಿದ್ದಾರೆ.

ಗಗನಂ ಮಾರುತ ಪಾಶದಿಂ ಬಿಗಿದು ಕಟ್ಟಲ್ಪಟ್ಟು
ಗೊಂಡಂದಂ ಭಕ್ತಿಗೆ ಬಂಧಂ
ಭಕ್ತಿಕ್ರಿಯೆಯೊಳ್ ಪ್ರಸಾದಕಳಿಕೊಡಲ್ ಶಾಂಭವ
ಜ್ಞಾನಮುತ್ಕಟಿಸಿ ಸ್ಪರ್ಶಿಪ ದೋಷಮಂ ಪರಿಹರಿಸುತಿರ್ಕುಂ ॥
ಬೀಜಂ ಶಾಂಭವ ಭಕ್ತಿ ಅಂಕುರಮುತಂ ಜ್ಞಾನಂ
ಪ್ರಸಾದಂ ಫಲಂ ಪರಯೆ ಮಾನಸಭಕ್ತಿ
ಚಾಕ್ಷುಷ ಪದಂ ಪದಂ ಪಶ್ಯಂತಿ ಯೇ
ಗುರೂಕ್ತಿಮುತದಿಂ ಸತ್ಕಾಯಕಂ ಭಕ್ತಿ
ವೈಖರಿಯೆ ನೋಳ್ಪೊಡೆ ಇಂತು ನಾಲ್ಕು ತೆರನಾಗಿರ್ಕುಂ ॥

ವರ್ಣಮಾಲಾನುಸಂಧಾನದಿಂದ ಪರಾಪಶ್ಯಂತಿ ಮಧ್ಯಮಾ ವೈಖರಿ ಧ್ಯಾನಮಾಡುವುದು. ಉಚ್ಚರಿಸುವ ಮಂತ್ರವೈಖರಿ. ಅದರ ಹಿಂದಿನ ತತ್ತ್ವಗಳು ಸ್ಫುಟವಾಗಬೇಕು. ಆಗ ಚಿತ್ತ ಪ್ರಸಾದನವಾಗುವುದು.

ಜೀವಾತ್ಮನ ಬಂಧ ಸ್ವಭಾವ ಮತ್ತು ಕಾರಣಗಳು

ಎಲ್ಲಾ ದಾರ್ಶನಿಕರೂ ಬಂಧ ಮತ್ತು ಮೋಕ್ಷ ಎಂಬ ಎರಡು ಅಂಶಗಳನ್ನು ವಿಸ್ತಾರವಾಗಿ ನಿರೂಪಿಸಿರುತ್ತಾರೆ. ಅಜ್ಞಾನದಿಂದ ಬಂಧ, ಜ್ಞಾನದಿಂದ ಮೋಕ್ಷ ಎಂಬುದು ಸಾಮಾನ್ಯವಾದ ನಿಯಮ. ಈ ಅಜ್ಞಾನವನ್ನು ಅದರ ಸ್ವರೂಪ ಸ್ವಭಾವಗಳನ್ನು ದಾರ್ಶನಿಕರು ಬಗೆಬಗೆಯಾಗಿ ವಿವರಿಸಿರುತ್ತಾರೆ. ಶಿವಾದ್ವೈತ ಸಂಪ್ರದಾಯದಲ್ಲಿ ಅಜ್ಞಾನ ಎಂದರೆ ಜ್ಞಾನವೇ ಇಲ್ಲದಿರುವಿಕೆಯಲ್ಲ; ಸಂಕುಚಿತವಾದ ತಿಳಿವಳಿಕೆ ಇರುವುದೆಂದರ್ಥ. ಈ ಸಂಕುಚಿತವಾದ ತಿಳಿವಳಿಕೆಯೂ ಕೂಡ ಅಸತ್ಯವಾದುದಲ್ಲ. ಸತ್ಯವಾದದ್ದೇ ಆಗಿದೆ.

ಜ್ಞಾನಸಂಕೋಚಕ್ಕೆ ಇರುವ ಕಾರಣಗಳನ್ನು ಮೂರು ವಿಧವಾಗಿ ವಿಂಗಡಿಸಿರುತ್ತಾರೆ. ಇವುಗಳನ್ನೇ ಆಣವ ಮಾಯಿಯ ಕಾರ್ಮ ಎಂಬ ಹೆಸರುಗಳಿಂದ ಮಲತ್ರಯಗಳೆಂದು ಕರೆಯುತ್ತಾರೆ. ಮೊದಲನೆಯದು ಆಣವಮಲ. ಇದು ಬಹುಸೂಕ್ಷ್ಮವಾದದ್ದು. ಎರಡನೆಯದು ಮಾಯಾಕಂಚುಕಗಳು. ಇವು ಸ್ಥೂಲವಾದ ಆವರಣಗಳು.

ಇವುಗಳು ಸರ್ವಜ್ಞತ್ವಾದಿ ಶಕ್ತಿಗಳನ್ನು ಸಂಕುಚಿತವಾದವುಗಳನ್ನಾಗಿ ಮಾಡುತ್ತವೆ. ಮಾಯೆಯು ಅಚಿದ್ರೂಪವಾದ ಶರೀರಾದಿ ವಿಷಯಗಳಲ್ಲಿ 'ನಾನು' ಎಂಬ ಪ್ರಮಾತೃತ್ವ ಅಭಿಮಾನವನ್ನು ಹುಟ್ಟಿಸುತ್ತದೆ. ಎಲ್ಲಾ ವಿಧದಲ್ಲಿಯೂ ತತ್ತ್ವಸ್ವರೂಪವನ್ನು ಮರೆಯಿಸಿ ಭೇದಜ್ಞಾನವನ್ನುಂಟುಮಾಡುತ್ತದೆ. ನಾನು ಎಂಬ 'ಅಹಂ' ವ್ಯವಹಾರವು ಈ ಮಾಯೆಯ ಪ್ರಭಾವವೇ. ಅಂತಃಕರಣ ಇಂದ್ರಿಯಗಳು ಮತ್ತು ಸ್ಥೂಲಶರೀರಗಳ ಸಂಬಂಧವೇರ್ಪಟ್ಟ ಜೀವಾತ್ಮನು ತನ್ನ ಇಂದ್ರಿಯಗಳಿಂದಲೂ ಮನಸ್ಸಿನಿಂದಲೂ ಸುಖದುಃಖಗಳನ್ನುಂಟುಮಾಡುವ ಕರ್ಮಗಳನ್ನಾಚರಿಸುತ್ತಾನೆ. ಇದೇ ಕಾರ್ಮಮಲ.

ಮೊದಲು ಸ್ವರೂಪಾಭಿನ್ನವಾಗಿರುವ ಚಿತ್, ಆನಂದ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು ಸರ್ವಕರ್ತೃತ್ವ ಸರ್ವಜ್ಞತ್ವ ಪೂರ್ಣತ್ವ ನಿತ್ಯತ್ವ ವ್ಯಾಪಕತ್ವ ಎಂಬ ಪ್ರಭಾವವುಳ್ಳದ್ದಾಗಿದ್ದವು. ಇವುಗಳು ಅಶುದ್ಧಾಧ್ವದಲ್ಲಿ ಮಾಯಾಪ್ರಭಾವದಿಂದ ಕಲಾ ವಿದ್ಯಾ ರಾಗ ಕಾಲ ನಿಯತಿರೂಪಗಳಿಂದ ಮಾರ್ಪಟ್ಟವು. ಇವುಗಳನ್ನೇ ಪಂಚ ಕಂಚುಕಗಳೆಂದು ಹೇಳುವುದು. ಬಣ್ಣವು ಬಟ್ಟೆಯನ್ನು ಅಂಟಿಕೊಂಡಿರುವಹಾಗೆ ಜೀವಾತ್ಮನಿಗೆ ಅಂಟಿಕೊಂಡು ಪ್ರತಿಯೊಬ್ಬ ಜೀವಾತ್ಮನಿಗೂ ಬೇರೆಬೇರೆಯಾದ ತಾರತಮ್ಯವನ್ನು ಉಂಟುಮಾಡುತ್ತಿರುವವುಗಳಾಗಿವೆ. ಮಾಯೆಯಾದರೋ ಅಚಿದ್ರೂಪವಾದ ಶರೀರಾದಿ ವಿಷಯಗಳಲ್ಲಿ 'ನಾನು' ಎಂಬ ಪ್ರಮಾತೃತ್ವ ಅಭಿಮಾನವನ್ನು ಹುಟ್ಟಿಸುತ್ತದೆ. ಎಲ್ಲಾ ವಿಧದಲ್ಲಿಯೂ ತತ್ತ್ವಸ್ವರೂಪವನ್ನು ಮರೆಸಿ ಭೇದಜ್ಞಾನವನ್ನುಂಟುಮಾಡುತ್ತದೆ. ನಾನು ಎಂಬ ಅಹಂ ವ್ಯವಹಾರವು ಈ ಮಾಯೆಯ ಪ್ರಭಾವವೇ. ಮಾಯಾ ಮತ್ತು ಪಂಚಕಂಚುಕಗಳಿಂದ ಆವೃತನಾದವನೇ **ಪುರುಷ**. ಈ ಪುರುಷನಿಗೆ ಸತ್ತ್ವ ರಜಸ್ತಮಸ್ಸುಗಳ ಪ್ರಭಾವದಿಂದ ಕೂಡಿದ ದೇಹ ಇಂದ್ರಿಯ ಮತ್ತು ಅಂತಃಕರಣಗಳನ್ನು ಒದಗಿಸುವುದೇ **ಪ್ರಕೃತಿ**.

ಆಣವಮಲದಿಂದ ಸ್ವರೂಪ ಸಂಕೋಚವಾಗಿ ಮಾಯಿಯಮಲದಿಂದ ಜ್ಞಾನ ಶಕ್ತಿಗಳು ಸಂಕುಚಿತವಾಗಿ ದೇಹ ಮತ್ತು ಇಂದ್ರಿಯಗಳಿಗೆ ಅಧೀನನಾದವನು ಫಲಗಳನ್ನು ಕೊಡುವ ಕಾರ್ಮಮಲಕ್ಕೆ ತುತ್ತಾಗಿ ಮಲತ್ರಯಗಳಿಂದ ಕೂಡಿದವನಾಗಿರುತ್ತಾನೆ. ಈ ಮೂರು ಆವರಣಗಳಿಂದ ಪರಿವೇಷ್ಟಿತವಾಗಿರುವವನು ಬದ್ಧಾತ್ಮ.

ಈ ಮಲತ್ರಯಗಳು ಯಾವಾಗ ಮೊದಲಾಗುತ್ತವೆ ಯಾವಾಗ ಕೊನೆಗೊಳ್ಳುತ್ತವೆ ಎಂಬ ವಿಷಯದಲ್ಲಿ ಬಗೆಬಗೆಯಾದ ವಿವರಣೆಗಳಿವೆ. ಅಭಿನವಗುಪ್ತಾಚಾರ್ಯರು ಬಹುಸುಲಭವಾದ ಒಂದು ದೃಷ್ಟಾಂತದಿಂದ ಈ ಮಲಗಳ ಆವಿರ್ಭಾವ ಮತ್ತು ಸ್ವರೂಪ ಸ್ವಭಾವಗಳನ್ನು ವಿವರಿಸಿರುತ್ತಾರೆ. ಭತ್ತದ ಕಾಳನ್ನು ಬಿತ್ತಿದರೆ ಮೊಳಕೆಯಾಗಿ ಪೈರಾಗುತ್ತದೆ. ಈ ಪೈರು ಬೆಳೆದು ತೆನೆಬಿಡುವಾಗ ಎಳೆತೆನೆಯಲ್ಲಿ ಬರೀ ಹಾಲು ಕಂಡುಬರುತ್ತದೆ. ಬಲಿತಮೇಲೆ ಮೇಲಿನ ಭಾಗವು ಹೊಟ್ಟಾಗಿಯೂ ಗರ್ಭದಲ್ಲಿರುವುದು ಅಕ್ಕಿಯಾಗಿಯೂ

ಅಕ್ಕಿಯ ಅಂಶಕ್ಕೂ ಹೊಟ್ಟಿಗೂ ನಡುವೆ ಇರುವುದು ಒಂದು ತೌಡಿನ ಮುಸುಕಾಗಿಯೂ ರೂಪನ್ನು ಹೊಂದುತ್ತವೆ. ಈ ತೌಡಿನ ಮುಸುಕು ಎರಡು ಬಗೆಯಾಗಿರುತ್ತದೆ. ಒಂದು ದಪ್ಪತೌಡು, ಇನ್ನೊಂದು ತೆಳುವಾದ ಸೂಕ್ಷ್ಮತೌಡು. ಇದನ್ನೇ ಸಂಸ್ಕೃತದಲ್ಲಿ ತುಷಾ (ಹೊಟ್ಟು) ಕಿಂಶಾರುಕ (ದಪ್ಪತೌಡು) ಕಂಚುಕ (ಸೂಕ್ಷ್ಮತೌಡು) ಎಂದು ಹೇಳುವುದು. ತೆನೆಬಿಡುವುದಕ್ಕೆ ಮುಂಚೆ ಈ ಮೂರು ಅಂಶಗಳು ಪೈರಿನಲ್ಲಿ ಅಭಿನ್ನವಾಗಿದ್ದವು. ಬಲಿತಾಗ ಈ ಮೂರು ಭಿನ್ನಭಿನ್ನವಾಗಿ ರೂಪುಗೊಂಡವು. ಈ ಮೂರು ಆವರಣಗಳು ಬೀಜಕ್ಕೆ ಇಲ್ಲದಿದ್ದರೆ ಮರಳಿ ಇದು ಮೊಳಕೆಗೆ ಬರಲಾರದು. ಇದೇ ರೀತಿ ಮಲಾವರಣ ಗಳು ಜನ್ಮಾಂತರಗಳನ್ನುಂಟುಮಾಡುತ್ತವೆ. ಮೊದಲನೆಯದು ಆಣವಮಲ. ಇದು ಸೂಕ್ಷ್ಮವಾದುದು. ಮಾಯಾಕಂಚುಕಗಳು ಸ್ಥೂಲವಾದ ಆವರಣಗಳು. ಇವುಗಳ ಹೊರಗಿರುವುದೇ ಶರೀರ. ಇದು ಇನ್ನೂ ಸ್ಥೂಲವಾದದ್ದು. ಈ ಮೂರು ಆವರಣಗಳಿಂದ ಪರಿವೇಷ್ಟಿತವಾಗಿರುವವನು ಬದ್ಧ ಜೀವಾತ್ಮ. ಇವನಿಗೆ ಈ ಮೂರು ಮಲಗಳಿಲ್ಲದಿದ್ದರೆ ಜೀವಭಾವವಿಲ್ಲ. ಜನನ ಮರಣಗಳಿಲ್ಲ; ಜನ್ಮಾಂತರಗಳಿಲ್ಲ; ಜೀವಾತ್ಮನ ಶಕ್ತಿ ಸಂಕೋಚಕ್ಕೆ ಮಲಗಳೆನ್ನುತ್ತೇವೆ. ಇಚ್ಛಾಜ್ಞಾನ ಕ್ರಿಯಾಶಕ್ತಿಗಳ ಸಂಕೋಚಗಳೇ ಈ ಮಲಗಳು. ಶಕ್ತಿಗಳು ಇವನಸ್ವರೂಪದಿಂದ ಬೇರೆಯಲ್ಲ. ಸಂಕೋಚವೇ ಮಲ. ವಿಕಾಸವೇ ಮುಕ್ತಿ. "ಶಕ್ತಿ ದರಿದ್ರಃ ಸಂಸಾರಿ, ಶಕ್ತಿವಿಕಾಸೆ ಶಿವಃ"

> "ಪರಮಾವರಣಂ ಮಲಇಹ ಸೂಕ್ಷ್ಮಂ ಮಾಯಾದಿಕಂಚುಕಂ,
> ಸ್ಥೂಲಂ ಬಾಹ್ಯಂ ವಿಗ್ರಹರೂಪಕೋಶತ್ರಯವೇಷ್ಟಿತೋಹ್ಯಾತ್ಮಾ"
>
> (ಪರಮಾರ್ಥಸಾರ, ಶ್ಲೋಕ ೫೫)

> "ತುಷ ಕಂಬುಕ ಕಿಂಶಾರುಕಮುಕ್ತಬೀಜಂ ಯಥಾಂ ಕುರುತೆ ನೈವ
> ತಥಾಣವಮಾಯಾ ಕರ್ಮವಿಮುಕ್ತೋ ಭವಾಂಕುರಂಹ್ಯಾತ್ಮಾ"
>
> (ತಂತ್ರಸಾರ ೫೭)

ಚಿತ್ತತ್ವಕ್ಕೆ ಜ್ಞಾತೃತ್ವ ಕರ್ತೃತ್ವ ಇವೆರಡೂ ಸ್ವರೂಪಸಿದ್ಧವಾದ ಧರ್ಮಗಳು. ಸ್ವರೂಪಸಿದ್ಧವಾದ ಅನಂತವಾದ ಈ ಎರಡು ಶಕ್ತಿಗಳ ವ್ಯಾಪ್ತಿಯು ಸಂಕುಚಿತವಾಗು ವಿಕೆಯೇ ಆಣವಮಲ. ಇಷ್ಟೇಅಲ್ಲದೆ ಸ್ವತಂತ್ರವಾದ ಇವನ ಸ್ವರೂಪವು ತನ್ನ ಅನಂತ ವ್ಯಾಪ್ತಿಯನ್ನು ಹೋಗಲಾಡಿಸಿಕೊಂಡು ತನ್ನನ್ನು ತಾನೇ ತಿಳಿಯದೆ ಇರುತ್ತದೆ. ಹೀಗೆ ಆಣವಮಲವು ಎರಡು ಬಗೆಯಾಗಿದೆ. ಹೀಗೆ ಸ್ವರೂಪ ಜ್ಞಾತೃತ್ವ ಕರ್ತೃತ್ವಗಳ ಸಂಕೋಚವನ್ನು ಪಡೆದಿದ್ದರೆ ಅದರ ಮೇಲೆ ಭಿನ್ನ ವೇದ್ಯಪ್ರಥೆಯನ್ನು ಹುಟ್ಟಿಸು ವಂಥಾದ್ದು ಮಾಯಿಾಯ ಮಲ. ಮೇಲೆ ಕಾಣಿಸಿರುವ ಎರಡು ಬಗೆಯ ಆಣವ ಮಲವು ಸ್ವರೂಪಕ್ಕೆ ಸಂಬಂಧಪಟ್ಟದ್ದು. ಮಾಯಿಾಯ ಮಲವು ಭೇದಜ್ಞಾನಕ್ಕೆ ಕಾರಣ ವಾದದ್ದು. ಸ್ವರೂಪಜ್ಞಾನವಿಲ್ಲದಿದ್ದರೆ ಭೇದಜ್ಞಾನ ಉಂಟಾಗಲಾರದು. ಭೇದಜ್ಞಾನ ದಿಂದ ಧರ್ಮಾಧರ್ಮ ರೂಪವಾದ ಕರ್ಮ. ಕರ್ಮದಿಂದ ಜನನಮರಣಗಳು.

ಸ್ವಾತಂತ್ರ್ಯಹಾನಿರ್ಬೋಧಸ್ಯ ಸ್ವಾತಂತ್ರ್ಯಸ್ಯಾಪ್ಯಬೋಧತ
ದ್ವಿಧಾಣವಮಲಮಿದಂ ಸ್ವಸ್ವರೂಪಾಪಹಾನಿತಃ ।
ಭಿನ್ನ ವೇದ್ಯ ಪ್ರಥಾತ್ರೈವ ಮಾಯಾಖ್ಯಂ ಜನ್ಮಭೋಗದಂ
ಕರ್ತವ್ಯಬೋಧೆ ಕಾರ್ಮಂತು ಮಾಯಾಶಕ್ತ್ಯೈವತತ್ರಯಂ ॥

(ಪರಾತ್ರಿಂಶಿಕ ವಿವರಣ–ಅಭಿನವಗುಪ್ತ)

ಅಣುರ್ನಾಮ ಪೂರ್ಣಾಹಂಭಾವ ಪರಾಮರ್ಶ ಶೂನ್ಯ
ಸ್ಯಾತ್ ಸಂಕುಚಿತಮನ್ಯೋ ಜೀವಃ ತಸ್ಯಭಾವಃ ಆಣವಂ ॥

(ಮಹಾರ್ಥಮಂಜರಿ, ಪುಟ ೩೧–೩೨)

ಕಾರ್ಮಮಲವು ಶುಭಾಶುಭಫಲಗಳನ್ನುಂಟುಮಾಡುವ ಕರ್ಮಾಚರಣೆಗೂ, ಮಾಯಿಯ ಮಲವು ಜನ್ಮಾಂತರ ಲೋಕಾಂತರ ಸಂಚಾರಗಳಿಗೂ ಕಾರಣವಾಗಿ, ಕರ್ಮಸಂಸ್ಕಾರಗಳನ್ನು ಪ್ರಮಾತೃವಿಗೆ ಉಂಟುಮಾಡುತ್ತಿರುತ್ತದೆ. ಕರ್ಮಗಳಿಗೆ ಒಂದು ವಿಶೇಷ ಶಕ್ತಿಯುಂಟು. ಒಂದು ಕ್ರಿಯೆಯಿಂದ ಇನ್ನೊಂದು ಕ್ರಿಯೆ ಹುಟ್ಟುತ್ತದೆ. ಹಾಗೆಯೇ ಒಂದು ಕರ್ಮದಿಂದ ಇನ್ನೊಂದು ಕರ್ಮವು ಅಳಿಯುತ್ತದೆ. ಒಂದು ಕರ್ಮ ದಿಂದ ಇನ್ನೊಂದು ಕರ್ಮವು ಮುಚ್ಚಲ್ಪಡುತ್ತದೆ. ಅದೇ ರೀತಿ ಒಂದು ಕರ್ಮದಿಂದ ಇನ್ನೊಂದು ಕರ್ಮವು ಆವಿರ್ಭಾವ ಉಂಟಾಗುತ್ತದೆ. ಈ ರೀತಿಯಾಗಿ ಕರ್ಮಪ್ರವಾಹವು ವಿಕಲ್ಪಸಂತತಿಗಳನ್ನಾಶ್ರಯಿಸಿರುತ್ತದೆ. ಇಂದಿನ ಕರ್ಮಗಳೇ ಮುಂದಿನ ಸಂಸ್ಕಾರ ಗಳಾಗುತ್ತವೆ. ಸಂಸ್ಕಾರಾನುಸಾರವಾಗಿ ಕರ್ಮಗಳುಕರ್ಮಗಳಿಂದಪು ನಃ ಸಂಸ್ಕಾರಗಳು- ಈ ರೀತಿ ಕರ್ಮಚಕ್ರವು ತಿರುಗುತ್ತಿರುತ್ತದೆ. ಸತ್ತ್ವರಜಸ್ತಮಸ್ಸೆಂಬ ಮೂರು ಗುಣಗಳು ಕರ್ಮಗಳ ಮಿತಿಯನ್ನು ಸೂಚಿಸುತ್ತವೆ. ಈ ಮೂರು ಗುಣಗಳು ಒಂದ ನ್ನೊಂದು ಬಿಡದೆ ಇದ್ದರೂ ಯಾವ ಗುಣವು ಉದ್ರಿಕ್ತವಾಗಿರುತ್ತದೆಯೋ ಆ ಕಾಲದಲ್ಲಿ ನಡೆಯುವ ಕರ್ಮ ಆ ಗುಣವನ್ನು ಮುಖ್ಯವಾಗಿ ಪಡೆದಿರುತ್ತದೆ. ಜ್ಞಾನವಿಕಾಸ ವನ್ನುಂಟುಮಾಡುವವುಗಳು ಸಾತ್ತ್ವಿಕಕರ್ಮಗಳು. ಕಾಮ ಕ್ರೋಧ ಮೊದಲಾದ ಅಶಾಂತಿಗೆ ಕಾರಣವಾಗಿರುವವುಗಳು ರಾಜಸಕರ್ಮಗಳು. ಇವುಗಳಿಂದಲೇ ಮದ ಮಾತ್ಸರ್ಯಗಳುಂಟಾಗುತ್ತಿರುತ್ತವೆ. ಪ್ರಮಾದ ಮೋಹ ಮೊದಲಾದವುಗಳು ತಾಮಸ ಕ್ರಿಯೆಗಳು. ಜ್ಞಾನ್ನವಿಕಾಸಕ್ಕೆ ಕಾರಣವಾಗಿರುವ ಸತ್ಕಾರ್ಮಾಚರಣೆಯಿಂದ ರಜಃ ಪ್ರವೃತ್ತಿಗಳು ಮತ್ತು ತಮಃಪ್ರವೃತ್ತಿಗಳು ಶಿಥಿಲವಾಗಲಾಗಿ ಕರ್ಮಪ್ರವಾಹಕ್ಕೆ ಆಶ್ರಯವಾಗಿರುವ ವಿಕಲ್ಪಸಂತತಿಯು ಕ್ಷೀಣವಾಗುತ್ತದೆ. ಪ್ರವೃತ್ತಿಗಳು ಶಿಥಿಲವಾಗ ಲಾಗಿ ಕರ್ಮಪ್ರವಾಹಕ್ಕೆ ಆಶ್ರಯವಾಗಿರುವ ವಿಕಲ್ಪಸಂತತಿಯು ಕ್ಷೀಣವಾಗುತ್ತದೆ. ವಿಕಲ್ಪಗಳು ಕಡಿಮೆಯಾದಾಗ ಅದರ ಸಂಸ್ಕಾರದಿಂದ ಕೆಟ್ಟ ವಿಕಲ್ಪಗಳಿಲ್ಲದೆ ಒಳ್ಳೇ ವಿಕಲ್ಪಗಳುಂಟಾಗುತ್ತಿದ್ದು ಜ್ಞಾನವಿಕಾಸವು ಕ್ರಮಕ್ರಮವಾಗಿ ಹೆಚ್ಚಾಗುತ್ತದೆ. ಪರಿಪಾಕ್ಕನುಗುಣವಾಗಿ ಕಾರ್ಮಮಲ ಕ್ಷೀಣವಾಗುತ್ತಾಬಂದರೆ ಮಾಯಿಯ ಮಲಕ್ಕೆ ಪ್ರಯೋಜನವಿರುವುದಿಲ್ಲ. ಮಾಯಿಯ ಮಲವು ೩೧ ತತ್ತ್ವಗಳ ಸಂಪುಟಾಂತರ್ಗತ

ವಾಗಿರುವ ಕಂಚುಕಗಳು ಪುರ್ಯಷ್ಟಕ ದೇಹೇಂದ್ರಿಯಗಳಿಂದ ಕೂಡಿರುವಾಗ ಮಾತ್ರ ಅನುಭವಕ್ಕೆ ಬರುತ್ತಿರುವುದು. ಈ ಮಲವು ಕಳಚಿಹೋದರೆ ಗ್ರಾಹ್ಯಗ್ರಾಹಕ ಭಾವ ಮಾತ್ರ ಉಳಿದಿರುವ ಶುದ್ಧಜ್ಞಾನವು ವಿಜ್ಞಾನಾಕಲರಿಗಿರುತ್ತದೆ. ಸಕಲನಿಗೆ ಮೂರು ಮಲಗಳೂ ಪ್ರಳಯಾಕಲನಿಗೆ ಮಾಯೀಯ ಮತ್ತು ಆಣವ ಈ ಎರಡು ಮಲಗಳೂ ವಿಜ್ಞಾನಾಕಲನಿಂದ ಮಂತ್ರಮಹೇಶ್ವರರವರಿಗಿರುವ ನಾಲ್ಕು ಪ್ರಮಾತೃಗಳಿಗೆ ಆಣವ ಮಲಮಾತ್ರ ಇರುತ್ತದೆ.

ಈ ಸಪ್ತಪ್ರಮಾತೃಗಳ ವಿಷಯವಾಗಿ ಆಚಾರ್ಯ ಅಭಿನವಗುಪ್ತರು ಮನನ ಮಾಡುವುದಕ್ಕೆ ಒಂದು ಯುಕ್ತಿಯನ್ನು ಸೂಚಿಸಿರುತ್ತಾರೆ. ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾ ಎಂಬ ಐದುಶಕ್ತಿಗಳು ಚಿತ್ತಿನ ಸ್ವರೂಪಾನುಬಂಧಿಗಳು. ಸಪ್ತಪ್ರಮಾತೃ ಭಾವದಲ್ಲಿ ಸಕಲ ಪ್ರಮಾತೃವಿಗೆ ಮೂರು ಮಲಗಳೂ ಪ್ರಳಯಾಕಲನಿಗೆ ಎರಡು ಮಲಗಳೂ ಮಂತ್ರಮಹೇಶ್ವರರವರೆಗಿರುವ ನಾಲ್ಕು ಪ್ರಮಾತೃಗಳಿಗೆ ಒಂದು ಮಲವೂ ಇದೆಯೆಂದು ಈ ಸಂಪ್ರದಾಯದ ವಿಭಾಗಕ್ರಮ. ಎಲ್ಲರ ಅನುಭವದಲ್ಲಿರುವ ಜಾಗ್ರದಾದ ವಸ್ಥೆಗಳೂ ಈ ಅನುಭವದಲ್ಲಿ ಮನನಮಾಡುವುದಕ್ಕೆ ಸಹಾಯಕಾರಿಯಾಗಿರುತ್ತವೆ. ಜಾಗ್ರದವಸ್ಥೆಯೇ ಸಕಲ ಪ್ರಮಾತೃವಿನ ಸಂಪೂರ್ಣಾನುಭವವುಳ್ಳದ್ದು. ಸ್ವಪ್ನಾ ವಸ್ಥೆಯು ' ಪ್ರಳಯಾಕಲ ' ಪ್ರಮಾತೃಭಾವವನ್ನು ಅನುಭವಿಸುವುದಾಗಿದೆ. ಸುಷುಪ್ತ್ಯ ವಸ್ಥೆಯು ವಿಜ್ಞಾನಾಕಲ ಸ್ಥಿತಿಯನ್ನು ಅನುಭವಿಸುವುದಕ್ಕೆ ಆಶ್ರಯವಾಗಿದೆ. ಸಾಧಕನು ಮೂರು ಮಲಗಳ ಅನುಭವಕ್ಕೆ ಬರುವ ಜಾಗ್ರದವಸ್ಥೆಗೂ ಎರಡು ಮಲಗಳ ಅನುಭವ ವುಳ್ಳ ಸ್ವಪ್ನಾವಸ್ಥೆಗೂ ಒಂದು ಮಲದ ಅನುಭವವಿರುವ ಸುಷುಪ್ತ್ಯವಸ್ಥೆಗೂ ಇರುವ ವ್ಯತ್ಯಾಸವನ್ನು ಮನನ ಮಾಡಬೇಕು. ಹೀಗೆ ಮನನ ಮಾಡುವಾಗ ಸ್ವಭಾವತಃ ಮೂಲ ರೂಪದಲ್ಲಿ ಪಂಚಶಕ್ತಿಗಳಿಂದ ಕೂಡಿರುವ ಪ್ರಮಾತೃವು ಜಾಗ್ರದವಸ್ಥೆಯಲ್ಲಿ ಐದು ಶಕ್ತಿ ಗಳಿಂದಲೂ ಸ್ವಪ್ನಾವಸ್ಥೆಯಲ್ಲಿ ನಾಲ್ಕು ಶಕ್ತಿಗಳಿಂದಲೂ ಸುಷುಪ್ತ್ಯವಸ್ಥೆಯಲ್ಲಿ ಮೂರು ಶಕ್ತಿಗಳಿಂದಲೂ ಕೂಡಿರುವುದನ್ನು ಗಮನಿಸಬೇಕು. ಕ್ರಿಯಾಶಕ್ತಿ ಪ್ರಧಾನವಾಗಿರುವುದು ' ಜಾಗ್ರತ್ '. ಜ್ಞಾನಶಕ್ತಿ ಪ್ರಧಾನವಾಗಿರುವುದು ' ಸ್ವಪ್ನ.' ಇಚ್ಛಾಶಕ್ತಿ ಪ್ರಧಾನ ವಾಗಿರುವುದು ' ಸುಷುಪ್ತಿ.' ವಿಜ್ಞಾನಾಕಲಾ, ಮಂತ್ರ, ಮಂತ್ರೇಶ್ವರ, ಮಂತ್ರ ಮಹೇಶ್ವರ ಈ ನಾಲ್ಕು ಪ್ರಮಾತೃಭಾವಾನುಭವವೂ ತುರ್ಯಾವಸ್ಥಾನುಭವವೂ ಒಂದೇ. ಆಣವಮಲ್ಲವಿಲ್ಲದಿರುವ ಅಭೇದ ವ್ಯಾಪ್ತಿಸಾರವಾಗಿರುವ ಶಿವತತ್ತ್ವರೂಪವಾಗಿರುವ ಸಪ್ತಪ್ರಮಾತ್ರಾನುಭವವು ತುರ್ಯಾತೀತಾವಸ್ಥೆಗೆ ಸಮಾನವಾದವುಗಳು—ಜ್ಞಾನ ವಿಕಾಸಕ್ಕೆ ಬಾಹ್ಯಪ್ರಪಂಚದಲ್ಲಿ ಆಚರಿಸುವ ಸತ್ಕರ್ಮಗಳೂ ಅಂತರಂಗಿಕವಾಗಿ ಅಭ್ಯಾಸ ಮಾಡುವವುಗಳೂ ಉಪಾಯಗಳು.

ತುರ್ಯಾತೀತ—೫ ನೆಯ ಅವಸ್ಥೆ—ಸಪ್ತಪ್ರಮಾತೃ ಶಿವಶಕ್ತಿಗಳಲ್ಲಿ ಚಿತ್‌ಪ್ರಧಾನ. ಮಲಗಳಿಲ್ಲ.

ತುರ್ಯಾ—೪ ನೆಯ ಅವಸ್ಥೆ-ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರ ಈ ಮೂರು ಪ್ರಮಾತೃಗಳೂ ಚಿತ್, ಆನಂದ ಇವೆರಡು ಶಕ್ತಿಗಳೂ ಇರುತ್ತವೆ. ಆಣವ ಮಲ ಒಂದೇ ಇಲ್ಲಿರುವುದು. ಆನಂದಾನುಭವ.

ಸುಷುಪ್ತಿ—೩ ನೆಯ ಅವಸ್ಥೆ-ವಿಜ್ಞಾನಾ ಕಲಾಪ್ರಮಾತೃ. ಚಿತ್ ಆನಂದ, ಇಚ್ಛಾ ಈ ಮೂರು ಶಕ್ತಿಗಳು-ಆಣವಮಲ ಒಂದೇ ಇಲ್ಲಿರುವುದು. ಇಚ್ಛೆಗೆ ಹೆಚ್ಚು ಅವಕಾಶ.

ಸ್ವಪ್ನ—೨ ನೆಯ ಅವಸ್ಥೆ-ಪ್ರಳಯಾಕಲಾ ಪ್ರಮಾತೃ ಚಿತ್, ಆನಂದ, ಇಚ್ಛಾ, ಜ್ಞಾನ ಈ ನಾಲ್ಕು ಶಕ್ತಿಗಳು. ಆಣವ ಮತ್ತು ಮಾಯಿಾಯ ಮಲಗಳು ಜ್ಞಾನಕ್ಕೆ ಹೆಚ್ಚು ಅವಕಾಶ.

ಜಾಗ್ರತ್—ಮೊದಲಿನ ಅವಸ್ಥೆ-ಸಕಲ ಪ್ರಮಾತೃ-ಚಿತ್, ಆನಂದ ಇಚ್ಛಾಜ್ಞಾನ ಕ್ರಿಯಾ ಈ ಐದು ಶಕ್ತಿಗಳು. ಆಣವ ಮಾಯಾ ಕಾರ್ಮಮಲಗಳು ಕ್ರಿಯೆಗೆ ಹೆಚ್ಚು ಅವಕಾಶ.

ಸಾಧನಾ

ಶರೀರದಲ್ಲಿ ಬರುವ ಚಲನವಲನಗಳಿಂದ ಬರುವ ತೊಂದರೆಗಳು, ಮನಸ್ಸಿನಲ್ಲಿ ಉದ್ಭವಿಸುವ ಯೋಚನೆಗಳಿಂದ ಬರುವ ಅಶಾಂತಿ, ತಾನು ನಂಬಿರುವ ತತ್ತ್ವಗಳಿಂದ ಬರುವ ಸಂಶಯಗಳೇ ಮೊದಲಾದ ಪ್ರತಿಬಂಧಕಗಳನ್ನು ಆಯಾಯ ಚಲನೆಗಳ ಸಂಸ್ಕಾರ ದಿಂದಲೇ ನಿವಾರಣೆ ಮಾಡಬೇಕಾಗುತ್ತದೆ. ಶರೀರದ ತೊಂದರೆಗಳನ್ನು ಶಾರೀರಕ ಕ್ರಿಯೆ ಗಳಿಂದಲೇ ಪ್ರತಿಕ್ರಿಯೆ ಮಾಡಬೇಕು. ಮಾನಸಿಕವಾದ ಯೋಚನೆಗಳನ್ನು ಅದಕ್ಕೆ ವಿರುದ್ಧವಾದ ಅಥವಾ ಉದಾಸೀನವಾದ ಚಿತ್ತವೃತ್ತಿಗಳಿಂದ ಪಳಗಿಸಬೇಕು, ಹಾಗೂ ನಿಲ್ಲಿಸಬೇಕು. ತತ್ತ್ವದ ನಂಬಿಕೆಗಳನ್ನು ಸತ್ಯದ ದೃಷ್ಟಿಯಿಂದ ಶೋಧಿಸಬೇಕು. ಇಷ್ಟು ಮಾತ್ರ ಮಾಡಿದರೆ ಭಾವನೆ ಸ್ಥಿರವಾಗಿ ಉಳಿಯುತ್ತದೆ. ಆಗ ಸಂತೋಷ ಸಂತಾಪಗಳು ಹೆಚ್ಚಾಗಿ ತೊಂದರೆಯನ್ನುಂಟುಮಾಡುವುದಿಲ್ಲ. ಕಾಲಕ್ರಮೇಣ ಚಿತ್ಸಂಸ್ಪರ್ಶವೇರ್ಪಟ್ಟು ಎಲ್ಲಾ ವಿಷಯಗಳಲ್ಲಿಯೂ ಸತ್ಯವೇ ಗೋಚರಿಸುತ್ತದೆ. ಆಗ ಅವನ ಊಹೆಗಳು ನಿಜ ವಾದವುಗಳೆಂದು ಕಂಡುಬರುತ್ತವೆ. ಸಂಶಯಗಳು ತಲೆದೋರುವುದಿಲ್ಲ. ಆತನ ಅಭಿಪ್ರಾಯ ಗಳಿಗೆ ಮನ್ನಣೆ ದೊರೆಯಲಿ ಬಿಡಲಿ ಅವು ಸತ್ಯವಾಗಿಯೇ ಉಳಿಯುತ್ತವೆ. ಸತ್ಯವೇ ಎಲ್ಲಾ ಅಂಶಗಳಲ್ಲಿಯೂ ಹೊರಹೊಮ್ಮುತ್ತಿದ್ದರೆ ಕರ್ಮಜ್ಞಾನಭಕ್ತಿಯೋಗಗಳು ಒಂದಕ್ಕೊಂದು ಅಂಗಾಂಗಿ ಭಾವದಿಂದ ಜೀವನದಲ್ಲಿ ಹೊಂದಿಕೊಂಡಿರುತ್ತವೆ. ಇದನ್ನು ಆಧ್ಯಾತ್ಮಿಕ ವಿಕಾಸವೆಂದಾಗಲಿ ಸಿದ್ಧಿ ಎಂದಾಗಲಿ ಕರೆಯಬಹುದು. ಇಷ್ಟಾಗ ಬೇಕಾಗಿದ್ದರೆ ಮೊದಲು ನೀತಿಯಿಂದ ಜೀವನ, ದೇವರಲ್ಲಿ ಭಕ್ತಿ, ಕರ್ತವ್ಯದಲ್ಲಿ ಶ್ರದ್ಧೆ, ಹಿರಿಯರ ಉಪದೇಶಗಳಲ್ಲಿ ಮನ್ನಣೆ—ಈ ಎಲ್ಲಾ ವಿಷಯಗಳಲ್ಲಿಯೂ ಸತ್ಯನಿಷ್ಠೆ ಮುಖ್ಯವಾಗಿರುತ್ತದೆ.

ಮಾನವರೆಲ್ಲರ ಪರಮಪುರುಷಾರ್ಥವು ಭಗವತ್ಸಾಕ್ಷಾತ್ಕಾರ. ಇದನ್ನು ಹೊಂದುವುದಕ್ಕೆ ಅನೇಕ ದಾರಿಗಳಿವೆ. ಭಿನ್ನಭಿನ್ನ ಸಂಸ್ಕಾರಗಳು, ಭಿನ್ನಭಿನ್ನ ಸ್ವಭಾವಗಳು, ಭಿನ್ನಭಿನ್ನ ಸಾಮರ್ಥ್ಯಗಳು ಇರುವ ಭಿನ್ನಭಿನ್ನ ಮನುಷ್ಯರಿಗೆ ಶೈವಧರ್ಮವು ಅವರವರ ಯೋಗ್ಯತೆಗನುಸಾರವಾಗಿ ಸಾಧನಮಾರ್ಗವನ್ನು ತೋರಿಸುತ್ತದೆ. ವಿಶೇಷವಾಗಿ ಬುದ್ಧಿಬಲವುಳ್ಳವರಿಗೆ ಜ್ಞಾನಮಾರ್ಗವು, ಪರಮೇಶ್ವರನಲ್ಲಿ ಅಚಲವಾದ ಶ್ರದ್ಧೆ, ಅತಿಶಯವಾದ ಭಕ್ತಿಯುಳ್ಳವರಿಗೆ ಭಕ್ತಿಮಾರ್ಗ, ಪ್ರವೃತ್ತಿ ಪ್ರಧಾನವಾಗುಳ್ಳವರಿಗೆ ಕರ್ಮಮಾರ್ಗ, ನಿವೃತ್ತಿ ಪ್ರಧಾನವಾದ ಸ್ವಭಾವವುಳ್ಳವರಿಗೆ ಯೋಗಮಾರ್ಗ—ಹೀಗೆ ಶಾಸ್ತ್ರಜ್ಞರು ಸೂಚಿಸಿರುತ್ತಾರೆ. ಇವಲ್ಲದೆ ಇತರ ಮಾರ್ಗಗಳೂ ಉಂಟು. ಯಾವನೂ ತನ್ನ ಸಂಸ್ಕಾರಗಳು ಕೆಟ್ಟವು ಎಂದು ನಿರಾಶೆಗೊಳ್ಳುವುದು ಬೇಡ, ದುಃಖಿಸುವುದೂ ಬೇಡ. ಅವನ ಸ್ವಭಾವವನ್ನು ತಿದ್ದುವುದಕ್ಕೆ ಮೇಲೆ ಹೇಳಿದ ಯಾವುದಾದರೊಂದು ಸಾಧನಮಾರ್ಗವನ್ನು ಅನುಸರಿಸಬಹುದು. ಮೇಲೆ ಹೇಳಿದ ಮಾರ್ಗಗಳು ಒಂದಕ್ಕೊಂದು ಭಿನ್ನವಾಗಿಲ್ಲ; ಪ್ರತ್ಯೇಕವಾದವುಗಳೂ ಅಲ್ಲ. ಒಂದರಲ್ಲಿ ಇನ್ನೊಂದು ಸಮನ್ವಯಗೊಳ್ಳಲೇ ಬೇಕಾಗಿದೆ. ಸಾಧಕನ ಸಂಸ್ಕಾರ ಮತ್ತು ಮನೋವೃತ್ತಿಗಳು ಯಾವ ರೀತಿಯಲ್ಲಿರುತ್ತವೆಯೋ ಅದಕ್ಕೆ ಅನುಸಾರವಾದ ಸರಳ ಮಾರ್ಗವನ್ನು ಅನುಸರಿಸಬಹುದು. ಶೈವಸಂಪ್ರದಾಯದಲ್ಲಿ ಅನುಸರಿಸಿರುವ ಮಾರ್ಗವು ಎಲ್ಲಾ ಮನೋವೃತ್ತಿ ಸಂಸ್ಕಾರಗಳಿಗೂ ಅನ್ವಯಿಸತಕ್ಕದ್ದಾಗಿರುತ್ತದೆ. ಅಧಿಕಾರ ಭೇದ ದೃಷ್ಟಿಯಿಂದ ಚರಮಫಲವನ್ನು ಪಡೆಯುವುದಕ್ಕೆ ಈ ಸಂಪ್ರದಾಯದಲ್ಲಿ ಉಪಾಯಗಳು ನಿರೂಪಿಸಿವೆ. ಅವನವನ ಪರಿಪಾಕಕ್ಕನುಸಾರವಾಗಿ ಉಪಾಯವು ಫಲಿಸುತ್ತದೆ. ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಇವನ ತಿಳಿವಳಿಕೆ ಮತ್ತು ಅನುಭವ ಇದ್ದಷ್ಟೂ ಸಾಧಕನಿಗೆ ಅದರ ವ್ಯತ್ಯಾಸ ಮತ್ತು ವಿಸ್ತಾರ ತಿಳಿಯುತ್ತದೆ. ಶಾಸ್ತ್ರ, ಉಪದೇಶ, ಸಂಸ್ಕಾರಗಳು ಕೇವಲ ದಾರಿಯನ್ನು ತೋರಿಸುವವೇ ಹೊರತು ಸ್ವತಃ ಫಲವನ್ನು ಕೊಡತಕ್ಕವುಗಳಲ್ಲ; ಸ್ವಪ್ರಯತ್ನದಿಂದಲೇ ಫಲವನ್ನು ಸಾಧಿಸಬೇಕು. ಮಹಾವಿಭೂತಿಗಳು ಇದಕ್ಕೆ ದೃಷ್ಟಾಂತ. ಶಾಸ್ತ್ರವು ಗುರುವಿನ ಮೂಲಕ ಶಿಷ್ಯನಲ್ಲಿ ಸಂಕ್ರಮಿಸಿ ಶಿಷ್ಯನ ಪರಿಶ್ರಮ ಮತ್ತು ಪ್ರಯತ್ನಗಳಿಂದ ಜ್ಞಾನೋದಯವನ್ನುಂಟುಮಾಡುತ್ತದೆ. ಶಾಸ್ತ್ರ ವಿಸ್ತಾರವಿಲ್ಲದೆ ಗುರುವು ಕೆಲವು ಮಾತುಗಳಲ್ಲಿಯೇ ಉಪದೇಶ ಮಾಡಬಹುದು. ಈ ಎರಡು ಕ್ರಮಗಳಲ್ಲಿಯೂ ಸ್ವಪ್ರಯತ್ನ, ಸ್ವಾತ್ಮವಿಮರ್ಶೆ ಇವು ಬೇಕೇಬೇಕು. ಸ್ವಾತ್ಮ ವಿಮರ್ಶೆಯನ್ನು ಪುರಸ್ಕರಿಸಿಕೊಂಡೇ ಈ ಸಂಪ್ರದಾಯದಲ್ಲಿ ಉಪಾಯಗಳು ನಿರೂಪಿಸಲ್ಪಟ್ಟಿವೆ.

ಎಲ್ಲಾ ಶೈವಸಂಪ್ರದಾಯದವರು ನಿರೂಪಿಸಿರುವ ಬಂಧಸ್ವಭಾವವು ಸ್ವಲ್ಪ ಹೆಚ್ಚುಕಡಿಮೆ ಒಂದೇ ಆಗಿದೆ. ಎಲ್ಲಾ ಜೀವಿಗಳೂ ಶಿವರೂಪಿಗಳೇ ಆಗಿದ್ದಾರೆ. ಶಿವತ್ವವು ಜೀವನಲ್ಲಿ ಸಿದ್ಧವಾಗಿದ್ದರೂ ಅವ್ಯಕ್ತವಾಗಿದೆ. ಇದಕ್ಕೆ ಕಾರಣ ಶಕ್ತಿಸಂಕೋಚ ರೂಪವಾದ ಮಲಗಳೇ ಆಗಿರುತ್ತವೆ. ಶಾಸ್ತ್ರಕಾರರು ಸಂಕೋಚದಿಂದ ವಿಕಾಸವನ್ನು ಪಡೆಯುವುದಕ್ಕೆ ಬಗೆಬಗೆಯ ಮಾರ್ಗಗಳನ್ನು ಸೂಚಿಸಿರುತ್ತಾರೆ. ಅವರವರ ಸಂಸ್ಕಾರಕ್ಕೆ

ಯಾವುದು ಹೊಂದುತ್ತದೆಯೋ ಆಯಾ ಸಾಧನಾಭ್ಯಾಸಗಳನ್ನು ಅವರು ಮಾಡಬೇಕೆನ್ನುವುದೇ ಅವರ ಮುಖ್ಯ ತಾತ್ಪರ್ಯ. ಮಾರ್ಗಗಳು ಬೇರೆ ಬೇರೆಯಾಗಿದ್ದರೂ ಗುರಿ ಒಂದೇ. ಆ ಪರಮ ಫಲವು ಶಕ್ತಿ ವಿಕಾಸ ರೂಪವಾದ ಪೂರ್ಣಾಹಂ ವಿಮರ್ಶಾತ್ಮಕವಾದದ್ದೆಂದು ಕಾಶ್ಮೀರಶೈವರು ಹೇಳುತ್ತಾರೆ. ಮಾಯಾಪಾಶ (ದುಃಖ) ನಿವೃತ್ತಿಯೇ ಪರಮಪುರುಷಾರ್ಥ. ಇದನ್ನೇ ಪರಶಿವ ಪ್ರಾಪ್ತಿಯೆಂದೂ ಲಿಂಗಾಂಗ ಸಾಮರಸ್ಯವೆಂದೂ ವೀರಶೈವರು ಹೇಳುತ್ತಾರೆ. ಅಣುವಾಗಿದ್ದ ಜೀವನು ನಿಜಸ್ವರೂಪಜ್ಞಾನವನ್ನು ಹೊಂದಿ ಶಿವತ್ವವನ್ನನುಭವಿಸಿ ಶಿವನಾಗಿಯೇ ತಿಳಿಯುವವನಾಗುತ್ತಾನೆಂದೂ ಶಿವನೊಡನೆ ಒಂದಾಗಿ ನೆಲಸಿದರೂ ಬೇರೆಯಾಗಿ ಶಿವತ್ವವನ್ನನುಭವಿಸುತ್ತಾನೆಂದೂ ತಮಿಳು ಶೈವ ಸಿದ್ಧಾಂತಿಗಳೆನ್ನುತ್ತಾರೆ.

ಕಾಶ್ಮೀರಶೈವರು ವ್ಯಕ್ತಿಯ ಪರಿಪಾಕಗಳಿಗನುಸಾರವಾಗಿ ಶಾಂಭವೋಪಾಯ ಶಾಕ್ತೋಪಾಯ ಆಣವೋಪಾಯಗಳನ್ನು ಸೂಚಿಸಿರುತ್ತಾರೆ ಮೊದಲನೆಯದಾದ **ಶಾಂಭವೋಪಾಯವು ಚಿತ್ತಪ್ರಳಯ**ರೂಪವಾಗಿದೆ. ಈ ಉಪಾಯನಿಷ್ಠನು ತನ್ನ ಇಚ್ಛಾಶಕ್ತಿಯಿಂದ ಅನುಸಂಧಾನ ಮಾಡುತ್ತಾ ಹೋದರೆ ೩೬ ತತ್ತ್ವ ರೂಪವಾಗಿರುವ ವಿಶ್ವವೆಲ್ಲಾ ತನ್ನಿಂದಲೇ ಹೊರಹೊಮ್ಮಿದೆ, ತನ್ನಲ್ಲಿಯೇ ಪ್ರತಿಫಲಿಸಿದೆ, ತನ್ನಿಂದ ಬೇರೆಯಲ್ಲ ಎಂಬ ವಿರಾಡ್ಭಾವನೆಯುಂಟಾಗುತ್ತದೆ. ಎರಡನೆಯದು **ಶಾಕ್ತೋಪಾಯ** ಮನಸ್ಸಿನಲ್ಲುಂಟಾಗುವ ಬಗೆಬಗೆಯಾದ ವಿಕಲ್ಪಗಳೆಲ್ಲಾ ಭೇದಜ್ಞಾನದಿಂದುಂಟಾದುವುಗಳು. ದೇಶ ಕಾಲ ಆಕಾರಗೊಳಪಟ್ಟಿರುವುದೆಲ್ಲಾ ವಿಕಲ್ಪವೆಂದೂ ಅದಿಲ್ಲದ ಸ್ಥಿತಿಯು ನಿರ್ವಿಕಲ್ಪವೆಂದೂ ಹೇಳುತ್ತಾರೆ. ಈ ವಿಕಲ್ಪ ಪ್ರವಾಹದಿಂದಲೇ ಶಕ್ತಿಸಂಕೋಚ-ಬದ್ಧಾವಸ್ಥೆ. ಸಶಕ್ತ ಸದಾಗಮ ಸದ್ಗುರೂಪದೇಶದಿಂದ ವಿಕಲ್ಪಗಳನ್ನು ಸಂಸ್ಕರಿಸಬೇಕು. ಪ್ರತ್ಯಾಹಾರಧಾರಣ ಧ್ಯಾನಗಳಿಂದ ಜ್ಯೋತಿಸ್ವರೂಪವನ್ನು ವಿಮರ್ಶಿಸಬೇಕು. ಆಗ ಪೂರ್ಣಾಹಂಭಾವವುಂಟಾಗುತ್ತದೆ. ಹಾಗೆಯೇ ಅಭೇದ ದೃಷ್ಟಿಯಿಂದ ನಿರ್ವಿಕಲ್ಪ ಭೂಮಿಯನ್ನು ಸಾಧಿಸಬೇಕು. ಈ ರೀತಿಯ **ಚಿತ್ತಸಂಸ್ಕಾರವೇ** ಶಾಕ್ತೋಪಾಯ. ಇನ್ನು ಮೂರನೆಯದು **ಆಣವೋಪಾಯ.** ಯಾವ ಬುದ್ಧಿದೇಹ ಪ್ರಾಣ ಮೊದಲಾದ ಕರಣಗಳಿಂದ ಜೀವಾತ್ಮನು ಬದ್ಧನಾಗಿದ್ದಾನೋ ಆ ಕರಣಗಳನ್ನೇ ಉಪಯೋಗಿಸಿಕೊಂಡು **ಚಿತ್ತವಿಶ್ರಾಂತಿ**ಯನ್ನು ಸಾಧಿಸಬೇಕು. ಸರ್ವತತ್ತ್ವಾಂಶಭೂತವಾದ ಪರತತ್ತ್ವವನ್ನು ಹೃದಯದಲ್ಲಿ ಧ್ಯಾನ ಮಾಡುತ್ತಾ ಪರಮಾತ್ಮನಲ್ಲಿ ಲೀನವಾಗುವುದೇ ಈ ಸಾಧನದ ಫಲ. ಇದು ಅಷ್ಟಾಂಗ ಯೋಗಸಾಧನೆಗಳಿಗಿಂತ ಬೇರೆಯಾದುದಲ್ಲ. ಈ ರೀತಿಯಾದ ಚಿತ್ತವಿಶ್ರಾಂತಿಯನ್ನುಂಟು ಮಾಡುವ ಸಾಧನೆಗಳು ಕಾಶ್ಮೀರಶೈವಮತದಲ್ಲಿ ಹೇರಳವಾಗಿವೆ. ಸುಖದುಃಖಗಳು ಸಾಮಾನ್ಯವಾಗಿ ಬಾಹ್ಯಸಾಧನಗಳಿಂದಲೇ ಉಂಟಾಗುತ್ತಿರುತ್ತವೆ. ಕೆಲವು ಕಾಲ ಮಾತ್ರ ಅನುಭವದಲ್ಲಿರವವುಗಳಾಗಿರುವುದರಿಂದ ಮಾನವನು ಅಂತರಾನುಭವವೆಷ್ಟು ಬಾಹ್ಯಾನುಭವವೆಷ್ಟು ಎಂಬುದನ್ನು ಮನಗಾಣಬೇಕಾಗಿದೆ. ಇವುಗಳ ವ್ಯತ್ಯಾಸವನ್ನು ಮನನ ಮಾಡಿದಷ್ಟೂ ತಪ್ಪು ತಿಳಿವಳಿಕೆಯಿಂದ ದುಃಖವನ್ನು ತತ್ತ್ವಜ್ಞಾನದಿಂದ

ಸುಖವನ್ನನುಭವಿಸುತ್ತಾನೆಂಬುದು ಅರಿವಾಗುತ್ತದೆ. ಹಾಗೆಯೇ ಜ್ಞಾನಿಗಳಿಂದ ಉಪದೇಶಿಸಲ್ಪಟ್ಟಿರುವ ಸಾಧನೆಗಳು, ಸಾಧನೆಗಳಿಂದುಂಟಾಗುವ ಸಿದ್ಧಿಗಳು ತಕ್ಕಮಟ್ಟಿಗಾದರೂ ತಿಳಿದಿರಬೇಕು. ಪ್ರತಿಯೊಬ್ಬ ವ್ಯಕ್ತಿಯೂ ಬೇರೆ ಬೇರೆಯಾದ ಸಂಸ್ಕಾರಗಳನ್ನೂ ಅವಕಾಶಗಳನ್ನೂ ಅಭ್ಯಾಸವನ್ನೂ ಸಂಪ್ರದಾಯವನ್ನೂ ಪಡೆದಿರುವುದರಿಂದ ಇವನು ತಿಳಿದ ಶಾಸ್ತ್ರ ಮತ್ತು ಸಾಧನೆಗಳಲ್ಲಿ ಎಷ್ಟುಮಾತ್ರ ಯಾವ ರೀತಿಯಲ್ಲಿ ತಾನು ಆಚರಿಸಬೇಕೆಂದು ನಿರ್ಣಯಿಸುವುದು ವ್ಯಕ್ತಿಗೂ ವ್ಯಕ್ತಿಯ ಮಾರ್ಗದರ್ಶಕರಿಗೂ ಸೇರಿರುವ ಗುರುತರವಾದ ವಿಷಯವಾಗಿದೆ.

ತತ್ತ್ವಜಿಜ್ಞಾಸುವು ತನ್ನ ಅನುಭವವು ತಿಳಿಯಾಗುವವರೆಗೂ ಶಾಸ್ತ್ರವಿಚಾರ ಮಾಡುತ್ತಾನೆ. ಉಪದೇಶಗಳನ್ನು ಕೇಳುತ್ತಾನೆ. ಸಾಧನಾಕ್ರಮಗಳನ್ನು ಪರಿಶೀಲಿಸುತ್ತಾನೆ, ಆಚರಿಸುತ್ತಾನೆ. ಅನುಭವವು ಸ್ಥಿರವಾದ ನಂತರ ಅವನಿಗೆ ಶಾಸ್ತ್ರವಿಚಾರದ ಗೊಂದಲವಿಲ್ಲ. ಅನುಭವಾನಂದವೇ ಆನಂದವಾಗಿರುತ್ತದೆ. ಇದು **ವ್ಯಕ್ತಿಸಂಸ್ಕರಣ.** ಇದು ಬಹಳ ಕಾಲ ನಿಯಮಾನುಷ್ಠಾನದಿಂದ ಉಂಟಾಗುತ್ತದೆ. ಜೀವಿತವಾಗಿರುವ ವ್ಯಕ್ತಿಯು ಒಂದು ತತ್ತ್ವದ ಮೂರ್ತಿಯಲ್ಲ. ಇವನಿಗೆ ವ್ಯವಹಾರದಲ್ಲಿ ಪ್ರಧಾನವಾಗಿರುವ ಪಾಂಚಭೌತಿಕವಾಗಿರುವ ಶರೀರವಿದೆ. ವಿಷಯಗಳನ್ನು ತಿಳಿಯಪಡಿಸುವ ಇಂದ್ರಿಯಗಳಿವೆ. ಸುಖದುಃಖಗಳಿಗೆ ಕಾರಣವಾಗಿರುವ ಮನಸ್ಸಿದೆ. ಅನುಭವೈಕಗೋಚರವಾಗಿ ಸ್ವಯಂಪ್ರಕಾಶವಾಗಿರುವ ಆತ್ಮಸಿದ್ಧಾನೆ. ಸಂಸ್ಕರಣವು ಶರೀರ ಇಂದ್ರಿಯಗಳು ಮನಸ್ಸು ಈ ಮೂರು ವಿಭಾಗಗಳಿಗೆ ಪ್ರತ್ಯೇಕವಾಗಿಯೂ ಸಾಮೂಹಿಕವಾಗಿಯೂ ವ್ಯಕ್ತಿಯ ಸಂಸ್ಕಾರವನ್ನನುಭವಿಸಿ ನಡೆಯಬೇಕಾಗಿದೆ. ಶಾರೀರಿಕವಾದ ಸಾಧನಗಳಿಂದ ಶರೀರವನ್ನೂ ಪ್ರತ್ಯಾಹಾರವೇ ಮೊದಲಾದ ಐಂದ್ರಿಯಿಕ ಸಾಧನೆಗಳಿಂದ ವಿಕಲ್ಪಗಳಿಗೆ ಕಾರಣವಾಗಿರುವ ವಿಷಯ ಜ್ಞಾನಗಳನ್ನು ನಿಯಮನಮಾಡಿ ಮಾನಸಿಕ ಸಾಧನೆಗಳಿಂದ ಉದ್ವೇಗಗಳನ್ನು ಸುಖದುಃಖಗಳನ್ನು ಕಳೆದು ಆನಂದರೂಪವಾದ ಸ್ವಾತ್ಮಾನುಭವವನ್ನು ಪಡೆಯಲ್ಲು ಸಮರ್ಥನಾಗಬೇಕು. ವ್ಯಕ್ತಿಯ ಸಂಸ್ಕರಣದಲ್ಲಿ ಇದು ಮುಖ್ಯವಾದ **ಘಟ್ಟ.** ವ್ಯಕ್ತಿಸಂಸ್ಕರಣವು ಪೂರ್ತಿಯಾಗಬೇಕಾದರೆ ಶಾಸ್ತ್ರಜ್ಞಾನ ಸಾಧನಾಭ್ಯಾಸಗಳು ಮನುಷ್ಯ ಕಲ್ಪಿತ ನಿಯಮಪರಿಪಾಲನೆ ಸತ್ಸಂಪ್ರದಾಯಗಳನ್ನು ಬಿಡದೆ ಕಾಲಕ್ರಮದಲ್ಲಿ ಬಂದಿರುವ ರೀತಿನೀತಿಗಳನ್ನು ಹೊಂದಿಸಿಕೊಂಡು ಇಹಲೋಕದ ವ್ಯಾಪಾರಕ್ಕೂ, ಪರಲೋಕದ ಸಾಧನೆಗೂ ವಿರೋಧವಿಲ್ಲದೆ ಅನುಷ್ಠಾನಕ್ಕೆ ತರಬೇಕು.

ದಕ್ಷಿಣ ದೇಶದ **ಶೈವಸಿದ್ಧಾಂತಗಳಲ್ಲಿ** ಚರ್ಯಾಮಾರ್ಗ ಕ್ರಿಯಾಮಾರ್ಗ ಯೋಗಮಾರ್ಗ ಜ್ಞಾನಮಾರ್ಗಗಳೆಂಬ ನಾಲ್ಕು ಅಂತಸ್ತಿನ ಸಾಧನಗಳಿವೆ. ಚರ್ಯಾಮಾರ್ಗ ಅಥವಾ ದಾಸಮಾರ್ಗದಲ್ಲಿ ಸಾಧಕನು ದೇವಸ್ಥಾನಗಳಲ್ಲಿ ಶಿವಾರ್ಚನೆಗೆ ಸಲಕರಣೆಗಳನ್ನೊದಗಿಸಿ ಭಸ್ಮಧಾರಣ, ರುದ್ರಾಕ್ಷಧಾರಣ, ಶಿವಪೂಜೆ, ಶಿವಸ್ತೋತ್ರ, ಶಿವಭಕ್ತರ ಸೇವೆ ಮಾಡಿಕೊಂಡು ಶಿವಪಂಚಾಕ್ಷರಿ ಮಂತ್ರವನ್ನುಚ್ಚರಿಸುತ್ತಾ ಸಿದ್ಧಿಯನ್ನು

ಪಡೆದು ಮೋಕ್ಷದಲ್ಲಿ **ಸಾಲೋಕ್ಯ** ಪದವಿಯನ್ನು ಹೊಂದುವನು. ಕ್ರಿಯಾಮಾರ್ಗ ಅಥವಾ ಸತ್ಪುತ್ರಮಾರ್ಗದಲ್ಲಿ ಹೇಳಿರುವ ಶಿವಪೂಜಾ, ಅಗ್ನಿಕಾರ್ಯ, ಶಿವಮಂತ್ರೋಚ್ಚಾರಣೆ ಮೊದಲಾದ ಕರ್ಮಗಳನ್ನು ಮಾಡುತ್ತಾ ಧ್ಯಾನಾಸಕ್ತನಾಗಿ **ಶಿವಸಾಮೀಪ್ಯ**ವನ್ನು ಹೊಂದುವನು. ಮೂರನೆಯದಾದ ಯೋಗಮಾರ್ಗದಲ್ಲಿ (ಸಖ್ಯಮಾರ್ಗ) ಪ್ರಾಣಾಯಾಮದ ಮೂಲಕ ದೇಹದಲ್ಲಿರುವ ಷಟ್ಚಕ್ರಗಳಲ್ಲಿ ವಾಯುವನ್ನು ನಿಲ್ಲಿಸಿ ನಿಷ್ಕಲಮೂರ್ತಿಯನ್ನು ಆರಾಧಿಸುವುದರ ಮೂಲಕ ಶಿವಸ್ವರೂಪವಾದ **ಸ್ವರೂಪ ಮುಕ್ತಿ**ಯನ್ನು ಪಡೆಯುವನು. ಜ್ಞಾನಮಾರ್ಗ ಅಥವಾ ಸನ್ಮಾರ್ಗವನ್ನನುಸರಿಸಿ ಧ್ಯಾನ ಪೂರ್ವಕ ಸಮಾಧಿಸ್ಥಿತಿಯನ್ನು ಹೊಂದುವನು. ಭಸ್ಮ ರುದ್ರಾಕ್ಷಧಾರಣದಿಂದ ಶಿವಲಿಂಗವನ್ನು ಪೂಜಿಸಿ ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಾ **ಶಿವೋಹಂ ಭಾವವನ್ನು** ಪಡೆಯುವುದೇ ಇವರಲ್ಲಿ ಸಾಮಾನ್ಯವಾದ ಸಾಧನಮಾರ್ಗ. ಶಿವೋಹಂ ಭಾವವನ್ನು ಪಡೆದರೆ ಪಶುಜ್ಞಾನ ಹೋಗಿ ಪತಿಜ್ಞಾನ ಪ್ರಾಪ್ತಿಯಾಗುತ್ತದೆ.

ವೀರಶೈವ-ಶಕ್ತಿವಿಶಿಷ್ಟಾದ್ವೈತ :— ಎಲ್ಲಾ ಶೈವಸಂಪ್ರದಾಯದಂತೆ ವೀರಶೈವರಲ್ಲಿ ಶಿವದೀಕ್ಷೆಯಿಂದ ಲಿಂಗಪೂಜೆ ಪ್ರಾರಂಭವಾಗುತ್ತದೆ. ಇವರಲ್ಲಿ ಶರೀರದ ಮೇಲೆ ಲಿಂಗವನ್ನು ಧರಿಸುವುದೇ ಶಿವದೀಕ್ಷೆಯ ಬಾಹ್ಯಚಿಹ್ನೆ. ಶಿವದೀಕ್ಷೆಯಾದ ಮೇಲೆ ಬ್ರಹ್ಮ ವಿಚಾರಕ್ಕೂ ಲಿಂಗಪೂಜೆಗೂ ಅರ್ಹನಾಗುತ್ತಾನೆ. ಇಲ್ಲಿ ಲಿಂಗವೆಂದರೆ ಪರಬ್ರಹ್ಮನಾದ ಶಿವನೇ. ಆ ಶಿವನ ಪೂಜೆ—'ಅಹಂಗ್ರಹೋಪಾಸನಾ' ಎಂಬುದು. ಅಷ್ಟಾವರಣ ಪಂಚಾಚಾರ ಷಟ್ಸ್ಥಲ ಮಾರ್ಗಗಳ ಅನುಷ್ಠಾನದಿಂದ ಶಿವತ್ವವನ್ನು ಹೊಂದಬೇಕೆಂಬುದೇ ಈ ಮತದ ಗುರಿ. ಈ ಮತದಲ್ಲಿ ಭಕ್ತಿಗೆ ಪ್ರಾಮುಖ್ಯ ಹೆಚ್ಚು. ಶಿವನ ಸ್ವಪ್ರಕಾಶರೂಪವಾದ ಶಕ್ತಿಯೇ ಅಂಗಗತವಾಗಿ ಭಕ್ತಿ ಎನ್ನಿಸಿಕೊಳ್ಳುವುದು. ಈ ಭಕ್ತಿಯು ಶ್ರದ್ಧಾ ನಿಷ್ಠಾ ಅವಧಾನ ಅನುಭವ ಆನಂದ ಸಮರಸ ಎಂದು ಆರು ವಿಧವಾಗಿದೆ. ಈ ಭಕ್ತಿಮಾರ್ಗವನ್ನು ಅನುಸರಿಸುತ್ತಾ ಹೋದರೆ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಆಧ್ಯಾತ್ಮಿಕ ಸ್ಥಾನಗಳನ್ನು ಹೊಂದುತ್ತಾನೆ. ಈ ಸಂಪ್ರದಾಯದಲ್ಲಿ ಅನುಸರಿಸುವ ಭಕ್ತಿಯೋಗದಲ್ಲಿ ಜ್ಞಾನಕ್ರಿಯೆಗಳೆರಡೂ ಸಮಪ್ರಧಾನವಾಗಿವೆ. ಭಕ್ತನು ಮಾಡುವ ಜ್ಞಾನಕ್ರಿಯಾತ್ಮಕ ಕರ್ಮಗಳೆಲ್ಲವನ್ನೂ ಲಿಂಗಭಾವದಿಂದ ಮಾಡುವುದೇ ಈ ಮತದ ಸಾಧನಗಳಲ್ಲಿ ಅಡಗಿರುವ ತತ್ತ್ವ. ಜೀವಾತ್ಮನು ಲಿಂಗ ಸ್ವರೂಪವನ್ನು (ಮೋಕ್ಷ) ಪಡೆಯುವುದಕ್ಕಾಗಿ ಯೋಗಾಂಗಿಯಾಗಿ ಶಿವನಲ್ಲಿ ಸಾಮರಸ್ಯ ಸುಖವನ್ನು ಹೊಂದಲು ಪ್ರಯತ್ನಪಡುವನು. ಹಾಗೆಯೇ ಭೋಗಾಂಗಿಯಾಗಿ ತನ್ನ ಭೋಗವೆಲ್ಲವನ್ನೂ ಶಿವನಿಗರ್ಪಿಸಿ ಶಿವಪ್ರಸಾದರೂಪದಿಂದ ಸ್ವೀಕರಿಸುವನು. ತ್ಯಾಗಾಂಗಿಯಾಗಿ ಶಿವದೀಕ್ಷೆ, ಶಿವಪೂಜೆ, ಶಿವಧ್ಯಾನದ ಮೂಲಕ ಸಂಸಾರಭ್ರಾಂತಿಯನ್ನು ತ್ಯಾಗ ಮಾಡುವನು. ಈ ರೀತಿಯಾದ ಪ್ರಾಜ್ಞ, ತೈಜಸ, ವಿಶ್ವರೆಂಬ ಹಂತಗಳನ್ನು ಹತ್ತಿ ಶಿವನೇ ಆಗುವನು. ಈ ಸಂಪ್ರದಾಯದಲ್ಲಿ ತರ್ಕಕ್ಕಿಂತ ಅನುಭವಕ್ಕೆ ಹೆಚ್ಚಿನ ಪ್ರಾಮುಖ್ಯ, ಮನ್ನಣೆ. ತರ್ಕದ ಸ್ಥಳ ಶಿರಸ್ಸು, ಅನುಭವದ ಸ್ಥಳ ಹೃದಯ, ಇವೆರಡೂ ಇಲ್ಲಿ

ಸಮನ್ವಯವಾಗಿ ಆಚರಣೆಯಲ್ಲಿರುವುದರಿಂದ ಇದಕ್ಕೆ ಸಮನ್ವಯಯೋಗ ಅಥವಾ ಶಿವ ಯೋಗವೆನ್ನುವರು.

ಕಾಶ್ಮೀರ ಶಿವಾದ್ವೈತಸಿದ್ಧಾಂತದಲ್ಲಿ ಶಿವನಿಗಿಂತ ಅತಿರಿಕ್ತವಾದದ್ದು ಯಾವ ತತ್ತ್ವವೂ ಇಲ್ಲ. ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳಿಂದ ಪರಿಪೂರ್ಣ ನಾಗಿರುವ ಶಿವನು ತನ್ನ ಲೀಲೆಯಿಂದ ವಿಶ್ವವನ್ನು ಸೃಷ್ಟಿಮಾಡುವಾಗ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳು ಸಂಕೋಚವನ್ನು ಪಡೆದು ಆಣವ, ಮಾಯೀಯ, ಕಾರ್ಮ–ಎಂಬ ಮೂರು ಮಲಗಳ ರೂಪವನ್ನು ಪಡೆಯುತ್ತವೆ. ಮರಳಿ ಶಕ್ತಿವಿಕಾಸವಾದರೆ ಸ್ವಸ್ವರೂಪಾ ವಿರ್ಭಾವವುಂಟಾಗುತ್ತದೆ. ಈ ಸ್ವರೂಪ ಪ್ರಾಪ್ತಿಗೋಸ್ಕರ ಯಾವ ಸಾಧನವನ್ನೇ ಅಭ್ಯಾಸ ಮಾಡಲಿ, ಯಾವ ಉಪಾಯವನ್ನೇ ಅನುಷ್ಠಾನಮಾಡಲಿ, ಅದು ಕೇವಲ ಪ್ರತಿಬಂಧಕವನ್ನು ನಿವೃತ್ತಿಮಾಡುವಂಥದ್ದಾಗಿರುತ್ತದೆ. ಏಕೆಂದರೆ ಎಲ್ಲಾ ಪ್ರಮಾತೃಗಳು (ಜೀವರುಗಳು) ಶಿವರೂಪಿಗಳೇ ಆಗಿರುತ್ತಾರೆ. ಅವರುಗಳಿಗೆ ಸಂಕೋಚನಿವೃತ್ತಿ ಮಾತ್ರ ಆಗಬೇಕಾಗಿರುತ್ತದೆ. ಶಿವತ್ವವು ಜೀವನಲ್ಲಿ ಸಿದ್ಧವಾಗಿದ್ದರೂ ಅವ್ಯಕ್ತವಾಗಿದೆ. ಶಾಸ್ತ್ರ ಕಾರರು ಸಂಕೋಚದಿಂದ ವಿಕಾಸವನ್ನು ಪಡೆಯುವಂತಹ ಈ ಪರಮಫಲಕ್ಕೆ ಬಗೆ ಬಗೆಯ ಮಾರ್ಗಗಳನ್ನು ಸೂಚಿಸಿರುತ್ತಾರೆ. ಅವರವರ ಸಂಸ್ಕಾರಕ್ಕೆ ಯಾವುದು ಹೊಂದುತ್ತದೆಯೊ ಆಯಾ ಸಾಧನಾಭ್ಯಾಸವನ್ನು ಅವರು ಮಾಡಬೇಕೆನ್ನುವುದೇ ಅವರ ಮುಖ್ಯತಾತ್ಪರ್ಯ. ಮಾರ್ಗಗಳು ಬೇರೆ ಬೇರೆಯಾಗಿದ್ದರೂ ಗುರಿ ಒಂದೇ ಆಗಿರುತ್ತದೆ. ಆ ಪರಮಫಲವು ಶಕ್ತಿ ವಿಕಾಸರೂಪವಾದ "ಪೂರ್ಣಾಹಂ ವಿಮರ್ಶಾತ್ಮಕ" ರೂಪ ವಾಗಿರುತ್ತದೆ. ಈ ತತ್ತ್ವದೃಷ್ಟಿಯಿಂದ ಸಾಧಕನು ಅನುಸರಿಸಬೇಕಾದ ಉಪಾಯಗಳನ್ನು ನಾಲ್ಕುವಿಧವಾಗಿ ವಿಂಗಡಿಸಿರುತ್ತಾರೆ.

'ಉಪಾಯ' ಎಂದರೆ ಒಂದು ಕೆಲಸವನ್ನು ಸಿದ್ಧಮಾಡಿಕೊಡುವ ಸಾಧನ ಎಂದು ಅರ್ಥವಾಗುತ್ತದೆ. ಲೌಕಿಕ ದೃಷ್ಟಾಂತದಿಂದ ಪ್ರಕೃತದಲ್ಲಿ ನಿರೂಪಿಸಲಿರುವ 'ಉಪಾಯ'ದ ಅರ್ಥವು ಸ್ಪಷ್ಟವಾಗುವುದು ಕಷ್ಟ. ನಾವು ಬೊಂಬಾಯಿಗೆ ಹೋಗ ಬೇಕು. ಇದು ಕಾರ್ಯ. ಮನೆಯಿಂದ ರೈಲ್ವೇನಿಲ್ದಾಣದವರೆಗೂ ಒಂದು ಗಾಡಿಯಲ್ಲಿ ಹೋಗುತ್ತೇವೆ. ಗಾಡಿಯು ಉಪಾಯವಾಗಿತ್ತು. ಆದರೆ ಆ ಗಾಡಿಯು ಬೊಂಬಾಯನ್ನು ಸೇರಿಸಲಾರದು. ಅದು ಪೂರ್ಣೋಪಾಯವಲ್ಲ. ಅವಾಂತರೋಪಾಯ. ರೈಲ್‌ಗಾಡಿ ಯಲ್ಲಿ ಬೊಂಬಾಯಿ ನಿಲ್ದಾಣವನ್ನು ತಲುಪಿದೆವು. ಅದುವರೆಗೂ ರೈಲ್‌ಗಾಡಿಯು ಉಪಾಯವಾಗಿತ್ತು. ಬೊಂಬಾಯಿ ತಲುಪಿದ ನಂತರ ರೈಲು ನಮಗೆ ಬೇಕಾಗಿಲ್ಲ. 'ಉಪಾಯ' ಅಂದರೆ ಸಾಧನಾ. 'ಉಪೇಯ' ಎಂದರೆ ಸಾಧ್ಯ. ಲೌಕಿಕ ದೃಷ್ಟಾಂತ ಗಳಲ್ಲಿ ಉಪೇಯ ಪ್ರಾಪ್ತಿಯಾದರೆ (ಕಾರ್ಯ ಸಿದ್ಧಿಯಾದರೆ) ಉಪಾಯಗಳ ಆವಶ್ಯಕತೆ ಇಲ್ಲ. ಪ್ರಕೃತದಲ್ಲಿ ಇಲ್ಲಿ ನಿರೂಪಿಸುವ ಉಪಾಯಗಳನ್ನು ಸ್ವಲ್ಪವ್ಯತ್ಯಾಸದಿಂದ ಅನುಸಂಧಾನ ಮಾಡಬೇಕು. ಇಲ್ಲಿಯ ಉಪಾಯಗಳಿಂದ ಪಡೆಯಲಿರುವ ಉಪೇಯವು ನಿತ್ಯಪ್ರಾಪ್ತವಾಗಿದೆ. ಉಪಾಯವು ನಿಮಿತ್ತಮಾತ್ರ. ವ್ಯಕ್ತಿಯ ಸಂಸ್ಕಾರ, ಕರ್ಮಪರಿ

ಪಾಕಗಳಿಗನುಸಾರವಾಗಿ ಉಪಾಯವು ಬದಲಾಯಿಸುತ್ತದೆ. ಕೆಲವಂಶಗಳಲ್ಲಿ ಉಪಾಯವೂ ಉಪೇಯವೂ ಒಂದೇ ಆಗಿರುವುದುಂಟು. ಇನ್ನೊಂದು ಕ್ರಮದಲ್ಲಿ ಉಪಾಯ ಉಪೇಯಗಳು ಭಿನ್ನಾಭಿನ್ನಗಳಾಗಿರುತ್ತವೆ. ಮತ್ತೊಂದು ಕ್ರಮದಲ್ಲಿ ಉಪಾಯ ಉಪೇಯಗಳು ಭಿನ್ನವಾಗಿಯೇ ಇರುತ್ತವೆ. ಅಭಿನವಗುಪ್ತಾಚಾರ್ಯರು ಕಾಶ್ಮೀರ ಶೈವಸಂಪ್ರದಾಯದಲ್ಲಿ ನಿರೂಪಿಸಿರುವ ಶಾಂಭವೋಪಾಯಕ್ಕೆ ಅಭೇದೋಪಾಯವೆಂದೂ, ಶಾಕ್ತೋಪಾಯಕ್ಕೆ ಭೇದಾಭೇದಾತ್ಮಕವಾಗಿರುವ ಉಪಾಯವೆಂದೂ, ಆಣವೋಪಾಯಕ್ಕೆ ಭೇದೋಪಾಯವೆಂದೂ ವಿವರಣೆಯನ್ನಿತ್ತಿರುವರು.

ಅಭೇದೋಪಾಯಮತ್ರೋಕ್ತಂ ಶಾಂಭವಂ ಶಾಕ್ತಮುಚ್ಯತೇ ।
ಭೇದಾಭೇದಾತ್ಮಕೋಪಾಯಂ ಭೇದೋಪಾಯಂ ತದಾಣವಂ ।

(ತಂತ್ರಾಲೋಕ. ಆಹ್ನಿಕ ೧, ಪುಟ ೩೪೫)

ಜೀವನು ಬದ್ಧನಾಗಿರುವುದು ದೇಹ, ಪ್ರಾಣ, ಇಂದ್ರಿಯಗಳು, ಪುರ್ಯಷ್ಟಕ ಇವುಗಳ ಸಂಬಂಧದಿಂದ. ಇವುಗಳಲ್ಲಿ ಎಲ್ಲಾ ಪೂರ್ವಾಪರ ಜ್ಞಾನಗಳಿಗೂ ಕಾರಣವಾಗಿರುವುದು ಚಿತ್ತು. ಇದರ ಪ್ರಭಾವವು ಬದಲಾವಣೆಯಾಗುವವರೆಗೂ ಸ್ವರೂಪಕ್ಕವಕಾಶವಿಲ್ಲ. ಸಾಂಪ್ರದಾಯಿಕವಾಗಿ ಶಾಂಭವೋಪಾಯವು **ಚಿತ್ತಪ್ರಳಯ**ರೂಪವಾಗಿ ನಿರ್ವಿಕಲ್ಪಕ್ಕಾಶ್ರಯವಾಗಿಯೂ, ಶಾಕ್ತೋಪಾಯವು **ಚಿತ್ತಸಂಬೋಧ**ಲಕ್ಷಣವಾಗಿ ವಿಕಲ್ಪ ಸಂಸ್ಕಾರದಿಂದ ಅಭಿನ್ನವಾದ ವಿಕಲ್ಪಗಳಿಗಾಧಾರ ಭೂಮಿಯಾಗಿಯೂ ಆಣವೋಪಾಯವು **ಚಿತ್ತವಿಶ್ರಾಂತ** ರೂಪವಾಗಿಯೂ ಇರುತ್ತದೆ.

ಅನುಪಾಯ

ಈ ಮೂರು ಉಪಾಯಗಳಲ್ಲದೆ ಪರಿಪಾಕವುಳ್ಳ ತೀವ್ರಾಧಿಕಾರಿಗೆ ಅನುಪಾಯ ಎಂಬ ಒಂದು ಉಪಾಯವುಂಟು. ಅನುಪಾಯವು ಬಹಳ ಗಹನವಾದದ್ದು. ಈ ಉಪಾಯದಲ್ಲಿ ಸಾಧಕನ ಯೋಗ್ಯತೆಯು ಪ್ರಧಾನವಾಗಿದೆಯೇ ಹೊರತು ಮಿಕ್ಕ ಯಾವ ಕ್ರಿಯಾಕಲಾಪಗಳೂ ಪ್ರಾಮುಖ್ಯವಲ್ಲ. ಒಂದುಸಲ ಗುರೂಪದೇಶದಿಂದಾಗಲಿ ಅಥವಾ ಬೇರೆ ಪ್ರಮಾಣದಿಂದಾಗಲಿ ಅಥವಾ ಶಾಸ್ತ್ರಜ್ಞಾನದಿಂದಾಗಲಿ ನಿಶ್ಚಲಚಿತ್ತದಿಂದ ಶಿವತತ್ತ್ವವು ತಿಳಿದು ಅದರಲ್ಲಿ ದೃಢವಾದ ವಿಶ್ವಾಸವೇರ್ಪಟ್ಟರೆ ಯಾವ ಕ್ರಿಯಾಕಲಾಪವೂ ಬೇಕಿಲ್ಲ. ಚಿನ್ನವನ್ನು ನಾವು ಚಿನ್ನ ಅಂತ ತಿಳಿದರೆ, ಅದನ್ನು ಪುನಃ ಚಿನ್ನ ಅಂತ ತಿಳಿಯುವುದಕ್ಕೆ ಕಷ್ಟಪಡಬೇಕಾಗಿಲ್ಲ. ನಾವು ತಂದೆತಾಯಿಗಳನ್ನು ಗುರುತಿಸುವುದಕ್ಕೆ ಶಾಸ್ತ್ರಬೇಕಿಲ್ಲ. ಆಭರಣಗಳು ಚಿನ್ನದಿಂದ ಮಾಡಲ್ಪಟ್ಟಿವೆಯೆಂದು ತಿಳಿದರೆ, ಯಾವ ಕರಣಗಳಿಂದ ಮಾಡಲ್ಪಟ್ಟಿವೆಯೆಂದು ತಿಳಿಯಬೇಕಾದ ಅವಶ್ಯಕವಿಲ್ಲ.

ಏಕವಾರಂ ಪ್ರಮಾಣೇನ ಶಾಸ್ತ್ರಾದ್ವಾ ಗುರುವಾಕ್ಯತಃ ।
ಜ್ಞಾತೇ ಶಿವತ್ವೇ ಸರ್ವಸ್ಥೇ ಪ್ರತಿಪತ್ತ್ಯಾ ದೃಢಾತ್ಮನಾ ॥

ಕರಣೇನ ನಾಸ್ತಿಕೃತ್ಯಂ ಕ್ವಾಪಿ ಭಾವನಯಾಪಿವ ।
ಸಕೃದ್‌ಜ್ಞಾತೆ ಸುವರ್ಣೆ ಕಿಂ ಭಾವನಾ ಕರಣಾದಿನಾ ।
ಸರ್ವದಾ ಪಿತೃಮಾತ್ರಾದಿ ತುಲ್ಯಥಾರ್ಢ್ಯೇನ ಸತ್ಯತಾ ॥
(ಶಿವದೃಷ್ಟಿ. ಅಹ್ನಿಕ ೭ ಶ್ಲೋಕ ೬)

ಶಾಂಭವೋಪಾಯ

ಶಾಂಭವೋಪಾಯವೆಂದರೆ ಚಿತ್ಸ್ವರೂಪದಲ್ಲಿ ಅಭಿನ್ನವಾಗಿರುವ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳಲ್ಲಿ ಇಚ್ಛಾಶಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಶಕ್ತಿವಿಕಾಸವನ್ನು ಪಡೆಯುವುದು. ಬದ್ಧಪ್ರಮಾತೃ (ಜೀವಾತ್ಮ)ವಿಗೆ ಅಂಟಿಕೊಂಡಿರುವ ದೇಹ ಪ್ರಾಣ ಪುರ್ಯಷ್ಟಕಗಳಿಂದ ಈ ಉಪಾಯಕ್ಕೆ ಪ್ರಯೋಜನವಿಲ್ಲ. ಪ್ರಮಾತೃವಾಗಿರುವ ಐದು ಶಕ್ತಿಗಳಲ್ಲಿ ಚಿತ್ ಮತ್ತು ಆನಂದ ಇವೆರಡು ಸ್ವರೂಪ ನಿರೂಪಕ ಧರ್ಮಗಳು. ಅಂದರೆ ಸಂಕೋಚ ವಿಕಾಸಗಳಿಗೆ ಹೆಚ್ಚು ಆಸ್ಪದವಿಲ್ಲವೆಂದರ್ಥ. ಇಚ್ಛಾಜ್ಞಾನ ಕ್ರಿಯಾಶಕ್ತಿಗಳು ಸ್ವರೂಪನಿರೂಪಕ ಧರ್ಮಗಳು :—ಅಂದರೆ ಮೂಲರೂಪದಲ್ಲಿ ವ್ಯತ್ಯಾಸವಿಲ್ಲದಿದ್ದರೂ ನಿರೂಪಿತ ಸ್ವರೂಪ ಧರ್ಮಗಳಾಗಿರುತ್ತವೆ. ಆದರೆ ಇವನ ಅವಸ್ಥೆಗನುಸಾರವಾಗಿ ಸಂಕೋಚ ವಿಕಾಸಗಳನ್ನು ಪಡೆಯುವವುಗಳಾಗಿರುತ್ತವೆ. ಶಕ್ತಿಸಂಕೋಚವೇ ಮಲಗಳು. ವಿಕಾಸವೇ ಪೂರ್ಣಾಹಂತಾ. ಪ್ರಮಾತೃವು ತನ್ನ ಸ್ವರೂಪವನ್ನು ತನ್ನ ಸ್ವರೂಪದಲ್ಲಿರುವ ಶಕ್ತಿಗಳನ್ನು ಹಂಸಕ್ಷೀರವಾಗಿ ಆ ಶಕ್ತಿಗಳ ಸ್ವಭಾವ ಸ್ವರೂಪಗಳೊಡನೆ ಅರಿತು ಸ್ವರೂಪಕ್ಕಿಂತ ಬೇರೆಯಾಗಿರುವ ಯಾವ ಕರಣವನ್ನೂ ಅಪೇಕ್ಷಿಸದೆ ತನ್ನ ಇಚ್ಛಾಶಕ್ತಿಯ ಪ್ರಭಾವದಿಂದಲೇ ವಿಕಾಸವನ್ನು ಪಡೆಯುವಿಕೆಯೇ **ಶಾಂಭವೋಪಾಯ**. ಇವನು ಯಾವ ಅನುಸಂಧಾನವನ್ನೂ ಮಾಡಬೇಕಾಗಿಲ್ಲ. ಧ್ಯಾನಧಾರಣಾದಿಗಳನ್ನೂ ಮಾಡಬೇಕಾಗಿಲ್ಲ. ಈ ಉಪಾಯ ನಿಷ್ಠನಿಗೆ ೩೬ ತತ್ತ್ವರೂಪವಾಗಿರುವ ವಿಶ್ವವೆಲ್ಲಾ ನನ್ನಿಂದಲೇ ಹೊರಹೊಮ್ಮಿದೆ, ನನ್ನಲ್ಲಿಯೇ ಪ್ರತಿಫಲಿಸಿದೆ, ನನ್ನಿಂದ ಬೇರೆಯಲ್ಲ ಎಂಬ ವಿರಾಡ್ಭಾವನೆಯುಂಟಾಗಿರುತ್ತದೆ. ಈ ಉಪಾಯದಲ್ಲಿ ತನ್ನ ಸ್ವರೂಪಾನುಬಂಧಿ ಶಕ್ತಿಗಳನ್ನು ಬಿಟ್ಟು ಬೇರೆ ಯಾವುದನ್ನೂ ಅಪೇಕ್ಷಿಸದೆ ಇರುವುದರಿಂದ **ಅಭೇದೋಪಾಯ**ವೆನ್ನಿಸಿಕೊಂಡಿರುತ್ತದೆ. ತನ್ನ ಸ್ವರೂಪಾಭಿನ್ನವಾಗಿರುವ ಇಚ್ಛಾಶಕ್ತಿಯೇ ಇಲ್ಲಿ ಉಪಾಯವಾಗಿ ಅಂಗೀಕರಿಸಲ್ಪಟ್ಟಿದೆ. ಸ್ವರೂಪ ವಿಕಾಸವೇ ಉಪೇಯ. ಆದುದರಿಂದ ಉಪಾಯವೇ ಉಪೇಯವಾಗಿಯೂ ಉಪೇಯವೇ ಉಪಾಯವಾಗಿಯೂ ಇದ್ದಹಾಗಾಯಿತು. ಇಲ್ಲಿ ಶಾಸ್ತ್ರ, ಗುರು, ಸಂಸ್ಕಾರ ಮೊದಲಾದವುಗಳೆಲ್ಲಾ ಪರಂಪರಾ ಕಾರಣಗಳಾಗಬಹುದೇ ಹೊರತು ಸ್ವತಂತ್ರ ಕಾರಣಗಳಲ್ಲ.

ಸ್ವರೂಪವು ಚೈತನ್ಯರೂಪವಾಗಿರುವುದರಿಂದ (ಚೈತನ್ಯಮಾತ್ಮಾ) ಇಚ್ಛಾಜ್ಞಾನ ಕ್ರಿಯಾಶಕ್ತಿಗಳು ಅದರಲ್ಲಿ ಇದ್ದೇ ಇರುತ್ತವೆ. ಇಚ್ಛಾಶಕ್ತಿಯಿಂದಲೇ ತುರೀಯ ಸ್ಥಿತಿಯನ್ನು ಗುರುತಿಸಬೇಕಾಗಿದೆ. ತುರೀಯ ಸ್ಥಿತಿಯನ್ನು ಗುರುತಿಸುವಿಕೆಯೇ ಪಾರಮಾರ್ಥಿಕವಾದ ತತ್ತ್ವಸಾಕ್ಷಾತ್ಕಾರ. ಹೀಗೆ ತತ್ತ್ವಸಾಕ್ಷಾತ್ಕಾರವನ್ನು ಪಡೆದ ಸಾಧಕನು ಆಂತರ್ಯವಾಗಿ

ಸದಾ ತುರೀಯಾನುಸಂಧಾನವನ್ನು ಮಾಡುತ್ತಿರುವನು. ಇವನು ಇಂದ್ರಿಯ ನಿಗ್ರಹ ವುಳ್ಳವನಾಗಿ ಜಾಗ್ರತ್ ಸ್ವಪ್ನ ಸುಷುಪ್ತಿಗಳನ್ನು ಲೀಲೆಯಿಂದ ರಾಗದ್ವೇಷಗಳಿಲ್ಲದೆ ಅನುಭವಿಸುವನು. ಇವನೇ 'ವೀರೇಶ'. ಇವನ ಇಚ್ಛಾಶಕ್ತಿಯು ಎಲ್ಲಾ ಸಂಕೋಚ ಗಳನ್ನೂ ಮೀರಿರುತ್ತದೆ. ಇವನ ಧಾರಣಾಪ್ರಕರ್ಷದಿಂದ 'ಅಹಂ' 'ಇದಂ' ಎಂಬ ಭೇದವು ಅಳಿಯುತ್ತದೆ. ಅಭೇದವ್ಯಾಪ್ತಿಯು ಸಿದ್ಧಿಸುತ್ತದೆ. ತನ್ನ ಇಚ್ಛಾನುಸಾರವಾಗಿ ಸೃಷ್ಟಿಯನ್ನು ಮಾಡುವ ಶಕ್ತಿಯು ಇವನಿಗೆ ಉಂಟಾಗಿರುತ್ತದೆ. ಅನೇಕ ಚಮತ್ಕಾರಗಳೂ ಯೋಗಸಿದ್ಧಿಗಳೂ ಇವನ ಅಧೀನದಲ್ಲಿರುತ್ತವೆ. ಹೀಗೆ ಇಚ್ಛಾಶಕ್ತಿಯ ಪ್ರಭಾವದಿಂದ ಪರತತ್ತ್ವದಿಂದ ತಾನು ಬೇರೆಯಲ್ಲವೆಂದು ಗುರುತಿಸುವಿಕೆಯೇ ಶಾಂಭವೋಪಾಯ. ಇಲ್ಲಿ ಸಾಧನ ಮತ್ತು ಸಾಧ್ಯ ಇವೆರಡೂ ಅಭಿನ್ನವಾಗಿರುವುದರಿಂದ ಈ ಉಪಾಯವನ್ನು **ಅಭೇದೋಪಾಯ**ವೆಂದು ಹೇಳುತ್ತಾರೆ. ಕೇವಲ ಇಚ್ಛಾಶಕ್ತಿಯಿಂದಲೇ ಸಾಧಿಸ ಬೇಕಾಗಿರುವುದರಿಂದ ಇದನ್ನು **ಇಚ್ಛೋಪಾಯ**ವೆಂದೂ ಕರೆಯುತ್ತಾರೆ.

ಶಾಂಭವೋಪಾಯವನ್ನು ನಿರೂಪಿಸಿರುವ ಈ ಉನ್ಮೇಷದಲ್ಲಿ ಪ್ರತಿಜ್ಞೆ, ಬಂಧ ಸ್ವರೂಪ, ಜಾಗ್ರದಾದವಸ್ಥೆಗಳ ನಿರೂಪಣೆ, ಯೋಗಭೂಮಿಕೆಗಳು, ಚಿದ್ವಿಕಾಸ, ಸಮಾಧಿ ಸುಖ, ಇಚ್ಛಾಸಿದ್ಧಿ, ಲೋಕೋಪಕಾರ, ಮಂತ್ರವೀರ್ಯಲಾಭ— ಈ ವಿಷಯಗಳು ಪ್ರಧಾನವಾಗಿ ವಿವರಿಸಲ್ಪಟ್ಟಿವೆ.

ಅಕಿಂಚಿತ್ ಚಿಂತಕಸ್ಯೈವ ಗುರುಣಾ ಪ್ರತಿಬೋಧತಃ ।
ಯಂ ಸಮಾವೇಶಮಾಪ್ನೋತಿ ಶಾಂಭವಸ್ಸ ಉದಾಹೃತಃ ॥

(ಶಿವಸೂತ್ರ ವಿಮರ್ಶಿನಿ. ಸೂತ್ರ ೫, ಪುಟ ೧೯)

ಇಲ್ಲಿ ಗುರುಣಾ ಎಂದರೆ ತನ್ನಿಂದಲೇ ಎಂದು ಅರ್ಥ.

ಮತ್ತ ಏವೋದಿತಮಿದಂ ಮಯ್ಯೇವ ಪ್ರತಿಬಿಂಬಿತಂ ।
ಮದಭಿನ್ನಮಿದಂ ಚೇತಿ ತ್ರಿಧೋಪಾಯಸ್ಸ ಶಾಂಭವಃ ॥

(ತಂತ್ರಾಲೋಕ. ಆಹ್ನಿಕ ೩, ಶ್ಲೋಕ ೨೮೦)

ನಿಸ್ತರಂಗ ಉಪದೇಶಗಳು

ಶಕ್ತ್ಯವಸ್ಥಾ ಪ್ರವಿಷ್ಟಸ್ಯ ನಿರ್ವಿಭಾಗೇನ ಭಾವನಾ ।
ತದಾಸೌ ಶಿವರೂಪಿಸ್ಯಾತ್ ಶೈವೀಮುಖಮಿಹೋಚ್ಯತೆ ॥

(ವಿಜ್ಞಾನ ಭೈರವ. ಶ್ಲೋಕ ೨೦ ಪುಟ ೧೪)

ಧ್ಯಾನಮಾಡುವಾಗ್ಗೆ ನಿರ್ವಿಕಲ್ಪವಾಗಿರುವ ಹಾಗೆ ಈ ಎಲ್ಲಾ ಪದಾರ್ಥಗಳ ತಿಳಿವಳಿಕೆಲ್ಲಿಯೂ ಇರಬೇಕು. ಶಕ್ತಿಯು ಶಿವಮುಖವಾಗಿದೆ. ಶಿವಮುಖದಿಂದ ನಿರ್ವಿಕಲ್ಪ ಭಾವನೆ ಮೂಲಕ ಪರಾವಸ್ಥೆಗೆ ನುಗ್ಗಿದರೆ ಆಗ ಶಿವರೂಪಿಯಾಗುತ್ತಾನೆ.

ಸರ್ವಂ ಜಗತ್ ಸ್ವದೇಹಂ ವಾ ಸ್ವಾನಂದಭರಿತಂ ಸ್ಮರೇತ್ ।
ಯುಗಪತ್ ಸ್ವಾಮೃತೇನೈವ ಪರಾನಂದಮಯೋ ಭವೇತ್ ॥

(ವಿಜ್ಞಾನ ಭೈರವ. ಶ್ಲೋಕ ೬೫ ಪುಟ ೫೩)

ಜಗತ್ತೆಲ್ಲಾ ತನ್ನ ದೇಹದಲ್ಲಿಯೇ ಇದೆ. ಗಾಳಿಯು ತನ್ನ ಒಳಗೂ ಹೊರಗೂ ಸಂಚರಿಸುತ್ತಾ ಇದೆ. ಇದರಿಂದಲೇ ವಿಕಲ್ಪಗಳು ಉದ್ಭವಿಸುತ್ತವೆ ಎಂದು ತಿಳಿದು ಪ್ರಾಣಾಯಾಮದಿಂದ ಇಂದ್ರಿಯಗಳು ಮತ್ತು ಮನಸ್ಸನ್ನು ನಿಲ್ಲಿಸಿ ಎಲ್ಲವೂ ಶೂನ್ಯವೆಂದು ಭಾವಿಸಿ ಪರಾನಂದ(ಚಿದಮೃತ)ವನ್ನು ಅನುಭವಿಸುತ್ತಾನೆ.

ಮಾನಸಂ ಚೇತನಾಶಕ್ತಿಃ ಆತ್ಮಾಚೇತಿ ಚತುಷ್ಟಯಂ ।
ಯದಾಪ್ರಿಯೆ ಪರಿಕ್ಷೀಣಂ ತದಾತದ್ಭೈರವಂ ವಪುಃ ॥
ನಿರಾಲಂಬೋ ನಿರುತ್ಸಾಹಃ ಶೂನ್ಯಭೂತಃ ಶಿವಃ ಸ್ವಯಂ ।
ಸಂಜ್ಞಾನಾಶೇನ ನಿರ್ಜೀವ ಸಂಜ್ಞಾ ಸಾವ್ಯೋಮರೂಪಿಣೀ ॥

(ವಿಜ್ಞಾನ ಭೈರವ. ಪುಟ ೧೨೪-೧೨೫)

ಮನಸ್ಸು, ಬುದ್ಧಿ, ಪ್ರಾಣಶಕ್ತಿ, ಜೀವ ಎಂಬ ಭಾವನೆಗಳು ಹೋದಾಗ್ಯೆ 'ಅಹಂ' 'ಇದಂ' ಲಯವಾಗಿ ನಿಸ್ತರಂಗವಾಗಿ ಭೈರವಮೂರ್ತಿಯಾಗುತ್ತಾನೆ. ಆಗ ತಾನು ಜೀವನು ಎಂಬ ಭಾವನೆ ಹೋಗುತ್ತದೆ. ಪರಮವ್ಯೋಮದಲ್ಲಿ ವಿಹರಿಸುತ್ತಾನೆ.

ಸರ್ವೋತ್ತೀರ್ಣಂ ರೂಪಂ
ಸೋಪಾನ ಪದಕ್ರಮೇಣ ಸಂಶ್ರಯತಃ ।
ಪರತತ್ತ್ವರೂಢಿ ಲಾಭೆ
ಪರ್ಯಂತೆ ಶಿವಮಯಿ ಭಾವಃ

(ಪರಮಾರ್ಥಸಾರ. ಶ್ಲೋಕ ೯೭)

ಶಾಕ್ತೋಪಾಯ

ನಮ್ಮ ಅನುಭವದಲ್ಲಿರುವ ತಿಳಿವಳಿಕೆಗಳೆಲ್ಲಾ ಒಂದರಿಂದ ಒಂದು ಬೇರೆಯಾಗಿವೆ. ಬೇರೆಯಾಗಿರುವುದಲ್ಲದೆ ಪ್ರತಿಯೊಂದು ತಿಳಿವಳಿಕೆಯು ತನ್ನದೇ ಆದ ವ್ಯಕ್ತಿತ್ವವನ್ನು ಪಡೆದಿರುತ್ತದೆ. ಇಂತಹ ಬಗೆಬಗೆಯಾಗಿರುವ ಸ್ಥಿತಿಗಳನ್ನೇ ವಿಕಲ್ಪಗಳೆಂದು ಪಾರಿಭಾಷಿಕವಾಗಿ ಕರೆಯುತ್ತಾರೆ. "ವಿವಿಧಃ, ಕಲ್ಪಃ, ವಿಕಲ್ಪಃ". ಈ ವಿಕಲ್ಪಗಳು ಲೆಕ್ಕವಿಲ್ಲದಷ್ಟು ಹುಟ್ಟಿ ನಾಶವಾಗುತ್ತಿರುತ್ತವೆ. ಭೂಮಿಯು ಮೊದಲು ಶಿವತತ್ತ್ವದವರೆಗೂ ಇರುವ ತತ್ತ್ವಗಳ ತಿಳಿವಳಿಕೆಗಳೂ ವಿಕಲ್ಪಗಳೇ ಆಗಿವೆ. ಭೇದಜ್ಞಾನವಿಲ್ಲದೆ ವಿಕಲ್ಪವಿಲ್ಲ. ಈ ವಿಕಲ್ಪಗಳ ಮಹಿಮೆಯಿಂದಲೇ ನಾನು, ನನ್ನದು, ನಾನು ಬೇರೆ ಎಂಬ ಭಾವನೆಗಳು ನಿಂತಿರುತ್ತವೆ. ನಮ್ಮ ಭಾವನಾಪ್ರಪಂಚದಲ್ಲಿ ಯಾವಯೋಚನೆಗಳೂ ಇಲ್ಲದಿದ್ದರೆ ನಿರ್ವಿಕಲ್ಪ ಸ್ಥಿತಿಯನ್ನುತ್ತೇವೆ. ಶಾಸ್ತ್ರಜ್ಞರು ದೇಶ ಕಾಲ ಆಕಾರ ಈ ಮೂರು ಅಂಶಗಳಿಗೆ ಒಳಪಟ್ಟಿರುವುದೆಲ್ಲಾ ವಿಕಲ್ಪಗಳೆಂದೂ ಅದಿಲ್ಲದ ಸ್ಥಿತಿಯು ನಿರ್ವಿಕಲ್ಪವೆಂದೂ ಹೇಳುತ್ತಾರೆ. ಈ ವಿಕಲ್ಪ ಪ್ರವಾಹದಿಂದಲೇ ಶಕ್ತಿಸಂಕೋಚವಾಗಿ ಬದ್ಧಾವಸ್ಥೆ ಯುಂಟಾಗಿದೆ. ಈ ಅವಸ್ಥೆಯಲ್ಲಿ ವಿಕಲ್ಪಪ್ರಭಾವವು ರಾಗದ್ವೇಷಗಳಿಗೂ ಸುಖದುಃಖಗಳಿಗೂ ಕಾರಣವಾಗಿದೆ. ಎಷ್ಟೇ ಅವಾಂತರಗಳಿಗೆ ಕಾರಣಗಳಾಗಿದ್ದರೂ ಇವುಗಳಿಗೆ ಒಂದು ಅತಿಶಯವಾದ

ಸಾಮರ್ಥ್ಯವಿದೆ. ಲೆಕ್ಕಮಾಡಿದ ಪದಾರ್ಥಗಳ ಹಾಗೆ ಇವು ನಿಯಮಿತವಾದ ಸಂಖ್ಯೆಯಲ್ಲೇ ಇರುವುದಿಲ್ಲ. ಒಂದು ವಿಕಲ್ಪದಿಂದ ಇನ್ನೊಂದು ಸಮಾನವಾದ ವಿಕಲ್ಪವು ಹುಟ್ಟುತ್ತದೆ. ಅನೇಕ ವೇಳೆ ಒಂದೇ ವಿಕಲ್ಪದಿಂದ ಅನೇಕ ವಿಕಲ್ಪಗಳುಂಟಾಗುತ್ತವೆ. ಅನೇಕ ವಿಕಲ್ಪಗಳಿಂದ ಒಂದು ವಿಕಲ್ಪ ಹುಟ್ಟುವುದೂ ಉಂಟು. ಈ ವಿಕಲ್ಪ ಸಂತಾನವು ವಿಲಕ್ಷಣವಾದ ಸಂತತಿಯಾಗಿದೆ. ಇದರ ಬೆಳವಣಿಗೆ ಇದ್ದ ಹಾಗೆ ಇದರ ನಾಶವೂ ಆಶ್ಚರ್ಯಕರವಾಗಿದೆ. ಒಂದು ವಿಕಲ್ಪವು ಅದಕ್ಕೆ ವಿರುದ್ಧವಾದ ವಿಕಲ್ಪದಿಂದ ನಾಶವಾಗುತ್ತದೆ, ಅಥವಾ ತನ್ನ ತೀವ್ರತೆಯನ್ನು ಕಳೆದುಕೊಳ್ಳುತ್ತದೆ. ಒಂದು ವಿಕಲ್ಪದಿಂದ ಇನ್ನೊಂದು ವಿಕಲ್ಪವು ಸಂಸ್ಕರಿಸಲ್ಪಟ್ಟು ರೂಪಾಂತರಗಳನ್ನು ಪಡೆಯುವುದೂ ಉಂಟು.

ವಿಕಲ್ಪಗಳನ್ನು ನಾವು ತಿಳಿವಳಿಕೆಗೋಸ್ಕರ ಅಸ್ಫುಟವಾಗಿರುವುದು, ಸ್ಫುಟವಾಗದಿರುವುದು, ಸ್ಫುಟವಾಗಲಿಕ್ಕೆ ಪ್ರಾರಂಭವಾಗಿರುವುದು, ಸ್ಫುಟವಾಗಿರುವುದು ಎಂದು ನಾಲ್ಕು ಬಗೆಯಾಗಿ ವಿಂಗಡಿಸಬಹುದು. ಇವು ಮೊದಲನೆಯ ಅವಸ್ಥೆಯನ್ನು ಬಿಟ್ಟು ಮಿಕ್ಕ ಮೂರು ಹಂತಗಳಲ್ಲಿಯೂ ಸುಖದುಃಖವನ್ನುಂಟುಮಾಡುತ್ತವೆ.

ಚತುಷ್ರ್ವೇವ ವಿಕಲ್ಪೇಷು ಯಃ ಸಂಸ್ಕಾರಃ ಕ್ರಮಾದಸೌ ।
ಅಸ್ಫುಟಃ ಸ್ಫುಟತಾ ಭಾವೀ ಪ್ರಸ್ಫುರ್ಟ ಸ್ಫುಟತಾತ್ಮಕಃ ॥

(ತಂತ್ರಾಲೋಕ, ಅಹ್ನಿಕ ೪, ಶ್ಲೋಕ ೪)

ಸಂಸ್ಕೃತವಾದ ವಿಕಲ್ಪವು ತನಗೆ ಸಮಾನವಾದದ್ದನ್ನು ಹುಟ್ಟಿಸುತ್ತದೆ. ಆ ಸಮಾನವಾದದ್ದು ಇನ್ನೊಂದು ತನಗೆ ಸಮಾನವಾದದ್ದನ್ನು ಹುಟ್ಟಿಸುತ್ತದೆ. ಬೀಜ ಮೊಳಕೆ ಬಂದಮೇಲೆ ಸಿಪ್ಪೆ ಬಿದ್ದುಹೋಗುತ್ತದೆ. ಹಾಗೆ ಸ್ಫುಟತರ, ಸ್ಫುಟತಮ ವಿಕಲ್ಪಗಳು ನಿರ್ವಿಕಲ್ಪವಾಗಿ, ಶುದ್ಧವಾಗಿ, ಪೂರ್ಣವಾಗಿ ನಿಲ್ಲುತ್ತವೆ. ಅಭ್ಯಾಸದಿಂದ ವಿಕಲ್ಪದ ನಾಲ್ಕು ಮೆಟ್ಟಗಳನ್ನು ದಾಟಿ ಸ್ವಾನುಭವ ರೂಪವಾಗಿರುವ ಸ್ಥಿತಿಯನ್ನು ಪಡೆಯುತ್ತವೆ.

ವಿಕಲ್ಪಃ ಸಂಸ್ಕೃತಸ್ಸೂತೆ ವಿಕಲ್ಪಂ ಸ್ವಾತ್ಮ ಸಂಸ್ಕೃತಂ ।
ಸ್ವತುಲ್ಯಂ ಸೋಪಿ ಸೋಽಪ್ಯನ್ಯಂ ಸೋಽಪ್ಯನ್ಯಂ ಸದೃಶಾತ್ಮಕಂ ॥

(ತಂತ್ರಾಲೋಕ, ಅಹ್ನಿಕ ೪ ಶ್ಲೋಕ ೩)

ತತಃ ಸ್ಫುಟತರೋ ಯಾವದಂತೆ ಸ್ಫುಟತಮೋ ಭವೇತ್ ।
ಅಸ್ಫುಟಾದೌ ವಿಕಲ್ಪೇಚ ಭೇದೋಪ್ಯಸ್ಯಾಂತರಾಲಿಕಃ ॥
ತತಸ್ಫುಟತಮೋದಾರ ತಾದ್ರೂಪ್ಯಪರಿಬೃಂಹಿತಾ ।
ಸಂವಿದಭ್ಯೇತಿ ವಿಮಲಾಯು ವಿಕಲ್ಪ ಸ್ವರೂಪತಾಂ ॥

(ತಂತ್ರಾಲೋಕ, ಅಹ್ನಿಕ ೪ ಶ್ಲೋಕ ೫–೬)

ಅತಶ್ಚ ಭೈರವೀಯಂ ಯತ್ ತೇಜಃ ಸಂವಿತ್ಸ್ವಭಾವಕಂ ।
ಭೂಯೋ ಭೂಯೋ ವಿಮೃಶತಾಂ ಜಾಯತೆ ತತ್ಸ್ಫುಟಾತ್ಮತಾ ॥

(ತಂತ್ರಾಲೋಕ, ಅಹ್ನಿಕ ೪ ಶ್ಲೋಕ ೭)

ಓದುವುದು, ಓಡುವುದು, ಭಯ, ಸಂತೋಷ, ಆಶ್ಚರ್ಯ, ವಿಸರ್ಗೋಚ್ಚಾರಣೆ ಮೊದಲಾದ ಘಟನೆಗಳಲ್ಲಿ ಹೀಗೆ ಎಂದು ಹೇಳಲಿಕ್ಕಾಗದಿರುವ ಕ್ಷಣಕಾಲ ಮಾತ್ರ ಅನುಭವಕ್ಕೆ ಬರುವ ನಿಸ್ತರಂಗ ಸ್ಥಿತಿಯೇರ್ಪಡುತ್ತದೆ. ಈ ನಿಸ್ತರಂಗ ಸ್ಥಿತಿ ದೃಢ ಭೂಮಿಯಾಗುವುದಕ್ಕೆ ಈ ಉಪಾಯಗಳು ಹೊರಟಿವೆ. ಶಿವನ ಮೊದಲು ಭೂಮಿ ವರೆಗೂ ಇರುವ ತತ್ವಸ್ವರೂಪಜ್ಞಾನವೂ ವಿಕಲ್ಪಗಳೆಂದು ಹೇಳಿದೆವು. ನಮ್ಮ ವ್ಯವಹಾರ ಸೌಕರ್ಯಕ್ಕಾಗಿ ವಿಕಲ್ಪಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಹೊರಗಿನ ಪ್ರಪಂಚದಲ್ಲಿ ನಮ್ಮ ಜೀವನ ವ್ಯವಹಾರವನ್ನು ಸಾಗಿಸುವುದಕ್ಕೆ ಆಶ್ರವಾಗಿರುವ ವಿಕಲ್ಪಗಳ ಗುಂಪೊಂದು. ನಮ್ಮ ಸ್ವಸ್ವರೂಪ ವಿಕಾಸವನ್ನು ಪಡೆಯುವುದಕ್ಕೋಸ್ಕರ ನಾವು ತಿಳಿಯುವ ಪರಾ, ಪರಾಪರಾ, ಅಪರಾ ಎಂಬ ಮೂರು ಬಗೆಯಾದ ತತ್ತ್ವಗಳ ವಿಮರ್ಶನಾರೂಪವಾದ ವಿಕಲ್ಪಗಳ ಗುಂಪೊಂದು. ವಿಕಲ್ಪ ಭೂಯಿಷ್ಠವಾದ ವಿಕಲ್ಪ ಸಂತತಿಯನ್ನು ಕ್ರಮಕ್ರಮವಾಗಿ ತೊಡೆದುಹಾಕಿ ನಿರ್ವಿಕಲ್ಪ ಭೂಮಿಯನ್ನು ಪಡೆಯುವುದಕ್ಕೆ ನಾವು ಉಪಯೋಗಿಸುವ ವಿಕಲ್ಪಗಳ ಗುಂಪೊಂದು. ಅಂದರೆ ಶಿವನಿಗಿಂತ ಬೇರೆ, ಯಾವ ವಿಕಲ್ಪವಿಲ್ಲದಿದ್ದರೂ ಅಖ್ಯಾತಿಯ ಬಲದಿಂದ ರೂಪುಗೊಂಡಿರುವ ಭಿನ್ನವೇದ್ಯ ಪ್ರಥಾತ್ಮಕವಾಗಿರುವ ಈ ವಿಶ್ವದ ಪದಾರ್ಥ ವಿಕಲ್ಪಗಳನ್ನು ತೊಡೆದುಹಾಕಬೇಕು. ಹಾಗೆಯೇ ಅಖ್ಯಾತಿಯಿಂದ ಕಲುಷಿತವಾಗದ ಸ್ವಯಂಪ್ರಕಾಶವಾದ ಸ್ವಸ್ವರೂಪ ವಿಕಾಸಾತ್ಮಕವಾದ ಸ್ಥಿತಿಯನ್ನು ಪಡೆಯಲಿಕ್ಕೋಸ್ಕರ ಮಾಡುವ ಅನುಸಂಧಾನವೇ **ನಿರ್ವಿಕಲ್ಪ ಭೂಮಿ.** ದ್ವೈತಭಾವನೆಯಿಂದಿರುವ ವಿಕಲ್ಪಭೂಮಿಗಳನ್ನು ತೊಡೆದು ಹಾಕುವುದಕ್ಕೆ ನಾವು ಉಪಯೋಗಿಸುವ ವಿಕಲ್ಪವು ವಿಕಲ್ಪಗಳನ್ನು ತೊಡೆದುಹಾಕಿ ತಾನೂ ಮಾಯವಾಗುತ್ತದೆ. ಚಿತ್ಸ್ವರೂಪದಲ್ಲಿ ಯಾವ ಅಂಶವನ್ನೂ ತೆಗೆದುಹಾಕುವ ಹಾಗಿಲ್ಲ. ಹೊಸ ಅಂಶವನ್ನು ಸೇರಿಸುವ ಹಾಗಿಲ್ಲ. ಅದರ ಅನುಭವವು ಸ್ಫುಟವಾಗುವುದೊಂದೇ ಗುರಿ.

ಈ ವಿಕಲ್ಪಗಳ ಹೊಯ್ದಾಟದಿಂದ ತಪ್ಪಿಸಿಕೊಳ್ಳುವುದಕ್ಕೆ ಮಾಡುವ ಪ್ರಯತ್ನಗಳು ವಿಕಲ್ಪರೂಪಗಳಾಗಿಯೇ ಇದ್ದರೂ ಅವು ಶುದ್ಧವಿದ್ಯಾವಿಕಲ್ಪಗಳು. ಈ ವಿಧವಾದ ವಿಮರ್ಶೆಯು ಸಾಧಕನಿಗೆ ಹುಟ್ಟಬೇಕಾದರೆ ಸತ್ತರ್ಕ, ಸದಾಗಮ, ಸದ್ಗುರೂಪದೇಶ ಇವುಗಳು ಬೇಕು. ಸತ್ತರ್ಕವೆನ್ನುವುದು ಇವನಿಗಿರುವ ತಿಳಿವಳಿಕೆಯಲ್ಲಿ ಸ್ವಸ್ವರೂಪ ವಿಕಾಸವನ್ನುಂಟುಮಾಡುವ ಕ್ರಮವನ್ನು ನಿರ್ಣಯಿಸುತ್ತದೆ. ಬಾರಿಬಾರಿಗೂ ಜ್ಯೋತಿಸ್ವರೂಪವನ್ನು ವಿಮರ್ಶೆಮಾಡುವವರಿಗೆ ಸ್ಫುಟವಾದ ಸಾಕ್ಷಾತ್ಕಾರವೇರ್ಪಡುತ್ತದೆ. ಅದರ ಪ್ರಭಾವದಿಂದ ವಿಶ್ವಾತ್ಮಕನೂ ವಿಶ್ವಾತೀತನೂ ನಾನೇ ಎಂಬ ಪೂರ್ಣಾಹಂಭಾವ ವುಂಟಾಗುತ್ತದೆ.

ಸಾ ಚ ದೃಶ್ಯಾ ಹೃದದ್ದೇಶೆ ಕಾರ್ಯಸ್ಮರಣ ಕಾಲತಃ ।
ಪ್ರಹರ್ಷಾವೇದ ಸಮಯೆ ದರಸಂದರ್ಶನಕ್ಷಣೆ ।
ಅನಾಲೋಚನತೋ ದೃಷ್ಟೆ ವಿಸರ್ಗ ಪ್ರಸರಾಸ್ಪದೆ ।

ವಿಸರ್ಗೋಕ್ತಿ ಪ್ರಸಂಗೇ ಚ ವಾಚನೇ ಧಾವನೇ ಕಥಾ ।
ಏತೇಷ್ವೇವ ಪ್ರಸಂಗೇಷು ಸರ್ವಶಕ್ತಿ ವಿಲೋಲತಾ ॥

(ಶಿವದೃಷ್ಟಿ. ಶ್ಲೋಕ ೯–೧೦ ಪುಟ ೧೧)

ಬದ್ಧದಶೆಯಲ್ಲಿ ವಿಕಲ್ಪಗಳಿಗಾಶ್ರಯವಾಗಿರುವುದು ಚಿತ್ತು. ಚಿತ್ತದಿಂದುಂಟಾಗುವ ವಿಕಲ್ಪಗಳಿಂದ ಜೀವನ ಯಾತ್ರೆಯು ನಡೆಯುತ್ತಿರುವುದು ಎಲ್ಲರ ಅನುಭವದಲ್ಲಿಯೂ ಇದೆ. ಈ ವಿಕಲ್ಪಗಳನ್ನೇ ಪ್ರತ್ಯಾಹಾರ, ಧ್ಯಾನ, ಧಾರಣ ಮೊದಲಾದ ಸಾಧನಗಳಿಂದ ಹದಗೊಳಿಸಬೇಕು. ಹಾಗೆಯೇ ಸ್ವಸ್ವರೂಪಾನುಸಂಧಾನದಿಂದ ಮರಳಿ ಉಂಟಾಗುವ ವಿಕಲ್ಪಗಳಿಗೆ ಅಧಿಕಾರವನ್ನು ಕಡಿಮೆಮಾಡಬೇಕು. ಒಂದು ಮುಖದಲ್ಲಿ ವಿಕಲ್ಪಗಳನ್ನು ಸಂಸ್ಕರಿಸುವುದು, ಇನ್ನೊಂದು ಮುಖದಲ್ಲಿ ನಿರ್ವಿಕಲ್ಪ ಭೂಮಿಯಲ್ಲಿ ಸ್ಥೈರ್ಯವನ್ನು ಸಂಪಾದಿಸುವುದು—ಈ ಎರಡಂಶಗಳು ಈ ಉಪಾಯದಲ್ಲಡಗಿವೆ. ವಿಕಲ್ಪಗಳನ್ನು ಸಂಸ್ಕರಿಸುವುದಕ್ಕೆ ನಾವು ಉಪಯೋಗಿಸುವ ಸಾಧನೆಗಳು ಭೇದರೂಪವಾಗಿವೆ. ನಿರ್ವಿಕಲ್ಪ ಭೂಮಿಯಲ್ಲಿ ನಾವು ಸ್ಥೈರ್ಯವನ್ನು ಸಂಪಾದಿಸುವ ಸಾಧನೆ ಅಭೇದ ದೃಷ್ಟಿ. ಈ ಎರಡಂಶಗಳು ಕೂಡಿರುವುದರಿಂದ ಇದಕ್ಕೆ ಭೇದಾಭೇದೋಪಾಯವೆಂದು ಹೆಸರು. ಇದನ್ನೇ ಜ್ಞಾನೋಪಾಯವೆಂದೂ ಶಾಕ್ತೋಪಾಯವೆಂದೂ ಹೇಳುವುದು. ಈ ಉಪಾಯದಿಂದ ಸಾಕ್ಷಾತ್ಕಾರವನ್ನು ಪಡೆದಿರುವವನು ಜಾಗ್ರದವಸ್ಥೆಯಲ್ಲಿಯೂ ಚಿದ್ರಸ ಘನರೂಪವಾದ ಪರಮಾರ್ಥಾನಂದವನ್ನು ಅನುಭವಿಸುತ್ತಿರುತ್ತಾನೆ.

ಉಚ್ಚಾರರಹಿತಂ ವಸ್ತು ಚೇತಸೈವ ವಿಚಿಂತಯನ್ ।
ಯಂ ಸಮಾವೇಶಮಾಪ್ನೋತಿ ಶಾಕ್ತಸ್ಸೋऽತ್ರಾಭಿಧೀಯತೇ ॥

(ಶಿವಸೂತ್ರ ವಿಮರ್ಶಿನಿ. ೨ನೇ ಉನ್ಮೇಷ, ಸೂತ್ರ–೧೦)

ನಮ್ಮ ಭಾಷೆಯಿಂದ ಉಚ್ಚರಿಸಲಾಗದಿರುವ ಪರಮಾರ್ಥ ತತ್ತ್ವವನ್ನು ಮನಸ್ಸಿನಿಂದಲೇ ಧ್ಯಾನಮಾಡುತ್ತಾ ಸಾಧಕನು ಯಾವ ಸಮಾವೇಶವನ್ನು ಪಡೆಯುತ್ತಾನೋ ಅದಕ್ಕೆ ಶಾಕ್ತೋಪಾಯವೆಂದು ಹೆಸರು.

ಶಾಕ್ತೋಪಾಯವು **ಭಾವನಾಪ್ರಧಾನ**ವಾದುದು. ನಮ್ಮ ವ್ಯವಹಾರಗಳೆಲ್ಲಾ ಅಭಿಪ್ರಾಯಗಳ ಮೇಲೆ ನಿಂತಿವೆ. ಅಭಿಪ್ರಾಯಗಳು ಚಿತ್ತವೃತ್ತಿಗಳು. ಇವುಗಳು ಅಸಂಖ್ಯಾತವಾಗಿವೆ. .ಇವು ಅಭಿವ್ಯಕ್ತಿಯಲ್ಲಿ ಬೇರೆಬೇರೆಯಾಗಿ ತೋರಿದರೂ ಚಿತ್ತತ್ತ್ವದಲ್ಲಿ ಲೀನವಾದಾಗ ಅಭೇದ ಸ್ಥಿತಿಯನ್ನು ಪಡೆಯುತ್ತವೆ. ಸಾಮಾನ್ಯ ಸ್ಥಿತಿಯಲ್ಲಿರುವ ಭೇದವೃತ್ತಿಗಳನ್ನು ತಿರಸ್ಕರಿಸುವುದರ ಮೂಲಕ ವಿಕಲ್ಪಗಳನ್ನು ಕ್ರಮಕ್ರಮವಾಗಿ ಕೊನೆಗಾಣಿಸಿ ಅಭೇದವ್ಯಾಪ್ತಿಯನ್ನು ಭಾವನಾಬಲದಿಂದ ಸಾಧಿಸುವುದೇ ಶಾಕ್ತೋಪಾಯದ ಮುಖ್ಯಉದ್ದೇಶ.

ಯಾವುದರಿಂದ ಪರತತ್ತ್ವವು ಭಾವಿಸಲ್ಪಡುತ್ತದೆಯೋ ಅದೇ ಚಿತ್ತ. ಅಂತರ್ಯವಾಗಿ ಅಭೇದವಿಮರ್ಶನೆ ಮಾಡುವುದೇ ಮಂತ್ರ. ಉಪಾಸಕನು ಮಂತ್ರದಿಂದ ದೇವತೆ

ಯನ್ನು ಉಪಾಸನೆ ಮಾಡುತ್ತಾನೆ. ಉಪಾಸಕ, ದೇವತೆ, ಮಂತ್ರ—ಈ ಮೂರು ಅಂಶಗಳಿಗೂ ಭೇದವಿಲ್ಲವೆಂದು ಅಭೇದಾನುಸಂಧಾನಮಾಡುವುದು ಇಲ್ಲಿ ಮುಖ್ಯ ಗುರಿ. ಪರಪ್ರಕಾಶ ತಾದಾತ್ಮ್ಯವನ್ನು ಪಡೆಯುವುದೇ ಇಲ್ಲಿನ ಪ್ರಯತ್ನ.

' **ಅಭೇದಪ್ರಥಾ** '—ಭೇದವಿದ್ದು ಅಭೇದವಾಗುವುದು. ಸಾಧಕನಿಗೆ ಯಾವಾಗ ಶಬ್ದರಾಶಿಯೆಲ್ಲಾ ತನ್ನಿಂದ ಬೇರೆಯಲ್ಲವೆಂಬ ಭಾವನೆ ಬೆಳೆದು ಶರೀರವಾಗಿ ತೋರುವುದೋ ಆಗ ಎಲ್ಲಾ ವಿಶ್ವವೂ ಅಭಿನ್ನವಾಗಿ ಪೂರ್ಣಾಹಂ ವಿಮರ್ಶಾತ್ಮಕವಾಗಿ ಸ್ಫುರಿಸುತ್ತದೆ. ಇದೇ ಮಂತ್ರರಹಸ್ಯ. ಇದನ್ನೇ ಮಂತ್ರವೀರ್ಯ, ಉಪನಿಷತ್ ಮೊದಲಾದ ಸಾಂಕೇತಿಕ ಪದಗಳಿಂದ ಸೂಚಿಸಿರುತ್ತಾರೆ. ಯಾರಿಗೆ ಮಂತ್ರವೀರ್ಯ ಲಾಭವಾಗುವುದೋ ಅವನಿಗೆ ಆನುಷಂಗಿಕವಾಗಿ ಕೆಲವು ಮಿತಸಿದ್ಧಿಗಳು ಪ್ರಾಪ್ತವಾಗುತ್ತವೆ. ಈ ಸಿದ್ಧಿಗಳಿಗೆ ಮೋಹ ಗೊಂಡು ಅಭೇದವ್ಯಾಪ್ತಿ ಸಾರವಾಗಿರುವ ಶುದ್ಧವಿದ್ಯಾನುಸಂಧಾನವನ್ನು ಮರೆತರೆ, ಭೇದ ನಿಷ್ಠೆಯು ವಿಚಿತ್ರ ವಿಕಲ್ಪರೂಪವಾಗಿ ಉಂಟಾಗುತ್ತದೆ. ಇದು ಅಭೇದವ್ಯಾಪ್ತಿಯನ್ನು ಕೋರುವವನಿಗೆ ಪ್ರತಿಬಂಧಕವಾಗುತ್ತದೆ.' ಈ ಮಿತಸಿದ್ಧಿಗಳುಂಟಾದರೂ ಯಾವನು ಈಶ್ವರಾನುಗ್ರಹದಿಂದ ಅವುಗಳನ್ನು ತಿರಸ್ಕರಿಸುತ್ತಾನೆಯೋ ಅವನಿಗೆ ಚಿದ್ಗಗನದಲ್ಲಿ ಸ್ವಸ್ವ ರೂಪಾನಂದವೇರ್ಪಡುತ್ತದೆ. ಹೀಗೆ ಉಂಟಾಗುವ ಆನಂದವನ್ನು **ಮಂತ್ರವೀರ್ಯ** ಅಥವಾ **ಮುದ್ರಾವೀರ್ಯ** ಎಂದು ಕರೆಯುತ್ತಾರೆ. ಮಂತ್ರವೀರ್ಯವನ್ನು ಸಂಪಾದಿಸು ವುದಕ್ಕೆ ಉಪಾಯ ಗುರು. ಇಲ್ಲಿ ಗುರು ಅಂದರೆ ಪರಮೇಶ್ವರನ ಅನುಗ್ರಹ ರೂಪವಾದ ಶಕ್ತಿ. ಆ ಶಕ್ತಿಯು ಪ್ರತ್ಯಕ್ಷವಾಗಿರುವ ಗುರುವಿನ ಮೂಲಕ ಬರಬಹುದು ಅಥವಾ ಸ್ವತಃ ವಿಕಸಿಸಬಹುದು. ಇದರ ಪ್ರಭಾವದಿಂದ ಶಿಷ್ಯನಿಗೆ ಅಕ್ಷರ ರಾಶಿಯಿಂದುಂಟಾಗುವ ಭೇದ ಜ್ಞಾನಗಳು ಗೌಣವಾಗಿ, ಅಭೇದವ್ಯಾಪ್ತಿಗನುಸಾರವಾದ ಮಂತ್ರವೀರ್ಯವೇ ಮುಖ್ಯ ವಾಗಿ ಅನುಭವಕ್ಕೆ ಬರುತ್ತದೆ.

ಈ ಮಾತೃಕಾತತ್ತ್ವ ತಿಳಿದಿರುವವರಿಗೆ ಆ ಪರಾಶಕ್ತಿಯು ಭಕ್ತಿ ಮತ್ತು ಮುಕ್ತಿ ಗಳುಳ್ಳ ಸಿದ್ಧಿಯನ್ನು ಕೊಡುತ್ತದೆ. ಹಾಗೆ ಈ ಮಾರ್ಗವನ್ನು ತಿಳಿಯದೆ ಇರುವವರಿಗೆ ವಾಚ್ಯವಾಚಕಭಾವದಿಂದುಂಟಾಗುವ ಹರ್ಷ ಮತ್ತು ಶೋಕಗಳನ್ನುಂಟುಮಾಡುತ್ತದೆ. ಈ ರಹಸ್ಯವನ್ನರಿತ ಸಾಧಕನು ಸ್ಥೂಲ ಮತ್ತು ಸೂಕ್ಷ್ಮವಾಗಿರುವ ಈ ವಿಶ್ವವನ್ನು ಆ ಮಹಾಚಿದಗ್ನಿಯಲ್ಲಿ ಲಯಮಾಡಿ ಅನುಸಂಧಾನಮಾಡುತ್ತಾನೆ. ಇವನಿಗೆ ನಾನು ಎಂಬ ಅಭಿಮಾನ (ಅಹಂಪ್ರತ್ಯಯ)ವಿರುವುದಿಲ್ಲ.

ಯೋಗಿಗೆ ಸ್ವರೂಪವಿಮರ್ಶನಜ್ಞಾನವೇ ತೃಪ್ತಿಸಾಧನವಾಗಿರುತ್ತದೆ (ಜ್ಞಾನ ಮನ್ನಂ). ಮಿಕ್ಕ ವಿಷಯಗಳಿಂದುಂಟಾಗುವ ತಿಳಿವಳಿಕೆಗಳು ಅಲ್ಪವಾದವುಗಳು. ಈ ಯೋಗಭೂಮಿಕೆಗಳು ಅಸಂಖ್ಯಾತಗಳಾಗಿವೆ. ಆದರೂ ಇವುಗಳಲ್ಲಿ ನೂರಹನ್ನೆರಡನ್ನು ಮಾತ್ರ ಶಾಸ್ತ್ರಜ್ಞರು ಎಣಿಸಿರುತ್ತಾರೆ. ಸ್ವರೂಪ ವಿಮರ್ಶನ ಜ್ಞಾನದಿಂದ ಸಿದ್ಧಿಯನ್ನು ಪಡೆದರೂ ಯಾವಾಗಲೂ ಜಾಗರೂಕನಾಗಿರಬೇಕು. ಅಹಂಕಾರದಿಂದ ಮೈಮರೆತರೆ ಅಧೋಗತಿಗಿಳಿಯುವನು. ಶುದ್ಧವಿದ್ಯಾನುಸಂಧಾನವು ಅದ್ವಯ ಪ್ರಥಾತ್ಮಕವಾದದ್ದು.

ಅದು ತಿರಸ್ಕೃತವಾದರೆ ಭೇದಜ್ಞಾನಗಳೇ ಪ್ರಧಾನವಾಗುತ್ತವೆ. ಭೇದಜ್ಞಾನದಿಂದ ಆಕಾಶಗಮನ, ತ್ರಿಕಾಲಜ್ಞಾನ ಮೊದಲಾದ ಸಿದ್ಧಿಗಳಲ್ಲಿ ಮೋಹವುಂಟಾಗುವುದು. ಅವುಗಳಿಂದ ಕ್ರಮಕ್ರಮವಾಗಿ ಸಂಕೋಚವುಂಟಾಗುತ್ತದೆ. ಆದುದರಿಂದ ಯೋಗಿಯು ಸರ್ವದಾ ಜಾಗರೂಕನಾಗಿ ಅಭೇದ ವ್ಯಾಪ್ತಿಯನ್ನೇ ಮನನ ಮಾಡುತ್ತಿರಬೇಕು.

ಮನಸ್ಸಿನ ಭಾವನೆಗಳನ್ನನುಸರಿಸಿಕೊಂಡು ಈ ಪ್ರಪಂಚವನ್ನು ದಾಟುವ ಕ್ರಮವೇ ಶಾಕ್ತೋಪಾಯ. ಭಾವನೆಗಳು ಶಬ್ದರಾಶಿಯನ್ನನುಸರಿಸಿಕೊಂಡಿವೆ. ಶಬ್ದರಾಶಿಯು ಅಕ್ಷರ, ಪದ, ವಾಕ್ಯಗಳಿಂದ ಕೂಡಿದೆ. ಶಬ್ದರಾಶಿಯಿಂದ ಅಭಿಪ್ರಾಯಗಳೂ, ಅವುಗಳಿಂದ ವಿಕಲ್ಪಗಳೂ ಉಂಟಾಗುತ್ತವೆ. ವಿಕಲ್ಪಗಳು ರಾಗದ್ವೇಷಗಳನ್ನುಂಟುಮಾಡುತ್ತವೆ. ವಿಕಲ್ಪಗಳು ಅವಿಕಲ್ಪರೂಪವನ್ನು ಪಡೆಯುವವುಗಳಾಗಿವೆ. ಶಬ್ದರಾಶಿಯು ಇವನ ಸ್ವರೂಪವನ್ನು ಮುಚ್ಚಲು ಯಾವಾಗಲೂ ಸಿದ್ಧವಾಗಿರುತ್ತದೆ. ಶಬ್ದರಾಶಿಯಿಂದ ಉಂಟಾಗುವ ಶಕ್ತಿಗಳು ಅನಂತವಾಗಿವೆ. ಆ ಶಕ್ತಿಚಕ್ರದ ಪ್ರಭಾವವನ್ನು ತಿಳಿಯದಿದ್ದರೆ ಬಂಧ, ತಿಳಿದರೆ ಸಿದ್ಧಿ. ಭಿನ್ನಭಿನ್ನವಾಗಿರುವ ವಿಕಲ್ಪಗಳನ್ನು ವಿಮರ್ಶಿಸಿ ಅಭಿನ್ನವಾದ ಅನುಸಂಧಾನವನ್ನು ಪಡೆಯಲು ಮಾಡುವ ಪ್ರಯತ್ನರೂಪವಾಗಿರುವ ಉಪಾಯವನ್ನು ಜ್ಞಾನೋಪಾಯವೆಂದು ಕರೆಯುವರು. ಒಳ್ಳೆಯ ವಿಕಲ್ಪಗಳಿಗೂ, ಕೆಟ್ಟ ವಿಕಲ್ಪಗಳಿಗೂ ಆಧಾರವಾಗಿರುವ ಅಭಿನ್ನವಾದ ಮಹಾಸತ್ತಾವನ್ನು ಗುರುತಿಸುವಿಕೆಯೇ ಈ ಉಪಾಯ. ಭೇದಜ್ಞಾನದ ಮೂಲಕ ಅಭೇದಜ್ಞಾನವನ್ನು ಸಂಪಾದಿಸುವುದಾಗಿರುವುದರಿಂದ ಇದನ್ನು **ಭೇದಾಭೇದೋಪಾಯ**ವೆಂದು ವ್ಯವಹರಿಸುವರು.

ಅಕ್ಷರಗಳ ಉಚ್ಚಾರಣೆಯಿಂದ ಸೂಚಿಸುವುದಕ್ಕಾಗದೆ ಇರುವುದಾಗಿಯೂ, ಏಕಾಗ್ರತೆಯಿಂದ ವಿಮರ್ಶಿಸಿದರೆ ತೋರುವುದಾಗಿಯೂ ಇರುವ ಆ ಪರಾಶಕ್ತಿಯನ್ನು ತಾದಾತ್ಮ್ಯದಿಂದ ಅನುಸಂಧಾನಮಾಡಿದರೆ ಯಾವ ಬಗೆಯ ಸಮಾವೇಶ ಉಂಟಾಗುತ್ತದೆಯೋ ಅದೇ

ಶಾಕ್ತೋಪಾಯ

ಈ ಉನ್ಮೇಷದಲ್ಲಿ ಪರತತ್ತ್ವದ ವಿಮರ್ಶೆ, ಅಂತರ್ಯವಾದ ಅಭೇದಾನುಸಂಧಾನ, ಮಂತ್ರ, ದೇವತೆ ಮತ್ತು ಉಪಾಸಕ ಇವರಿಗೆ ಇರುವ ಅಭೇದ ನಿರೂಪಿಸಿದೆ. ಅಕೃತ್ರಿಮವಾದ ಸ್ವರೂಪ ವಿಕಾಸಕ್ಕೆ ಮಾಡತಕ್ಕ ಪ್ರಯತ್ನ, ಮಂತ್ರವೀರ್ಯ, ಮಂತ್ರರಹಸ್ಯ, ಇವು ಆನುಷಂಗಿಕ ಸಿದ್ಧಿಗಳು, ಅವುಗಳಿಂದುಂಟಾಗುವ ತೊಂದರೆಗಳು, ಆ ಸಿದ್ಧಿಗಳನ್ನು ನಿರಾಕರಿಸಿದರೆ ಉಂಟಾಗುವ ಸಮಾಧಿಸುಖ, ಉಪಾಯಸ್ವರೂಪ, ವಿಮರ್ಶಾತ್ಮಕ ಜ್ಞಾನ, ಸಿದ್ಧಿಯನ್ನು ಪಡೆದಿದ್ದರೂ ಪ್ರಮಾದದಿಂದ ಎಚ್ಚರತಪ್ಪಿದರೆ ಆಗುವ ಅಪಾಯಗಳು ಪ್ರಧಾನವಾಗಿ ವಿವೇಚಿಸಲ್ಪಟ್ಟಿವೆ.

ಆಣವೋಪಾಯ

ಪರಶಿವನ ವಿಶ್ವಾತ್ಮ ತತ್ತ್ವಕ್ಕೆ ಅಥವಾ ವಿಶ್ವರೂಪಿಯಾಗಿರಲಿಕ್ಕೆ ಯಾವ ಶಕ್ತಿಯು ಸ್ವತಂತ್ರವಾಗಿ ಇತರ ಅಪೇಕ್ಷೆಯಿಲ್ಲದೆ ಕಾರಣವಾಗಿದೆಯೋ ಅಂತಹ ಶಕ್ತಿಯನ್ನು ಅನುತ್ತರಾ, ಪ್ರತಿಭಾ, ಪರಾಶಕ್ತಿ ಎಂದು ಕರೆಯುತ್ತಾರೆ.

ಪರಿಪೂರ್ಣನಾಗಿರುವ ಪರಮಶಿವನು ತನ್ನ ಸ್ವಾತಂತ್ರ್ಯ ಶಕ್ತಿಯ ವಿಲಾಸದಿಂದ ವಿಶ್ವವನ್ನು ಹೊರಹೊಮ್ಮಿಸುವುದಕ್ಕೋಸ್ಕರ ಶಿವ, ಶಕ್ತಿ ಈ ಎರಡು ರೂಪಗಳನ್ನು ತನ್ನಲ್ಲಿಯೇ ತೋರ್ಪಡಿಸಿಕೊಳ್ಳುತ್ತಾನೆ. ಶಿವನಿಗೆ 'ಅಕುಲ' ಎಂಬ ಪರಿಭಾಷೆ. ಪರಾಶಕ್ತಿಗೆ 'ಕೌಲಿಕೀ' ಎಂಬ ಸಂಜ್ಞೆ. ಇವೆರಡೂ ಒಂದನ್ನೊಂದು ಬಿಟ್ಟಿರುವುದಿಲ್ಲ. ಈ ಎರಡು ತತ್ತ್ವಗಳ ಸಂಘಟರೂಪವಾದ ಚಲನ ಅಥವಾ ಸ್ಪಂದವೇ 'ಸ್ವಾತ್ಮೋಚ್ಛಲತ್ತ' ಎನ್ನಿಸಿಕೊಳ್ಳುವುದು. ಸ್ವಾತ್ಮೋಚ್ಛಲತ್ತ ಎಂದರೆ ತನ್ನ ಸ್ವರೂಪದ ಸ್ಫುರಣ. ಇದರಿಂದ ಪ್ರಕಾಶ ವಿಮರ್ಶರೂಪವಾಗಿ ಅನುತ್ತರಾವಸ್ಥೆಯಲ್ಲಿರುವ ಶಿವಶಕ್ತಿಗಳ ಸಂಘಟ್ಟದಿಂದಲೇ ಇಚ್ಛಾ ಜ್ಞಾನಾದಿ ಶಕ್ತಿಗಳ ಪ್ರಸರಣರೂಪವಾದ ವಿಶ್ವಸೃಷ್ಟಿಯುಂಟಾಗುತ್ತದೆ. ವಿಶ್ವೋತ್ತೀರ್ಣವಾಗಿಯೂ ವಿಶ್ವಮಯವಾಗಿಯೂ ಈ ಎರಡು ಶಕ್ತಿಗಳೂ ವಿರಾಜಿಸುತ್ತವೆ. ವಿಶ್ವಮಯವಾಗಿದ್ದಾಗಲೂ ವಿಶ್ವೋತ್ತೀರ್ಣ ಸ್ಥಿತಿಯಿಂದ ಪರಿಪೂರ್ಣವಾಗಿವೆ. ಈ ಪರಾಶಕ್ತಿಯಿಂದ ಕೂಡಿದ ಪರಮಶಿವನು ಮೂರು ಬಗೆಯಾಗಿ ಪರ, ಪರಾಪರಾ, ಅಪರಾ ಎಂಬ ಭೇದಗಳಿಂದ ವಿಶ್ವಾತ್ಮಕವಾಗಿಯೂ ವಿಶ್ವೋತ್ತೀರ್ಣವಾಗಿಯೂ ವಿರಾಜಿಸುತ್ತಿದ್ದಾನೆ. ಇಲ್ಲಿ ಪರಾ ಎಂದರೆ ಪರಮಶಿವ. ಪರಾಪರಾ ಎಂದರೆ ಶಿವನಿಂದ ಶುದ್ಧವಿದ್ಯೆಯವರೆಗಿರುವ ಐದು ತತ್ತ್ವಗಳು. ಅಪರಾ ಎಂದರೆ ಕಲಾದಿ ಧರಣ್ಯಂತ ಇರುವ ೩೦ ತತ್ವಗಳು. ಇದನ್ನೇ ಅಭೇದ, ಭೇದಾಭೇದ, ಭೇದ ಎಂದು ಹೇಳುವುದು. ಎಲ್ಲಾ ತತ್ತ್ವಶಾಸ್ತ್ರಗಳಲ್ಲಿಯೂ ಈ ಮೂರುಬಗೆಯಾದ ಮನೋಭಾವಗಳು ಅಂತರ್ಭೂತವಾಗಿರುತ್ತವೆ.

> **ಅನನ್ಯಾಪೇಕ್ಷಿತಾ ಯಾಸ್ಯ ವಿಶ್ವಾತ್ಮತ್ವಂ ಪ್ರತಿ ಪ್ರಭೋಃ ।**
> **ತಾಂ ಪರಾಂ ಪ್ರತಿಭಾಂ ದೇವೀಂ ಸಂಗಿರಂತೆ ಹ್ಯನುತ್ತರಾಂ ॥**
> **ಅಕುಲಸ್ಯಾಸ್ಯ ದೇವಸ್ಯ ಕುಲಪ್ರಸವ ಶಾಲಿನೀ ।**
> **ಕೌಲಿಕೀ ಸಾ ಪರಾಶಕ್ತಿಃ ಅವಿಯುಕ್ತೋ ಯಯಾ ಪ್ರಭುಃ**
> **ತಯೋರ್ಯದ್ಯಾಮಲಂ ರೂಪಂ ಸಸಂಘಟ್ಟ ಇತಿಸ್ಮೃತಃ ।**
> **ಆನಂದ ಶಕ್ತಿಸ್ಸೈವೋಕ್ತಾ ಯತೋ ವಿಶ್ವಂ ವಿಸೃಜ್ಯತೆ ॥**

(ತಂತ್ರಾಲೋಕ. ಆನ್ಹಿಕ ೩, ಶ್ಲೋಕ ೬೬, ೬೭, ೬೮)

ಪರಮೇಶ್ವರಿಯಾದ ಪರಾವಾಕ್ ಶಕ್ತಿಯು ಪ್ರಸರಣ ಕ್ರಮದಲ್ಲಿ ಇಚ್ಛಾ ಜ್ಞಾನ ಕ್ರಿಯಾ ರೂಪವನ್ನಂಗೀಕರಿಸುತ್ತದೆ. ಅನಂತರ ಬೀಜ, ಯೋನಿ, ವರ್ಗ, ವರ್ಗ್ಯಾದಿ ರೂಪಗಳಿಂದ ಸ್ಫುರಿಸುತ್ತದೆ.

ಶಿವಶಕ್ತಿ ಮಾಹೇಶ್ವರ್ಯಾದಿ ವಾಚಕಗಳಾದ ಅಕಾರ ಮೊದಲು ಕ್ಷಕಾರದವರೆಗೂ ಇರುವ ಮಾತೃಕಾರೂಪವನ್ನಂಗೀಕರಿಸುತ್ತದೆ. ಇದರಿಂದ ಎಲ್ಲಾ ಪ್ರಮಾತೃಗಳಲ್ಲಿಯೂ ಅವಿಕಲ್ಪವಾದ ಮತ್ತು ಸವಿಕಲ್ಪವಾದ ಆಯಾಯ ತಿಳಿವಳಿಕೆಯ ಅನುಭವಗಳನ್ನುಂಟು ಮಾಡುತ್ತದೆ. ಅಂತಃ ವ್ಯಾಪಿಸಿ ಪರಾಮರ್ಶರೂಪವಾಗಿದ್ದು ಸ್ಥೂಲವಾದ ಮತ್ತು

ಸೂಕ್ಷ್ಮವಾದ ಶಬ್ದವನ್ನು ಹೊರಹೊಮ್ಮಿಸುತ್ತಾ ವರ್ಗ ಮತ್ತು ವರ್ಗ್ಯ ಈ ಅಕ್ಷರಗಳ ದ್ವಾರಾವಿಸ್ಮಯ, ಹರ್ಷ, ಭಯ, ರಾಗದ್ವೇಷ ಮೊದಲಾದ ಭಾವಗಳನ್ನು ಹುಟ್ಟಿಸುತ್ತಾ ಅಸಂಕುಚಿತವಾದ ಸ್ವತಂತ್ರವಾದ ಚಿದ್ಘನಾತ್ಮಕವಾದ ತನ್ನ ರೂಪವನ್ನು ಮರೆಸಿಕೊಂಡಿರುತ್ತದೆ. ಸಂಕುಚಿತವಾದ ಪರಾಧೀನವಾದ ದೇಹ ಪ್ರಾಣಾದಿಗಳಲ್ಲಿ ಮಮಕಾರವನ್ನು ಹುಟ್ಟಿಸುತ್ತದೆ. ಮಾಯಾಪದದಲ್ಲಿ ಇದು ಪರಾಶಕ್ತಿಯವಿಲಾಸ.

ವಿಕಲ್ಪಗಳನ್ನು ಸಂಸ್ಕರಿಸುವಾಗ ಇನ್ನೊಂದು ವಿಕಲ್ಪವನ್ನು ಉಪಯೋಗಿಸಿ ಸಂಸ್ಕರಿಸುವುದು ಒಂದು ಬಗೆ. ಅಂದರೆ ಕೆಲವರಿಗೆ ಬೇರೊಂದು ಉಪಾಯದಿಂದ ವಿಕಲ್ಪ ಸಂಸ್ಕರಣವಾಗಬೇಕು. ಕೆಲವರಿಗೆ ಉಪಾಯದ ಅಪೇಕ್ಷೆಯಿಲ್ಲದೆ ಇರುವುದರಿಂದ ವಿಕಲ್ಪಗಳು ಸ್ಥಿರವಾಗಿ ನಿಲ್ಲುತ್ತವೆ.

ವಿಕಲ್ಪಃ ಕಸ್ಯಚಿತ್ಸ್ವಾತ್ಮ ಸ್ವಾತಂತ್ರ್ಯಾದೇವ ಸುಸ್ಥಿರಃ ।
ಉಪಾಯಾಂತರ ಸಾಪೇಕ್ಷ ವಿಯೋಗೇನೈವ ಜಾಯತೇ ॥
ಕಸ್ಯಚಿತ್ತು ವಿಕಲ್ಪೋsಸೌ ಸ್ವಾತ್ಮಸಂಸ್ಕರಣಂ ಪ್ರತಿ ।
ಉಪಾಯಾಂತರ ಸಾಪೇಕ್ಷಃ ತತ್ರೋಕ್ತಃ ಪೂರ್ವಕೋ ವಿಧಿಃ ॥

(ತಂತ್ರಾಲೋಕ, ಆಹ್ನಿಕ, ೫ ಶ್ಲೋಕ ೩-೪)

ಯಾವಾಗ ವಿಕಲ್ಪಸಂಸ್ಕಾರಗಳಿಗೆ ಉಪಾಯಗಳನ್ನು ಅಪೇಕ್ಷಿಸುತ್ತೇವೆಯೋ ಆಗ ಇನ್ನೊಂದು ವಿಕಲ್ಪವನ್ನು ನಾವು ಕೋರಿದಂತಾಯಿತು. ಈ ಸ್ಥಿತಿಯಲ್ಲಿ ಅಣುವಾಗಿರುವ ಈ ಬದ್ಧಾತ್ಮನು ತನಗಿರುವ ಬುದ್ಧಿ ದೇಹ ಪ್ರಾಣ ಮೊದಲಾದ ಕರಣಗಳನ್ನು ಉಪಾಯಗಳನ್ನಾಗಿ ಸ್ವೀಕರಿಸುತ್ತಾನೆ. ಅಣುವಾಗಿರುವ ಈ ಆತ್ಮನು ಪರಿಮಿತಿಗಳಾಗಿರುವ ಈ ಕರಣಗಳನ್ನು ಉಪಾಯಗಳಾಗಿ ಸ್ವೀಕರಿಸಿ **ಚಿತ್ತವಿಶ್ರಾಂತಿಯನ್ನು** ಸಾಧಿಸುವ ಕ್ರಮಕ್ಕೆ ಆಣವೋಪಾಯವೆಂದು ಹೆಸರು. ಇಲ್ಲಿ ಬುದ್ಧಿಯು ಧ್ಯಾನಾತ್ಮಕವಾಗಿದೆ. ಸ್ವಪ್ರಕಾಶವಾದ ಸರ್ವತತ್ತ್ವಾಂಶಭೂತವಾದ ಪರತತ್ತ್ವವನ್ನು ತನ್ನ ಹೃದಯದಲ್ಲಿ ಪ್ರಮಾತೃ ಪ್ರಮಾಣ ಪ್ರಮೇಯರೂಪದ ಸಂಪುಟಾತ್ಮಕವಾಗಿ ಧ್ಯಾನಮಾಡಬೇಕು. ಧ್ಯಾನಕ್ರಮದಲ್ಲಿ ಆ ಪರತತ್ತ್ವದಿಂದ ಚಕ್ಷುರಾದಿ ಇಂದ್ರಿಯಗಳ ಮೂಲಕ ಹೊರಹೊಮ್ಮಿ ಪ್ರಮೇಯರೂಪವಾಗಿ ಸೃಷ್ಟಿಯ ವಿಲಾಸವನ್ನನುಭವಿಸುತ್ತದೆ. ಅದೇ ಪ್ರಮೇಯಗಳೇ ಮರಳಿ ಚಿದ್ರೂಪನಾದ ಪರಮಾತ್ಮನಲ್ಲಿಯೇ ಲೀನವಾಗುತ್ತವೆ. ಅಷ್ಟಕ್ಕೇ ನಿಲ್ಲದೆ ಪರಶಿವನಲ್ಲಿ ಸೇರಿಹೋಗುತ್ತವೆ. ಈ ಬಗೆಯಾದ ಧ್ಯಾನದಿಂದ ಈ ವಿಶ್ವವೆಲ್ಲಾ ಸೃಷ್ಟಿಸ್ಥಿತಿ ಸಂಹಾರ ಕ್ರಮಗಳಿಂದ ಪ್ರಕಾಶಿಸುತ್ತಿದ್ದರೂ ಸಂವಿತ್ ಶಕ್ತಿಗಿಂತ ಬೇರೆಯಲ್ಲ ಎಂಬ ದೃಢವಾದ ಅಧ್ಯವಸಾಯವೇರ್ಪಡುತ್ತದೆ.

ಮೂರು ಉಪಾಯಗಳಲ್ಲಿ ಆಣವೋಪಾಯವು ವಿಸ್ತಾರವಾದುದು. ಈ ಕ್ರಮವು ಎಲ್ಲರಿಂದಲೂ ಅನುಸರಿಸಲು ಯೋಗ್ಯವಾಗಿದೆ. ಇದರ ಕೆಲವು ಹಂತಗಳು ಶಾಕ್ತೋಪಾಯವನ್ನು ಹೋಲುತ್ತವೆ. ಅನುಸರಿಸಬೇಕಾದ ಕ್ರಮಗಳಲ್ಲಿ ಸಾಧಕರು ಕ್ರಮಕ್ರಮವಾಗಿ

ಮುಂದುವರಿಯಬೇಕೆನ್ನುವುದು ಆಣವೋಪಾಯದ ನಿಶ್ಚಯ. ಇದರ ವೈಶಾಲ್ಯವನ್ನು ಗಮನಿಸಿ ೪೫ ಸೂತ್ರಗಳಿಂದ ಈ ಉನ್ಮೇಷವನ್ನು ರಚಿಸಿರುತ್ತಾರೆ.

ಜನನ ಮರಣಗಳು, ಸುಖ ದುಃಖಗಳು, ದೇಶಾಂತರ ಕಾಲಾಂತರಗಳಲ್ಲಿ ಸಂಚಾರ ಇವುಗಳು ಸರ್ವವ್ಯಾಪಿಯಾದವನಿಗಿರುವುದಿಲ್ಲ. ಅಣುವಾದವನಿಗೆ ಇರುತ್ತವೆ. ಸತ್ತ್ವ ರಜಸ್ತಮೋಗುಣಗಳ ಪ್ರಭಾವವುಳ್ಳ ದೇಹೇಂದ್ರಿಯಗಳಿಂದ ನಡೆಯುತ್ತವೆ. ಈ ಬಗೆಯ ಅನುಭವ ಮತ್ತು ತಿಳಿವಳಿಕೆಯೇ ಬಂಧ. ಬದ್ಧಜೀವಾತ್ಮನು ಯಾವ ಶರೀರ, ಪ್ರಾಣ, ಇಂದ್ರಿಯಗಳಿಂದ ಕೂಡಿರುವನೋ ಯಾವುಗಳ ಮೂಲಕ ಸುಖದುಃಖಗಳನ್ನನುಭವಿಸುವನೋ ಅವುಗಳ ಸ್ವರೂಪವೇ ಇವನಿಗೆ ತಿಳಿದಿರುವುದಿಲ್ಲ. ತನಗೂ ಅವುಗಳಿಗೂ ಭೇದವಿಲ್ಲವೆಂದು ತಿಳಿಯುತ್ತಾನೆ. ಇದನ್ನೇ ಅವಿವೇಕ, ಅಖ್ಯಾತಿ, ಬಂಧ ಎಂದು ಕರೆಯುತ್ತಾರೆ.

ಪಂಚಭೂತಾತ್ಮಕವಾದ ಶರೀರ ಪುರ್ಯಷ್ಟಕ ಸಮನಾಂತವಾದ ಸ್ಥೂಲ ಮತ್ತು ಸೂಕ್ಷ್ಮತತ್ತ್ವಗಳು, ಶಿವನಿಂದ ಭೂಮಿವರೆಗಿರುವ ತತ್ತ್ವಪುಂಜ ಇವುಗಳನ್ನೆಲ್ಲಾ ವಿಶದವಾಗಿ ತಿಳಿದುಕೊಳ್ಳಬೇಕು. ಒಂದು ಪದಾರ್ಥದಿಂದ ಇನ್ನೊಂದು ಪದಾರ್ಥ ಬೇರೆ ಎಂಬುದು ಎಲ್ಲರ ಅನುಭವದಲ್ಲಿಯೂ ಇದೆ. ತಿಳಿವಳಿಕೆ, ಗುರೂಪದೇಶ ಮತ್ತು ಮನನಗಳಿಂದ ಭೇದಾಭೇದಸ್ಥಿತಿಯು ಗೋಚರಿಸುತ್ತದೆ. ಪರಿಪಾಕದಿಂದ ಜ್ಞಾನವಿಕಾಸವಾದರೆ ಅಭೇದ ಸ್ಥಿತಿ ಅನುಭವಕ್ಕೆ ಬರುತ್ತದೆ. ಹೀಗೆ ಭುವನಾಧ್ವ, ತತ್ತ್ವಾಧ್ವ, ಕಲಾಧ್ವ ಮೊದಲಾದ ಅಧ್ವಗಳನ್ನು ಇವುಗಳಿಗೆ ಕಾರಣವಾಗಿರುವ ಚಿತ್ತತ್ತ್ವದಲ್ಲಿ ಲಯಮಾಡಿ ಧ್ಯಾನಮಾಡುವಿಕೆಯೇ ಈ ಬಂಧನದಿಂದ ಬಿಡುಗಡೆಯಾಗುವ ಉಪಾಯ. ಈ ಕ್ರಮಗಳು ನಾಡೀಸಂಹಾರ, ಭೂತಜಯ, ಭೂತಕೈವಲ್ಯ, ಭೂತಪೃಥಕ್ತ್ವ, ಸಿದ್ಧಿಗಳನ್ನು ಕೊಡುತ್ತವೆ. ಇವುಗಳನ್ನೇ ಬೇರೆ ಸಂಪ್ರದಾಯದಲ್ಲಿ ಪ್ರಾಣಾಯಾಮ ಧಾರಣ, ಪ್ರತ್ಯಾಹಾರ, ಸಮಾಧಿಗಳೆಂದು ಕರೆಯುತ್ತಾರೆ. ಈ ಅಭ್ಯಾಸಗಳಿಂದ ಆಯಾ ತತ್ತ್ವಗಳನ್ನು ವಿಶದವಾಗಿ ಅನುಭವಿಸುವ ಶಕ್ತಿಯುಂಟಾಗುತ್ತದೆ. ಇಷ್ಟೇ ಈ ಸಿದ್ಧಿಗಳ ಫಲ. ಇಷ್ಟು ಮಾತ್ರದಿಂದಲೇ ಪರತತ್ತ್ವ ಸಮಾವೇಶವುಂಟಾಗುವುದಿಲ್ಲ. ಅಜ್ಞಾನವನ್ನು ಬದಿಗಿಟ್ಟು ಈ ಸಿದ್ಧಿಗಳಿಗಿಂತ ಮೇಲಿರುವ ಅನಂತವಾದ ಎಲ್ಲಾ ಸಂಸ್ಕಾರಗಳನ್ನೂ ಕೊನೆಗಾಣಿಸುವ ಸಹಜವಿದ್ಯೆಯನ್ನು ಸಾಧಿಸಬೇಕು. ಈ ಹಂತದಲ್ಲಿ ಶಾಕ್ತೋಪಾಯವೂ ಇದೂ ಒಂದೇ ಆಗಿರುತ್ತದೆ.

ಸಹಜವಿದ್ಯಾ, ಶುದ್ಧವಿದ್ಯಾ ಈ ಎರಡು ಪದಗಳೂ ಒಂದೇ ಅರ್ಥವನ್ನು ಕೊಡುತ್ತವೆ. ಈ ವಿಶ್ವವೆಲ್ಲಾ ಪರತತ್ತ್ವದ ಶಕ್ತಿಸ್ವರೂಪವಾಗಿದೆ. ಶಕ್ತಿಯುಳ್ಳವನು ಮಹೇಶ್ವರ. ಶಿವಶಕ್ತಿಯರು ಅಭಿನ್ನ ಎನ್ನುವುದು ಇಲ್ಲಿನ ತತ್ತ್ವಸ್ಥಿತಿ. ಸಹಜ ವಿದ್ಯೋಪಲಬ್ಧಿಯಾಗಿರುವ ಸಾಧಕನು ಈ ವಿಶ್ವವನ್ನೆಲ್ಲಾ ದೀಪಪ್ರಭಾನ್ಯಾಯದಂತೆ ತನ್ನ ಕಾಂತಿಯೆಂದು ತಿಳಿಯುವನು. ಅಂದರೆ ಸ್ವರೂಪ ವಿಮರ್ಶನೆಯು ಪ್ರಧಾನವಾಗಿ ‘ ಇದಂತಾ ’ ವಿಮರ್ಶನೆಯು ಅಭೇದವ್ಯಾಪ್ತಿಯಿಂದ ಕೂಡಿದೆ ಎಂದು ತಾತ್ಪರ್ಯ. ‘ಅಹಂತಾ’

ವಿಮರ್ಶನೆಯು ಜ್ವಾಲೆಯಂತಿರಲಾಗಿ ಇದಂತಾ ವಿಮರ್ಶನೆಯು ಬೆಳಕಿನಂತೆ ಅಭೇದವ್ಯಾಪ್ತಿಯುಳ್ಳದ್ದಾಗಿರುತ್ತದೆ. ಸ್ವಸ್ವರೂಪ ವಿಮರ್ಶನೆಯನ್ನೇ ಪ್ರಧಾನವಾಗಿಟ್ಟುಕೊಂಡಿರುವ ಸಾಧಕನು, ನಟನು ಬೇರೆ ಬೇರೆ ಭಾವಗಳನ್ನು ಅಭಿನಯಿಸುವಂತೆ, ಎಲ್ಲಾ ಭೇದ ವ್ಯವಹಾರಗಳನ್ನೂ ನಿರ್ವಹಿಸುತ್ತಾನೆ. ಇವನಿಗೆ ಸಂಕೋಚವಾದ ಅವಭಾಸವುಳ್ಳ ಸ್ಥಿತಿಯೇ ರಂಗಭೂಮಿ. ಇದೇ ಬದ್ಧಜೀವಸ್ಥಿತಿ. ಇಂದ್ರಿಯಗಳೇ ಪ್ರೇಕ್ಷಕರು, ತತ್ತ್ವ ಜ್ಞಾನವೇ ತಿಳಿವಳಿಕೆ. ಇಲ್ಲಿ ತನ್ನ ಕರಣಗಳ ಪರಿಸ್ಪಂದದಿಂದ ವ್ಯವಹಾರ ರೂಪವಾಗಿರುವ ಜಗನ್ನಾಟ್ಯವನ್ನಾಡುತ್ತಾನೆ. ಹೀಗೆ ಇವನು ಜೀವಭಾವದಿಂದ ನಟನಾಗಿರುತ್ತಾನೆ. ಸಹಜ ವಿದ್ಯೋಪಲಬ್ಧಿಯಿಂದ ಅಭೇದವ್ಯಾಪ್ತಿಯನ್ನು ಪಡೆದಿರುತ್ತಾನೆ. ಜ್ಞಾನವಿಕಾಸದಿಂದ ಸ್ವತಂತ್ರನಾಗಿರುತ್ತಾನೆ. ಹೀಗಿದ್ದರೂ ಸರ್ವದಾ ವಿಶ್ವಕ್ಕೆ ಕಾರಣವಾಗಿ ಸ್ಫುರತ್ತಾತ್ಮಕವಾಗಿರುವ ಪರಾಶಕ್ತಿಯನ್ನು ಧ್ಯಾನಿಸುತ್ತಲಿರಬೇಕು. ಶಾಕ್ತ ಬಲಸ್ಪರ್ಶದಿಂದ ಆನಂದವನ್ನನುಭವಿಸುತ್ತಾನೆ. ಇದರಿಂದ ಶೈವದಶೆಯು ಪರಿಪೂರ್ಣವಾಗಿ ಅನುಭವಕ್ಕೆ ಬರುತ್ತದೆ.

ಈ ಸಹಜ ವಿದ್ಯಾವಿಮರ್ಶನವು ಮಲಿನವಾಗದಿದ್ದರೆ ಪುನರ್ಜನ್ಮವಿಲ್ಲ. ಒಂದುವೇಳೆ ಈ ಸಹಜ ವಿದ್ಯಾಸಂಧಾನವು ತಪ್ಪಿದಲ್ಲಿ ಇವನು ಬಂಧನಕ್ಕೊಳಗಾಗುವನು. ಆಗ ಪಾರಮೇಶ್ವರಿಯಾದ ಪರಾಶಕ್ತಿಯು ಮೊದಲು ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳನ್ನಂಗೀಕರಿಸುತ್ತದೆ. ಸ್ವರ, ವ್ಯಂಜನ, ವರ್ಗ, ಅವರ್ಗೀಯ ಮೊದಲಾದ ಭೇದಗಳನ್ನು ಪಡೆಯುತ್ತದೆ. ಅಕಾರಾದಿ ಕ್ಷಕಾರಾಂತವಾದ ಮಾತೃಕಾರೂಪದಿಂದ ಈ ಶಕ್ತಿಯು ಅವಿಕಲ್ಪಕ, ಸವಿಕಲ್ಪಕ ವೃತ್ತಿಗಳನ್ನುಂಟುಮಾಡುತ್ತದೆ. ಪರಾಮರ್ಶರೂಪವಾದ ಅಭೇದ ವೃತ್ತಿಯನ್ನು ಮುಚ್ಚುತ್ತದೆ. ರಾಗದ್ವೇಷಾದಿಗಳನ್ನು ಅಭಿವೃದ್ಧಿಪಡಿಸುತ್ತದೆ. ಆದುದರಿಂದ ಸಾಧಕನು ಸಿದ್ಧನಾದರೂ ಕೂಡ ಸದಾ ಶುದ್ಧವಿದ್ಯಾನುಸಂಧಾನದಲ್ಲಿ ಎಚ್ಚರದಿಂದ ಇರಬೇಕು. ಹೇಗೆಂದರೆ ಜಾಗ್ರತ್ ಸ್ವಪ್ನ ಸುಷುಪ್ತ್ಯವಸ್ಥೆಗಳಲ್ಲಿ ತುರೀಯ ಸ್ಥಿತಿಯನ್ನು ನೀರಿನಲ್ಲಿ ಎಣ್ಣೆಯು ಹರಡುವಂತೆ ಮನನಮಾಡಬೇಕು. ರೇಚಕ ಪೂರಕಾದಿ ಸ್ಥೂಲೋಪಾಯಗಳನ್ನು ಅತಿಕ್ರಮಿಸಿ ಪರತತ್ತ್ವ ವಿಮರ್ಶನೆಯಲ್ಲಿಯೇ ಮಗ್ನನಾಗಬೇಕು. ಬಾಹ್ಯ ಮತ್ತು ಆಂತರ್ಯವಾದ ಭೇದವೃತ್ತಿಗಳಲ್ಲಿ ಸಮದೃಷ್ಟಿಯನ್ನಿಡಬೇಕು.

ತುರೀಯಾವಸ್ಥೆಯನ್ನು ಅವಲಂಬಿಸಿಕೊಂಡು ತುರೀಯಾತೀತವಾದ ಸ್ಥಿತಿಯನ್ನು ಪಡೆಯಬೇಕಾಗಿದ್ದರೂ ವಾಸನಾಬಲದಿಂದ ಮಧ್ಯಕಾಲದಲ್ಲಿ ಭೇದವೃತ್ತಿಗಳುಂಟಾಗುತ್ತಿರುತ್ತವೆ. ಆ ಭೇದವೃತ್ತಿಗಳನ್ನೂ ಕೂಡ ಅಭೇದ ವ್ಯಾಪ್ತಿಯುಳ್ಳ ತುರೀಯ ಸ್ಥಿತಿಯಿಂದ ಅಳಿಯಬೇಕು. ಆಗ ಇವನು ಶಿವತುಲ್ಯನಾಗುತ್ತಾನೆ. ಶರೀರ ವಿಯೋಗವಾದರೆ ಶಿವನೇ ಆಗುತ್ತಾನೆ. ಶರೀರವಿರುವವರೆಗೂ ಸ್ವರೂಪಾನುಸಂಧಾನವನ್ನು ವ್ರತದಂತೆ ಆಚರಿಸಬೇಕು. ಆಗ ಇವನು ಮಾತನಾಡುವುದೆಲ್ಲಾ ಜಪ, ಕೊಡುವುದೆಲ್ಲಾ ಆತ್ಮ ಜ್ಞಾನ. ಇವನು ತನ್ನ ಪ್ರಭಾವದಿಂದ ಇತರರಿಗೆ ಜ್ಞಾನವಿಕಾಸವನ್ನುಂಟುಮಾಡುತ್ತಾನೆ. ಇವನಿಗೆ ವಿಶ್ವವೆಲ್ಲಾ ತನ್ನ ಶಕ್ತಿಯ ವಿಲಾಸವೆಂದು ತೋರುತ್ತದೆ. ಸೃಷ್ಟಿ ಸ್ಥಿತಿ

ಲಯಗಳು ಉನ್ಮೇಷ ನಿಮೇಷಗಳೆಂದು ತೋರುತ್ತವೆ. ತುರೀಯ ಚಮತ್ಕಾರಾನು ಸಂಧಾನದಿಂದ ಇವನು ಪ್ರವೃತ್ತಿ ನಿವೃತ್ತಿಗಳನ್ನು ನಿರಾಕರಿಸುವುದಿಲ್ಲ.

ಸಾಧಕನು **ಪೂರ್ಣಾಹಂತಾ ವಿಮರ್ಶನೆ**ಯಿಂದ ಸುಖದುಃಖಗಳನ್ನು ತನ್ನಿಂದ ಬೇರೆಯಾಗಿರುವವುಗಳೆಂದು ತಿಳಿಯುತ್ತಾನೆ. ಈ ನಿರ್ಲಿಪ್ತತೆಯಿಂದ ಇವನು ಕೇವಲಿ ಯಾಗಿರುವನು. ಹಾಗಲ್ಲದೆ ಮೋಹದಿಂದ ಕೂಡಿದ್ದರೆ ಕರ್ಮಾತ್ಮನಾಗುವನು. ಇದಕ್ಕೆ ವಿರುದ್ಧವಾಗಿ ಸಕಲ ಪ್ರಳಯಾಕಲಾದಿ ಸ್ಥಿತಿಗಳನ್ನು ಅತಿಕ್ರಮಿಸಿ ಶುದ್ಧವಿದ್ಯಾ ಪ್ರಮಾತೃತ್ವವನ್ನು ಪಡೆದಿರುತ್ತಾರೆ. ಇವನಿಗೆ ಹೊಸದಾಗಿ ಸೃಷ್ಟಿಮಾಡುವ ಶಕ್ತಿಯುಂಟು. ವಿಶ್ವದ ಸೃಷ್ಟಿ ಸ್ಥಿತಿಲಯಗಳಲ್ಲಿ ಆನಂದವನ್ನನುಭವಿಸುವನು. ತನ್ನ ಮನಸ್ಸಿಗೆ ತೋಚಿ ದಂತೆ ಶರೀರ ಮತ್ತು ಇಂದ್ರಿಯಗಳನ್ನು ನಡೆಸಬಲ್ಲನು. ಸಂಕುಚಿತ ಜೀವಭಾವವು ಅಳಿಯುವುದು. ಭೌತಿಕಶರೀರವಿದ್ದರೂ ಶಿವನಿಗೆ ಸಮಾನನಾಗಿರುವನು. ಇವನ ಸ್ವಾತಂತ್ರ್ಯದಿಂದಲೇ ಸ್ವಾಭಾವಿಕವಾಗಿ ಪ್ರಾಣಾದಿಶಕ್ತಿಗಳ ಸಂಬಂಧವನ್ನಿಟ್ಟುಕೊಂಡಿರು ತ್ತಾನೆ. ಇವನಿಗೆ ಬೇರೆ ಸಾಧನಗಳ ಆವಶ್ಯಕತೆ ಇಲ್ಲ. ವಿಶೇಷವಾಗಿ **ಚೈತನ್ಯ ವಿಮರ್ಶನೆ**ಯೇ ಇವನ ಮುಖ್ಯ ವೃತ್ತಿ.

ಈ ಮೂರನೇ ಉನ್ಮೇಷದಲ್ಲಿ ಬದ್ಧಾತ್ಮನ ಆಣವ ಸ್ಥಿತಿ, ಬಂಧ, ಮಾಯಾ ಮತ್ತು ಮೋಹಾವರಣಗಳ ವಿವರಣೆ, ಸಹಜವಿದ್ಯಾಜಯಗಳು ವಿವರಿಸಲ್ಪಟ್ಟಿವೆ. ಜೀವಾತ್ಮನ ನಿರ್ಲಿಪ್ತತೆ, ಇಂದ್ರಿಯಗಳಿಗೂ ಇವನಿಗೂ ಇರುವ ಸಂಬಂಧ, ಸ್ವತಂತ್ರ ಭಾವಗಳು ನಿರೂಪಿಸಲ್ಪಟ್ಟಿವೆ. ಸಮಾಧಿಸ್ಥಿತಿ, ಪುನರ್ಜನ್ಮವಿಲ್ಲದಿರುವಿಕೆ ಎಂಬ ವಿಷಯ ಗಳು ಚರ್ಚಿಸಲ್ಪಟ್ಟಿವೆ. ಅಕ್ಷರಗಳಿಂದುಂಟಾಗುವ ಬಂಧ, ಅವುಗಳಿಗೆ ವಿರುದ್ಧವಾಗಿರುವ ತುರೀಯಾವಸ್ಥೆಯ ವಿವೇಚನೆಯು ವರ್ಣಿಸಲ್ಪಟ್ಟಿದೆ. ಬಂಧವು ಕಳೆಯದಿರುವಾಗ ಸಾಧಕನಿಗಿರುವ ಮಧ್ಯಾವಸ್ಥೆಯನ್ನು ವರ್ಣಿಸುತ್ತಾ ಸಿದ್ಧಾವಸ್ಥೆಯಲ್ಲಿ ಶಿವತುಲ್ಯನೆಂದು ನಿರೂಪಿಸಿದೆ. ಈ ಸಿದ್ಧಪುರುಷನು ಬದುಕಿರುವವರೆಗೂ ಇವನ ಸಾನ್ನಿಧ್ಯದಿಂದ ಲೋಕಕ್ಕೆ ಆಗುವ ಉಪಕಾರವು ಅಪಾರವಾದುದು. ಇವನ ಭಾವನಾಪ್ರಕರ್ಷವು ವಿಚಿತ್ರವಾದುದು. ಭೂತಕಂಚುಕಿಯಾಗಿದ್ದರೂ ಭೂತಪತಿಗೆ ಸಮನಾಗಿರುವನು. ಹೀಗಿದ್ದರೂ ಪ್ರಾಣ ಶಕ್ತಿಯ ಸಂಬಂಧವು ಸ್ವಾಭಾವಿಕವಾಗಿ ಇದ್ದೇ ಇರುತ್ತದೆ. ಅದರ ವಿಯೋಗವು ಸಕಾಲ ದಲ್ಲಿ ಏರ್ಪಡುತ್ತದೆ ಎಂಬ ವಿಷಯಗಳು ಸೂಕ್ಷ್ಮವಾಗಿಯೂ, ವಿಸ್ತಾರವಾಗಿಯೂ ನಿರೂಪಿಸಲ್ಪಟ್ಟಿವೆ.

ಮನಸ್ಸು ಮತ್ತು ಬುದ್ಧಿಗಳ ವ್ಯಾಪಾರಗಳ ಆವಶ್ಯಕತೆಯಿಲ್ಲದೆ ಚಿತ್ತತ್ತ್ವದ ಶಕ್ತಿ ಗಳಾಗಿರುವ ಇಚ್ಛಾಜ್ಞಾನ ಕ್ರಿಯಾಶಕ್ತಿಗಳಲ್ಲಿ ಇಚ್ಛಾಶಕ್ತಿಯಿಂದ ಸ್ವಸ್ವರೂಪವನ್ನು ಗುರುತಿಸುವಂತಹ ಶಾಂಭವೋಪಾಯವನ್ನು ಇಚ್ಛೋಪಾಯವೆಂದೂ, ಅಭೇದೋಪಾಯ ವೆಂದೂ ಕರೆಯುವರು. ಮನಸ್ಸಿನ ವಿಕಲ್ಪಗಳನ್ನು ವಿಮರ್ಶಿಸುತ್ತಾ ಇವುಗಳಿಗೆ ಕಾರಣ ವಾಗಿರುವ ಅಕ್ಷರ ಸಮಾಮ್ನಾಯವನ್ನೇ ಶಕ್ತಿಸ್ವರೂಪಗಳಾಗಿಯೂ, ವಿಶ್ವಸ್ವರೂಪ ವಾಗಿಯೂ ಅನುಸಂಧಾನಮಾಡುತ್ತಾ ಸಮಾವೇಶವನ್ನು ಸಂಪಾದಿಸುವ ಚಿತ್ತಸಂಬೋಧೆ

ರೂಪವಾದ ಶಾಕ್ತೋಪಾಯವನ್ನು ಭೇದಾಭೇದೋಪಾಯವೆಂದೂ, ಜ್ಞಾನೋಪಾಯ ವೆಂದೂ ಹೇಳುವರು. ಶರೀರ, ಇಂದ್ರಿಯಗಳು, ಮನಸ್ಸು, ಪ್ರಾಣಶಕ್ತಿ, ಬುದ್ಧಿ, ಇವುಗಳನ್ನೆಲ್ಲಾ ಉಪಯೋಗಿಸಿಕೊಂಡು ಜಪ, ಧ್ಯಾನ ಮೊದಲಾದುವುಗಳಿಂದಲೂ, ತತ್ತ್ವಜ್ಞಾನದ ಅನುಸಂಧಾನದಿಂದಲೂ ಚಿತ್ತವಿಶ್ರಾಂತಿಯನ್ನು ಸಾಧಿಸುವುದರ ಮೂಲಕ ಶಿವಸಮಾವೇಶವನ್ನು ಸಂಪಾದಿಸುವ ಕ್ರಮವನ್ನು ಆಣವೋಪಾಯವೆಂದೂ, ಭೇದೋ ಪಾಯವೆಂದೂ ವ್ಯವಹರಿಸುತ್ತಾರೆ.

ಎಲ್ಲಾ ಪೂರ್ವಾಪರಜ್ಞಾನಕ್ಕೆ ಕಾರಣವಾಗಿರುವುದು ಚಿತ್ತು. ಇದರ ಸ್ವಭಾವ ಬದಲಾವಣೆ ಆಗುವವರೆಗೂ ಸ್ವರೂಪ ವಿಕಾಸಕ್ಕವಕಾಶವಿಲ್ಲ. ಮೊದಲನೆಯದಾದ ಶಾಂಭವೋಪಾಯವು **ಚಿತ್ತಪ್ರಳಯ** ರೂಪವಾಗಿದೆ. ಈ ಉಪಾಯನಿಷ್ಠನು ತನ್ನ ಇಚ್ಛಾಶಕ್ತಿಯಿಂದ ಅನುಸಂಧಾನಮಾಡುತ್ತಾ ಹೋದರೆ ಈ ೩೬ ತತ್ತ್ವರೂಪವಾಗಿರುವ ವಿಶ್ವವೆಲ್ಲಾ ತನ್ನಿಂದಲೇ ಹೊರಹೊಮ್ಮಿದೆ, ತನ್ನಲ್ಲಿಯೇ ಪ್ರತಿಫಲಿಸಿದೆ, ತನ್ನಿಂದ ಬೇರೆಯಲ್ಲವೆಂಬ ವಿರಾಡ್ಭಾವನೆಯುಂಟಾಗುತ್ತದೆ. ಎರಡನೆಯದು ಶಾಕ್ತೋಪಾಯ. ಮನಸ್ಸಿನಲ್ಲುಂಟಾಗುವ ಬಗೆಬಗೆಯಾದ ವಿಕಲ್ಪಗಳೆಲ್ಲಾ ಭೇದಜ್ಞಾನದಿಂದುಂಟಾದವು ಗಳು. ದೇಶಕಾಲ ಆಕಾರಗಳಿಗೆ ಒಳಪಟ್ಟಿರುವುದೆಲ್ಲಾ ವಿಕಲ್ಪವೆಂದೂ, ಅದಿಲ್ಲದ ಸ್ಥಿತಿಯು ನಿರ್ವಿಕಲ್ಪವೆಂದೂ ಹೇಳುತ್ತಾರೆ. ಈ ವಿಕಲ್ಪ ಪ್ರವಾಹದಿಂದಲೇ ಶಕ್ತಿ ಸಂಕೋಚ–ಬದ್ಧಾವಸ್ಥೆ. ಸತ್ತರ್ಕ, ಸದಾಗಮ, ಸದ್ಗುರೂಪದೇಶದಿಂದ ವಿಕಲ್ಪಗಳನ್ನು ಸಂಸ್ಕರಿಸಬೇಕು. ಪ್ರತ್ಯಾಹಾರ ಧಾರಣ ಧ್ಯಾನಗಳಿಂದ ಜ್ಯೋತಿಸ್ಸ್ವರೂಪವನ್ನು ವಿಮರ್ಶಿಸ ಬೇಕು. ಆಗ ಪೂರ್ಣಾಹಂಭಾವವುಂಟಾಗುತ್ತದೆ. ಹಾಗೆಯೇ ಅಭೇದದೃಷ್ಟಿಯಿಂದ ನಿರ್ವಿಕಲ್ಪ ಭೂಮಿಯನ್ನು ಸಾಧಿಸಬೇಕು. ಈ ರೀತಿಯ **ಚಿತ್ತಸಂಸ್ಕಾರವೇ** ಶಾಕ್ತೋಪಾಯ. ಇನ್ನು ಮೂರನೆಯದು ಆಣವೋಪಾಯ. ಯಾವ ಬುದ್ಧಿ, ದೇಹ, ಪ್ರಾಣ ಮೊದಲಾದ ಕರಣಗಳಿಂದ ಜೀವಾತ್ಮನು ಬದ್ಧನಾಗಿದ್ದಾನೋ ಆ ಕರಣಗಳನ್ನೆ ಉಪಯೋಗಿಸಿಕೊಂಡು ಚಿತ್ತವಿಶ್ರಾಂತಿಯನ್ನು ಸಾಧಿಸಬೇಕು. ಸ್ವಪ್ರಕಾಶವಾದ ಸರ್ವ ತತ್ತ್ವಾಂತರ್ಭೂತವಾದ ಪರತತ್ತ್ವವನ್ನು ಹೃದಯದಲ್ಲಿ ಧ್ಯಾನಮಾಡುತ್ತಾ ಪರಮಾತ್ಮ ನಲ್ಲಿ ಲೀನವಾಗುವುದೇ ಈ ಸಾಧನದ ಫಲ. ಇದು ಅಷ್ಟಾಂಗ ಯೋಗಸಾಧನೆಗಳಿಗಿಂತ ಬೇರೆಯಾದುದಲ್ಲ. **ಚಿತ್ತವಿಶ್ರಾಂತಿ**ಯನ್ನು ಸಾಧಿಸುವ ಕ್ರಮವೇ ಆಣವೋಪಾಯ.

ಷಡಧ್ವಗಳು

ಸಾಧಕನು ಈ ವಿಶ್ವವನ್ನು ಅನುಭವಾರೂಢವಾಗಿ ವಿಮರ್ಶಿಸುವ ಕ್ರಮಕ್ಕೆ 'ಷಡಧ್ವ' ಭಾವನೆಗಳನ್ನು ಉಪಯೋಗಿಸುತ್ತಾನೆ. ಅಧ್ವಾ ಎಂದರೆ ಮಾರ್ಗ ಅಥವಾ ದಾರಿ. ವಿಮರ್ಶೆಮಾಡಿ ಅನುಸಂಧಾನ ಮಾಡುವವನು ಈ ಆರು ಮಾರ್ಗಗಳನ್ನು ಅಸಂಕೀರ್ಣವಾಗಿ (ಬೇರೆ ಬೇರೆಯಾಗಿ) ಪರಿಶೀಲಿಸಬೇಕು. ಹಾಗೆಯೇ ಈ ಆರು ದಾರಿ ಗಳು ಎಲ್ಲಿಂದ ಹೊರಡುತ್ತವೆ, ಎಲ್ಲಿಗೆ ಸೇರುತ್ತವೆ, ಯಾವರೀತಿ ಒಂದನ್ನೊಂದು ಸೇರಿವೆ

ಎಂಬ ವಿಷಯವನ್ನು ತಿಳಿಯಬೇಕು. ಈ ಷಡಧ್ವಗಳನ್ನು ಮಂತ್ರಾಧ್ವ, ವರ್ಣಾಧ್ವ, ಪದಾಧ್ವ, ಕಲಾಧ್ವ, ತತ್ತ್ವಾಧ್ವ, ಭುವನಾಧ್ವ ಎಂದು ಕರೆಯುತ್ತಾರೆ.

ಈ ಷಡಧ್ವಗಳು ಎರಡು ವಿಭಾಗವುಳ್ಳವುಗಳಾಗಿವೆ. ವಾಚಕ ವಿಭಾಗದಿಂದ ಮಂತ್ರ, ವರ್ಣ, ಪದ ಎಂಬ ಮೂರು ಬಗೆಯಾಗಿಯೂ ವಾಚ್ಯರೂಪವಾಗಿ ಕಲಾ, ತತ್ತ್ವ, ಭುವನಾ ಎಂಬ ಮೂರು ಬಗೆಯಾಗಿಯೂ ಇವೆ. ಇಲ್ಲಿ ಕಲಾ ಅಂದರೆ ತತ್ತ್ವಗಳಲ್ಲಿ ಸೇರಿಕೊಂಡಿರುವ ಶಕ್ತಿ. ತತ್ತ್ವ ಅಂದರೆ ೩೬ ತತ್ತ್ವಗಳು. ಭುವನಗಳು ಅಂದರೆ ಭೂಲೋಕ ಮೊದಲ್ಗೊಂಡು ಅಸಂಖ್ಯಾತವಾದ ಲೋಕಗಳು. ಶಿವನ ಕ್ರಿಯಾಶಕ್ತಿಯು ಈ ವಿಶ್ವರೂಪವನ್ನು ನಿರೂಪಿಸುವಾಗ ಮೊದಲು ಪ್ರಾಣಶಕ್ತಿಯಾಯಿತು. ಅನಂತರ ಕಾಲ, ಕಲಾ, ಭುವನಾ ಮೊದಲಾದ ರೂಪಗಳನ್ನು ಪಡೆಯಿತು. ಈ ಎಲ್ಲಾ ಅಧ್ವ ಸ್ವರೂಪ ವಿಮರ್ಶನೆಯು ಸಾಧಕನು ತನ್ನಲ್ಲಿ ಆರೋಪಿಸಿಕೊಳ್ಳುವುದಕ್ಕೆ ಸಹಕಾರಿಯಾಗಿರುತ್ತದೆ. ಈ ವಿಶ್ವವೆಲ್ಲಾ ತನ್ನ ಶರೀರದಲ್ಲಿದೆಯೆಂದು ಭಾವಿಸಿ ಶರೀರವನ್ನು ಪ್ರಾಣಶಕ್ತಿಯಲ್ಲೂ ಪ್ರಾಣಶಕ್ತಿಯನ್ನು 'ಧೀ' ಶಕ್ತಿಯಲ್ಲಿಯೂ ಆ ಬುದ್ಧಿಯನ್ನು 'ಶೂನ್ಯ'ದಲ್ಲಿಯೂ ಆ ಶೂನ್ಯತತ್ತ್ವವನ್ನು ಚಿತ್ತಿನಲ್ಲಿಯೂ ವಿಲಾಪನ ಮಾಡುವಂತೆ ಅನುಸಂಧಾನ ಮಾಡಬೇಕು. ಈ ಆರೋಹಣ ಕ್ರಮವು ಅನುಭವಕ್ಕೆ ಬಂದರೆ ಆಗ ನಿರ್ಭರ ಪರಿಪೂರ್ಣ ಸಂವಿದ್ರೂಪಿಯಾದ ಷಟ್ತ್ರಿಂಶ ತತ್ತ್ವಸ್ವರೂಪಿಯಾಗುತ್ತಾನೆ. ಈ ತತ್ತ್ವಗಳಿಂದ ಆಚೆ ಇರುವ ಚಿದಾನಂದ ಘನವಾದ ಪರಮ ಶಿವರೂಪವನ್ನು ಅನುಸಂಧಾನ ಮಾಡುತ್ತಾ ಆ ಪರಮಶಿವನೇ ವಿಶ್ವಮಯನಾಗಿರುವನೆಂದು ತಿಳಿಯುತ್ತಾನೆ.

ತಂ ಸಮಸ್ತಂ ಅಧ್ವಾನಂ ದೇಹೆ ವಿಲಾಪ್ಯ ದೇಹಂಚಪ್ರಾಣೆ
ತಂ ಧಿಯಿ ತಾಂ ಶೂನ್ಯೆ ತತ್ ಸಂವೇದನೆ ನಿರ್ಭರ ಪರಿಪೂರ್ಣ
ಸಂವಿತ್ ಸಂಪದ್ಯತೆ ಷಟ್ತ್ರಿಂಶತ್ತತ್ತ್ವಸ್ವರೂಪಜ್ಞಃ ತದುತ್ತೀ
ರ್ಣಾಂ ಸವಿದಂ ಪರಮ ಶಿವರೂಪಾಂ ಪಶ್ಯೇ ವಿಶ್ವ
ಮಯಿಮಾಮಪಿ ಸಂವೇದಯೇತ ಅಧ್ವಾ ಸಮಸ್ತ
ಏವಾಯಂ ಚಿನ್ಮಾತ್ರೆ ಸಂ ವ್ಯವಸ್ಥಿತಃ ಯತ್ರತ್ರ
ನಹಿ ವಿಶ್ರಾಂತಂ ತನ್ನಭಕುಸುಮಾಯತೆ


(ತಂತ್ರಸಾರ, ಅಹ್ನಿಕ ೭)

ಪರಮೇಶ್ವರನ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಎಂಬ ಶಕ್ತಿಗಳು ಸ್ವಾಭಾವಿಕವಾಗಿ ಅಸಂಕುಚಿತಗಳಾಗಿರತಕ್ಕವುಗಳಾದರೂ ಸಂಕೋಚ ಗ್ರಹಣದಿಂದ ಕಲಾ, ವಿದ್ಯಾ, ರಾಗ, ಕಾಲ, ನಿಯತಿ ರೂಪಗಳನ್ನು ಹೊಂದಿರುತ್ತವೆಂಬುದಾಗಿ ಪರಾಪ್ರವೇಶಿಕಾ ಗ್ರಂಥದಲ್ಲಿ ಹೇಳಲ್ಪಟ್ಟಿದೆ.

ಕಲಾದಿ ತತ್ತ್ವಪ್ರಪಂಚಕವು ಚಿದಾತ್ಮನ ಸ್ವರೂಪಾವರಕವಾಗಿರುವುದರಿಂದ 'ಕಂಚುಕ'ವೆಂದು ಹೇಳಿಸಿಕೊಳ್ಳುತ್ತದೆ. ಈ ಕಂಚುಕವಾದರೋ ಸ್ವರೂಪದಿಂದ

ವ್ಯತಿರಿಕ್ತವಾಗಿರುವುದಾದರೂ ಆ ವ್ಯತಿರಿಕ್ತದಿಂದ ಪೂರ್ಣ ಸಂವಿತ್ಸ್ವರೂಪವನ್ನು ಆಚ್ಛಾದಿಸಿರುವುದಾಗಿದೆ. ಇದರಿಂದ ಆತ್ಮನು ಬದ್ಧನಾಗಿದ್ದಾನೆ.

ಈ ಕಲಾದಿವರ್ಗವು ಅನುಕ್ರಮವಾಗಿ ಶಿವಾರ್ಚನ ಧ್ಯಾನಾದಿ ವಿಷಯವುಳ್ಳದ್ದು. ಆ ವಿಷಯದ ವಿವೇಕವುಂಟಾಗುವಿಕೆಯೂ ತದುಪದೇಶಾದಿ ವಿಷಯವನ್ನೇ ಚಿಂತಿಸುವುದೂ ಆ ಭಗವದಾರಾಧನೆಯಲ್ಲಿಯೇ ನಿಯಮನವೂ ಎಂಬೀ ಪ್ರಕಾರವಾದ ಶುದ್ಧತ್ವವನ್ನು ಪಡೆಯುವುದಾದರೆ ಪರಮೇಶ್ವರ ವಿಷಯತ್ವದಿಂದ ತತ್ಸ್ವರೂಪ ಲಾಭಾನುಗುಣವಾದ ನಿಜಕಾರ್ಯಕಾರಿಯಾಗುವುದೆಂದು ತಂತ್ರಸಾರದ ೮ನೆಯ ಆಹ್ನಿಕದಲ್ಲಿ ಶ್ರೀಮದಭಿನವ ಗುಪ್ತಾಚಾರ್ಯರಿಂದ ನಿರೂಪಿಸಲ್ಪಟ್ಟಿದೆ. ಆಕಾಶ ವಾಯು ತೇಜ ಅಪ್ ಪೃಥವಿಗಳಲ್ಲಿಯ ಶಕ್ತಿಗಳೇ ಕ್ರಮವಾಗಿ ಶಾಂತ್ಯತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ, ನಿವೃತಿ ಕಲೆಗಳೆನ್ನಿಸಿಕೊಳ್ಳುವವು.



ಚಿದ್ವಿಲಾಸರೂಪವಾದ ಅನುಭವಗಳು
(ಕಲಾ ಮತ್ತು ಭುವನಗಳು)

ಹೊರಗಿನ ಪದಾರ್ಥಗಳೆಲ್ಲಾ ‘ ಇದಂ ’ ಒಳಗಿನ ‘ ನಾನು ’ ಎಂಬುವುದು ‘ಅಹಂ’. ‘ ಇದಂ ’ ರೂಪವಾದ ವಿಶ್ವವನ್ನೆಲ್ಲಾ ನುಂಗುವ ಕ್ರಮದಿಂದ ಚಿಚ್ಛಕ್ತಿಯಾದ ‘ ಅಹಂ ’ ಪದಾರ್ಥದಲ್ಲಿ ಸೇರಿಸುವುದು — ಹಾಗೆಯೇ ‘ ಅಹಂ ’ ವಸ್ತುವಿನಿಂದ ಹೊರಹೊಮ್ಮಿಸಿ ‘ ಇದಂ ’ ರೂಪವಾಗಿ ಪದಾರ್ಥಸ್ವರೂಪವನ್ನು ಪರಿಶೀಲಿಸುವುದು. ಈ ಕ್ರಮದಿಂದ ಪಾಶಗಳನ್ನು ಓಡಿಸಿ ತನ್ಮಯತ್ವವನ್ನು ಪಡೆದು ಆನಂದಾನುಭವವನ್ನು ಹೊಂದುವುದು.

ಈ ವಿಲಕ್ಷಣವಾದ ಕ್ರಮವುಳ್ಳ ಉಪಾಯಕ್ಕೆ 'ಕ್ರಮಮುದ್ರಾ' ಎಂದು ಹೆಸರು. ಈ ಕ್ರಮದಿಂದ ಒಳಗೂ ಹೊರಗೂ ಚಿದ್ವಿಲಾಸವೇ ನಿತ್ಯೋದಿತವಾಗಿ ತೋರು ವುದರಿಂದ ಪರಮಾನಂದ ಲಾಭವುಂಟಾಗುವುದು. ಈ ಕ್ರಮ ಮುದ್ರೋಪಾಸನೆಯಲ್ಲಿ ಆಗುವ ಪ್ರಕಾಶಗಳನ್ನು ಅಭಿನವಗುಪ್ತರು ಈ ರೀತಿ ವಿವರಿಸಿರುತ್ತಾರೆ.

'ಕ್ರಮ' ಸಾಧನಾಭ್ಯಾಸದಲ್ಲಿ ಆಗುವ ಪ್ರಕಾಶಗಳ ದೃಶ್ಯಭಾಗಗಳನ್ನು ಷಡಧ್ವ ರೀತಿಯಲ್ಲಿ ವಿವರಿಸಿದ್ದಾರೆ. ಪ್ರಕಾಶದ ಪ್ರಮಾಣಕ್ಕನುಸಾರವಾಗಿ ಗ್ರಾಹ್ಯವಾಗುವ ದೃಶ್ಯಭಾವಗಳು ಒಂದು ನಿರ್ದಿಷ್ಟ ನೆಲೆಯನ್ನು ಸೇರುವುವು. ಇದು ಚಿತ್ ಚಲನೆಯ ಪುನರಾವರ್ತಸರಣಿಯಲ್ಲಿ ನಿರ್ದಿಷ್ಟನೆಲೆ- ಇಲ್ಲಿ ಚಿದೈಕ್ಯರಸವನ್ನೇ ಅನುಶೀಲನಮಾಡು ತ್ತಾನೆ. ಚಿದನುಭವವನ್ನು ಪರಾಮರ್ಶಿಸುತ್ತಾನೆ.

ನಿವೃತ್ತಿಕಲಾ—ಇದು ಪೃಥ್ವೀತತ್ತ್ವಕ್ಕೆ ಸಂಬಂಧಪಟ್ಟದ್ದು. ಇದರಲ್ಲಿ ೧೬ ಭುವನಗಳು. ಇದು ಕೆಳಗಿನ ಅಂತಸ್ತು. ಇಲ್ಲಿಂದ ಮೇಲಕ್ಕೆ ಹೋಗಬೇಕು—ಈ ಅವಸ್ಥಾಸ್ಥಿತಿಯನ್ನು 'ಕಾಲಾಗ್ನಿರುದ್ರಭುವನ' ಎಂದು ಕರೆಯುತ್ತಾರೆ.

ಪ್ರತಿಷ್ಠಾಕಲಾ—ಜಲತತ್ತ್ವದಿಂದ ಪ್ರಕೃತಿತತ್ತ್ವದ ವರೆಗಿರುವ ೨೩ ತತ್ತ್ವ ಗಳು, ಇದರಲ್ಲಿ ೫೬ ಭುವನಗಳು.

ವಿದ್ಯಾಕಲಾ—ಪ್ರತಿಷ್ಠಾಕಲೆಯ ಮೇಲ್ಭಾಗದ್ದು. ಇದರಲ್ಲಿ ೭ ತತ್ತ್ವಗಳು, ೨೮ ಭುವನಗಳು.

ಶಾಂತಕಲಾ—ಇದರಲ್ಲಿ ಶುದ್ಧ ವಿದ್ಯಾ, ಈಶ್ವರ, ಸದಾಶಿವ–ಮೂರು ತತ್ತ್ವಗಳು, ೮ ಭುವನಗಳು.

ಶಂತ್ಯತೀತಕಲಾ– ಇದರಲ್ಲಿ ಶಿವ–ಶಕ್ತಿತತ್ತ್ವಗಳು, ಭುವನಗಳಿಲ್ಲ.

ಪರಮಶಿವ—ಕಲೆಗಳಿಲ್ಲ.

ಅಭಿನವಗುಪ್ತರ ಈ ವಿವರಣೆಯಂತೆ 'ಕಲಾ'ಗಳು ಮತ್ತು 'ಭುವನ'ಗಳು ಚಿದ್ವಿಲಾಸರೂಪವಾದ ಅನುಭವದ ಹಂತಗಳು. ಹೀಗೆ ಷಡಧ್ವಗಳು ೩೬ ತತ್ತ್ವಗಳ ವಿಮರ್ಶೆ ಮತ್ತು ಪಂಚಕೋಶಗಳು ಎಂಬ ಬೇರೆ ಬೇರೆ ಪರಿಭಾಷೆಗಳಿಂದ ಆಂತರೀಯ ವಿಕಾಸಕ್ಕೆ ಹಿರಿಯರು ಸಾಧನಮಾರ್ಗಗಳನ್ನು ತೋರಿಸಿರುವರು. ಸಾಧಕರು ಇವುಗಳನ್ನು ಮನನ ಮಾಡುವುದರ ಮೂಲಕ ಆಂತರೀಯ ವಿಕಾಸವನ್ನು ಪಡೆಯಬಹುದು.

ಪರತತ್ತ್ವಾನುಭವ

ಬ್ರಹ್ಮಾನುಭವ ದೃಷ್ಟಿಯಲ್ಲಿ ಪರತತ್ತ್ವಕ್ಕಿಂತ ಆಚೆ ಹಿರಿಯದು ಯಾವುದೂ ಇಲ್ಲ. ಅದು ಅನಂತ ಮತ್ತು ಅವರ್ಣನೀಯ. ಆಪರತತ್ತ್ವವನ್ನು ಅದು, ಇದು, ಇದಲ್ಲ, ಅದಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಸಂಕುಚಿತವಾದ ಮನಸ್ಸು ಅದನ್ನು ಗ್ರಹಿಸಲಾರದು. ಆದ್ದರಿಂದ ಅದನ್ನು ಕುರಿತು ನಾವು ಮಾತುಗಳಿಂದ ವಿವರಿಸಲು ಸಾಧ್ಯವಿಲ್ಲ. ಅದನ್ನು

ಇಂದ್ರಿಯಗಳಿಂದ ತಿಳಿಯಲಸಾಧ್ಯ. ಸಂಕುಚಿತವಾದ ಮನಸ್ಸು ಅದನ್ನು ಗ್ರಹಿಸಲಾರದು. ಆದರೆ ಅನುಭವದಿಂದ ಸಾಕ್ಷಾತ್ಕರಿಸಬಹುದು. ನಾವು ಆ ಪರತತ್ತ್ವವನ್ನು ತಿಳಿಯಲಿಕ್ಕೆ ಅಥವಾ ತಿಳಿಸಲಿಕ್ಕೆ ಯಾವ ಪದವನ್ನು ಉಪಯೋಗಿಸಿದರೂ ಅದರ ಪೂರ್ಣಸ್ವರೂಪ ವನ್ನು ತಿಳಿಯಲಾರೆವು. ಆ ಪರತ್ತ್ವವು ಆಧ್ಯಾತ್ಮಸಾಧನೆಗಳಿಂದ ಮಾತ್ರ ಸಾಕ್ಷಾತ್ಕರಿಸ ಬಹುದಾಗಿದೆ. ಸಾಧನೆಗಳಿಂದ ಜೀವಾತ್ಮನ ಬಗೆಬಗೆಯ ಮಲಗಳು ನಿವೃತ್ತಿಯಾಗುವುವು. ಮಲಗಳು ಜೀವಾತ್ಮನನ್ನು ಸಂಕುಚಿತವಾಗಿರುವವನ್ನಾಗಿ ಮಾಡಿವೆ. ಇದರ ಪರಿಣಾಮ ವಾಗಿ ಜೀವಾತ್ಮನು ಪರತತ್ತ್ವದಿಂದ ಬೇರ್ಪಟ್ಟಂತಿರುವನು.

ಅನುಭವಕ್ಕೆ ಗೋಚರಿಸುವ ತತ್ತ್ವವು ಆಧ್ಯಾತ್ಮಿಕ ತತ್ತ್ವಕ್ಕಿಂತ ಬೇರೆಯಲ್ಲ. ಆ ಪರತತ್ತ್ವವು ವಿಶ್ವೋತ್ತೀರ್ಣವಾಗಿಯೂ ವಿಶ್ವಮಯವಾಗಿಯೂ ಇದೆ. ಈ ವಿಷಯ ದಲ್ಲಿ ಕಾಶ್ಮೀರ ಶಿವಾದ್ವೈತ ಸಿದ್ಧಾಂತವು ಅನುಭವ ಮತ್ತು ಆಧ್ಯಾತ್ಮಿಕ ಭಾವನೆ ಮತ್ತು ಅಭಿಪ್ರಾಯಗಳನ್ನು ಒಟ್ಟುಗೂಡಿಸಿದೆ. ಪಶ್ಚಿಮ ದೇಶದ ಅನುಭಾವಿಗಳೂ ಈ ಮಾರ್ಗ ವನ್ನನುಸರಿಸಿರುತ್ತಾರೆ. ಉದಾಹರಣೆಗೆ ಪ್ಲೋಟಿನಸ್ ಮಹಾಶಯನು ಒಂದುಕಡೆ ಮಾತಿಗೂ ಎಟುಕದಿರುವ ವಿಶ್ವಾತೀತ ತತ್ತ್ವವನ್ನು ಹೇಳುತ್ತಾನೆ. ಆ ತತ್ತ್ವವನ್ನು ಯಾವ ಪರಿಭಾಷೆಯಿಂದಲೂ ಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲ. ಅದು ಕೇವಲ ಪೂರ್ಣಬ್ರಹ್ಮಾನುಭವದ ಆನಂದದಿಂದ ಸಾಕ್ಷಾತ್ಕರಿಸತಕ್ಕದ್ದಾಗಿದೆ. ಇನ್ನೊಂದುಕಡೆ ಆತನು ಪರಸ್ಪರ ವಿರುದ್ಧವಾಗಿ ತೋರುತ್ತಾ ಹೊರಹೊಮ್ಮಿರುವ ಈ ವಿಶ್ವವು ಪ್ರವೃತ್ತಿಗೆ ಕಾರಣವಾಗಿರುವುದೆಂದು ಹೇಳುತ್ತಾನೆ. ಕೊನೆಗೆ ಆಶ್ರಯವಾಗಿರುವುದು ಮತ್ತು ಗಮ್ಯ ಸ್ಥಾನವಾಗಿರುವುದು ಒಂದೇ ಎಂದು ಆ ಪರತತ್ತ್ವವನ್ನು ವಿವರಿಸುತ್ತಾನೆ.

ಸಾಧಕನು ಅನುಭವ ಸಿದ್ಧನಾಗುವವರೆಗೆ ವಿಚಾರ ವಿಮರ್ಶೆ ಅತ್ಯಾವಶ್ಯಕ. ಎಷ್ಟು ಗ್ರಂಥಾಧ್ಯಯನ ಮಾಡಿದರೂ ಅನುಭವವಿಲ್ಲದಿದ್ದರೆ ತತ್ತ್ವದ ಪರಿಚಯವಾಗುವುದಿಲ್ಲ. ಅನುಭವದಿಂದ ಹೊರಹೊಮ್ಮುವ ಮಾರ್ಗ ಸುಗಮ ಮತ್ತು ಸರಳ. ಏನೇ ಆಗಲಿ ತಮ್ಮ ಗುರಿಯನ್ನು ಸಾಧಿಸಬೇಕೆಂಬ ದೃಢನಿಶ್ಚಯದಿಂದ ಮುಂದುವರಿಯುವಾಗ ಆದರ್ಶ ಜೀವಿಗಳ ಸಾಹಸ ನಮಗೆ ದೃಷ್ಟಾಂತವಾಗಿರುತ್ತದೆ. ಅವರ ಸಮನ್ವಯ ಸ್ಫೂರ್ತಿ ನಮಗೆ ಪ್ರಚೋದಕವಾಗುತ್ತದೆ. ಅವರ ಕರ್ತವ್ಯ ನಿಷ್ಠೆ ನಮಗೆ ಧೈರ್ಯವನ್ನು ತುಂಬುತ್ತದೆ. ಪವಿತ್ರ ವ್ಯಕ್ತಿಗಳ (ಅನುಭಾವಿಗಳ) ಸ್ಮರಣೆಯು ನಮ್ಮ ಭಾವನಾಪ್ರಪಂಚವನ್ನು ನಿರ್ಮಲವಾಗಿಡುತ್ತದೆ. ಈ ರೀತಿಯಾದ ಸಾಧನ ಪ್ರಯತ್ನಗಳು ಭಾವನಾಮಯವಾಗಿ ನಿಂತರೆ ಅನುಭವವೆನ್ನಬಹುದು.

ಅನುಭವವೆಂದರೆ ಯಾವುದು ಹೇಗಿದೆಯೋ ಹಾಗೆ ನಿಜಸ್ವರೂಪವನ್ನು ತಿಳಿಯು ವುದೇ ಆಗಿದೆ. ನಮ್ಮ ಬೋಧನೆಗಳು ಕೆಲವು ವೇಳೆ ನಿಜಸ್ವರೂಪಕ್ಕೆ ಬದಲಾಗಿ ಬೇರೆ ಬದಲಾವಣೆಗಳನ್ನುಂಟುಮಾಡುತ್ತವೆ. ಆದರೆ ನಿಜವಾದ ಅನುಭಾವಿಗೆ ಅಭೇದ ಭಾವನೆ ದೃಢವಾಗಿರುತ್ತದೆ. ಭೇದಭಾವನೆಗಳೆಲ್ಲಾ ಅವನಿಗೆ ವಾಗ್ವಿಲಾಸ ಮಾತ್ರ. ಇದು ಅಂತ ರೀಯವಾಗಿ ಗ್ರಹಿಸತಕ್ಕ ಅಂಶವಾಗಿದೆ. ಬಾಹ್ಯವೃತ್ತಿಯಲ್ಲಿ ಸಾಮ್ಯವನ್ನೂ ಅಭೇದವನ್ನೂ

ಕಾಣುವುದು ಬೋಧಿಸುವುದು ಮುಖ್ಯವಾದವುಗಳಾಗಿರುತ್ತವೆ. ಆದುದರಿಂದ ಅನುಭಾವಿಗಳು ಆರೋಹಣಾವಸ್ಥೆಯಲ್ಲಿ ಬಾಹ್ಯವ್ಯವಹಾರವನ್ನು ಗಮನಿಸಿ ನೀತಿಗಳನ್ನು ಬೋಧಿಸುತ್ತಾರೆ. ಆಂತರ್ಯ ವಿಕಾಸದಿಂದ ಪರಿಪೂರ್ಣಬ್ರಹ್ಮಾನುಭವ ಏರ್ಪಟ್ಟ ಮೇಲೆ ಅಭೇದಭಾವನೆ ತಾನಾಗಿಯೇ ವ್ಯಕ್ತವಾಗುತ್ತದೆ. ಆಂತರಿಕ ಸ್ವರೂಪದ ವಿವರಣೆ ಅನುಭವೈಕ ಗೋಚರ.

ಪರತತ್ತ್ವಾನುಭವ ಒಂದು ವಿಶೇಷತರವಾದ ಜೀವನ. ಸತ್ಯವನ್ನು ಒಳಹೊಕ್ಕು ನೋಡುವ ಸೂಕ್ಷ್ಮಪರಿಜ್ಞಾನವನ್ನುಂಟುಮಾಡುವಂತಹುದು. ಮಹತ್ತ್ವದ ಅರಿವನ್ನು ನೇರವಾಗಿ ಮಾಡುವಂತಹುದು. ಅದನ್ನು ಪರಮಾರ್ಥಾನುಭವವೆನ್ನಬಹುದು. ಅನುಭಾವಿಯು ಪರಮಾರ್ಥಾನುಭವವನ್ನು ಅಂಗೀಕರಿಸಿದರೂ ಬಾಹ್ಯವೃತ್ತಿಯಲ್ಲಿ ವಾಕ್ಕಿನ ಮೂಲಕ ಹೇಳುವಾಗ ಅದನ್ನು ಪೂರ್ಣವಾಗಿ ವಿವರಿಸುವುದಕ್ಕಾಗವುದಿಲ್ಲ. ಅನುಭಾವಿಯ ಹಿಂದಿನ ಸಂಸ್ಕಾರ ಆಗಿನ ಪ್ರಯೋಗಗಳು ಮತ್ತು ಜನ ಮನೋಭಾವನೆಗಳನ್ನನುಸರಿಸಿ ತನ್ನ ಅನುಭವವನ್ನು ತಿಳಿಯಪಡಿಸುತ್ತಾನೆ. ಆತನ ಉಪದೇಶಗಳು ಆಯಾಕಾಲ ದೇಶ ಸಂಪ್ರದಾಯಗಳಿಗೆ ಕಟ್ಟುಬಿದ್ದು ಹೊರಬೀಳುತ್ತವೆ. ಜನಜೀವನವನ್ನು ನಯವಾಗಿ ಮಾರ್ಪಡಿಸಬೇಕೆನ್ನುವಾಗ ನೀತಿಯನ್ನು ಮುಖ್ಯಸಾಧನವಾಗಿ ಹೇಳುತ್ತಾನೆ. ನೀತಿವಂತನಾದವನು ಆಂತರ್ಯವಿಕಾಸಕ್ಕೆ ತೊಡಗಬೇಕಾದರೆ ಸಾಧನಾಭ್ಯಾಸಗಳನ್ನು ವಿವರಿಸುತ್ತಾನೆ. ಅಭೇದ ವ್ಯಾಪ್ತಿಯನ್ನು ಮಂಡಿಸುತ್ತಾನೆ. ಆಗ ಹೆಚ್ಚುಕಡಿಮೆಗಳು ಆಂತರ್ಯ ವಿಕಾಸದಲ್ಲಿ ನಿಲ್ಲುವುದಿಲ್ಲ. ಇಲ್ಲಿ ಕಾಶ್ಮೀರ ಸಂಪ್ರದಾಯದ ಒಂದು ಶ್ಲೋಕವನ್ನು ನೆನೆಯಬಹುದು.

ಉಚ್ಚಾರ ರಹಿತಂ ವಸ್ತು ಚೈತಸ್ಯೇವ ವಿಚಿಂತಯನ್ ।
ಯೋ ಸಮಾವೇಶಮಾಪ್ನೋತಿ ಶಾಕ್ತಸ್ಸೊತ್ರಾಭಿಧೀಯತೆ ॥

ಯಾವ ಸ್ಥಿತಿಯನ್ನು ಅಕ್ಷರಗಳಿಂದ ಉಚ್ಚರಿಸಲು ಸಾಧ್ಯವಿಲ್ಲವೋ ಯಾವುದನ್ನು ತನ್ನ ಇಚ್ಛಾಶಕ್ತಿಯಿಂದ ಅನುಭವಿಸಬಹುದೋ ಆ ಸ್ಥಿತಿಯನ್ನು ಯಾವನು ಮುಟ್ಟಿರುವನೋ ಅವನೇ ನಿಜವಾದ ಅನುಭವಿ. ಅನುಸೃತ್ಯ ಭವತೀತಿ ಅನುಭವಃ.

ಇದು ಚಿತ್ಸ್ವರೂಪ. ಇದನ್ನು ಅನುಸರಿಸಿ ಉಂಟಾಗುತ್ತಿರುವುದು ಚಿದನುಭವ. ಈ ಸ್ಥಿತಿಯನ್ನು ಪಡೆದಿರುವವನು ಅನುಭವಿ. ಎಲ್ಲಾ ಶೈವಪ್ರಭೇದಗಳಲ್ಲಿಯೂ ಅನುಭವಿಗೆ ವಿಶೇಷ ಸ್ಥಾನವಿದೆ. ಯಾವುದು ಹೃದಯಗೋಚರವೋ ಯಾವುದು ಅನುಭವ ವೇದ್ಯವೋ ಅದೇ ಸತ್ಯವೆಂಬುದು ಅನುಭಾವಿಗಳ ಮತ. ವೇದ ಶಾಸ್ತ್ರ ಪುರಾಣಗಳಲ್ಲಿ ಹೇಳಿದ ಮಾತುಗಳು ತಮ್ಮ ಜೀವನದಲ್ಲಿ ಅನುಭವಕ್ಕೆ ಬಂದಾಗ ಮಾತ್ರ ಸತ್ಯ ಎಂಬುದೇ ಇವರ ಮತ. ಇವರು ತಮ್ಮ ಉದ್ಗಾರಗಳನ್ನು ದೇಶಭಾಷೆಯಲ್ಲಿ ಸಮಯೋಚಿತವಾಗಿ ವ್ಯಕ್ತಪಡಿಸಿರುತ್ತಾರೆ. ಈ ಉದ್ಗಾರಗಳು ಹಾಡುಗಳ ರೂಪವಾಗಿಯೂ ಒಗಟೆಗಳ ರೂಪವಾಗಿಯೂ ವಚನಗಳ ರೂಪವಾಗಿಯೂ ಹೊರಬಿದ್ದಿವೆ.

ಶಿವಪ್ರಸನ್ನತೆಯನ್ನು ಪಡೆದ ಅನುಭಾವಿಗಳು ಲೋಕದ ಕಟ್ಟುಪಾಡುಗಳನ್ನು ಅಷ್ಟಾಗಿ ಗಮನಿಸದೆ ಇರಬಹುದು. ಅವರಲ್ಲಿ ಜನ್ಮ, ವಿದ್ಯೆ, ರೂಪು, ಕುಲ, ಐಶ್ವರ್ಯ ಉದ್ಯೋಗ ಇತ್ಯಾದಿಗಳಿಂದುಂಟಾಗುವ ಭೇದಬುದ್ಧಿಯಿರುವುದಿಲ್ಲ. ಅನುಭಾವಿಗಳು ಚೈತನ್ಯವನ್ನು ಉದ್ಬೋಧಗೊಳಿಸಿಕೊಂಡು ಸರ್ವಜೀವಿಗಳಲ್ಲಿ ಆಧ್ಯಾತ್ಮಿಕ ಏಕತೆಯನ್ನು ಕಂಡುಕೊಂಡು ಸಿದ್ಧಿಯನ್ನು ಪಡೆದವರಾಗಿದ್ದಾರೆ.

ಸರ್ ವಿಲ್ಲಿಯಂ ಜೇಮ್ಸ್ ಎಂಬಾತನು "ಅನುಭಾವಿಗಳ ವಾಣಿಯಲ್ಲಿ ಯಾವುದೋ ಒಂದು ಶಾಶ್ವತವಾದ ಒಮ್ಮತವಿರುತ್ತದೆ. ಇದು ವಿಮರ್ಶಕನ ಬಾಯನ್ನು ಮುಚ್ಚಿಸಿ ಯೋಚನಾಪರನನ್ನಾಗಿ ಮಾಡುವುದು. ಪ್ರಸಿದ್ಧ ಅನುಭಾವಿಯ ಸಾಹಿತ್ಯವು ದೇಶ ಕಾಲಾತೀತವಾದದ್ದು. ದೇವರಲ್ಲಿ ಮಾನವನ ಏಕತ್ವವನ್ನು ಸದಾ ಸಾರುತ್ತಾ ಇರುವ ಅನುಭಾವಿಗಳ ವಾಣಿ ಭಾಷೆಗಳ ಉಗಮಕ್ಕಿಂತ ಪ್ರಾಚೀನವಾದುದು. ಇಂತಹ ಅನುಭಾವಿಗಳಿಗೆ ಮುಪ್ಪು ಬರುವುದಿಲ್ಲ" ಎಂದು ವಿವರಿಸಿದ್ದಾನೆ.

ನಮ್ಮ ಅನುಭವಕ್ಕೆ ಸಿಲುಕುವ ಸಂಗತಿಗಳಲ್ಲೆಲ್ಲಾ ಒಂದು ವಿಧವಾದ ಹೊಂದಿಕೆ, ಐಕ್ಯತೆ ಇರುವುದೆಂಬುದನ್ನು ಅರಿವು ಮಾಡಿಕೊಳ್ಳುತ್ತಾ ಅಳವಡಿಸಿಕೊಳ್ಳುತ್ತಾ ನಡೆದಂತೆ ಸತ್ಯಸೌಂದರ್ಯಗಳ ಸ್ಪಷ್ಟತೆ ಕಾಣುವುದು. ದೈವೀಜೀವನವನ್ನು ಯಾರು ನಡೆಸುತ್ತಾರೋ ಅವರಿಗೆ ಚಿತ್ಸ್ವರೂಪ ಎಂಬುದು ಗೊತ್ತು. ಉನ್ನತಮಟ್ಟದ ಅನುಭಾವಿಗಳು ಮಾತ್ರ ಚಿತ್‌ಸಂಸ್ಪರ್ಶದ ಅನುಭವವನ್ನು ತಿಳಿಯಬಲ್ಲರು. ಅಂತಹ ಅನುಭಾವಿಗಳ ಸುತ್ತಲೂ ಆನಂದವು ಆವರಿಸಿರುತ್ತದೆ.

ನಮ್ಮ ಅನುಭವಕ್ಕೆ ಸಿಲುಕುವ ಸಂಗತಿಗಳಲ್ಲೆಲ್ಲಾ ಒಂದು ವಿಧವಾದ ಹೊಂದಿಕೆ ಐಕ್ಯತೆ ಇರುವುದನ್ನು ಅರಿವು ಮಾಡಿಕೊಳ್ಳುತ್ತಾ ಅಳವಡಿಸಿಕೊಳ್ಳುತ್ತಾ ನಡೆದಂತೆ ಸತ್ಯ ಸೌಂದರ್ಯಗಳ ಸ್ಪಷ್ಟತೆ ಕಾಣುವುದು. ಪ್ರಗತಿಪರ ವಿಕಾಸದ ವಿಮರ್ಶೆಯಿಂದಾಗಲಿ ಇಲ್ಲವೆ ಸ್ಫುರಣಾತ್ಮಕ ತುರೀಯ ಪ್ರಕಾಶದಿಂದಾಗಲಿ ಸತ್ಯದನೆಲೆಯನ್ನು ಕಾಣಬಹುದೆಂದು ಹಿರಿಯರುಉಪದೇಶಿಸಿರುವರು. ಅಂತರಂಗದ ಸ್ವರೂಪವಿವರಣೆಯೇ ಅನುಭಾವವಿದ್ಯೆ. ಅದು ಬುದ್ಧಿಯ ಮಟ್ಟವನ್ನು ಮೀರಿದುದು. ಅದ್ವೈತದ ಅರಿವಿನ ಏಕತಾನತೆಯನ್ನು ಸೂಚಿಸುವುದು.

ದಿವ್ಯತೆಯ ಅನುಭವವು ಕೆಲವರಿಗೆ ಆಗುವುದಾದರೂ ಅದರ ಆವರ್ತಿ, ಎಷ್ಟು ಹತ್ತಿರ ಅಥವಾ ದೂರದಿಂದ, ಯಾವ ಮಟ್ಟದಲ್ಲಿ ಎಂಬಿವೆಲ್ಲಾ ಆಯಾ ವ್ಯಕ್ತಿಯ ಪೂರ್ವಸುಕೃತ, ಸಂಸ್ಕಾರಪರಿಸರ, ವಿದ್ಯೆ, ಬುದ್ಧಿ, ಸಾಧನೆ, ಯೋಗ್ಯತೆ, ಸಂವೇದನಾ ಶಕ್ತಿ ಇತ್ಯಾದಿಗಳನ್ನವಲಂಬಿಸಿರುತ್ತದೆ. ನಿರಾಜಡ ಮತ್ತು ಸಂವೇದನಾ 'ಶೂನ್ಯ'ದಲ್ಲಿ ಯಾವ ಪ್ರತಿಕ್ರಿಯೆಯೂ ಉಂಟಾಗುವುದಿಲ್ಲ. ಅವರವರ ಆಸೆ ಮನದೊಲವುಗಳಿಗನುಗುಣವಾಗಿ ಕಣಸು ಕಾಣುತ್ತಾರೆ. ಅದನ್ನು ಸಾಧಿಸಲು ಯತ್ನಿಸುತ್ತಾರೆ. ಅಂತಃ ಪ್ರಜ್ಞೆಯೇ ಅನುಭವದ ಸಹಜ ಪ್ರತಿಭೆಯ ಪ್ರಸನ್ನತೆ. ಶ್ರೀಮದಭಿನವ ಗುಪ್ತಾಚಾರ್ಯ

ವಿರಚಿತ 'ಅನುಭವ ನಿವೇದನಂ' ಎಂಬ ಸ್ತೋತ್ರವು ಸಾಧಕನು ಯಾವಾಗಲೂ ಪರತತ್ತ್ವಾನುಸಂಧಾನ ಮಾಡಬೇಕಾದ ಕ್ರಮವನ್ನು ಸೂಚಿಸುತ್ತದೆ.

ಅಂತರ್ಲಕ್ಷ್ಯ ವಿಲೀನಚಿತ್ತಪವನೋ ಯೋಗೀ ಯದಾ ವರ್ತತೆ
ದೃಷ್ಟ್ಯಾ ನಿಶ್ಚಲತಾರಯಾ ಬಹಿರಸೌ ಪಶ್ಯನ್ನಪಶ್ಯನ್ನಪಿ ।
ಮುದ್ರೇಯಂ ಖಲು ಶಾಂಭವೀ ಭವತಿ ಸಾ ಯುಷ್ಮತ್ಪ್ರಸಾದಾದ್ಗುರೋ
ಶೂನ್ಯಾಶೂನ್ಯವಿವರ್ಜಿತಂ ಭವತಿ ಯತ್ತತ್ತ್ವಂ ಪದಂ ಶಾಂಭವಂ ॥೧॥

ಅರ್ಧೋದ್ಘಾಟಿತಲೋಚನಃ ಸ್ಥಿರಮನಾ ನಾಸಾಗ್ರದತ್ತೇಕ್ಷಣ
ಶ್ಚಂದ್ರಾರ್ಕಾವಪಿ ಲೀನತಾಮುಪಗತೌ ತ್ರಿಸ್ಪಂದಭಾವಾಂತರೆ
ಜ್ಯೋತೀರೂಪಮಶೇಷ ಬಾಹ್ಯರಹಿತಂ ಚೈಕಂ ಪುಮಾಂ ಸಂಪರಂ
ತತ್ತ್ವಂ ತತ್ಪದಮೇತಿ ವಸ್ತುಪರಮಂ ವಾಚ್ಯಂ ಕಿಮತ್ರಾಧಿಕಂ ॥೨॥

ಶಬ್ದಃ ಕಶ್ಚ ನಯೋ ಮುಖಾದುದಯತೇ ಮಂತ್ರಃ ಸಲೋಕೋತ್ತರಃ
ಸಂಸ್ಥಾನಂ ಸುಖದುಃಖ ಜನ್ಮವಪುಷೋ ಯತ್ರಾಪಿ ಮುದ್ರೈವ ಸಾ ।
ಪ್ರಾಣಸ್ಯ ಸ್ವರಸೇನ ಯತ್ಪ್ರವಹಣಂ ಯೋಗಃ ಸ ಏವಾದ್ಭುತಃ
ಶಾಕ್ತಂ ಧಾಮ ಪರಂ ಮಮಾನುಭವತಃ ಕಿನ್ನಾಮ ನ ಭ್ರಾಜತೇ ॥೩॥

ಮಂತ್ರಃ ಸಪ್ರತಿಭಾತಿ ವರ್ಣರಚನಾ ಯಸ್ಮಿನ್ನ ಸಂಲಕ್ಷ್ಯತೆ
ಮುದ್ರಾ ಸಾ ಸಮುದೇತಿ ಯತ್ರ ಗಲಿತಾ ಕೃತ್ಸ್ನಾ ಕ್ರಿಯಾ ಕಾಯಿಕೀ ।
ಯೋಗಃ ಸ ಪ್ರಥತೇ ಯತಃ ಪ್ರವಹಣಂ ಪ್ರಾಣಸ್ಯ ಸಂಕ್ಷೀಯತೇ
ತ್ವದ್ಧಾಮಾದಿಗಮೋತ್ಸವೇಷು ಸುಧಿಯಾಂ ಕಿಂ ಕಿಂ ನ ನಾಮಾದ್ಭುತಂ ॥

ಅಭ್ಯಾಸಮಾಡುವವರಿಗೆ ಕೆಲವು ಸ್ವಾಭಾವಿಕವಾದ ಜೀವನ ಸ್ಥಿತಿಗಿಂತ ವಿಲಕ್ಷಣವಾದ ಸ್ಥಿತಿಗಳೇರ್ಪಡುತ್ತವೆ. ಅವುಗಳನ್ನು ಶಾಂಭವೀ ಮುದ್ರಾ, ತ್ರಿಸ್ಪಂದ ಭಾವ, ಸ್ವರ ಸಪ್ರವಾಹ, ಶಾಕ್ತಧಾಮ ಪ್ರಾಣಸಂಕ್ಷಯ ಇಂತಹ ಹೆಸರುಗಳಿಂದ ಅನುಭವ ನಿವೇದನದಲ್ಲಿ ಸೂಚಿಸಿರುತ್ತಾರೆ.

ಶೈವಧರ್ಮದಲ್ಲಿ ಶಕ್ತಿಪಾತ ಅಥವಾ ಶಿವಾನುಗ್ರಹ

ಅಜ್ಞಾನವೇ ಸಾಂಸಾರಿಕ ಬಂಧನಕ್ಕೆ ಹೇತುವೆಂದೂ ಸತ್ಯಾನುಭವವೊಂದೇ ಮೋಕ್ಷದ ಸಾಧನವೆಂದು ಭಾರತೀಯ ತತ್ತ್ವಶಾಸ್ತ್ರದ ಎಲ್ಲಾ ಪಂಥಗಳ ನಂಬಿಕೆ. ಶೈವ ಸಾಹಿತ್ಯದಲ್ಲಿ ಅಜ್ಞಾನವೆಂದರೆ ಜ್ಞಾನದ ಪೂರ್ಣ ಅಭಾವ ಎಂದಲ್ಲ; ಅಪರಿಪೂರ್ಣ ಜ್ಞಾನವೆಂದರ್ಥ. ಈ ಅಪರಿಪೂರ್ಣ ಜ್ಞಾನವನ್ನು ಶೈವತತ್ತ್ವದಲ್ಲಿ 'ಆಣವಮಲ' ಎಂದು ಕರೆಯಲಾಗಿದೆ. ಈ ಆಣವಮಲದಿಂದ ಮಾಯೀಯಮಲವೂ ಮಾಯೀಯ ಮಲದಿಂದ ಕಾರ್ಮಮಲವೂ ಉಂಟಾಗುತ್ತದೆ. ಸ್ವಭಾವಸಿದ್ಧವಾದ ಅಜ್ಞಾನವಿಲ್ಲದಿದ್ದರೆ ಕಲ್ಮಷಗಳು ತಾವಾಗಿಯೇ ಮಾಯವಾಗುತ್ತವೆ. ಮೂಲರೂಪವಾದ ಅಜ್ಞಾನ

(ಅಖ್ಯಾತಿ)ವನ್ನು ತೊಡೆದುಹಾಕಬೇಕಾದರೆ ದೈವಾನುಗ್ರಹ ಅಗತ್ಯ. ಯಾರನ್ನು ದೇವನು ಅನುಗ್ರಹಿಸುತ್ತಾನೋ ಅಂತಹವರಿಗೆ ಮಾತ್ರ ಆತ್ಮಸಾಕ್ಷಾತ್ಕಾರವಾಗುತ್ತದೆ.

ಶಿವಾನುಗ್ರಹದ ಸಿದ್ಧಾಂತವನ್ನು ಅರಿತುಕೊಳ್ಳಲು ಮತ್ತು ಅದರಲ್ಲಿನ ಗುಣಗ್ರಹಣ ಮಾಡಲು ಶೈವತತ್ತ್ವ ಕೆಲವು ಮೂಲಪ್ರಕ್ರಿಯೆಗಳ ಪರಿಚಯ ಅಗತ್ಯ. ಪರಮೇಶ್ವರ ಮಾನವಜೀವಿಗಳನ್ನು ಅಜ್ಞಾನದಿಂದ ಮತ್ತು ಸಾಂಸಾರಿಕ ಬಂಧನದಿಂದ ಬಿಡುಗಡೆ ಮಾಡಲು ಈ ಜಗತ್ತನ್ನು ಸೃಷ್ಟಿಸಿದ. ಪತಿ (ಈಶ್ವರ) ಪಶು (ಬದ್ಧಾತ್ಮ) ಪಾಶ (ಆತ್ಮನನ್ನು ಬಂಧನಕ್ಕೆ ಈಡುಮಾಡಿದ ಕಲ್ಮಷ) ಎಂದು ಶೈವಸಿದ್ಧಾಂತಿಗಳು ಈ ಮೂರು ಅನಂತ ವಸ್ತುಗಳೆಂದು ನಿರ್ದೇಶಿಸಿ ಪರಮೇಶ್ವರ ಅನುಗ್ರಹವನ್ನು ಕರುಣಿಸುವವರೆಗೆ ಬಂಧನದಲ್ಲಿರುವ ಆತ್ಮನು ದೇವನನ್ನು ಅರಿಯಲಾಗುವುದಿಲ್ಲವೆಂದು ಪ್ರತಿಪಾದಿಸಿದರು. ಅನುಗ್ರಹವನ್ನು ಪಡೆಯಬೇಕಾದರೆ ಪರಿಶುದ್ಧವಾದ ಜೀವನ, ಪೂರ್ಣಶರಣಾಗತಿ ಮತ್ತು ಪ್ರಾರ್ಥನ ಧ್ಯಾನಾದಿಗಳಂತಹ ಪರಿಪಾಕಗಳು ಆವಶ್ಯಕ. ಬದ್ಧಾತ್ಮನ ನೈತಿಕ ಶಿಸ್ತು ಮತ್ತು ಆಧ್ಯಾತ್ಮಿಕ ಜಾಗೃತಿ ಬೆಳೆದಂತೆಲ್ಲಾ ಶಕ್ತಿಪಾತದೆಡೆಗೆ ಒಯ್ಯುತ್ತದೆ. ಶಿವಾನುಗ್ರಹವನ್ನು ಪಡೆಯಬೇಕಾದರೆ ಅಹಂಕಾರವಿಗಮ, ಸರ್ವಸಮರ್ಪಣ ಬುದ್ಧಿ, ಸತ್ವ ರಜಸ್ತಮೋಗುಣಗಳ ಸಮನ್ವಯಗಳ ಮೂಲಕ ದೈವೀಜೀವನವನ್ನು ನಡೆಸುವುದೇ ಆಗಿದೆ. ಆಗ ದೈವದ ಬಗ್ಗೆ ಜಾಗೃತಿ ಉಂಟಾಗುತ್ತದೆ. ಆತ್ಮನು ಪ್ರಶಾಂತ ಸಾಗರದಲ್ಲಿ ವಾಸಿಸುವನು. ಇಂದ್ರಿಯಾಧೀನ ವಸ್ತುಗಳಿಂದ ಮನಸ್ಸನ್ನು ಹಿಂದಿರುಗಿಸಿ ಜಪತಪಗಳಿಂದ ತನ್ಮಯತ್ವದ ಮೂಲಕ ದೇವನನ್ನು ಸಮೀಪಿಸಬಹುದು. ಶಿವನು ಶಿವಜ್ಞಾನ ಆತ್ಮಶುದ್ಧಿ ದೃಢಭಕ್ತಿಗನುಗುಣವಾಗಿ ಅನುಗ್ರಹಿಸುತ್ತಾನೆಂಬುದು ಎಲ್ಲಾ ಶೈವಸಂಪ್ರದಾಯದವರ ನಂಬಿಕೆ. ಯಾರು ಅಂತರಂಗಶುದ್ಧರಾಗಿ ಸ್ಮರಿಸುತ್ತಾರೋ ಆತ್ಮಾನ್ವೇಷಣ ಮಾಡುತ್ತಾರೋ ಅಂತಹ ಆತ್ಮರುಗಳಿಗೆ ದೇವನೇ ಜ್ಯೋತಿಯಾಗುತ್ತಾನೆ.

'ತಿರುಮಂತ್ರ'ದಿಂದ ಶೈವಸಿದ್ಧಾಂತದ ಜ್ಞಾನವನ್ನು ಚೈತನ್ಯಗೊಳಿಸಿದಂತಹ ತಿರುಮೂಲರು ಶಿವಾನುಗ್ರಹವನ್ನು ಕುರಿತು ಈ ರೀತಿ ಹೇಳುತ್ತಾರೆ—

"ದೇವರು ನನ್ನ ಆತ್ಮವನ್ನು ರಕ್ಷಿಸಲು ನನಗೆ ಜನ್ಮವಿತ್ತ. ಆತನು ನನಗೆ ಜ್ಞಾನ ಪಥವನ್ನು ತೋರಿಸಿದ. ಒಂದು ಸ್ಫಟಿಕದ ಕರಳನ್ನು ನನ್ನಮೇಲೆ ಇರಿಸಿದ. ಅಮೂಲ್ಯವಾದ ಸ್ಫಟಿಕದ ಬಣ್ಣವನ್ನು ಪ್ರತಿಬಿಂಬಿಸುವಂತೆ ದೇವರು ನನ್ನಲ್ಲಿ ಕರುಣವನ್ನು ತೋರಿಸಿದ. ಆ ಬೆಳಕಿನಿಂದ ನನ್ನ ಆತ್ಮ ಪ್ರಜ್ವಲಿಸಿತು."

"ಗುರು ನನಗೆ ಮಾರ್ಗವನ್ನು ತೋರಿಸಿದ. ನಾನು ದೈವಾನುಭೂತಿಯನ್ನು ಪಡೆದೆ. ಅಜ್ಞಾನದಿಂದ ಆವರಿಸಿದ್ದ ನನ್ನ ಜೀವನಮಾರ್ಗವನ್ನು ತ್ಯಜಿಸಿದೆ. ನಾನು ಭವಾಂಬುಧಿಯನ್ನು ಈಜಿ ಆಚೆಯ ದಡವನ್ನು ತಲಪಿದೆ."

"ಭಗವದನುಗ್ರಹವನ್ನು ಹೇಗೆ ಪಡೆದೆನೆಂಬುದನ್ನು ವಿವರಿಸುವುದು ಸುಲಭವಲ್ಲ. ಆತನ ಕೃಪೆ ನನ್ನ ಹೃದಯ ಮನಸ್ಸು ಮತ್ತು ಚಕ್ಷುಗಳಲ್ಲಿ ತುಂಬಿದ ಅನುಭವವನ್ನು

ಮಾತುಗಳಲ್ಲಿ ವರ್ಣಿಸುವುದಸದಳ. ಅವರ್ಣನೀಯವಾದ ಸಂತೋಷದಿಂದ ನನ್ನ ಶರೀರಾದ್ಯಂತವೂ ಉಬ್ಬಿಹೋಯಿತು. ನನ್ನ ಕಣ್ಣುಗಳು ಅವನ ದಿವ್ಯಪ್ರಭೆಯನ್ನು ನೋಡಿ ಪುಳುಕಿತವಾದವು. ಅವನೇ ಶಂಕರ. ನಾನು ಅವನ ಅನುಗ್ರಹದಲ್ಲಿ ಜೀವಿಸುತ್ತಿದ್ದೇನೆ. ಬಂಧನಕ್ಕೀಡಾಗಿದ್ದ ಆತ್ಮವನ್ನು ವಿಮುಕ್ತವನ್ನಾಗಿಸಿದ. ಇಂದ್ರಿಯಾಕರ್ಷಿತವಾಗಿದ್ದ ಮನಸ್ಸನ್ನು ಆಕರ್ಷಿತಾತೀತವನ್ನಾಗಿಯೂ ಅಜೇಯವಾಗಿಯೂ ಮಾಡಿದ. ಇದರಿಂದ ನಾನು ಕರ್ಮವನ್ನು ಭೇದಿಸಿಕೊಂಡು ಬಂದೆ. "

"ನಾನು ಮತ್ತು ಅವನು ಎಂಬ ಎರಡು ಸ್ಥಾನಗಳಿವೆ. ನಾನು (ಅಹಂ) ಎನ್ನುವುದನ್ನು ಅವನ ಪಾದದಲ್ಲಿ ಅರ್ಪಿಸುವುದರ ಮೂಲಕ ನಾನು ಮತ್ತು ಅವನು ಒಂದೇ ಎಂಬುದನ್ನು ಅರಿತೆನು. ಆದುದರಿಂದ ನನ್ನ ಮತ್ತು ಅವನ ನಡುವೆ ವ್ಯತ್ಯಾಸ ಮಾಯವಾಯಿತು. ಅವನು ನನ್ನನ್ನು ೩೬ ತತ್ತ್ವಗಳಿಂದ ವಿಮೋಚನೆಗೊಳಿಸಿದ. ನನ್ನ ಭಯವನ್ನು ಹೋಗಲಾಡಿಸಿದ ಮತ್ತು ನನ್ನ ಮೇಲೆ ತನ್ನ ಕೃಪಾಕಟಾಕ್ಷವನ್ನು ಬೀರಿ ನನ್ನನ್ನು ಶಿವನಾಗಿಸಿದ. ನೋಡಬಾರದ ಕಣ್ಣುಗಳತ್ತ ನೋಡಿದ. ಕೇಳಬಾರದ ಕಿವಿಗಳತ್ತ ಪಸರಿಸಿದ. ಸಾಯುಜ್ಯ ಸಮರಸವನ್ನು ಪಡೆದಿರುವಂತಹ ಆನಂದದತ್ತ ನೋಡಿ". ಈ ರೀತಿಯಲ್ಲಿ ಶಿವಾನುಗ್ರಹ ತನ್ನಲ್ಲಿ ಹೇಗೆ ನಾನಾರೂಪದಲ್ಲಿ ವ್ಯಕ್ತವಾಯಿತೆಂಬುದನ್ನು ತನ್ನ ಉತ್ಕಂಠದಿಂದ ಉದ್ಗರಿಸಿದ ತಿರುಮೂಲರು ವಂದ್ಯರು. ಶಿವಾನುಗ್ರಹದ ಜಾಗೃತಿಯಿಂದ ಯಾರು ಆಶೀರ್ವದಿಸಲ್ಪಡುತ್ತಾರೋ ಅಂತಹವರ ತನುಮನದಲ್ಲಿ ಅನವರತವೂ ಆ ಪರಶಿವನೇ ಮಿಡಿಯುತ್ತಿರುತ್ತಾನೆ ಎಂದು ಶೈವಸಿದ್ಧಾಂತಿಗಳು ಘೋಷಿಸಿದ್ದಾರೆ.

ಪರಮಶಿವನ ಸ್ವಾತಂತ್ರ್ಯವೇ ಕಾಶ್ಮೀರಶೈವದ ಮೂಲ. ಪರಶಿವನು ಪೂರ್ಣಾನಂದ, ಪ್ರಕಾಶವಿಮರ್ಶಮಯ, ಬಹುರೂಪಿ, ಸ್ವೇಚ್ಛೆಯಿಂದ ತನ್ನನ್ನು ತಾನು ನಾನಾ ರೂಪದಲ್ಲಿ ಬಹಿರಂಗಪಡಿಸಿಕೊಳ್ಳಬಲ್ಲ. ಅವನು ತನ್ನನ್ನು ತಾನೇ ನೋಡಬಲ್ಲ. ಅಲ್ಲದೆ ಜಗತ್ತನ್ನು ಪೂರ್ಣದೃಷ್ಟಿಯಿಂದ ನೋಡಬಲ್ಲ. ಅವನಲ್ಲಿಯ ಮಹತ್ತರವಾದ ಶಕ್ತಿಯ ಲಕ್ಷಣವೆಂದರೆ 'ಸ್ವಾತಂತ್ರ ಶಕ್ತಿ'. ಇದೇ ಅವನ ಪರಮ ಪ್ರಧಾನಶಕ್ತಿ. ಅವನು ಸರ್ವತಂತ್ರ ಸ್ವತಂತ್ರನು. ಅವನ ಸ್ವಾತಂತ್ರ್ಯಶಕ್ತಿಯಿಂದಲೇ ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳು ಹುಟ್ಟಿವೆ. ಆದ್ದರಿಂದ ಇಡೀ ಸೃಷ್ಟಿಯ ಮೂಲ ಶಿವಶಕ್ತಿ. ತನ್ನಿಚ್ಛೆಯಿಂದ ಈ ಜಗತ್ತನ್ನು ಸೃಷ್ಟಿಸಿದ. ಪಾರಮಾರ್ಥಿಕ ಮತ್ತು ಲೌಕಿಕ ಈ ಎರಡು ಸ್ಥಿತಿಯಲ್ಲಿಯೂ ಅವನದೇ ಪೂರ್ಣ ಸತ್ಯತಾ. ತನ್ನನ್ನು ಎರಡು ರೂಪದಲ್ಲಿ ವ್ಯಕ್ತಪಡಿಸಿಕೊಂಡಿದ್ದಾನೆ. ಗ್ರಾಹಕ ವ್ಯಕ್ತಿಗತರೂಪ ಅನುಭವವನ್ನು ಹೊಂದಿದವನೂ ಗ್ರಾಹ್ಯವಸ್ತುನಿಷ್ಠ ಪ್ರಪಂಚಾನುಭವವನ್ನುಂಟುಮಾಡುವುದಕ್ಕೆ ಸಾಧನವಾದ ವಸ್ತುವೂ ತಾನೇ. ಪರಿಮಿತವಾದ ಶಕ್ತಿಯಿಂದ ಪ್ರಪಂಚವನ್ನು ನಡೆಸುವವನೂ ತಾನೇ ಆಗಿದ್ದಾನೆ.

ಗ್ರಾಹಕವ್ಯಕ್ತಿಗತರೂಪಿಯಾದ ಬದ್ಧಾತ್ಮನನ್ನು ವಿಮುಕ್ತನನ್ನಾಗಿ ಮಾಡುವ ಅನುಗ್ರಹವನ್ನು 'ಶಕ್ತಿಪಾತ' ಎನ್ನುತ್ತೇವೆ. ಈ ಶಿವಾನುಗ್ರಹ, ಲೀಲೆಯ ಕಾರ್ಯ, ಆನಂದದ ಸಾಕಾರರೂಪ ಎಂದು ಹೇಳಬಹುದು. ಪರಶಿವನ ಮಾನಸಿಕ ಕಣ್ಣಿನ

ಸ್ವರೂಪ ರಚನೆಯೇ **ಸೃಷ್ಟಿ.** ತಾನು ಅವಲೋಕಿಸಿದ್ದನ್ನು ಹಿಡಿದಿಟ್ಟುಕೊಳ್ಳುವುದೇ **ರಕ್ಷಣೆ.** ಈ ತತ್ತ್ವಗಳನ್ನು ಪ್ರಜ್ಞೆಯೊಂದಿಗೆ ಅನುಗೊಳಿಸುವುದೇ **ಭಗವದನುಗ್ರಹ.** ಅನುಗ್ರಹವು ಪೂರ್ಣವಾಗಿ ಈಶನ ಇಚ್ಛೆಯನ್ನೇ ಅವಲಂಬಿಸಿರುತ್ತದೆ. ಈ ಸಂಬಂಧದಲ್ಲಿ ಅನುಗ್ರಹಕ್ಕೆ ಒಂದು ವಿಶೇಷ ಅರ್ಥವಿದೆ. ನಮ್ಮ ಎಲ್ಲಾ ಸುಖದುಃಖಗಳಿಗೂ ಮೂಲ ವಾದ ವಿಕಲ್ಪಗಳನ್ನು ನಿವಾರಣೆ ಮಾಡಲು ಇದೊಂದೇ ಮಾರ್ಗವೆಂದು ತಿಳಿಯಲಾಗಿದೆ. ಈ ಅಭಿಪ್ರಾಯಗಳನ್ನು ಪ್ರಜ್ಞೆಯೊಂದಿಗೆ ಪರಿವರ್ತಿಸಿ ಲೀನಮಾಡಿದಂತೆಲ್ಲ ನಮ್ಮ ಪ್ರಜ್ಞೆ ಹಿಗ್ಗುತ್ತಾ ಹೋಗುತ್ತದೆ. ಮಾನಸಿಕ ಮಟ್ಟವನ್ನು ಮೀರಿ ಮುಂದೆ ಹೋಗಲು ಇದೊಂದೇ ಮಾರ್ಗ. ಇದಕ್ಕಾಗಿ ದೈವಾನುಗ್ರಹ ಆವಶ್ಯಕ.

ಯಾರಲ್ಲಿ ಅತಿಶಯವಾದ ಪ್ರವೃತ್ತಿವಿಶೇಷಗಳು ಕಂಡುಬರುತ್ತವೆಯೋ ಅವರಿಗೆ ಶಿವಾನುಗ್ರಹ ಉಂಟಾಗಿದೆ ಎನ್ನಬಹುದು. ತಾರತಮ್ಯಗಳ ದೆಸೆಯಿಂದ ಶಕ್ತಿಪಾತವು ಅನೇಕ ಭೇದಗಳನ್ನು ಪಡೆಯುತ್ತದೆ. ಶಿವಾನುಗ್ರಹ ಅಥವಾ ಗುರುಕಾರುಣ್ಯವಿಲ್ಲದ ಹೊರತು ಕರ್ಮಕ್ಷಯವಾಗಲಿ ಶಿವಜ್ಞಾನವಾಗಲಿ ಆಗುವುದಿಲ್ಲವೆಂದು ಶಿವಶರಣರು ತಮ್ಮ ಗ್ರಂಥಗಳಲ್ಲಿ ‘ ಗುರುಕಾರುಣ್ಯಸ್ಥಿತಿ ’ ಎಂಬ ಶೀರ್ಷಿಕೆಯಲ್ಲಿ ಹೇಳಿದ್ದಾರೆ. ಅವರ ಪ್ರಾರ್ಥನೆಗಳೆಲ್ಲಾ ಶಿವಾನುಗ್ರಹಾಪೇಕ್ಷೆಯಿಂದ ಕೂಡಿರುವವುಗಳಾಗಿರುತ್ತವೆ. ಯಾರು ಪರಮಾತ್ಮನನ್ನು ಭಕ್ತಿಪೂರ್ವಕವಾಗಿ ಆರಾಧಿಸುತ್ತಾರೆಯೋ ಅವರ ಬುದ್ಧಿಯು ಅವರಿಗೆ ಅನುಕೂಲಿಸುವಂತೆ ಪ್ರಚೋದಿಸುತ್ತಾನೆ. ನಮ್ಮಲ್ಲಿರುವುದೆಲ್ಲವನ್ನೂ ಅಂದರೆ ದೇಹ ಪ್ರಾಣ ಮನಸ್ಸು ಮೊದಲಾದವುಗಳನ್ನು ಶಿವನಲ್ಲಿ ಆತ್ಮಾರ್ಪಣೆ ಮಾಡಿ ಪೂರ್ಣವಾಗಿ ನಿವೇದಿಸುತ್ತೇವೆಯೋ ಆಗ ಸರ್ವಸ್ವವೂ ಶಿವನ ಸೊತ್ತಾಗಿ ಸ್ವಯಂ ಶಿವನೇ ಎಲ್ಲಾ ಹೊಣೆಯನ್ನು ಹೊರುವನು. ಆಗ ನಾವು ಯಾವುದನ್ನು ಕುರಿತು ಚಿಂತಿಸಬೇಕಾದ್ದಿಲ್ಲ. ಇದು ಸರ್ವಸಮರ್ಪಣ ಬುದ್ಧಿಯಿಂದ ಸಾಧ್ಯ ಎಂಬುದು ಶಿವಶರಣರ ನಂಬಿಕೆ ಮತ್ತು ಸಾಧನೆ.

ಶಕ್ತಿಪಾತ

ಮಾನವನು ತನ್ನ ಅಸ್ತಿತ್ವವನ್ನು ವ್ಯಕ್ತಿತ್ವವನ್ನು ಅರಿತುಕೊಳ್ಳಬೇಕು. ಇದು ಮೊದಲನೆಯ ಕರ್ತವ್ಯ. ಅದರಲ್ಲಿ ಕಳೆದುಹೋದ ವಿಷಯಗಳನ್ನು ತಪ್ಪದೆ ನೆನಪಿನಲ್ಲಿಡ ಬೇಕು. ವರ್ತಮಾನಕಾಲದ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಅದರ ವ್ಯಾಪ್ತಿಯನ್ನು ಅದರ ಆಗುಹೋಗುಗಳನ್ನು ಗಮನಿಸಬೇಕು. ಆಗ ಮಾನವನು ತನ್ನ ಮುಂದಿನ ಅಂದರೆ ಭವಿಷ್ಯಕಾಲದ ಸ್ವರೂಪವನ್ನು ನಿರ್ಮಾಣ ಮಾಡಲು ಸಮರ್ಥ ನಾಗುತ್ತಾನೆ.

‘ ಬೀಜವಿದ್ದಂತೆ ಮೊಳಕೆ ’ ಭೂತಭವಿಷ್ಯತ್ ವರ್ತಮಾನ ಕಾಲಗಳಲ್ಲಿ ಕಾರ್ಯ ಕಾರಣ ಭಾವನಿಯಮವು ಪ್ರಧಾನವಾಗಿವೆ. ಇದು ಎಲ್ಲಾ ಕೆಲಸಗಳಲ್ಲಿಯೂ ಎಲ್ಲಾ ಕರ್ಮಗಳಲ್ಲಿಯೂ ಅನಿವಾರ್ಯವಾದ ಪ್ರಕೃತಿನಿಯಮ. ಮಾನವ ಜೀವನವು ಇಂತಹ

ಮೂರು ಕಾಲಗಳ ಪರಿಸ್ಥಿತಿಗಳ ಸರಪಣಿಯಂತಿದೆ. ನಮ್ಮ ಸ್ವಭಾವವು ನಮ್ಮ ಹಿಂದಿನ ಜನ್ಮಗಳ ಕರ್ಮಗಳಿಗನುಸಾರವಾಗಿ ಸಂಕೋಚವನ್ನೋ ವಿಕಾಸವನ್ನೋ ಪಡೆದಿರುತ್ತದೆ. ಆದರೂ ಮಾನವನ ವ್ಯಕ್ತಿತ್ವದಲ್ಲಿ ಸ್ವಾತಂತ್ರ್ಯವನ್ನೂ ವಿಕಾಸವನ್ನೂ ಪಡೆದಿರುವ ದೈವ ಸಂಪತ್ತು ಬೆಳಗುತ್ತಲಿರುತ್ತದೆ.

ಮನಸ್ಸಿನ ಹೊಯ್ದಾಟಗಳಿಂದ ನಾವು ಎಷ್ಟು ಮಾತ್ರ ಬಿಡುಗಡೆಯನ್ನು ಪಡೆಯುವೆವೋ ಅಷ್ಟು ಮಾತ್ರ ನಮ್ಮ ತಿಳಿವಳಿಕೆಯು ವಿಕಸಿಸುತ್ತದೆ. ದೈವಸಂಪತ್ತು ಅಂತಹ ವ್ಯಕ್ತಿಗಳಲ್ಲಿ ಹೊರಹೊಮ್ಮುತ್ತದೆ. ಅದು ತನಗೂ ಇತರರಿಗೂ ಕೂಡ ಹಿತವನ್ನುಂಟುಮಾಡುತ್ತದೆ. ಅಂತಹವರ ಸಾನ್ನಿಧ್ಯವೇ ಸಮಾಜಕ್ಕೆ ಭೂಷಣವಾಗಿರುತ್ತದೆ. ಪುಣ್ಯಪುರುಷರ ಕೆಲಸಗಳು ಅವುಗಳನ್ನನುಸರಿಸುವವರ ಸಾಧನೆಗಳು ಮಾನವನ ಭವಿಷ್ಯವನ್ನು ನಿರ್ಣಯಿಸುತ್ತವೆ. ಇಂತಹ ಮುಂದಾಳುಗಳು ಗುರುವಾಗಿರಬಹುದು, ನಾಯಕರಾಗಿರಬಹುದು, ಮಹಾತ್ಮರಾಗಿರಬಹುದು. ಅವರ ಪ್ರವೃತ್ತಿಯು ಸ್ವ-ಪರಹಿತ ವಾಗಿರುತ್ತದೆ.

ಜಾನಾಮಿ ಧರ್ಮಂ ನ ಚ ಮೆ ಪ್ರವೃತ್ತಿಃ ।
ಜಾನಾಮ್ಯಧರ್ಮಂ ನ ಚ ಮೆ ನಿವೃತ್ತಿಃ
ತ್ವಯಾ ಹೃಷಿಕೇಶ ಹೃದಿ ಸ್ಥಿತೇನ
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ॥

ನನಗೆ ಧರ್ಮ ಎಂತಹದು ಎಂಬುದು ಗೊತ್ತು. ಅದರಲ್ಲಿ ನನಗೆ ಪ್ರವೃತ್ತಿಯಿಲ್ಲ. ಅಧರ್ಮ ಎಂತಹುದು ಎನ್ನುವುದು ಗೊತ್ತು. ಅದರಲ್ಲಿ ನಿವೃತ್ತಿಯಿಲ್ಲ. ನನ್ನ ಹೃದಯ ಸ್ಥಾನದಲ್ಲಿ ನೆಲೆಸಿರುವ ಪರಮೇಶ್ವರನಾದ ನೀನು ಯಾವರೀತಿ ಪ್ರೇರೇಪಿಸಿ ನಿಯೋಜಿಸುತ್ತೀಯೋ ಅದರಂತೆ ಆಚರಿಸುವವನಾಗಿದ್ದೇನೆ. ಅನುಗ್ರಹಿಸು ಎಂದು ಅಸಾಹಯಕನಾದ ಭಕ್ತನು ದೇವರಲ್ಲಿ ಮೊರೆ ಇಡುತ್ತಾನೆ. ನಮ್ಮ ಕೆಲಸಗಳು ಎಲ್ಲಾ ಕಾಲದಲ್ಲಿಯೂ ಪುರುಷಪ್ರಯತ್ನದಿಂದಲೇ ಸಿದ್ಧಿಯನ್ನು ಪಡೆಯುವುದಿಲ್ಲ. ನಮ್ಮ ಕಾರ್ಯಸಿದ್ಧಿಗೆ ನಮಗೆ ತಿಳಿಯದಿರುವ ಸರ್ವವ್ಯಾಪಿಯಾಗಿರುವ ಇನ್ನೊಂದು ಶಕ್ತಿಯ ಬೆಂಬಲ ಬೇಕು. ಅದನ್ನು ದೈವಸಂಕಲ್ಪವೆಂದು ಹಿರಿಯರು ಸಾರಿದ್ದಾರೆ.

ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ
ಯಮೇವೈಷ ವೃಣುತೇ ತೇನ ಲಭ್ಯೋ
ಯಸ್ಯೈ ವಿವೃಣುತೆ ತನೂಂ ಸ್ವಾಂ ॥

ಚಿರಕಾಲ ಪರಮೇಶ್ವರನ ಉಪಾಸನೆಯ ಫಲವಾಗಿ ಉಂಟಾಗುವ ಅಹಂಕಾರ ವಿಗಮ ಜ್ಞಾನವಿಕಾಸಗಳನ್ನು ಗುರುತಿಸಿದ ನಮ್ಮ ಹಿಂದಿನ ಭಾವುಕರು ಪರಮೇಶ್ವರನ ದಯೆಯು ಈ ವ್ಯಕ್ತಿಗೆ ಉಂಟಾಗಿದೆ ಎಂಬುದನ್ನು ಶಕ್ತಿಪಾತ, ಶಿವಾನುಗ್ರಹ, ಹರಿಕೃಪ,

ಜ್ಞಾನೋದಯ ಮೊದಲಾದ ಪಾರಿಭಾಷಿಕ ಪದಗಳಿಂದ ಸೂಚಿಸಿರುತ್ತಾರೆ. ಶೈವಸಿದ್ಧಾಂತ ದಲ್ಲಿ ಇದಕ್ಕೆ **ಶಕ್ತಿಪಾತ**ವೆಂದು ರೂಢಿಯಿದೆ.

ಅಸಂಖ್ಯಾತ ಶಕ್ತಿಗಳುಳ್ಳವನು ಪರಮೇಶ್ವರ. ಈ ವಿಶ್ವವೆಲ್ಲಾ ಶಕ್ತಿಯ ವಿಕಾಸ. ಪರಮೇಶ್ವರನೇ ಸರ್ವಾತ್ಮಕನಾಗಿ ಎಲ್ಲಾ ಕೆಲಸಗಳನ್ನು ನಡೆಸುವನೆಂದು ತನ್ನ ಕರ್ತೃತ್ವದ ತ್ಯಾಗವನ್ನೇ ಮುಂದೆ ಮಾಡಿಕೊಂಡು ಪರಮೇಶ್ವರನಿಗೆ ಶರಣಾಗತಿಯನ್ನು ಮಾಡಿರುವವನು ಜೀವಾತ್ಮ. "ಪರಮೇಶ್ವರನೇ ಸಾಧಕನು, ಬೋಧಕನು, ಪ್ರೇರಕನು" ಎಂದು ನಂಬಿರುವನು. ಶರೀರದ ಕ್ರಿಯೆ, ಮನಸ್ಸಿನ ಭಾವನೆ, ಬುದ್ಧಿಶಕ್ತಿಯ ನಿರ್ಣಯ—ಇವೆಲ್ಲಾ ಆ ಪರಶಿವನ ಅಧೀನವೆಂದು ತಿಳಿದಾಗ ಪರಮೇಶ್ವರನ ದಯೆ ಇವನ ಮೇಲೆ ಪ್ರಸರಿಸುತ್ತದೆ. ಆಗ ಇವನ ವಾಕ್ಕು ಮತ್ತು ಕಾರ್ಯಸತ್ಯದಿಂದ ಬೇರೆ ಇರಲಾರದು. ಇಂತಹವರನ್ನು ಮಹಾತ್ಮರೆನ್ನುತ್ತೇವೆ. ಇವರ ಈ ವಿಕಾಸವು ಆತ್ಮಸಾಕ್ಷಾತ್ಕಾರದ ಹೆದ್ದಾರಿಯಲ್ಲಿ ಒಂದು ಮಜಲು-ಸ್ಥಿತಿ-ಮಟ್ಟ.

ತೇಷಾಂ ಸತತಯುಕ್ತಾನಾಂ ಯೋ ಮಾಂ ಭಜತಿ ಪ್ರೀತಿ ಪೂರ್ವಕಂ
ದದಾಮಿ ಬುದ್ಧಿಯೋಗಂ ತಂ ತೇನ ಮುಪಯಾಂತಿತೆ

॥ಗೀತೆ॥

ಯಾವಾಗಲೂ ಪ್ರೀತಿಪೂರ್ವಕವಾಗಿ ನನ್ನನ್ನು ಭಕ್ತಿಯಿಂದ ಯಾರು ಆರಾಧಿಸುತ್ತಾರೋ ಅವರ ಬುದ್ಧಿಯು ಯುಕ್ತಮಾರ್ಗದಿಂದ ಹೋಗುವ ಹಾಗೆ ಪ್ರಚೋದಿಸುತ್ತೇನೆಂದು ಗೀತೆಯ ಆದೇಶ–

ಯದಾ ವಿನಿಯತಂ ಚಿತ್ತಂ ಆತ್ಮನ್ಯೇವಾವತಿಷ್ಠತೆ
ನಿಸ್ಪೃಹಃ ಸರ್ವಕಾಮೇಭ್ಯೋ ಯುಕ್ತ ಇತ್ಯುಚ್ಯತೆ ತದಾ॥

(ಗೀತೆ. ಅ. ೬ ಶ್ಲೋಕ ೧೮)

ಯಾವಾಗ ಮನಸ್ಸು ನಿಗ್ರಹಿಸಲ್ಪಟ್ಟು ಆತ್ಮನಲ್ಲಿಯೇ ನಿಲ್ಲುವಂತಾಗಿ ಕಾಮನೆಗಳಲ್ಲಿ ಆಸೆಯಿಲ್ಲದಿರುವವನಾಗುವನೋ ಆಗ **ಯುಕ್ತ**ನೆನಿಸುವನು. 'ಯುಕ್ತ' ಎಂದರೆ ಯಾವಾಗಲೂ ಸ್ವಸ್ವರೂಪದಲ್ಲಿರುವವನು. ಈ ಸ್ಥಿತಿಯನ್ನು ಪರಾಶಾಂತಿಯೆಂದು ಗೀತೆಯಲ್ಲಿ ಉದಹರಿಸಿರುತ್ತಾರೆ.

ನಿಜವಾದ ಭಕ್ತನು ಅವನು ಎಷ್ಟು ಮಹತ್ಕಾರ್ಯವನ್ನು ಸಾಧಿಸಿದರೂ ಅದು ದೈವೇಚ್ಛೆ ಎಂದು ಸಾಮಾನ್ಯವಾಗಿ ತನ್ನ ಕರ್ತೃತ್ವ ತ್ಯಾಗವನ್ನೇ ಸೂಚಿಸುತ್ತಾನೆ. ಪರಮೇಶ್ವರನೇ ಸರ್ವಾತ್ಮಕನಾಗಿ ಎಲ್ಲಾ ಕೆಲಸಗಳನ್ನೂ ನಡೆಸುವನೆಂದು ಅವನ ಅಂತರ್ಯವಾದ ನಿಶ್ಚಯ.

ಶಕ್ತಿಪಾತವನ್ನು ಅನೇಕ ಹಂತಗಳಲ್ಲಿ ಗುರುತಿಸಬಹುದೆಂದು ನಮ್ಮ ಹಿರಿಯ ಭಕ್ತರೂ ಅನುಭವಿಗಳೂ ಹೇಳುತ್ತಾರೆ. ಸಾಧಕನು ಗುರುವನ್ನು ಹುಡುಕಿ ಆಧ್ಯಾತ್ಮ ವಿಷಯಗಳನ್ನು ಕೇಳುವುದು ಮತ್ತು ಅರಿಯುವುದು ಮೊದಲನೆಯ ಲಕ್ಷಣ. ಸಾಧಕನು

ತನ್ನ ಜೀವನನ್ನು ಕೆಲವು ನಿಯಮಗಳನ್ನನುಸರಿಸಿ ನಡೆಸಬೇಕು. ಆದರೆ ದಯಾಮಯನಾದ ಪರಮೇಶ್ವರನು ಸಾಧಕನನ್ನು ಉತ್ಕರ್ಷಸ್ಥಿತಿಗೆ ಒಯ್ಯಬೇಕಾದರೆ ಇವನು ಅರ್ಹನಾಗಬೇಕು. ಅರ್ಹತೆಯು ಜೀವನದಲ್ಲಿ ಪವಿತ್ರತೆಯ ಭಾವನೆಯಿಂದ ಉಪಾಸನೆ ಅಳವಡಿಸಿಕೊಳ್ಳದಿದ್ದರೆ ಉಂಟಾಗುವುದಿಲ್ಲ. ಪರಮೇಶ್ವರನು ವ್ಯಕ್ತಿಯ ಅರ್ಹತೆಯನ್ನನುಸರಿಸಿ ಕರುಣಿಸುವನು.

ಆಧ್ಯಾತ್ಮ ಜ್ಞಾನವೊಂದೇ ಜೀವನದಲ್ಲಿ ಪ್ರಮುಖವಾದ ವಿಷಯವಾಗಬಾರದು. ವ್ಯವಹಾರ ಪ್ರಪಂಚದಲ್ಲಿ ಸಮತ್ವವನ್ನು ಕಾಪಾಡಬೇಕು. ಹೊರಗಿನ ಪ್ರಪಂಚದಲ್ಲಿ ಜೀವನವನ್ನು ಸಮಸ್ಥಿತಿಯಲ್ಲಿ ಸಿಲ್ಲಿಸಿಕೊಂಡು ಅಂತರ್ಯಶಕ್ತಿಗಳನ್ನು ಬೆಳಸಬೇಕು. ವಿಜ್ಞಾನಿಗಳು ದಾರ್ಶನಿಕರು ಈ ವಿಷಯವನ್ನು ಒತ್ತಿ ಹೇಳಿದ್ದಾರೆ. ಉಪನಿಷತ್ತಿನಲ್ಲಿ 'ಭೂತ್ಯೈನಪ್ರಮದಿತವ್ಯಂ' ಎಂದು ಹೊರಗಿನ ಪ್ರಪಂಚದಲ್ಲಿ ಸಮತ್ವವನ್ನೂ ಸ್ಥೈರ್ಯವನ್ನೂ ಮರೆಯಬಾರದು ಎಂದು ಆದೇಶವಿದೆ.

ಮಾನವನ ಜೀವನ ಶರೀರ ಇಂದ್ರಿಯ ಮನಸ್ಸು ತಿಳಿವಳಿಕೆ ಎಂಬ ನಾಲ್ಕು ವಿಭಾಗಗಳಿಂದ ಕೂಡಿದೆ. ಈ ಶರೀರದಲ್ಲಿ ಜೀವನವೃತ್ತಿ ಅಡಗಿರುವವರೆಗೆ ಶರೀರಕ್ಕೆ ನಡೆಯಬೇಕಾದ ಚಲನವಲನಗಳು ಇದ್ದೇ ಇರಬೇಕು. ಜೀವನವನ್ನು ಪ್ರಕೃತಿತತ್ತ್ವಕ್ಕೆ ವಿರುದ್ಧವಾಗಿ ಪರಿಣಮಿಸದ ಹಾಗೆ ನೋಡಿಕೊಳ್ಳಬೇಕು. ಸಂಸಾರವೆಂಬ ಗಹನವಾದ ಬಲೆಯಲ್ಲಿ ಸಿಕ್ಕಿಕೊಂಡಿರುವ ಮಾನವನ ಜೀವನ ಹಸನಾಗಬೇಕಾದರೆ ಅಹಂಕಾರ ನಿಗಮ, ಗುರೂಪದೇಶ, ಪರಮೇಶ್ವರನ ದಯೆ ಇವೆಲ್ಲವೂ ಬೇಕಾಗುತ್ತವೆ.

ಸಾಧನದಲ್ಲಿ ನಾವೆಷ್ಟು ಮುಂದುವರೆದಿದ್ದೇವೆಂಬ ವಿಷಯವನ್ನು ಗುರುತಿಸುವುದು ಸಾಧಕನ ಕರ್ತವ್ಯ. ಇದನ್ನು **ಸ್ವಾತ್ಮವಿಮರ್ಶೆ** ಎಂದು ಕರೆದಿದ್ದಾರೆ. ಹೊರಗಿನ ಜೀವನದಲ್ಲಿ ಸಾಮಾಜಿಕವಾಗಿ ಆರ್ಥಿಕವಾಗಿ ಸಾಂಘಿಕವಾಗಿ ಹಲವಾರು ಅನುಕೂಲಗಳೂ ಕಷ್ಟಗಳೂ ಇವೆ. ಅವುಗಳನ್ನು ಯೋಗ್ಯರೀತಿಯಿಂದ ನಡೆಸಿಕೊಳ್ಳಬೇಕು. ಇದು ಹೊರಗಿನ ಶುದ್ಧಿ. ಅಂತರ್ಯವಾಗಿ ಅನೇಕ ಸಂಸ್ಕಾರಗಳಿವೆ. ಭೂತಕಾಲದ ವ್ಯವಹಾರದಿಂದ ವರ್ತಮಾನಕಾಲದ ಪರಿಸ್ಥಿತಿ ರೂಪುಗೊಂಡಿದೆ. ಈ ಸ್ಥಿತಿಯಿಂದ ಉಂಟಾಗುವ ತೊಂದರೆಗಳನ್ನು ನಿನಾರಿಸುವುದಕ್ಕೆ ಅಂತರ್ಯ ಸಂಸ್ಕಾರಗಳಲ್ಲಿ ಕೆಲವನ್ನು ಅಳಿಸಬೇಕು. ಕೆಲವನ್ನು ಬೆಳೆಸಬೇಕು. ಇದಕ್ಕೆ ನಿಶ್ಚಯಾತ್ಮಕ ತಳಹದಿ ಮೇಲೆ ನಿಂತಿರುವ ತಿಳಿವಳಿಕೆ ಬೇಕು. ಈ ತಿಳಿವಳಿಕೆಯವ್ಯಾಪ್ತಿಯಿಂದ ಸಂಸ್ಕಾರಗಳನ್ನು ಅಳಿಸಲು ಬೆಳೆಸಲು ಸಾಧ್ಯವಾಗುತ್ತದೆ. ಇಂತಹವಿಕಸಿತವಾದ ಜ್ಞಾನ ಸರ್ವಸ್ವವನ್ನೇ ಆಧಾರವಾಗಿಟ್ಟುಕೊಂಡಾಗ ಸಾಧಕನು **ಅಲ್ಪಾಹಂತಾ** ಸ್ಥಿತಿಯಿಂದ **ಪೂರ್ಣಾಹಂತಾ**ಸ್ಥಿತಿಗೆ ಬದಲಾವಣೆಯನ್ನು ಪಡೆಯುವನು. ಈ ವಿಧವಾದ ಪರಿವರ್ತನೆಯು ಪರಮೇಶ್ವರನ ದಯೆಯಿಂದ ಉಂಟಾಗಬೇಕು. ಇದನ್ನು ಸಾಧಕನು ಸ್ವಾತ್ಮವಿಮರ್ಶೆಯಿಂದ ಕಂಡುಕೊಳ್ಳಬೇಕು.

ಶಿವಾದ್ವೈತ ಸಂಪ್ರದಾಯದಲ್ಲಿ ಶಿವನಿಗಿಂತ ಬೇರೆಯಾದ ಪದಾರ್ಥವಿಲ್ಲ. ಎಲ್ಲಾ ಜೀವಿಗಳ ಸುಖದುಃಖಗಳೂ ಆ ಪರಶಿವನ ಸ್ವಾತಂತ್ರ್ಯ ಶಕ್ತಿಯಿಂದಲೇ ನಡೆಯುತ್ತಲಿವೆ.

ಇಹಲೋಕ ಮತ್ತು ಪರಲೋಕದಲ್ಲುಂಟಾಗುವ ಸುಖದುಃಖಗಳು ಬಗೆಬಗೆಯಾಗಿವೆ. ಇವುಗಳು ತರತಮ ಭಾವಗಳಿಂದ ಕೂಡಿರುವ ಮಲ ಮತ್ತು ಕರ್ಮಗಳ ಫಲಸ್ವರೂಪ ಗಳಾಗಿವೆ. ಈಶ್ವರನು ಎಲ್ಲಾ ಕರ್ಮಗಳಿಗೂ ಫಲವನ್ನು ಕೊಡುವವನಾಗಿದ್ದಾನೆ. ಇಹ ಲೋಕ ಮತ್ತು ಪರಲೋಕಗಳಲ್ಲಿ ಜೀವರು ಸುಖಗಳನ್ನೂ ದುಃಖಗಳನ್ನೂ ಅನುಭವಿಸ ಬೇಕಾದರೆ ಸುಖದುಃಖಗಳನ್ನನುಭವಿಸುವುದಕ್ಕೆ ಉಪಕರಣಗಳಾಗಿರುವ ಶರೀರ, ಪ್ರಾಣ, ಪುರ್ಯಷ್ಟಕಾದಿಗಳು ಬೇಕು. ಶಿವನು ಸರ್ವಶಕ್ತನಾಗಿ ಸರ್ವಫಲಪ್ರದನಾಗಿದ್ದರೂ ಸುಖ ದುಃಖಾನುಭವವನ್ನು ಜೀವನಿಗುಂಟುಮಾಡಬೇಕಾದರೆ ಮಲ ಮತ್ತು ಕರ್ಮಗಳ ಪರಿಮಿತಿಗನುಸಾರವಾಗಿ ಉಂಟುಮಾಡುತ್ತಾನೆ.

ಶಿವನ ಪಂಚಕೃತ್ಯಗಳಲ್ಲಿ ಜೀವರುಗಳಿಗನ್ವಯಿಸುವ ಸೃಷ್ಟಿ, ಸ್ಥಿತಿ, ಪ್ರಳಯ ಈ ಮೂರು ಕೃತ್ಯಗಳೂ ಕರ್ಮ ಸಾಪೇಕ್ಷವಾಗಿ ನಡೆಯುತ್ತವೆ. ಶಿವನು ಸ್ವತಂತ್ರನಾಗಿ ಯಾವ ಅಪೇಕ್ಷೆಯೂ ಇಲ್ಲದೆ ಪಂಚಕೃತ್ಯಗಳಲ್ಲಿ ಒಂದಾದ **ಅನುಗ್ರಹ**ವನ್ನು ಅಂದರೆ **ಶಕ್ತಿಪಾತ**ವನ್ನು ಅರ್ಹರಾಗಿಯೂ ಸಿದ್ಧತೆಯನ್ನು ಪಡೆದಿರುವವರೂ ಆದ ಭಕ್ತರಲ್ಲಿ ವಿನಿಯೋಗಿಸುತ್ತಾನೆ. ಪ್ರತಿಯೊಬ್ಬ ಜೀವಿಯೂ ಮೋಕ್ಷಕ್ಕೆ ಅರ್ಹನಾಗಿದ್ದಾನೆ ಅಥವಾ ಅಧಿಕಾರಿಯಾಗಿದ್ದಾನೆ. ಇದಕ್ಕೆ ಸಾಧನವಾಗಿರುವ **ಶಕ್ತಿಪಾತಕ್ಕೂ** ಅರ್ಹನಾಗಿದ್ದಾನೆ. ಅರ್ಹತೆ ಒಂದೇ ಪ್ರಧಾನ ಕಾರಣವಾಗುವುದಿಲ್ಲ. ಒಳ್ಳೆಯದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸಿದ್ಧತೆಯು ಬೇಕು. ಈ ಸಿದ್ಧತೆಯು ಕರ್ಮಾಚರಣೆಯಿಂದುಂಟಾಗು ತ್ತದೆ. ಕರ್ಮಗಳು ಎರಡು ವಿಧ. ಜ್ಞಾನಪ್ರಕಾಶವನ್ನುಂಟುಮಾಡಿ ಶಕ್ತಿಪಾತಕ್ಕೆ ಕಾರಣವಾಗಿ ತನ್ಮೂಲಕ ಮೋಕ್ಷವನ್ನುಂಟುಮಾಡುವುದೊಂದು ವಿಧ. ಇಹಲೋಕ ದಲ್ಲಿಯೂ ಪರಲೋಕದಲ್ಲಿಯೂ ಸುಖಸಂತೋಷಗಳನ್ನುಂಟುಮಾಡುವ ಉನ್ನತಸ್ಥಿತಿಗೆ ಕಾರಣವಾಗಿರುವುದಿನ್ನೊಂದು ವಿಧ. ಯೋಗ, ಜಪ, ವ್ರತ, ಧ್ಯಾನ, ದೀಕ್ಷೆ ಮೊದ ಲಾದುವುಗಳು ಜ್ಞಾನವಿಕಾಸಕ್ಕೆ ಕಾರಣವಾಗಿರುವ ಕರ್ಮಗಳು. ದಾನ, ಹೋಮ, ಯಜ್ಞ ಮೊದಲಾದುವುಗಳು ಇಹಲೋಕ ಮತ್ತು ಪರಲೋಕಗಳಲ್ಲಿ ಅಭ್ಯುದಯಕ್ಕೆ ಕಾರಣವಾಗಿರುವ ಕಾಮ್ಯಕರ್ಮಗಳು. ಈ ಎರಡು ಬಗೆಯ ಕರ್ಮರಾಶಿಗೂ ಫಲವನ್ನು ಕೊಡುವವನು ಶಿವನೇ. ಜ್ಞಾನವಿಕಾಸವನ್ನುಂಟುಮಾಡುವ ಕರ್ಮಗಳಿಗೆ ಸ್ವತಂತ್ರ ವಾಗಿ ಮಲ ಮತ್ತು ಕರ್ಮಗಳ ಅಪೇಕ್ಷೆಯಿಲ್ಲದೆ ಫಲವನ್ನು ಕೊಡುತ್ತಾನೆ. ಇದೇ ಭಗವದನುಗ್ರಹ ಅಥವಾ ಶಕ್ತಿಪಾತ. ಮಿಕ್ಕ ಕರ್ಮಗಳಿಗೆ ಜೀವರುಗಳಿಗಿರುವ ಮಲ ಮತ್ತು ಕರ್ಮಸಾಪೇಕ್ಷವಾಗಿ ಫಲವನ್ನು ಕೊಡುತ್ತಾನೆ. ಜೀವರು ತಮ್ಮ ಶೀಲವಳಿಕೆ ಯಿಂದ ಯಾವ ಬಗೆಯ ಕರ್ಮಗಳನ್ನಾಚರಿಸುತ್ತಾರೆಯೋ ಅಂತಹ ಫಲಗಳನ್ನು ಪಡೆಯುತ್ತಾರೆ.

ದೀಕ್ಷಾಸಿಚ್ಛಿನ್ನಪಾಶತ್ವಾತ್ ಭಾವನಾ ಭಾವಿತಸ್ಯ ಹಿ ।
ವಿಕಾಸಂ ತತ್ತ್ವಮಾಯಾತಿ ಪ್ರಾತಿಭಂ ತದುದಾಹೃತಂ ॥

(ತಂತ್ರಾಲೋಕ, ಆಹ್ನಿಕ ೩, ಶ್ಲೋಕ ೧೭೪.)

ದೀಕ್ಷೆಯೆಂಬ ಶಕ್ತಿಯಿಂದ ಪಾಶಗಳು ಕತ್ತರಿಸಲ್ಪಟ್ಟು ಭಾವನೆಯಿಂದ (ಅನುಸಂಧಾನದಿಂದ) ಪರಿಷ್ಕೃತನಾದರೆ ಚಿತ್ತತ್ತ್ವವು ವಿಕಸಿತವಾಗುತ್ತದೆ. ಇದಕ್ಕೆ **ಪ್ರಾತಿಭ** ಎಂದು ಹೆಸರು. ಇಂತಹ ಪ್ರಾತಿಭವನ್ನು ಹೊಂದಿದವನಿಗೆ ಶಕ್ತಿಪಾತವಾಗುತ್ತದೆ.

ಬೀಜಂ ಕಾಲೋಕ್ತ ಸಂಸಿಕ್ತಂ ಯಥಾ ವರ್ಧೇತ ತತ್ತಥಾ ।
ಯೋಗಯಾಗಜಪರುಕ್ತೈಃ ಗುರುಣಾ ಪ್ರಾತಿಭಂ ಸ್ಫುಟೇತ್ ॥

(ತಂತ್ರಾಲೋಕ, ಆಹ್ನಿಕ ೧೩ ಶ್ಲೋಕ ೧೭೬)

ಸಕಾಲದಲ್ಲಿ ಬಿತ್ತಿದ ಬೀಜಕ್ಕೆ ನೀರು ಹಾಕುತ್ತಿದ್ದರೆ ಮೊಳಕೆ ಒಂದು ವೃದ್ಧಿಯಾಗುವ ಹಾಗೆ ಗುರುಗಳಿಂದ ಹೇಳಲ್ಪಟ್ಟ ಯೋಗಯಾಗ ಜಪಗಳಿಂದ ಪ್ರಾತಿಭವು ಸ್ಫುಟಿಸುತ್ತದೆ.

ಮಿತಪ್ರಮಾತೃವಿಗೆ ಜ್ಞಾನವಿಕಾಸವಾಗಬೇಕಾದರೆ ಗುರುವು ಸಹಕಾರಿ ಕಾರಣ. ಎಲ್ಲಾ ವಿಷಯಗಳನ್ನು ತಿಳಿದು ಸಿದ್ಧಪುರುಷನಾಗಿರುವ ಗುರು ಈ ಲೋಕದಲ್ಲಿ ಸಿಕ್ಕುವುದು ಕಷ್ಟ. ಜ್ಞಾನಪಿಪಾಸೆಯಿರುವ ಸಾಧಕನು ಒಂದೊಂದು ವಿಷಯವನ್ನಾದರೂ ಗ್ರಹಿಸಿ ತನ್ನ ಜ್ಞಾನವನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು. ಪುಷ್ಪರಸವನ್ನು ಕೋರುವ ದುಂಬಿಯು ಬಗೆಬಗೆಯ ಪುಷ್ಪಗಳಲ್ಲಿ ರಸವನ್ನು ಹೀರುವ ಹಾಗೂ ಅನೇಕ ನದಿಗಳು ಸಮುದ್ರವನ್ನು ಸೇರುವ ಹಾಗೂ ಸಾಧಕನು ಅನೇಕ ಮುಖಗಳಿಂದ ಜ್ಞಾನವನ್ನು ಗ್ರಹಿಸಬೇಕು. ಸ್ವಪ್ರಯತ್ನದಿಂದ ಶಾಸ್ತ್ರಜ್ಞಾನವನ್ನು ಗ್ರಹಿಸಿ ಸಾಧನಾಭ್ಯಾಸಗಳನ್ನು ಮಾಡಿದರೆ ಪ್ರಾತಿಭವು ಸ್ಫುಟಿಸಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗುತ್ತಾನೆ. ಇಂತಹ ಸತ್ಪಾತ್ರಕ್ಕೆ ಶಕ್ತಿಪಾತವುಂಟಾಗುತ್ತದೆ.

ಆಮೋದಾರ್ಥೀ ಯಥಾ ಭೃಂಗಃ ಪುಷ್ಪಾತ್ ಪುಷ್ಪಾಂತರಂ ವ್ರಜೇತ್ ।
ವಿಜ್ಞಾನಾರ್ಥೀ ತಥಾ ಶಿಷ್ಯೋ ಗುರೋರ್ಗುರ್ವಂತರಂ ವ್ರಜೇತ್ ॥

(ತಂತ್ರಾಲೋಕ, ಆಹ್ನಿಕ ೧೩ ಪುಟ ೩೩೫)

ನಾನಾಗುರುಪ್ರವಾಗಮ ಸ್ರೋತಃ ಪ್ರತಿಭಾ ಮಾತ್ರ ಮಿಶ್ರಿತಂ ।
ಕೃತ್ವಾ ಜ್ಞಾನಾರ್ಣವಂ ಸ್ವಾಭಿಃ ವಿತ್ಪ್ರುಡ್ಭಿಃ ಪ್ಲಾವಯೋನ್ನ ಕಿಂ ॥

(ತಂತ್ರಾಲೋಕ, ಆಹ್ನಿಕ ೩, ಪುಟ ೩೪೩)

ಎಲ್ಲರೂ ಶಿವಸ್ವರೂಪಿಗಳಾಗಿದ್ದರೂ ಎಲ್ಲರಿಗೂ ಶಕ್ತಿಪಾತವಾಗುವುದಿಲ್ಲ. ಜ್ಞಾನವಿಕಾಸಕ್ಕೆ ಕಾರಣವಾಗಿರುವ ಕರ್ಮಾಚರಣೆಯಿಂದ **ಪ್ರಾತಿಭಜ್ಞಾನ** (ಸ್ವರೂಪಜ್ಞಾನ) ವಿಕಸಿಸುತ್ತದೆ. ಪ್ರಾತಿಭಜ್ಞಾನದಿಂದ ಮಿತಪ್ರಮಾತೃವು (ಬದ್ಧಜೀವನು) ತಾನು ಮಲಗಳಿಂದ ಕೂಡಿರುವನೆಂದು ತಿಳಿಯುತ್ತಾನೆ ಮತ್ತು ಈ ಬಂಧನವು ತನ್ನ ಸ್ವರೂಪಕ್ಕೆ ಸೇರಿದ್ದಲ್ಲವೆಂದು ಅನುಭವಕ್ಕೆ ತಂದುಕೊಳ್ಳುತ್ತಾನೆ. ಅಂತಹವನಿಗೆ ಶಕ್ತಿಪಾತವಾಗುತ್ತದೆ.

ಪರಶಿವಸ್ವರೂಪಭೂತವಾಗಿರುವ ಸಂವಿದ್ರೂಪ ಪರಾಶಕ್ತಿಯ ‘ಪಾತ’ ಅಂದರೆ ಮೇಲಿನಿಂದ ಕೆಳಗೆ ಬೀಳುವುದೆಂಬುದು ಸಂಘಟಿಸದು. ಮುಮುಕ್ಷುವಿನಲ್ಲಿ ಮೊದಲೇ ಇರತಕ್ಕ ಆ ಪರಾಶಕ್ತಿಯ ಜಾಲಾವೃತತ್ತ್ವದಿಂದ ಪಾರಾಗುತ್ತಿರಲು ಬಳಿಕ ಮಲಪರಿಪಾಕ ದೆಸೆಯಲ್ಲಿ ಅಭಿವ್ಯಕ್ತವಾಗುವುದೇ ಶಕ್ತಿಪಾತವೆನ್ನಿಸಿಕೊಳ್ಳುವುದು.

ವ್ಯಾಪಿನೀ ಪರಾಶಕ್ತಿಃ ಪತತೇಽತ್ಯುಚ್ಯತೇ ಕಥಂ ।
ಊರ್ಧ್ವಾದಧೋಗತಿಃ ಪಾತೋ ಮೂರ್ತಸ್ಯಾಸರ್ವಗತಸ್ಯಚ ॥
ಸತ್ಯಾ ಸಾ ವ್ಯಾಪಿನೀ ನಿತ್ಯಾ ಸಹಜಾ ಶಿವವತ್ಸ್ಥಿತಾ
ಕಿಂ ತ್ವಿಯಂ ಮಲಕರ್ಮಾದಿ ಪಾಶಬಂಧೇಷು ಸಂವೃತಾ ।
ಪಕ್ವಪಾಕೇಷು ಸುವ್ಯಕ್ತಾ ಪತಿತೇತ್ಯುಪಚರ್ಯತೇ ॥

(ತಂತ್ರಾಲೋಕ)

ಈ ಲೋಕದಲ್ಲಿ ಯಾರಿಗೆ ಶಕ್ತಿಪಾತವಾಗಿದೆ ಯಾರಿಗೆ ಶಕ್ತಿಪಾತವಾಗಿಲ್ಲವೆಂಬುದನ್ನು ನಾವು ಊಹಿಸಬಹುದು. ನೈಮಿತ್ತಿಕ ಜ್ಞಾನದಿಂದ ಬರತಕ್ಕ ತಿಳಿವಳಿಕೆಗಳಿಂದುಂಟಾಗುವ ಮಾರ್ಪಾಡುಗಳಿಗಿಂತ ಅತಿಶಯವಾದ ಪ್ರವೃತ್ತಿ ವಿಶೇಷಗಳು ಯಾರಲ್ಲಿ ಕಂಡುಬರುತ್ತವೆಯೋ ಅಲ್ಲಿ ಶಕ್ತಿಪಾತವಾಗಿದೆಯೆಂದು ತಿಳಿಯಬಹುದು.

ರುದ್ರಶಕ್ತಿ ಸಮಾವೇಶಸ್ತತ್ರ ನಿತ್ಯಂ ಪ್ರತಿಷ್ಠಿತಂ
ಸತಿತಸ್ಮಿಂಶ್ಚ ಚಿಹ್ನಾನಿ ತಸ್ಯೈತಾನಿ ವಿಲಕ್ಷಯೇತ್ ॥
ತತ್ರೈತತ್ಪ್ರಥಮಂ ಚಿಹ್ನಂ ರುದ್ರೇಭಕ್ತಿ ಸುನಿಶ್ಚಲಾ ।
ದ್ವಿತೀಯಂ ಮಂತ್ರಸಿದ್ಧಿಃ ಸ್ಯಾತ್ ಸದ್ಯಃ ಪ್ರತ್ಯಯಕಾರಿಕಾ ।
ಸರ್ವತತ್ತ್ವವಶಿತ್ವಂ ಚ ತೃತೀಯಂ ಲಕ್ಷಣಂ ಸ್ಮೃತಂ ।
ಪ್ರಾರಬ್ಧಕಾರ್ಯ ನಿಷ್ಪತ್ತಿಶ್ಚಿಹ್ನಮಾಹುಶ್ಚತುರ್ಥಕಂ ।
ಕವಿತ್ವಂ ಪಂಚಮಂ ಜ್ಞೇಯಂ ಸಾಲಂಕಾರಂ ಮನೋಹರಂ
ಸರ್ವ ಶಾಸ್ತ್ರಾರ್ಥವೇತೃತ್ವ ಮಕಸ್ಮಾಚ್ಚಾಸ್ಯ ಜಾಯತೆ ॥

(ತಂತ್ರಾಲೋಕ, ಪುಟ ೧೩೭)

ರುದ್ರನಲ್ಲಿ ಅಚಲವಾದ ಭಕ್ತಿ, ಮಂತ್ರಸಿದ್ಧಿ, ತತ್ತ್ವಗಳ ವಿಶದವಾದ ಅನುಭವ, ಪ್ರಾರಂಭಿಸಿದ ಕಾರ್ಯಸಿದ್ಧಿ, ಸ್ವೋಪಜ್ಞತ್ವ, ಸರ್ವಶಾಸ್ತ್ರಜ್ಞಾನ ಇವುಗಳೆಲ್ಲಾ ಶಕ್ತಿಪಾತದ ಮಹಿಮೆಯಿಂದ ತಾವಾಗಿಯೇ ಉಂಟಾಗುತ್ತವೆ. ಇವುಗಳು ಯಾರಲ್ಲಿ ಕಂಡುಬರುತ್ತವೆಯೋ ಅವರಿಗೆ ಶಕ್ತಿಪಾತವಾಗಿದೆಯೆಂದು ಊಹಿಸಬಹುದು.

ಅಭಿನವಗುಪ್ತಾಚಾರ್ಯರು ಸಂಸಾರ ವಿದ್ವೇಷ, ಮುಮುಕ್ಷು, ಶಿವಭಕ್ತಿ ಈ ಪ್ರವೃತ್ತಿಯುಳ್ಳ ಗುಣಗಳ ಚಿಹ್ನೆಗಳು ಯಾರಲ್ಲಿ ಕಂಡುಬರುತ್ತವೆಯೋ ಅಂತಹವರಿಗೆ ಶಕ್ತಿಪಾತವಾಗಿದೆಯೆಂದು ಗಮನಿಸಿ ದೀಕ್ಷೆಗೆ ಅರ್ಹರಾಗಿದ್ದಾರೆಂದು ತಿಳಿದು ದೀಕ್ಷೆಯನ್ನು ಮಾಡತಕ್ಕದ್ದೆಂದು ಹೇಳಿದ್ದಾರೆ.

ಶಕ್ತಿಪಾತವು ತೀವ್ರ, ಮಧ್ಯಮ, ಮಂದ ಎಂಬ ಮೂರು ಭೇದಗಳುಳ್ಳದ್ದಾಗಿದೆ. ಒಂದೊಂದು ಭೇದವೂ ಒಂಭತ್ತು ಭೇದಗಳನ್ನೊಳಗೊಂಡಿದೆ. ಉತ್ಕೃಷ್ಟವಾದ ತೀವ್ರ ಶಕ್ತಿಪಾತವಾದರೆ ಮಾನವನು ಶರೀರ ಬಿದ್ದೊಡನೆಯೇ ಪರಶಿವನಾಗುತ್ತಾನೆ. ಮಧ್ಯ ತೀವ್ರನಿಗೆ ಶಕ್ತಿಪಾತವಾದರೆ ಪ್ರಾತಿಭಜ್ಞಾನ ಉಂಟಾಗುತ್ತದೆ. ಅಂತಹವನಿಗೆ ಶಾಸ್ತ್ರ ಗುರು ಬಾಹ್ಯಸಂಸ್ಕಾರಗಳು ಬೇಕಿಲ್ಲ. ಮಂದತೀವ್ರನಿಗೆ ಶಕ್ತಿಪಾತವಾದರೆ ಗುರುವಿನಲ್ಲಿ ಹೋಗಿ ವಿಷಯಗಳನ್ನು ತಿಳಿಯಬೇಕೆನ್ನುವ ಇಚ್ಛೆಯುಂಟಾಗುತ್ತದೆ. ಇವನಿಗೆ ಶಾಸ್ತ್ರ, ಗುರು, ಅಭ್ಯಾಸ ಎಲ್ಲಾ ಬೇಕು. ಇದರಿಂದ ಯಾವ ತರಹ ಶಕ್ತಿಪಾತವಾಗಿದೆಯೆಂದು ತಿಳಿಯಬಹುದು.

ಶಕ್ತಿಪಾತವು ಇಪ್ಪತ್ತೇಳು ಬಗೆಯೆಂದು ಸ್ಥೂಲವಾಗಿ ನಿರೂಪಿಸಿರುತ್ತಾರೆ. ವ್ಯಕ್ತಿಗಳ ಮಟ್ಟವನ್ನನುಸರಿಸಿ ಇದು ಎಷ್ಟೋ ಬಗೆಯಾಗುತ್ತದೆ. ತಾರತಮ್ಯ ದೆಸೆಯಿಂದ ಅನೇಕ ಭೇದಗಳನ್ನು ಪಡೆಯುವ ಈ ಶಕ್ತಿಪಾತದ ಎಲ್ಲಾ ಅಂಶಗಳನ್ನೂ ಗುರುತಿಸುವುದು ಕಷ್ಟ. ಒಟ್ಟಾಗಿ ಹೀಗೆ ಊಹಿಸಬಹುದು. ಯಾವನು ಅಂತರ್ಯತೆಯನ್ನು ಪ್ರಧಾನವಾಗಿ ಭಾವಿಸುವನೋ ಅಂತಹವನಿಗೆ ಶಕ್ತಿಪಾತವಾಗಿದೆಯೆಂದೇ ಸಾಮಾನ್ಯವಾಗಿ ತಿಳಿಯಬಹುದು. ಗುರುವಿನಿಂದ ಶಾಸ್ತ್ರವನ್ನು ತಿಳಿದು ತನ್ನ ಅನುಭವಕ್ಕೆ ಶಾಸ್ತ್ರತತ್ತ್ವವನ್ನು ಅಳವಡಿಸಿಕೊಳ್ಳುವಿಕೆಯೇ ಇವನ ಪ್ರಯತ್ನ. ಇದು ಅನೇಕ ಮಾರ್ಗಾಚರಣ ರೂಪವಾಗಿದೆಯೆಂದು ತಿಳಿಸಿದ್ದಾರೆ. ಕರ್ಮವನ್ನಾಚರಿಸುವುದು ಇವನ ಸ್ವಾತಂತ್ರ್ಯ. ಅದಕ್ಕೆ ಫಲವನ್ನು ಕೊಡುವುದು ಈಶ್ವರನ ಅಧಿಕಾರ. ಈಶ್ವರಾನುಗ್ರಹವಿಲ್ಲದೆ ಮೋಕ್ಷವುಂಟಾಗಲಾರದು.

ಈ ಉಪಾಯಗಳನ್ನನುಸರಿಸುವ ಸಾಧಕನು ಪರಮಾರ್ಥಪದವನ್ನು ಹೊಂದುತ್ತಾನೆಂದು ಯೋಗಭ್ರಷ್ಟನಾಗಿ ನಿರಾಶೆ ಪಡಬೇಕಾಗಿಲ್ಲ. ಮುಂದಿನ ಜನ್ಮದಲ್ಲಿ ಅವನ ಸಾಧನೆಗಳನ್ನು ಮುಂದುವರೆಸುವುದರ ಮೂಲಕ ಶಿವಾನುಗ್ರಹವನ್ನು ಪಡೆದು ಪರಮಾರ್ಥಪದವನ್ನು ಹೊಂದುತ್ತಾನೆ. ದೇವತೆಗಳಿಂದ ಪೂಜಿಸಲ್ಪಡುತ್ತಾನೆ. 'ಯೋಗಭ್ರಷ್ಟಸ್ತಥಾ ಪೂಜ್ಯಃ' ಎಂದು ಈ ರೀತಿಯಾಗಿ ಅಭಿನವಗುಪ್ತರು ಆಶ್ವಾಸನವನ್ನೀಯುತ್ತಾರೆ.

ಯೋಗಭ್ರಷ್ಟಃ ಶಾಸ್ತ್ರೆ
ಕಥಿತೋऽಸೌ ಚಿತ್ರ ಭೋಗಭುವನ ಪತಿಃ ।
ವಿಶ್ರಾಂತಿಸ್ಥಾನವಶಾದ್
ಭೂತ್ವಾ ಜನ್ಮಾಂತರೆ ಶಿವೀಭವತಿ ॥

(ಪರಮಾರ್ಥಸಾರ)

ಯೋಗಯುಕ್ತನು ಸಮದರ್ಶಿ. ಅವನು ಎಲ್ಲಾ ಪ್ರಾಣಿಗಳಲ್ಲಿ ಇರವುದಾಗಿಯೂ, ತನ್ನಲ್ಲಿ ಎಲ್ಲಾ ಭೂತಗಳು ಇರುವುದಾಗಿಯೂ ತಿಳಿಯುತ್ತಾನೆ. ತನ್ನಂತೆ ಎಲ್ಲಾ ಪ್ರಾಣಿಗಳನ್ನೂ ಕಾಣುವ ಯೋಗಿಯೇ ಬ್ರಹ್ಮಜ್ಞಾನಿ. ಅವನೇ ಸರ್ವ ಶ್ರೇಷ್ಠನು. (ಗೀತೆ)

ಭಗವನ್, ಶ್ರದ್ಧಾಳುವಾದರೂ ಸಾಕಷ್ಟು ಪ್ರಯತ್ನಮಾಡದಿರುವುದರಿಂದ ಯೋಗಭ್ರಷ್ಟನಾದರೆ ಅವನ ಗತಿ ಏನು ? ಬ್ರಹ್ಮಮಾರ್ಗದಿಂದ ದಾರಿ ತಪ್ಪಿದವನು ಚದುರಿದ ಮೋಡಗಳಂತೆ ಉಭಯಭ್ರಷ್ಟನಾಗುವನೇ ? (ಗೀತೆ)

ಇಲ್ಲ ಅರ್ಜುನ, ಯೋಗಭ್ರಷ್ಟನಾದಮಾತ್ರಕ್ಕೆ ಇಹಪರಗತಿ ಇಲ್ಲವೆಂದು ಭಾವಿಸಬೇಡ. ಉತ್ತಮ ಕೆಲಸ ಮಾಡುವವನಿಗೆ ಎಂದಿಗೂ ದುರ್ಗತಿ ಇಲ್ಲ. ಅಂಥವನು ಪುಣ್ಯಶಾಲಿಗಳು ಹೊಂದುವ ಸ್ಥಾನದಲ್ಲಿ ಬಹುಕಾಲವಿದ್ದು ತರುವಾಯ ಉತ್ತಮರ ಮನೆಯಲ್ಲಿ ಹುಟ್ಟುತ್ತಾನೆ ಅಥವಾ ಯೋಗಿಗಳ ಕುಲದಲ್ಲಿ ಹುಟ್ಟುತ್ತಾನೆ. ಆದರೆ ಇಂಥ ಮಹಾತ್ಮರ ಜನ್ಮವು ಅಪರೂಪ, ಹೀಗೆ ಜನ್ಮಕಳೆದ ಯೋಗಭ್ರಷ್ಟನು ಪುನರ್ಜನ್ಮದ ವಾಸನೆಯಂತೆ ಶ್ರವಣಾದಿ ವಾಸನೆಗಳನ್ನು ಪಡೆದು ಮೋಕ್ಷಾಭಿಮುಖಿಯಾಗುತ್ತಾನೆ. ಅವನು ಪ್ರಯತ್ನ ಮಾಡದಿದ್ದರೂ ಹಿಂದಿನ ಅಭ್ಯಾಸವೇ ಅವನಿಗೆ ಆ ಪ್ರವೃತ್ತಿಯನ್ನುಂಟುಮಾಡುತ್ತದೆ. ಹೀಗೆ ಪ್ರವೃತ್ತಿ ಹೊಂದಿ ಪಾಪಮುಕ್ತನಾಗಿ ಅನೇಕ ಜನ್ಮಗಳಲ್ಲಿ ಸಿದ್ಧಿಯನ್ನು ಪಡೆಯುತ್ತಾನೆ. ಈ ಯೋಗಿ ಎಲ್ಲರಿಗಿಂತ ಶ್ರೇಷ್ಠನು. (ಗೀತೆ)

ಪರಿಸಮಾಪ್ತಿ

ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿಮುನೀಷಿಭಿಃ ।
ಸ ಏವ ಸರ್ವಶಾಸ್ತ್ರಜ್ಞಃ ಯಸ್ಯಶಾಂತಿಂ ಮನಸ್ಸದಾ ॥

(ಮಹಾಭಾರತ)

ಎಲ್ಲಾ ಶಾಸ್ತ್ರಗಳೂ ಎಲ್ಲಾ ದರ್ಶನಗಳೂ ಮಾನವನಿಗೆ ಈ ಲೋಕದಲ್ಲಿ ಶಾಂತಿಯನ್ನೂ ಪರಲೋಕದಲ್ಲಿ ಶ್ರೇಯಸ್ಸನ್ನೂ ಉಂಟುಮಾಡುವುದಕ್ಕೋಸ್ಕರ ಉಪದೇಶಿಸಲ್ಪಟ್ಟಿವೆ. ಈ ಶಿವಾದ್ವೈತ ದರ್ಶನದಲ್ಲಿ ಈ ಲೋಕ ಪರಲೋಕ ಮೊದಲಾದ ಎಲ್ಲಾ ಭೇದಗಳೂ ಶಿವನಿಂದ ಬೇರೆಯಲ್ಲ. ಇಲ್ಲಿ ಬದುಕಿರುವಾಗಲೇ ವಿಕಲ್ಪಗಳ ಉಬ್ಬರವಿಳಿತಗಳ ದೆಸೆಯಿಂದ ಅಶಾಂತನಾಗದೆ ಇರುವ ಸ್ಥಿತಿಯನ್ನು ಪಡೆಯಬೇಕು. ಈ ಸ್ಥಿತಿಯುಂಟಾಗಬೇಕಾದರೆ ವಿಕಲ್ಪಗಳಿಂದ ದೂರವಾಗಿರುವ ಪ್ರಶಾಂತವಾಗಿರುವ ಚಿತ್ಸ್ವರೂಪಾನುಭವವೇರ್ಪಡಬೇಕು. ಹೊರಗಿನ ಚಲನವಲನಗಳನ್ನೂ ಇವುಗಳಿಂದುಂಟಾಗುವ ತಿಳಿವಳಿಕೆಗಳನ್ನೂ ವಿಕಲ್ಪರೂಪಗಳನ್ನು ಪಡೆದಿರುವ ಈ ತಿಳಿವಳಿಕೆಗಳ ಪರಿಣಾಮಗಳನ್ನೂ ತನ್ನಲ್ಲಿ ತಾನೇ ಪರಿಶೀಲಿಸಿದರೆ ಪ್ರಶಾಂತಸ್ಥಿತಿಗೂ ಅಶಾಂತತೆಗೂ ಇರುವ ವ್ಯತ್ಯಾಸವು ಗೋಚರಿಸುತ್ತದೆ. ಎಲ್ಲಾ ಶಾಸ್ತ್ರಕಾರರೂ “ ನಿನ್ನ ಸ್ವರೂಪವನ್ನು ನೀನು ತಿಳಿ ” ಎಂದು ಉಪದೇಶಿಸಿಯೇ ಇರುತ್ತಾರೆ. ಆದರೆ ಕೆಲವರು ಆಧ್ಯಾತ್ಮ ಶಾಸ್ತ್ರದ ಗಹನವಾದ ಪರಿಭಾಷೆಗಳಿಂದ ವಿಷಯವಿಮರ್ಶೆಗೆ ಹೆಚ್ಚುಗಮನ ಕೊಟ್ಟಿರುತ್ತಾರೆ. ಒಬ್ಬನು ವಿಷಯ ವಿಮರ್ಶೆಮಾಡಬಹುದು, ಇತರರಿಗೆ ಉಪದೇಶಿಸಬಹುದು. ಗ್ರಂಥಗಳನ್ನು ಬರೆಯಬಹುದು. ಆದರೆ ತನ್ನ ಸ್ವರೂಪಾನುಭವವು ಏರ್ಪಡದಿದ್ದರೆ ಅಂತಹವನಿಗೆ ಶಾಂತಿಯುಂಟಾಗಲಾರದು. ಅಲ್ಪಸ್ವಲ್ಪ ಶಾಂತಿಯುಂಟಾದರೂ ಅದು ಬಾಹ್ಯಕಾರಣಗಳಿಂದಲೂ

ಸಾಂಪ್ರದಾಯಿಕವಾದ ಅನುಕರಣದಿಂದಲೂ ಉಂಟಾಗುತ್ತದೆ. ಇಂತಹ ಶಾಂತಿಯೊಡನೆ ಆಂತರೀಯವಾದ ಅನುಭವವು ಸಾಮರಸ್ಯವನ್ನು ಪಡೆಯುವುದಿಲ್ಲ. ಆಂತರೀಯವಾದ ಸ್ವರೂಪಾನುಭವದಿಂದ ಶಾಂತಿಯುಂಟಾಗಿ ಅದರ ತಳಹದಿಯ ಮೇಲೆ ಹೊರಗಿನ ವ್ಯಾಪಾರಗಳನ್ನು ನಡೆಸುತ್ತಿರುವವನು ಜೀವನ್ಮುಕ್ತನೆನಿಸುತ್ತಾನೆ. ಎಂತಹ ವ್ಯವಹಾರದಲ್ಲಿ ತೊಡಗಿದ್ದರೂ ಚಿದ್ರೂಪವಾದ ಸ್ವಸ್ವರೂಪಾನುಸಂಧಾನವು ಎಡಬಿಡದೆ ಇದ್ದಲ್ಲಿ ಅವನೇ **ಯುಕ್ತ**ನೆಂದೆನಿಸುವನು.

ಇತಿ ವಾಯುಸ್ಯಸಂವಿತ್ತಿಃ ಕ್ರೀಡಾತ್ವೇನಾಖಿಲಂ ಜಗತ್ ।
ಸಪಶ್ಯ೯ ಸತತಂ ಯುಕ್ತೋ ಜೀವನ್ಮುಕ್ತೋ ನ ಸಂಶಯಃ ॥

(ಪ್ರತ್ಯಭಿಜ್ಞಾಹೃದಯ)

ಈ ಸ್ಥಿತಿಯನ್ನು ಪರಾಶಾಂತಿಯೆಂದು ಭಗವದ್ಗೀತೆಯಲ್ಲಿಯೂ ಉದಹರಿಸಿರುತ್ತಾರೆ.

ಯದಾ ವಿನಿಯತಂ ಚಿತ್ತಂ ಆತ್ಮನ್ಯೇವಾವತಿಷ್ಠತೇ ।
ನಿಸ್ಪೃಹಃ ಸರ್ವ ಕಾಮೇಭ್ಯೋ ಯುಕ್ತ ಇತ್ಯುಚ್ಯತೆ ತದಾ ॥

(ಅಧ್ಯಾಯ ೬, ಶ್ಲೋಕ ೧೮)

ಯಾವಾಗ ಮನಸ್ಸು ನಿಗ್ರಹಿಸಲ್ಪಟ್ಟು ಆತ್ಮನಲ್ಲಿಯೇ ನಿಲ್ಲುವಂತಾಗಿ ಕಾಮನೆಗಳಲ್ಲಿ ಆಸೆಯಿಲ್ಲದಿರುವವನಾಗುವನೋ ಆಗ ಯುಕ್ತನೆಂದೆನಿಸುವನು. 'ಯುಕ್ತ' ಎಂದರೆ ಸ್ವಸ್ವರೂಪದಲ್ಲಿರುವವನು.

ಇದನ್ನು ಪಡೆಯುವುದಕ್ಕೆ ಹಿಂದಿನ ಸಂಸ್ಕಾರ, ಇಂದಿನ ಪರಿಸ್ಥಿತಿ, ಶಾಸ್ತ್ರಾಭ್ಯಾಸ, ಗುರೂಪದೇಶ, ಸ್ವಪ್ರಯತ್ನ, ಅಭ್ಯಾಸ, ಸ್ವಾತ್ಮವಿಮರ್ಶೆ—ಇವುಗಳು ಮುಖ್ಯವಾದ ಕಾರಣಗಳು. ಕಾಶ್ಮೀರ ಶಿವಾದ್ವೈತ ಸಂಪ್ರದಾಯದಲ್ಲಿ ಗುರೂಪದೇಶವನ್ನೇ ಪ್ರಧಾನವಾಗಿಟ್ಟುಕೊಂಡು ಜ್ಞಾನವಿಕಾಸವನ್ನು ಪಡೆಯುವುದಕ್ಕೆ ಅರ್ಹರಾದ ಉತ್ತಮಾಧಿಕಾರಿಗಳಿಗೆ "ಅನುಪಾಯ"ವು ಉಪದೇಶಿಸಲ್ಪಟ್ಟಿದೆ. ಶರೀರ, ಇಂದ್ರಿಯಗಳು, ಪ್ರಾಣ, ಪುರ್ಯಷ್ಟಕ ಈ ತತ್ತ್ವಸಂಚಯದಿಂದ ಬೇರೆಯಾಗಿರುವ ಚಿತ್ಸ್ವರೂಪವನ್ನು ಅನುಭವದಿಂದ ಗುರುತಿಸಲು ಸಮರ್ಥರಾದವರಿಗೆ, ಶಾಂಭವೋಪಾಯವು, ನಿರೂಪಿಸಿದೆ. ಇಲ್ಲಿ ಮಿತ ಪ್ರಮಾತೃವಾಗಿರುವ ಜೀವನ ಸ್ವರೂಪದಿಂದ ಬೇರೆಯಾಗದಿರುವ ಇಚ್ಛಾಶಕ್ತಿಯ ಅನುಸಂಧಾನವೇ ಪ್ರಧಾನವಾಗಿರುತ್ತದೆ. ಭಿನ್ನಾಭಿನ್ನವಾಗಿರುವ ವಿಕಲ್ಪಗಳನ್ನು ಸಂಸ್ಕರಿಸುತ್ತಾ ಅಭಿನ್ನವಾಗಿರುವ ಚಿದ್ವಿಕಾಸವನ್ನು ಹೊಂದಲರ್ಹರಾದವರಿಗೆ "ಶಾಕ್ತೋಪಾಯ"ವು ವಿವರಿಸಲ್ಪಟ್ಟಿದೆ. ಬದ್ಧದಶೆಯಲ್ಲಿ ಉಪಕರಣಗಳಾಗಿರುವ ಶರೀರ, ಪ್ರಾಣ ಮೊದಲಾದ ಪಾಶವೀಯ ಉಪಕರಣಗಳನ್ನೇ ಆಸನ, ಪ್ರಾಣಾಯಾಮ, ಮುದ್ರಾ, ಬಂಧಾ ಮೊದಲಾದ ಉಪಾಯಗಳಲ್ಲಿ ವಿನಿಯೋಗಿಸಿ ಅಥವಾ ಅಳವಡಿಸಿ ಮಾರ್ಪಡಿಸಿ ಚಿದ್ವಿಕಾಸವನ್ನು ಪಡೆಯಲು ಸಮರ್ಥರಾಗಿರುವವರಿಗೆ "ಆಣವೋಪಾಯ"ವು ಉಪದೇಶಿಸಲ್ಪಟ್ಟಿದೆ.

ಈ ನಾಲ್ಕು ಉಪಾಯಗಳನ್ನು ವಿವರಿಸಿದ್ದರೂ ಪ್ರತಿಯೊಂದು ಕ್ಷಣದಲ್ಲಿಯೂ ತನ್ನನ್ನು ತಾನು ವಿಮರ್ಶಿಸಿಕೊಳ್ಳುವ ಕ್ರಮವು ಎಲ್ಲರಿಗೂ ಸಮಾನವಾಗಿಯೇ ಇರುತ್ತದೆ. ಆ ವಿಮರ್ಶಿಸಿಕೊಳ್ಳುವ ಕ್ರಮವು ಈ ರೀತಿಯಾಗಿರುತ್ತದೆ.

ನಾವು ಯಾವ ರೀತಿಯಾಗಿ ತಿದ್ದಿಕೊಳ್ಳಬೇಕಾದರೂ ನಮ್ಮ ಭಾವನೆಗಳನ್ನು ನಾಲ್ಕು ಬಗೆಯಾಗಿ ವಿಂಗಡಿಸಿಕೊಳ್ಳಬೇಕು. ಇದನ್ನೇ ಸಾಂಪ್ರದಾಯಿಕರು ಅನುಶೀಲನ, ಪರಿಶೀಲನ, ಅನುಸಂಧಾನ, ಪರಾಮರ್ಶವೆಂದು ಕರೆದಿರುತ್ತಾರೆ. ಬೇರೆ ಬೇರೆಯಾಗಿರುವ ವಿಷಯಗಳನ್ನು ಮತ್ತು ವೃತ್ತಿಗಳನ್ನು ನಿಷ್ಕೃಷ್ಟವಾಗಿ ತಿಳಿಯುವಿಕೆಯೇ 'ಪರಿಶೀಲನ.' ಈ ಭೇದಾವಸ್ಥೆಗಳಲ್ಲಿ ಅನುಸ್ಯೂತವಾಗಿರುವ ಆಧಾರವಾದ ಧರ್ಮವನ್ನು ಗುರುತಿಸುವಿಕೆಯೇ 'ಅನುಶೀಲನ.' ಭೇದವ್ಯವಹಾರಗಳು ನಡೆಯುತ್ತಿರುವಾಗಲೂ ಅಭಿನ್ನವಾದ ಪ್ರಶಾಂತವಾದ ಸ್ವಸ್ವರೂಪದಲ್ಲಿ ಗಮನವಿರುವಿಕೆಯೇ 'ಅನುಸಂಧಾನ'. ಭೇದಜ್ಞಾನಗಳಿಂದ ಆಕರ್ಷಿಸಲ್ಪಟ್ಟಿದ್ದರೂ ತನ್ನ ಮೂಲಸ್ವರೂಪವನ್ನು ಬಾರಿಬಾರಿಗೂ ನೆನಪಿಗೆ ತಂದುಕೊಳ್ಳುತ್ತಿರುವುದೇ 'ಪರಾಮರ್ಶ'.

ಪಂಡಿತರಿಗೂ ಪಾಮರರಿಗೂ ಸಮಾನವಾಗಿ ಅನುಭವದಲ್ಲಿರುವ ಜಾಗ್ರತ್ ಸ್ವಪ್ನ ಸುಷುಪ್ತಿಗಳನ್ನು ಪರಿಶೀಲಿಸುತ್ತಾ ಈ ಮೂರು ಅವಸ್ಥೆಗಳಿಗೂ ಆಶ್ರಯವಾಗಿರುವ ತುರ್ಯಾವಸ್ಥೆಯನ್ನು ಗುರುತಿಸುವುದು ಮತ್ತು ತುರ್ಯಾತೀತಾವಸ್ಥೆಯನ್ನು ಊಹಿಸುವುದು ಮಿಂಚಿನಂತೆ ಅನುಭವಕ್ಕೆ ಬರುವ ಈ ತುರೀಯಾ ತುರೀಯಾತೀತಾವಸ್ಥೆಗಳನ್ನು ಭಾವಿಸುವುದು ಒಂದು ಬಗೆಯಾದ ತನ್ನನ್ನು ಪರಿಶೀಲಿಸಿಕೊಳ್ಳುವ ಕ್ರಮ.

ಶಾಸ್ತ್ರಾಭ್ಯಾಸದಿಂದ ಈ ವಿಶ್ವವು ೩೬ ತತ್ತ್ವರೂಪವಾಗಿರುವುದೆಂದು ತಿಳಿದು ತಾನು ಗ್ರಾಹಕನಾಗಿದ್ದು ಗ್ರಾಹ್ಯಗಳಾಗಿರುವ ತತ್ತ್ವಸಂಪುಟದಲ್ಲಿ ತಾನು ಸೇರಿರುವೆನೆಂದೂ ತತ್ತ್ವಗಳು ಅಸಂಕೀರ್ಣಗಳಾಗಿದ್ದರೂ ಬದುಕಿರುವಾಗ ಅವುಗಳು ಗ್ರಂಥಿರೂಪವಾಗಿ ತನ್ನ ಸ್ವಭಾವಸಿದ್ಧವಾದ ಶಕ್ತಿಪ್ರಸರಣಕ್ಕೆ ಪ್ರತಿಬಂಧಕಗಳಾಗಿರುವವುಗಳೆಂದು ತಿಳಿದು ಅನುಸಂಧಾನಮಾಡುವುದು ಇನ್ನೊಂದು ಬಗೆಯ ಪರಿಶೀಲನಾಕ್ರಮ.

ದೇಹ ಪ್ರಾಣ ಪುರ್ಯಷ್ಟಕಗಳಿಂದ ಕೂಡಿ ತಾನು 'ಸಕಲ' ಪ್ರಮಾತೃವಾಗಿರುವವನಾಗಿ ಕ್ರಮಕ್ರಮವಾಗಿ ಶಕ್ತಿವಿಕಾಸವೇರ್ಪಟ್ಟಲ್ಲಿ ಪ್ರಳಯಾಕಲಾ, ವಿಜ್ಞಾನಾಕಲಾ, ಮಂತ್ರ, ಮಂತ್ರಮಹೇಶ್ವರರೆಂಬ ಪ್ರಮಾತೃ ಹಂತಗಳನ್ನು ದಾಟಿ ಶಿವನೇ ಆಗಬಹುದೆಂದೂ ಈ ದಶೆಯಲ್ಲಿ ಗ್ರಾಹ್ಯವಾಗಿರುವ ವಿಶ್ವವು ತನ್ನಿಂದ ಬೇರೆಯಲ್ಲವೆಂದು ಅನುಸಂಧಾನಮಾಡುವುದು ಮತ್ತೊಂದು ಬಗೆಯ ಪರಾಮರ್ಶ.

ಶಿವನು ವಿಶ್ವಸೃಷ್ಟಿ ವಿಶ್ವಸಂಹಾರ ಮೊದಲಾದ ಪಂಚಕೃತ್ಯಗಳನ್ನು ನಿರ್ವಹಿಸುತ್ತಿದ್ದಾನೆ. ಅದೇರೀತಿಯಾಗಿ ಸಂಕುಚಿತಶಕ್ತಿಯುಳ್ಳ ಈ ಮಿತಪ್ರಮಾತೃವು ಪಂಚಕೃತ್ಯಗಳನ್ನು ನಿರ್ವಹಿಸುತ್ತಿರುತ್ತಾನೆ. ಬಾಹ್ಯಾಭ್ಯಂತರ ವಿಷಯಗಳ ಸೃಷ್ಟಿ ಮತ್ತು ಸ್ಥಿತಿಗಳಿಂದಲೇ ಸುಖದುಃಖಗಳುಂಟಾಗುತ್ತವೆ. ಪ್ರಳಯ, ಅನುಗ್ರಹ, ತಿರೋಧಾನ

ಇವುಗಳಲ್ಲಿ ಸುಖದುಃಖಾನುಭವಗಳಿಲ್ಲ. ತಾನು ತತ್ತ್ವತಃ ಶಿವರೂಪಿಯೇ ಆಗಿದ್ದರೂ ಬದ್ಧದಶೆಯಲ್ಲಿ ಪಂಚಕೃತ್ಯಗಳಲ್ಲಿ ಸೃಷ್ಟಿ ಸ್ಥಿತಿಗಳು ತನಗೆ ಸುಖದುಃಖಗಳಿಗೆ ಕಾರಣಗಳಾಗಿವೆಯೆಂದೂ ಶಕ್ತಿವಿಕಾಸವೇರ್ಪಟ್ಟಲ್ಲಿ ಈಗ ನಡೆಯುತ್ತಿರುವ ಭೇದರೂಪವಾದ ಸೃಷ್ಟಿಯು ಅಭೇದ ರೂಪವಾದ ಸಂಹಾರವೂ ಬದಲಾಗಿ ಅಭೇದವೇ ಸೃಷ್ಟಿಯಾಗಿಯೂ ಭೇದವೇ ಸಂಹಾರವಾಗಿಯೂ ಪರಿಣಮಿಸುತ್ತದೆಂದು ಭಾವಿಸುವುದು ಮತ್ತೊಂದು ವಿಧವಾದ ಅನುಸಂಧಾನ.

ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾ ಎಂಬ ಐದುಶಕ್ತಿಗಳಿಂದ ಪರಿಪೂರ್ಣನಾಗಿರುವವನು ಶಿವನು. ಈ ಶಕ್ತಿಗಳು ಸರ್ವಜ್ಞತ್ವ, ಸರ್ವಕರ್ತೃತ್ವ ಮೊದಲಾದ ಪ್ರಭಾವವುಳ್ಳವುಗಳಾಗಿವೆ. ಮಿತಪ್ರಮಾತೃವಾದ ಜೀವನು ಈ ಪಂಚಶಕ್ತಿಗಳಿಂದ ಕೂಡಿರುವನೆಂಬುದು ಭಾವನಾಬಲದಿಂದ ಅನುಭವಕ್ಕೆ ಬರುತ್ತದೆ. ಶಕ್ತಿಸಂಕೋಚದಿಂದ ಚಿದಾದಿಶಕ್ತಿಗಳು ಅಲ್ಪಜ್ಞತ್ವ ಅಲ್ಪಕರ್ತೃತ್ವಾದಿ ಸಂಕುಚಿತ ಶಕ್ತಿಗಳನ್ನು ಪಡೆದಿರುತ್ತವೆ. ಶಕ್ತಿವಿಕಾಸವೇರ್ಪಟ್ಟರೆ ಶಿವನೇ ಆಗುವನೆಂದು ಭಾವಿಸುವುದೊಂದು ಬಗೆಯ ಆತ್ಮಪರಿಶೀಲನೆ.

ಎಲ್ಲಾ ಪ್ರಾಣಿಗಳೂ ತಮ್ಮ ಅಭಿಪ್ರಾಯವನ್ನು ಇನ್ನೊಂದು ಪ್ರಾಣಿಗೆ ತಿಳಿಯಪಡಿಸುವುದಕ್ಕೆ ಶಬ್ದವನ್ನು ಪಯೋಗಿಸುತ್ತೇವೆ. ಪಶುಗಳೂ ಪಕ್ಷಿಗಳೂ ಕೂಡ ಧ್ವನಿಯನ್ನು ಮಾಡುವುದರ ಮೂಲಕ ತಮ್ಮಭಿಪ್ರಾಯವನ್ನು ಸೂಚಿಸುತ್ತವೆ. ಮನುಷ್ಯನು ತನ್ನ ಸಂಜ್ಞೆಗಳಿಂದ ತನ್ನ ಮನೋಗತವನ್ನು ತಿಳಿಯಪಡಿಸುವುದುಂಟು. ಆದರೂ ತಿಳಿಯುವವನು ಈ ಸಂಜ್ಞೆಗೆ ಈ ಅರ್ಥನೆಂದು ತಿಳಿದು ಅದರ ತಾತ್ಪರ್ಯವನ್ನು ಗ್ರಹಿಸುತ್ತಾನೆ. ಅಲ್ಲಿ ಶಬ್ದಾರ್ಥಪ್ರತ್ಯಯವಿದ್ದೇ ಇದೆ. ಶಬ್ದಾರ್ಥಗಳ ತಿಳಿವಳಿಕೆಯಿಂದ ಸಂಜ್ಞೆಯು ಅರ್ಥವಾಗುತ್ತದೆ. ಈ ತಿಳಿವಳಿಕೆ ಇಲ್ಲದಿರುವವನಿಗೆ ಈ ಸಂಜ್ಞೆಯು ಅರ್ಥವಾಗಲಾರದು. ಮನುಷ್ಯರ ವ್ಯವಹಾರವು ಮಾತುಗಳಿಂದ ನಡೆಯುತ್ತದೆ. ಈ ಮಾತುಗಳು ವಾಕ್ಯಗಳಿಂದಾಗುತ್ತವೆ. ವಾಕ್ಯಗಳಲ್ಲಿ ಪದಗಳಿವೆ. ಪದಗಳು ಅಕ್ಷರಗಳಿಂದ ಸಿದ್ಧವಾಗುತ್ತವೆ. ಈ ಅಕ್ಷರಗಳನ್ನು ನಾವು ಉಚ್ಚರಿಸುತ್ತೇವೆ. ಈ ಅಕ್ಷರಗಳು ಉಚ್ಚರಿಸಲ್ಪಡುವುದಕ್ಕಿಂತ ಮುಂಚೆ ಅವ್ಯಕ್ತವಾದ ಒಂದು ಸ್ಥಿತಿಯಲ್ಲಿ ಭೇದಾಭೇದರೂಪವಾಗಿ ಶಕ್ತಿರೂಪವಾಗಿರುತ್ತದೆ. ಇನ್ನೂ ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ ಅಭೇದರೂಪವಾಗಿರುವುದನ್ನು ಊಹಿಸಬಹುದು. ಅಭೇದ ರೂಪವಾಗಿರುವ ಶಕ್ತಿಗೆ ಪರಾ ಎಂದೂ ಭಿನ್ನಾಭಿನ್ನವಾಗಿರುವ ಸ್ಥಿತಿಗೆ ಪಶ್ಯಂತಿ ಮಧ್ಯಮಾ ಎಂದೂ ಭೇದಜ್ಞಾನವನ್ನೇ ಪ್ರಧಾನವಾಗಿ ಉಂಟುಮಾಡುವ ಸ್ಥಿತಿಗೆ ವೈಖರಿ ಎಂದೂ ಶಾಸ್ತ್ರಪರಿಭಾಷೆಯಿದೆ. ಈ ವೈಖರೀಸ್ಥಿತಿಯು ನಾಲ್ಕನೆಯ ಹಂತ.

ತನ್ನನು ತಾನು ಪರಿಶೀಲಿಸುವಾಗ ಸ್ವರ ಮತ್ತು ವ್ಯಂಜನ ಸಂಯೋಗರೂಪವಾದ ಅಕ್ಷರಗಳನ್ನು ಅಕ್ಷರೋಚ್ಚಾರಣೆಗೆ ಮೂಲವಾಗಿರುವ 'ಅನಚ್ಕ' ವರ್ಣಸ್ಥಿತಿಗತಿಗಳನ್ನು ಈ ವರ್ಣವೆಂಬ ವೃಕ್ಷಕ್ಕೆ ಬೇರಿನಂತಿರುವ ಮಧ್ಯಮಾ, ಪಶ್ಯಂತೀ, ಪರಾ ಈ ಅವಸ್ಥೆ

ಗಳನ್ನು ಅನುಸಂಧಾನಮಾಡಿ ಯಾವ ರೀತಿಯಾಗಿ ಅಭಿನ್ನವಾಗಿರುವ ಪರಾಶಕ್ತಿಯು ಇಷ್ಟು ಚಮತ್ಕಾರಗಳನ್ನು ಉಂಟುಮಾಡುತ್ತಲಿದೆ ಎಂದು ಪರಿಶೀಲಿಸುವುದು ಒಂದು ಬಗೆಯ ಶಕ್ತ್ಯುಪಾಸನೆ ಅಥವಾ ಪರಾಮರ್ಶೆ.

ಮೂರು ಅಂಶಗಳು ಎಲ್ಲರ ಅನುಭವದಲ್ಲಿಯೂ ಅಚ್ಚಳಿಯದೆ ಇವೆ. ಅಭಿನ್ನವಾಗಿದ್ದ ತಿಳಿವಳಿಕೆಗಳು ವ್ಯವಹಾರ ಕಾಲದಲ್ಲಿ ಭೇದರೂಪವನ್ನು ಪಡೆಯುತ್ತವೆ. ಭೇದರೂಪವಾಗಿದ್ದ ತಿಳಿವಳಿಕೆಗಳು ಕಾಲಾಂತರದಲ್ಲಿ ಅಭಿನ್ನರೂಪವನ್ನು ತಾಳುತ್ತವೆ. ಭಿನ್ನವಾಗಿದ್ದ ತಿಳಿವಳಿಕೆಗಳು ಅಭಿನ್ನವಾಗಲಿಕ್ಕೂ ಅಭಿನ್ನವಾಗಿ ಸಂಸ್ಕಾರ ರೂಪದಿಂದಿದ್ದು ಸ್ಮರಣ ಮೊದಲಾದ ಕಾರಣಗಳಿಂದ ಭಿನ್ನರೂಪವನ್ನು ತಾಳುವುದಕ್ಕೂ ಚಿಚ್ಛಕ್ತಿಗೆ ಸ್ವಾತಂತ್ರ್ಯವಿದೆ. ಈ ಚಮತ್ಕಾರವು ಅಭಿನ್ನಾ, ಭಿನ್ನಾಭಿನ್ನಾ, ಭಿನ್ನಾ ಎಂಬ ಮೂರು ರೂಪಗಳಿಂದ ತಾಂಡವವಾಡುತ್ತಲಿದೆ.

ವಸ್ತುತೋಹಿ ತ್ರಿಧೈವೇಯಂ ಜ್ಞಾನಸತ್ತಾ ವಿಜೃಂಭತೇ ।
ಭೇದೇನ ಭೇದಾ ಭೇದೇನ ತಥೈವಾ ಭೇದಭಾಗಿನಾ ॥
(ತಂತ್ರಾಲೋಕ)

ಜ್ಞಾನಿಯಾಗಲಿ ಅನುಭಾವಿಯಾಗಲಿ ಅಥವಾ ಜಿಜ್ಞಾಸುವಾಗಲಿ ಆಧ್ಯಾತ್ಮಿಕ ಸಾಧನೆಯಲ್ಲಿ ಮೂರುಹಂತಗಳನ್ನು ಅವಶ್ಯವಾಗಿ ದಾಟಬೇಕಾಗಿರುತ್ತದೆ. ಮೊದಲನೆಯ ಹಂತದಲ್ಲಿ ಗುರುವಿನಿಂದ ಅಥವಾ ಶಾಸ್ತ್ರಾಧ್ಯಯನದಿಂದ ಹಾಗೂ ಯದೃಚ್ಛಿಕವಾದ ಉಪದೇಶದಿಂದ ,ವಿಷಯಗ್ರಹಣವಾಗಬೇಕು. ಇದಕ್ಕಾಗಿ ದೇಶದೇಶಾಂತರಗಳಲ್ಲಿ ಸಂಚರಿಸಬೇಕಾಗುತ್ತದೆ. ತಿಳಿದವರನ್ನು ಆಶ್ರಯಿಸಬೇಕಾಗುತ್ತದೆ. ಇದನ್ನೇ ಬಾಹ್ಯ ಪ್ರಪಂಚದಲ್ಲಿ ಸಂಚರಿಸುವುದು ಎನ್ನುವುದು. ಉಪದೇಶಮಾಡುವವರು ತಾವು ಸ್ವಯಂ ಸಿದ್ಧರಾಗಿದ್ದರೆ ಅವರ ಉಪದೇಶಗಳು ವಿಶದವಾಗಿರುತ್ತವೆ. ಅದಲ್ಲದೆ ಕೇವಲ ಶಾಸ್ತ್ರ ಪಂಡಿತರಾಗಿದ್ದರೆ ಉಪದೇಶಗಳು ಗೂಢವಾಗಿರುತ್ತವೆ.

ಎರಡನೆಯ ಹಂತದಲ್ಲಿ ಅನುಭವಿಯು ತಾನಾಗಬೇಕೆಂಬ ಸಾಧಕನು ತನಗೆ ತಿಳಿದ ವಿಷಯಗಳನ್ನು ತನ್ನ ಅಂತರ್ಯಾತೆಯ ವಿಕಾಸಕ್ಕೆ ಎಷ್ಟು ಮಾತ್ರ ಉಪಯೋಗಕ್ಕೆ ಬರುವುವು ಎಂದು ಮನನಮಾಡುತ್ತಾನೆ. ಇಲ್ಲಿ ನಡೆಯುವುದು ವಿಚಾರ ಮಥನ ಮತ್ತು ಸಾಧನೆ–ಅನುಷ್ಠಾನ. ಈ ಎರಡು ಅಂತರ್ಯವಾಗಿ ನಡೆಯುವುದರಿಂದ ಸಾಧಕನ ಅನುಭವಕ್ಕೆ ಮಾತ್ರ ಗೋಚರವಾಗಿರುತ್ತದೆ. ಇದನ್ನೇ ಸ್ವಾತ್ಮವಿಮರ್ಶೆ ಎನ್ನುವುದು. ಈ ರೀತಿಯ ಸಾಧನೆಯ ಪರಿಪಾಕದ ಭೇದಗಳನ್ನು ಅನೇಕ ಪರಿಯಾಗಿ ವರ್ಣಿಸಿರುತ್ತಾರೆ.

ಮೂರನೆಯ ಹಂತದಲ್ಲಿ ಸಾಧಕನು ಶಾಶ್ವತವಾದ ತತ್ತ್ವಸ್ವರೂಪ ಗೋಚರಿಸಲಾಗಿ ಸಮಾಧಿಲಾಭವಾಗುತ್ತದೆ. ಇದನ್ನು ತತ್ತ್ವಸಾಕ್ಷಾತ್ಕಾರ, ಬ್ರಹ್ಮಾನುಭವ, ಅಮೃತತತ್ತ್ವ ಪ್ರಾಪ್ತಿ, ಜೀವನ್ಮುಕ್ತಿ ಎಂಬ ಮೊದಲಾದ ಪದಗಳಿಂದ ಪಂಡಿತರು ಸೂಚಿಸಿರುತ್ತಾರೆ. ಈ ಸ್ಥಿತಿಯನ್ನು ಭಾಷೆಯಿಂದ ಹೇಳಲು ಸಾಧ್ಯವಿಲ್ಲವೆಂಬುದು ಅನುಭಾವಿಗಳ ನಿಶ್ಚಯ.

ಹೀಗೆ ಬಾಹ್ಯಪರ್ಯಟನ, ವಿಷಯಗ್ರಹಣಕ್ಕಾಗಿ ಆಂತರ್ಯವಾದ ಮನನ, ತದನಂತರ ಧ್ಯಾನ ಇವು ಆಧ್ಯಾತ್ಮಿಕ ವಿಕಾಸಕ್ಕಾಗಿ ನಡೆಯುತ್ತವೆ. ತತ್ತ್ವಸಾಕ್ಷಾತ್ಕಾರ ಕೊನೆಯ ಗುರಿ.

ಚಿತ್ಸಂಸ್ಪರ್ಶವೇರ್ಪಟ್ಟು ಅದರಿಂದುಂಟಾಗುವ ಭಾವನೆಗಳಿಂದ ಅಭಿನ್ನವಾಗಿರುವುದು "ಚಿತ್ತು" ತತ್ತ್ವಗಳ ಅವರೋಹಣ ಕ್ರಮದಲ್ಲಿ ಹದಿನಾರನೆಯ ತತ್ತ್ವವಾದ "ಚಿತ್ತ" ರೂಪವನ್ನು ತಾಳುತ್ತದೆ. ಈ ಚಿತ್ತದ ಮೂಲಕ ಹೊರಹೊಮ್ಮುವ ಎಲ್ಲಾ ತಿಳಿವಳಿಕೆಗಳಿಗೂ ಭಿನ್ನಾಭಿನ್ನವಾಗಿರುತ್ತವೆ. ಚಿತ್ಸ್ವರೂಪಾನುಬಂಧವಾಗಿದ್ದಲ್ಲಿ ಅಭಿನ್ನವಾಗಿಯೂ ಚಿ-ತ್ತಮೂಲಕವಾದಲ್ಲಿ ಭಿನ್ನವಾಗಿಯೂ ಇರುವ ಭಾವನಾ ಪ್ರಪಂಚವು ಎಲ್ಲರ ಅನುಭವದಲ್ಲಿದೆ. ಈ ಶಿವಾದ್ವೈತ ಸಂಪ್ರದಾಯದಲ್ಲಿ ತನ್ನನ್ನು ತಾನು ವಿಮರ್ಶೆ ಮಾಡಿಕೊಂಡು ಈಶಾವೇಶವನ್ನು ಸಂಪಾದಿಸುವುದೇ ಮುಖ್ಯಗುರಿ. ಶಾಸ್ತ್ರತಃ ಗುರುತಃ ಸ್ವತಃ ಎಂಬಂತೆ ಶಾಸ್ತ್ರ, ಗುರು, ಸ್ವಪ್ರಯತ್ನ ಮೊದಲಾದ ಎಲ್ಲಾ ಉಪಾಯಗಳಿಂದಲೂ ಈ ಗುರಿಯನ್ನು ಸಾಧಿಸಬೇಕು. ಪರಿಪಾಕವೇರ್ಪಟ್ಟ ಸಾಧಕನು ಈಶಾವೇಶವನ್ನು ಪಡೆದು ಈ ಜನ್ಮದಲ್ಲಿಯೇ ತಾನೇ ಶಿವನೆಂಬ ಅನುಭವವನ್ನು ಪಡೆಯುತ್ತಾನೆ. ತಾನೇ ಶಿವನು ಎಂಬ ಅನುಭವವೇ ಪ್ರತ್ಯಭಿಜ್ಞಾ. ಆ ಶಿವನೇ ನಾನು ಎಂಬ ದೃಢಪ್ರತ್ಯಯವು ಶಾಸ್ತ್ರಗಳಿಂದ ತಿಳಿದು ಉಪದೇಶಗಳಿಂದ ಕೇಳಿ ಸ್ವಪ್ರಯತ್ನದಿಂದ ಪರಿಶೀಲಿಸಿ ಸಾಕ್ಷಾತ್ಕಾರದಿಂದ ಅನುಭವಕ್ಕೆ ತಂದುಕೊಳ್ಳುವುದೇ ಪ್ರತ್ಯಭಿಜ್ಞಾ ದರ್ಶನದ ಫಲ.

ಸರ್ವೋಽಮ ಮಾಯಂ ವಿಭವಃ ಇತ್ಯೇವಂ ಪರಿಜಾನತಃ ।
ವಿಶ್ವಾತ್ಮನೋ ವಿಕಲ್ಪಾನಾಂ ಪ್ರಸರೇಽಪಿ ಮಹೇಶತಾ ॥

(ವಿಜ್ಞಾನಭೈರವ)

ಮೂವತ್ತಾರು ತತ್ತ್ವಮಯವಾದ ವಿಶ್ವವೆಲ್ಲಾ ನನ್ನ ಐಶ್ವರ್ಯವೇ ಎಂದು ಯಾರು ವಿಶ್ವಾತ್ಮಭಾವನೆಯಿಂದ ತಿಳಿಯುತ್ತಾರೆಯೋ ಅಂತಹವರಿಗೆ ಭೇದಜ್ಞಾನವನ್ನುಂಟುಮಾಡುವ ವಿಕಲ್ಪವೃತ್ತಿಗಳು ಇದ್ದರೂ ಮಹೇಶತ್ವವು ಸಿದ್ಧವಾಗಿಯೇ ಇರುತ್ತದೆ.

ಷಟ್ತ್ರಿಂಶ ತತ್ತ್ವಭೃತಂ
ವಿಗ್ರಹರಚನಾ ಗವಾಕ್ಷ ಪರಿಪೂರ್ಣಂ ।
ನಿಜಮನ್ಯದಥ ಶರೀರಂ
ಘಟಾದಿವಾ ತಸ್ಯ ದೇವಗೃಹಂ

(ಪರಮಾರ್ಥ ಸಾರ ೭೪)

ಮೂವತ್ತಾರು ತತ್ತ್ವಗಳಿಂದ ಚಿತ್ರವಿಚಿತ್ರವಾದ ರಚನಾವಿಶೇಷಗಳಿಂದ ವಿಗ್ರಹ ನಿರ್ಮಾಣವಾಗಿ ಇಂದ್ರಿಯರೂಪವಾದ ಗವಾಕ್ಷಿಗಳಿಂದ ಪರಿಪೂರ್ಣವೆನಿಸಿ ಮೃತ್ಪಿಂಡದಿಂದ ಕೂಡಿರುವ ಶಿಥಿಲವಾದ ಶರೀರವೇ ದೇವಮಂದಿರ.

ತತ್ರ ಚ ಪರಮಾತ್ಮಮಹಾ
ಭೈರವ ಶಿವದೇವತಾಂ ಸ್ವಶಕ್ತಿಯುತಾಂ ।
ಆತ್ಮಾಮರ್ಶನ ವಿಮಲ
ದ್ರವ್ಯೈಃ ಪರಿಪೂಜಯನ್ ಆಸ್ತೆ ॥

(ಪರಮಾರ್ಥಸಾರ ೭೫)

ಈ ಶರೀರರೂಪವಾದ ದೇವಮಂದಿರದಲ್ಲಿ ಸ್ವಶಕ್ತಿಯುತ ಆತ್ಮದೇವತೆಯಾದ ಭೈರವಮೂರ್ತಿಯನ್ನು ಆತ್ಮಾನುಸಂಧಾನದಿಂದ ಪವಿತ್ರದ್ರವ್ಯಗಳಿಂದ ಪೂಜಿಸುತ್ತಾ ಜ್ಞಾನಿಯಾಗುವನು.

ಇಲ್ಲಿ ದೇಹವೇ ದೇವಾಲಯ. ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳಿಂದ ಕೂಡಿ ಸೃಷ್ಟಿ ಸ್ಥಿತಿ ಲಯಗಳಲ್ಲಿ ವಿಹರಿಸುವ ಶಕ್ತಿ ಪರಿವಾರದಿಂದ ಕೂಡಿದ ಭೈರವನೇ ಉತ್ಸವಮೂರ್ತಿ. ಆತ್ಮಪ್ರಕಾಶರೂಪವಾದದ್ದೆಲ್ಲವೂ ದ್ರವ್ಯರೂಪ. ಆದುದರಿಂದ ಎಲ್ಲವೂ ಶಿವಮಯವೇ ಆಯಿತು. ಈ ರೀತಿ ಜ್ಞಾನಿಯಾದವನು ಪೂಜೆಯನ್ನು ನಡೆಸುವನು. ಜ್ಞಾನಿಯ ನಯನದ ನೋಟ ಶಿವನ ನೋಟ, ಕಿವಿಯ ಕೇಳ್ಕೆ ಶಿವನ ಕೇಳ್ಕೆ, ಮಾಡುವ ಆ ಘ್ರಾಣ ಶಿವನ ವಾಸನೆಯ ಆಘ್ರಾಣ, ರಸನೆಯ ರಸಾಸ್ವಾದ ಶಿವನ ರಸಾಸ್ವಾದ, ತ್ವಕ್ಕಿನ ಸ್ಪರ್ಶ ಶಿವನ ಸಂಸ್ಪರ್ಶ. ಹೀಗೆ ಕರಣಗಳಿಂದ ನಡೆಯುವ ಎಲ್ಲಾ ಕೆಲಸವೂ ಶಿವನ ಪೂರ್ಣಪೂಜೆ. ಈ ರೀತಿಯಲ್ಲಿ ಜ್ಞಾನಿಯಾದವನು ದೇಹ ದೇವಾಲಯದಲ್ಲಿ ವಿಶಿಷ್ಟ ನಿತ್ಯಪೂಜೆಯನ್ನು ನಡೆಸುವನು. ಇದು ತನ್ಮಯಾವಸ್ಥೆಯನ್ನು ಹೊಂದಿರುವ ಸಾಧಕರ ವಿಷಯ.

ಕರಚರಣಕೃತಂ ವಾಕ್ಕಾಯಜಂ ಕರ್ಮಜಂ ವಾ
ಶ್ರವಣನಯನಜಂ ವಾ ಮಾನಸಂ ವಾಪರಾಧಂ
ವಿಹಿತಮವಿಹಿತಂ ವಾ ಸರ್ವಮೇತತ್ ಕ್ಷಮಸ್ವ
ಶಿವಶಿವಕರುಣಾಬ್ಧೇ ಶ್ರೀಮಹಾದೇವಶಂಭೋ ॥

(ಶಂಕರಾಚಾರ್ಯ)

ನಾನು ಕೈಕರಣಗಳಿಂದ ಮನೋವಾಕ್ಕಾಯಗಳಿಂದ ಮನಸ್ಸಿನಿಂದಲೂ ಮಾಡಿದ ವಿಹಿತವಾದ ಅಹಿತವಾದ ಕರ್ಮಗಳೆಲ್ಲವನ್ನೂ ಕರುಣಾಮಯನಾದ ಮಹಾದೇವನೇ ಕ್ಷಮಿಸುವಂಥಾವನಾಗು, ಶಂಭುವೆ.

ಆತ್ಮಾಪ್ರಕಾಶ ವಪುರೇಷ ಶಿವಃ ಸ್ವತಂತ್ರಃ
ಸ್ವಾತಂತ್ರ್ಯನರ್ಮರಭಸೇನ ನಿಜಂ ಸ್ವರೂಪಂ ।
ಸಂಚಾಧ್ಯ ಯತ್ಪುನರಪಿ ಪ್ರಥಯೇತ ಪೂರ್ಣಂ
ತಚ್ಚ ಕ್ರಮಾಕ್ರಮವಶಾದಥವಾ ನಿಭೇದಾತ್ ॥

(ಅಭಿನವಗುಪ್ತ)

ಸರ್ವಜ್ಞನಾದ ಪರಮೇಶ್ವರನು ಪರಿಪೂರ್ಣನು, ಸ್ವತಂತ್ರನು. ತನ್ನ ಲೀಲೆಯಿಂದಲೇ ಸ್ವಚ್ಛಂದನಾಗಿ ನಿಜಸ್ವರೂಪವನ್ನು ಮಾಯೆಯಿಂದ ಮುಚ್ಚಿಕೊಂಡು ಜೀವಾತ್ಮನಾದನು. ಬದ್ಧಾತ್ಮನಾದ ಜೀವನು ತಾನು ಶಿವನಿಂದ ಬೇರೆಯಲ್ಲವೆಂದೂ ತಾನು ಶಿವನೇ ಎಂದು ತಿಳಿಯುವುದಕ್ಕೆ ಕ್ರಮಾಗತವಾಗಿ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳಿಂದ ಕೂಡಿದ ಶಾಂಭವ ಶಾಕ್ತ ಆಣವೋಪಾಯಗಳನ್ನು ಪ್ರಕಾಶಪಡಿಸಿದನು.

ನರ್ತಕ ಆತ್ಮಾ
(ಶಿವಸೂತ್ರ)

ಆತ್ಮನು ಸಂಸಾರರೂಪದಲ್ಲಿ ಜಾಗ್ರತ್ ಸ್ವಪ್ನ ಸುಷುಪ್ತಿ ಮೊದಲಾದ ಅವಸ್ಥೆಗಳು ಮತ್ತು ಇಂದ್ರಿಯಗಳ ಮೂಲಕ ಜಗನ್ನಾಟ್ಯವನ್ನು ಅಭಿನಯಿಸುವನು. ಈ ನಾಟ್ಯಕರ್ತನ ವೇಷಭೂಷಣ ಗ್ರಹಣ ಪದಬಂಧಗಳಿಗೆ ರಂಗಭೂಮಿಯಾಗಿರುವುದು ಅಂತರಾತ್ಮ. ಆತ್ಮನೇ ಚಮತ್ಕಾರದಿಂದ ಈ ವಿಶ್ವವನ್ನು ಪ್ರಕಾಶಪಡಿಸುತ್ತಿರುವವನೂ ತಾನೇ ಶಿವನೆಂಬ ಭಾವನೆಯನ್ನು ಪಡೆಯುವವನೂ ಆಗಿದ್ದಾನೆ.

ಈ ಪ್ರತ್ಯಭಿಜ್ಞಾದರ್ಶನದ ಸತ್ಯಸ್ವರೂಪವನ್ನು ಯಾವುದೇ ದೃಷ್ಟಿಯಿಂದ ವಿಚಾರಮಾಡಿದರೂ ಸಮಾಧಾನಕರವಾದದ್ದೆಂದೂ ಸರ್ವಮಾನ್ಯವಾದದ್ದೆಂದೂ ನಿಶ್ಚಿತವಾಗಿ ಕಂಡುಬರುವುದು. ಏಕೆಂದರೆ ಕಾಶ್ಮೀರದ ಮಹಾಮಹಿಮರಾದ ವಸುಗುಪ್ತ ಮೊದಲಾದ ಶಾಸ್ತ್ರಜ್ಞರು ಪ್ರತಿಪಾದಿಸಿರುವ ಪರಮಸತ್ಯಕ್ಕೆ ಪ್ರತ್ಯಕ್ಷ ಅಪರೋಕ್ಷ ಪ್ರಾತಿಭ ಇವುಗಳ ಅನುಭವವೇ ಅಡಿಗಲ್ಲು. ಮಾನವ ಜೀವನವು ದಿವ್ಯವಾಗಿಯೂ ಸ್ಪೃಹಣೀಯವಾಗಿಯೂ ಆಗುವಂತೆ ಮಾಡುವುದೇ ಇದರ ಉದ್ದೇಶ. ಈ ಸಿದ್ಧಾಂತ ಜ್ಞಾನದ ಪೂರ್ಣತೆ ಮತ್ತು ಪರಿಪಾಕವು ಸಾಕ್ಷಾತ್ಕಾರ್ಯದಲ್ಲಿಯೇ ಆಗುವುದು. ತತ್ತ್ವಜ್ಞಾನದ ತಿಳಿವಳಿಕೆಯಿಂದ ಮಾನವನು ನೀತಿಯತ್ತ ಹೊರಳುವನು. ಸಾಕ್ಷಾತ್ಕಾರದಿಂದಲೇ ನೀತಿಗೆ ಪೂರ್ಣತೆ. ಸಾಕ್ಷಾತ್ಕಾರವು ಸಾತ್ಮೀಕರಣವಾಗದೆ ಅನುಭವಕ್ಕೆ ಬರುವುದಿಲ್ಲ. ಸಾತ್ಮೀಕರಣದಿಂದ ಸಿದ್ಧಿ. ಎಲ್ಲಾ ಧರ್ಮಗಳೂ ಸಾಕ್ಷಾತ್ಕಾರವನ್ನೇ ತಮ್ಮ ಗುರಿಯನ್ನಾಗಿ ಇಟ್ಟುಕೊಂಡಿರುವುವು. ಆಧ್ಯಾತ್ಮಿಕ ಅನುಭವವು ಈಶ್ವರೀ ಅನುಭವ.

ಮಯಾಸ್ ಹ್ಯುಃ ನಃ ಪ್ರಕಾಶ್ ಕುನೆ
ಪಯಾಸ್ ಹ್ಯುಃ ನ ತೀರ್ಥ ಕೋಽನ್ ।
ದಯಾಸ್ ಹ್ಯುಃ ನಃ ಬಾಂಧವ ಕುನೆ
ಬಯಾಸ್ ಹ್ಯು ನಃ ಸುಖ ಕೋಽನ್ ॥

(ಕಾಶ್ಮೀರಿ ಭಾಷೆಯಲ್ಲಿರುವ ಲಲ್ಲವಾಕ್ಯ)

ಬ್ರಹ್ಮಜ್ಞಾನಕ್ಕಿಂತ ಹೆಚ್ಚಿನ ಪ್ರಕಾಶವಿಲ್ಲ.
ಪರಮಾತ್ಮನ ಸಾಕ್ಷಾತ್ಕಾರ ಪ್ರಯತ್ನಕ್ಕಿಂತ ಮಿಗಿಲಾದ ತೀರ್ಥಯಾತ್ರೆ ಇಲ್ಲ.
ಪರಮಾತ್ಮನ ದಯೆಗಿಂತ ಆತ್ಮಬಂಧುವಿಲ್ಲ.

ಪರಮಾತ್ಮನಲ್ಲಿ ಭಯಭಕ್ತಿಯಿಂದ ನಡೆದುಕೊಳ್ಳುವುದರಲ್ಲುಂಟಾಗುವ ಸುಖಕ್ಕಿಂತ ಹೆಚ್ಚಿನ ಸುಖವಿಲ್ಲ.

ಅನುಭವಿಯ ಸಾಧನಾ ಮತ್ತು ಸಿದ್ಧಿ

ತತ್ತ್ವಜ್ಞಾನಿಯೂ ಅನುಭಾವಿಯೂ ಆಗಿದ್ದ ಕಾಶ್ಮೀರದ ಲಲ್ಲೇಶ್ವರಿ ಎಂಬ ಸಿದ್ಧಮಹಿಳೆಯು ಪ್ರತ್ಯಭಿಜ್ಞಾಶೈವಪಂಥದ ಅನುಯಾಯಿ. ಈಕೆಯ ವಚನೋದ್ಗಾರಗಳು ಸ್ಫೂರ್ತಿದಾಯಕಗಳಾಗಿವೆ. ಈಕೆಯ ಉದ್ಗಾರಗಳು ಹಲವಾರು ತತ್ತ್ವಗಳನ್ನು ವಿವೇಚಿಸುತ್ತವೆ. ನಮ್ಮ ಮನೋಭಾವನೆಗಳನ್ನು ಹದಮಾಡುವ ಸೂಚನೆಗಳನ್ನೊಳಗೊಂಡಿವೆ. ಹೊರಗಿನ ಪ್ರಪಂಚದಲ್ಲಿ ತೊಳಲುತ್ತಿರುವ ಮಾನವನು ಅಂತರ್ಯತೆಯ ಕಡೆಗೆ ಲಕ್ಷ್ಯಕೊಡುವಂತೆ ಪ್ರೇರಿಸುತ್ತವೆ. ಈ ದೃಷ್ಟಿಯಿಂದ ಈಕೆ ಅನುಸರಿಸಿದ **ಸಾಧನ** ಅದರಿಂದ ಪಡೆದ **ಸಿದ್ಧಿ** ಇವು ನಾವು ಅನುಸಂಧಾನಮಾಡುವುದಕ್ಕೆ ಯೋಗ್ಯವಾಗಿವೆ. ಸಾಧನೆಯ ಸ್ವರೂಪವನ್ನು ತಿಳಿಯಬೇಕಾದರೆ ಆದರ ಹಂತದ ತಿಳಿವಳಿಕೆಯೂ ನಮಗೆ ಬೇಕಾಗುತ್ತದೆ. ಸಂಗ್ರಹವಾಗಿ ಆಕೆ ಅನುಸರಿಸಿದ ಸಾಧನಮಾರ್ಗಗಳ ಸ್ವರೂಪವನ್ನು ಇಲ್ಲಿ ವಿವೇಚಿಸಿರುವುದಾಗಿದೆ.

ಜಿಜ್ಞಾಸೆ

ಸಾಧಕರಿಗೆ ತತ್ತ್ವವಿಷಯದಲ್ಲಿ ಜಿಜ್ಞಾಸೆಯುಂಟಾಗುವುದು ಸಹಜ. ಸ್ವಲ್ಪ ತಿಳಿದ ವಿಷಯವನ್ನು ಪೂರ್ಣವಾಗಿ ತಿಳಿಯಬೇಕೆಂಬ ಇಚ್ಛೆಯುಂಟಾಗುತ್ತದೆ. ತಿಳಿಯದೆ ಇರುವ ವಿಷಯವನ್ನು ತಿಳಿಯಬೇಕೆಂಬ ಆಸೆಯೂ ಇರುತ್ತದೆ. ಇದನ್ನೇ ಜಿಜ್ಞಾಸು ಎಂದು ಪಾರಿಭಾಷಿಕವಾಗಿ ಕರೆಯುವುದು. ಜೀವನದ ಎಲ್ಲಾ ಪ್ರವೃತ್ತಿಗಳೂ ಈ ಜಿಜ್ಞಾಸೆಯ ಬಲದಿಂದಲೇ ನಡೆಯುತ್ತವೆ. ವ್ಯವಹಾರ ವಿಷಯವಾಗಲಿ ತತ್ತ್ವವಿಷಯವಾಗಲಿ ಈ ಜಿಜ್ಞಾಸೆಯಿಂದಲೇ ಮಾನವನ ತಿಳಿವಳಿಕೆಗೆ ಬರುವುದು. ಇದು ಸಾಮಾನ್ಯ ನಿಯಮ. ಸಾಧಕರ ಜಿಜ್ಞಾಸೆ ವ್ಯವಹಾರಜಿಜ್ಞಾಸೆಗಿಂತ ವಿಲಕ್ಷಣವಾಗಿರುತ್ತದೆ. “ನಾನು ಎಲ್ಲಿಂದ ಬಂದೆ, ಎಲ್ಲಿಗೆ ಹೋಗಬೇಕು, ಹೋಗುವ ದಾರಿ ನನಗೆ ತಿಳಿಯದು. ನಾನು ಸುಖ ದುಃಖಗಳನ್ನನುಭವಿಸುತ್ತೇನೆ. ಇವುಗಳ ವ್ಯವಸ್ಥೆ ಹೇಗೆ ಎಂಬುದನ್ನು ತಿಳಿಯಬೇಕೆಂಬ ಆಸೆ ನನಗಿದೆ” ಈ ಬಗೆಯ ಜಿಜ್ಞಾಸೆಯುಂಟಾದಾಗ ತನ್ನ ಸ್ವಶಕ್ತಿಯಿಂದ ತಿಳಿದು ಗುರಿಯನ್ನು ಮುಟ್ಟಲು ಸಮರ್ಥವಲ್ಲವೆಂದು ಮನವರಿಕೆಯಾದಾಗ ಶರಣುಹೋಗುತ್ತಾಳೆ. ಪ್ರಭುವೆ, ನೀನು ನನಗೆ ತಿಳಿಯಲಿಲ್ಲ. ಕೆಲವರು ಜೀವಾತ್ಮನೂ ಈಶ್ವರನೂ ಒಂದೇ ಎನ್ನುತ್ತಾರೆ. ಕೆಲವರು ಇವರಿಬ್ಬರೂ ಬೇರೆ ಬೇರೆ ಎನ್ನುತ್ತಾರೆ. ಇದಲ್ಲದೆ ಶಿವ, ಕೇಶವ, ಜಿನ, ಬ್ರಹ್ಮ ಮೊದಲಾದ ಹೆಸರುಗಳಿಂದ ಆ ಪರತತ್ತ್ವವನ್ನು ಕರೆಯುತ್ತಾರೆ. ಇಲ್ಲಿಯೂ ಕೂಡ ಇದೇ ಸರಿ ಎಂದು ಹೇಳುವ ಶಕ್ತಿ ನನಗಿಲ್ಲ ಎನ್ನುವ ಭಾವನೆಯುಂಟಾಗಿ ಅಹಂಕಾರದ ದುಷ್ಪರಿಣಾಮಗಳೆಲ್ಲಾ ಬಿಟ್ಟುಹೋಗುತ್ತವೆಂಬ ಭಾವವನ್ನು ವ್ಯಕ್ತಪಡಿಸಿದ್ದಾಳೆ. ಆಗ ಈ ತತ್ತ್ವವಿಚಾರವನ್ನು ಯಾರು ವ್ಯಕ್ತಪಡಿಸುವರೋ,

ಯಾರು ನಮ್ಮಲ್ಲಿ ಕಾಣುವ ವ್ಯತ್ಯಾಸಗಳನ್ನು ಏರಿಳಿತಗಳನ್ನು ಪರಿಶೀಲಿಸಿ ನನಗೆ ಜ್ಞಾನವಿಕಾಸವನ್ನುಂಟುಮಾಡುವರೋ ಅವರೇ ಗುರುಗಳು ಎನ್ನುತ್ತಾಳೆ. ಹಾಗೆಯೇ ಪ್ರಪಂಚ ವಿಷಯದಲ್ಲಿಯೂ ಜಿಜ್ಞಾಸೆಯು ಇವಳ ಮನಸ್ಸನ್ನು ಕದಡುತ್ತದೆ. ಶಿಶು ಬಾಲ್ಯ, ಕೆಲವು ಕಾಲದಲ್ಲಿ ಯೌವನ, ಹಾಗೆಯೇ ಮುಪ್ಪು, ಕೊನೆಗೆ ಶರೀರವನ್ನು ಬಿಡಬೇಕು. ಇಲ್ಲಿ ಶಾಶ್ವತವಾದದ್ದು ಯಾವುದೂ ಇಲ್ಲ ಎಂಬ ವಿಮರ್ಶೆಯುಂಟಾಗಿ ಶಾಶ್ವತವಾದದ್ದು ಪರತತ್ತ್ವ ಒಂದೇ, ಮಿಕ್ಕದ್ದೆಲ್ಲ ಕೆಲವುಕಾಲ ಇರತಕ್ಕದ್ದು, ಪ್ರಾಪಂಚಿಕ ವಿಷಯಗಳಲ್ಲಿ ಹೆಚ್ಚುಕಾಲ ತಿರುಗಿದ್ದೇನೆ ಆದರೂ ಸತ್ಯವನ್ನು ನಾನು ಅರಿಯಲಿಲ್ಲ; ತೀರ್ಥಕ್ಷೇತ್ರಗಳಿಗೆ ಹೋದೆ, ಅಲ್ಲಿಯೂ ಸಾಕ್ಷಾತ್ಕಾರವೇರ್ಪಡಲಿಲ್ಲ. ಪರಮಾತ್ಮನ ಗುಣಗಾನವನ್ನು ಮಾಡಿದ್ದಾಯಿತು ಅದರಿಂದಲೂ ಸಾಕಾದಷ್ಟು ಪ್ರಯೋಜನ ಸಿಕ್ಕಲಿಲ್ಲ. ಇನ್ನುಮುಂದೆ ಏನು! ಹೊರಗೆ ಹುಡುಕುವುದಕ್ಕಿಂತ ನಮ್ಮಲ್ಲಿಯೇ ಇರುವ ಪರಮಾತ್ಮನನ್ನು ಧ್ಯಾನಿಸಬೇಕು. ನಮ್ಮಲ್ಲಿಯೇ ನಾವು ಸರ್ವವ್ಯಾಪಿಯಾದ ಪರಮಾತ್ಮನನ್ನು ಮನಗಂಡರೆ ಸಾಕ್ಷಾತ್ಕಾರವುಂಟಾಗಲು ತೊಂದರೆಯಿಲ್ಲ ಎಂಬ ಅಂಶ ಅರಿವುಂಟಾಗುವುದು.

ವಿಮರ್ಶೆ

ಜಿಜ್ಞಾಸೆಯು ವಿಮರ್ಶನಶಕ್ತಿಯಾಗಿ ಪರಿಣಮಿಸಿದರೆ ನಮ್ಮ ಜೀವನದ ಅನೇಕ ಮುಖಗಳ ಅರಿವುಂಟಾಗುತ್ತದೆ. ಅದರಿಂದ ಯಾವಾಗಲೂ ಬದಲಾವಣೆಯನ್ನು ಪಡೆಯುತ್ತಿರುವ ಪ್ರಪಂಚದ ಅನಿತ್ಯತ್ವವು ಗೋಚರಿಸುತ್ತದೆ. ಜಿಜ್ಞಾಸೆ, ವಿಮರ್ಶೆ ಈ ಎರಡು ಮುಖಗಳೂ ಸ್ಥಿರಪಟ್ಟರೆ ನಮ್ಮ ಭಾವನಾಪ್ರಪಂಚದಲ್ಲಿ ಸ್ವಾಭಿಮಾನಕ್ಕೆ ಅವಕಾಶವಿಲ್ಲ. ಅಹಂಕಾರಕ್ಕೆ ಎಡೆಯಿಲ್ಲ. ಈ ಸ್ಥಿತಿಯಲ್ಲಿ ತತ್ತ್ವಜ್ಞಾನಿಯಾದ ಗುರುವೆ ಉಪಾಯ. ಅಂದರೆ ಪರತತ್ತ್ವವಾಗಿರುವ ಪರಶಿವನೇ ಈ ಉಪಾಯದಿಂದ ಪಡೆಯತಕ್ಕವನು (ಉಪೇಯ). ಹೀಗೆ ಸ್ವಾಭಿಮಾನ ಅಹಂಕಾರಗಳನ್ನು ಬಿಟ್ಟನಂತರ ಪರಶಿವನಲ್ಲಿ ಶರಣು ಹೋಗುವನು. ಆ ಪರಶಿವನೇ ಈ ಸಾಧಕನಿಗೆ ಇವನ ಯೋಗ್ಯತಾನುಸಾರವಾಗಿ ಪಂಡಿತನಾಗಲಿ ಪಾಮರನಾಗಲಿ ಸ್ತ್ರೀಯಾಗಲಿ ಪುರುಷನಾಗಲಿ ಇವರ ಜ್ಞಾನವಿಕಾಸಕ್ಕೆ ಪ್ರೇರಕನಾಗುತ್ತಾನೆ. ಅಲ್ಲಿಂದ ಮುಂದುವರಿಯುವ ಪ್ರಯತ್ನಗಳೆಲ್ಲಾ ಆ ಪರತತ್ತ್ವದ ಪ್ರೇರಣೆಗನುಸಾರವಾಗಿರುತ್ತವೆ. ಇದು ನಿಜವಾದ ಸಾಧಕನ ಸಾಧನೆಯಲ್ಲಿ ಮೊದಲನೆಯ ಹಂತ.

ಶಾಸ್ತ್ರಜ್ಞಾನ ಮತ್ತು ಸ್ವಾತ್ಮವಿಮರ್ಶೆ

ಸಾಧನೆಗಳನ್ನು ಮುಂದುವರಿಸಿದರೆ ಅದರ ಭೇದಗಳನ್ನು ಮೊದಲೇ ಹೇಳಲಾಗುವುದಿಲ್ಲ. ಕೆಲವು ಸಮಯಗಳಲ್ಲಿ ಶಾರೀರಿಕವಾದ ಕ್ರಿಯೆಗಳು ಮುಖ್ಯವಾಗಿರಬಹುದು. ಅವು ಆರೋಗ್ಯವನ್ನೂ ಮನಶ್ಶಾಂತಿಯನ್ನೂ ಸ್ಥಿರಪಡಿಸುತ್ತವೆ. ಪೂಜೆ ಭಜನೆ ನಾಮ

ಸಂಕೀರ್ತನೆ, ಪಾರಾಯಣ, ಉತ್ಸವಗಳು ಕೆಲವರಿಗೆ ಹಿತವಾಗಿರುತ್ತವೆ. ಅದರಿಂದ ಅಪ್ರತ್ಯಕ್ಷವಾಗಿ ಪರಿಪಾಕವೇರ್ಪಡಬಹುದು. ಇನ್ನು ತೀವ್ರವಾದ ಅಧಿಕಾರಿಗಳು ಧ್ಯಾನ ಧಾರಣ ಮೊದಲಾದ ನಿಶ್ಚಿತವಾದ ಸಾಧನಗಳನ್ನು ಮಾಡುತ್ತಾರೆ. ಅವುಗಳಿಂದ ಕೆಲವು ನಿರ್ದಿಷ್ಟವಾದಂತಹ ಪರಿವರ್ತನಗಳುಂಟಾಗುತ್ತವೆ. ಇನ್ನೂ ಅನೇಕ ಸಾಧನಗಳು ಹಿಂದಿನಿಂದಲೂ ಬಂದಿವೆ. ಸಾಧಕನು ಸಂಪ್ರದಾಯದಂತೆ ಸಂನ್ಯಾಸಿಯಾಗಿರಲಿ ಗೃಹಸ್ಥನಾಗಿರಲಿ ಏಕಾಂಗಿಯಾಗಿರಲಿ ಅಥವಾ ಸಮುದಾಯದಲ್ಲಿರಲಿ ಈ ಸಾಧನಾಭ್ಯಾಸಗಳಲ್ಲಿ ತೊಡಗದೆ ಸಿದ್ಧಿಯನ್ನು ಪಡೆಯುವುದು ಸಾಧ್ಯವಿಲ್ಲ. ಸಾಧಕನಿಗೆ ಹಿಂದಿನ ಸಂಸ್ಕಾರಗಳು ಕರಗಿ ಹೋಗಬೇಕು. ಗ್ರಾಹಕನಾಗಿರುವ ಜೀವಾತ್ಮನಿಗೂ ತಿಳಿವಳಿಕೆಗೆ ಗೋಚರಿಸುವ ಅಥವಾ ಗ್ರಾಹ್ಯವಾಗಿರುವ ಪ್ರಪಂಚಕ್ಕೂ ಇರುವ ಸಂಬಂಧವು ಅರ್ಥವಾಗಬೇಕು. ಭಿನ್ನವಾಗಿಯೂ ಅಭಿನ್ನವಾಗಿಯೂ ಇರುವ ವಿಶ್ವವನ್ನು ಸಾಧಕನು ತನ್ನ ಭಾವನಾಬಲದಿಂದ ಅರಿಯಬೇಕು. ಅರಿಯುವ ಶಕ್ತಿಯುಳ್ಳ ಗ್ರಾಹಕನು ತಾನು ಸಂಕುಚಿತ ಸ್ಥಿತಿಯಲ್ಲಿದ್ದರೂ ಅನಂತವಾದ ವಿಕಾಸವನ್ನು ಪಡೆಯಬಹುದೆಂಬ ದೃಢನಿಶ್ಚಯ ಮತ್ತು ಧೈರ್ಯವುಂಟಾಗಬೇಕು. ಇದರಿಂದ ತಾನು ಸ್ವಯಂಪ್ರಕಾಶನಾಗಿ ಜ್ಞಾನಸ್ವರೂಪಿಯಾಗಿರುವ ಪರಮಾತ್ಮನಂತೆಯೇ ಇದ್ದೇನೆಂಬ ಭಾವನೆ ಸ್ಥಿರವಾಗಿ ನಿಂತರೆ ಸಾಧಕನಿಗೆ ಕಾಮಕ್ರೋಧಗಳು ಮದಮಾತ್ಸರ್ಯಗಳು ಶಮನವಾಗುತ್ತವೆ. ಶಾಸ್ತ್ರದ ವಿವರಣೆಗಳಿಂದ ಉಂಟಾದ ತಿಳಿವಳಿಕೆಯು ಈ ಸ್ಥಿತಿಯಲ್ಲಿ ಅನುಭವಕ್ಕೆ ಬರುತ್ತದೆ. ಹಾಗೆಯೇ ಜನನ ಮರಣಗಳಿಂದ ತಾನು ಸುತ್ತುತ್ತಲಿರುವೆನೆಂದು ಮನವರಿಕೆಯಾಗುತ್ತದೆ. ಇಂತಹ ಎಲ್ಲಾ ವಿಷಯಗಳೂ ಸಾಧಕನ ಮನಸ್ಸಿಗೆ ಬರುತ್ತವೆ. ಆದರೆ ವಿಷಯವು ಅನುಭವ ಮಟ್ಟಕ್ಕೇರಿದಾಗ ಅದರ ಪ್ರಭಾವವು ವಿಲಕ್ಷಣವಾಗಿರುತ್ತದೆ. ವಿಶ್ವವ್ಯಾಪಾರಗಳೆಲ್ಲಾ ಪರಮಾತ್ಮನ ಶಕ್ತಿಯಿಂದ ನಡೆಯುತ್ತವೆಂಬ ತತ್ತ್ವವು ಇವನಿಗೆ ಅನುಭವಕ್ಕೆ ಬರುತ್ತದೆ. ಈ ಸ್ಥಿತಿಯಲ್ಲಿ ಈತನು ಮುಖ್ಯವಾಗಿ ಒಳಗಿನ ಪ್ರಪಂಚಕ್ಕೂ ಹೊರಗಿನ ಪ್ರಪಂಚಕ್ಕೂ ಇರುವ ವ್ಯತ್ಯಾಸಗಳನ್ನೂ ಸಂಬಂಧಗಳನ್ನೂ ಮನಗಾಣುತ್ತಾನೆ. ಇದರಿಂದ ವಿಶ್ವದ ಸ್ವರೂಪಜ್ಞಾನ, ತನ್ನ ಸಂಕುಚಿತವಾಗಿರುವ ಸ್ಥಿತಿ, ಜೀವನದಲ್ಲಿ ಪರಾಧೀನತೆ ಎಷ್ಟಿದೆ ಎನ್ನುವ ತಿಳಿವಳಿಕೆ—ಇವು ಖಚಿತವಾಗಿ ಅನುಭವಕ್ಕೆ ಬರುತ್ತವೆ. ಆಗ ಗ್ರಾಹ್ಯಗ್ರಾಹಕ ವಿಭಾಗದ ಅನುಭವ ಬಂದಹಾಗಾಯಿತು ಎಷ್ಟರಮಟ್ಟಿಗೆ ತಾನು ಜ್ಞಾನವಿಕಾಸವನ್ನು ಪಡೆಯುವುದಕ್ಕೆ ಸಮರ್ಥನಾಗಿರುವೆನೆಂಬ ನಂಬಿಕೆ, ಅದಕ್ಕೆ ಅಡಚಣೆಯನ್ನುಂಟು ಮಾಡುವ ಕಾಮಕ್ರೋಧವೇ ಮೊದಲಾದ ಶಕ್ತಿಗಳು ಪ್ರವೃತ್ತಿ, ವಿಲಾಸವೆಂದು ತನ್ನ ಸ್ವರೂಪಕ್ಕೆ ಸೇರಿಲ್ಲವೆಂಬ ವಿಭಜನೆ ಉಂಟಾಗುತ್ತದೆ. ಹಾಗೆಯೇ ತನ್ನ ಪರಾಧೀನತೆಯು ಈಶ್ವರನ ಸೃಷ್ಟಿವಿಲಾಸದ ಒಂದು ಅಂಶವೆಂಬ ಅರಿವುಂಟಾಗುತ್ತದೆ.

ತಿಳಿವಿನ ಸಾಧನ, ತಿಳಿಯತಕ್ಕ ವಿಷಯ ಮುಂತಾದ ಎಲ್ಲಾ ರೂಪದಲ್ಲಿ ಜ್ಞಾನಸ್ವರೂಪನಾದ ಆತ್ಮನು ಸ್ವತಂತ್ರವಾಗಿ ಸ್ವೇಚ್ಛೆಯಾಗಿ ಬೆಳಗುತ್ತಿದ್ದರೂ ಆತನನ್ನು ಕಾಣದಿರಲು ಇರುವ ಪ್ರತಿಬಂಧಕವಾದ ಅನಾತ್ಮಾಭಿಮಾನವಾದ ತಿಮಿರದೋಷವೆಂದು

ಅಭಿನವಗುಪ್ತರು ಹೇಳಿ ಪರಿಹಾರವನ್ನು ಸೂಚಿಸಿರುತ್ತಾರೆ. ಪರಮಾರ್ಥಸಾರ, ಶ್ಲೋಕ ೩೨ರಲ್ಲಿ—

ದೇಹಪ್ರಾಣ ವಿಮರ್ಶನ
ಧೀಜ್ಞಾನ ನಭ ಪ್ರಪಂಚಯೋಗೇನ
ಆತ್ಮಾನಂ ವೇಷ್ಟಯತೇ
ಚಿತ್ರಂ ಜಾಲೇನ ಜಾಲಕಾರ ಇವ ॥೩೨॥
ಸುಜ್ಞಾನ ವಿಭವ ಭಾಸನ
ಯೋಗೇನೋದ್ವೇಷ್ಟಯೇನ್ನಿಜಾತ್ಮಾನಂ।
ಇತಿಬಂಧಮೋಕ್ಷ ಚಿತ್ರಾಂ
ಕ್ರೀಡಾಂ ಪ್ರತನೋತಿ ಪರಮಶಿವಃ ॥೩೩॥

ರೇಷ್ಮೆಹುಳುವು ತನ್ನ ಸುತ್ತಲೂ ತಂತುವಿನಿಂದಾದ ಕೋಶದಿಂದ ಆವರಣವನ್ನು ನೇಯ್ದುಕೊಂಡು ತನ್ನನ್ನೇ ಬಂಧಿಸಿಕೊಳ್ಳುವಂತೆ ಆತ್ಮನು ದೇಹ ಪ್ರಾಣಗಳನ್ನೇ ತಾನೆಂದು ಭಾವಿಸಿಕೊಳ್ಳುವುದು, ಬುದ್ಧಿನಿಶ್ಚಯವನ್ನು ತಾನೆಂದು ಎಣಿಸುವುದು, ಗಗನ ಪ್ರಪಂಚವನ್ನೇ ತಾನೆಂದು ತರ್ಕಿಸಿಬಿಡುವುದು ಮುಂತಾದ ಭಾವನೆಗಳ ಬಲೆಯಿಂದ ತನ್ನನ್ನೇ ಸುತ್ತುಗಟ್ಟಿಕೊಂಡಿರುವುದು ವಿಚಿತ್ರವಾಗಿದೆ. ಇಲ್ಲಿ ವಿಮರ್ಶನ. ವೆಂದರೆ ಆತ್ಮನ ಸ್ವಸಂವೇದನೆ—ಸ್ವಸ್ವರೂಪವನ್ನು ಪ್ರತಿಬಿಂಬಿಸುವ ಚಿತ್ಕ್ರಿಯ ವಿಮರ್ಶನ (೧) ದೇಹವೇ ತಾನೆಂದು ಎಣಿಸಿ ಕೇವಲ ಶರೀರಕ್ಕೆ ಸಂಬಂಧಿಸಿದ ಕೃಶತ್ವ, ಸ್ಥೂಲತ್ವ ಅಂದಚೆಂದ ಮುಂತಾದುವುಗಳನ್ನು ಆತ್ಮನಲ್ಲಿ ಆರೋಪಿಸಿಕೊಂಡಿರುವುದು ಮೊದಲ ನೆಯ ವಿಕಲ್ಪ. ಇದನ್ನು ದೇಹ ವಿಮರ್ಶನವೆನ್ನುವುದು. (೨) ಮತ್ತೆ ಕೆಲವರು ದೇಹವು ಇಲ್ಲಿಯೇ ಲಯವಾಗತಕ್ಕದ್ದು. ಅದು ಆತ್ಮ ಹೇಗಾದೀತು. ಯಾವುದರಿಂದ ಹಸಿವು ಬಾಯಾರಿಕೆ ಅನುಭವಿಸುವ 'ನಾನು ಆತ್ಮವಸ್ತು' ಎಂದು ಪ್ರಾಣಶಕ್ತಿಯನ್ನೇ ಆತ್ಮನಲ್ಲಿ ಆರೋಪಿಸಿ ಆತ್ಮನನ್ನು ಕಂಡಂತೆ ತೃಪ್ತಿಪಡುವರು. (೩) ಬೇರೆ ಕೆಲವರು ತಾವು ವಿವೇಕಿಗಳೆಂದು ಭ್ರಮಿಸಿ ದೇಹವೂ ಜಡ, ಪ್ರಾಣವೂ ಜಡ, ಸುಖದುಃಖಾದಿಗಳನ್ನನುಭವಿಸುವ 'ನಾನು ಆತ್ಮವಸ್ತು' ಎಂದುಕೊಂಡು ತೃಪ್ತಿಪಡುವರು. (೪) ಇನ್ನು ಕೆಲವರು ಈ ದೇಹ ಪ್ರಾಣ ಬುದ್ಧಿ ಧರ್ಮಗಳಾಚೆ ಇರುವ ಶೂನ್ಯತಾಭಾವನೆ (ನಭ) ಬಯಲ ಭಾವನೆಯ ಸ್ವರೂಪಸ್ಥಿತಿಯನ್ನೇ ಆತ್ಮವನ್ನಾಗಿ ಎಣಿಸುವರು. ಇದನ್ನೆ "ನಭ" ಪ್ರಪಂಚವೆನ್ನುವರು. ಇಷ್ಟಾದರೂ ಚಿನ್ಮಾತ್ರ ಸ್ವರೂಪವು ಶಿವಶಕ್ತಿಪಾತದ ಮೂಲಕವೇ ಆವರಣಗಳು ಕಳಚಿಬಿದ್ದು ನೈಜವಾದ ಜ್ಞಾನವೈಭವದ ಪರಿಣಾಮವಾಗಿ ಗೋಚರವಾಗುವುದು. ಆತ್ಮನು ರೇಷ್ಮೆಹುಳು ಕಂಬಳಿಹುಳು ಮುಂತಾದ ಪ್ರಾಣಿಗಳು ತಮ್ಮ ಬಾಯಿಂದಲೇ ಹೊರಟ ದಾರದಿಂದ ತನ್ನ ಸುತ್ತಲೂ ಬಲವಾದ ಕೋಶಾವರಣವನ್ನು ಕಲ್ಪಿಸಿಕೊಂಡು ಹೊರಗೆ ಬರಲಾಗದಂತೆ ಒಳಗೆ ಸಿಲುಕುವ ರೀತಿ ಆತ್ಮನದು. ರೇಷ್ಮೆಹುಳು ತಾನೇ

ಕಲ್ಪಿಸಿಕೊಂಡ ಆವರಣವನ್ನು ಕೆಲವು ಕಾಲದಮೇಲೆ ಕಳಚಿಬಿಟ್ಟು ಬೇರೊಂದು ರೂಪದಲ್ಲಿ ಚಿಟ್ಟೆಯಾಗಿ ಹೊರಬಂದುಬಿಡುತ್ತದೆ. ಹೀಗೆಯೇ ಜೀವಾತ್ಮನು ಬಂಧನದಿಂದ ಬಿಡುಗಡೆಯನ್ನು ಶಿವಶಕ್ತಿಪಾತದ ಮೂಲಕ ಹೊಂದುವನು. ಭ್ರಾಂತಿಯಲ್ಲಿ ಮುಸುಕಿದ ಆತ್ಮನು ಚಿದಾನಂದೈಕ ಘನಸ್ವಭಾವವನ್ನು ಸ್ವಾತಂತ್ರ್ಯವೈಭವವನ್ನು ಪರಿಶೀಲನಕ್ರಮದಿಂದ ವಿಮರ್ಶಿಸಿ ನೈಜವಾದ ಜ್ಞಾನವೈಭವದ ಪ್ರಕಾಶದ ಮೂಲಕ ಆವರಣಗಳನ್ನು ಕಳಚಿಕೊಂಡು ಹೊರಗೆ ಬರುತ್ತಾನೆ. ಹೀಗೆ ಬಂಧ ಮೋಕ್ಷವೆಂಬ ವಿಚಿತ್ರವಾದ ಕ್ರೀಡೆಯನ್ನು ಪರಶಿವನು ನಡೆಸುತ್ತಾನೆ. “ ಇತಿಬಂಧ ಮೋಕ್ಷ ಚಿತ್ರಾಂ ಕ್ರೀಡಾಂ ಪ್ರತನೋತಿ ಪರಮಶಿವಃ ” (ಪರಮಾರ್ಥಸಾರ, ಶ್ಲೋಕ ೩೩)

ಈ ಎರಡು ಹಂತಗಳಲ್ಲಿ ಅಂದರೆ ಶಾಸ್ತ್ರಜ್ಞಾನ ಮತ್ತು ಸ್ವಾತ್ಮವಿಮರ್ಶೆ ಮಾಡಿಕೊಂಡು ಮುಂದುವರಿದ ಸಾಧಕನು ಮುಂದಿನ ತನ್ನ ಸ್ವಸ್ವರೂಪ ಸಾಕ್ಷಾತ್ಕಾರಕ್ಕೆ ಅರ್ಹನಾಗುತ್ತಾನೆ.

ಅಭ್ಯಾಸ-ಸ್ವರೂಪಾನುಸಂಧಾನ

ಇದುವರೆಗೂ ಸೂಚಿಸಿದ ಕೆಲವು ಅಂಶಗಳು ರೂಢಮೂಲವಾದರೆ ಸಾಧಕನು ಆಂತರ್ಯಪರಿವರ್ತನೆಗೆ ಅರ್ಹನಾಗಿ ಅಭ್ಯಾಸಯೋಗವನ್ನು ಮುಂದುವರಿಸುತ್ತಾನೆ. ಸ್ಥೂಲವಾದ ಜಡ ಪ್ರಪಂಚ, ಅದರ ವಿಕಾರಗಳು, ಅದರ ಬದಲಾವಣೆಗಳು—ಇವುಗಳು ಒಂದು ಬಗೆಯಾಗಿರುತ್ತವೆ. ಒಳಗೆ ಕಾಮಕ್ರೋಧಗಳು ದ್ವೇಷಾಸೂಯಗಳೇ ಮೊದಲಾದ ಅಶಾಂತಿಗೂ ಪ್ರವೃತ್ತಿಗೂ ಕಾರಣಗಳಾಗಿರುವವುಗಳು ಇನ್ನೊಂದು ಬಗೆಯಾಗಿರುತ್ತವೆ. ಈ ಅಭ್ಯಾಸದಲ್ಲಿ ಜಡಪ್ರಪಂಚದ ವಿಸ್ತಾರವನ್ನೂ ಕಾಮ ಕ್ರೋಧ ಮೊದಲಾದ ಪ್ರೇರಣಾಶಕ್ತಿಗಳನ್ನು ಅರಿಯಲು ಸಮರ್ಥನಾಗುತ್ತಾನೆ. ತಾನು ಇವುಗಳಲ್ಲಿಯೇ ಸೇರಿಕೊಂಡಿದ್ದರೂ ತಾನು ಇವುಗಳಿಂದ ಬೇರ್ಪಟ್ಟವನೆಂಬ ಶುದ್ಧವಾದ ತಿಳಿವಳಿಕೆಯಿಂದ ‘ ತಾನು ’ ಎಂಬ ಜೀವತತ್ತ್ವವು ಬೇರೆ ಆಗಿದೆಯೆಂಬ ಅನುಭವ ವುಂಟಾಗುತ್ತದೆ. ಈ ಭೇದಗಳು ಅಸಂಕೀರ್ಣವಾಗಿ ತಿಳಿಯಾಗಿ ಅನುಭವಕ್ಕೆ ಬಂದಾಗ ಈ ಜೀವಾತ್ಮನನ್ನು ಶಾಸ್ತ್ರಕಾರರು ನಿರಾಮಯ, ಚಿದಾನಂದ ಜ್ಞಾನರೂಪ ಮೊದಲಾದ ಪದಗಳಿಂದ ಸೂಚಿಸಿರುತ್ತಾರೆ. ಈ ಸ್ಥಿತಿಯಲ್ಲಿ ಆಶ್ರಯ ಯಾರು ಎಂದರೆ ಸರ್ವವ್ಯಾಪಿಯಾಗಿರುವ ಆ ಪರಮೇಶ್ವರನೇ ಎಂದು ಮನವರಿಕೆಯಾಗಬೇಕು. ಆಗ ಜಡಪ್ರಪಂಚವು ಇವನನ್ನು ಬಂಧಿಸಲಾರದು. ಕಾಮಕ್ರೋಧಾದಿ ಜಾಡ್ಯಗಳು ಇವನನ್ನು ಅಂಟಲಾರವು. ಎಲ್ಲಾ ತಿಳಿದಿದ್ದರೂ ಶಾಂತನಾಗಿರುವನು. ಎಲ್ಲವನ್ನೂ ಕೇಳುತ್ತಲಿದ್ದರೂ ನೋಡುತ್ತಲಿದ್ದರೂ ತತ್ತ್ವದಲ್ಲೇ ದೃಷ್ಟಿಯುಳ್ಳವನಾಗಿರುತ್ತಾನೆ. ಸೂರ್ಯನ ಕಿರಣಗಳು ಎಲ್ಲಾ ಪದಾರ್ಥಗಳ ಮೇಲೂ ಪಸರಿಸುವಂತೆ ಈತನ ಅನುಭವ ಎಲ್ಲಾ ವಿಷಯಗಳಲ್ಲಿಯೂ ಒಂದೇ ರೀತಿಯಾಗಿರುತ್ತದೆ. ಬಾಹ್ಯಜೀವನ ಇತರರಂತೆ ಇದ್ದರೂ ಈತನ ಕರ್ಮಾಚರಣೆ ಮನೋಭಾವನೆಗಳು ತೀರಾ ಭಿನ್ನವಾಗಿರುತ್ತವೆ. ಆಹಾರ ವ್ಯವಹಾರಗಳು ಬದುಕಿರುವ

ವರೆಗೂ ಎಲ್ಲರಿಗೂ ಸಮಾನವಾಗಿರುವಂತೆಯೇ ಇರುತ್ತವೆ. ಇಂತಹ ಸ್ವರೂಪಾನುಸಂಧಾನವನ್ನು ಮಾಡುವುದಕ್ಕೆ ಈ ಸಾಧಕನು ಸಮರ್ಥನಾದಾಗ ಅಂತರ್ಯಾಮಿಯಾಗಿರುವ ಪರಮಾತ್ಮನ ಅನುಭವ ಉಂಟಾಗುತ್ತದೆ. ಹಾಲಿನಲ್ಲಿ ಬೆಣ್ಣೆ ಎಳ್ಳಿನಲ್ಲಿ ಎಣ್ಣೆ ಇರುವಂತೆ ಆ ಪರತತ್ತ್ವವು ಸರ್ವವ್ಯಾಪಿಯಾಗಿರುವುದೆಂಬುದನ್ನು ಇಲ್ಲಿ ಸಾಧಕನು ಸಾಧಿಸುತ್ತಾನೆ.

(೫) ಅನುಭವೋದಯ

ಶಾಸ್ತ್ರಾಭ್ಯಾಸದಿಂದ ತಿಳಿವಳಿಕೆಯುಂಟಾಗಿದ್ದರೂ ಅನುಭವಕ್ಕೆ ಅದು ಒಡನೆಯೇ ಬರುವುದಿಲ್ಲ. ಅದು ಅನುಭವ ಭೂಮಿಯನ್ನು ಮುಟ್ಟದಿದ್ದರೆ ವಾಙ್ಮಾತ್ರದಲ್ಲಿ ಪರರಿಗೆ ಉಪದೇಶಮಾಡುವುದರಲ್ಲಿ ಕೊನೆಗೊಳ್ಳುತ್ತದೆ. ಮನೆಯಲ್ಲಿರಲಿ ಕಾಡಿನಲ್ಲಿರಲಿ, ಬೇರೆ ಯಾವ ಆಶ್ರಮದಲ್ಲಿರಲಿ ಎಡಬಿಡದ ಸ್ವರೂಪಾನುಸಂಧಾನವಿಲ್ಲದೆ ನಮ್ಮ ಚಾಂಚಲ್ಯಕ್ಕೂ ಮತ್ತು ಸಂಕೋಚಕ್ಕೂ ಕಾರಣವಾಗಿರುವ ಅಂತಃಶಕ್ತಿಗಳು ಲಯವನ್ನು ಹೊಂದುವುದಿಲ್ಲ. ಈ ಸ್ಥಿತಿಯು ಸ್ವಚ್ಛವಾಗಿ ಅನುಭವಕ್ಕೆ ಬಂದಿದ್ದರೆ ಯಾರು ಬಯ್ದರೂ ಕೋಪ ಉಂಟಾಗುವುದಿಲ್ಲ. ಯಾರು ತನ್ನನ್ನು ಹೀಯಾಳಿಸಿದರೂ ತನಗೆ ಅಶಾಂತಿಯುಂಟಾಗುವುದಿಲ್ಲ. ತೆಗಳಲಿ, ಹೊಗಳಲ್ಲಿ, ಪೂಜೆಮಾಡಲಿ ವಿಶುದ್ಧಜ್ಞಾನವನ್ನು ಪಡೆದಿರುವ ವ್ಯಕ್ತಿಯು ಹಿಗ್ಗುವುದೂ ಇಲ್ಲ ಕುಗ್ಗುವುದೂ ಇಲ್ಲ. ಇಂತಹ ಸಾಧಕನು ತನ್ನ ಮನಸ್ಸಿನಿಂದ ನೋಡುವುದೆಲ್ಲಾ ಪರತತ್ತ್ವವೇ ಆಗಿರುತ್ತದೆ. ಜ್ಞಾನೇಂದ್ರಿಯಗಳಿಂದ ತಿಳಿಯುವ ಪ್ರಪಂಚವನ್ನು ಪರಮಾತ್ಮನ ವಿಲಾಸವೆಂದು ಅರಿಯುವನು. ಈ ಕಾರಣಗಳಿಂದಲೇ ನಮ್ಮಲ್ಲಿ ಶಾಸ್ತ್ರಸಂಪ್ರದಾಯಗಳ ಪ್ರವಚನಗಳಿಗಿಂತ ಅನುಭವಿಗಳ ಉಪದೇಶ ವಚನಗಳನ್ನು ಕೇಳುವ ರೂಢಿ ಬಂದಿದೆ. ಆದರೆ ಈ ಅನುಭವ ಕೆಲವರಿಗಾದರೂ ಸಾಧ್ಯವೇ ಎಂಬುದು ಮಾತುಗಳಿಂದಲೇ ಪರಿಹಾರವಾಗುವುದಿಲ್ಲವೆಂಬುದನ್ನು ತಿಳಿದು ಸಾಧಕನು ಸಾಧನಮಾರ್ಗವನ್ನನುಸರಿಸುತ್ತಾನೆ.

(೬) ಸಿದ್ಧಾವಸ್ಥೆ

ಸಾಮಾನ್ಯಸ್ಥಿತಿಯನ್ನು ಮೀರಿ ತತ್ತ್ವವಿಚಾರವನ್ನು ಮಾಡಿ ಶಾಸ್ತ್ರಜ್ಞಾನವನ್ನು ಪಡೆದು ಮನಸ್ಸಿನಿಂದ ನಿಶ್ಚಯಿಸಿದ ಅರ್ಥವನ್ನು ಅನುಭವರೂಢವಾಗಿ ಮಾಡಿಕೊಂಡು ತನ್ನ ಯೋಗ್ಯತೆಗನುಸಾರವಾದ ಸಾಧನವನ್ನನುಸರಿಸಿ ಅಭ್ಯಾಸದ ಪರಿಪಾಕದಿಂದ ಈ ಶರೀರವಿರುವಾಗಲೇ ಅಲೌಕಿಕ ಅನುಭವಗಳನ್ನು ಪಡೆಯುತ್ತಾ ಸಮಾಧಿಸ್ಥಿತಿಯಲ್ಲಿ ಬ್ರಹ್ಮಾನುಭವವನ್ನು ಪಡೆಯುವುದೇ ಸಿದ್ಧಿ. ಹೀಗೆ ಸ್ವರೂಪಜ್ಞಾನ ಉಂಟಾದ ನಂತರ ನಾನು ನೀನು ಎಂಬ ಭೇದಗಳು ಅಳಿಯುತ್ತವೆ. ಮನೋವೃತ್ತಿಗಳು ದೂರವಾಗುವುವು. ಯಾವ ಮನಸ್ಸು, ಇಂದ್ರಿಯ, ಶರೀರ, ಪ್ರಾಣ ಬುದ್ಧಿಗಳ ಪ್ರೇರಣೆಯಂತೆ ನಡೆಯುತ್ತಲಿದ್ದನೋ ಆ ಇಂದ್ರಿಯಗಳೆಲ್ಲ ಇವನು ಹೇಳಿದಹಾಗೆ ನಡೆಯುತ್ತವೆ. ಸಿದ್ಧತೆ ಸಕ್ರಮವಾಗಿ ವಿಶದವಾಗಿ ಏರ್ಪಟ್ಟಲ್ಲಿ ಸಮಾಧಿಲಾಭವೇರ್ಪಡುವುದು. ಈ ಸಮಾಧಿಲಾಭವೇ

ಬೋಧಮಯನಾದ ಚಿದ್ರೂಪಿಯಾದ ಶಿವನ ಸಾಕ್ಷಾತ್ಕಾರ. ಸಾಕ್ಷಾತ್ಕಾರವನ್ನು ಹೊಂದಿದವನು ಪರತತ್ತ್ವಾನುಸಂಧಾನದಲ್ಲಿ ಮಗ್ನನಾಗಿ ಆನಂದಾನುಭವದಲ್ಲಿರುತ್ತಾನೆ.

ಮೊದಲನೆಯ ಹಂತದಲ್ಲಿ ಜಿಜ್ಞಾಸೆ ಎರಡನೆ ಹಂತದಲ್ಲಿ ಶಾಸ್ತ್ರಜ್ಞಾನ ಮತ್ತು ಸ್ವಾತ್ಮಾವಿಮರ್ಶೆ ಮೂರನೆಯ ಹಂತದಲ್ಲಿ ಅಭ್ಯಾಸ ಮತ್ತು ಅಂತರ್ಯಶಕ್ತಿಗಳ ಅನುಸಂಧಾನ, ನಾಲ್ಕನೆಯದರಲ್ಲಿ ಅನುಭವೋದಯ, ಐದನೆಯದರಲ್ಲಿ ಸಿದ್ಧಾವಸ್ಥೆ–ಹೀಗೆ ನಮ್ಮ ತಿಳಿವಳಿಕೆಗೆ ಐದು ವಿಭಾಗಗಳನ್ನು ಮಾಡಿಕೊಂಡರೆ ಅನುಭವಿಗಳ ದೃಷ್ಟಾಂತ ಗಳು ಸ್ವಲ್ಪ ತಿಳಿಯಾಗಿ ತಿಳಿಯುತ್ತವೆ. ಅವರ ಉಪದೇಶ ವಚನಗಳು ಕೆಲವು ಕಡೆ ನೀತಿ ಯನ್ನು ಬೋಧಿಸುತ್ತವೆ. ಇನ್ನೊಂದು ಪ್ರಸಂಗದಲ್ಲಿ ಸಾಮಾಜಿಕ ಸಮಸ್ಯೆಗಳನ್ನೇ ಸಾರುತ್ತವೆ. ಮತ್ತೊಂಡೆಯಲ್ಲಿ ಶಾಸ್ತ್ರದ ಪರಿಭಾಷೆಯನ್ನೇ ವರ್ಣಿಸುತ್ತವೆ. ಒಂದೊಂದು ಕಡೆ ನಾನು ಆ ಪರತತ್ತ್ವವನ್ನು ಕಂಡೆ ಎಂಬ ಉದ್ಗಾರಗಳಿರುತ್ತವೆ. ಹೀಗೆ ಬಗೆಬಗೆ ಯಾಗಿರುವ ಆ ಅನುಭವಿಗಳ ಜೀವನ ರಂಗದ ಪೂರ್ಣಚಿತ್ರವನ್ನು ವಾಚಕರು ವಿಶದ ವಾಗಿ ಅನುಸಂಧಾನಮಾಡಬೇಕಾದರೆ ಈ ಮೇಲೆ ಹೇಳಿದ ಐದು ಮೆಟ್ಟಲುಗಳನ್ನಿಟ್ಟು ಕೊಂಡರೆ ಆ ಅಗಾಧವಾದ ಭಾವಗಳು ಸ್ವಲ್ಪ ಹಿತವಾಗಿ ತಿಳಿಯುತ್ತವೆಂದು ಆಶಿಸುತ್ತೇವೆ.

ಶಿವಸ್ತೋತ್ರಾವಳಿ

ಕಾಶ್ಮೀರದ ಉತ್ಪಲದೇವಾಚಾರ್ಯರ "ಶಿವಸ್ತೋತ್ರಾವಳಿ"ಯು ಶಿವಾದ್ವೈತ ತತ್ತ್ವವನ್ನು ಪ್ರತಿಪಾದಿಸುವುದಾಗಿಯೂ ಸಾಹಿತ್ಯಾಲಂಕಾರಗಳಿಂದ ಕೂಡಿದ್ದಾಗಿಯೂ ಚಿತ್ತಾಕರ್ಷಣೆ ಮಾಡಿ ಆನಂದವನ್ನುಂಟುಮಾಡುವುದಾಗಿಯೂ ಮೇಲಾಗಿ ಆಧ್ಯಾತ್ಮ ಸ್ಫೂರ್ತಿದಾಯಕವಾಗಿಯೂ ಇರುವುದರಿಂದ ಕೆಲವು ಶಿವಸ್ತೋತ್ರಗಳನ್ನು ಮಾತ್ರ ಕನ್ನಡದ ಅನುವಾದದೊಂದಿಗೆ ಇಲ್ಲಿ ಕೊಟ್ಟಿದೆ.

೧. ಸಾಕ್ಷಾತ್ ಭವನ್ಮಯೇ ನಾಥ ಸರ್ವಸ್ಮಿನ್ ಭುವನಾಂತರೆ ।
ಕಿಂ ನಭಕ್ತಿಮತಾಂ ಕ್ಷೇತ್ರಂ ಮಂತ್ರಃ ನ ಕ್ವೈಷಾಂ ನ ಸಿದ್ಧ್ಯತಿ ॥

ಪರಮಾತ್ಮನೇ, ಈ ವಿಶ್ವವೆಲ್ಲಾ ನಿನ್ನ ರೂಪವೆ ಆಗಿರುವಾಗ ಯಾವ ಸ್ಥಳವು ನಿನ್ನ ಭಕ್ತರಿಗೆ ದೇವಾಲಯವಾಗುವುದಿಲ್ಲ? ಯಾವ ಸ್ಥಳದಲ್ಲಿ ನಿನ್ನ ಭಕ್ತರು ಉಚ್ಚರಿಸಿದ ಮಂತ್ರವು ಫಲಿಸುವುದಿಲ್ಲ? ಸಿದ್ಧಿಸುವುದಿಲ್ಲ?

೨. ಮಂಗಳಾಯ ಪವಿತ್ರಾಯ ನಿಧಯೆ ಭೂಷಣಾತ್ಮನೆ ।
ಪ್ರಿಯಾಯ ಪರಮಾರ್ಥಾಯ ಸರ್ವೋತ್ಕೃಷ್ಟಾಯತೆ ನಮಃ ॥

ಮಂಗಳಮೂರ್ತಿಯಾದ ಪವಿತ್ರನಾದ ಭಕ್ತನಿಗೆ ನಿಧಿಯಾದ ಸುಂದರನಾದ ಪ್ರಿಯವಾದ ಸರ್ವಸ್ವರೂಪಿಯಾದ ಶಂಭುವಿಗೆ ನಮಸ್ಕಾರವು.

೩. ತ್ವಯಿ ರಾಗರಸೆ ನಾಥ ನಮಗ್ನಂ ಹೃದಯಂ ಪ್ರಭೋ ।
ಏಷಾಂ ಅಹೃದಯಾ ಏವತೇಽವ ಜ್ಞಾಸ್ಪದಮೀದೃಶಾಃ ॥

ಓ ಪರಮಾತ್ಮನೆ, ಪ್ರೇಮರಸವೇ ನೀನಾಗಿರುವಾಗ ಯಾರ ಹೃದಯವು ನಿನ್ನ ಆ ಪ್ರೇಮರಸದಲ್ಲಿ ಮುಳುಗುವುದಿಲ್ಲವೋ ಅಂತಹವರು ಹೃದಯವಿಲ್ಲದವರು, ಅವಜ್ಞರು.

೪. ನಾಥ ವಿದ್ಯುದಿವ ಭಾತಿವಿಭಾತೆ ।
ಯಾ ಕದಾಚನ ಮಮಾಮೃತ ದಿಗ್ಧಾ ।
ಸಾಯದಿ ಸ್ಥಿರತರೈವ ಭವೇತ್ತತ್
ಪೂಜಿತೋಽಸಿ ವಿಧಿವತ್ ಕಿಮುತಾನ್ಯತ್ ॥

ಓ ಪರಮಾತ್ಮನೇ, ನಿನ್ನ ಪ್ರಕಾಶವು ಮಿಂಚಿನಂತೆ ಕದಾಚಿತ್ ಹೊಳೆಯುವುದರ ಮೂಲಕ ನನ್ನನ್ನು ಅಮೃತದಲ್ಲಿ ತೋಯಿಸಿ ಅಲ್ಲಿ ಸ್ಥಿರವಾಗಿರಿಸುವುದಾದರೆ ನಾನು ನಿನ್ನನ್ನು ವಿಧ್ಯುಕ್ತವಾಗಿ ಪೂಜಿಸಿದ್ದೇನೆಂದು ಭಾವಿಸುತ್ತೇನೆ.

೫. ಅಂತರ್ಭಕ್ತಿ ಚಮತ್ಕಾರ ಚರ್ವಣಾ ಮೀಳಿತೇಕ್ಷಣಃ ।
ನಮೋ ಮಹ್ಯಂ ಶಿವಾಯೇತಿ ಪೂಜಯನ್ ಸ್ವಾಂತೃಣಾನ್ಯಪಿ ॥

ಇದು ವಿಶ್ವಾಕಾರಾನುಸಂಧಾನ-ಅಂತರ್ಭಕ್ತಿಯ ಚಮತ್ಕಾರ. ಎಲ್ಲವೂ ಶಿವ ಸ್ವರೂಪವೆಂಬ ಭಾವನೆಯಿಂದ ಹುಲ್ಲನ್ನಾದರೂ ಪೂಜಿಸುತ್ತೇನೆ. ತಾನೇ ಶಿವನೆಂಬ ಭಾವನೆಯಿಂದಲೂ ವಿಶ್ವ ಶಿವಮಯವೆಂಬ ಜ್ಞಾನದಿಂದಲೂ ಪೂಜಿಸುತ್ತೇನೆ.

೬. ಕ್ಷಣಮಾತ್ರಮಪೀಶಾನ ವಿಯುಕ್ತಸ್ಯತ್ವಯಾ ಮಮ ।
ನಿಬಿಡಂ ತಪ್ತಮಾನಸ್ಯ ಸದಾಭಯಾದೃಶಃ ಪದಮ್ ॥

ಪರಮಾತ್ಮನೇ, ಕ್ಷಣಮಾತ್ರವಾದರೂ ನಿನ್ನನ್ನು ಅಗಲುವುದರಿಂದ ಆಗುವ ನನ್ನ ಮನಸ್ಸಿನ ತಾಪವನ್ನು ಸಹಿಸಲಾರೆನು. ಆದುದರಿಂದ ನೀನು ಯಾವಾಗಲೂ ನನ್ನ ದೃಷ್ಟಿಗೆ ಗೋಚರಿಸುತ್ತಲಿರು. ನಿನ್ನ ಸ್ಮರಣೆಯು ಯಾವಾಗಲೂ ಇರಲಿ.

೭. ಸಹಸ್ರೈವಾ ಸಾದ್ಯಕದಾಗಾಢಮುಪಪ್ಲುಭ್ಯಹರ್ಷವಿವಶೋಽಹಮ್ ।
ತ್ವಚ್ಚರಣವರ ನಿಧಾನಂ ಸರ್ವಸ್ಯ ಪ್ರಕಟಯಿಷ್ಯಾಮಿ ॥

ಪ್ರಭುವೇ ! ನಾನು ಯಾವಾಗಲೂ ಆದಷ್ಟು ಜಾಗ್ರತೆಯಾಗಿ ನಿನ್ನನ್ನು ಹೊಂದಿ ಬಿಗಿಯಾಗಿ ಅಪ್ಪಿಕೊಂಡು ಆನಂದದಿಂದ ಮೈಮರೆತೇನು. ನಿನ್ನ ಚರಣಗಳ ಮಹಿಮೆ ಯನ್ನು ಯಾವಾಗ ಎಲ್ಲರಿಗೂ ಪ್ರಕಟಮಾಡಿಯೇನು.

೮. ನಾಥ ಕದಾಸತಥಾ ವಿಧ ಆಕ್ರಂದೋಮಮ ಸಮುಚ್ಚತಿ ದ್ವಾಚಿ ।
ಯತ್ಸಮಮಂತರ ಮೇವ ಸ್ಫುರತಿ ಪುರಸ್ತಾವಕೀ ಮೂರ್ತಿಃ ॥

ಪ್ರಭುವೇ, ಯಾವಾಗ ನನ್ನ ವಾಕ್ಕನ್ನು ಆರೀತಿಯಾಗಿ ಉಚ್ಚರಿಸುವೆನು ! ಯಾವ ನನ್ನ ಉಚ್ಚಾರ ಸ್ಮರಣೆಯನ್ನು ಕೇಳಿದ ಒಡನೆಯೇ ನಿನ್ನ ಆಕಾರವು ನನ್ನ ಮುಂದೆ ಸ್ಫುರಿಸೀತೊ !

ಯಾವಾಗ ನಾನು ನಿನ್ನನ್ನು ಕರೆದರೆ ಆಗ ನಿನ್ನ ಆಕಾರವು ನನ್ನ ಮುಂದೆ ಪ್ರತ್ಯಕ್ಷವಾದೀತೋ ಆ ರೀತಿಯಾದ ಉದ್ಗಾರವು ನನ್ನ ವಾಕ್ಕಿನಿಂದ ಹೊರಟೀತೋ.

೯. ಸಂಗ್ರಹೇಣ ಸುಖದುಃಖ ಲಕ್ಷಣಂ
ಮಾಂ ಪ್ರತಿಸ್ಥಿತಮಿದಂ ಶೃಣು ಪ್ರಭೋ ।
ಸೌಖ್ಯಮೇವ ಭವತಾ ಸಮಾಗಮಃ
ಸ್ವಾಮಿನಾ ವಿರಹ ಏವ ದುಃಖಿತಾ ॥

ಪ್ರಭುವೆ, ಕೇಳು–ಸಂಗ್ರಹವಾಗಿ ಹೇಳುವುದಾದರೆ ಇದೇ ಸುಖದುಃಖದ ಲಕ್ಷಣ. ನಿನ್ನೊಂದಿಗಿರತಕ್ಕದ್ದೇ ಸುಖ, ನಿನ್ನ ಅಗಲುವಿಕೆಯೇ ದುಃಖ.

೧೦. ತಾವಕೆ ವಪುಷಿ ವಿಶ್ವನಿರ್ಭರೆ
ಚಿತ್ಸುಧಾ ರಸಮಯೇ ನಿರತ್ಯಯೆ ।
ತಿಷ್ಠತಃ ಸತತಂ ಅರ್ಚತಃ ಪ್ರಭುಂ
ಜೀವಿತಂ ಮೃತಮಥಾನ್ಯದಸ್ತು ಮೆ ॥

ವಿಶ್ವರೂಪಿಯಾದ ನಿನ್ನ ಶರೀರವು ಚಿದಾನಂದ ರಸಮಯವಾಗಿ ಅನಂತನಾಗಿರುವ ಪ್ರಭುವನ್ನು ಯಾವಾಗಲೂ ಪೂಜಿಸುತ್ತಾ ಇರಲಾಗಿ ನನಗೆ ಜೀವಿತವಾದರೂ ಇರಲಿ, ಮರಣವಾದರೂ ಆಗಲಿ, ಇನ್ನೇನಾದರೂ ಆಗಲಿ ತೊಂದರೆ ಇಲ್ಲ. ನಿನ್ನ ಪೂಜೆಯೊಂದಿದ್ದರೆ ಸಾಕು.

೧೧. ಅಶೇಷ ಪೂಜಾಸತ್ಕೋಶೆ ತ್ವತ್ಪೂಜಾಕರ್ಮಣಿ ಪ್ರಭೋ ।
ಅಹೋಕರಣ ವೃಂದಸ್ಯ ಕಾಪಿ ಲಕ್ಷ್ಮೀರ್ವಿಜೃಂಭತೆ ॥

ಎಲ್ಲಾ ಪೂಜೆಗಳಿಗೂ ಆಶ್ರಯವಾಗಿರುವ ನಿನ್ನ ಪೂಜಾಕ್ರಿಯೆಗಳಲ್ಲಿ—ಪ್ರಭುವೆ-ಅನೇಕ ಉಪಕರಣಗಳ ಸೌಂದರ್ಯವು ಬೆಳಗುತ್ತದೆ-ಇದು ಆಶ್ಚರ್ಯ.

[ಲಕ್ಷ್ಮೀ–ಸೌಂದರ್ಯ]

ಎಲ್ಲವೂ ನಿನ್ನಲ್ಲಿಯೇ ಇದೆ. ನಿನ್ನಲ್ಲಿರುವುದನ್ನು ನಿನಗೆ ಕೊಡುವುದರಲ್ಲಿ ಆಶ್ಚರ್ಯವೇನು.

೧೨. ಭಕ್ತಿಲಕ್ಷ್ಮೀ ಸಮೃದ್ಧಾನಾಂ ಕಿಮನ್ಯಮುಪಯಾಚಿತಮ್ ।
ಏತಯಾ ವಾ ದರಿದ್ರಾಣಾಂ ಕಿಮನ್ಯದುಪಯಾಚಿತಂ ॥

ಭಕ್ತಿಯೆಂಬ ಐಶ್ವರ್ಯದಿಂದ ಸಮೃದ್ಧರಾದವರಿಗೆ ಬೇರೆ ಬೇಡತಕ್ಕದ್ದೇನಿರುತ್ತದೆ. ಭಕ್ತಿ ದಾರಿದ್ರ್ಯವುಳ್ಳವರು ಯಾಚಿಸತಕ್ಕದ್ದೇನಿದೆ.

೧೩. ದುಃಖಾನ್ಯಪಿ ಸುಖಾಯಂತೆ ವಿಷಮಪ್ಯಮೃತಾಯತೆ ।
ಮೋಕ್ಷಾಯತೇ ಚ ಸಂಸಾರೋ ಯತ್ರಮಾರ್ಗಸ್ಸಶಾಂಕರಃ ॥

ಶಾಂಕರಮಾರ್ಗವನ್ನನುಸರಿಸುವವರಿಗೆ ದುಃಖವೆಲ್ಲಾ ಸುಖವಾಗಿ ಪರಿಣಮಿಸುತ್ತದೆ. ವಿಷವೆಲ್ಲಾ ಅಮೃತವಾಗಿ ಪರಿಣಮಿಸುತ್ತದೆ. ಸಂಸಾರವೇ ಮೋಕ್ಷರೂಪವಾಗಿ ಪರಿಣಮಿಸುತ್ತದೆ.

೧೪. ತಟೇಶ್ವೇವ ಪರಿಭ್ರಾಂತ್ಯೈಃ ಲಬ್ಧಾಸ್ತಾಸ್ತಾ ವಿಭೂತಯಃ ।
ಯಸ್ಯತಸ್ಮೈ ನಮಸ್ತುಭ್ಯಂ ಅಗಾಧರಸಸಿಂಧುವೆ ॥

೧೫. ಮಾಯಾಮಯ ಜಗತ್ಸಾಂದ್ರ ಪಂಕಮಧ್ಯಾದಿ ವಾಸಿನೆ ।
ಅಲೇಪಾಯ ನಮಃ ಶಂಭು ಶತಪತ್ರಾಯ ಶೋಭಿನೆ ॥

ಯಾವ ದಡಗಳ ಮೇಲೆ ಸಂಚಾರಮಾಡುವುದರಿಂದ ಅಂದರೆ ಆ ನಿನ್ನ ರಸ ಸಮುದ್ರ ತೀರದಲ್ಲಿ ತಿರುಗಾಡುತ್ತಿರುವುದರಿಂದಲೇ ಆಯಾಯ ಸಿದ್ಧಿಗಳು ಲಭಿಸಿದವೋ ಅಂತಹ ಅಗಾಧವಾದ ಅನಂತವಾದ ರಸಸಮುದ್ರ ರೂಪಿಯಾದ ನಿನಗೆ ನಮಸ್ಕಾರ.

ಮಾಯಾಮಯವಾದ ಜಗತ್ತೆಂಬ ಕೆಸರಿನಲ್ಲಿ ವಾಸಿಸುತ್ತಾ ನಿರ್ಲಿಪ್ತವಾಗಿರುವ ಪದ್ಮದಂತೆ ಪ್ರಕಾಶಮಾನವಾದ ಶಿವನಿಗೆ ನಮಸ್ಕಾರ. ಕೆಸರಿನ ಮಧ್ಯದಲ್ಲಿ ವಾಸ ವಾಗಿದ್ದರೂ ಕೆಸರಿನ ಲೇಪವಿಲ್ಲದೆ ಶೋಭಿಸುವ ಶಿವನಿಗೆ ನಮಸ್ಕಾರ.

೧೬. ಯಥೋಪಿ ಸರ್ವಶೋಭನಾಂ ಪ್ರಸವಾವನಿರೀಶಯತ್ ।
ತ್ವಯಿಲಗ್ನಮನರ್ಘ್ಯಂ ಸ್ಯಾದ್ ರತ್ನಂ ವಾಯದಿವಾತೃಣಮ್ ॥

ಎಲ್ಲಾ ಶುಭಶೋಭನೆಗಳಿಗೂ ನೀನೇ ಆಶ್ರಯವಾಗಿದ್ದಿ. ನಿನ್ನ ಮೇಲೆ ಏನಿಟ್ಟರೂ ರತ್ನವನ್ನಾಗಲಿ ಹುಲ್ಲನ್ನಾಗಲಿ ಅದೆಲ್ಲವೂ ಅಮೌಲ್ಯವಾದದ್ದಾಗುವುದು.

೧೭. ದುಃಖಾಗಮೋಪಿ ಭೂಯಾನ್ಮೆತ್ವದ್ಭಕ್ತಿಭರಿತಾತ್ಮನಃ ।
ತತ್ಪರಾಚೀ ವಿಭೋಮಾಭೂದಪಿ ಸೌಖ್ಯಪರಂಪರಾ ॥

ನಿನ್ನ ಭಕ್ತಿಯಲ್ಲಿ ತುಂಬಿ ತುಳುಕಾಡುವ ನನಗೆ ಏನು ದುಃಖ ಪ್ರಾಪ್ತಿವಾದರೂ ಚಿಂತೆಯಿಲ್ಲ. ಪ್ರಭುವೇ ನಿನ್ನ ಭಕ್ತಿಯನ್ನು ಬಿಟ್ಟು ಸುಖಪರಂಪರೆಗಳು ಬಂದರೂ ನನಗೆ ಬೇಡ.

೧೮. ಕದಾ ನವರಸಾರ್ದ್ರಾರ್ದ ಸಂಭೋಗಾಸ್ವಾದನೋತ್ಸುಖಂ ।
ಪ್ರವರ್ತೇತ ವಿಹಾಯನ್ಯಾನ್ ಮಮತ್ವತ್ಸ್ಪರ್ಶವೇ ನೇ ಮನಃ ॥

ಯಾವಾಗ ಮಿಕ್ಕ ಎಲ್ಲಾ ಭಾವನೆಗಳನ್ನು ಬಿಟ್ಟು ನನ್ನ ಮನಸ್ಸು ಒಂಭತ್ತು ರಸಗಳಿಂದ ಭ್ರಾಂತವಾಗಿ ನಿನ್ನನ್ನೇ ಆಸ್ವಾದಿಸಲು ಉತ್ಸುಕವಾಗಿ ಪ್ರವರ್ತಿಸುತ್ತದೆಯೋ.

ಶಿವೋದಾತಾ ಶಿವೋಭೋಕ್ತಾ ಶಿವಸ್ಸರ್ವಂ ಇದಂ ಜಗತ್ ।
ಶಿವೋಯಜತ ಯಜ್ಞಶ್ಚಯಶ್ಶಿವಃ ಸೋಹಂ ಏ ವಹಿ ॥

ಶಿವಜೀವರೆಂಬರೆರಡಿಲ್ಲ, ಪರಶಿವಮಯವೇ ಈ ಜಗವೆಲ್ಲ.

ಸ್ವತಂತ್ರಃ ಸ್ವಚ್ಛಾತ್ಮಾ ಸ್ಫುರತಿ ಸತತಂ ಚೇತಸಿ ಶಿವಃ
ಪರಾಶಕ್ತಿಶ್ಚೇಯಂ ಕರಣ ಸರಣಿ ಪ್ರಾಂತಮುದಿತಾ ।
ತದಾಭೋಗೈಕಾತ್ಮಾ ಸ್ಫುರತಿ ಚ ಸಮಸ್ತಂ ಜಗದಿದಂ
ನಜಾನೆ ಕುತ್ರಾಯಂ ಧ್ವನಿರನುಪತೇತ್ ಸಂಸೃತಿರಿತಿ ॥
(ಅಭಿನವಗುಪ್ತ)

ಸ್ವತಂತನೂ ಸ್ವಚ್ಛಾತ್ಮನೂ ನಿರ್ಮಲನೂ ಚಿನ್ಮಾತ್ರಸ್ವರೂಪಿಯೂ ಆದ ಶಿವನು ಯಾವಾಗಲೂ ಕರಣಗಳಿಂದ ಕೂಡಿದ ನನ್ನಲ್ಲಿ ಸ್ಫುರಿಸುತ್ತಲಿರುತ್ತಾನೆ. ಆ ಶಿವನ ಕ್ರಿಯಾಶಕ್ತಿಯೇ ಪರಿಣಾಮ ರೂಪದಲ್ಲಿ ನನ್ನ ಇಂದ್ರಿಯಗಳ ಮೂಲಕ ಸುಖದುಃಖಾನುಭವಗಳಿಗೆ ಕಾರಣವಾಗಿರುತ್ತದೆ. ಆ ಶಿವನೇ ಭೋಗೈಕಾತ್ಮನಾಗಿ ಈ ಜಗತ್ತಿನಲ್ಲಿ ಪ್ರಕಾಶಿಸುತ್ತಲಿದ್ದಾನೆ. ಈ ಜಗತ್ತೆಲ್ಲವೂ ಶಿವಮಯವಾಗಿರುವಾಗ ಸುಖದುಃಖಗಳಿರುವ ಈ ಕ್ಷೇತ್ರಕ್ಕೆ 'ಸಂಸೃತಿ' ಅಥವಾ 'ಬಂಧನ' ಎಂದು ಹೇಳುವುದು ಹೇಗೆ.

ತತ್ತ್ವಸ್ಥಿತಿಯನ್ನು ತಿಳಿದಿರುವವರು ಈ ವಿಶ್ವವನ್ನು ಎರಡು ಬಗೆಯಾಗಿ ಕಾಣುವರು. ನಿರ್ಮಲವಾಗಿಯೂ ಚಿನ್ಮಾತ್ರಸ್ವರೂಪಿಯಾಗಿಯೂ ಸ್ವತಂತ್ರವಾಗಿಯೂ ಇರುವ ಪರತತ್ತ್ವವು ತನ್ನ ಪರಾಶಕ್ತಿಯ ಮೂಲಕ ವಿಶ್ವದಲ್ಲೆಲ್ಲಾ ಸ್ಫುರಿಸುವುದು. ಹಾಗೆಯೇ ಶಿವನು ಚಿದ್ರೂಪಿಯಾಗಿ ಮನಸ್ಸಿನಲ್ಲಿ ಕಂಗೊಳಿಸುತ್ತಾನೆ. ಇದು ಒಂದು ಮುಖ. ಅದೇ ಶಿವನ ಕ್ರಿಯಾಶಕ್ತಿಯು ಪರಿಣಾಮರೂಪಗಳಲ್ಲಿ ಜೀವಾತ್ಮನ ಇಂದ್ರಿಯಗಳ ಮೂಲಕ ಸುಖದುಃಖಾನುಭವಗಳಿಗೆ ಕಾರಣವಾಗಿರುತ್ತದೆ. ಇದು ಇನ್ನೊಂದು ಮುಖ. ಹೀಗೆ ಎರಡು ಮುಖಗಳಲ್ಲಿಯೂ ಒಂದೇ ಪರತತ್ತ್ವದ ಅಭಿವ್ಯಕ್ತಿ ಇರಲಾಗಿ ಅಂದರೆ ಸುಖದುಃಖಗಳಿರುವ ಕ್ಷೇತ್ರಕ್ಕೆ 'ಸಂಸೃತಿ' 'ಬಂಧನ' ಎಂದು ಹೇಳುವುದು ಹೇಗೆ! ಇದು ತಿಳಿಯದ ವಿಷಯದಂತಿದೆ. ಇದೇ ಆಶ್ಚರ್ಯ.

ಪ್ರತ್ಯಭಿಜ್ಞಾ ಹೃದಯ

(ಉಪೋದ್ಘಾತ)

ಭರತಖಂಡದಲ್ಲಿ ಶೈವಸಿದ್ಧಾಂತವು ಅತಿಪ್ರಾಚೀನವಾದುದೆಂದು ಪ್ರಸಿದ್ಧವಾಗಿದೆ. ಆದರೆ ಭರತಖಂಡದ ಒಂದೊಂದು ದಿಕ್ಕಿನಲ್ಲಿ ಶೈವಸಿದ್ಧಾಂತವು ಒಂದೊಂದು ಪ್ರಕಾರವಾಗಿ ಪ್ರಚಾರದಲ್ಲಿದೆ. ಇದು ಕಾಶ್ಮೀರದಲ್ಲಿ ತ್ರಿಕಶಾಸ್ತ್ರವೆಂದೂ ಬಂಗಾಳಾದಲ್ಲಿ ಶಾಕ್ತ ಸಂಪ್ರದಾಯವೆಂದೂ ತಮಿಳುದೇಶದಲ್ಲಿ ಶೈವಸಿದ್ಧಾಂತವೆಂದೂ ಆಂಧ್ರ ಮತ್ತು ಕರ್ನಾಟಕದಲ್ಲಿ ವೀರಶೈವಮತವೆಂದೂ ನಾನಾ ರೂಪದಲ್ಲಿ ಬೆಳೆದುಬಂದಿದೆ. ಈ ಶೈವ ಪ್ರಭೇದಗಳು ಸಾಂಪ್ರದಾಯಿಕ ವಿಷಯಗಳಲ್ಲಿ ಭಿನ್ನತೆಯುಳ್ಳವುಗಳಾಗಿದ್ದರೂ ಶೈವ ಮತದ ಕೆಲವು ಮೂಲತತ್ತ್ವಗಳಲ್ಲಿ ಐಕ್ಯತೆಯುಳ್ಳವುಗಳಾಗಿವೆ. ಇವುಗಳಲ್ಲಿ ಕಾಶ್ಮೀರ ಶಿವಾದ್ವೈತಸಿದ್ಧಾಂತವು ಶೈವಮತದ ತತ್ತ್ವಗಳನ್ನು ತನ್ನದೇ ಆದ ಒಂದು ವಿಶಿಷ್ಟ ರೀತಿಯಿಂದ ಪ್ರತಿಪಾದಿಸುತ್ತದೆ. ಈ ಶಾಸ್ತ್ರವನ್ನು ಅಧ್ಯಯನ ಮಾಡಿದರೆ ಒಟ್ಟಿನಲ್ಲಿ

ಶೈವಮತದ ಸಮಷ್ಟಿ ಸ್ವರೂಪವೂ ಇಡೀ ಶೈವಮತದ ಮೂಲತತ್ತ್ವಗಳೂ ತಿಳಿಯುತ್ತ ವೆನ್ನಬಹುದು.

ಕಾಶ್ಮೀರಶಿವಾದ್ವೈತ ಸಿದ್ಧಾಂತವು ವಿದ್ವಜ್ಜನರಿಗೆ ಆದರಣೀಯವಾಗಿರುವುದಕ್ಕೆ ಕೆಲವು ಮುಖ್ಯಕಾರಣಗಳಿವೆ. ಇದು ಪ್ರತ್ಯಭಿಜ್ಞಾದರ್ಶನವೆಂದು ಪ್ರಸಿದ್ಧವಾಗಿ 'ಅಖ್ಯಾತಿ' ವಾದ (ಭೇದಾಗ್ರಹ)ವನ್ನು ಅಂಗೀಕರಿಸಿರುತ್ತದೆ. ಈ ಸಿದ್ಧಾಂತದಲ್ಲಿ ಅಭೇದವಾದ, ಭೇದಾಭೇದವಾದ, ಭೇದವಾದ ಈ ಮೂರು ಬಗೆಯ ತತ್ತ್ವಶಾಸ್ತ್ರಜ್ಞರ ಸಿದ್ಧಾಂತಕ್ರಮಗಳು ಒಂದಕ್ಕೊಂದಕ್ಕೆ ವಿರೋಧವಿಲ್ಲದೆ ಸಮನ್ವಯಗೊಳಿಸಲ್ಪಟ್ಟಿವೆ. ಇದರಲ್ಲಿ ವೈದಿಕ ಸಂಪ್ರದಾಯದವರ ವಿಚಾರಧೋರಣೆಯನ್ನು ಕಾಣಬಹುದು. ಇದು ಶೈವ ಮತ್ತು ಶಾಕ್ತಸಂಪ್ರದಾಯಗಳಿಗಿರುವ ವ್ಯತ್ಯಾಸವನ್ನು ಪರಿಹರಿಸಿ ಶಕ್ತಿಯು ಶಿವಾಭಿನ್ನವೆಂದೇ ಸ್ಥಾಪಿಸಿರುತ್ತದೆ. ಇದರಿಂದ ಪರಾಪಶ್ಯಂತಿ ಮಧ್ಯಮಾ ವೈಖರಿ ರೂಪವಾಗಿ ನಾಲ್ಕು ಬಗೆಯಾಗಿರುವ ಶಕ್ತಿಯ ಪ್ರಕಾರಗಳನ್ನು ಉಪಾಸನಾಮುಖದಿಂದ ಆರಾಧಿಸುವ ಕ್ರಮದಿಂದ ಶಬ್ದಬ್ರಹ್ಮವಾದಿಗಳ ಸರಣಿಯನ್ನು ಇದು ಸೇರಿಸಿಕೊಂಡಿರುತ್ತದೆ. ಉಪನಿಷತ್ತುಗಳ ವಿದ್ಯಾಸಂಪ್ರದಾಯಗಳನ್ನು ಈ ಸಿದ್ಧಾಂತವು ತನ್ನದಾಗಿ ಮಾಡಿಕೊಂಡಿರುತ್ತದೆ. ಸಾಧನಾಕ್ರಮದಲ್ಲಿ ಪ್ರಾಣಾಯಾಮಾದಿ ವಿಷಯಗಳನ್ನು ತುಂಬಾ ಚಮತ್ಕಾರವಾಗಿ ಸೇರಿಸಿಕೊಂಡಿರುವುದರಿಂದ ಯೋಗಸಂಪ್ರದಾಯ ಕ್ರಮಗಳು ಇದರಲ್ಲಿ ಅಡಕವಾಗಿವೆ. ಈ ಸಿದ್ಧಾಂತದ ೩೬ ತತ್ತ್ವಗಳ ಗಣನೆಯಲ್ಲಿ ಸಾಂಖ್ಯರ ಇಪ್ಪತ್ತೈದು ತತ್ತ್ವಗಳು ಸೇರಿಹೋಗಿವೆ. ಶೈವಾಗಮಗಳಿಂದ ಈ ದರ್ಶನವು ರೂಪುಗೊಂಡಿದೆ. ಈ ರೀತಿಯಾಗಿರುವ ಶಿವಾದ್ವೈತ ದರ್ಶನವು ದಾರ್ಶನಿಕವಾಗಿಯೂ ವೈದಿಕ ಮತ್ತು ಶಾಸ್ತ್ರೀಯ ಪದ್ಧತಿಗಳಿಂದಲೂ ಪರಿಪೂರ್ಣವಾಗಿರುವುದರಿಂದ ಆದರಣೀಯವಾಗಿ ಸನ್ಮಾರ್ಗದರ್ಶಕವಾಗಿರುತ್ತದೆ. ಜಿಜ್ಞಾಸುಗಳು ತಾತ್ತ್ವಿಕವಾಗಿ ಅಭ್ಯಾಸಮಾಡುವುದಾದರೆ ಈ ಶಿವಾದ್ವೈತ ದರ್ಶನವು ನಿಜವಾಗಿಯೂ ಸ್ಫೂರ್ತಿಯನ್ನುಂಟುಮಾಡುವುದಾಗಿದೆ.

ಶಿವಾದ್ವೈತ ಗ್ರಂಥಭಂಡಾರದಲ್ಲಿ ಕ್ಷೇಮರಾಜ ವಿರಚಿತ 'ಪ್ರತ್ಯಭಿಜ್ಞಾ ಹೃದಯ' ವೆಂಬ ಗ್ರಂಥ ಕಾಶ್ಮೀರ ಶೈವದ ಮುಖ್ಯಾಂಶವಾದ ಪ್ರತ್ಯಭಿಜ್ಞಾ ಶಾಸ್ತ್ರವನ್ನು ಸಂಕ್ಷಿಪ್ತವಾಗಿಯೂ ಹೃದಯಂಗಮವಾಗಿಯೂ ತಿಳಿಯಪಡಿಸುವುದಾಗಿದೆ. ಈ ಗ್ರಂಥವು ತಮಿಳು ತೆಲುಗು, ಜರ್ಮನಿ, ಇಂಗ್ಲಿಷ್ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿದೆ. ಈ ಕಾಶ್ಮೀರ ಶೈವಸಿದ್ಧಾಂತದ ತತ್ತ್ವಗಳ ಸ್ವರೂಪವನ್ನು ವಿವರಿಸುವ ಪ್ರತ್ಯಭಿಜ್ಞಾ ಹೃದಯದ ಇಪ್ಪತ್ತು ಸೂತ್ರಗಳು ಮತ್ತು ಅವುಗಳ ವ್ಯಾಖ್ಯಾನದ ಭಾವಾನುವಾದವನ್ನು ಕನ್ನಡದಲ್ಲಿ ವಿವರಿಸಿದೆ. ವಿಷಯ ಗಹನವಾಗಿರುವುದರಿಂದ ಈ ಸಿದ್ಧಾಂತದ ಪರಿಭಾಷೆಯನ್ನೇ ಉಪಯೋಗಿಸಿದೆ. ಆದುದರಿಂದ ಕೆಲವು ವಿಚಾರಗಳು ಹೊಸದಾಗಿಯೂ ಕಠಿಣವಾಗಿಯೂ ತೋರಬಹುದು. ಭಾಷೆ ಕಠಿಣವಾಗಿರಬಹುದು. ಭಾಷೆ ವಿಷಯವನ್ನನುಸರಿಸಿರುತ್ತದೆ. ಇದನ್ನು ಪರಿಹರಿಸಲು ಇದರಲ್ಲಿ ಬರುವ ಪಾರಿಭಾಷಿಕ ಶಬ್ದಗಳ ಅರ್ಥವಿವರಣೆಯು

ಪಟ್ಟಿಯೊಂದನ್ನು ಕೊನೆಯಲ್ಲಿ ಕೊಟ್ಟಿದೆ. ಈ ತತ್ತ್ವಶಾಸ್ತ್ರದ ವಿಷಯಗಳನ್ನು ನಾನಾ ಮುಖವಾಗಿ ವಿವೇಚಿಸಿರುವುದರಲ್ಲಿ ಅಲ್ಲಲ್ಲಿ ಪುನರುಕ್ತಿಗಳು ಕಂಡುಬರುವುದು ಸಹಜ. ಇಲ್ಲಿ ಭಾಷಾಶೈಲಿಗಿಂತ ವಿಷಯ ಪ್ರತಿಪಾದನೆಗೆ ಹೆಚ್ಚು ಗಮನಕೊಟ್ಟಿರುವುದರಿಂದ ಪುನರುಕ್ತಿಗಳು ಅಪರಿಹಾರ್ಯವೆಂದು ಸಹೃದಯರಲ್ಲಿ ವಿಜ್ಞಾಪಿಸುತ್ತೇನೆ.

ಪ್ರತ್ಯಾಭಿಜ್ಞಾ ಹೃದಯದ ಸೂತ್ರಗಳು

೧. ಚಿತಿಃ ಸ್ವತಂತ್ರಾ ವಿಶ್ವಸಿದ್ಧಿ ಹೇತುಃ.
೨. ಸ್ವೇಚ್ಛಯಾ ಸ್ವಭಿತ್ತೌ ವಿಶ್ವಮುನ್ಮೀಲಯತಿ.
೩. ತನ್ನಾನಾ ಅನುರೂಪ ಗ್ರಾಹ್ಯಗ್ರಾಹಕಭೇದಾತ್.
೪. ಚಿತಿಸಂಕೋಚಾತ್ಮಾ ಚೇತನೋಪಿ ಸಂಕುಚಿತ ವಿಶ್ವಮಯಃ
೫. ಚಿತಿರೇವ ಚೇತನ ಪದಾದವರೂಢಾ ಚೈತ್ಯ ಸಂಕೋಚಿನೀ ಚಿತ್ತಂ.
೬. ತನ್ಮಯೋಮಾಯಾ ಪ್ರಮಾತಾ
೭. ಸಚೈಕೋ ದ್ವಿರೂಪಸ್ತ್ರಿಮಯಃ ಚತುರಾತ್ಮಾ ಸಪ್ತಪಂಚಕ ಸ್ವಭಾವಃ
೮. ತದ್ಭೂಮಿಕಾಃ ಸರ್ವದರ್ಶನ ಸ್ಥಿತಯಃ
೯. ಚಿದ್ವತ್ತಚ್ಛಕ್ತಿ ಸಂಕೋಚಾತ್ ಮಲಾವೃತಃ ಸಂಸಾರಿ.
೧೦. ತಥಾಪಿ ತದ್ವತ್ ಪಂಚಕೃತ್ಯಾನಿ ಕರೋತಿ.
೧೧. ಆಭಾಸನ ರಕ್ತಿ ವಿಮರ್ಶನ ಬೀಜಾವಸ್ಥಾಪನ ವಿಲಾಪನ ತಸ್ತಾನಿ.
೧೨. ತದಪರಿಜ್ಞಾನೆ ಸ್ವಶಕ್ತ್ಯಭಿವ್ಯಾಮೋಹಿತತಾ ಸಂಸಾರಿತ್ವಂ.
೧೩. ತತ್ಪರಿಜ್ಞಾನೆ ಚಿತ್ತಮೇವ ಅಂತರ್ಮುಖೀ ಭಾವೇನ ಚೇತನಪದಾಧ್ಯಾರೋಹಾತ್ ಚಿತಿಃ.
೧೪. ಚಿತಿವಹ್ನಿರವರೋಹ ಪದೇಛನ್ನೋಪಿ ಮಾತ್ರಯಾ ಮೇಯೇಂ ಧನಂ ಪ್ಲುಷ್ಯತಿ.
೧೫. ಬಲಲಾಂಭೆ ವಿಶ್ವಮಾತ್ಮಸಾತ್ಕರೋತಿ.
೧೬. ಚಿದಾನಂದ ಲಾಭೆ ದೇಹಾದಿಷು ಚೈತ್ಯಮಾನೇಷ್ವಪಿ ಚಿದೈಕಾತ್ಮ್ಯ ಪ್ರತಿಪತ್ತಿ ದಾರ್ಢ್ಯಂ ಜೀವನ್ಮುಕ್ತಿಃ.
೧೭. ಮಧ್ಯವಿಕಾಸಾತ್ ಚಿದಾನಂದಲಾಭಃ
೧೮. ವಿಕಲ್ಪಕ್ಷಯ–ಶಕ್ತಿಸಂಕೋಚವಿಕಾಸ–ವಾಹಚ್ಛೇದಾದ್ಯಂತಕೋಟಿನಿಭಾಲನಾದಯ ಇಹೋಪಾಯಾಃ.
೧೯. ಸಮಾಧಿ ಸಂಸ್ಕಾರವತಿ ವ್ಯುತ್ಥಾನೆ ಭೂಯೋಭೂಯೊಶ್ಚಿದೈಕ್ಯಾಮರ್ಶಾ ನ್ನಿತ್ಯೋದಿತ ಸಮಾಧಿಲಾಭಃ
೨೦. ತದಾಪ್ರಕಾಶಾನಂದಸಾರ ಮಹಾಮಂತ್ರವೀರ್ಯಾತ್ಮಕ ಪೂರ್ಣಾಹಂತಾ ವೇಶಾತ್ ಸದಾ ಸರ್ವಸರ್ಗ ಸಂಹಾರಕಾರಿ ನಿಜ ಸಂವಿದ್ದೇವತಾ ಚಕ್ರೇಶ್ವರತಾ ಪ್ರಾಪ್ತಿರ್ಭವತೀತಿ ಶಿವಂ.

ನಮಃ ಶಿವಾಯ ಸತತಂ ಪಂಚಕೃತ್ಯ ವಿಧಾಯಿನೇ ।
ಚಿದಾನಂದ ಘನ ಸ್ವಾತ್ಮ ಪರಮಾರ್ಥಾವಭಾಸಿನೇ ॥೧॥
ಶಂಕರೋಪನಿಷತ್ಸಾರ ಪ್ರತ್ಯಭಿಜ್ಞಾ ಮಹೋದಧೇಃ ।
ಕ್ಷೇಮೇಣೋದ್ ಧ್ರಿಯತೆ ಸಾರಃ ಸಂಸಾರ ವಿಷಶಾಂತಯೆ ॥೨॥

ಚಿದಾನಂದ ಘನನಾಗಿರುವ ತನ್ನ ಸತ್ಯವಾದ ಸ್ವಭಾವವನ್ನು ಪ್ರಕಾಶಪಡಿಸುವ ಯಾವಾಗಲೂ ಪಂಚಕೃತ್ಯಗಳನ್ನು ನಿರ್ವಹಿಸುವ ಶಿವನಿಗೆ ನಮಸ್ಕಾರವು.

ಅಧ್ಯಾತ್ಮ ಶಾಸ್ತ್ರದ ತತ್ತ್ವಗಳು ಗಹನವಾಗಿರುವುದರಿಂದ ಸಾಮಾನ್ಯರಿಗೆ ಸುಲಭವಾಗಿ ತಿಳಿಯುವುದಿಲ್ಲ. ತಿಳಿಯಬೇಕಾದರೆ ತೀವ್ರವಾದ ಬುದ್ಧಿಶಕ್ತಿಯೂ ಪರಿಶುದ್ಧವಾದ ಜ್ಞಾನವೂ ಬೇಕು. ಹಾಗೆ ತೀವ್ರವಾದ ಬುದ್ಧಿಶಕ್ತಿಯಿಲ್ಲದಿದ್ದರೂ ಶಾಸ್ತ್ರಗಳಲ್ಲಿ ಹೆಚ್ಚು ಪರಿಶ್ರಮವಿಲ್ಲದಿದ್ದರೂ ಪರಮಾತ್ಮನ ಸಮಾವೇಶವನ್ನು ಕೇವಲ ಈಶ್ವರಾನುಗ್ರಹದಿಂದ ಪಡೆಯಬೇಕೆಂಬ ಇಚ್ಛೆಯುಳ್ಳವರಿಗೆ ಕ್ಷೇಮರಾಜನೆಂಬ ಪಂಡಿತನು ಪ್ರತ್ಯಭಿಜ್ಞಾ ಶಾಸ್ತ್ರದ ತಿರುಳನ್ನು ಸಂಗ್ರಹವಾಗಿ ಇಪ್ಪತ್ತು ಸೂತ್ರಗಳಲ್ಲಿ ಸುಲಭವಾಗಿ ತಿಳಿಯಪಡಿಸಿದ್ದಾನೆ.

ಚಿತ್ಸ್ವರೂಪ

ಚಿತಿಃ ಸ್ವತಂತ್ರಾ ವಿಶ್ವಸಿದ್ಧಿ ಹೇತುಃ ॥

ಸ್ವತಂತ್ರವಾದ ಚಿತ್ತೇ ವಿಶ್ವಸಿದ್ಧಿಗೆ ಕಾರಣವು. ಚಿತ್ತು, ಸ್ವತಂತ್ರ, ಪರಿಪೂರ್ಣ, ಅಪರಿಚ್ಛಿನ್ನ, ಸ್ವಯಂಪ್ರಕಾಶವಾದುದ್ದು.

ಸದಾಶಿವ ತತ್ತ್ವದಿಂದ ಭೂಮಿಯವರೆಗೂ ಇರುವ ತತ್ತ್ವಸಮೂಹದ ಸಿದ್ಧಿರೂಪವಾದ ಸೃಷ್ಟಿಗೂ ಪ್ರಕಾಶರೂಪವಾದ ಸ್ಥಿತಿಗೂ ಪರಪ್ರಮಾತೃವಿನಲ್ಲಿ ಲೀನವಾಗುವ ಸಂಹಾರಕ್ಕೂ ಸ್ವತಂತ್ರವಾದ ಪರಾಶಕ್ತಿರೂಪಿಯಾದ ಚಿತ್ತೇ (ಚಿಚ್ಛಕ್ತಿಯೇ) ಕಾರಣವಾಗಿದೆ. ಈ ಚಿತ್ತು ಅನುತ್ತರ ವಿಮರ್ಶಮಯನಾಗಿರುವ ಶಿವನಿಂದ ಬೇರೆಯಲ್ಲ. ಈ ಚಿತ್ತೇ ವಿಶ್ವವ್ಯಾಪಾರವನ್ನು ನಡೆಸತಕ್ಕದ್ದಾಗಿರುವುದು. ಪರಮಫಲವನ್ನು ಕೊಡುವುದಾಗಿಯೂ ಅಂತಹ ಪರಮಫಲಕ್ಕೆ ಸಾಧನವಾಗಿಯೂ ಇದೆ.

ಈ ಚಿತ್ತು (ಚಿಚ್ಛಕ್ತಿಯು) ಸ್ವತಂತ್ರವಾದದ್ದು. ಈ ಚಿತ್ತಿಗಿಂತ ಆಚೆ ಇದನ್ನು ಮೀರಿದ್ದು ಯಾವುದೂ ಇಲ್ಲ. ಇದು ಪರಮಶಿವನಿಂದ ಬೇರೆಯಲ್ಲ. ಇದರ ಪ್ರಸರದಿಂದಲೇ ಜಗತ್ತು ಬೆಳಗುತ್ತದೆ, ನಡೆಯುತ್ತದೆ ಮತ್ತು ಹಾಗೆ ಬಹಿಃಪ್ರಸರವಿಲ್ಲದೆ ಅಂತರ್ಮುಖವಾದರೆ ಉಪಸಂಹರಿಸಲ್ಪಡುತ್ತದೆ.

ಕೆಲವರು ವಿಶ್ವಕ್ಕೆ ಮಾಯೆ ಕಾರಣವೆನ್ನುವರು. ಇನ್ನು ಕೆಲವರು ಪ್ರಕೃತಿ ಮೊದಲಾದವುಗಳು ಕಾರಣವೆನ್ನುವರು. ಮಾಯೆಯಾಗಲಿ ಪ್ರಕೃತಿಯಾಗಲಿ ಸ್ವಯಂಪ್ರಕಾಶಗಳಲ್ಲ. ಇವು ಚಿತ್ತಿಗಿಂತ ಬೇರೆಯಾಗಿರುವುದರಿಂದ ಯಾವುದಕ್ಕೂ ಸ್ವತಂತ್ರವಾಗಿ

ಕಾರಣವಾಗಲಾರವು. ಪ್ರಕಾಶವೇ ಮುಖ್ಯಸ್ವಭಾವವಾಗಿರುವ ಚಿತ್ತೇ ಸಮಸ್ತ ವಿಷಯಗಳಿಗೂ ಕಾರಣವಾಗಿರುತ್ತದೆ. ಲೋಕವ್ಯವಹಾರಕ್ಕೆ ಕಾರಣಗಳಾದ ದೇಶ ಕಾಲ ಆಕಾರಗಳು ಚಿತ್ತಿನಿಂದಲೇ ಹುಟ್ಟಿರುತ್ತವೆ. ಆದರೂ ಸರ್ವವ್ಯಾಪಕವೂ ಪರಿಪೂರ್ಣವೂ ಸದಾ ಪ್ರಕಾಶರೂಪವಾಗಿಯೂ ಇರುವ ಚಿತ್ತಿನ ಅಖಂಡತ್ವವನ್ನು ಬೇರ್ಪಡಿಸಲು ಸಮರ್ಥಗಳಲ್ಲ.

ಚಿತ್ತು (ಚಿಚ್ಛಕ್ತಿಯು) ಕಾರಣ. ವಿಶ್ವವು ಕಾರ್ಯ. ಯಾವ ದೋಷವೂ ಇಲ್ಲದೆ ಸ್ವತಂತ್ರವಾಗಿಯೂ ಅನೇಕ ಶಕ್ತಿಗಳನ್ನೊಳಗೊಂಡದ್ದಾಗಿಯೂ ಇರುವ ಚಿತ್ತೇ ವಿಶ್ವ ರೂಪವಾಗಿ ಸ್ಫುರಿಸುವುದರಿಂದ ಕಾರಣರೂಪವಾಗಿಯೂ ಕಾರ್ಯರೂಪವಾಗಿಯೂ ಇದೆ.

ಚಿತ್ಸ್ವರೂಪವು ಸ್ವಯಂಪ್ರಕಾಶವಾದದ್ದು. ಚಿತ್ತು ಗ್ರಾಹ್ಯವೂ ಹೌದು. ಗ್ರಾಹಕವೂ ಹೌದು. ಲೋಕವ್ಯವಹಾರಗಳನ್ನು ತಿಳಿಯುವುದಕ್ಕೆ ನಾವು ಉಪಯೋಗಿಸುವ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದವೇ ಮೊದಲಾದ ಪ್ರಮಾಣಗಳು, ಚಿತ್ಸ್ವರೂಪವನ್ನು ತಿಳಿಯಪಡಿಸಲಾರವು. ಚಿತ್ತು ಅಪರಿಚ್ಛಿನ್ನವಾಗಿಯೂ ಸ್ವತಂತ್ರ ವಾಗಿಯೂ ಸ್ವಯಂಪ್ರಕಾಶರೂಪವಾದದ್ದಾಗಿಯೂ ಇರುವುದರಿಂದ ಚಿತ್ತಿನಿಂದ ಹುಟ್ಟಿದ ಪ್ರಮಾಣಗಳು ಚಿತ್ತಿನ ವಿಕಲ್ಪಗಳನ್ನು ತೋರ್ಪಡಿಸುವುದಕ್ಕೆ ಸಮರ್ಥ ವಾಗುವುವೇ ಹೊರತು ಚಿತ್ಸ್ವರೂಪವನ್ನು ತೋರ್ಪಡಿಸಲಾರವು. ಚಿತ್ಸ್ವರೂಪವು ಕೇವಲ ಅನುಭವದಿಂದಲೇ ಗೋಚರವಾಗತಕ್ಕದ್ದು.

ಈ ಚಿತ್ತು ವಿಶ್ವದ ಸೃಷ್ಟಿಗೂ, ಸ್ಥಿತಿಗೂ ಪರಮಶಿವನಲ್ಲಿ ಏಕೀಭವಿಸುವಂತಹ ಸಂಹಾರಕ್ಕೂ ಕಾರಣವಾಗಿ ಸ್ವತಂತ್ರವಾಗಿದೆ. ಈ ಸ್ವಾತಂತ್ರ್ಯ ಸ್ವರೂಪವನ್ನು ವಿಶದವಾಗಿ ತಿಳಿದರೆ ಇದು ಭೋಗಕ್ಕೂ ಮೋಕ್ಷಕ್ಕೂ ಕಾರಣವಾಗುತ್ತದೆ. ಮತ್ತು ಸಾಧನವಾಗು ತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ವಿವರಿಸಬಹುದು.

ಈ ವಿಶ್ವವು ನೀಲ, ಸುಖ, ದೇಹ, ಪ್ರಾಣಾದಿರೂಪಗಳಿಂದ ಕೂಡಿದ್ದಾಗಿದೆ. ನೀಲವು ಬಹಿರಿಂದ್ರಿಯಗಳಿಂದ ತಿಳಿಯತಕ್ಕದ್ದಾಗಿ ಅನೇಕ ಬಗೆಯಾಗಿದೆ. ಸುಖವು ಅಂತರಿಂದ್ರಿಯ ಗಳಿಂದ ಅನುಭವಿಸತಕ್ಕದ್ದಾಗಿದೆ. ದೇಹವು ಬಾಹ್ಯಾನುಭವಕ್ಕೂ ಅಂತರನುಭವಕ್ಕೂ ಆಶ್ರಯವಾಗಿದೆ. ದೇಹದ ಕ್ರಿಯೆಗಳನ್ನು ನಡೆಸುವ ಚೈತನ್ಯಶಕ್ತಿಯೇ ಪ್ರಾಣ. ಈ ರೀತಿಯಾದ ವಿಶ್ವದ ಸ್ವರೂಪವು ವಿಲಕ್ಷಣವಾದದ್ದು. ಮಿತಪ್ರಮಾತೃವಾದ ಜೀವನು ವಿಶ್ವದ ಸ್ವರೂಪ ಮತ್ತು ವ್ಯಾಪಾರಗಳನ್ನು ಪ್ರಮಾಣಗಳಿಂದ ತಿಳಿಯುತ್ತಾನೆ. ಹಾಗೆ ಪ್ರಮಾಣಗಳಿಂದ ತಿಳಿಯುವುದಕ್ಕೆ ಸಾಧ್ಯವಲ್ಲದ ವಿಷಯಗಳನ್ನು ಸ್ವಚ್ಛಜ್ಞಾನದಿಂದ ತಿಳಿಯುತ್ತಾನೆ ಮತ್ತು ಅನುಭವಿಸುತ್ತಾನೆ. ಹೀಗೆ ಪ್ರಮಾಣಗಳಿಂದ ಹೊರಗಿನ ಪದಾರ್ಥಗಳ ಸ್ವರೂಪವನ್ನು ತಿಳಿದು ಒಳಗಿನ ಅನುಭವಗಳನ್ನು ಮನನಮಾಡುವುದರ ಮೂಲಕ ಕ್ರಮಕ್ರಮವಾಗಿ ಜ್ಞಾನವಿಕಾಸವನ್ನು ಪಡೆಯುತ್ತಾನೆ. ಪರಮ ಸುಖವಾದ ಪರಪ್ರಮಾತ್ರಾವೇಶ ಅಥವಾ ಪರಶಿವಾನುಭವವನ್ನು ಹೊಂದುವುದಕ್ಕೆ ಸಾಧಕನು

ಮೊದಲು ಪ್ರಮಾಣಗಳಿಂದ ಆರಂಭಿಸುತ್ತಾನೆ. ಅತೀಂದ್ರಿಯ ಸಾಧನಗಳ ಸಹಾಯದಿಂದ ಪೂರ್ಣವಿಕಾಸವನ್ನು ಹೊಂದುತ್ತಾನೆ. ಈ ಸಾಧನ ಕ್ರಮಕ್ಕೆ ಈ ಸಂಪ್ರದಾಯದಲ್ಲಿ 'ಪ್ರಮಾಣೋಪಾರೋಹಕ್ರಮ' ವೆಂದೂ 'ಪರಪ್ರಮಾತ್ರಾವೇಶ'ವೆಂದೂ ಹೆಸರು. ಇವೆಲ್ಲಕ್ಕೂ ಚಿಚ್ಛಕ್ತಿಯೇ ಕಾರಣವಾಗಿದೆ.

ಇನ್ನೂ ಸಂಕ್ಷೇಪವಾಗಿ ಹೇಳುವುದಾದರೆ: ಚಿತ್ತೇ ತಿಳಿಯಲ್ಪಡುವ ವಿಶ್ವವಾಗಿಯೂ ತಿಳಿಯುವ ಜೀವನಾಗಿಯೂ ಹೀಗೆ ಎರಡು ಭೇದಗಳುಳ್ಳದ್ದಾಗಿದೆ.

ಗ್ರಾಹ್ಯ ಗ್ರಾಹಕ ಸಂವಿತ್ತಿಃ ಸಾಮಾನ್ಯಾ ಸರ್ವದೇಹಿನಾಂ ।
ಯೋಗಿನಾಂತು ವಿಶೇಷೋಽಯಂ ಸಂಬಂಧೆ ಸಾವಧಾನತಾ ॥

(ವಿಜ್ಞಾನಭೈರವ)

ಗ್ರಾಹ್ಯವೆಂದರೆ ತಿಳಿಯಲ್ಪಡತಕ್ಕ ವಿಷಯ. ಗ್ರಾಹಕವೆಂದರೆ ತಿಳಿಯುವ ಸ್ವಭಾವವುಳ್ಳ ಚಿದ್ರೂಪಿಯಾದ ಜೀವ. ಭೇದರೂಪವಾದ ಈ ಗ್ರಾಹ್ಯ ಗ್ರಾಹಕ ಭಾವವನ್ನು ನಾವು ಸರ್ವಸಾಮಾನ್ಯವಾಗಿ ಎಲ್ಲ ಪ್ರಾಣಿಗಳಲ್ಲಿಯೂ ನೋಡುತ್ತೇವೆ. ಯೋಗಿಯಾದವನು ಈ ಗ್ರಾಹ್ಯ ಗ್ರಾಹಕ ಭಾವಗಳು ಒಂದೇ ಚಿತ್ತಿನಿಂದ ಹೊರ ಹೊಮ್ಮಿರುವವುಗಳೆಂದು ವಿಶಿಷ್ಟ ರೀತಿಯಿಂದ ಮನನಮಾಡಿ ಸಾಕ್ಷಾತ್ಕರಿಸಿರುತ್ತಾನೆ. ಸಾಮಾನ್ಯರಿಗೆ ಈ ಗ್ರಾಹ್ಯ ಗ್ರಾಹಕಗಳಿರುವ ಐಕ್ಯವು ತಿಳಿಯುವುದಿಲ್ಲ.

ವಿಶ್ವಕ್ಕೆ ಚಿತ್ತೇ ಕಾರಣವೆಂದರೆ ಅದಕ್ಕೆ ಉಪಾದಾನ ಕಾರಣವಾವುದು ನಿಮಿತ್ತ ಕಾರಣವಾವುದು ಎಂಬ ಭೇದವಾದಿಗಳ ಶಂಕೆಯ ನಿವೃತ್ತಿಗಾಗಿ ಈ ಎರಡನೆಯ ಸೂತ್ರವು ಹೊರಟಿದೆ.

ಸ್ವೇಚ್ಛಯಾ ಸ್ವಭಿತ್ತೌ ವಿಶ್ವಮುನ್ಮೀಲಯತಿ ॥೨॥

ಈಶ್ವರನು ತನ್ನ ಇಚ್ಛೆಯಿಂದಲೇ ಎಲ್ಲಕ್ಕೂ ಆಧಾರವಾಗಿರುವ ತನ್ನಲ್ಲಿಯೇ ವಿಶ್ವವನ್ನು ಪ್ರಕಾಶಪಡಿಸುತ್ತಾನೆ.

ಆಧೇಯವಾಗಿರುವ ವಿಶ್ವವೂ ಆಧಾರವಾಗಿರುವ ಚಿತ್ತೂ ಮೂಲರೂಪದಲ್ಲಿ ಒಂದೇ ಆಗಿರುತ್ತದೆ. ವಿಶ್ವಸೃಷ್ಟಿಗೆ ಉಪಾದಾನ ಕಾರಣವು ಬೇರೆಯಿಲ್ಲ. ಈಶ್ವರನು ತನ್ನ ಇಚ್ಛೆಯಿಂದಲೇ ತನ್ನಲ್ಲಿಯೇ ವಿಶ್ವವನ್ನು ಹೊರಹೊಮ್ಮಿಸಿರುತ್ತಾನೆ. ಈಶ್ವರನು ಸರ್ವ ಸ್ವತಂತ್ರವಾಗಿರೋಣದರಿಂದ ಸೃಷ್ಟಿಸಂಹಾರಾದಿಗಳಿಗೆ ಭೇದವಾದಿಗಳು ಹೇಳುವಂತೆ ಇತರ ಕಾರಣಗಳ ಅಪೇಕ್ಷೆಯಿಲ್ಲ. ಈ ವಿಷಯವನ್ನು ದೃಷ್ಟಾಂತದಿಂದಲೂ ವಿವರಿಸ ಬಹುದು. ಸ್ವಚ್ಛವಾದ ಕನ್ನಡಿಯಲ್ಲಿ ಕನ್ನಡಿಗಿಂತ ಬೇರೆಯಾಗಿಯೂ ದೊಡ್ಡದಾಗಿಯೂ ಇರುವ ಪದಾರ್ಥಗಳು ಪ್ರತಿಫಲಿಸಿದರೂ ಕನ್ನಡಿಯಲ್ಲಿ ಯಾವ ವ್ಯತ್ಯಾಸವೂ ಉಂಟಾಗು ವುದಿಲ್ಲ. ಪ್ರತಿಫಲನದಲ್ಲಿ ಯಾವ ವಿಕಾರಗಳೂ ಬರುವುದಿಲ್ಲ. ಕನ್ನಡಿಯು ತನ್ನ ಸ್ವರೂಪ ದಿಂದಲೇ ಇರುತ್ತದೆ. ಇದೇ ರೀತಿಯಾಗಿ ಚಿದ್ರೂಪಿಯಾದ ಪರಶಿವನು ತನ್ನ ಸಂಕಲ್ಪ

ದಿಂದ ಅನೇಕ ಭೇದಗಳನ್ನೊಳಗೊಂಡಿರುವ ವಿಶ್ವವನ್ನು ಹೊರಹೊಮ್ಮಿಸಿದ್ದರೂ ಆತನ ಪರಿಪೂರ್ಣತೆಗೂ ಸ್ವಾತಂತ್ರ್ಯತೆಗೂ ಚ್ಯುತಿಯಿಲ್ಲ. ತಾನು ನಿರ್ವಿಕಾರನಾಗಿಯೇ ಇದ್ದು ಸವಿಕಾರವಾದ ಈ ವಿಶ್ವವ್ಯಾಪಾರಗಳಿಗೆಲ್ಲಕ್ಕೂ ಆಶ್ರಯನಾಗಿರುತ್ತಾನೆ.

ವಿಶ್ವದ ಸ್ವರೂಪ

ತನ್ನಾನಾ ಅನುರೂಪ ಗ್ರಾಹ್ಯಗ್ರಾಹಕ ಭೇದಾತ್ । **॥೩॥**

ಈ ವಿಶ್ವವು ಪರಸ್ಪರ ಉಚಿತವಾದ ಅಥವಾ ಅನುರೂಪವಾದ ಸ್ಥಿತಿಯನ್ನೊಳಗೊಂಡ ಗ್ರಾಹ್ಯಗ್ರಾಹಕರ ಭೇದದಿಂದ ಅನೇಕ ಪ್ರಕಾರವಾಗಿದೆ.

ಮಹಾಚಿತ್ತು ತನ್ನ ಸ್ವಾತಂತ್ರ್ಯ ಶಕ್ತಿಯಿಂದಲೇ ಮೂವತ್ತಾರು ತತ್ತ್ವಗಳ ರೂಪವಾಗಿಯೂ ಏಳು ಪ್ರಮಾತೃಗಳ ರೂಪವಾಗಿಯೂ ದ್ವಿಮುಖವಾಗಿ ಪ್ರಕಾಶಪಡಿಸಿಕೊಂಡಿದೆ. ಶಿವತತ್ತ್ವದಿಂದ ಪೃಥ್ವೀತತ್ತ್ವದವರೆಗೂ ಮೂವತ್ತಾರು ತತ್ತ್ವಗಳು ಪರಿಗಣಿತವಾಗಿವೆ. ಮೊದಲನೆಯ ಮತ್ತು ಎರಡನೆಯದಾದ ಶಿವ ಮತ್ತು ಶಕ್ತಿತತ್ತ್ವಗಳಲ್ಲಿ ಗ್ರಾಹ್ಯಗ್ರಾಹಕ ಭೇದಗಳು ರೂಪುಗೊಂಡಿರುವುದಿಲ್ಲ. ಉಳಿದ ಮೂವತ್ತನಾಲ್ಕು ತತ್ತ್ವಗಳಲ್ಲಿ ಆಯಾ ಅಂತಸ್ತಿಗೆ ತಕ್ಕಹಾಗೆ ಗ್ರಾಹ್ಯಗ್ರಾಹಕ ಭೇದಗಳಿರುತ್ತವೆ.

ಮೂವತ್ತಾರು ತತ್ತ್ವಗಳು ಗ್ರಾಹ್ಯಗಳು. ತತ್ ಎಂದರೆ ಅದು. ತತ್ತ್ವ ಎಂದರೆ ಅದರ ಭಾವ. ಈ ವಿಶ್ವಸೃಷ್ಟಿಯಲ್ಲಿ ಮುಖ್ಯವಾದ ವಿಭಾಗವನ್ನು ಪಡೆದು ಒಂದು ನಿಶ್ಚಿತವಾದ ರೂಪದಲ್ಲಿ ಪ್ರಳಯಕಾಲದವರೆಗೂ ಇದ್ದು ಪ್ರಾಣಿಗಳ ಸುಖದುಃಖಗಳಿಗೆ ಕಾರಣವಾಗಿರುವ ಒಂದು ವಿಭಾಗದ ಸ್ಥಿತಿಗೆ ತತ್ತ್ವವೆಂದು ಹೆಸರು. ಪೃಥ್ವೀ ಮೊದಲಾದ ಇಂತಹ ತತ್ತ್ವಗಳು ವಿಶ್ವದ ವ್ಯವಹಾರಗಳಿಗೆ ಕಾರಣವಾಗಿದ್ದರೂ ಪ್ರಳಯಕಾಲದವರೆಗೂ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡಿರುತ್ತವೆ.

ಸಪ್ತ ಪ್ರಮಾತೃಗಳು ಗ್ರಾಹಕಗಳು. ಪ್ರಮಾತೃವೆಂದರೆ ಆ ಭೇದಾವಸ್ಥೆಯಲ್ಲಿ ಶುದ್ಧ ಚಿದ್ರೂಪದಲ್ಲಿದ್ದ ಶಿವನೇ ಮೂವತ್ತಾರು ತತ್ತ್ವಗಳ ರೂಪದಲ್ಲಿ ಮೆಟ್ಟಿಲು ಮೆಟ್ಟಿಲಾಗಿ ತಿಳಿಯಲ್ಪಡುವ ಸ್ಥಿತಿಯನ್ನು ಅಂದರೆ ಗ್ರಾಹ್ಯತ್ವವನ್ನು ಪಡೆದಿರುವಂತೆ ಆ ತತ್ತ್ವಗಳ ವಿಸ್ತಾರ ವೈಶಿಷ್ಟ್ಯ ಸ್ವರೂಪಗಳಿಗನುಸಾರವಾದ ಗ್ರಾಹಕತ್ವವನ್ನು ಪಡೆಯುವಿಕೆ.

ಪ್ರಕೃತದಲ್ಲಿ ಪ್ರಮಾ ಎಂದರೆ ಸ್ವಚ್ಛವಾದ ತಿಳಿವಳಿಕೆ. ಈ ತಿಳಿವಳಿಕೆಯಿಂದ ನಾವು ಒಂದು ಪದಾರ್ಥವನ್ನು ಇಷ್ಟು ಎಂದು ನಿರ್ಣಯಿಸುತ್ತೇವೆ. ಈ ತಿಳಿವಳಿಕೆಯು ಇತರ ಪದಾರ್ಥಗಳ ಪರಿಮಿತಿಯನ್ನು ತೋರಿಸುತ್ತದೆ. ಮತ್ತು ತನ್ನ ಸ್ವರೂಪವನ್ನು ತೋರ್ಪಡಿಸಿಕೊಳ್ಳುತ್ತದೆ. ತಿಳಿವಳಿಕೆಯನ್ನು ತಿಳಿಯುವುದಕ್ಕೆ ಬೇರೆ ತಿಳಿವಳಿಕೆ ಬೇಕಾಗಿಲ್ಲ. ಇಂತಹ ಸ್ವಯಂಪ್ರಕಾಶವಾದ ತಿಳಿವಳಿಕೆ ಶಕ್ತಿ ಇರುವವನಿಗೆ ಪ್ರಮಾತೃವೆಂದು ಹೆಸರು ; ಇವನೇ ಗ್ರಾಹಕ.

ಪ್ರಮಾತೃಗಳು ಏಳು ಬಗೆಯಾಗಿರುವುವು. ಸದಾ ಪರಮಾನಂದಮಯನಾಗಿರುವ ತತ್ತ್ವಾತೀತನಾದ ಪರಮ ಶಿವನು ಬೇರೆಯಿದ್ದಾನೆ. ತತ್ತ್ವಗಳಿಗೆ ಕಾರಣವಾದ ಮೊದಲನೆಯ ತತ್ತ್ವವಾದ ಶಿವತತ್ತ್ವ ಸ್ಥಿತಿಯಲ್ಲಿರುವವನು ಗ್ರಾಹ್ಯಗ್ರಾಹಕ ಭೇದಗಳಿಲ್ಲದೆ ಅಲೆಗಳಿಲ್ಲದ ಸಮುದ್ರದಂತೆ ಪ್ರಶಾಂತವಾದ ಸ್ಥಿತಿಯಲ್ಲಿ ಚಿನ್ಮಯನಾಗಿರುತ್ತಾನೆ. ಇವನಿಗೆ 'ಶಿವ'ನೆಂದು ಹೆಸರು. ಈ ಶಿವಸ್ಥಿತಿಯೇ ಮೊದಲನೆಯ ತತ್ತ್ವ. ಈ ಶಿವನಲ್ಲಿರುವ ಸ್ವಾತಂತ್ರ್ಯ ಶಕ್ತಿಯು ಸ್ಫುರಿಸಿದಾಗ 'ಶಕ್ತಿ' ಎನ್ನಿಸಿಕೊಳ್ಳುತ್ತದೆ. ಈ ಶಕ್ತಿಯು ಚಿಚ್ಛಕ್ತಿ, ಆನಂದ ಶಕ್ತಿ, ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳೆಂಬ ವಿಭಾಗವುಳ್ಳದ್ದಾಗಿದೆ. ಇವುಗಳಲ್ಲಿ ಚಿಚ್ಛಕ್ತಿ ಆನಂದಶಕ್ತಿಗಳು ಸ್ವರೂಪ ನಿರೂಪಕಗಳಾಗಿರುತ್ತವೆ; ಅಂದರೆ ಅವು ವ್ಯತ್ಯಾಸವನ್ನು ಪಡೆಯುವುದಿಲ್ಲ. ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು ಮಹಾಸಮುದ್ರದಲ್ಲಿ ಚಿಕ್ಕ ಅಲೆಗಳುಂಟಾಗುವಂತೆ ಈಷಚ್ಚಲನ ರೂಪವಾದ ಸ್ಥಿತಿಯನ್ನು ಪಡೆಯುತ್ತಿರುತ್ತವೆ. ಈ ಶಕ್ತಿಗಳ ವಿಸ್ತಾರವೇ ಮುಂದಿನ ತತ್ತ್ವಪ್ರಪಂಚ. ಎರಡನೆಯದಾದ ಈ ಶಕ್ತಿತತ್ತ್ವದ ಸ್ಥಿತಿಯಲ್ಲಿಯೂ ಗ್ರಾಹ್ಯಗ್ರಾಹಕ ಭೇದಗಳಿಗೆ ಅವಕಾಶವಿಲ್ಲ. ಇದರ ಮುಂದಿನ ಮೆಟ್ಟಲಾದ 'ಸದಾಶಿವತತ್ತ್ವ' ಸ್ಥಿತಿಯಲ್ಲಿ ತಿಳಿಯುವ ಮತ್ತು ತಿಳಿಯಲ್ಪಡುವ ವ್ಯತ್ಯಾಸಗಳು ತಲೆದೋರುತ್ತವೆ. ತಿಳಿಯುವಂಥಾ ಅಂಶಕ್ಕೆ **ಅಹಂತಾ** ಎಂದು ಹೆಸರು. ತಿಳಿಯಲ್ಪಡುವ ಅಂಶಕ್ಕೆ **ಇದಂತಾ** ಎಂದು ಹೆಸರು. ಈ ರೀತಿಯಾದ ವ್ಯತ್ಯಾಸಗಳನ್ನು ಗ್ರಾಹಕ ಗ್ರಾಹ್ಯಭಾವವೆಂದು ವ್ಯವಹರಿಸುತ್ತೇವೆ. "ಅಹಂತಾ" ಎನ್ನುವುದೇ "ನಾನು" ಎನ್ನಿಸಿಕೊಳ್ಳುವುದು. "ಇದಂತಾ" ಎನ್ನುವುದೇ "ಇದು" ಎಂದು ಕರೆಯಿಸಿಕೊಳ್ಳುವುದು. ಮೂರನೆಯದಾದ ಸದಾಶಿವ ತತ್ತ್ವದಲ್ಲಿ "ಅಹಂತಾ" "ಇದಂತಾ" ವ್ಯತ್ಯಾಸಗಳು ತಲೆದೋರಿದರೂ ಗ್ರಾಹಕಾಂಶವು ಪ್ರಧಾನವಾಗಿ ಗ್ರಾಹ್ಯಾಂಶವು ಬಹಳ ಕಡಿಮೆ ಪ್ರಮಾಣದಲ್ಲಿದ್ದು ಗೌಣವಾಗಿರುತ್ತದೆ. ಗ್ರಾಹ್ಯಾಂಶವು ಗೌಣವಾಗಿ ಗ್ರಾಹಕತ್ತ್ವವೇ ಪ್ರಧಾನವಾಗಿರುವುದರಿಂದ ಈ ಸದಾಶಿವತತ್ತ್ವದಲ್ಲಿ ತಿಳಿಯುವವರಿಗೆ **ಮಂತ್ರಮಹೇಶ್ವರ**ರೆಂದು ಹೆಸರು. ಪರಶಿವನು ತನ್ನ ಇಚ್ಛೆಯಿಂದಲೇ ಗ್ರಾಹಕ ವರ್ಗವನ್ನು ಆಯಾಯ ಸ್ಥಿತಿಗಳಿಗನುಸಾರವಾಗಿ ಕಲ್ಪಿಸಿರುತ್ತಾನೆ.

ನಾಲ್ಕನೆಯದಾದ ಈಶ್ವರತತ್ತ್ವದಲ್ಲಿ ಗ್ರಾಹ್ಯಾಂಶವೂ ಗ್ರಾಹಕಾಂಶವೂ ಸಮಾನವಾಗಿ ಸ್ಫುಟವಾಗಿರುವುದರಿಂದ ಇಲ್ಲಿನ ಪ್ರಮಾತೃ ವರ್ಗಕ್ಕೆ **ಮಂತ್ರೇಶ್ವರ**ರೆಂದು ಹೆಸರು. ಐದನೆಯದಾದ ವಿದ್ಯಾತತ್ತ್ವದಲ್ಲಿ ಅನಂತರೂಪಿಯಾಗಿರುವ ಶಿವನ ಸಂಕಲ್ಪದಿಂದ ಹೊರ ಹೊಮ್ಮಿರುವ ಅನೇಕ ಭೇದಗಳು ಮತ್ತು ಅವಾಂತರ ಭೇದಗಳನ್ನೊಳಗೊಂಡ ಭೇದ ಪ್ರಧಾನವಾದ ವಿಶ್ವವೇ ಗ್ರಾಹ್ಯವಾಗಿರುತ್ತದೆ. ಇದಕ್ಕನುಸಾರವಾಗಿ ಉತ್ಪನ್ನರಾಗಿರುವ ಅಸಂಖ್ಯಾತರಾದ ಪ್ರಮಾತೃಗಳು **ಮಂತ್ರ**ರೆಂದೆನಿಸಿಕೊಳ್ಳುತ್ತಾರೆ. ಈ ಪ್ರಮಾತೃವರ್ಗಕ್ಕೆ ವಿಶ್ವವೆಲ್ಲಾ ಗ್ರಾಹ್ಯ (ಪ್ರಮೇಯ) ವಾಗಿರುತ್ತದೆ. ಈ ಐದು ತತ್ತ್ವಗಳು ಶುದ್ಧ ವಿದ್ಯಾತತ್ತ್ವಗಳು. ಇವುಗಳನ್ನು ಶುದ್ಧಾಧ್ವವೆಂದೂ ಇವುಗಳಿಂದ ಮುಂದಕ್ಕಿರುವ ತತ್ತ್ವಗಳನ್ನು ಕೃಚ್ಛ್ರಾಧ್ವ-ಮಾಯಾಧ್ವ-ಅಶುದ್ಧಾಧ್ವವೆಂದೂ ಕರೆಯುತ್ತಾರೆ.

ಶುದ್ಧವಿದ್ಯಾತತ್ತ್ವಕ್ಕೆ ಕೆಳಗೆ ಮಾಯಾತತ್ತ್ವಕ್ಕೆ ಮೇಲೆ ಒಂದು ಅಂತರ ಪರಿಸ್ಥಿತಿಯಿದೆ. ಇಲ್ಲಿರುವ ಪ್ರಮಾತೃ ವರ್ಗಕ್ಕೆ **ವಿಜ್ಞಾನಾಕಲ**ರೆಂದು ಹೆಸರು. ಇವರಿಗೆ ಶುದ್ಧವಾದ ಜ್ಞಾನವಿರುತ್ತದೆ; ಕರ್ತೃತ್ವವಿಲ್ಲ. ಪೂರ್ವದಲ್ಲಿ ಇವರಿಗೆ ಪರಿಚಿತರಾಗಿದ್ದ "ಸಕಲಾ" ಪ್ರಮಾತ್ರಾವಸ್ಥೆಯಲ್ಲಿಯೂ "ಪ್ರಳಯಾ" ಕಲಾತ್ಮಕಾವಸ್ಥೆಯಲ್ಲಿಯೂ ಪ್ರಮೇಯವಾಗಿದ್ದ ವಿಶ್ವವು ಇವರಿಗೆ ಅಭಿನ್ನವಾಗಿ ಈಗಲೂ ಗ್ರಾಹ್ಯವಾಗಿರುತ್ತದೆ. ಅಂದರೆ ಈ ಸ್ಥಿತಿಯಲ್ಲಿ ಕರ್ತೃತ್ವವಿಲ್ಲದಿದ್ದರೂ ಶುದ್ಧವಾದ ಜ್ಞಾನವುಳ್ಳವರಾಗಿದ್ದರೂ ಬದ್ಧಾವಸ್ಥೆಯಿಂದ ಉನ್ನತಿಯನ್ನು ಪಡೆಯುತ್ತಾಬಂದಿರುವುದರಿಂದ ಹಿಂದಿನ ಅವಸ್ಥೆಯಲ್ಲಿ ಪರಿಚಿತವಾಗಿದ್ದ ವಿಶ್ವವು ಪ್ರಮೇಯವಾಗಿರುತ್ತದೆ.

ಮಾಯಾಧ್ವದಲ್ಲಿರುವ ಪ್ರಮಾತೃಗಳಿಗೆ **ಪ್ರಳಯಾಕಲ**ರೆಂದೂ ಶೂನ್ಯ ಪ್ರಮಾತೃಗಳೆಂದೂ ಹೆಸರು. ಇಲ್ಲಿ ಜ್ಞಾನವು ತಿಳಿಯಾಗಿರುವುದಿಲ್ಲ. ಹಾಲು ಮೊಸರಾಗುವುದಕ್ಕೆ ಮುಂಚೆ ಹಾಲಿನ ಅವಸ್ಥೆಯನ್ನು ಬಿಟ್ಟು ಮಧ್ಯಸ್ಥಿತಿಯಲ್ಲಿ ಪರಿಣಾಮವನ್ನು ಪಡೆಯುತ್ತಿರುವಂತೆ ತತ್ತ್ವಗಳೂ ಪರಿಣಾಮವನ್ನು ಹೊಂದುತ್ತಿರುತ್ತವೆ. ಆ ತತ್ತ್ವಗಳೇ ಇವನಿಗೆ ಗ್ರಾಹ್ಯಗಳಾಗಿರುತ್ತವೆ. ಈ ರೀತಿ ಗ್ರಾಹಕನಾಗಿರುವುದರಿಂದ ಇವನು ಶೂನ್ಯನಾಗಿದ್ದಾನೆ. ಈ ಸ್ಥಿತಿಯಲ್ಲಿ ಸುಖದುಃಖಗಳಿಲ್ಲ. ಜ್ಞಾನವು ಸ್ವಚ್ಛವಾಗಿಲ್ಲದಿರುವುದರಿಂದ ಇವನಿಗೆ ಗ್ರಾಹ್ಯವಾಗಿರುವ ವಿಶ್ವವು ಮಂಕಾಗಿರುತ್ತದೆ.

ಮಾಯಾತತ್ತ್ವದಿಂದ ಪೃಥ್ವೀತತ್ತ್ವದವರೆಗಿರುವ ಪ್ರಮಾತೃಗಳು ಬೇರೆ ಬೇರೆಯಾಗಿರುತ್ತಾರೆ ಮತ್ತು ಸಂಕುಚಿತ ಶಕ್ತಿಯುಳ್ಳವರಾಗಿರುತ್ತಾರೆ. ಬದ್ಧಾವಸ್ಥೆಯಲ್ಲಿ ಉಪಕರಣಗಳಾಗಿರುವ ಅಹಂಕಾರ, ಬುದ್ಧಿ, ಮನಸ್ಸು, ಇಂದ್ರಿಯಗಳು ಇವುಗಳಿಂದ ಕೂಡಿರುವುದರಿಂದಲೂ ಶಕ್ತಿಸಂಕುಚಿತವಾಗಿರುವುದರಿಂದಲೂ ಈ ವಿಶ್ವವನ್ನು ಭೇದದೃಷ್ಟಿಯಿಂದಲೇ ತಿಳಿಯುವವರಾಗಿರುತ್ತಾರೆ. ಇವರಿಗೆ **ಸಕಲ**ರೆಂದು ಹೆಸರು. ಹೀಗೆ ಮೂವತ್ತಾರು ತತ್ತ್ವಗಳಲ್ಲಿ ಶುದ್ಧ ವಿದ್ಯೆಯ ಐದು ತತ್ತ್ವಗಳಲ್ಲಿ ಮೂರು ಪ್ರಮಾತೃಗಳು (ಮಂತ್ರಮಹೇಶ್ವರ, ಮಂತ್ರೇಶ್ವರ, ಮಂತ್ರ) ಶುದ್ಧವಿದ್ಯೆಯ ಕೆಳಗೆ ಮಾಯೆಯಮೇಲೆ ಒಂದು ಪ್ರಮಾತೃ ವರ್ಗವೂ (ವಿಜ್ಞಾನಾಕಲಾ) ಮಾಯಾಪದದಲ್ಲಿ ಒಂದು ಪ್ರಮಾತೃವರ್ಗವೂ (ಪ್ರಳಯಾಕಲಾ) ಮಾಯೆಯಿಂದ ಪೃಥ್ವೀವರೆಗೂ ಇರುವ ತತ್ತ್ವರಾಶಿಗಳಲ್ಲಿ ಒಂದು ಪ್ರಮಾತೃವರ್ಗವೂ (ಸಕಲಾ) ಇವುಗಳ ಜೊತೆಗೆ 'ಶಿವನು' ಸೇರಿದರೆ ಸಪ್ತಪ್ರಮಾತೃಗಳಾಗುತ್ತಾರೆ. ತಾತ್ವಿಕವಾಗಿ ಚಿದ್ರೂಪಿಯಾಗಿರುವ ಏಳು ಪ್ರಮಾತೃಗಳಾಗುತ್ತಾರೆ. ತಾತ್ತ್ವಿಕವಾಗಿ ಚಿದ್ರೂಪಿಯಾಗಿರುವ ಏಳು ಪ್ರಮಾತೃವರ್ಗವನ್ನು ಇಲ್ಲಿ ವಿಶದಪಡಿಸಿರುವುದು ಸಾಧನಾಭ್ಯಾಸಿಗಳಿಗೆ ಜ್ಞಾಪಕಾರ್ಥವಾಗಿರುತ್ತದೆ. ಬದ್ಧಾವಸ್ಥೆಯಲ್ಲಿರುವವನು ತನ್ನ ಸ್ವರೂಪವನ್ನು ಅನುಸಂಧಾನಮಾಡುತ್ತಾ "ಸಕಲಾ" "ಪ್ರಳಯಾ ಕಲಾ" "ವಿಜ್ಞಾನಾ ಕಲಾ" ಈ ಮೂರು ಅಂತಸ್ತುಗಳನ್ನು ದಾಟಿ ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರ, ಶಿವ ಎಂಬ ಈ ಅಂತಸ್ತುಗಳನ್ನು ಮೆಟ್ಟಿಲು ಮೆಟ್ಟಿಲಾಗಿ ಪಡೆಯುತ್ತಾ ಸ್ವರೂಪ ವಿಕಾಸವನ್ನು

ಹೊಂದುವುದಕ್ಕೆ **ಪೂರ್ಣಾಹಂವಿಮರ್ಶಾ** ಎನ್ನುವುದು. ಆ ಪರಶಿವನಿಗೆ ೩೬ ತತ್ತ್ವಗಳಿಗೆ ಆಚೆ ಇರುವ ವಿಶ್ವೋತ್ತೀರ್ಣ ಸ್ಥಿತಿಯೂ ೩೬ ತತ್ತ್ವಗಳ ರೂಪವಾದ ವಿಶ್ವಾತ್ಮಕ ಸ್ಥಿತಿಯೂ ಇದೆ. ಆ ಪರಮಾನಂದಮಯ ಪ್ರಕಾಶೈಕಘನರೂಪವಾಗಿರುವ ಆ ಪರಶಿವನಿಗೆ ಶಿವತತ್ತ್ವದಿಂದ ಭೂಮಿಯವರೆಗೂ ಇರುವ ವಿಶ್ವವೆಲ್ಲಾ ಅಭಿನ್ನ ವಾಗಿಯೇ ಸ್ಫುರಿಸುತ್ತದೆ. ಆ ಪರಮಶಿವ ಭಟ್ಟಾರಕನೇ ವಿಶ್ವಾತ್ಮಕನಾಗಿ ಅನೇಕ ರೂಪ ಗಳಿಂದಲೂ ವಿಶ್ವಾತೀತನಾಗಿ ಪರಮಾನಂದಮಯನಾಗಿಯೂ ಅನೇಕ ಬಗೆಯಾದ ವಿಚಿತ್ರ ರೂಪಗಳಿಂದ ಸ್ಫುರಿಸುತ್ತಾ ವಸ್ತುತಃ ಗ್ರಾಹ್ಯಗ್ರಾಹಕ ಭೇದಗಳಿಲ್ಲದವನಾಗಿರು ತ್ತಾನೆ.

ಚಿತಿ ಸಂಕೋಚಾತ್ಮಾ ಚೇತನೋಽಪಿ ಸಂಕುಚಿತ ವಿಶ್ವಮಯಃ ॥೪॥

ಯಾವ ರೀತಿಯಾಗಿ ಪರಮೇಶ್ವರನು ವಿಶ್ವಶರೀರಿಯಾಗಿದ್ದಾನೆಯೋ ಅದೇ ರೀತಿ ಯಾಗಿ ಸಂಕುಚಿತವಾದ ಚಿತ್ಸ್ವರೂಪವುಳ್ಳವನಾಗಿರುವ ಜೀವನೂ ಸಂಕುಚಿತ ವಿಶ್ವಮಯನಾಗಿದ್ದಾನೆ.

ಪರಮಶಿವನು ತನ್ನಲ್ಲಿಯೇ ಅಭಿನ್ನವಾಗಿದ್ದ ವಿಶ್ವವನ್ನು ಸದಾಶಿವಾದಿ ಉಚಿತವಾದ ರೂಪದಿಂದ ಪ್ರಕಾಶಪಡಿಸುವುದಕ್ಕೆ ಸಂಕಲ್ಪಿಸಿ ಮೊದಲು ಚಿದೈಕ್ಯ ಅಖ್ಯಾತಿಮಯವಾದ 'ಅನಾಶ್ರಿತ ಶಿವ 'ರೂಪಿಯಾಗಿ ಶೂನ್ಯಾತಿಶೂನ್ಯಾತ್ಮಕನಾಗಿ ಪ್ರಕಾಶರೂಪಿಯಾಗಿಯೇ ಸ್ಫುರಿಸುತ್ತಾನೆ. ಅಂದರೆ ಶಿವನು ಮೊದಲು ಶುದ್ಧಚಿನ್ಮಯನಾಗಿ ಸ್ವಯಂಪ್ರಕಾಶ ನಾಗಿರುತ್ತಾನೆ. ಅನಂತರ ತನ್ನ ಸಂಕಲ್ಪದಿಂದ ಸಪ್ತಪ್ರಮಾತೃಗಳನ್ನೂ ಮೂವತ್ತಾರು ತತ್ತ್ವಗಳನ್ನೂ ಸೃಷ್ಟಿಸುವುದಕ್ಕೆ ಪೂರ್ವದಲ್ಲಿ ಈ ಸೃಷ್ಟಿಗೆ ಕಾರಣವಾಗಿರುವ ಅಖ್ಯಾತಿ ಯನ್ನು ತೋರ್ಪಡಿಸಿಕೊಳ್ಳುತ್ತಾನೆ. **ಅಖ್ಯಾತಿ** ಎಂದರೆ ಎರಡು ಪದಾರ್ಥಗಳನ್ನು ಒಂದು ಎಂದು ತಿಳಿಯುವುದು ಒಂದು ಬಗೆ. ಒಂದು ಪದಾರ್ಥ ಅಥವಾ ತತ್ತ್ವವನ್ನು ಬೇರೆಬೇರೆಯೆಂದು ತಿಳಿಯುವುದು ಇನ್ನೊಂದು ಬಗೆ. ಇಲ್ಲಿ ಅಭಿನ್ನವಾದ ಚಿನ್ಮಯನು ಅನಂತವಾದ ವಿಶ್ವಭೇದಜ್ಞಾನಗಳನ್ನು ಅಂಗೀಕರಿಸುವಿಕೆಯೇ ಅಖ್ಯಾತಿ. ವಿಶ್ವಸೃಷ್ಟಿಗೆ ಅಖ್ಯಾತಿಯೂ ಒಂದು ಕಾರಣ. ಶಿವನು ವಿಶ್ವಾತ್ಮಕನಾಗುವುದಕ್ಕೆ ಮೊದಲು ವಿಶ್ವಾತೀತ ಸ್ಥಿತಿಯಲ್ಲಿದ್ದು ವಿಶ್ವಸೃಷ್ಟಿಗೆ ಸಂಕಲ್ಪಿಸಿ ಅಖ್ಯಾತಿಮಯನಾಗುತ್ತಾನೆ. ಇಲ್ಲಿನ ಅಖ್ಯಾತಿ ಜ್ಞಾನಪ್ರಕಾರವಾಗಿರುವುದು ಅಂದರೆ ಚಿದೈಕ್ಯರೂಪವಾಗಿಯೇ ಇರುವುದು. ಅಭಿನ್ನವಾದ ಚಿತ್ತು ಭಿನ್ನವಾದ ಪ್ರಪಂಚವನ್ನು ಸೃಷ್ಟಿಮಾಡುವುದಕ್ಕೆ ಸಂಕಲ್ಪಮಾಡುವಿಕೆಯೇ ಇಲ್ಲಿನ ಅಖ್ಯಾತಿ. ಈ ಸ್ಥಿತಿಯಲ್ಲಿ ಶಿವನಿಗೆ **ಅನಾಶ್ರಿತ ಶಿವನೆಂದೂ** ಶೂನ್ಯಾದಿ ಶೂನ್ಯಾತ್ಮಕನೆಂದೂ ಹೆಸರು. ಇಲ್ಲಿ ಶೂನ್ಯವೆಂದರೆ ಏನು ಇಲ್ಲದಿರುವಿಕೆಯಲ್ಲ. ನಾಮರೂಪಾದಿ ವಿಶೇಷಗಳು ಏರ್ಪಡದಿರುವ ಸ್ಥಿತಿ. ಇದು ಈಶ್ವರನ ವಿಷಯವಾಯಿತು.

'ಖ್ಯಾತಿ' ಎಂದರೆ ಜ್ಞಾನ, ತಿಳಿವಳಿಕೆ. 'ಅಖ್ಯಾತಿ' ಎಂದರೆ ತಿಳಿವಳಿಕೆಯಿಲ್ಲ

ದಿರುವಿಕೆ. ನನಗೆ ಈ ವಿಷಯದಲ್ಲಿ ತಿಳಿವಳಿಕೆಯಿಲ್ಲವೆಂಬ ತಿಳಿವಳಿಕೆಯೂ ತಿಳಿವಳಿಕೆಯಾಗಿರುತ್ತದೆ. ಜ್ಞಾನಾಭಾವರೂಪವಲ್ಲ.[1] ಮೊದಲು ಶುದ್ಧಚಿತ್ತಾಗಿದ್ದು ಅನಂತರ ಅಭಿನ್ನವಾಗಿರುವ ತತ್ತ್ವದಲ್ಲಿಯೇ ಅನಂತ ಭೇದಗಳುಳ್ಳ ವಿಶ್ವವನ್ನು ಸೃಷ್ಟಿಮಾಡಬೇಕೆಂದು ಸಂಕಲ್ಪಿಸಿರುವುದೇ **ಅಖ್ಯಾತಿ**ಯೆಂದು ಹೇಳಿದ್ದಾಯಿತು.

ಈ ಸೃಷ್ಟಿಕ್ರಮವು ಮೊದಲು ತತ್ತ್ವಗಳ ರೂಪವಾಗಿಯೂ ಪ್ರಮಾತೃಗಳ ರೂಪವಾಗಿಯೂ ನಡೆಯುತ್ತದೆ. ತತ್ತ್ವಗಳು ವಿಶದವಾಗಿ ರೂಪುಗೊಂಡು ಅನಂತರ ಪೃಥ್ವೀ ತೇಜಸ್ಸು ಮೊದಲಾದ ತತ್ತ್ವಗಳ ಸಮ್ಮೇಳನದಿಂದ ಅನೇಕ ಲೋಕಗಳು ನಿರ್ಮಾಣವಾಗುತ್ತವೆ. ಹಾಗೆಯೇ ಬಗೆಬಗೆಯಾದ ಪದಾರ್ಥಗಳು ಆಯಾ ಲೋಕಗಳಲ್ಲಿ ವಿಸ್ತಾರವಾಗಿ ನಿಷ್ಪನ್ನವಾಗುತ್ತವೆ. ಇವೆಲ್ಲಾ ಪ್ರಮೇಯಗಳೆನ್ನಿಸಿಕೊಳ್ಳುತ್ತವೆ. 'ಪ್ರಮೇಯ'ಗಳು ಅಂದರೆ ತಿಳಿವಳಿಕೆಯಿಂದ ತಿಳಿಯಲ್ಪಡತಕ್ಕವುಗಳು. ಇವುಗಳನ್ನು 'ಗ್ರಾಹ್ಯ'ಗಳೆಂದು ಕರೆಯುವುದುಂಟು. ಚಿದ್ರಸಪ್ರವಾಹ ರೂಪವಾಗಿ ಗೋಚರಿಸಿಕೊಂಡ ಪ್ರಮಾತೃಗಳು ಏಳುಪ್ರಕಾರವಾಗಿ ಅನಂತ ಸಂಖ್ಯೆಯಲ್ಲಿ ಹೊರಹೊಮ್ಮುತ್ತಾರೆ.

"ವಿಗ್ರಹೋ ವಿಗ್ರಹೀ ಚೈವ ಸರ್ವ ವಿಗ್ರಹ ವಿಗ್ರಹೀ"

ಪರಮೇಶ್ವರನಿಗೂ ವಿಶ್ವಕ್ಕೂ ಶರೀರ ಶರೀರಿ ಭಾವವಿದೆ. ವಿಗ್ರಹ, ಶರೀರವೂ ಅವನೇ; ವಿಗ್ರಹಿ ಶರೀರದಲ್ಲಿರುವವನೂ ಅವನೇ. ಸರ್ವ ವಿಗ್ರಹ ವಿಗ್ರಹಿ, ಎಲ್ಲಾ ಶರೀರಗಳಿಗೂ ಶರೀರಿಯೂ ಅವನೇ. ತ್ರಿಶಿರೋಮತದಲ್ಲಿ "ಭೂಮಿ, ನೀರು, ಬೆಂಕಿ ಮೊದಲಾದವುಗಳೆಲ್ಲ ದೇವತಾಸ್ವರೂಪಗಳು. ಅವು ನನ್ನ ಶರೀರವಾಗಿವೆ"[2] ಎಂದು ಶಿವನು ಪಾರ್ವತಿಗೆ ಹೇಳಿದ್ದಾನೆ. ಆಗಮಗಳಲ್ಲಿ ಹೇಳಿರುವ ಯುಕ್ತಿಗಳಿಗನುಸಾರವಾಗಿ ಶಿವನು ಪ್ರಕಾಶರೂಪಿಯಾಗಿಯೂ ವಿಶ್ವಶರೀರಿಯಾಗಿಯೂ ಆಗಿದ್ದಾನೆ; ಕೇವಲ ಆ ಮಾಯಾ ಶಕ್ತಿಯಿಂದ ಸ್ವರೂಪವು ಅಭಿವ್ಯಕ್ತವಾಗದೆ ಇರುವುದರಿಂದ ಸಂಕುಚಿತವಾಗಿರುವ ಹಾಗೆ ತೋರುತ್ತಾನೆ. ವಿಚಾರಮಾಡಿದರೆ ಈ ಸಂಕೋಚವೂ ಕೂಡ ಚಿದೈಕಾತ್ಮಕವಾಗಿಯೇ ತೋರುತ್ತಿರುವುದರಿಂದ ಚಿನ್ಮಯನಾಗಿಯೇ ಇದ್ದಾನೆ. ಈ ದೃಷ್ಟಿಯಿಂದ ಎಲ್ಲಾ ಗ್ರಾಹಕರು ವಿಶ್ವಶರೀರಿಯಾದ ಶಿವರೂಪಿಗಳೇ ಆಗಿರುತ್ತಾರೆ.

ಜೀವನು ಸರ್ವಮಯನೆಂದೂ ಯಾವ ಶಬ್ದಾರ್ಥಗಳ ಮೂಲಕ ನಾವು ಯೋಚಿಸಿದರೂ ಶಿವನಿಲ್ಲದ ಅವಸ್ಥೆಯೇ ಇಲ್ಲವೆಂದೂ ಸ್ಪಂದಶಾಸ್ತ್ರಗಳಲ್ಲಿ ವಿವರಿಸಿ ಶಿವ ಜೀವರುಗಳಲ್ಲಿ ಭೇದವಿಲ್ಲವೆಂದು ಹೇಳಿರುತ್ತಾರೆ. ಈ ತತ್ತ್ವವನ್ನು ವಿಶದವಾಗಿ ತಿಳಿಯುವುದೇ **ಮುಕ್ತಿ**. ಹಾಗೆ ತಿಳಿಯದಿರುವಿಕೆಯೇ **ಬಂಧ**.

---

1. ಅಖ್ಯಾತಿರ್ಯದಿಸಖ್ಯಾತಿಃ ಖ್ಯಾತಿರೇವಾವಶಿಷ್ಯತೆ ।
ಖ್ಯಾತಿ ಚೇತ್ ಖ್ಯಾತಿ ರೂಪತ್ವಾದ್ ಖ್ಯಾತಿರೇವಾವಶಿಷ್ಯತೆ

2. ಸರ್ವ ದೇವಮಯಃ ಕಾಯಃ ತಂ ಚೇದಾನೀಂ ಶೃಣುಪ್ರಿಯೆ ।
ಪೃಥಿವೀ ಕಠಿಣತ್ವೇನ ದ್ರವತ್ವೇಂಭ ಪ್ರಕೀರ್ತಿತಂ ॥

ವಿಕಲ್ಪಮಯನಾದ ಜೀವನು ಗ್ರಾಹಕನು. ಭೇದರೂಪವಾದ ವಿಕಲ್ಪಗಳು ಮನಸ್ಸಿನಿಂದುಂಟಾಗುವವುಗಳು. ಜೀವನಿಗೆ ವಿಕಲ್ಪಗಳನ್ನುಂಟುಮಾಡುವ ಮನಸ್ಸಿನ ಸಂಬಂಧವಿದ್ದರೆ ವಿಕಲ್ಪಗಳಿಲ್ಲದ ಚಿದ್ಘನನಾದ ಶಿವನಾಗುವುದು ಹೇಗೆ ಎಂಬ ಪ್ರಶ್ನೆಯು ಏಳುತ್ತದೆ. ಇದಕ್ಕೆ ಉತ್ತರವಾಗಿ :

ಚಿತಿರೇವ ಚೇತನ ಪದಾದವರೂಢಾ
ಚೈತ್ಯ ಸಂಕೋಚಿನೀ ಚಿತ್ತಂ ॥೫॥

ಚಿತ್ತೀ ಅವರೋಹಣಕ್ರಮದಲ್ಲಿ ತನ್ನ ಚೇತನಸ್ಥಿತಿಯಿಂದಿಳಿದು ಬೇರೆಬೇರೆಯಾಗಿರುವ ಪದಾರ್ಥಗಳನ್ನು ತಿಳಿಯಪಡಿಸುವ ಸಂಕೋಚಾವಸ್ಥೆಯಿಂದ ಚಿತ್ತವಾಗುತ್ತದೆ.

ಚಿತ್ತು ಚಿತ್ತೀ. ಸ್ವಯಂಪ್ರಕಾಶಸ್ಥಿತಿಯಿಂದ ಪದಾರ್ಥಗಳನ್ನು ಸಂಗ್ರಹಿಸುವುದಕ್ಕೋಸ್ಕರ ಇಳಿದು 'ನೀಲ' 'ಸುಖಾ'ದಿ ರೂಪಗಳಾದ ಚೈತ್ಯ (ಪದಾರ್ಥ) ಸಂಕೋಚದಿಂದ ಅಂದರೆ ವಿಕಲ್ಪದಿಂದ ಚಿತ್ತವಾಗಿದೆ. ಚಿತ್ತವೆಂಬುದು ಬೇರೆಯಲ್ಲ. ಆ ಭಗವತಿಯಾದ ಚಿತ್ತೀ ಸ್ವಸ್ವರೂಪವನ್ನು ಮರೆಸಿಕೊಂಡು ಸಂಕುಚಿತವಾದ ವಸ್ತುಗಳನ್ನು ಗ್ರಹಿಸಿದಾಗ ಎರಡು ಸ್ಥಿತಿಗಳನ್ನು ಪಡೆಯುತ್ತದೆ. ಚಿತ್ತು ಯಾವಾಗಲಾದರೂ ಒಂದುಸಲ ಹೊರಹೊಮ್ಮಿರುವ ಸಂಕೋಚವನ್ನು ತಿರಸ್ಕರಿಸಿ ಚಿತ್ಪ್ರಾಧಾನ್ಯದಿಂದಲೇ ಸ್ಫುರಿಸುತ್ತದೆ. ಒಂದೊಂದು ಸಮಯದಲ್ಲಿ ಸಂಕುಚಿತವಾದ ಪದಾರ್ಥಜ್ಞಾನದಿಂದಲೇ ಪ್ರಕಾಶಿಸುತ್ತದೆ. ಚಿತ್ಪ್ರಾಧಾನ್ಯವಾಗಿರುವ ಸ್ಥಿತಿಯಲ್ಲಿ ಸಹಜವಾದ ಪ್ರಕಾಶಮಾತ್ರ ಪ್ರಧಾನವಾಗಿರುತ್ತದೆ. ಹಾಗಿದ್ದರೆ 'ವಿಜ್ಞಾನಾಕಲತ್ವ'ವೆಂಬ ಪ್ರಮಾತೃವಾಗುತ್ತಾನೆಂದು ತಿಳಿಯಬೇಕು. ಪ್ರಕಾಶ ಪರಾಮರ್ಶಮಾತ್ರ ಪ್ರಧಾನವಾಗಿದ್ದರೆ 'ವಿದ್ಯಾ' ಪ್ರಮಾತೃತ್ವವೆಂದು ತಿಳಿಯಬೇಕು. ಅದರಲ್ಲಿಯೂ ಕ್ರಮವಾಗಿ ಸಂಕೋಚವು ಕ್ಷೀಣವಾದರೆ ಈಶ್ವರ, ಸದಾಶಿವ, ಅನಾಶ್ರಿತ, ಶಿವಸ್ಥಿತಿಗಳೆಂದು ತಿಳಿಯಬೇಕು. ಸಮಾಧಿ ಪ್ರಯತ್ನದಿಂದ ಸಾಧಿಸಲ್ಪಟ್ಟ ಚಿತ್ಪ್ರಧಾನತ್ವವು ಶುದ್ಧಾಧ್ವ ಪ್ರಮಾತೃತ್ವವನ್ನು ಪಡೆದು ಕ್ರಮಕ್ರಮವಾಗಿ ತಿಳಿಯಾಗಿ ಮೇಲಕ್ಕೆ ಹೋಗುತ್ತದೆ. ಸಂಕೋಚವು ಪ್ರಧಾನವಾದರೆ ಶೂನ್ಯಾದಿ ಪ್ರಮಾತೃತ್ವವನ್ನು ಪಡೆಯುತ್ತದೆ. ಹೀಗಿರಲಾಗಿ ಚಿತ್ತೀ ಸ್ವಸಂಕೋಚದಿಂದಲೂ ಗ್ರಾಹ್ಯವಿಷಯಗ್ರಹಣ ಸಂಕೋಚದಿಂದಲೂ **ಚಿತ್ತಾವಸ್ಥೆ**ಯನ್ನು ಪಡೆಯುತ್ತದೆ. ಸ್ವತಂತ್ರವಾದ ಚಿಚ್ಛಕ್ತಿಯೇ ಜ್ಞಾನಕ್ರಿಯಾ ಮಾಯಾಶಕ್ತಿರೂಪವಾಗಿ ಪಶುದಶೆಯಲ್ಲಿ ಸಂಕೋಚದ ಪರಿಣತಗಳಿಂದ ಸತ್ವರಜಸ್ತಮಸ್ಸ್ವಭಾವವಾದ ಚಿತ್ತರೂಪವಾಗಿ ಸ್ಫುರಿಸುತ್ತದೆ. ಇದರಿಂದ ವಿಕಲ್ಪದಶೆಯಲ್ಲಿಯೂ ಸಸ್ವರೂಪ ಅವಭಾಸವಿದೆ. ಪರಮಾರ್ಥಾನುಸಾರಿಗಳಿಗೆ ಇದು ತೋರುತ್ತಲೇ ಇರುತ್ತದೆ.

ಚಿತ್ತೀ ಸಂಕೋಚವನ್ನು ಪಡೆದು ಸಂಕುಚಿತವಾದ ಪದಾರ್ಥ ಜ್ಞಾನವನ್ನುಂಟುಮಾಡುತ್ತಿರುತ್ತದೆ. ನಮ್ಮ ಅನುಭವದಲ್ಲಿ ಆಲೋಚನೆಗಳು ಬಗೆಬಗೆಯಾಗಿ ಉಂಟಾಗುತ್ತಿರುತ್ತವೆ. ಮನಸ್ಸಿನ ಯೋಗ್ಯತೆಯು ಒಂದು ವಿಷಯವಾದನಂತರ

ಇನ್ನೊಂದು ವಿಷಯವನ್ನು ಅನುಭವಿಸುವುದೇ ಆಗಿದೆ. ಹೀಗಿದ್ದರೂ ಒಂದೊಂದು ಸಮಯದಲ್ಲಿ ಮನಸ್ಸಿನ ಯಾವ ವಿಧವಾದ ಭಾವನೆಗಳು ಇಲ್ಲದಿರುವಿಕೆಯೂ ಉಂಟು. ಸಾಮಾನ್ಯ ಜನಗಳಿಗೆ ಈ ಸ್ಥಿತಿಯು ಬಹಳಹೊತ್ತು ಇರಲಾರದು. ಆದರೂ ಮಿಂಚಿನಂತೆ ದೇಶ ಕಾಲ ಆಕಾರಗಳ ಸಂಬಂಧವಿಲ್ಲದೆ ತೋರುವ ಒಂದು ಸ್ಥಿತಿಯು ಎಲ್ಲರ ಅನುಭವದಲ್ಲಿದೆ. ಈ ನಿರ್ವಿಕಾರ ಸ್ಥಿತಿಯು ಸಾಮಾನ್ಯರಿಗೆ ಹೆಚ್ಚು ಅನುಭವಕ್ಕೆ ಬಾರದಿದ್ದರೂ ಅವರು ಅನುಭವಿಸುತ್ತಲೇ ಇರುತ್ತಾರೆ. ಸಾಧಕನು ಮನೋಭಾವಗಳಿಲ್ಲದ ನಿರ್ವಿಕಾರ ಸ್ಥಿತಿಯನ್ನು ಅನುಸಂಧಾನ ಮಾಡಿದರೆ ಸಹಜವಾದ ಚಿತ್ಪ್ರಧಾನವಾದ ಅವಸ್ಥೆಯೇ ಆಗುತ್ತದೆ. ಅನುಸಂಧಾನ ಕ್ರಮದಿಂದ ಚಿರಕಾಲ ಅಭ್ಯಾಸ ಮಾಡಿದರೆ ಈತನ ಏಕಾಗ್ರತೆಯು ದೃಢವಾಗಿ ಪ್ರಕಾಶ ಮಾತ್ರವೇ ಪ್ರಧಾನವಾದ 'ವಿಜ್ಞಾನಾಕಲತ್ವ' ಪ್ರಾಪ್ತಿಯಾಗುತ್ತದೆ. ವಿಜ್ಞಾನಾಕಲತ್ವವೆಂದರೆ ಎಲ್ಲಾ ಮನೋಭಾವನೆಗಳೂ ಚಿತ್ತಿನಲ್ಲಿಯೇ ಅಡಗಿದ್ದರೂ ತನ್ನ ಭಾವನಾಬಲದಿಂದ ಚಿನ್ಮಾತ್ರವನ್ನೇ ಅನುಭವಿಸುತ್ತಿರುವ ಸ್ಥಿತಿ. ಕರ್ತೃತ್ವ ಭೋಕ್ತೃತ್ವಗಳು ರಾಗದ್ವೇಷಗಳು ಜೀವನನ್ನು ಕಾಡುತ್ತಿರುವಂತಹ ಗಡಿಬಿಡಿಯಲ್ಲಿಯೂ ತನ್ನ ಸ್ವಪ್ರಯತ್ನದಿಂದ ಅಂದರೆ ಭಾವನಾಬಲದಿಂದ ಎಷ್ಟುಹೊತ್ತು ಸಹಜಾವಸ್ಥೆಯನ್ನು ಹೊಂದುವನೋ ಅಷ್ಟುಹೊತ್ತು ವಿಜ್ಞಾನಾಕಲತ್ವವನ್ನು ಅನುಭವಿಸುವನು. ಇದನ್ನು **ಸಹಜಾವಸ್ಥೆ**ಯೆಂದು ಕರೆಯುವುದೂ ಉಂಟು.

ಸಮಾಧಿ ಪ್ರಯತ್ನಗಳಿಂದ ಸಾಧಕನು ಮನಸ್ಸಿನ ಉಬ್ಬರವಿಳಿತಗಳನ್ನು ತಡೆದು ಚಿತ್ಪ್ರಧಾನವಾದ ಅನುಭವವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾನೆ. ಇಂತಹ ಪ್ರಕಾಶಮಯವಾದ ಸ್ವಭಾವಸಿದ್ಧವಾದ ಸ್ವರೂಪಾನುಸಂಧಾನವೇ ಎಲ್ಲಾ ಸ್ಥಿತಿಯಲ್ಲಿಯೂ ಮುಂದುವರಿದರೆ ವಿದ್ಯಾಪ್ರಮಾತೃತ್ವ ಪ್ರಾಪ್ತಿಯಾಗುತ್ತದೆ. ಇದನ್ನೇ ಶುದ್ಧಾಧ್ವ ಪ್ರಮಾತೃತ್ವವೆಂತಲೂ ಪೂರ್ಣಪ್ರಮಾತೃತ್ವವೆಂತಲೂ ವ್ಯವಹರಿಸುತ್ತಾರೆ. ಇದರಿಂದ ಬದ್ಧಾವಸ್ಥೆಯಲ್ಲಿದ್ದರೂ ಜೀವನಿಗೆ ಒಳಗೆ ಜ್ಞಾನವಿಕಾಸವುಂಟಾಗುತ್ತದೆ. ಇವನ ಸಂಕೋಚವು ಇಂದ್ರಿಯಗಳು ಮನಸ್ಸು ಶರೀರ ಇವುಗಳ ಸಂಬಂಧದಿಂದ ಮಾತ್ರ ಅನುಭವಿಸತಕ್ಕದ್ದಾಗಿದರೂ ಸ್ವತಃ ವಿಕಾಸವನ್ನು ಪಡೆಯುವವನಾಗಿರುತ್ತಾನೆ. ಹೀಗೆಯೇ ಈ ಸಂಕೋಚವು ಕಡಿಮೆಯಾದರೆ ಈಶ, ಸದಾಶಿವ, ಅನಾಶ್ರಿತ ಶಿವ ಮುಂತಾದ ಶುದ್ಧವಿದ್ಯೆಯ ಕೊನೆಯ ಮೆಟ್ಟಿಲನ್ನು ಮುಟ್ಟುತ್ತಾನೆ. ಸಂಚವೇ ಪ್ರಧಾನವಾದರೆ ಅಧೋಮುಖವಾಗಿ ಶೂನ್ಯಾದಿ ಪ್ರಮಾತೃಭಾವಗಳನ್ನು ಪಡೆಯುತ್ತಾ ಕೆಳಕ್ಕಿಳಿಯುತ್ತಾನೆ. ಇಂತಹ ಬದ್ಧಜೀವನು ವಿಚಿತ್ರವಾದ ಅನೇಕ ಜನ್ಮಗಳನ್ನು ಪಡೆಯುತ್ತಾನೆ.

ಚಿಚ್ಛಕ್ತಿಯೇ (ಚಿತ್ತೇ) ಬಾಹ್ಯವಿಷಯಗಳನ್ನು ತಿಳಿಯುವುದಕ್ಕೋಸ್ಕರ 'ನೀಲ' 'ಸುಖ' ಮುಂತಾದ ರೂಪಗಳಿಂದ ಸಂಕುಚಿತವಾಗುತ್ತದೆ. ಹೊರಗಿನ ಪದಾರ್ಥಗಳ ಪರಿಮಿತಿಯನ್ನನುಸರಿಸಿ ತಿಳಿಯುವಂತಹ ಸಂಕೋಚ ಗ್ರಾಹಕತ್ವವು ಒಂದು ಬಗೆ. ಅಂತಃ ಪ್ರಪಂಚವನ್ನು ತಿಳಿಯುವುದಿನ್ನೊಂದು ಬಗೆ. ಅಂದರೆ ಚಿತ್ತು

ಸಂಕೋಚವಾಗಿರುವುದೊಂದು ಚೈತ್ಯ ಸಂಕೋಚವಾಗಿರುವುದೊಂದು ಎಂದು ಎರಡು ವಿಧವಾಗಿ ವಿಂಗಡಿಸಬಹುದು. ಸ್ವತಂತ್ರವಾದ ಚಿತ್ತಿನ **ಜ್ಞಾನಶಕ್ತಿಯು** ಸಂಕೋಚಾವಸ್ಥೆಯಲ್ಲಿ **ಸತ್ತ್ವ**ಗುಣವಾಗಿಯೂ **ಕ್ರಿಯಾಶಕ್ತಿಯು** **ರಜೋ**ಗುಣವಾಗಿಯೂ ಮಾಯಾಶಕ್ತಿಯು ತಮೋಗುಣವಾಗಿಯೂ ಪರಿಣಮಿಸುತ್ತದೆ. ಈ ಮೂರು ಗುಣಗಳ ವ್ಯಾಪಾರವುಳ್ಳದ್ದೇ **ಚಿತ್ತ**. ಇದನ್ನೇ ಸತ್ತ್ವರಜಸ್ತಮೋಗುಣ ಸ್ವಭಾವವುಳ್ಳ ಮನಸ್ಸೆಂದು ಹೇಳುತ್ತೇವೆ. ಒಂದೇಮಾತಿನಲ್ಲಿ ಹೇಳುವುದಾದರೆ **ತ್ರಿಗುಣಮಯವಾದರೆ ಮನಸ್ಸು, ಗುಣರಹಿತವಾಗಿದ್ದರೆ ಚಿತ್ತು**. ಚಿತ್ತವೇ ಬದ್ಧಾತ್ಮಸ್ವರೂಪವೆಂದು ಮುಂದಿನ ಸೂತ್ರವು ತಿಳಿಯಪಡಿಸುತ್ತದೆ.

ತನ್ಮಯೋ ಮಾಯಾ ಪ್ರಮಾತಾ ॥೬॥

ವಿಕಲ್ಪಗಳಿಗೆ ಆಶ್ರಯವಾಗಿರುವ ಚಿತ್ತದಿಂದ ಕೂಡಿರುವಿಕೆಯೇ ಮಾಯಾ ಪ್ರಮಾತೃತ್ವ.

ಬದ್ಧಾತ್ಮನು ಚಿತ್ತಮಯನಾಗಿರುವನು. ಶರೀರ ಪ್ರಾಣ ಇಂದ್ರಿಯಗಳು ಚಿತ್ತಿನ ಸಂಬಂಧವುಳ್ಳವುಗಳಾಗಿವೆ. ಆದರೂ ಚಿತ್ತವೇ ಪ್ರಧಾನವಾಗಿರುತ್ತದೆ. ಶೂನ್ಯ ಭೂಮಿಯೂ ಕೂಡ ಚಿತ್ತವನ್ನಾಶ್ರಯಿಸಿಕೊಂಡು ಚಿತ್ತಸಂಸ್ಕಾರದಿಂದಲೇ ಕೂಡಿರುತ್ತದೆ. ನಿದ್ದೆಯಲ್ಲಿ ಹೇಗೆ ಎಲ್ಲಾ ವೃತ್ತಿಗಳೂ ಶೂನ್ಯವಾಗಿರುವುವೋ ಹಾಗೆ ಬಳಕೆಯಲ್ಲಿಲ್ಲದಿರುವ ಎಲ್ಲಾ ವೃತ್ತಿಗಳೂ ಶೂನ್ಯಭೂಮಿಯಲ್ಲಿ ಸಂಸ್ಕಾರ ರೂಪದಲ್ಲಿರುತ್ತವೆ. ಶೂನ್ಯಭೂಮಿಯೂ ಕೂಡ ಚಿತ್ತವನ್ನಾಶ್ರಯಿಸಿ ಕೊಂಡಿರುವುದರಿಂದಲೇ ಶೂನ್ಯ ಭೂಮಿಯಿಂದ ಎಚ್ಚತ್ತ ಮನುಷ್ಯನು ತನ್ನ ಕೆಲಸಗಳನ್ನು ಮೊದಲಿನಂತೆಯೇ ನಡೆಸಿಕೊಂಡು ಹೋಗುತ್ತಾನೆ. ಹೀಗಿರುವುದರಿಂದಲೇ ಮಾಯಾಪ್ರಮಾತೃವು ಚಿತ್ತಮಯನಾಗಿದ್ದಾನೆ. ಈ ಅಭಿಪ್ರಾಯದಿಂದಲೇ ಶಿವಸೂತ್ರಗಳಲ್ಲಿ ಮೊದಲು **ಚೈತನ್ಯಮಾತ್ಮಾ** (ಶುದ್ಧಾತ್ಮಾ) ಎಂದು ಹೇಳಿ ಮಾಯಾಪ್ರಮಾತೃ ಲಕ್ಷಣಗಳನ್ನು ಹೇಳುವಾಗ **ಚಿತ್ತಮಾತ್ಮಾ**(ವಿಕಲ್ಪಗಳಿಗಾಶ್ರಯವಾದ ಚಿತ್ತದಿಂದ ಕೂಡಿರುವವನು)ಎಂದು ಹೇಳಲ್ಪಟ್ಟಿದೆ. ಈ ವಿಷಯವನ್ನು ತಾತ್ತ್ವಿಕವಾಗಿ ತಿಳಿದರೆ ಮುಕ್ತಿ. ತಪ್ಪಾಗಿ ತಿಳಿದುಕೊಂಡರೆ ಬಂಧ.

ಮನಸ್ಸು ಸತ್ತ್ವ ರಜಸ್ತಮೋಗುಣಗಳಿಂದ ಕೂಡಿದ್ದಾಗಿರುತ್ತದೆ. ಸತ್ತ್ವವೆಂದರೆ ಪ್ರಕಾಶ, ಸ್ವಚ್ಛವಾದ ತಿಳಿವಳಿಕೆ, ಇದ್ದದ್ದನ್ನು ಇದ್ದಹಾಗೆ ತೋರಿಸುವುದು. ರಜಸ್ಸೆಂದರೆ ಚಲನಶಕ್ತಿಯಿಂದ ಕೂಡಿ, ಚಾಂಚಲ್ಯಕ್ಕೆ ಕಾರಣವಾದದ್ದು. ತಮಸ್ಸೆಂದರೆ ಇದ್ದದ್ದನ್ನು ಇದ್ದಹಾಗೆ ಕಾಣಿಸದೆ ಪ್ರಮಾದ ಮೋಹ ಮೊದಲಾದವುಗಳಿಗೆ ಆಶ್ರಯವಾದದ್ದು. ಈ ಮೂರು ಗುಣಗಳಲ್ಲಿ ಯಾವುದು ಉದ್ರಿಕ್ತವಾಗಿರುವುದೋ ಅದು ಮಿಕ್ಕ ಎರಡು ಗುಣಗಳನ್ನು ಆವರಿಸಿಕೊಂಡಿರುತ್ತದೆ. ಈ ಗುಣಗಳಿಂದ ಕೂಡಿದ ಮನೋಭಾವನೆ ಹೇಗಿದ್ದರೆ ವ್ಯಕ್ತಿಯೂ ಅಂತಹವನೆಂದೇ ತಿಳಿಯಬಹುದು. ಬುದ್ಧಿ, ಅಹಂಕಾರ, ಅಧ್ಯವಸಾಯ ಇವು ಮೂರು ಮನಸ್ಸಿನ ವ್ಯಾಪಾರಗಳು. ಸಾಮಾನ್ಯವಾದ ತಿಳಿವಳಿಕೆಯೇ ಬುದ್ಧಿ.

ನಾನು ಎಂಬ ಭೇದಭಾವವೇ ಅಹಂಕಾರ. ಇದು ಹೀಗೆ ಎಂದು ನಿರ್ಣಯಿಸುವುದೇ ಅಧ್ಯವಸಾಯ. ಇವು ಮೂರು ಮನೋಧರ್ಮಗಳು.

ಐದು ಜ್ಞಾನೇಂದ್ರಿಯಗಳು ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸು ಈ ಹನ್ನೊಂದೂ ಜೀವನನ್ನು ಜನ್ಮಾಂತರಗಳಲ್ಲಿಯೂ ಅನುಸರಿಸಿಕೊಂಡು ಬರುತ್ತವೆಂದು ಶಾಸ್ತ್ರಜ್ಞರು ಹೇಳುತ್ತಾರೆ. ಇದರಿಂದಲೇ ಪ್ರತಿಯೊಂದು ವ್ಯಕ್ತಿಯ ಸಂಸ್ಕಾರಗಳು ಬೇರೆ ಬೇರೆಯಾಗಿರುತ್ತವೆ. ಮನಸ್ಸಿಲ್ಲದೆ (ಚಿತ್ತವಿಲ್ಲದೆ) ಜೀವನು ಶರೀರದಲ್ಲಿ ಬದುಕಿರಲು ಸಾಧ್ಯವಿಲ್ಲ. ಶರೀರವಿಲ್ಲದಿದ್ದರೆ ಪ್ರಾಣಶಕ್ತಿಯು ಕೆಲಸಮಾಡಲಾರದು. ಅಂದರೆ ಪ್ರಾಣ ಶಕ್ತಿಗೆ ಶರೀರ ಆಶ್ರಯ. ಶರೀರ ಮತ್ತು ಪ್ರಾಣ ಮೊದಲಾದವುಗಳ ಸಂಬಂಧವನ್ನು ಚಿತ್ತ ಅಥವಾ ಮನಸ್ಸು ಕಲ್ಪಿಸುವಂಥಾದ್ದು. ನಿದ್ದೆ, ಮೂರ್ಛೆ ಮೊದಲಾದ ಶೂನ್ಯಸ್ಥಿತಿ ಗಳಲ್ಲಿಯೂ ಮನಸ್ಸಿನ ಸಂಸ್ಕಾರಗಳು ಅಚ್ಚಳಿಯದೆ ಇರುತ್ತವೆ. ಆದುದರಿಂದಲೇ ಎಚ್ಚತ್ತ ಅನಂತರ ಹಿಂದಿನ ನೆನಪುಗಳುಂಟಾಗುತ್ತವೆ. ಹೀಗಿರುವುದರಿಂದಲೇ ನಿರ್ಮಲ ನಾದ ಚಿನ್ಮಯನು ಕಶ್ಮಲವಾದ ಚಿತ್ತಮಯನಾದ ಮಾಯಾಪ್ರಮಾತೃವಾಗಿರುವ ನೆಂದು ಶಿವಸೂತ್ರಗಳಲ್ಲಿ ಹೇಳಲ್ಪಟ್ಟಿದೆ. ನಿರ್ಮಲನಾದ ಚಿನ್ಮಯನಿಗೆ ಚಾಂಚಲ್ಯ, ಸಂಚಾರ ಮೊದಲಾದ ಗುಣತ್ರಯಗಳಿಲ್ಲ. ಆದರೂ ಆ ಚಿನ್ಮಯನು ತನ್ನ ಸ್ವರೂಪ ವನ್ನು ತಿಳಿಯದೆ ಹೋಗುವ ಅಖ್ಯಾತಿಯಿಂದ ಸತ್ವರಜಸ್ತಮೋವೃತ್ತಿಗಳನ್ನನುಭವಿಸು ತ್ತಾನೆ. ಇದರ ಪರಿಣಾಮವೇ **ಕರ್ಮ** ಮತ್ತು **ಕರ್ಮಪ್ರವಾಹ.** ಆ ಮನೋ ಮಯನೇ ಮಾಯಾಪ್ರಮಾತಾ

ಸಚೈಕೋದ್ವಿರೂಪಃ ತ್ರಿಮಯಃ ಚತುರಾತ್ಮಾ ಸಪ್ತಪಂಚಕ ಸ್ವಭಾವಃ ॥೭॥

ಶಿವಭಟ್ಟಾರಕನೊಬ್ಬನೇ ಎರಡು ರೂಪಗಳಿಂದಲೂ ಮೂರು ಮಲಗಳಿಂದಲೂ ಶೂನ್ಯ, ಪ್ರಾಣ, ಪುರ್ಯಷ್ಟಕ, ಶರೀರ ಎಂಬ ನಾಲ್ಕು ವಿಭಾಗಗಳುಳ್ಳವನಾಗಿಯೂ ಏಳುಪ್ರಮಾತೃಗಳ ರೂಪವಾಗಿಯೂ, ಐದು ಶಕ್ತಿಗಳುಳ್ಳವನಾಗಿಯೂ, ಮೂವತ್ತೈದು ತತ್ತ್ವರೂಪಿಯಾಗಿಯೂ ಇದ್ದಾನೆ.

ಹಿಂದೆ ನಿರ್ಣಯಿಸಿದಂತೆ ಶಿವಭಟ್ಟಾರಕನೊಬ್ಬನೇ ದೇಶಕಾಲ ಅಕಾರಾದಿ ಭೇದ ಗಳಿಲ್ಲದೆ **ಪ್ರಕಾಶರೂಪಿ**ಯಾಗಿದ್ದಾನೆ. ಆ ಮಹಾಪ್ರಕಾಶವೇ ತನ್ನ ಸ್ವಾತಂತ್ರ್ಯ ದಿಂದ ಪ್ರಾಣದೇಹಾದಿಸಂಕೋಚ ಸ್ಥಿತಿಯನ್ನು ಅಂಗೀಕರಿಸಿ ಸಂಕುಚಿತ ಗ್ರಾಹಕತ್ವ ವನ್ನು ಅನುಭವಿಸುತ್ತದೆ. ಜಡಪದಾರ್ಥಕ್ಕೆ ಗ್ರಾಹಕತ್ವವಿಲ್ಲ. ಶಿವಭಟ್ಟಾರಕನೇ ಸಂಕೋಚಸ್ಥಿತಿ ವಿಕಾಸಸ್ಥಿತಿ ಎಂಬ ಎರಡು ಅವಸ್ಥೆಗಳುಳ್ಳವನಾಗಿರುವುದರಿಂದ **ದ್ವಿರೂಪಿ**ಯಾಗಿದ್ದಾನೆ. ಆಣವ ಮಾಯೀಯ ಕಾರ್ಮಮಲಗಳಿಂದ ಕೂಡಿರುವುದರಿಂದ **ತ್ರಿಮಯ**ನಾಗಿದ್ದಾನೆ. ಶೂನ್ಯ, ಪ್ರಾಣ, ಪುರ್ಯಷ್ಟಕ, ಶರೀರ ಈ ನಾಲ್ಕು ವಿಭಾಗಗಳ ನ್ನೊಳಗೊಂಡಿರುವುದರಿಂದ **ಚತುರಾತ್ಮ**ನಾಗಿದ್ದಾನೆ. ಶಿವನ ಮೊದಲ್ಗೊಂಡು

ಪೃಥ್ವೀವರೆಗೂ ಇರುವ ಮೂವತ್ತೈದು ತತ್ತ್ವರೂಪಿಯಾಗಿಯೂ ಹಾಗೆಯೇ 'ಶಿವನ' ಮೊದಲು 'ಸಕಲ'ರ ವರೆಗೂ ಇರುವ ಸಪ್ತಪ್ರಮಾತೃರೂಪಿಯಾಗಿಯೂ ಇದ್ದಾನೆ. ಚಿತ್ತಿನ ಚಿಚ್ಛಕ್ತಿ ಆನಂದಶಕ್ತಿ ಇಚ್ಛಾಜ್ಞಾನಕ್ರಿಯಾಶಕ್ತಿಗಳು ಅಖ್ಯಾತಿಯಿಂದ ಪಂಚ ಕಂಚುಕಗಳಾಗಿರುವುದರಿಂದ ಪಂಚಕಸ್ವರೂಪವುಳ್ಳವನಾಗಿರುತ್ತಾನೆ. ಒಬ್ಬನಾದ ಶಿವನೇ ಮೂವತ್ತೈದು ತತ್ತ್ವಮಯನಾಗಿಯೂ ಏಳುಪ್ರಮಾತೃಗಳ ಭಾವದಿಂದಿರುವವ ನಾಗಿಯೂ ಚಿದಾದಿಪಂಚಶಕ್ತಿಗಳಿಂದ ಕೂಡಿರುವನಾಗಿಯೂ ಇರುವನೆಂದು ಸಾಧಕನು ಗುರುತಿಸಿದರೆ ಅಥವಾ ಸಾಕ್ಷಾತ್ಕರಿಸಿದರೆ ಆಗ ಶಿವನು ಮೋಕ್ಷಪ್ರದನಾಗುತ್ತಾನೆ. ಇಲ್ಲದಿದ್ದರೆ ಬಂಧದಿಂದ ಸಂಸಾರಕ್ಕೆ ಕಾರಣನಾಗುತ್ತಾನೆ.

ಇದುವರೆಗೂ ಚಿದ್ರೂಪಿಯಾದ 'ಶಿವಭಟ್ಟಾರಕ'ನೊಬ್ಬನೇ ವಿಶ್ವಾತ್ಮಕ ನಾಗಿಯೂ ವಿಶ್ವಾತೀತನಾಗಿಯೂ ಇದ್ದಾನೆಂದು ವಿವರಿಸಿದ್ದಾಯಿತು. ಜಡಚೇತನ ಎಂಬ ವಿಭಾಗವು ಎಲ್ಲರ ಅನುಭವದಲ್ಲಿಯೂ ಇದೆ. ಇನ್ನೊಂದರ ಸಹಾಯವಿಲ್ಲದೆ ತನ್ನಷ್ಟಕ್ಕೆ ತಾನೇ ಬೆಳಗುವುದು "ಚೇತನ". ಇದನ್ನೇ ಸ್ವಯಂಪ್ರಕಾಶವೆನ್ನುತ್ತಾರೆ. ಇಲ್ಲಿ ದೇಶಪರಿಮಿತಿಯಿಲ್ಲ. ಭೂತ ಭವಿಷ್ಯದ್ವರ್ತಮಾನಕಾಲಗಳಿಂದ ವ್ಯತ್ಯಾಸವಾಗಲಿ ಸಂಕೋಚ ವಿಸ್ತಾರರೂಪವಾದ ವ್ಯವಸ್ಥೆಯಾಗಲಿ ಇಲ್ಲ. ಇದು ಯಾವಾಗಲೂ ಗ್ರಾಹಕವಾಗಿರುತ್ತದೆ. ಸ್ವರೂಪವಿಮರ್ಶನ ದಶೆಯಲ್ಲಿ ತಾನೇ ಗ್ರಾಹ್ಯವಾಗಿಯೂ ಗ್ರಾಹಕವಾಗಿಯೂ ಇರುತ್ತದೆ. ಹೇಗೆಂದರೆ ದೀಪವು ಇತರ ಪದಾರ್ಥಗಳನ್ನು ತೋರಿಸುತ್ತದೆ. ಆದರೆ ಆ ದೀಪವನ್ನು ತೋರಿಸುವುದಕ್ಕೆ ಇನ್ನೊಂದು ದೀಪದ ಆವಶ್ಯ ಕತೆಯಿಲ್ಲ. ಇದೇ ರೀತಿಯಾಗಿ ಚಿತ್ತು ತನ್ನನ್ನೇ ತಾನು ಪರಾಮರ್ಶಿಸುವ ಸ್ಥಿತಿಯಲ್ಲಿ ಗ್ರಾಹ್ಯವೂ ಗ್ರಾಹಕವೂ ಆಗಿರುತ್ತದೆ. ಜಡಪದಾರ್ಥವು ದೇಶ ಕಾಲ ಆಕಾರಾದಿಗಳಿಂದ ನಿಯಮಿತವಾಗಿ ಯಾವಾಗಲೂ ಗ್ರಾಹ್ಯವಾಗಿಯೇ ಇರುತ್ತದೆ. ಪೂರ್ಣಪ್ರಕಾಶರೂಪ ವಾದ ಚಿತ್ತೇ ಸ್ವಾತಂತ್ರ್ಯಶಕ್ತಿಯಿಂದ ಸಂಕುಚಿತವಾದ ಪ್ರಮಾಣ ಪ್ರಮೇಯ ವ್ಯವಹಾರವನ್ನು ನಡೆಸುತ್ತದೆ. ಈ ರೀತಿಯಾಗಿ ಪಶುತ್ವವನ್ನು ಪಡೆಯುವ ಸ್ಥಿತಿಯೇ **ಅಲ್ಪಾಹಂತ** ಎಂತಲೂ **ಮಿತಪ್ರಮಾತೃತ್ವ** ಎಂತಲೂ ಕರೆಯಲ್ಪಡುತ್ತದೆ. ಪೂರ್ಣ ಪ್ರಕಾಶಸ್ಥಿತಿಯನ್ನು **ಪೂರ್ಣಾಹಂತಾ** ಎಂತಲೂ **ಪರಪ್ರಮಾತೃತ್ವ** ಎಂತಲೂ ಕರೆಯುತ್ತಾರೆ. ಇವೆರಡೇ ಮೇಲೆ ಹೇಳಿದ ದ್ವಿರೂಪಗಳು. ಪರಪ್ರಮಾತೃವು ಆಣವಾದಿ ಮೂರು ಮಲಗಳಿಂದಲೂ ಶೂನ್ಯಪ್ರಾಣಾದಿ ನಾಲ್ಕು ತತ್ತ್ವಗಳಿಂದಲೂ ಕೂಡಿದಾಗ ಮಿತಪ್ರಮಾತೃವಾಗುತ್ತಾನೆ. ವಿಶ್ವವನ್ನು ಸೃಷ್ಟಿಮಾಡಬೇಕೆನ್ನುವ ಸಂಕಲ್ಪದಿಂದ ಸ್ವಸ್ವರೂಪವನ್ನು ಮರೆಯಿಸಿಕೊಳ್ಳುವಿಕೆಯೇ **ಆಣವ** ಮಲ.[1] ಅಶುದ್ಧಾಧ್ವದಲ್ಲಿ ಷಟ್ಕಂಚುಕಗಳಿಂದ ತನ್ನ ನಿಜಸ್ಥಿತಿಯನ್ನು ಲುಪ್ತಮಾಡಿಕೊಂಡು ಭೌತಿಕದೇಹ

---

1 ಗೋಪಿತ ಸ್ವಮಹಿಮ್ನೋಽಸ್ಯ ಸಂಮೋಹಾದ್ವಿಸ್ಮೃತಾತ್ಮನಃ ।
ಯಃ ಸಂಕೋಚಃ ಸ ಏವಾಸ್ಮಿನ್ನಾಣವೋಮಲ ಉಚ್ಯತೇ ॥

ದಲ್ಲಿರುವಿಕೆಯೇ **ಮಾಯಿಾಯಮಲ.**[2] ಕ್ರಿಯಾಶಕ್ತಿಸಂಕೋಚದಿಂದ ಅಂತಃಕರಣ ಬುದ್ಧಿಕರ್ಮೇಂದ್ರಿಯಗಳಿಂದ ಇಂದ್ರಿಯಗಳಿಗಧೀನನಾಗಿ ಕರ್ಮಗಳಲ್ಲಿ ತೊಡಗಿರುವಿಕೆಯೇ **ಕಾರ್ಮಿಕಮಲ.**[3] ಮಿತಪ್ರಮಾತೃವು ಇವು ಮೂರು ಮಲಗಳಿಂದಲೂ ಕೂಡಿರುತ್ತಾನೆ.

ಈಶ್ವರನು ತನ್ನ ಮಹಿಮೆಯನ್ನು ಬಚ್ಚಿಟ್ಟುಕೊಂಡದ್ದರಿಂದ ಸಂಮೋಹ ಬಂದಿತು. ತನ್ನ ಸ್ವರೂಪವನ್ನು ಮರೆತನು. ಇದರಿಂದ ಸಂಕೋಚವಾಯಿತು. ಇದೇ ಆಣವಮಲ.

ಕಾಲ ನಿಯತಿ ರಾಗ ಕಲಾ ವಿದ್ಯಾ ಮಾಯಾ ಇವುಗಳ ವ್ಯಾಪ್ತಿಯಿಂದ ಸ್ವಸ್ವರೂಪಕ್ಕೆ ಹಾನಿಬಂದಿತು. ಭೂತದೇಹಗಳಲ್ಲಿ ಇರುವಿಕೆಯಾಯಿತು. ಇದೇ ಮಾಯಿಯ ಮಲ.

ಅಂತಃಕರಣಕ್ಕೆ ಅಧೀನವಾಗಿ ಬುದ್ಧಿ ಕರ್ಮೇಂದ್ರಿಯಗಳಿಂದ ಹೊರಗಿನ ಪ್ರಪಂಚದಲ್ಲಿ ಏನು ಕೆಲಸ ನಡೆಯುತ್ತದೆಯೋ ಅದೇ ಕಾರ್ಮಿಕಮಲ.

ಇನ್ನು ನಾಲ್ಕು ತತ್ತ್ವಗಳ ವಿಚಾರ. ಶೂನ್ಯ, ಪ್ರಾಣ, ಪುರ್ಯಷ್ಟಕ, ಶರೀರ ಇವುಗಳು ಚತುರಾತ್ಮಗಳೆನಿಸಿಕೊಂಡಿವೆ. ಶೂನ್ಯವೆಂದರೆ ಮನೋಭಾವಗಳಿಲ್ಲದ ಚಿತ್ತು. ಪ್ರಾಣಶಕ್ತಿಯೆಂದರೆ ಶರೀರಧಾರಣ ಪ್ರೇರಣ ಚಲನಗಳಿಗೆ ಕಾರಣವಾಗಿರುವ ಶಕ್ತಿ. ಪುರ್ಯಷ್ಟಕವೆಂದರೆ ಐದು ತನ್ಮಾತ್ರಗಳೂ ಮನಸ್ಸು ಬುದ್ಧಿ ಅಹಂಕಾರಗಳೂ ಸೇರಿದ ಎಂಟು ತತ್ತ್ವಗಳಿಂದ ಕೂಡಿರುವ ಗ್ರಂಥಿರೂಪವಾಗಿರುವ ಒಂದು ಸೂಕ್ಷ್ಮತತ್ತ್ವ. ನಾಲ್ಕನೆಯದು ಪಾಂಚಭೌತಿಕವಾದ ಶರೀರ. ಮಿತ್ರಪ್ರಮಾತೃವು ಈಗ ವಿವರಿಸಿದ ನಾಲ್ಕು ಅಂಶಗಳಿಂದ ಕೂಡಿದವನಾಗಿರುತ್ತಾನೆ.

ಇನ್ನು ಸಪ್ತಪಂಚಕ ಸ್ವಭಾವದ ವಿಚಾರ. ಇಲ್ಲಿ ಸಪ್ತ ಎಂದರೆ ಮೇಲೆ ಹೇಳಿದ ಸಪ್ತಪ್ರಮಾತೃಗಳು. ಪಂಚಕ ಎಂದರೆ ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾರೂಪವಾದ ಐದು ಶಕ್ತಿಗಳು. ಇವೇ ಶಕ್ತಿಗಳೇ ಅಖ್ಯಾತಿಬಲದಿಂದ ಕ್ರಮೇಣ ಕಲಾ ವಿದ್ಯಾ ರಾಗ ಕಾಲ ನಿಯತಿ ಎಂಬ ಪಂಚಕಂಚುಕಗಳಾಗುತ್ತವೆ. ಸಪ್ತ (ಏಳು) × ಪಂಚಕ (ಐದು)=ಮೂವತ್ತೈದು ತತ್ತ್ವಗಳು. ಮೊದಲನೆಯದಾದ ಶಿವತತ್ತ್ವವನ್ನು ಸೇರಿಸಿದರೆ ಮೂವತ್ತಾರು ತತ್ತ್ವಗಳಾಗುತ್ತವೆ. ಇವೆಲ್ಲವೂ ಪರಮಶಿವನ ಐಶ್ವರ್ಯವಾಗಿವೆ. ಆ ಪರಮಶಿವನೇ ವಿಶ್ವರೂಪಿಯಾಗಿ ಪ್ರಕಾಶಿಸುತ್ತಿದ್ದಾನೆ. ಈಗ ವಿವರಿಸಿರುವ ಭೇದಗಳನ್ನೂ ಅವುಗಳಲ್ಲಿರುವ ಅವಾಂತರ ಭೇದಗಳನ್ನೂ ತಿಳಿದು ಈ ಭಿನ್ನವಾದ ತತ್ತ್ವಗಳು

---

[2] ಷಟ್ಕಂಚುಕ ವ್ಯಾಪ್ತಿ ವಶಾದ್ವಿಲೋಪಿತ ನಿಜಸ್ಥಿತೇಃ ।
ಭೂತದೇಹಸ್ಥಿತಿರ್ಯಾಸೌ ಮಾಯಿಾಯೋ ಮಲ ಉಚ್ಯತೇ ॥

[3] ಯದಂತಃ ಕರಣಾಧೀನ ಬುದ್ಧಿ ಕರ್ಮೇಂದ್ರಿಯಾದಿಭಿಃ ।
ಬಹಿರ್ವ್ಯಾಪ್ರಿಯತೇ ಕಾರ್ಮಂ ಮಲಮೇತಸ್ಯ ತನ್ಮತಂ ॥

ಚಿಚ್ಛಕ್ತಿಯ ವಿಕಾಸವೆಂದರಿತರೆ ಮುಕ್ತಿಗೆ ಕಾರಣವಾಗುತ್ತದೆ. ಇವುಗಳ ಸ್ವರೂಪ ಸ್ವಭಾವಗಳನ್ನು ತಿಳಿಯದಿದ್ದರೆ ಬಂಧ.

ತದ್ಭೂಮಿಕಾಃ ಸರ್ವದರ್ಶನಸ್ಥಿತಯಃ ॥೮॥

ಆ ಪರಮೇಶ್ವರನು ನಟನ ಹಾಗೆ ಅನೇಕ ವೇಷಗಳನ್ನಭಿನಯಿಸುತ್ತಾನೆ. ಎಲ್ಲಾ ದರ್ಶನಗಳೂ ಆ ಪರಮೇಶ್ವರನ ಭೂಮಿಕೆಗಳನ್ನೇ ಹೇಳುತ್ತವೆ.

ದಾರ್ಶನಿಕರು ವಿಶ್ವವನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನಿರೂಪಿಸಿರುತ್ತಾರೆ. ಅವರ ನಿರ್ಣಯಗಳನ್ನು ಈ ಪ್ರತ್ಯಭಿಜ್ಞಾದರ್ಶನದ ತತ್ತ್ವಕ್ರಮಕ್ಕೆ ಹೋಲಿಸಿ ನೋಡಿದರೆ ದಾರ್ಶನಿಕರ ಸಿದ್ಧಾಂತಗಳಿಗೂ ಈ ತತ್ತ್ವಕ್ರಮಕ್ಕೂ ಇರುವ ಸಾಮ್ಯವು ಕಂಡುಬರುತ್ತದೆ.

ಚಾರ್ವಾಕರು ಚೈತನ್ಯದಿಂದ ಕೂಡಿದ ಶರೀರವೇ ಆತ್ಮವೆನ್ನುವರು. ನೈಯ್ಯಾಯಿಕರೇ ಮೊದಲಾದವರು ಆತ್ಮನು ಜ್ಞಾನಾದಿ ಎಂಟುಗುಣಗಳಿಗಾಶ್ರಯನಾಗಿರುತ್ತಾನೆಂದೂ ಸಂಸಾರಾವಸ್ಥೆಯಲ್ಲಿ ಪ್ರತ್ಯಭಿಜ್ಞಾದರ್ಶನದ ಬುದ್ಧಿತತ್ತ್ವಕ್ಕೆ ಸಮನಾಗಿಯೂ ಮೋಕ್ಷದಲ್ಲಿ ಗುಣಶೂನ್ಯನಾಗಿಯೂ ಇರುತ್ತಾನೆಂದು ಹೇಳುತ್ತಾರೆ. ಮೀಮಾಂಸಕರು 'ನಾನು' ಎಂಬ ರೂಢಿಯಿಂದಲೇ ತಿಳಿಯಲ್ಪಡತಕ್ಕವನಾಗಿದ್ದು ಸುಖ ದುಃಖ ಮೊದಲಾದ ಉಪಾಧಿಗಳಿಂದ ಮರೆಮಾಚಲ್ಪಟ್ಟವನೇ ಆತ್ಮನೆನ್ನುವರು. ಜ್ಞಾನ ಸಂತಾನವೇ ತತ್ತ್ವವೆಂದು ಬೌದ್ಧರು ಹೇಳುತ್ತಾರೆ. ಇವರುಗಳೆಲ್ಲಾ ಬುದ್ಧಿವೃತ್ತಿಗಳನ್ನೇ ಹೇಳಿದ ಹಾಗಾಯಿತು.

ಕೆಲವು ವೇದಾಂತಿಗಳು ಪ್ರಾಣವನ್ನೇ ಆತ್ಮವೆನ್ನುತ್ತಾರೆ. ಅಭಾವ ಬ್ರಹ್ಮವಾದಿಗಳು ಮೊದಲು 'ಅಸತ್' ಎಂದರೆ ವಿಶ್ವವು ಅಭಾವ ರೂಪವಾಗಿತ್ತೆಂದು ಶೂನ್ಯಭೂಮಿಯನ್ನೇ ಹೇಳುತ್ತಾರೆ. ಮಾಧ್ಯಮಿಕರು (ಬೌದ್ಧರಲ್ಲಿ ಒಂದು ಸಂಪ್ರದಾಯದವರು) ಅಭಾವ ಬ್ರಹ್ಮವಾದಿಗಳು ಹೇಳಿದಂತೆಯೇ ಹೇಳುತ್ತಾರೆ. ಪಾಂಚರಾತ್ರರು ಪರಾಪ್ರಕೃತಿಯು ವಾಸುದೇವನೆಂದೂ ಅವನ ಅಂಶಗಳೇ ಜೀವರುಗಳೆಂದೂ ಹೇಳಿ ಪರಾಪ್ರಕೃತಿಗೆ ಪರಿಣಾಮವನ್ನು ಒಪ್ಪಿರುವುದರಿಂದ ಅವ್ಯಕ್ತತತ್ತ್ವಸ್ಥಿತಿಯನ್ನೇ ಹೇಳಿದ ಹಾಗಾಯಿತು. ಸಾಂಖ್ಯರೇ ಮೊದಲಾದವರು ಪ್ರತ್ಯಭಿಜ್ಞಾಸಂಪ್ರದಾಯದ ವಿಜ್ಞಾನಾಕಲರಿಗೆ ಸಮಾನವಾದ ಸ್ಥಿತಿಯನ್ನವಲಂಬಿಸಿರುತ್ತಾರೆ. ಮೊದಲು ಈ ವಿಶ್ವವು ಸದ್ರೂಪವಾಗಿತ್ತೆಂದು ಕೆಲವು ವೇದಾಂತಿಗಳು ಹೇಳುತ್ತಾರೆ. 'ಈಶ್ವರತತ್ತ್ವ'ವು ಶಬ್ದಬ್ರಹ್ಮಮಯವಾಗಿ ಪಶ್ಯಂತೀರೂಪವಾಗಿರುವುವೆಂದು ವೈಯ್ಯಾಕರಣರ ಮತ. ಇವರು ಪ್ರತ್ಯಭಿಜ್ಞಾದರ್ಶನದ 'ಸದಾಶಿವತತ್ತ್ವ' ಸ್ಥಿತಿಯನ್ನೇ ಒಪ್ಪಿರುತ್ತಾರೆ. ಇದಲ್ಲದೆ ಆತ್ಮತತ್ತ್ವವು ವಿಶ್ವೋತ್ತೀರ್ಣವಾದುದೆಂದು ತಾಂತ್ರಿಕರು ಹೇಳುತ್ತಾರೆ. ಕುಲಸಂಪ್ರದಾಯದ ಆಮ್ನಾಯ ಪಂಡಿತರು ಆತ್ಮತತ್ತ್ವವು ವಿಶ್ವಮಯವಾಗಿದೆ ಎನ್ನುತ್ತಾರೆ. ತ್ರಿಕಾದಿ ದಾರ್ಶನಿಕರು ಪರಮಾತ್ಮನು ವಿಶ್ವೋತ್ತೀರ್ಣನಾಗಿಯೂ ವಿಶ್ವಾತ್ಮಕನಾಗಿಯೂ

ಇದ್ದಾನೆಂದು ಹೇಳುತ್ತಾರೆ. ದಾರ್ಶನಿಕರ ದೃಷ್ಟಿಗಳು ಬೇರೆ ಬೇರೆಯಾಗಿದ್ದರೂ ಇವುಗಳೆಲ್ಲಾ ವ್ಯಾಪಿಸಿರುವವನು ಆ ಪರಮೇಶ್ವರನೊಬ್ಬನೇ ಎಂದು ತಿಳಿಯಬೇಕು. ಏತ ದೃಷ್ಟಿಯುಳ್ಳವರು ಈಗ ಮೇಲೆ ಹೇಳಿದ ಒಬ್ಬೊಬ್ಬ ದಾರ್ಶನಿಕರ ಸಿದ್ಧಾಂತಗಳಲ್ಲಿ ಅಭಿನಿವೇಶವುಳ್ಳವರಾಗಿರುತ್ತಾರೆ ಅಥವಾ ಅಭಿಮಾನವನ್ನು ಪಡೆದವರಾಗಿರುತ್ತಾರೆ. ಹೀಗೆ ಚಿದಾತ್ಮಕನಾದ ಭಗವಂತನ ಸ್ವಾತಂತ್ರ್ಯಶಕ್ತಿಯಿಂದ ಹೊರಹೊಮ್ಮಿರುವ ಈ ದಾರ್ಶನಿಕರ ದೃಷ್ಟಿಯು ಬೇರ ಬೇರೆಯಾಗಿದ್ದರೂ ಇವುಗಳಲ್ಲಿ ಕಂಡುಬರುವ ವ್ಯತ್ಯಾಸಗಳು ಸ್ವಾತಂತ್ರ್ಯಶಕ್ತಿಯ ಉನ್ಮೇಷ ನಿಮೇಷಗಳ ತಾರತಮ್ಯಗಳಿಂದುಂಟಾದುವುಗಳೆಂದು ತಿಳಿಯಬೇಕು. ಸರ್ವವ್ಯಾಪಿಯಾಗಿ ಗೋಚರಿಸುವ ಆ ಪರಮಾತ್ಮನಲ್ಲಿ ತ್ರಿಕಸಂಪ್ರದಾಯದಂತೆ ಶ್ರದ್ಧೆಯುಂಟಾಗಬೇಕಾದರೆ ಪರಮಶಿವನ ಶಕ್ತಿಪಾತವಾಗಬೇಕು.

ಎಲ್ಲಾ ಬಾಹ್ಯವಿಷಯಜ್ಞಾನಗಳಿಗೂ ಸಂಸ್ಕಾರರೂಪವಾದ ಸ್ಥಿತಿಯುಂಟು. ಈ ಸಂಸ್ಕಾರವು ಚಿತ್ತಿನಲ್ಲಿ ಅಂತರ್ಮುಖವಾಗಿ ವಿಶ್ರಾಂತಿಯನ್ನು ಪಡೆಯುತ್ತದೆ. ಚಿದಾನಂದಘನನಾಗಿರುವ ಆತ್ಮನು ಒಳಗೆ ವಿಶ್ರಾಂತವಾಗಿರುವ ಈ ವಿಷಯಜ್ಞಾನಗಳನ್ನು ಹೊರಹೊಮ್ಮಿಸುತ್ತಾನೆ. ಪುನಃ ಉಪಸಂಹರಿಸುತ್ತಾನೆ. ಒಳಗೆ ಪ್ರಶಾಂತವಾದ ವಿಲೀನಸ್ಥಿತಿಯೇ (ಮುಳುಗಿರುವಿಕೆಯೇ) ಮುಂದಿನ ಹೊರಹೊಮ್ಮುವಿಕೆಗೆ ಕಾರಣವಾಗಿರುತ್ತದೆ. ವಿಷಯಗಳ ಹೊರಹೊಮ್ಮುವಿಕೆ, ಇರುವಿಕೆ, ಉಪಸಂಹರಿಸುವಿಕೆ—ಇವುಗಳಿಗೆ ಕ್ರಮವಾಗಿ ಸೃಷ್ಟಿ ಸ್ಥಿತಿ ಸಂಹಾರಗಳೆಂದು ಪ್ರತೀತಿಯಿದೆ. ಈ ಮೂರು ಅಂಶಗಳ ಮೇಳನಾರೂಪವಾದ ವ್ಯಾಪಾರಗಳನ್ನು ನಡೆಸುವ ಶಕ್ತಿಗೆ **ತುರ್ಯಾಸಂವಿತ್‌ಶಕ್ತಿ** ಎಂದು ಹೆಸರು. ಇದು ಯಾವಾಗಲೂ ಪೂರ್ಣವಾಗಿಯೇ ಇರುತ್ತದೆ. ಹಾಗೆಯೇ ಸೂಕ್ಷ್ಮವಾಗಿಯೂ ಇರುತ್ತದೆ. ಭೇದಾಭೇದರೂಪವಾಗಿಯೂ ಅನುಭಯಾತ್ಮಕವಾಗಿಯೂ (ಸೃಷ್ಟಿ ಸಂಹಾರವಿಲ್ಲದೆ ಇರುವ ಸ್ಥಿತಿ) ಇರುತ್ತದೆ. ಅಕ್ರಮವಾಗಿಯೂ ಸ್ಫುರಿಸುತ್ತದೆ. ಇಂತಹ ವಿಚಿತ್ರವ್ಯಾಪಾರವುಳ್ಳ ಸಂವಿತ್ ಶಕ್ತಿಯನ್ನು ಕ್ರಮಕ್ರಮವಾಗಿ ಹೆಚ್ಚುಹೆಚ್ಚಾಗಿ ಅನುಶೀಲನಮಾಡುವ ಭಕ್ತರನ್ನು ಈ ಸಂವಿದ್ದೇವತೆಯು ತನ್ನಲ್ಲಿಯೇ ಸೇರಿಸಿಕೊಳ್ಳುತ್ತಾಳೆ.

ಹೀಗಿರುವ ಪರಮೇಶ್ವರನ ಐಶ್ವರ್ಯವು ಯಾವರೀತಿಯಾಗಿ ಮಲಗಳಿಂದ ಕೂಡಿ ಕಲಾದಿ ಪಂಚಕಂಚುಕಗಳಿಂದ ಆವೃತವಾಗಿ ಅಣುತ್ವವನ್ನೂ ಸಂಸಾರಿತ್ವವನ್ನೂ ಪಡೆಯುತ್ತದೆಂಬುದನ್ನು ಮುಂದಿನ ಸೂತ್ರವು ತೋರಿಸುತ್ತದೆ.

ಚಿದ್ವತ್ತಚ್ಛಕ್ತಿ ಸಂಕೋಚಾತ್ ಮಲಾವೃತಃ ಸಂಸಾರೀ ॥೯॥

ಚಿದಾತ್ಮಕನಾದ ಪರಮೇಶ್ವರನೇ ಶಕ್ತಿಸಂಕೋಚದ ದೆಸೆಯಿಂದ ಮಲಾವೃತನಾಗಿ ಸಂಸಾರಿಯಾಗಿರುತ್ತಾನೆ.

ಯಾವಾಗ ಪರಮೇಶ್ವರನು ಸ್ವಸ್ವಾತಂತ್ರ್ಯದಿಂದ ಅಭೇದವ್ಯಾಪ್ತಿಯನ್ನು ಬಿಟ್ಟು ಭೇದವ್ಯಾಪ್ತಿಯನ್ನಂಗೀಕರಿಸುತ್ತಾನೋ ಆಗ ಅವನ ಇಚ್ಛಾಜ್ಞಾನಕ್ರಿಯಾದಿ ಶಕ್ತಿಗಳು

ಅಸಂಕುಚಿತವಾಗಿದ್ದರೂ ಸಂಕುಚಿತವಾದಂತೆ ತೋರುತ್ತವೆ. ಆಗಲೇ ಈ ಶಿವನು ಮಲಾವೃತನಾದ ಸಂಸಾರಿಯೆಂದೆನಿಸುವನು. ಈ ಕ್ರಮದಲ್ಲಿ ಅಪ್ರತಿಹತವಾದ ಸ್ವಾತಂತ್ರ್ಯ ರೂಪವಾದ ಇಚ್ಛಾಶಕ್ತಿಯು ಸಂಕುಚಿತವಾಗಿ ತಾನು ಪೂರ್ಣನಲ್ಲವೆಂಬ ಭಾವನೆಯಿರುವ **ಆಣವಮಲ**ವಾಗುತ್ತದೆ. ಜ್ಞಾನಶಕ್ತಿಯು ಕ್ರಮವಾಗಿ ಸಂಕೋಚದಿಂದ ಭೇದಭಾವವನ್ನು ಪಡೆದು ಸರ್ವಜ್ಞತ್ವದಿಂದ ಕಿಂಚಿತ್‌ಜ್ಞತ್ವವನ್ನು ಹೊಂದಿ ಅಂತಃಕರಣ ಮತ್ತು ಜ್ಞಾನೇಂದ್ರಿಯಗಳ ದ್ವಾರಾ ಸಂಕೋಚಗ್ರಹಣದಿಂದ ಭಿನ್ನವೇದ್ಯ ಪ್ರಥಾರೂಪವಾದ **ಮಾಯೀಯಮಲ**ವಾಗುತ್ತದೆ. ಕ್ರಿಯಾಶಕ್ತಿಯು ಕ್ರಮವಾಗಿ ಭಿನ್ನವಾಗಿ ಸರ್ವಕರ್ತೃತ್ವವು ಕಿಂಚಿತ್ ಕರ್ತೃತ್ವವಾಗಿ ಕರ್ಮೇಂದ್ರಿಯಗಳ ರೂಪಗಳಿಂದ ಅತ್ಯಂತ ಪರಿಮಿತಸ್ಥಿತಿಯನ್ನು ಹೊಂದಿ ಪುಣ್ಯಪಾಪಗಳನ್ನಾಚರಿಸುವ **ಕಾರ್ಮಿಕಮಲ**ವಾಗುತ್ತದೆ. ಒಟ್ಟಿನಲ್ಲಿ ಸ್ವರೂಪಧರ್ಮಗಳಾದ ಸರ್ವಕರ್ತೃತ್ವ, ಸರ್ವಜ್ಞತ್ವ, ಪೂರ್ಣತ್ವ, ನಿತ್ಯತ್ವ, ವ್ಯಾಪಕತ್ವ ಶಕ್ತಿಗಳು ಸಂಕೋಚವನ್ನು ಹೊಂದಿದವುಗಳಾಗಿ ಯಥಾಕ್ರಮವಾಗಿ ಕಲಾ, ವಿದ್ಯಾ, ರಾಗ, ಕಾಲ, ನಿಯತಿ ರೂಪಗಳಿಂದ ಪ್ರಕಾಶಿಸುತ್ತವೆ. ಇಲ್ಲಿ ಈ ವಿಧವಾಗಿ ಶಿವನು ಶಕ್ತಿದರಿದ್ರನಾಗಿ ಸಂಸಾರಿಯೆಂದನಿಸಿಕೊಳ್ಳುತ್ತಾನೆ. ಸಂಸಾರಾವಸ್ಥೆಯಲ್ಲಿರುವವನು ಶಕ್ತಿವಿಕಾಸವನ್ನು ಪಡೆದರೆ ಶಿವನೇ ಆಗುತ್ತಾನೆ.

ಈಶ್ವರನಿಗೆ ತನ್ನ ಸ್ವಾತಂತ್ರ್ಯಶಕ್ತಿಯನ್ನು ವಿಸ್ತರಿಸಿ ವಿಶ್ವವನ್ನು ಸೃಷ್ಟಿಮಾಡಬೇಕೆಂಬ ಸಂಕಲ್ಪವುಂಟಾದರೆ ತನ್ನ ಪೂರ್ಣಾನಂದಮಯವಾದ ಅಭೇದ ವ್ಯಾಪ್ತಿಯನ್ನು ಒತ್ತಟ್ಟಿಗಿಟ್ಟು ಅನೇಕ ಪ್ರಕಾರವಾಗಿರುವ ವಿಶ್ವರೂಪಿಯಾಗುತ್ತಾನೆ. ಹೀಗಾಗುವಾಗ ತಡೆಯಿಲ್ಲದ ಇಚ್ಛಾಶಕ್ತಿಯು ಸಂಕುಚಿತವಾದ ಹಾಗೆ ತೋರುವ ಸ್ಥಿತಿಯನ್ನು **ಮಲಾವೃತಃ ಸಂಸಾರೀ** ಎಂದು ಹೇಳುತ್ತಾರೆ. ಮಲಾವೃತಃ ಎಂದರೆ ಮಲಗಳಿಂದ ಸುತ್ತಲ್ಪಟ್ಟವನೆಂದು ಅರ್ಥವಾಗುತ್ತದೆ. ಈ ಅಭಿಪ್ರಾಯವು ಅಷ್ಟಾಗಿ ತೃಪ್ತಿಕರವಾದದ್ದಲ್ಲ. ಸುತ್ತುವುದು ಸುತ್ತಲ್ಪಡುವುದು ಎಂಬ ಎರಡು ಪದಾರ್ಥಗಳಿಲ್ಲ. ಅಪ್ರತಿಹತವಾದ ಶಕ್ತಿಯು ತನ್ನ ಸಂಕಲ್ಪದಿಂದಲೇ ಸಂಕೋಚವನ್ನು ಪಡೆದಿರುವಾಗ ಇನ್ನೊಂದು ಪದಾರ್ಥದಿಂದ ಸುತ್ತಲ್ಪಟ್ಟ ಹಾಗೆ ಎನ್ನುವುದು ಕೇವಲ ಉಪಚಾರೋಕ್ತಿ. 'ಮಲಾವೃತ' ಎಂಬುವುದು ಭೇದವನ್ನು ತೋರಿಸುವುದಿಲ್ಲ. ಶಕ್ತಿಸಂಕೋಚವನ್ನು ಸೂಚಿಸುತ್ತದೆ. ಇಚ್ಛಾಶಕ್ತಿಯ ಸಂಕೋಚವಿಲ್ಲದಿರುವಾಗ ಪರಿಪೂರ್ಣಾನುಭವವಿದ್ದು ಸಂಕುಚಿತವಾದಾಗ ತಾನು ಪೂರ್ಣನಲ್ಲವೆಂಬ ಭಾವನೆಯುಂಟಾಗುವಿಕೆಯೇ ಆಣವಮಲ. ಸರ್ವವ್ಯಾಪಿಯೂ ಸರ್ವಜ್ಞನೂ ಆಗಿದ್ದ ವಿಭುವು ಅಂತಃಕರಣ ಬುದ್ಧಿ ಮತ್ತು ಇಂದ್ರಿಯಗಳಿಗೆ ಒಳಪಟ್ಟು ತುಂಬಾ ಸಂಕೋಚ ರೂಪವಾದ ತಿಳಿವಳಿಕೆಯನ್ನು ಪಡೆಯುವಿಕೆಯೇ ಮಾಯೀಯ ಮಲ. ಕ್ರಿಯಾಶಕ್ತಿ ಸಂಕೋಚದಿಂದ ಸರ್ವಕರ್ತೃತ್ವಶಕ್ತಿಯಿದ್ದವನು ಕಿಂಚಿತ್ಕರ್ತೃತ್ವವುಳ್ಳವನಾಗಿ ಕರ್ಮೇಂದ್ರಿಯಗಳಿಗಧೀನನಾಗಿ ಅತ್ಯಂತ ಪರಿಮಿತವಾದ ಪುಣ್ಯ ಪಾಪ ರೂಪವಾದ ಕರ್ಮಗಳನ್ನಾಚರಿಸುವಿಕೆಯೇ ಕಾರ್ಮಿಕಮಲ. ಸಂಕ್ಷೇಪವಾಗಿ ಹೇಳುವುದಾದರೆ '**ಅಪೂರ್ಣಂ ಮನ್ಯತಾ**'ರೂಪವಾದ ಸ್ಥಿತಿಯನ್ನುಂಟಾಗುವಿಕೆಯೇ ಆಣವ

ಮಲ. '**ಭಿನ್ನವೇದ್ಯಪ್ರಥಾ**' ರೂಪವಾದ ಸ್ಥಿತಿಯೇ ಮಾಯೀಯ ಮಲ. '**ಶುಭಾಶುಭಾನುಷ್ಠಾನಮಯ**'ವಾದದ್ದು ಕಾರ್ಮಮಲ. ಈ ಮೂರು ಮಲಗಳೂ ರೂಪುಗೊಳ್ಳುವ ವೇಳೆಗೆ ಮೊದಲಿದ್ದ ಸರ್ವಜ್ಞತ್ವ, ಸರ್ವಕರ್ತೃತ್ವ, ಪೂರ್ಣತ್ವ, ನಿತ್ಯತ್ವ ವ್ಯಾಪಕಶಕ್ತಿಗಳೂ ಸಂಕುಚಿತವಾಗಿ ಕ್ರಮವಾಗಿ ವಿದ್ಯಾ ಕಲಾ ರಾಗ ಕಾಲ ನಿಯತಿಗಳೆಂಬ ಕಂಚುಕಗಳಾಗುತ್ತವೆ. ಇಂತಹ ಶಕ್ತಿಸಂಕೋಚದಿಂದ ಶಕ್ತಿದರಿದ್ರನಾಗಿರುವವನು ಸಂಸಾರಿ. ಶಕ್ತಿವಿಕಾಸವಾದರೆ ಶಿವನೇ ಆಗುತ್ತಾನೆ.

ಸಂಸಾರಾವಸ್ಥೆಯಲ್ಲಿರುವ ಮಿತಪ್ರಮಾತೃವು ಶಿವನೇ ಎಂದರೆ ಆ ಶಿವತ್ವಕ್ಕೆ ಉಚಿತವಾದ ನೆನಪೇನಾದರೂ ಇದೆಯೇ ಎಂಬ ಪ್ರಶ್ನೆಯು ಏಳುತ್ತದೆ. ಇದಕ್ಕೆ ಉತ್ತರ :

ತಥಾಪಿ ತದ್ವತ್ ಪಂಚಕೃತ್ಯಾನಿ ಕರೋತಿ ॥೧೦॥

ಬದ್ಧಾವಸ್ಥೆಯಲ್ಲಿರುವ ಶಿವನು ಬದ್ಧಾವಸ್ಥೆಯಲ್ಲಿಲ್ಲದಿರುವಾಗ ನಿರ್ವಹಿಸುತ್ತಿದ್ದ ಹಾಗೆಯೇ ಸಂಕುಚಿತವಾಗಿ ಪಂಚಕೃತ್ಯಗಳನ್ನು ನಿರ್ವಹಿಸುತ್ತಾನೆ.

ಚಿದಾತ್ಮಕನಾದ ಭಗವಂತನು ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹ ಈ ಐದು ಕೃತ್ಯಗಳನ್ನು ಬದ್ಧದಶೆಯಲ್ಲಿಯೂ ನಿರ್ವಹಿಸುತ್ತಿರುತ್ತಾನೆ. ಅದೇ ಶಿವನೇ ಅಶುದ್ಧಾಧ್ವವನ್ನು ವಿಸ್ತರಿಸುವ ಕ್ರಮದಿಂದ ಪದಾರ್ಥ ತತ್ತ್ವಗಳನ್ನು ವಿಕಾಸಪಡಿಸುವಂತಹ ಸೃಷ್ಟಿ ಸಂಹಾರಾದಿಗಳನ್ನು ಮಾಡುವನೋ ಹಾಗೆಯೇ ಬದ್ಧಾವಸ್ಥೆಯಲ್ಲಿಯೂ ಸಂಕುಚಿತನಾದ **ಚಿಚ್ಛಕ್ತಿ**ಯಿಂದ ಪಂಚಕೃತ್ಯಗಳನ್ನು ಮಾಡುತ್ತಾನೆಂದು ಶ್ರೀ ಸ್ವಚ್ಛಂದ್ರ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಇದೇ ಬ್ರಹ್ಮವಾದಿಗಳಿಗೂ ಈ ದರ್ಶನಕಾರರಿಗೂ ಇರುವ ವ್ಯತ್ಯಾಸ.

ಈಶ್ವರನು ತನ್ನ ಸ್ವೇಚ್ಛೆಯಿಂದ ದೇಹ ಪ್ರಾಣ ಇಂದ್ರಿಯಾದಿಗಳನ್ನು ಸ್ವೀಕರಿಸಿದವನಾಗಿ ವ್ಯವಹಾರದಲ್ಲಿ ತನ್ನ ಇಚ್ಛೆಯಿಂದಲೇ ಒಳಗೆ ಚಿದ್ರೂಪದಿಂದ ಪ್ರಕಾಶಿಸುತ್ತಿರುವ ಅರ್ಥವನ್ನೇ ಹೊರಗೂ ಪ್ರಕಾಶಪಡಿಸುತ್ತಾನೆ. ದೇಹ ಪ್ರಾಣಾದಿಸ್ಥಿತಿಯನ್ನು ಪ್ರವೇಶಿಸಿದ ಚಿದ್ರೂಪಿಯಾದ ಮಹೇಶ್ವರನು ಬಹಿರ್ಮುಖೀ ಭಾವದ ದಶೆಯಲ್ಲಿ ಕಪ್ಪು ಬಿಳುಪು ನೀಲಾದಿ ಪದಾರ್ಥಗಳನ್ನು ಆಯಾ ದೇಶ ಕಾಲಾದಿಗಳಿಂದ ಯಾವಾಗ ಪ್ರಕಾಶಪಡಿಸುವನೋ ಆ ಅಂಶದಲ್ಲಿ ಈತನಿಗೆ **ಸ್ರಷ್ಟೃತ್ವ**. ಬೇರೆ ಕಾಲ, ಬೇರೆ ದೇಶ, ಬೇರೆ ವಿಷಯ ತೋರುವಾಗ (ಅನ್ಯದೇಶ ಕಾಲ ಆಭಾಸಾಂಶದಲ್ಲಿ) **ಸಂಹರ್ತೃತ್ವ**. ಯಾವ ಪದಾರ್ಥವು ಎಷ್ಟುಹೊತ್ತು ತೋರುತ್ತಿರುವುದೋ ಅಷ್ಟುಹೊತ್ತು **ಸ್ಥಾಪಕತ್ವ**. ಅಭಿನ್ನವಾಗಿರುವ ಚಿತ್ತು ಭಿನ್ನವಾಗಿ ಪದಾರ್ಥರೂಪವಾಗಿ ತೋರುವುದೇ **ವಿಲಯ**. ಭಿನ್ನವಾದ ಪದಾರ್ಥರೂಪವಾಗಿ ತೋರಿ ಅಭಿನ್ನವಾದ ಪ್ರಕಾಶೈಕ್ಯರೂಪದಿಂದ ಪ್ರಕಾಶಿಸುವಿಕೆಯೇ **ಅನುಗ್ರಹ**. ಈ ಪಂಚವಿಧ ಕೃತ್ಯಗಳು 'ಸ್ಪಂದ ಸಂದೋಹ'ದಲ್ಲಿ ವಿಶದವಾಗಿ ವಿವರಿಸಲ್ಪಟ್ಟಿವೆ. ಈ ರೀತಿಯಾಗಿ ತನ್ನ ಪಂಚವಿಧ ಕೃತ್ಯಗಳ ನಿರ್ವಹಣೆಯನ್ನು ದೃಢ ನಂಬಿಕೆಯಿಂದಲೂ ತಿಳಿವಳಿಕೆಯಿಂದಲೂ ಯಾವಾಗಲೂ ಪರಿಶೀಲನೆ ಮಾಡುತ್ತಿರುವ

ಭಕ್ತರಿಗೆ **ಮಾಹೈಶ್ವರ್ಯವು** ಪ್ರಕಟವಾಗುತ್ತದೆ. ಆದುದರಿಂದ ಯಾರು ಯಾವಾಗಲೂ ಇದನ್ನು ಪರಿಶೀಲಿಸುತ್ತಾರೆಯೋ ಅವರು ಈ ವಿಶ್ವವನ್ನು **ಸ್ವರೂಪವಿಕಾಸವೆಂದು** ತಿಳಿದು ಜೀವನ್ಮುಕ್ತರಾಗುತ್ತಾರೆ. ಯಾರು ಈ ರೀತಿಯಾದ ಪರಿಶೀಲನೆಯಿಲ್ಲದೆ ಈ ವಿಭಿನ್ನವಾದ ಪ್ರಮೇಯ ಸಮೂಹವನ್ನು ನೋಡುತ್ತಿರುವರೋ ಅವರು ಬದ್ಧಾತ್ಮರಾಗಿರುವರು.

ಈ ವಿಶ್ವಕ್ಕೆ ಬ್ರಹ್ಮನೇ ಕಾರಣನೆಂದು ಹೇಳುವ ವೇದಾಂತಿಗಳು ಬ್ರಹ್ಮ ಶುದ್ಧ ಬುದ್ಧ ಮುಕ್ತ ಸ್ವಭಾವವುಳ್ಳವನಾಗಿರುವನೆಂದು ಹೇಳುತ್ತಾರೆ. ಈ ವಿಶ್ವವೆಲ್ಲಾ ಅವಿದ್ಯೆಯ ವಿಲಾಸವೆಂದೂ ಈ ಅವಿದ್ಯೆಯು ಅನಿರ್ವಚನೀಯವೆಂದೂ ಹೇಳುತ್ತಾರೆ. ಅನಿರ್ವಚನೀಯವೆಂದರೆ ಸದ್ರೂಪವೂ ಅಲ್ಲ; ಅಸದ್ರೂಪವೂ ಅಲ್ಲ. ಇರುವುದನ್ನು ಇರುವ ಹಾಗೂ ಇಲ್ಲದಿರುವುದನ್ನು ಇಲ್ಲದಿರುವ ಹಾಗೂ ಹೇಳುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ "ಅವಿದ್ಯೆಯು" "ಅನಿರ್ವಚನೀಯ." ಈ ಕಾರಣದಿಂದ ವೇದಾಂತಿಗಳು "ಬ್ರಹ್ಮ ಸತ್ಯಂ ಜಗನ್ಮಿಥ್ಯಂ" ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ತತ್ತ್ವಜ್ಞಾನದಿಂದ ಮಿಥ್ಯಾಜ್ಞಾನವು ನಿವೃತ್ತಿಯಾಗುತ್ತದೆಂದೂ ಆಗ ಜೀವನೇ ಬ್ರಹ್ಮನಾಗುತ್ತಾನೆಂಬುದೂ ಅವರ ವಾದ. ಈ ದರ್ಶನದಲ್ಲಾದರೋ ವಿಶ್ವಕ್ಕೆ ಪರಮಶಿವನೇ ಕಾರಣ. ಈ ವಿಶ್ವವನ್ನು ತನ್ನ ಸ್ವಾತಂತ್ರ್ಯಶಕ್ತಿಯಿಂದ ನಡೆಸುತ್ತಾನೆ; ಉಪಸಂಹರಿಸುತ್ತಾನೆ. ವಿಶ್ವಸೃಷ್ಟಿಗೆ ಬೇರೆ ಇನ್ನೊಂದು ಪದಾರ್ಥ ಬೇಕಾಗಿಲ್ಲ. ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹಗಳೇ ಮೊದಲಾದ ಪಂಚಕೃತ್ಯಗಳನ್ನು ಪರಮಶಿವನು ನಿರ್ವಹಿಸುತ್ತಿರುತ್ತಾನೆ. ಶಿವನು ಮಹಾವಿಶ್ವಸೃಷ್ಟಿ ಮಹಾವಿಶ್ವಸಂಹಾರಗಳನ್ನು ಹೇಗೆ ಮಾಡುತ್ತಾನೋ ಹಾಗೆಯೇ ಮಿತಪ್ರಮಾತೃವು ತನ್ನ ಸಂಕುಚಿತ ಪ್ರಪಂಚದಲ್ಲಿ ಮಿತವಾಗಿ ಪಂಚಕೃತ್ಯಗಳನ್ನು ಮಾಡುತ್ತಿರುತ್ತಾನೆ. ಪರಮಶಿವನು ತತ್ತ್ವಗಳನ್ನೂ ತತ್ತ್ವಗಳ ಪರಿಣಾಮರೂಪಗಳಾದ ಪದಾರ್ಥಗಳನ್ನೂ ಸೃಷ್ಟಿಮಾಡುವಂತೆಯೇ ಮಿತಪ್ರಮಾತೃವು ಅಂತರ್ಮುಖವಾದ ಚಿತ್ತನ್ನು ಬಹಿರ್ಮುಖ ವ್ಯವಹಾರ ರೂಪದಲ್ಲಿಯೂ ಪುನಃ ಬಾಹ್ಯ ಪದಾರ್ಥ ಜ್ಞಾನವನ್ನು ಚಿದ್ರೂಪವಾಗಿ ಉಪಸಂಹರಿಸುವ ಕ್ರಮದಲ್ಲಿಯೂ ಪಂಚಕೃತ್ಯಗಳನ್ನು ಮಾಡುತ್ತಿರುತ್ತಾನೆ. ಪ್ರಪಂಚವು ಸತ್ಯ, ಜ್ಞಾತೃತ್ವ ಕರ್ತೃತ್ವಗಳು ಸತ್ಯ, ಸುಖದುಃಖಾನುಭವಗಳು ಸತ್ಯ, ಸೃಷ್ಟಿ ಸ್ಥಿತಿ ಮೊದಲಾದ ಪಂಚಕೃತ್ಯಗಳು ಸತ್ಯ ಎಂಬುದೇ ಈ ಕಾಶ್ಮೀರ ಸಂಪ್ರದಾಯದ ವೈಶಿಷ್ಟ್ಯ. ಬ್ರಹ್ಮವಾದಿಗಳಿಗೂ ಈ ದರ್ಶನಕಾರರಿಗೂ ಇಷ್ಟೇ ವ್ಯತ್ಯಾಸವೆಂದು ಹೇಳಬಹುದು.

ಮಹಾವಿಶ್ವಸೃಷ್ಟಿ ಸ್ಥಿತಿ ಪ್ರಳಯಗಳು ವಿಸ್ತಾರವಾಗಿ ನಡೆಯುತ್ತಿರುತ್ತವೆ. ಹಾಗೆಯೇ ಮಿತಪ್ರಮಾತೃವು ಪಂಚವಿಧ ಕೃತ್ಯಗಳನ್ನು ಯಾವಾಗಲೂ ನಿರ್ವಹಿಸುವ ಕ್ರಮವನ್ನು ಸಾಧಕನು ಪರಿಶೀಲಿಸಬೇಕು. ಸ್ವಭಾವದಲ್ಲಿ ಶುದ್ಧ ಚಿನ್ಮಯನಾಗಿದ್ದವನು ಪಾಂಚಭೌತಿಕವಾದ ದೇಹ, ಪ್ರಾಣಶಕ್ತಿ, ಇಂದ್ರಿಯಗಳು ಪುರ್ಯಷ್ಟಕ ಮೊದಲಾದ ಮಾಯೀಯ ತತ್ತ್ವಗಳ ಸಂಬಂಧವನ್ನು ಪಡೆದ ನಂತರ ಅಥವಾ ಈ ರೀತಿ ತತ್ತ್ವ

ಮಯನಾದಾಗ ಜೀವಾವಸ್ಥೆಯನ್ನು ಹೊಂದುತ್ತಾನೆ. ಕೇಳುವುದು ನೋಡುವುದು ನೆನೆಯುವುದು ಊಹಿಸುವುದು ಮುಂತಾದ ಮನಸ್ಸಿನ ವ್ಯಾಪಾರಗಳು ಎಲ್ಲರ ಅನುಭವ ದಲ್ಲಿವೆ. ಇದನ್ನು ಸ್ವಲ್ಪ ಪರಿಶೀಲಿಸಿದರೆ ಪಂಚಕೃತ್ಯಗಳು ಸಿದ್ಧವಾಗುತ್ತವೆ. ಹೇಗೆಂದರೆ :—ನಾವು ಒಂದು ಪದಾರ್ಥವನ್ನು ಒಂದು ಸಮಯದಲ್ಲಿ ಒಂದು ಪ್ರದೇಶದಲ್ಲಿ ಒಂದು ನಿಯತವಾದ ಆಕಾರದಿಂದ ನೋಡುತ್ತೇವೆ. ಅದರಲ್ಲಿರುವ ಬಣ್ಣ ಗುಣಗಳೇ ಮೊದಲಾದ ವಿಷಯಗಳು ನಮ್ಮ ಗಮನಕ್ಕೆ ಬೀಳುತ್ತವೆ. ಒಂದು ವಿಷಯವನ್ನು ನೋಡು ವಾಗ ಇನ್ನೊಂದು ವಿಷಯವನ್ನು ಗಮನಿಸುವುದಕ್ಕಾಗುವುದಿಲ್ಲ. ಯಾವ ವಿಷಯವನ್ನು ಯಾವ ಕ್ಷಣದಲ್ಲಿ ನೋಡುತ್ತೇವೆಯೋ ಆ ಕ್ಷಣದಲ್ಲಿ ಆ ವಿಷಯಕ್ಕೆ **ಸೃಷ್ಟಿ.** ಬೇರೆ ದೇಶ ಬೇರೆ ಕಾಲ ಬೇರೆ ಪದಾರ್ಥ ಬೇರೆ ಆಕಾರ ಇವುಗಳು ಎಂದರೆ ಹಿಂದಿನ ಕ್ಷಣದಲ್ಲಿ ನೋಡು ತ್ತಿದ್ದ ವಿಷಯಕ್ಕೆ **ಸಂಹಾರ.** ಕೆಲವು ನಿಮಿಷಗಳ ಕಾಲವೋ ಕೆಲವು ಗಂಟೆಗಳ ಕಾಲವೋ ನಾವು ಎಷ್ಟು ಹೊತ್ತು ಅವಿಚ್ಛಿನ್ನವಾಗಿ ಒಂದು ವಿಷಯವನ್ನು ಗಮನಿಸುತ್ತೇವೆಯೋ ಅಷ್ಟುಹೊತ್ತು **ಸ್ಥಿತಿ.** ಚಿತ್ತಿನಲ್ಲಿ ಅಖಂಡವಾಗಿದ್ದ ವಿಷಯಗಳನ್ನು ಈ ರೀತಿ ಭೇದರೂಪ ವಾಗಿ ಪ್ರಕಾಶಪಡಿಸುವಿಕೆಯೇ **ತಿರೋಧಾನ** (ವಿಲಯ). ಸಾವಿರಾರು ವಿಷಯಗಳನ್ನು ನೋಡಿ ಕೇಳಿದ್ದರೂ ಉತ್ತರಕ್ಷಣದಲ್ಲಿಯೇ **ಚಿದೈಕ್ಯವನ್ನು ಪಡೆಯುವಿಕೆಯೇ ಅನುಗ್ರಹ.** ಅಂದರೆ ಸಾವಿರಾರು ವಿಷಯಗಳು ನಮಗೆ ತಿಳಿದಿದ್ದರೂ ಪರಸ್ಪರ ವಿರುದ್ಧ ವಾದ ವಿಷಯಗಳಿದ್ದರೂ ಸ್ವಯಂಪ್ರಕಾಶವಾದ ಚಿತ್ತಿನಲ್ಲಿ ಅಭಿನ್ನವಾಗಿರುವಿಕೆಯೇ ಅನುಗ್ರಹ. ಭಕ್ತನು ದೃಢವಾದ ವಿಶ್ವಾಸದಿಂದ ಯಾವಾಗಲೂ ತನ್ನಲ್ಲಿ ನಡೆಯುತ್ತಿರುವ ಈ ವಿಕಲ್ಪ ಪ್ರವಾಹವನ್ನು ಪರಿಶೀಲಿಸುತ್ತಾ ಈ ಪಂಚವಿಧ ಕೃತ್ಯಗಳನ್ನು ವಿಶದವಾಗಿ ಅನುಶೀಲನ, ಪರಿಶೀಲನ, ಅನುಸಂಧಾನ, ಪರಾಮರ್ಶ ಈ ನಾಲ್ಕು ಬಗೆಯಾದ ಭಾವನೆ ಗಳಿಂದ ಯಾವಾಗಲೂ ಮನನಮಾಡುತ್ತಿದ್ದರೆ ಈ ವಿಶ್ವವೆಲ್ಲಾ **ಸ್ವರೂಪ ವಿಕಾಸ ಮಯವೆಂದು** ತೋರುತ್ತದೆ. ಇಂತಹವರು ಶರೀರ ಪ್ರಾಣಾದಿ ಸಂಬಂಧಗಳಿಂದ ಮಿತ ಪ್ರಮಾತೃಗಳಾಗಿದ್ದರೂ ಜೀವನ್ಮುಕ್ತರೇ ಆಗಿರುವರೆಂದು ಆಗಮಗಳಲ್ಲಿ ಹೇಳಿದೆ. ಈ ಕ್ರಮವನ್ನು ಬಿಟ್ಟು ಪ್ರಪಂಚದಲ್ಲಿ ನಮಗುಂಟಾಗುವ ಜ್ಞಾನವನ್ನು ಕೇವಲ ಪ್ರಸ ವೃಷ್ಟಿಯಿಂದ ರಾಗ ದ್ವೇಷಗಳಿಗೆ ಉಪಯೋಗಿಸುವವರು ಬದ್ಧರು.

ಪಂಚವಿಧ ಕೃತ್ಯಗಳನ್ನು ಮಾಡುವುದರಲ್ಲಿ ಇದೇ ಪ್ರಕಾರವೋ ಅಥವಾ ರಹಸ್ಯ ರೂಪವಾಗಿ ಇನ್ನೇನಾದರೂ ಬೇರೆ ಕ್ರಮವಿದೆಯೋ ಎಂಬ ಪ್ರಶ್ನೆಗೆ ಉತ್ತರವಾಗಿ ಮುಂದಿನ ಸೂತ್ರ.

ಆಭಾಸನ ರಕ್ತಿ ವಿಮರ್ಶನ ಬೀಜಾವಸ್ಥಾಪನ ವಿಲಾಪನ ತಸ್ತಾನಿ ॥೧೧॥

ಜೀವಾತ್ಮನು ಆಭಾಸನ ರಕ್ತಿ ವಿಮರ್ಶನ ಬೀಜಾವಸ್ಥಾಪನ ವಿಲಾಪನಗಳಿಂದ ಪಂಚಕೃತ್ಯಗಳನ್ನು ನಿರ್ವಹಿಸುತ್ತಾನೆ.

ಶ್ರೀಮನ್ಮಹಾರ್ಥ ದೃಷ್ಟಿಯಿಂದ ಅಂದರೆ ತಾತ್ವಿಕ ದೃಷ್ಟಿಯಿಂದ ಹೇಳುವುದಾದರೆ ದೃಗಾದಿದೇವೀಪ್ರಸರಣಕ್ರಮದಿಂದ (ಕಣ್ಣೇ ಮೊದಲಾದ ಇಂದ್ರಿಯಗಳ ದ್ವಾರಾ) ಯಾವ

ಯಾವ ವಿಷಯಗಳು ಪ್ರಕಾಶಿಸಲ್ಪಡುತ್ತವೆಯೋ ಅವೆಲ್ಲಾ ಸೃಷ್ಟಿ. ಅಂದರೆ ಇಂದ್ರಿಯ ಗಳಿಂದ ಯಾವ ಯಾವ ಪದಾರ್ಥಜ್ಞಾನ ಉಂಟಾಗುತ್ತದೆಯೋ ಅದೆಲ್ಲಾ ಸೃಷ್ಟಿ. ಇದಕ್ಕೆ **ಅಭಾಸನ**ವೆಂದು ಹೇಳುವುದು. ಹಾಗೆ ಸೃಷ್ಟಿಮಾಡಿದ ಸ್ಥಿತಿಯಲ್ಲಿ ಎಷ್ಟುಕಾಲ ಚಾಂಚಲ್ಯವಿಲ್ಲದೆ ಅದರಲ್ಲಿ ರಂಜಿಸುತ್ತದೆಯೋ ಅಂದರೆ ಸ್ಥಾಪಿಸಲ್ಪಟ್ಟಿರುತ್ತದೆಯೋ ಅದೇ **ರಕ್ತಿ**. ಇದನ್ನು **ಸ್ಥಿತಿ**ಯೆಂದು ಹೇಳುತ್ತೇವೆ. ಬಾಹ್ಯಜ್ಞಾನವನ್ನು ಅಂತರ್ಮುಖ ವಾಗಿಯೂ ಅಂತರ್ಮುಖೀನವಾದ ವಿಷಯಗಳನ್ನು ಬಹಿರ್ಮುಖವಾಗಿಯೂ ಮಾಡುವ ಚಮತ್ಕಾರದಲ್ಲಿ ಬಾಹ್ಯಜ್ಞಾನ ಅಂತರ್ಮುಖವಾಗಿ ಮಾಡುವಿಕೆಯೇ **ವಿಮರ್ಶನ**. ಇದೇ ಚಮತ್ಕಾರ ರೂಪವಾದ ಸಂಹಾರ. ಯಾವಾಗ ಸಂಹರಿಸಲ್ಪಟ್ಟು ಒಳಗೆ ವಿಚಿತ್ರವಾದ ಸಂಸ್ಕಾರಗಳನ್ನು ಸೂಕ್ಷ್ಮಾದಿಸೂಕ್ಷ್ಮರೂಪದಿಂದ ಇಟ್ಟುಕೊಂಡಿದ್ದು ಇನ್ನೊಂದು ಸಮಯದಲ್ಲಿ ಅಭಿವ್ಯಕ್ತವಾಗುವ ಸ್ಥಿತಿಯಲ್ಲಿರುವುದೇ **ಬೀಜಾವಸ್ಥಾಪನ**. ಯಾವಾಗ ಒಳಗೆ ಸ್ಥಾಪಿಸಲ್ಪಟ್ಟಿರುವ ವಿಷಯಜ್ಞಾನ ಸಂಸ್ಕಾರಗಳು ಅನುಭವಿಸಲ್ಪಡುತ್ತಿದ್ದರೂ ಹಠಪಾಕಕ್ರಮದಿಂದ (ಅಕ್ಕಿಯನ್ನು ಬೇಯಿಸಿ ಮೆತ್ತಗಾಗುವಂತೆ ಮಾಡುವ ಕ್ರಮದಿಂದ) ಆ ಸಂಸ್ಕಾರಗಳು ಕಾಲಕ್ರಮದಲ್ಲಿ ನಿಶ್ಶೇಷವಾಗಿ ಚಿದಗ್ನಿಯಲ್ಲಿ ಏಕೀಭವಿಸಿ ಬೆರೆತು ಹೋಗುತ್ತವೆಯೋ ಅಂತಹ ಪರಿಪೂರ್ಣಸ್ಥಿತಿಗೆ **ಅನುಗ್ರಹ**ವೆಂದೂ **ವಿಲಾಪನ**ವೆಂದೂ ಹೆಸರು. ಇಂತಹ ಪಂಚವಿಧಕೃತ್ಯಕಾರಿತ್ವವು ಎಲ್ಲರಿಗೂ ಯಾವಾಗಲೂ ಸನ್ನಿಹಿತವಾಗಿ ನಡೆಯುತ್ತಿದ್ದರೂ ಸದ್ಗುರೂಪದೇಶವಿಲ್ಲದೆ ಪ್ರಕಾಶಿಸುವುದಿಲ್ಲ. ಪ್ರಕಾಶಿಸುವುದಕ್ಕೋಸ್ಕರ ಸದ್ಗುರುಸೇವೆಯನ್ನನುಸರಿಸಬೇಕು.

ಯಾರಿಗೆ ಪಂಚವಿಧಕೃತ್ಯಪರಿಜ್ಞಾನವೂ ಸದ್ಗುರೂಪದೇಶವೂ ಇಲ್ಲವೋ ಅವರಿಗೆ ಆವರಿಸಲ್ಪಟ್ಟ ಸ್ವರೂಪದ ಸ್ವಾಭಾವಿಕ ಶಕ್ತಿಗಳಿಂದ ವ್ಯಾಮೋಹವುಂಟಾಗುತ್ತದೆ.

ತದಪರಿಜ್ಞಾನೆ ಸ್ವಶಕ್ತಿಭಿರ್ವ್ಯಾಮೋಹಿತತಾ ಸಂಸಾರಿತ್ವಂ ॥೧೨॥

ಪಂಚಕೃತ್ಯಗಳ ತಿಳಿವಳಿಕೆಯಿಲ್ಲದೆ ಸ್ವಶಕ್ತಿಗಳಿಂದ ವ್ಯಾಮೋಹಿತನಾಗಿರುವುದೇ ಸಂಸಾರಿ ದಶೆ.

ಮೇಲೆ ಹೇಳಿದಂತೆ ಯಾವಾಗಲೂ ಸಂಭವಿಸುತ್ತಿರುವ ಪಂಚವಿಧ ಕೃತ್ಯಕಾರಿತ್ವವು ತಿಳಿಯದಿದ್ದರೆ ಶಕ್ತಿಪಾತಕ್ಕೆ ಕಾರಣವಾದ ತನ್ನ ಸಹಜಶಕ್ತಿಗಳ ಪ್ರಕಾಶವುಂಟಾಗುವು ದಿಲ್ಲ. ಅಂತಹ ಅಪ್ರಕಾಶ ಸ್ಥಿತಿಯಲ್ಲಿ ತನ್ನ ಶಕ್ತಿಗಳಿಂದ ವ್ಯಾಮೋಹಿತನಾಗಿ ಬಗೆ ಬಗೆ ಯಾದ ಪರಸ್ಪರ ವಿರುದ್ಧವಾಗಿರುವ ಲೌಕಿಕ ವಿಷಯಗಳಿಂದ ಮತ್ತು ಶಾಸ್ತ್ರಗಳ ಅಧ್ಯಯನದಿಂದುಂಟಾದ ಸಂಶಯಗಳಿಂದ ಕದಡಿರುವಿಕೆಯೇ ಅಂದರೆ ಹೊಯ್ದಾಟ ದಲ್ಲಿರುವಿಕೆಯೇ **ಸಂಸಾರಿತ್ವ**. ಚಿತ್ಪ್ರಕಾಶದಿಂದ ಬೇರೆಯಾಗದಿರುವುದಾಗಿ ಮಹಾ ಮಂತ್ರ ರೂಪವಾದ ಪೂರ್ಣಾಹಂ ವಿಮರ್ಶಮಯವಾದ **ಪರಾವಾಕ್‌ಶಕ್ತಿ**ಯೊಂದಿದೆ. ಇದು ಅಕಾರಾದಿ ಕ್ಷಕಾರದವರೆಗಿರುವ ವರ್ಣರೂಪದಿಂದ ಎಲ್ಲಾ ಶಕ್ತಿಸಮೂಹಗಳನ್ನು ಒಳಗೊಂಡಿದೆ. ಆ ಪರಾಶಕ್ತಿಯು ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ಈ ಮೂರು ಹಂತಗಳ ಕ್ರಮದಿಂದ ಗ್ರಾಹಕರ (ಬದ್ಧಜೀವರ) ಸ್ಥಿತಿಯನ್ನು ಬೆಳಗಿಸುತ್ತದೆ. ಅಲ್ಲಿ

'ಪರಾ' ರೂಪದಲ್ಲಿ ತನ್ನ ಸ್ವರೂಪವನ್ನು ತೋರ್ಪಡಿಸದೆ ಬದ್ಧಾತ್ಮನಿಗೆ ಅಸ್ಫುಟವಾದ ಅಸಾಧಾರಣವಾದ ಪದಾರ್ಥಗಳನ್ನು ಪ್ರಕಾಶಪಡಿಸುತ್ತಾ ಪ್ರತಿಕ್ಷಣದಲ್ಲಿಯೂ ಹೊಸ ದಾಗಿ ವಿಕಲ್ಪಕ್ರಿಯೆಗಳನ್ನು ಹೊರಹೊಮ್ಮಿಸುತ್ತದೆ. ವಿಕಲ್ಪವಿಲ್ಲದ ಪರಿಶುದ್ಧವಾದ ಸ್ವಸ್ಥಿತಿಯನ್ನು ವಿಕಲ್ಪಗಳಿಂದ ಆಚ್ಛಾದಿಸಲ್ಪಟ್ಟಂತೆಯೇ ತೋರಿಸುತ್ತದೆ. ಅಕಾರಾದಿ ಕ್ಷಕಾರದವರೆಗಿರುವ ಐವತ್ತು ವರ್ಣಗಳು ದೇವತಾಮಯವಾಗಿವೆ. ಈ ವರ್ಣಗಳಲ್ಲಿ ಬ್ರಾಹ್ಮ್ಯಾದಿ ದೇವತೆಗಳು ಆ ಪರಾಶಕ್ತಿಯ ಅಂಶಗಳಾಗಿ ಕಕಾರಾದಿ ವರ್ಣಗಳ ದ್ವಾರಾ ವಿಚಿತ್ರಶಕ್ತಿಗಳುಳ್ಳವುಗಳಾಗಿವೆ. ಇವುಗಳಿಂದ ಮೋಹಗೊಳಿಸಲ್ಪಟ್ಟು ದೇಹ ಪ್ರಾಣಾದಿ ಗಳನ್ನೇ ಸಂಕುಚಿತವಾದ ಭಾವನೆಗಳಿಂದ ತನ್ನ ಸ್ವರೂಪವೆಂದು ಮೂಢರು ತಿಳಿಯು ತ್ತಾರೆ. ಅಕ್ಷರಮಯವಾದ ಈ ಬ್ರಾಹ್ಮ್ಯಾದಿ ದೇವತೆಗಳು ಪಶುದಶೆಯಲ್ಲಿ ಭೇದ ವಿಷಯ ಗಳಲ್ಲಿ ಸೃಷ್ಟಿಸ್ಥಿತಿಗಳನ್ನು ಅಭೇದವಿಷಯದಲ್ಲಿ ಸಂಹಾರವನ್ನು ಪ್ರಕಟಿಸುತ್ತವೆ. ಇದರಿಂದ ಬದ್ಧಾತ್ಮನಿಗೆ ಪಶುದಶೆಯಲ್ಲಿ ಪರಿಮಿತವಾದ ವಿಕಲ್ಪಗಳುಂಟಾಗುತ್ತವೆ. ಅದೇ ಪರಾಶಕ್ತಿಯು ಪತಿದಶೆಯಲ್ಲಿಯಾದರೋ ಭೇದವಿಷಯದಲ್ಲಿ ಸಂಹಾರವನ್ನು ಅಭೇದ ವಿಷಯಗಳಲ್ಲಿ ಸೃಷ್ಟಿ ಸ್ಥಿತಿಗಳನ್ನು ಪ್ರಕಟಿಸುತ್ತದೆ. ಈ ಪರಾಶಕ್ತಿಯು ಯಾವಾಗಲೂ ಅನುಸಂಧಾನಮಾಡುವ ಸಾಧಕನಿಗೆ ಕ್ರಮಕ್ರಮವಾಗಿ ವಿಕಲ್ಪಗಳನ್ನು ತಿರಸ್ಕರಿಸಿ ಭೈರವ ಮುದ್ರಾನುಪ್ರವೇಶಮಯವಾದ (ಸ್ವಸ್ವರೂಪ ಸಾಕ್ಷಾತ್ಕಾರ) ಮಹತ್ತರವಾದ ಅವಿಕಲ್ಪ ಭೂಮಿಯನ್ನೇ ಪ್ರಕಾಶಪಡಿಸುತ್ತದೆ. ಈ ವಿಶ್ವವೆಲ್ಲಾ ತನ್ನ ವೈಭವವೆಂದು ತಿಳಿದು ವಿಶ್ವಾತ್ಮನಾಗಿ ಅನುಸಂಧಾನಮಾಡುವವನಿಗೆ ವಿಕಲ್ಪಗಳು ಪ್ರಸರಿಸುತ್ತಿದ್ದರೂ ಮಾಹೇಶತ್ವವು ಅವ್ಯಾಹತವಾಗಿರುತ್ತದೆಂದು ವಿಜ್ಞಾನ ಭೈರವದಲ್ಲಿ ಹೇಳಲ್ಪಟ್ಟಿದೆ.

ಸರ್ವೋಮಮಾಯಂ ವಿಭವಃ ಇತ್ಯೇವಂ ಪರಿಜಾನತಃ ।
ವಿಶ್ವಾತ್ಮನೋ ವಿಕಲ್ಪಾನಾಂ ಪ್ರಸರೇಪಿ ಮಹೇಶತಾ ॥

ಈ ರೀತಿಯಾಗಿ ಪರಾಮರ್ಶಮಾಡುವವರು ಚಿದಾನಂದಾವೇಶವನ್ನು ಪಡೆದು ನಿತ್ಯಾನಂದವನ್ನನುಭವಿಸುತ್ತಾರೆ. ಹಿಂದೆ ಹೇಳಿದಹಾಗೆ ಪಂಚವಿಧ ಶಕ್ತಿಗಳಿಂದ ವ್ಯಾಮೋಹಿತನಾಗಿರುವುದೇ ಸಂಸಾರಿತ್ವ-

ಚಿಚ್ಛಕ್ತಿಯೇ ವಿಶ್ವವನ್ನು ಹೊರಹೊಮ್ಮಿಸುವುದು. ಪ್ರಮಾತೃಗಳಿಗೆ ವಕ್ರವಾದ ಸಂಸಾರಿತ್ವವನ್ನುಂಟುಮಾಡುವುದರಿಂದ **ವಾಮೇಶ್ವರಿ** ಎಂಬ ಹೆಸರುಳ್ಳದ್ದಾಗಿದೆ. ಮುಂದೆ ಖೇಚರೀ ಗೋಚರೀ ದಿಕ್ಚರೀ ಭೂಚರೀ ಎಂಬ ರೂಪಗಳಿಂದ ಎಲ್ಲಾ ಪ್ರಮಾತೃಗಳೂ, ಅಂತಃಕರಣ ಬಹಿಷ್ಕರಣಗಳೂ ಭಾವ ಸ್ವಭಾವಗಳಿಂದ ಪದಾರ್ಥ ರೂಪವಾಗಿ ಸ್ಫುರಿಸುತ್ತದೆ. ಪಶುಭೂಮಿಕೆಯಲ್ಲಿ ಶೂನ್ಯಪದದಲ್ಲಿದ್ದು ಕಿಂಚಿತ್ಕರ್ತೃತ್ವಾದಿ ಕಲಾದಿ ಶಕ್ತಿಗಳಿಂದ **ಖೇಚರೀ** ರೂಪವನ್ನು ಪಡೆಯುತ್ತದೆ. ಪಾರಮಾರ್ಥಿಕವಾದ ಚಿದ್ಗಗನಸ್ವರೂಪವನ್ನು ಮರೆಮಾಚಿಕೊಂಡು ಪ್ರಕಾಶಿಸುತ್ತದೆ. ಎರಡನೆಯದಾದ ಗೋಚರೀಚಕ್ರದಿಂದ ಭೇದನಿಶ್ಚಯದಲ್ಲಿ ಅಭಿಮಾನ ವಿಕಲ್ಪಗಳೇ ಪ್ರಧಾನವಾಗಿರುವ

ಅಂತಃಕರಣ ರೂಪವನ್ನು ಪಡೆಯುತ್ತದೆ. **ಗೋಚರೀ**ಸ್ಥಿತಿಯಲ್ಲಿ ಅಭಿನ್ನವಾದ ತನ್ನ ಸ್ವರೂಪದಿಂದ ಪ್ರಕಾಶಿಸುತ್ತಿರುತ್ತದೆ. ಭೇದವನ್ನಾಲೋಚಿಸುವಂತಹ ಬಹಿಷ್ಕರಣ ದೇವತಾರೂಪಗಳನ್ನು ಪಡೆದು **ದಿಕ್ಚರೀ** ಚಕ್ರಗಳೆಂದೆನಿಸಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಅಭೇದ ಪ್ರಕಾಶವು ಮರೆಮಾಚಲ್ಪಟ್ಟು ಸ್ಫುರಿಸುತ್ತಿರುತ್ತದೆ. ಸಾರ್ವಾತ್ಮ್ಯ ಸ್ವಭಾವ ವುಳ್ಳ ಇವನ ಸ್ವರೂಪವು ಮರೆಮಾಚಲ್ಪಟ್ಟು ತಾನು ಬೇರೆ ಎಂಬ ಭಾವನೆಯು **ಭೂಚರೀ** ಚಕ್ರದಲ್ಲುಂಟಾಗುತ್ತದೆ. ಇದೆಲ್ಲವೂ ಪಶುಭೂಮಿಕೆಯಲ್ಲಾದರೋ ಇದೇ ಶಕ್ತಿಗಳು ಸರ್ವಕರ್ತೃತ್ವರೂಪವಾದ ಗೋಚರಿಯಾಗಿಯೂ ಅಭೇದ ಆಲೋಚನಾರೂಪ ವಾದ ದಿಕ್ಚರಿಯಾಗಿಯೂ ತನ್ನ ಶರೀರದಂತೆ ಅಭಿನ್ನ ಪ್ರಥೆಯುಳ್ಳ ಪ್ರಮೇಯರೂಪ ವಾದ ಭೂಚರೀ ರೂಪವಾಗಿಯೂ ಪತಿಹೃದಯವಿಕಾಸದಿಂದ ಸ್ಫುರಿಸುತ್ತದೆ.

ಖೇಚರೀ ಸ್ಥಿತಿಯಲ್ಲಿ ಆ ಮಹಾಚಿತ್ತು ಪಂಚಕಂಚುಕಗಳಿಂದ ಕೂಡಿ ಸ್ವಸ್ವ ರೂಪವನ್ನು ಮರೆಸಿಕೊಂಡು ಜೀವಭಾವವನ್ನು ಹೊಂದಿತು. ಗೋಚರೀ ಸ್ಥಿತಿಯಲ್ಲಿ ಮನಶ್ಶಕ್ತಿಯಾಯಿತು. ಅನೇಕ ವಿಕಲ್ಪಗಳಿಗೆ ಕಾರಣವಾದ ಅಂತಃಕರಣರೂಪವನ್ನು ಪಡೆಯಿತು. ದಿಕ್ಚರೀ ಸ್ಥಿತಿಯಲ್ಲಿ ಬಾಹ್ಯೇಂದ್ರಿಯಗಳಾಯಿತು. ಭೂಚರೀ ಸ್ಥಿತಿಯಲ್ಲಿ ಭೇದಜ್ಞಾನವನ್ನುಂಟುಮಾಡುವ ಬಾಹ್ಯವಿಷಯರೂಪವನ್ನು ತಾಳಿತು. ಪರಾಶಕ್ತಿಯು ಜೀವನಲ್ಲಿ ಅವರೋಹಣ ಕ್ರಮದಲ್ಲಿ ಈ ನಾಲ್ಕು ರೂಪಗಳನ್ನು ಹೊಂದುತ್ತದೆ. ಈ ವಿಷಯವನ್ನು ಸಿದ್ಧಪುರುಷನಾದ ಭಟ್ಟದಾಮೋದರನು ಈ ರೀತಿ ಹೇಳುತ್ತಾನೆ.

ಪೂರ್ಣಾವಚ್ಛಿನ್ನಮಾತ್ರಾಂತರ್ಬಹಿಷ್ಕರಣ ಭಾವಗಾಃ ।
ವಾಮೇಶಾದ್ಯಾಃ ಪರಿಜ್ಞಾನಾಜ್ಞಾನಾತ್ಸ್ಯುರ್ಮುಕ್ತಿ ಬಂಧದಾಃ ॥

ಇರುವ ಅಂತಃಕರಣ ಬಹಿಷ್ಕರಣ ಪ್ರಮೇಯ ಸ್ವಭಾವಗಳಾಗಿರುವ ವಾಮೇಶ್ವರೀ ಮೊದಲಾದ ಶಕ್ತಿಗಳನ್ನು ತಿಳಿಯುವುದರಿಂದ ಮುಕ್ತಿ. ತಿಳಿಯದೆ ಇರುವುದರಿಂದ ಬಂಧ. ಈ ಶಕ್ತಿಗಳಿಂದ ವ್ಯಾಮೋಹಿತನಾಗಿರುವುದೇ ಸಂಸಾರಿತ್ವ.

ಚಿದಾತ್ಮನಾದ ಪರಮೇಶ್ವರನು ಯಾವಾಗಲೂ ಚ್ಯುತಿಯಿಲ್ಲದೆ ಒಂದೇ ಆಗಿರುವ ಸ್ಫುರತ್ತಾರೂಪವಾದ ಕರ್ತೃತ್ವ ಪ್ರಧಾನವಾದ ಐಶ್ವರ್ಯಶಕ್ತಿಯಿಂದ ವಿರಾಜಿಸು ತ್ತಿರುತ್ತಾನೆ. ಆ ಮಹಾಶಕ್ತಿಯು ಯಾವಾಗ ತನ್ನ ಸ್ವರೂಪವನ್ನು ಮರೆಸಿಕೊಂಡು ಪಶುಸ್ಥಿತಿಯಲ್ಲಿ ಪ್ರಾಣಾಪಾನ ಸಮಾನವೇ ಮೊದಲಾದ ಶಕ್ತಿದಶೆಗಳಿಂದ ಕಂಗೊಳಿಸು ತ್ತದೆಯೋ ಆಗ ಜಾಗ್ರತ್ ಸ್ವಪ್ನ ಸುಷುಪ್ತಿ ದಶೆಗಳಿಂದ ದೇಹ ಪ್ರಾಣ ಪರ್ಯಷ್ಟಕ ಕಲಾ ಮೊದಲಾದವುಗಳಿಂದ ಮೋಹಗೊಳಿಸುತ್ತದೆ. ಈ ಮೋಹಗೊಳ್ಳುವಿಕೆಯೇ **ಸಂಸಾರಿತ್ವ**. ಯಾವಾಗ ಮಧ್ಯಮೋಲ್ಲಾಸವು ಉದಾನಶಕ್ತಿಯನ್ನು ವಿಕಾಸಗೊಳಿ ಸುತ್ತದೆಯೋ ಹಾಗೆಯೇ ವಿಶ್ವವನ್ನು ವ್ಯಾಪಿಸಿರುವ ವ್ಯಾನಶಕ್ತಿಯನ್ನೂ ವಿಕಾಸ ಗೊಳಿಸುತ್ತದೆ. ಆ ಸ್ಥಿತಿಯಲ್ಲಿ ತುರ್ಯಾ ಮತ್ತು ತುರ್ಯಾತೀತವಾದ ಪೂರ್ಣ ಚಿದಾನಂದಾನುಭವವುಂಟಾಗುತ್ತದೆ. ಈ ರೀತಿಯಾದ ಸಿದ್ಧಾವಸ್ಥೆಯನ್ನು ಪಡೆದಿರು

ವವನು ಜೀವನ್ಮುಕ್ತನಾಗುತ್ತಾನೆ. ಪಂಚಕೃತ್ಯಗಳು, ವ್ಯಕ್ತಿಗೇಸೆ ಅನ್ವಯಿಸುವ ಖೇಚರೀ ಗೋಚರೀ ವಿಷಯಗಳು, ಪ್ರಾಣಾಪಾನ ಸಮಾನ ವಿಷಯಗಳು ಇಂತಹ ಸ್ವಶಕ್ತಿಗಳಿಂದಲೇ ವ್ಯಾಮೋಹಿತನಾಗುವ ಕ್ರಮವು ವಿವರಿಸಲ್ಪಟ್ಟಿತು.

ಒಂಬತ್ತನೆಯ ಸೂತ್ರದಲ್ಲಿ ಚಿತ್ಪ್ರಕಾಶ ಸಂಕೋಚದಿಂದ ಸಂಸಾರಿಯಾಗುತ್ತಾನೆಂದು ಹೇಳಿದೆ. ಈ ಸೂತ್ರದಲ್ಲಾದರೋ ತನ್ನ ಶಕ್ತಿಗಳಿಂದ ವ್ಯಾಮೋಹಿಸಲ್ಪಟ್ಟು ಸಂಸಾರಿಯಾಗುವವನು ಎಂದು ಬೇರೆ ಬಗೆಯಾಗಿ ಹೇಳಿದೆ. ಸಂಕುಚಿತ ಶಕ್ತಿಯುಳ್ಳವನಾಗಿದ್ದರೂ ದೇಹ ಪ್ರಾಣಾದಿಗಳಿಂದ ಕೂಡಿದ್ದರೂ ತನ್ನ ಶಕ್ತಿಗಳಿಂದ ವ್ಯಾಮೋಹಿತನಾಗದಿದ್ದರೆ—ಆಗಮಗಳಲ್ಲಿ ಹೇಳಿರುವಂತೆ ಬದ್ಧಾತ್ಮನು ಶಿವಭಟ್ಟಾರಕನೇ ಆಗಿರುತ್ತಾನೆಂದು ಇನ್ನೊಂದು ರೀತಿಯಾಗಿ ಹೇಳಿದೆ. ಪರಮೇಶ್ವರನು ಮನುಷ್ಯ ದೇಹವನ್ನು ಹೊಂದಿ ಮರೆಮಾಚಿಕೊಂಡಿದ್ದಾನೆಂದು ಆಗಮದಲ್ಲಿ ಹೇಳಲ್ಪಟ್ಟಿದೆ. ಯಾವ ಸೂಕ್ಷ್ಮದೃಷ್ಟಿಯುಳ್ಳವರು ಶರೀರವನ್ನಾಗಲಿ ಬಾಹ್ಯಪದಾರ್ಥಗಳನ್ನಾಗಲಿ ಮೂವತ್ತಾರು ತತ್ತ್ವಮಯವೆಂದು ಶಿವರೂಪವಾಗಿದೆಯೆಂದೂ ನೋಡುವರೋ ಅವರು ಸಿದ್ಧಿಯನ್ನು ಪಡೆಯುವರು.

ಶಿವನಿಗೆ ಸ್ವಭಾವಸಿದ್ಧವಾಗಿರುವುವುಗಳು ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳು. ಇವುಗಳಲ್ಲಿ ಚಿಚ್ಛಕ್ತಿ ಆನಂದಶಕ್ತಿ ಇವೆರಡೂ ಸ್ವರೂಪವನ್ನು ನಿರೂಪಿಸುವಂಥವುಗಳು. ಇಚ್ಛಾಜ್ಞಾನ ಕ್ರಿಯಾಶಕ್ತಿಗಳ ಸಂಕೋಚವೇ ಆಣವ ಮಾಯೀಯ ಕಾರ್ಮಿಕ ಮಲಗಳೆಂದು ಹಿಂದೆಯೇ ಹೇಳಿದೆ. ಈಶ್ವರಶಕ್ತಿಗಳು ಎಷ್ಟು ಬಗೆಯಾಗಿ ಹೊರಹೊಮ್ಮುತ್ತವೆಂಬುದನ್ನು ವಿಶದವಾಗಿ ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಈ ಈಶ್ವರನ ಶಕ್ತಿಗಳು ಶಿವನನ್ನು ಬಿಟ್ಟು ಬೇರೆಯಿಲ್ಲ. ಶಕ್ತಿಯೂ ಶಕ್ತಿಯನ್ನುಳ್ಳ ಶಕ್ತನೂ ಬೇರೆಯಾಗಿರುವುದಿಲ್ಲ. ಶಿವನು ಚಿನ್ಮಯನಾಗಿರುವುದರಿಂದ ಆತನ ಶಕ್ತಿಯು ಮೊದಲು ಚಿದ್ವಿಕಾಸ ರೂಪವಾದ ಪೂರ್ಣಾಹಂ ವಿಮರ್ಶಾರೂಪವಾಗಿಯೇ ಇರುತ್ತದೆ. ಇದು ಪ್ರಸರಿಸುವ ಕ್ರಮದಲ್ಲಿ ಅನಂತ ಭೇದಗಳನ್ನು ಪಡೆಯುತ್ತದೆ. ಈ ಶಕ್ತಿಯ ಪ್ರಸಾರವನ್ನು ನಾವು ಮೂರು ಬಗೆಯಾಗಿ ಎಣಿಸಬಹುದು. ಒಂದು ಗ್ರಾಹ್ಯಗಳಾಗಿರುವ ಮೂವತ್ತೈದು ತತ್ತ್ವಗಳ ರೂಪ. ಇನ್ನೊಂದು ಗ್ರಾಹಕರೂಪವಾದ ಸಪ್ತಪ್ರಮಾತೃಗಳು. ಮೂರನೆಯದು ಪರಾಪಶ್ಯಂತೀ ಮಧ್ಯಮಾ ವೈಖರೀ ರೂಪದಿಂದಿದೆ. ಈ ಪರಿಯ ಮೂರು ಪ್ರಕಾರಗಳಲ್ಲಿ ಮೂವತ್ತೈದು ತತ್ತ್ವಗಳ ಮತ್ತು ಪ್ರಮಾತೃಗಳ ವಿಷಯ ಹಿಂದೆಯೇ ಹೇಳಲ್ಪಟ್ಟಿದೆ. ಚಿನ್ಮಯನಾದ ಶಿವನು ಸ್ವಾತಂತ್ರ್ಯ ಶಕ್ತಿಯಿಂದಲೇ ಎಲ್ಲಾ ವಿಶ್ವವನ್ನೂ ಪ್ರಕಟಪಡಿಸುವಾಗ ಅನೇಕ ಶಕ್ತಿಗಳನ್ನು ಹೊರಹೊಮ್ಮಿಸುತ್ತಾನೆ. ಇದರಲ್ಲಿ **ಪರಾಶಕ್ತಿಯು** ತನ್ನ ಸಹಜ ಸ್ವರೂಪವನ್ನು ಮಿತಪ್ರಮಾತೃವಿಗೆ (ಜೀವನಿಗೆ) ತೋರ್ಪಡಿಸುವುದಿಲ್ಲ. ಈ ಪರಾಶಕ್ತಿಯು ಮಹಾಮಂತ್ರರೂಪವಾಗಿ ಮೊದಲು ಅಭಿನ್ನವಾಗಿರುತ್ತದೆ. 'ಆಕೂತ'ದಿಂದ **ಪಶ್ಯಂತೀ** ಸ್ಥಿತಿಯನ್ನು ಪಡೆಯುತ್ತದೆ. **ಮಧ್ಯಮಾ** ಸ್ಥಿತಿಯನ್ನು ಪಡೆದಾಗ ಗ್ರಾಹ್ಯಗ್ರಾಹಕಾಂಶಗಳು ಸಮಾನವಾಗಿರುತ್ತವೆ. **ವೈಖರೀ**

ದಶೆಗೆ ಬರುವ ವೇಳೆಗೆ ಅಕಾರಾದಿ ಕ್ಷಕಾರಾಂತವಾದ ಐವತ್ತು ಅಕ್ಷರರೂಪವಾಗಿ ಹೊರ ಹೊಮ್ಮುತ್ತದೆ. ಅಕ್ಷರಗಳಿಂದ ಪದಗಳೂ ಪದಗಳಿಂದ ವಾಕ್ಯಗಳೂ ವಾಕ್ಯಗಳಿಂದ ಅರ್ಥ ತಾತ್ಪರ್ಯಗಳೂ ಅನುಭವಿಸಲ್ಪಡುತ್ತಿರುತ್ತವೆ. ಈ ರೀತಿಯಾಗಿ ಅಕ್ಷರಗಳು ಮಿತ ಪ್ರಮಾತೃವಿಗೆ ಅನಂತವಾದ ವಿಕಲ್ಪಗಳನ್ನು ತೋರಿಸುತ್ತಿರುತ್ತವೆ. ಅಕ್ಷರಗಳ ಹಿನ್ನೆಲಿ ಯೇನು ಅದರ ಮೂಲಸ್ವರೂಪವೇನು ಎಂದು ನಾವು ಅಷ್ಟಾಗಿ ಯೋಚಿಸುವುದಿಲ್ಲ. ಶ್ರದ್ಧೆಯಿಂದ ವಿಮರ್ಶೆಮಾಡುವವರಿಗೆ ಅದರ ವೈಶಿಷ್ಟ್ಯದ ಅರಿವಾಗುತ್ತದೆ. ಪರಾಶಕ್ತಿಯು ಬೇರಿದ್ದ ಹಾಗೆ. ವೈಖರಿಯು ಮರಕ್ಕೆ ಎಲೆಗಳೂ ಹೂಗಳೂ ಇದ್ದ ಹಾಗೆ. ಈ ರೀತಿಯಾಗಿ ವೈಖರೀ ವಿಲಾಸವು ಅನಂತವಾಗಿದೆ. ಈ ಅಕ್ಷರ ಸಾಮ್ರಾಜ್ಯವನ್ನು ಅನುಭವಿಸುವ ವ್ಯಕ್ತಿಯು ತನ್ನನ್ನು ತುಂಬಾ ಸಂಕುಚಿತನನ್ನಾಗಿ ತಿಳಿಯುತ್ತಾನೆ. ಹೀಗಿದ್ದರೂ ಅಕ್ಷರಗಳಲ್ಲಿ ಒಂದು ವಿಶಿಷ್ಟವಾದ ಮಹಾತ್ಮ್ಯವಿದೆ. ಪ್ರತಿಯೊಂದು ಅಕ್ಷರಕ್ಕೂ ಒಂದೊಂದು ಅಧಿದೇವತೆಯಿದೆ. ಅಕ್ಷರಸಂಯೋಗವು ಮಂತ್ರವಾಗುತ್ತದೆ. ಇಂತಹ ಮಂತ್ರಜಪಗಳಿಂದ ಚಮತ್ಕಾರವಾದ ಫಲಗಳುಂಟಾಗುತ್ತವೆ. ಇದೆಲ್ಲಾ ಸ್ಥೂಲ ವಿಷಯ.

ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ ವೈಖರಿಯಿಂದ ಮಧ್ಯಮಾ, ಮಧ್ಯಮಾ ದಿಂದ ಪಶ್ಯಂತೀ, ಪಶ್ಯಂತೀಯಿಂದ ಪರಾ—ಹೀಗೆ ಅಂತರ್ಮುಖವಾಗಿ ಅನುಸಂಧಾನ ವೇರ್ಪಡುತ್ತದೆ. ಆ ಸ್ಥಿತಿಯಲ್ಲಿ ದೇಶ ಕಾಲ ಆಕಾರಗಳಿಲ್ಲದ ನಿರ್ವಿಕಲ್ಪವಾದ ಶಕ್ತಿಯ ಅನುಸಂಧಾನವೂ ಚಿದನುಭವವೂ ಬೇರೆಯಾಗಿ ತೋರುವುದಿಲ್ಲ. ಪರಾಶಕ್ತಿಯ ಪ್ರಸಾರ ಕ್ರಮವನ್ನು ನಾವು ಅರಿತರೂ ಭೇದಪ್ರಪಂಚದಲ್ಲಿ ನಮ್ಮ ವ್ಯವಹಾರ ನಡೆಯಲೇ ಬೇಕು. ಇದರಲ್ಲಿ ಎಲ್ಲಾ ಅಕ್ಷರಗಳನ್ನೂ ಆ ಪರಾಶಕ್ತಿಯ ವಿಕಾಸಗಳೆಂದು ತಿಳಿದು ನಾವು ಉಚ್ಚರಿಸುವ ಪ್ರತಿಯೊಂದು ಅಕ್ಷರವೂ ಆ ಪರಾಶಕ್ತಿಯ ಉಪಾಸನೆಯೆಂಬ ಭಾವನೆಯಿದ್ದರೆ ಅಂತಹವನಿಗೆ ಮಾತೃಕಾಚಕ್ರ ಸಂಬೋಧವಾಗುತ್ತದೆಂದು ಶಾಸ್ತ್ರ ಗಳಲ್ಲಿ ಹೇಳಿದೆ. ಮಾತೃಕಾಚಕ್ರ ಸಂಬೋಧವೆಂದರೆ ಸಾಧಕನು ವ್ಯವಹಾರದೃಷ್ಟಿ ಯುಳ್ಳವನಾಗಿದ್ದರೂ ಪರಮಾರ್ಥದ ಕಡೆಗೆ ಯಾವಾಗಲೂ ಒಲವುಳ್ಳವನಾಗಿದ್ದರೆ ಅವನ ವಾಕ್ವ್ಯಾಪಾರವೆಲ್ಲಾ ಪರಾಶಕ್ತಿಯ ಉಪಾಸನೆಯಾಗಿ ಅಕ್ಷರಗಳಿಂದ ಹೇಳು ವುದಕ್ಕೆ ಆಗದೆ ಇರುವ ಅನುಭವವೇರ್ಪಡುತ್ತದೆ.

ಶಿವನು ಅಭಿನ್ನವಾದ ಚಿನ್ಮಯನಾಗಿರುತ್ತಾನೆ. ಭೇದರೂಪವಾದ ಪ್ರಪಂಚವನ್ನು ಸೃಷ್ಟಿಸುವುದೇ ಅವನಿಗೆ ಸಂಹಾರರೂಪವಾಗಿರುತ್ತದೆ. ಮಿತಪ್ರಮಾತೃವಿಗೆ ಭೇದ ಜ್ಞಾನವು ಸೃಷ್ಟಿರೂಪವಾಗಿಯೂ ಅಭೇದಜ್ಞಾನವು ಸಂಹಾರರೂಪವಾಗಿಯೂ ಇರು ತ್ತದೆ. ಶಿವನ ಅಭೇದಸ್ಥಿತಿ ನಿತ್ಯವಾದದ್ದು ಮತ್ತು ಒಡಕಿಲ್ಲದಿರುವುದು. ಮಿತ ಪ್ರಮಾತೃವಿನ ಅಭೇದಸ್ಥಿತಿ ಮಿಂಚಿನಂತಿರುವುದು. ಆದುದರಿಂದ ಈ ಮಿತಪ್ರಮಾತೃವು ತನ್ನ ಪಂಚಕೃತ್ಯಗಳನ್ನು ಸದಾ ಅನುಸಂಧಾನಮಾಡುವುದರಿಂದ ಚಿದಾನಂದಾವೇಶದಲ್ಲಿ ಮುಳುಗುವನು. ಮಾರ್ಗಗಳು ಬೇರೆಬೇರೆಯಾಗಿದ್ದರೂ ಕೊನೆಯಲ್ಲುಂಟಾಗುವ

ಪರಮಫಲ ಒಂದೇರೀತಿಯಾಗಿರುತ್ತದೆ. **ಮಾತೃಕಾನುಸಂಧಾನ, ಪಂಚಕೃತ್ಯಗಳ ಪರಿಶೀಲನ** ಇವೆರಡೂ ಮುಖ್ಯಭೇದಗಳು. ಇವುಗಳ ಅಭ್ಯಾಸದ ಫಲವು ಒಂದೇ ಆಗಿರುತ್ತದೆ.

ಶಿವನ ಶಕ್ತಿಗಳು ಅನಂತವೆಂದು ಹೇಳಿದೆ. ಅದರಲ್ಲಿ ಚಿಚ್ಛಕ್ತಿಯೇ ವಿಶ್ವವನ್ನು ಹೊರಹೊಮ್ಮಿಸುವಾಗ ಅನೇಕ ರೂಪಗಳನ್ನು ಪಡೆಯುತ್ತದೆ. ನಮ್ಮ ಅಲ್ಪಜ್ಞಾನ ದಿಂದ ಎಲ್ಲವನ್ನೂ ವಿಶದಪಡಿಸುವಕ್ಕಾಗದಿದ್ದರೂ ಕೆಲವು ಪರಿಭಾಷೆಗಳ ಮೂಲಕ ಆದಷ್ಟುಮಟ್ಟಿಗೆ ತಿಳಿಯಬಹುದು. ಪರಿಭಾಷೆ, ಸಂಜ್ಞೆ, ಲಕ್ಷಣ ಎಂಬ ಪದಗಳನ್ನು ನಮ್ಮ ಬುದ್ಧಿಗೆ ನಿರ್ದಿಷ್ಟವಾದ ಆಕಾರವನ್ನುಂಟುಮಾಡುವುದಕ್ಕೋಸ್ಕರ ಹೇಳುತ್ತೇವೆ. ಇಲ್ಲಿ **ವಾಮೇಶ್ವರೀ** ಎಂಬುದು ಒಂದು ಸಂಜ್ಞೆ. ವಾಮೇಶ್ವರೀ ಅಂದರೆ ವಿಶ್ವವನ್ನು ವಮನಮಾಡುವಿಕೆ ಅಥವಾ ಹೊರಹೊಮ್ಮಿಸುವ ಶಕ್ತಿ. ಇಂತಹ ಅಸಾಧಾರಣವಾದ ವಿಚಿತ್ರ ಶಕ್ತಿಗೆ ವಾಮೇಶ್ವರೀ ಎಂದು ಹೆಸರು. ಈ ಶಕ್ತಿಯು ಮೂಲರೂಪದಿಂದ ಮಿತ ಪ್ರಮಾತೃವಿನ ಶರೀರ, ಇಂದ್ರಿಯ, ಅರ್ಥ ಮೊದಲಾದ ರೂಪಗಳನ್ನು ತನ್ನ ಪ್ರಭಾವದಿಂದ ಪಡೆಯುತ್ತದೆ. ಜ್ಞಾತೃತ್ವ ಕತೃತ್ವ ಮೊದಲಾದ ಶಕ್ತಿಗಳನ್ನುಳ್ಳದ್ದಾಗಿ ಮಿತಪ್ರಮಾತೃವಿ ನಲ್ಲಿ ವಿಲಕ್ಷಣವಾಗಿ ಸ್ಫುರಿಸುತ್ತದೆ. ಕಿಂಚಿತ್‌ಕರ್ತೃತ್ವ ಕಿಂಚಿತ್‌ಜ್ಞಾತೃತ್ವ ಮೊದಲಾದ ಸಂಕುಚಿತಾವಸ್ಥೆಗಳನ್ನುಳ್ಳದ್ದಾಗಿಯೂ ಒಂದು ಸಮಯದಲ್ಲಿ ದೇಶ ಕಾಲ ಆಕಾರ ಸಹಿತವಾದ ಜ್ಞಾನವನ್ನುಂಟುಮಾಡುತ್ತಲೂ ಇನ್ನೊಂದು ಸಮಯದಲ್ಲಿ ದೇಶಕಾಲ ಆಕಾರರಹಿತವಾದ ನಿರ್ವಿಕಲ್ಪವಾದ ಚಿದನುಭವವನ್ನು ಮಿಂಚಿನಂತೆ ತೋರಿಸುತ್ತಲೂ ಇರುತ್ತದೆ. ಇದು ವಾಮೇಶ್ವರಿಯ ಮೊದಲನೆಯದಾದ **ಖೇಚರೀಸ್ಥಿತಿ.** 'ಖ' ಎಂದರೆ ಆಕಾಶ. 'ಚರಿ' ಎಂದರೆ ಅದರಲ್ಲಿ ಸಂಚರಿಸುವುದು. ಚಿದ್ಗಗನದಲ್ಲಿ ಸಂಚರಿಸುವುದು ಎಂದರ್ಥ.

ಮಾಯಾ ಪದದಲ್ಲಿ ಭೇದಜ್ಞಾನವೇ ಪ್ರಧಾನವಾದದ್ದು - ಮಿತಪ್ರಮಾತೃವಿಗೆ ಈ ಭೇದಜ್ಞಾನಗಳಿಗೆ ಮುಖ್ಯವಾದ ಉಪಕರಣ ಮನಸ್ಸು. ಮನಸ್ಸಿಲ್ಲದೆ ವಿಕಲ್ಪಗಳಿಲ್ಲ. ವಿಕಲ್ಪಗಳಿಲ್ಲದೆ ದೇಶಕಾಲಾದಿ ಭೇದಗಳು ತೋರುವುದಿಲ್ಲ. ಪ್ರತಿಯೊಂದು ಪದಾರ್ಥಕ್ಕೂ ಒಂದು ನಿಶ್ಚಿತವಾದ ವ್ಯವಹಾರ ನಿಯಮವಿದೆ. ಈ ನಿಯಮವು ಬೇರೆ ಬೇರೆ ಪದಾರ್ಥ ಗಳಿಗೆ ಬೇರೆ ಬೇರೆಯಾಗಿರುತ್ತದೆ. ಇಂತಹ ಭೇದವ್ಯವಹಾರದಲ್ಲಿ ಅಭಿಮಾನವು ಅಂತಃಕರಣದಿಂದುಂಟಾಗುತ್ತದೆ. ಈ ವ್ಯವಹಾರಕ್ಕೆ ಮೂಲಕಾರಣವಾಗಿರುವುದು ಆ ಚಿಚ್ಛಕ್ತಿಯಾಗಿದ್ದರೂ ತನ್ನ ಅಭಿನ್ನವಾದ ಸ್ವರೂಪವನ್ನು ಈ ಸ್ಥಿತಿಯಲ್ಲಿ ತೋರ್ಪ ಡಿಸುವುದಿಲ್ಲ. ಈ ಅಂತಃಕರಣಾವಸ್ಥೆಯನ್ನು ಪಡೆದಿರುವ ದಶೆಗೆ **ಗೋಚರೀ** ಚಕ್ರವೆಂದು ಹೆಸರು. 'ಗೋ' ಎಂದರೆ ಕಿರಣ 'ಚರಿ' ಅಂದರೆ ಕಿರಣಗಳಲ್ಲಿ ಗೋಚರಿ ಸುವುದು ಎಂದರ್ಥ. ತೇಜಸ್ಸು ಅಖಂಡವಾಗಿದ್ದರೂ ಕಿರಣಗಳು ಅನೇಕವಾಗಿರುವುವು. ಅಂತಃಕರಣಗಳು ಅನೇಕ ವಿಧವಾಗಿ ಮಿಂಚುತ್ತಿರುತ್ತವೆ. ಅಂತಃಕರಣದ ಒಂದು ವಿಶೇಷ ಯೋಗ್ಯತೆಯೇನೆಂದರೆ: ರೂಪ ರಸ ಗಂಧ ಶಬ್ದ ಸ್ಪರ್ಶ—ಈ ಐದು ಗುಣಗಳನ್ನು

ಅನುಭವ ಮಾಡಿಸುವಿಕೆ. ಚಿಚ್ಛಕ್ತಿಯು ಮೊದಲು ಜೀವಾವಸ್ಥೆಯಲ್ಲಿ ಕಿಂಚಿತ್ ಕರ್ತೃತ್ವಾದಿ ಸಂಕುಚಿತ ಜೀವಧರ್ಮಗಳನ್ನು ತೋರ್ಪಡಿಸಿತು. ಗೋಚರೀಚಕ್ರವಲ್ಲಿ ವಿಕಲ್ಪಗಳನ್ನು ಪ್ರಧಾನವಾಗಿ ತೋರ್ಪಡಿಸಿತು. ಈ ವಿಕಲ್ಪಗಳು ಮೇಲೆ ಹೇಳಿದ ರೂಪ ರಸವೇ ಮೊದಲಾದ ಐದು ಗುಣಗಳ ರೂಪವಾಗಿದೆ. ಇನ್ನು ಇದಕ್ಕಿಂತಲೂ ಸಂಕುಚಿತ ವಾದ ರೂಪರಸ ಮುಂತಾದ ಒಂದೊಂದೇ ಗುಣವನ್ನು ಗ್ರಹಿಸುವ ಬಾಹ್ಯೇಂದ್ರಿಯಗಳ ರೂಪದಿಂದ ಸ್ಫುರಿಸುವಾಗ **ದಿಕ್ಚರೀ** ಚಕ್ರವೆಂದೆನಿಸಿಕೊಳ್ಳುತ್ತದೆ. 'ದಿಕ್' ಎಂದರೆ ದಿಕ್ಕುಗಳಲ್ಲಿ 'ಚರಿ' ಎಂದರೆ ಚರಿಸುವುದು ಎಂದರ್ಥ. ಇದುವರೆಗೂ ಆಗಿರುವ ಮೂರು ಚಕ್ರಗಳು ಪದಾರ್ಥಗಳನ್ನು ಪ್ರತಿಫಲಿಸುವ ಯೋಗ್ಯತೆಯುಳ್ಳವುಗಳಾಗಿವೆ. ಈ ಸ್ಥಿತಿಯಲ್ಲಿಲ್ಲದೆ ಪ್ರತಿಫಲಿಸಲ್ಪಡುವ ಯೋಗ್ಯತೆಯನ್ನು ಪಡೆದು ಬೇರೆ ಬೇರೆ ವಸ್ತು ರೂಪಗಳಾಗಿರುವ ಪ್ರಮೇಯಗಳು ಅನಂತವಾಗಿವೆ. ಅವು ಯಾವಾಗಲೂ ಪರಸ್ಪರ ಭಿನ್ನವಾಗಿ ತಿಳಿಯಲ್ಪಡುವವುಗಳಾಗಿರುತ್ತವೆ. ಈ ರೀತಿಯಾದ ಭೇದಜ್ಞಾನವನ್ನುಂಟು ಮಾಡುವ ಸ್ವಭಾವವುಳ್ಳದ್ದಕ್ಕೆ **ಭೂಚರೀ** ಚಕ್ರವೆಂದು ಹೆಸರು. 'ಭೂ' ಎಂದರೆ ಭೂಮಿ. 'ಚರಿ' ಎಂದರೆ ಸಂಚರಿಸುವುದು ಎಂದರ್ಥ. ಪಾಂಚಭೌತಿಕವಾದ ಎಲ್ಲಾ ಪದಾರ್ಥಗಳೂ ಭೂಚಕ್ರದಲ್ಲಡಗಿರುತ್ತವೆ. ಈ ರೀತಿಯಾಗಿ ಆ ಮಹಾಮಹಿಮಳಾದ ಚಿಚ್ಛಕ್ತಿಯು ಖೇಚರೀಸ್ಥಿತಿಯಲ್ಲಿ ಮಿತಪ್ರಮಾತೃವಾಗಿಯೂ ಗೋಚರೀಸ್ಥಿತಿಯಲ್ಲಿ ಅಂತಃಕರಣರೂಪಿಯಾಗಿಯೂ ದಿಕ್ಚರೀಸ್ಥಿತಿಯಲ್ಲಿ ಬಾಹ್ಯೇಂದ್ರಿಯರೂಪಿಯಾಗಿಯೂ ಭೂಚರೀಸ್ಥಿತಿಯಲ್ಲಿ ಪ್ರಮೇಯ ಸ್ವರೂಪಿಯಾಗಿಯೂ ಪ್ರಕಾಶಿಸುತ್ತಾಳೆ.

ಇದೇ ಚಿಚ್ಛಕ್ತಿಯೇ ಪತಿಭೂಮಿಕೆಯಲ್ಲಿ ಖೇಚರೀಸ್ಥಿತಿಯಲ್ಲಿ ಸರ್ವಜ್ಞತ್ವ, ಸರ್ವಕರ್ತೃತ್ವ, ಸರ್ವಶಕ್ತಿತ್ವಾದಿ ರೂಪವಾಗಿಯೂ, ಗೋಚರೀಸ್ಥಿತಿಯಲ್ಲಿ ಅಭೇದ ನಿಶ್ಚಯ ರೂಪವಾಗಿಯೂ, ದಿಕ್ಚರೀಸ್ಥಿತಿಯಲ್ಲಿ ಅಭೇದಾಲೋಚನಾತ್ಮಕವಾಗಿಯೂ ಭೂಚರೀಸ್ಥಿತಿಯಲ್ಲಿ ವಿಶ್ವವೆಲ್ಲಾ ಅಭಿನ್ನವಾಗಿ ತನ್ನ ಶರೀರದಂತೆ ಸ್ಫುರಿಸುತ್ತದೆ. ಇಂತಹ ಚಮತ್ಕಾರವು ಈ ಶಕ್ತಿಯ ವಿಲಾಸವಾಗಿದೆಯೆಂದು ತಿಳಿಯಬೇಕು.

ಪರಮೇಶ್ವರನ ಶಕ್ತಿಗಳು ಅನಂತವಾಗಿದ್ದರೂ ಅವುಗಳಲ್ಲಿ ಸ್ಫುರತ್ತಾಸಾರವಾಗಿರುವ ಶಕ್ತಿಯೊಂದಿದೆ. ಅದನ್ನು **ಕರ್ತೃತ್ವ ಶಕ್ತಿ, ಐಶ್ವರ್ಯ ಶಕ್ತಿ** ಎಂದು ಕರೆಯುತ್ತಾರೆ. ಯಾವುದು ನಿಸ್ತರಂಗವಾಗಿದ್ದು ಉನ್ಮಿಷಿತವಾಗುವುದೋ ಅದು ಕರ್ತೃತ್ವ ಶಕ್ತಿಯೆಂದೆನಿಸಿ ಕೊಳ್ಳುವುದು. ಅದು ಪತಿದಶೆಯಲ್ಲಿ ವ್ಯತ್ಯಾಸವಿಲ್ಲದೆ ಇರುತ್ತದೆ. ಆ ಶಕ್ತಿಯು ಪಶುದಶೆ ಯಲ್ಲಿ ಪ್ರಸರಿಸುವಾಗ ತನ್ನ ಅನಂತವಾದ ಸ್ವರೂಪವನ್ನು ಮರೆಮಾಚಿಕೊಂಡಿರುತ್ತದೆ. ಇಳಿಯುವಾಗ ಭೌತಿಕ ಶರೀರವನ್ನು ಧರಿಸಿರುವ ಪ್ರಾಣಾಪಾನ ವ್ಯಾನ ಸಮಾನ ಮೊದಲಾದವುಗಳನ್ನೊಳಗೊಂಡ **ಪ್ರಾಣಶಕ್ತಿ** ರೂಪವನ್ನು ಪಡೆಯುತ್ತದೆ. ಪ್ರಾಣ ಶಕ್ತಿಯ ವಿವರಣೆಗಳು ಬೇರೆಬೇರೆ ರೀತಿಯಾಗಿರುತ್ತವೆ. ಪ್ರಾಣಶಕ್ತಿಗಳು ಆಯಾಶರೀರಕ್ಕೆ ಧಾರಣ ಪೋಷಣ ವಿಷಯಗಳಲ್ಲಿ ಒಂದು ವಿಶಿಷ್ಟವಾದ ಕೆಲಸವನ್ನು ಮಾಡುತ್ತಿರುತ್ತವೆ. ಪ್ರಾಣಶಕ್ತಿಯು ಹೃದಯಕ್ರಿಯೆಯ ಮೂಲಕ ಶರೀರವನ್ನು ಧರಿಸುತ್ತದೆ. ಅಪಾನವು

ಶರೀರದ ಅಧೋಭಾಗದಲ್ಲಿದ್ದು ವಾತವಿಸರ್ಗವೇ ಮೊದಲಾದ ಕೆಲಸಗಳನ್ನು ಮಾಡು ತ್ತದೆ. ಸಮಾನವು ಹೊಕ್ಕುಳಿನಲ್ಲಿದ್ದು ಜೀರ್ಣಶಕ್ತಿಯ ಕ್ರಮಗಳನ್ನು ನಡೆಸುತ್ತಿರುತ್ತದೆ. ವ್ಯಾನಶಕ್ತಿಯು ಶರೀರವನ್ನೆಲ್ಲಾ ವ್ಯಾಪಿಸಿರುತ್ತದೆ. ಹಾಗೆಯೇ ವಿಶ್ವವನ್ನೆಲ್ಲಾ ವ್ಯಾಪಿಸಿರು ತ್ತದೆ. ಇದು ಶರೀರದಲ್ಲಾಗುವ ವ್ಯತ್ಯಾಸಗಳನ್ನು ಒಂದು ಕ್ರಮದಲ್ಲಿಟ್ಟಿರುತ್ತದೆ. ಉದಾನಶಕ್ತಿಯು ಸುಷುಮ್ನಾನಾಡಿಯಲ್ಲಿರುತ್ತದೆ. ಆ ಸುಷುಮ್ನಾನಾಡಿಯು ಬೆನ್ನು ಮೂಳೆಯಲ್ಲಿ ಅತಿಸೂಕ್ಷ್ಮರೂಪದಿಂದ ಇದೆಯೆಂದು ತಾಂತ್ರಿಕರ ಅಭಿಪ್ರಾಯ. ಶಿವನ ವಾಸಸ್ಥಾನವಾದ ಬ್ರಹ್ಮರಂಧ್ರದಿಂದ ಕುಂಡಲಿನೀಶಕ್ತಿ ಇರುವ ಬೆನ್ನುಮೂಳೆಯ ಕೊನೆಯವರೆಗೂ ಸುಷುಮ್ನಾನಾಡಿ ಅಖಂಡವಾಗಿರುತ್ತದೆ. ಈ ಪ್ರಾಣಶಕ್ತಿಗಳು ಮುಖ್ಯವಾಗಿ ಹೃದಯಕ್ರಿಯೆಗಳು ಒಂದು ಕ್ಷಣವಾದರೂ ನಿಲ್ಲದೆ ತಮ್ಮ ಕೆಲಸಗಳನ್ನು ಜಾಗ್ರತ್ ಸ್ವಪ್ನ ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿಯೂ ನಡೆಸುತ್ತಲೇ ಇರುತ್ತವೆ. ಈ ಪ್ರಾಣವ್ಯಾಪಾರವು ನಿಂತರೆ ಶರೀರಕ್ಕೂ ಆತ್ಮಕ್ಕೂ ವಿಯೋಗವೇರ್ಪಡುತ್ತದೆ. ಲೋಕರೂಢಿಯಲ್ಲಿಯೂ ಕೂಡ ಮರಣಕ್ಕೆ ಪ್ರಾಣಹೋಯಿತೆಂದು ಹೇಳುತ್ತಾರೆ.

ಜಾಗ್ರತ್ ಸ್ವಪ್ನ ಸುಷುಪ್ತಿ ತುರ್ಯಾ ತುರ್ಯಾತೀತ ಎಂಬ ಐದು **ಅವಸ್ಥೆಗಳು** ಜೀವನಿಗಿವೆ. ಮೊದಲಿನ ಮೂರು ಅವಸ್ಥೆಗಳು ಎಲ್ಲರ ಅನುಭವದಲ್ಲಿವೆ. ಮಿಕ್ಕೆರಡು ತುಂಬಾ ನುರಿತ ಸಾಧಕರಿಗೆ ವಿಶದವಾಗಿ ಅನುಭವಕ್ಕೆ ಬರುತ್ತವೆ. ಶರೀರವಿರುವವನಿಗೆ ಯಾವುದಾದರೂ ಒಂದು ಅವಸ್ಥೆ ಇದ್ದೇ ಇರುತ್ತದೆ. ವ್ಯಕ್ತಿಯು ಶರೀರ ಇಂದ್ರಿಯ ಮನಸ್ಸು ಆತ್ಮ ಎಂಬ ನಾಲ್ಕು ತತ್ತ್ವಗಳು ಒಂದು ಕಡೆಯಲ್ಲಿ ಸೇರಿರುವ ಮೂರ್ತಿಯಾಗಿರುತ್ತಾನೆ. ಈ ಸಂಪ್ರದಾಯದಂತೆ ಹೇಳುವುದಾದರೆ ದೇಹ ಪ್ರಾಣ ಪುರ್ಯಷ್ಟಕ ಕಲಾದಿಗಳಿಂದ ವ್ಯಾಮೋಹಿತನಾಗಿರುವವನೇ ಮಿತಪ್ರಮಾತೃವಾದ ಜೀವನು. ಜಾಗ್ರತಾವಸ್ಥೆಯಲ್ಲಿ ಆತ್ಮನು ಮನಸ್ಸನ್ನು ಪ್ರೇರಿಸುತ್ತಾನೆ. ಮನಸ್ಸು ಇಂದ್ರಿಯಗಳಿಂದ ಬಾಹ್ಯಪದಾರ್ಥಗಳನ್ನು ಗ್ರಹಿಸುತ್ತದೆ. ಜಾಗ್ರದವಸ್ಥೆಯಲ್ಲಿ ಈ ನಾಲ್ಕರ ಸಂಬಂಧಗಳು ಇರುತ್ತವೆ. ಸ್ವಪ್ನಾವಸ್ಥೆಯಲ್ಲಿ ಬಾಹ್ಯಪದಾರ್ಥಗಳ ವ್ಯವಹಾರ ವಿಲ್ಲದೆ ಇರುವುದರಿಂದ ಆತ್ಮ ಮನಸ್ಸು ಮನಸ್ಸಿನ ವಿಷಯಗಳು ಮಾತ್ರ ಇರುತ್ತವೆ. ಸುಷುಪ್ತಿಯಲ್ಲಿ ಆತ್ಮ ಮತ್ತು ಮನಸ್ಸು ಇವೆರಡರ ಸಂಬಂಧ ಮಾತ್ರ ಇರುತ್ತದೆ. ಕೇವಲ ಸ್ವಾತ್ಮಪರಾಮರ್ಶವೇ ತುರ್ಯಾವಸ್ಥೆ. ಈ ಪರಮರ್ಶವೂ ಇಲ್ಲದೆ ಅಲೆಗಳಿಲ್ಲದ ಸಮುದ್ರದಂತಿರುವ ಸ್ಥಿತಿಗೆ ತುರ್ಯಾತೀತಾವಸ್ಥೆಯೆಂದು ಹೆಸರು. ಈ ಐದು ಅವಸ್ಥೆಗಳು ಎಲ್ಲರ ಅನುಭವದಲ್ಲೂ ಅಂಶತಃ ಇದ್ದೇ ಇವೆ. ಸಾಧಕನು ಸಾಧನಾಭ್ಯಾಸಗಳಿಂದ ಮಧ್ಯಧಾಮವನ್ನು ಅಂದರೆ ಸುಷುಮ್ನಾನಾಡಿಯನ್ನೂ ಅದರಲ್ಲಿರುವ ಉದಾನ ಶಕ್ತಿಯನ್ನೂ ಎಚ್ಚರಗೊಳಿಸಿದರೆ ಶರೀರವನ್ನೂ ವಿಶ್ವವನ್ನೂ ವ್ಯಾಪಿಸಿರುವ ವ್ಯಾನಶಕ್ತಿಯು ಎಚ್ಚರಗೊಳ್ಳುತ್ತದೆ. ಆ ಸ್ಥಿತಿಯಲ್ಲಿ ತುರ್ಯಾ ಮತ್ತು ತುರ್ಯಾತೀತ ಈ ಎರಡು ದಶೆಗಳು ಚಿದಾನಂದಮಯವಾಗಿ ಅನುಭವಕ್ಕೆ ಬರುತ್ತವೆ. ಜೀವನು ತನ್ನ ಕರ್ತೃತ್ವ ಶಕ್ತಿಯ ಸಂಕೋಚದಿಂದ ಪ್ರಾಣಶಕ್ತಿಗಳಿಂದ ನಿಯಮಿತನಾಗಿದ್ದಾನೆ. ಜಾಗ್ರದಾದಿ

ಅವಸ್ಥೆಗಳಿಗೆ ತುತ್ತಾಗಿದ್ದಾನೆ. ದೇಹ ಪ್ರಾಣ ಪುರ್ಯಷ್ಟಕ ಕಲಾ ಮೊದಲಾದವುಗಳಿಂದ ವ್ಯಾಮೋಹಿತನಾಗಿದ್ದಾನೆ. ಇಂತಹವನು ತನ್ನ ಶಕ್ತಿಗಳನ್ನು ಸ್ವಪ್ರಯತ್ನದಿಂದ ವಿಕಾಸಗೊಳಿಸಿದರೆ ಪಶುದಶೆಯಲ್ಲಿಯೇ ಜೀವನ್ಮುಕ್ತನಾಗುತ್ತಾನೆ.

ಹಿಂದೆ ಐದನೆಯ ಸೂತ್ರದಲ್ಲಿ ಚಿಚ್ಛಕ್ತಿಯೇ ತನ್ನ ಸ್ವಾತಂತ್ರ್ಯದಿಂದ ಸಂಕೋಚವನ್ನು ಪಡೆಯುತ್ತದೆಂದು ನಿರೂಪಿಸಿದ್ದಾಯಿತು. ಒಂಭತ್ತನೆಯ ಸೂತ್ರದಲ್ಲಿ 'ಚಿತ್' ಸಂಕೋಚದಿಂದ 'ಚಿತ್ತ'ವಾಯಿತೆಂದು ಹೇಳಿದ್ದಾಯಿತು. ಹದಿಮೂರನೆಯ ಸೂತ್ರದಲ್ಲಿ ಅಂತರ್ಮುಖೀಭಾವದಿಂದ ಚಿತ್ತವು ಹೇಗೆ 'ಚಿತ್' ಆಗುತ್ತದೆಂದು ವಿವರಿಸಲ್ಪಟ್ಟಿದೆ.

ಒಂದೇ ನದಿಯಿಂದ ಮೂರು ಕಾಲುವೆಗಳು ಹರಿಯುವಂತೆ ಚಿಚ್ಛಕ್ತಿಯು ಮೂರು ಭಾಗಗಳಾಗಿ ಕವಲೊಡೆಯುತ್ತದೆ. ಪರಾ ಪಶ್ಯಂತಿ ಮಧ್ಯಮಾ ವೈಖರೀರೂಪದಿಂದ ಮಿತಪ್ರಮಾತೃವಿನಲ್ಲಿ ಒಂದು ಕವಲು ಪ್ರಕಟವಾಗುತ್ತದೆ. ಶಿವನ ಮೊದಲು ಪೃಥ್ವೀವರೆಗೂ ಮೂವತ್ತಾರು ತತ್ತ್ವಗಳ ರೂಪವಾಗಿ ಇನ್ನೊಂದು ಕವಲೊಡೆಯುತ್ತದೆ ಶಿವನೇ ಮೊದಲಾಗಿ ಏಳು ಪ್ರಮಾತೃರೂಪದಲ್ಲಿ ಮೂರನೆಯ ಕವಲೊಡೆದು ಹರಿಯುತ್ತದೆ. ಮೂವತ್ತಾರು ತತ್ತ್ವಗಳ ರೂಪವಾಗಿ ಪರಿಗಣಿಸುವಾಗ ಕರ್ತೃತ್ವಶಕ್ತಿ ಸಂಕುಚಿತವಾಗಿ ಮೇಲಿನಿಂದ ಇಳಿದು ಬರುವಾಗ್ಗೆ ಹದಿನಾರನೆಯ ತತ್ತ್ವವಾದ ಚಿತ್ತರೂಪವನ್ನು ತಾಳುತ್ತದೆ. ಚಿಚ್ಛಕ್ತಿಯು ಶಿವನಿಂದ ಹದಿನಾರನೆಯ ಮೆಟ್ಟಲಿನಲ್ಲಿ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಒಡೆಯನಾಗುತ್ತದೆ. ವ್ಯವಹಾರಪ್ರಪಂಚದಲ್ಲಿ ಬಗೆಬಗೆಯಾದ ವಿಕಲ್ಪಗಳನ್ನೂ ಭೇದಜ್ಞಾನಗಳನ್ನೂ ಪ್ರತಿಫಲಿಸುತ್ತದೆ. ಇದು ಬಹಿರ್ಮುಖವಾಗಿದ್ದರೆ ಭೇದಜ್ಞಾನಗಳಿಗೆ ಹೇಗೆ ಆಶ್ರಯವಾಗಿರುತ್ತದೆಯೋ ಹಾಗೆಯೇ ಅಂತರ್ಮುಖವಾದರೆ ಹಿಂದಿರುಗಿ ಹದಿನಾರು ಮೆಟ್ಟಲುಗಳನ್ನು ಹತ್ತಿ ಶುದ್ಧ ಚಿದ್ರೂಪವನ್ನು ಪಡೆಯುತ್ತದೆ ಎಂಬ ವಿಷಯವನ್ನು ಈ ಸೂತ್ರದಲ್ಲಿ ಹೇಳಿದೆ.

ಮಿತಪ್ರಮಾತೃವಿಗೆ ಚಿತ್ತವು ಬಹಳ ಮುಖ್ಯವಾದದ್ದು. ಎಲ್ಲಾ ಚಲನವಲನಗಳಿಗೂ ಗ್ರಹಣಸ್ಮರಣಗಳಿಗೂ ಆಶ್ರಯವಾಗಿದೆ. ಐದನೆಯ ಸೂತ್ರದಿಂದ ಹನ್ನೆರಡನೆಯ ಸೂತ್ರದವರೆಗೂ ಚಿತ್ತಿನ ಚಿಚ್ಛಕ್ತಿಯ ಅವರೋಹಣಕ್ರಮವು ಹೇಳಲ್ಪಟ್ಟಿದೆ. ಇನ್ನುಮುಂದೆ ಆರೋಹಣಕ್ರಮವು ಸೂಚಿಸಲ್ಪಟ್ಟಿದೆ.

ತತ್ಪರಿಜ್ಞಾನೆ ಚಿತ್ತಮೇವ ಅಂತರ್ಮುಖೀ ಭಾವೇನ
ಚೇತನ ಪದಾಧ್ಯಾರೋಹಾತ್ ಚಿತಿಃ ॥೧೩॥

ಹಿಂದೆ ಹೇಳಿದ ಚಿಚ್ಛಕ್ತಿ ಪ್ರಸರಣಜ್ಞಾನದಿಂದ 'ಚಿತ್ತ'ವೇ ಅಂತರ್ಮುಖವಾಗಿ ಪರಮಚಿದ್ರೂಪವನ್ನು ಪಡೆಯುವುದರಿಂದ 'ಚಿತ್' ಆಗುತ್ತದೆ.

ಹಿಂದಿನ ಸೂತ್ರವನ್ನು ವಿವರಿಸುವ ಪ್ರಸಂಗದಿಂದ ಪ್ರಮೇಯ ಹೇಳಿದ್ದಾಯಿತು. ಈಗ ಶಬ್ದಸಂಗತಿ ದೃಷ್ಟಿಯಿಂದ ಸಂಕ್ಷೇಪವಾಗಿ ವಿವರಿಸಲ್ಪಡುತ್ತದೆ. ತನ್ನ ಪಂಚಕೃತ್ಯಕಾರಿತ್ವವನ್ನು ತಿಳಿದರೆ ಅಂದರೆ ಅನುಭವಕ್ಕೆ ತಂದುಕೊಂಡರೆ ಅದನ್ನು ತಿಳಿಯದೆ ಇರುವ

ಕಾರಣವು ಕಳಚಿಹೋಗುತ್ತದೆ. ಇದೇ **ಸ್ವಶಕ್ತಿ ವ್ಯಾಮೋಹನಿವೃತ್ತಿ**. ಇದರಿಂದ ಸ್ವಾತಂತ್ರ್ಯ ಪಡೆದು ಹಿಂದೆ ವಿವರಿಸಿರುವ ಚಿತ್ತವೇ ಸಂಕೋಚವ್ಯವಹಾರಗಳುಳ್ಳ ಹೊರಗಿನ ವ್ಯಾಪಾರಗಳಲ್ಲಿ ಆಸಕ್ತಿಯನ್ನು ಬಿಡುವುದರಿಂದ ಅಂತರ್ಮುಖೀ ಭಾವವನ್ನು ಪಡೆಯುತ್ತದೆ. ಹಾಗೆಯೇ ಒಳಗಿನ ಅನುಸಂಧಾನದಿಂದ ಚೇತನ ಸ್ಥಿತಿಯನ್ನು ಹತ್ತುತ್ತಾ ಗ್ರಾಹಕರ ಅಂತಸ್ತನ್ನು ಕ್ರಮಕ್ರಮವಾಗಿ ಸಂಕೋಚದ ಅಂಶಗಳಿಲ್ಲದಂತೆ ತನ್ನ ಸ್ವರೂಪವನ್ನು ಪಡೆಯುತ್ತದೆ. ಇದೇ ಚಿದವಸ್ಥೆ. ಇದೇ ಪರಾಕಾಷ್ಠ. ಇದನ್ನೇ ಪೂರ್ಣಾಹಂ ವಿಮರ್ಶೆಯೆನ್ನುವುದು.

ಒಂದುವೇಳೆ ಪಾರಮಾರ್ಥಿಕವಾದ ಚಿಚ್ಛಕ್ತಿಯು ಪದವು ಎಲ್ಲಾ ಭೇದಗಳನ್ನೂ ನುಂಗುವ ಸ್ವಭಾವವುಳ್ಳದ್ದಾಗಿದ್ದರೆ ಮಾಯಾಪದದಲ್ಲಿಯೂ ಭೇದಭಾವನೆಗಳಿಲ್ಲದಿರ ಬೇಕಾಗಿತ್ತು. ಸೂರ್ಯನು ಮೇಘಗಳಿಂದ ಆವರಿಸಲ್ಪಟ್ಟಿದ್ದರೂ ಪದಾರ್ಥಗಳನ್ನು ಪ್ರಕಾಶಪಡಿಸುವುದಿಲ್ಲವೆ? ಎಂದು ಶಂಕಿಸಿ ಮುಂದಿನ ಸೂತ್ರವು ಹೊರಟಿದೆ.

ಚಿತಿವಹ್ನಿರವರೋಹಪದೇಚ್ಛನ್ನೋಽಪಿ
ಮಾತ್ರಯಾ ಮೇಯೇಂಧನಂ ಪ್ಲುಷ್ಯತಿ ॥೧೪॥

ಚಿದಗ್ನಿಯು ತತ್ತ್ವಲೋಕದಲ್ಲಿಳಿಯುವಾಗ ಮಾಯಾಪ್ರಮಾತೃದಶೆಯಲ್ಲಿ ತನ್ನ ಸ್ವಾತಂತ್ರ್ಯವನ್ನು ಮರೆಸಿಕೊಂಡಿದ್ದರೂ ಪ್ರಮೇಯಗಳಾದ ಪದಾರ್ಥಗಳನ್ನು ಅಂಶತಃ ಸಾತ್ಮೀಕರಿಸುತ್ತದೆ. ಚಿದಗ್ನಿಯು ಅವರೋಹಣಪದದಲ್ಲಿ ಸ್ವಶಕ್ತಿಯಿಂದಲೇ ಮುಚ್ಚಲ್ಪಟ್ಟಿದ್ದರೂ ಭೇದಜ್ಞಾನವನ್ನು ಪಡೆಯುತ್ತದೆ.

ಚಿತ್ತೇ ವಿಶ್ವವನ್ನು ನುಂಗುವ ಸ್ವಭಾವವುಳ್ಳದ್ದರಿಂದ ಚೆಂಕಿ ಎಂದು ಹೇಳಲ್ಪಡುತ್ತದೆ. ಮಾಯಾಪ್ರಮಾತೃದಶೆಯಲ್ಲಿ ತನ್ನ ಸ್ವಾತಂತ್ರ್ಯವನ್ನು ಮರೆಮಾಚಿಕೊಂಡಿದ್ದರೂ ಅಂದರೆ ಬೂದಿಮುಚ್ಚಿದ ಕೆಂಡದಂತಿದ್ದರೂ ಅಂಶತಃ ನೀಲ ಪೀತಾದಿ ಪ್ರಮೇಯಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಇಲ್ಲಿ 'ಮಾತ್ರಯಾ' ಎಂದರೆ ಸಾತ್ಮೀಕರಿಸಿದ್ದ ಪದಾರ್ಥಗಳನ್ನು ಸಂಸ್ಕಾರರೂಪದಿಂದಿಟ್ಟದ್ದು ಕಾಲಾಂತರದಲ್ಲಿ ಪ್ರಕಾಶಪಡಿಸುವುದು ಎಂದರ್ಥ. ಚಿತ್ತು ವಿಷಯಗಳನ್ನು ನುಂಗುವುದು ಅಂದರೆ ಪದಾರ್ಥಜ್ಞಾನವು ಸಂಸ್ಕಾರರೂಪವಾಗಿ ಚಿತ್ಸಮುದ್ರದಲ್ಲಿ ಮುಳುಗುತ್ತಿರುವುದು ಎಲ್ಲಾ ಪ್ರಮಾತೃಗಳಿಗೂ ಅನುಭವದಲ್ಲಿರುವ ವಿಷಯವಾಗಿದೆ.

ವರ್ತಂತೆ ಜಂತವೋಽಶೇಷಾ ಅಪಿ ಬ್ರಹ್ಮೇಂದ್ರ ವಿಷ್ಣವಃ ।
ಗ್ರಸಮಾನಾಸ್ತತೋ ವಂದೇ ದೇವ ವಿಶ್ವಂ ಭವನ್ಮಯಂ ॥

ಪರಮೇಶ್ವರನೇ! ಬ್ರಹ್ಮೇಂದ್ರ ವಿಷ್ಣು ಮೊದಲಾದ ಎಲ್ಲಾ ಪ್ರಾಣಿಗಳೂ ನಿನ್ನಿಂದ ಸಾತ್ಮೀಕೃತರಾಗುತ್ತಿರುತ್ತಾರೆ. ವಿಶ್ವವೆಲ್ಲಾ ನಿನ್ನಿಂದ ತುಂಬಿದೆ. ಅಂತಹ ನಿನಗೆ ನಮಸ್ಕಾರವು ಎಂದು ಉತ್ಪಲಾಚಾರ್ಯರು ಹೇಳಿದ್ದಾರೆ.

ಚಿತ್ಪ್ರಸರವು ಶಿವನ ಮೊದಲು ಸಕಲನ ವರೆಗೂ ಅವರೋಹಣಕ್ರಮದಿಂದ ಸಂಕುಚಿತವಾಗುತ್ತದೆ. ಏಳನೆಯವನಾದ ಸಕಲ ಪ್ರಮಾತೃವು (ಬದ್ಧ ಜೀವನು) ತನ್ನ ಶಕ್ತಿಗಳ ಪೂರ್ಣವಿಕಾಸವಿಲ್ಲದಿರುವವನಾಗಿರುತ್ತಾನೆ. ಆದರೂ ಅವನಲ್ಲಿ ಎಲ್ಲಾ ಶಕ್ತಿಗಳೂ ಸೂಕ್ಷ್ಮರೂಪದಲ್ಲಿದ್ದೇ ಇರುತ್ತವೆ. ಸಂಕೋಚ ವಿಕಾಸಗಳು ಸ್ವಾತಂತ್ರ್ಯ ಶಕ್ತಿಯ ವಿಲಾಸಗಳು. ಚಿಚ್ಛಕ್ತಿಯು ಈ ವಿಶ್ವವನ್ನು ಹೊರಹೊಮ್ಮಿಸುತ್ತದೆ ಮತ್ತು ಉಪಸಂಹರಿಸುತ್ತದೆ. ಇದೇ ಮಹಾ ವಿಶ್ವಸೃಷ್ಟಿ ; ಮಹಾ ವಿಶ್ವಸಂಹಾರ.

ಅನಂತವಾದ ವಿಶ್ವದಲ್ಲಿ ಅಣುರೂಪಿಯಾಗಿ ಅತ್ಯಲ್ಪವಾದ ಸಂಕೋಚವನ್ನು ಪಡೆದಿರುವವನು ಮಿತಪ್ರಮಾತೃವು. ಈತನು ಸೃಷ್ಟಿ ಸ್ಥಿತಿ ಸಂಹಾರವೇ ಮೊದಲಾದವುಗಳನ್ನು ಮಾಡುವನೆಂದು ಹಿಂದೆಯೇ ಹೇಳಿದೆ. ಆದರೂ ಇಲ್ಲಿ ಪ್ರಮೇಯಗಳನ್ನು ಹೇಗೆ ನುಂಗುತ್ತಾನೆ ಅಥವಾ ತನ್ನಲ್ಲಿ ಅಡಗಿಸಿಕೊಳ್ಳುತ್ತಾನೆ ಎಂಬ ವಿಷಯವನ್ನು ಸ್ವಲ್ಪ ಮಟ್ಟಿಗೆ ವಿಶದಪಡಿಸಬೇಕಾಗಿದೆ. ಮಿತಪ್ರಮಾತೃವು ಬಗೆಬಗೆಯ ವಿಷಯಜ್ಞಾನವನ್ನು ಪಡೆಯುತ್ತಾನೆ. ಅವು ಐಂದ್ರಿಯಿಕವಾಗಿಯೂ ಇರುತ್ತವೆ; ಅತೀಂದ್ರಿಯ ವಿಷಯಗಳಾಗಿಯೂ ಇರುತ್ತವೆ. ಮನೆ ಹೊಲ ತೋಟ ಪಶು ಮೊದಲಾದವುಗಳು ಐಂದ್ರಿಯಿಕಗಳು. ಸ್ವರ್ಗ ನರಕ ಮೊದಲಾದವುಗಳೂ ಮಿತಪ್ರಮಾತೃವಾದ ಇವನಲ್ಲೇ ಅಡಗಿರುತ್ತವೆ. ಈ ಸಾತ್ಮೀಕರಣವು ತಕ್ಕ ಸಮಯದಲ್ಲಿ ಹೊರಹೊಮ್ಮುವುದಕ್ಕೆ ಸರಿಯಾದ ಸಂಸ್ಕಾರರೂಪವನ್ನು ತಾಳಿರುತ್ತದೆ. ಆದುದರಿಂದ ಹಿಂದಿನ ವಿಷಯಗಳು ನೆನಪಿಗೆ ಬಂದು ವ್ಯವಹಾರ ನಡೆಯುವ ಜ್ಞಾನಾನುಭವವು ಎಲ್ಲಾ ಪ್ರಮಾತೃಗಳ ಅನುಭವದಲ್ಲಿಯೂ ಇದೆ.

ಮಹಾವಿಶ್ವವನ್ನು ಸೃಷ್ಟಿಮಾಡಿದ ಚಿತ್ತು ವಿಶ್ವವನ್ನು ತನ್ನಲ್ಲಿ ಉಪಸಂಹರಿಸಿಕೊಂಡರೆ ಅದು ಪೂರ್ಣವಾಗಿ ಚಿತ್ತಿನಲ್ಲಿ ಲಯವಾಗಿಬಿಡುತ್ತದೆ. ಮರಳಿ ಸೃಷ್ಟಿಗೆ ಹಿಂದಿನ ಸಂಸ್ಕಾರವು ಬೇಕಾಗಿಲ್ಲ. ತನ್ನ ಸ್ವಶಕ್ತಿಯಿಂದಲೇ ಸೃಷ್ಟಿಮಾಡುತ್ತದೆ. ಮಿತಪ್ರಮಾತೃವಾದರೋ ಪ್ರಮೇಯಗಳನ್ನು ಸ್ವರೂಪತಃ ಉಪಸಂಹರಿಸಿಕೊಳ್ಳಲಾರನು. ವಿಷಯಜ್ಞಾನಗಳನ್ನು ಸಾತ್ಮೀಕರಣ ಮಾಡಿಕೊಳ್ಳುತ್ತಾನೆ. ಅಂದರೆ ತನ್ನಲ್ಲೇ ಸೇರಿಸಿಕೊಳ್ಳುತ್ತಾನೆ. ಪುನಃ ಆ ತಿಳಿವಳಿಕೆಯನ್ನು ಹೊರಹೊಮ್ಮಿಸಬೇಕಾದರೆ ಹಿಂದಿನ ಜ್ಞಾನದ ಸಂಸ್ಕಾರದ ಬಲ ಬೇಕು. ಸಂಕ್ಷೇಪವಾಗಿ ಹೇಳುವುದಾದರೆ ಮಿತಪ್ರಮಾತೃವಿನ ಪ್ರಳಯ ಸೃಷ್ಟಿಗಳು ಸಂಸ್ಕಾರಾಪೇಕ್ಷೆಯುಳ್ಳದ್ದಾಗಿರುತ್ತವೆ.

ಬಲ ಲಾಭೆ ವಿಶ್ವಮಾತ್ಮಸಾತ್ ಕರೋತಿ ॥೧೫॥

ಇಂತಹ ಬಲ ಲಾಭವು ಲಭಿಸಿದರೆ ಅಂದರೆ ಚಿದ್ವಿಕಾಸವಾದರೆ ವಿಶ್ವವನ್ನು ತನ್ನಲ್ಲಿಯೇ ಸೇರಿಸಿಕೊಳ್ಳುತ್ತಾನೆ.

ದೇಹ ಪ್ರಾಣಾದಿರೂಪವಾದ ಚಿತ್ತು ತನ್ನ ಸಂಕೋಚವನ್ನು ಬಿಟ್ಟು ತನ್ನ ಸಹಜಸ್ವರೂಪವನ್ನು ಪ್ರಕಾಶಪಡಿಸುವಿಕೆಯೇ ಬಲ. ಇಂತಹ ಬಲ ಲಭಿಸಿದರೆ

ಭೂಮಿಯಿಂದ ಸದಾಶಿವನ ವರೆಗೂ ಇರುವ ಈ ವಿಶ್ವವನ್ನು ತನ್ನ ಸ್ವರೂಪಕ್ಕಿಂತಲೂ ಬೇರೆಯಲ್ಲದಿರುವಂತೆ ತಿಳಿಯುತ್ತಾನೆ. ಈ ವಿಷಯವನ್ನು ಹಿರಿಯರು ತಮ್ಮ ದೇಶಭಾಷೆ ಯಲ್ಲಿರುವ ಕ್ರಮಸೂತ್ರಗಳಲ್ಲಿ ಹೇಳಿದ್ದಾರೆ. ಬೆಂಕಿಯು ಎಲ್ಲಾ ಪದಾರ್ಥಗಳನ್ನೂ ತನ್ನಲ್ಲಿ ಸೇರಿಸಿಕೊಳ್ಳುವಂತೆ ಚಿತ್ತು ವಿಶ್ವವನ್ನೇ ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ವಿಶ್ವವು ಮಾಯಾಪ್ರಮಾತೃವಿಗೆ ಸಮಾವೇಶವಾಗುವುದೆಂದರೆ ಅದು ಯಾವುದೋ ಒಂದು ಕ್ಷಣದಲ್ಲಾಗಬಹುದು. ಅದನ್ನು ನಾವು ಅಂಗೀಕರಿಸಬೇಕೆ ಬೇಡವೆ ಎಂಬ ಶಂಕೆ ಯೇಳುತ್ತದೆ. ಶರೀರಪ್ರಾಣಾದಿಗಳ ಪ್ರಾಪ್ತಿ ಮತ್ತು ವಿಯೋಗಗಳು ಅನಿತ್ಯವಾಗಿವೆ. ವಸ್ತುತಃ ಚಿತ್ತು ಯಾವಾಗಲೂ ಸ್ವಯಂಪ್ರಕಾಶವಾಗಿಯೇ ಇದೆ. ಸ್ವಯಂಪ್ರಕಾಶ ವಿಲ್ಲದಿದ್ದರೆ ದೇಹವೇ ಮೊದಲಾದ ವಿಷಯಗಳು ತಿಳಿಯುತ್ತಿರಲಿಲ್ಲ. ಆದುದರಿಂದ ದೇಹವೇ ನಾನು ಎಂಬ ಅಭಿಮಾನವನ್ನು ಹೋಗಲಾಡಿಸುವುದಕ್ಕೋಸ್ಕರ ಸಾಧನಾ ಭ್ಯಾಸಗಳು ನಿರೂಪಿತವಾಗಿವೆ. ಸಾಧನಾಭ್ಯಾಸಗಳು ದೇಹಾಭಿಮಾನವನ್ನು ನಿವಾರಿಸು ವುದಕ್ಕೆ ಉಪದೇಶಿಸಲ್ಪಟ್ಟಿವೆಯೇ ಹೊರತು ಯಾವಾಗಲೂ ಸ್ವಯಂಪ್ರಕಾಶವಾಗಿರುವ ಚಿತ್ಪ್ರಾಪ್ತಿಗೋಸ್ಕರವಲ್ಲ. ಇದು ಸಿದ್ಧವಾಗಿಯೇ ಇದೆ. ಇದಕ್ಕಾಗಿ ಬೇರೆ ಸಾಧನಗಳು ಬೇಕಾಗಿಲ್ಲ.

ಈ ರೀತಿಯಾದ ಬಲ ಲಾಭವಾದರೂ ಮಾಯಾಪದದಲ್ಲಿ ಮಿತಪ್ರಮಾತೃವಿಗೆ ವಿಶ್ವವು ಆತ್ಮಸಾಕ್ಷಾತ್ಕಾರರೂಪವಾದ ಸಮಾವೇಶ ರೂಪದಲ್ಲಿ ಯಾವುದೋ ಒಂದು ಕ್ಷಣದಲ್ಲಿ ಪ್ರಾಪ್ತವಾಗಬಹುದು. ಅವನಿಗೆ ದೇಹ ಪ್ರಾಣಾದಿಗಳ ಸಂಬಂಧವಿರುವವರೆಗೂ ನಿರಂತರ ಸಮಾವೇಶವಾಗಲಾರದೆಂದು ಕೆಲವರು ಶಂಕಿಸಬಹುದು. ದೇಹ ಪ್ರಾಣಾದಿಗಳ ಸಂಬಂಧ ಮತ್ತು ವಿನಾಶಗಳು ಅನಿತ್ಯವಾದವುಗಳಾಗಿರುವುದರಿಂದ ಮಿತಪ್ರಮಾತೃವಿಗೆ ದೇಹಪ್ರಾಣಾದಿಗಳ ಸಂಬಂಧವಿರುವವರೆಗೆ ಸಮಾವೇಶವು ಕ್ಷಣಿಕವಾಗಿದ್ದರೂ ತೊಂದರೆ ಯಿಲ್ಲ. ಅವನಿಗೆ ಬಲ ಲಾಭದಿಂದ ದೇಹಾಭಿಮಾನವು ನಾಶವಾಗುತ್ತದೆ. ಆದುದರಿಂದ ಮಿತಪ್ರಮಾತೃ ದಶೆಯಲ್ಲಿಯೂ ಚಿತ್ಪ್ರಕಾಶರೂಪವಾದ ಸಮಾವೇಶವಾಗಬಹುದು.

ಚಿದಾನಂದ ಲಾಭೆ ದೇಹಾದಿಷು ಚೇತ್ಯಮಾನೇಷ್ವಪಿ
ಚಿದೈಕಾತ್ಮ್ಯ ಪ್ರತಿಪತ್ತಿದಾರ್ಢ್ಯಂ ಜೀವನ್ಮುಕ್ತಿಃ ॥೧೬॥

ಚಿದಾನಂದಲಾಭವಾದರೆ ಶರೀರವಿದ್ದರೂ ಚಿತ್ತಿನಲ್ಲಿ ದೃಢವಾದ ನಂಬಿಕೆಯಿರೋಣ ದರಿಂದ ಜೀವನ್ಮುಕ್ತಿಯಾಗುತ್ತದೆ.

ಈ ವಿಶ್ವವೆಲ್ಲಾ ತನ್ನಲ್ಲಿದೆಯೆಂಬ ಸಮಾವೇಶರೂಪವಾದ ಚಿದಾನಂದವು ಲಭಿಸ ಲಾಗಿ ಜಾಗ್ರದವಸ್ಥೆಯಲ್ಲಿಯೂ ಶೂವಿಗೆ ವಳಗಳಿರುವಂತೆ ದೇಹ, ಪ್ರಾಣ, ನೀಲ, ಸುಖ ಮೊದಲಾದ ಅನಂತಪ್ರಮೇಯಗಳು ತೋರುತ್ತಿರುತ್ತವೆ. ಹೀಗಿದ್ದರೂ ಚಿತ್ಸಮಾವೇಶದ ಸಂಸ್ಕಾರದಶೆಯಿಂದ ಮುಂದೆ ಹೇಳುವ ಕ್ರಮದಂತೆ ಚಿತ್ತಿನಲ್ಲಿ ದೃಢವಾದ ವಿಶ್ವಾಸವುಂಟಾಗುತ್ತದೆ. ಅಚಂಚಲವಾದ ಚಿದನುಭವ ರಸದಿಂದ ಚಿತ್ತು ಒಂದೇ ಇದೆ

ಯೆಂದು ತೋರುತ್ತದೆ. ಈ ರೀತಿಯಾದ ಅನುಭವಿಯು ಈ ಲೋಕದಲ್ಲಿ ಬದುಕಿದ್ದರೂ ಜೀವನ್ಮುಕ್ತನಾಗಿರುವನು. ನಿಜಸ್ವರೂಪವನ್ನು ಗುರುತಿಸಿ ಎಲ್ಲಾ ಪಾಶರಾಶಿಗಳನ್ನು ಕಳೆಯುವುದೇ ಮುಖ್ಯವಾದುದೆಂದೂ ಚಿತ್ತಿನ ಕ್ರೀಡೆಯೇ ಈ ವಿಶ್ವವೆಂದೂ ಯಾವಾಗಲೂ ಅನುಸಂಧಾನ ಮಾಡುವವನು ಜೀವನ್ಮುಕ್ತನಾಗುವನೆಂದೂ ಸ್ಪಂದಶಾಸ್ತ್ರದಲ್ಲಿ ಹೇಳಿದೆ.

ಇತಿವಾ ಯಸ್ಯ ಸಂವಿತ್ತಿಃ ಕ್ರೀಡಾತ್ವೇನಾಖಿಲಂ ಜಗತ್ ।
ಸಪಶ್ಯನ್ ಸತತಂ ಯುಕ್ತೋ ಜೀವನ್ಮುಕ್ತೋ ನ ಸಂಶಯಃ ॥
ಮಧ್ಯ ವಿಕಾಸಾತ್ ಚಿದಾನಂದ ಲಾಭಃ ॥೧೭॥

ಬ್ರಹ್ಮನಾಡಿ ವಿಕಸಿಸುವುದರಿಂದ ಚಿದಾನಂದಲಾಭವುಂಟಾಗುತ್ತವೆ.

ಯಾವುದು ಎಲ್ಲಾ ಪದಾರ್ಥಗಳಲ್ಲಿಯೂ ಸೂಕ್ಷ್ಮರೂಪದಿಂದ ವ್ಯಾಪಿಸಿ ಅಂತರ್ಯಾಮಿಯಾಗಿರುವುದೋ ಯಾವುದರ ಸಂಬಂಧವಿಲ್ಲದೆ ಯಾವ ವಸ್ತುವೂ ಸ್ವರೂಪ ಸಿದ್ಧಿಯನ್ನು ಪಡೆಯುವುದಿಲ್ಲವೋ ಅಂತಹ ಮಹಾಮಹಿಮಳಾದ ಸಂವಿತ್ತೇ **ಮಧ್ಯ.** ಅದು ಮಾಯಾದಶೆಯಲ್ಲಿ ತನ್ನ ಪ್ರಭಾವವನ್ನು ಮರೆಮಾಚಿಕೊಂಡು ಮೊದಲು ಪ್ರಾಣ ಶಕ್ತಿರೂಪವನ್ನು ಅಂಗೀಕರಿಸಿ ಅವರೋಹಣಕ್ರಮದಿಂದ ಬುದ್ಧಿ ದೇಹಾದಿ ಸ್ಥಿತಿಗಳನ್ನು ಹೊಂದುತ್ತಾ ಸಾವಿರಾರು ನಾಡಿಗಳ ಸ್ವರೂಪವನ್ನನುಸರಿಸಿದೆ. ಅದೇ ಸಂವಿತ್ತು ಮುತ್ತುಗದೆಲೆಯ ನಡುವೆ ಇರುವ ಕಡ್ಡಿಯಂತೆ ತಲೆಯಲ್ಲಿರುವ ಬ್ರಹ್ಮರಂಧ್ರದಿಂದ ಮೊದಲುಮಾಡಿಕೊಂಡು ಮೂಲಾಧಾರದವರೆಗೂ ಪ್ರಾಣಶಕ್ತಿ ಮತ್ತು ಬ್ರಹ್ಮ ಇವೆರಡಕ್ಕೂ ಆಶ್ರಯವಾಗಿ, ಪ್ರಧಾನವಾಗಿ ಮಧ್ಯಮ ನಾಡಿರೂಪದಿಂದ ವ್ಯಾಪಿಸಿದೆ. ನಮಗುಂಟಾಗುವ **ಎಲ್ಲಾ ಪ್ರೇರಣೆಗಳೂ ಎಲ್ಲಾ ವೃತ್ತಿಗಳೂ ಈ ಮಧ್ಯಮ ನಾಡಿಯಿಂದಲೇ ಹುಟ್ಟುತ್ತವೆ. ಇಲ್ಲಿಯೇ ಮುಳುಗುತ್ತವೆ.** ವೃತ್ತಿಗಳ ಮೂಲ ಮತ್ತು ಪ್ರೇರಣೆ ಎಲ್ಲಾ ಪ್ರಾಧಾನ್ಯದಲ್ಲಿಯೂ ಮನಸ್ಸು ಬ್ರಹ್ಮಾಶ್ರಯದಲ್ಲಿಯೂ ಇರುತ್ತವೆ. ಹೀಗಿದ್ದರೂ ಈ ಮಹಾಶಕ್ತಿಯು ಬದ್ಧಾತ್ಮರಿಗೆ ತಿಳಿಯದಿರುವ ಹಾಗೆಯೇ ಇದೆ. ಯಾವಾಗ ಹಿಂದೆ ಹೇಳಿದ ಯುಕ್ತಿ ಕ್ರಮಗಳಿಂದ ಎಲ್ಲಾ ಪದಾರ್ಥಗಳಲ್ಲಿಯೂ ಸೂಕ್ಷ್ಮರೂಪವಾಗಿ ವ್ಯಾಪಿಸಿರುವ ಸಂವಿತ್ ಶಕ್ತಿಯಾದ ಮಧ್ಯನಾಡಿಯು ವಿಕಸಿಸು ವುದೋ ಅಥವಾ ನಾವು ಮುಂದೆ ಹೇಳುವ ಕ್ರಮದಿಂದ ಈ ಮಧ್ಯಭೂತವಾದ ಬ್ರಹ್ಮ ನಾಡಿಯು ವಿಕಸಿಸುತ್ತದೆಯೋ ಅಂತಹ ವಿಕಾಸದಿಂದ ಹಿಂದೆ ಹೇಳಿದ ಚಿದಾನಂದ ಪ್ರಾಪ್ತಿಯಾಗುತ್ತದೆ. ಆ ಮಹಾಪ್ರಾಪ್ತಿಯಿಂದ ಮೇಲೆ ವಿವರಿಸಿದ ಜೀವನ್ಮುಕ್ತಿ ಯುಂಟಾಗುತ್ತದೆ.

ಚಿಚ್ಛಕ್ತಿಯು ಅನಂತಪ್ರಕಾರವಾಗಿದೆ. ನಮಗೆ ಕಾಣಿಸುವ ಮತ್ತು ತೋರುವ ಎಲ್ಲಾ ಪದಾರ್ಥಗಳಲ್ಲಿಯೂ ಸ್ಥೂಲರೂಪವು ಪ್ರಧಾನವಾಗಿ ಕಂಡುಬಂದರೂ ಸೂಕ್ಷ್ಮ ವಾಗಿ ಅಂತರ್ಯಾಮಿಯಾಗಿ ಅತೀಂದ್ರಿಯವಾಗಿರುವ ಆ ಮಹಾಶಕ್ತಿಯು ಇದ್ದೇ ಇದೆ. ಆ ಶಕ್ತಿಯು ಪ್ರಸಾರವು ಸಹಸ್ರಾರು ಮುಖಗಳಾಗಿದೆ. ಅಶುದ್ಧಾಧ್ವದಲ್ಲಿ ಕಲಾದಿ ಪೃಥ್ವೀ

ವರೆಗೂ ಆಗಿರುವ ತತ್ತ್ವಗಳ ಸ್ವರೂಪಗಳಿಂದ ಪ್ರಕಾಶಿಸುತ್ತದೆ. ಮಾಯಾಪ್ರಮಾತೃವು ದೇಹ ಪ್ರಾಣ ಪುರ್ಯಷ್ಟಕಗಳಿಂದ ಕೂಡಿರುತ್ತಾನೆ. ಸಂವಿತ್‌ಶಕ್ತಿಯು ಅವರೋಹಣ ಕ್ರಮದಲ್ಲಿ ಹಿಂದೆ ವಿವರಿಸಿರುವಂತೆ ಪ್ರಾಣಶಕ್ತಿರೂಪವನ್ನು ಪಡೆಯುತ್ತದೆ. ಏತ ಪ್ರಮಾತೃವಿನ ಶರೀರದಲ್ಲಿ ಪಂಚಪ್ರಾಣಗಳ ರೂಪದಿಂದ ಪ್ರಕಾಶಿಸುತ್ತದೆ. ಮನುಷ್ಯನ ಶರೀರದಲ್ಲಿ ೭೨೦೦೦ ನಾಡಿಗಳಿವೆಯೆಂದು ಹಿರಿಯರ ನಿಶ್ಚಯವಿದೆ. ಇವುಗಳಲ್ಲಿ ಕೆಲವು ಪ್ರಾಣವಾಹಕಗಳು ಕೆಲವು ರಕ್ತವಾಹಕಗಳು ಎಂದು ವಿಭಾಗವಿದೆ. ಪ್ರಾಣವಾಹಕ ನಾಡಿಗಳಲ್ಲಿ ಪ್ರಾಣಶಕ್ತಿಯು ವಿದ್ಯುಚ್ಛಕ್ತಿಯಂತೆ ಸಂಚರಿಸುತ್ತದೆ. ರಕ್ತವಾಹಕ ನಾಡಿಗಳಲ್ಲಿ ರಕ್ತವು ಪ್ರಾಣಶಕ್ತಿಯ ಪ್ರೇರಣೆಯಿಂದಲೇ ಹರಿಯುತ್ತದೆ. ತಲೆಯಿಂದ ಕಾಲಿನವರೆಗೂ ಈ ೭೨೦೦೦ ನಾಡಿಗಳು ವಿಚಿತ್ರಸನ್ನಿವೇಶಗಳನ್ನು ಹೊಂದಿಕೊಂಡಿವೆ. ಈ ೭೨೦೦೦ ನಾಡಿಗಳಲ್ಲಿ ೧೦೧ ನಾಡಿಗಳು ಮುಖ್ಯವಾದವುಗಳು. ಈ ೧೦೧ ನಾಡಿಗಳಲ್ಲಿ ೧೦ ನಾಡಿಗಳು ಪ್ರಾಣವಾಯುವಿನ ಬಲದಿಂದ ಅಂಕೆಯಲ್ಲಿಡಬಹುದಾಗಿರುವವುಗಳಾಗಿವೆ. ಈ ೧೦ ರಲ್ಲಿ ಮೂರು ಮುಖ್ಯವಾದವು. ಇವುಗಳಿಗೆ **ಇಡಾ ಪಿಂಗಳ ಸುಷುಮ್ನಾ** ಎಂದು ಹೆಸರು. ಈ ಮೂರರಲ್ಲಿ ಒಂದು ಅತಿಮುಖ್ಯವಾದದ್ದು. ಇದಕ್ಕೆ ಸುಷುಮ್ನಾ, ಮಧ್ಯನಾಡಿ, ಬ್ರಹ್ಮನಾಡಿ ಎಂಬ ಸಂಜ್ಞೆ ಇದೆ. ಇದು ಮುತ್ತುಗದೆಲೆಯಲ್ಲಿ ನಡುವೆ ಇರುವ ಕಡ್ಡಿಯಂತೆ ಇದೆ. ಇದನ್ನಾಶ್ರಯಿಸಿ ಮುತ್ತುಗದೆಲೆಯಲ್ಲಿ ಅತಿಸೂಕ್ಷ್ಮವಾದ ಆ ಎಲೆಯ ತಂತುಪಂಜರಗಳಂತೆ ಇಲ್ಲಿ ಸುಷುಮ್ನಾ ನಾಡಿಯನ್ನಾಶ್ರಯಿಸಿಕೊಂಡು ಅದರ ಮೊದಲು ನಡುವೆ ಕೊನೆಗಳಲ್ಲಿ ೭೨೦೦೦ ನಾಡಿಪಂಜರಗಳಿವೆ. ಈ ಬ್ರಹ್ಮನಾಡಿಯು ತಲೆಯ ಮಧ್ಯಭಾಗದಿಂದ ಹಿಡಿದು ಮೂಲಾಧಾರದ ವರೆಗೂ ವ್ಯಾಪಿಸಿದೆ. ಮನುಷ್ಯನಿಗುಂಟಾಗುವ ಕಾಮ, ಕ್ರೋಧ, ಲೋಭ ಮೊದಲಾದ ವೃತ್ತಿಗಳು ಮೂಲಾಧಾರದಿಂದಲೇ ಹೊರಹೊಮ್ಮುತ್ತವೆ. ಮನಸ್ಸಿನ ಪ್ರಸನ್ನತೆ, ಸೌಮ್ಯತ್ವ, ಶಾಂತಿ, ಏಕಾಗ್ರತೆ, ಮುಂತಾದುವುಗಳು ಅದರ ಶಿರೋಭಾಗದಿಂದ ಹೊರಹೊಮ್ಮುತ್ತವೆ. ಸೂಕ್ಷ್ಮವಾಗಿ ನಮ್ಮಲ್ಲಿಯೇ ನಾವು ವಿಮರ್ಶೆಮಾಡಿಕೊಂಡರೆ ಬಾಹ್ಯಪ್ರಪಂಚಪ್ರವೃತ್ತಿಗಳೆಲ್ಲಾ ಬ್ರಹ್ಮನಾಡಿಯ ಮೂಲಾಧಾರ ಪ್ರದೇಶದಿಂದಲೂ ಅಂತರೀಯತೆಗೆ ಸಂಬಂಧಪಟ್ಟ ಜ್ಞಾನಪ್ರವಾಹಗಳು ಕೊನೆಯ ಭಾಗದಿಂದಲೂ ಹೊರಹೊಮ್ಮುತ್ತಿವೆಯೆಂದು ಅನುಭವದಿಂದ ಊಹಿಸಬಹುದು. ಬಾಹ್ಯಪದಾರ್ಥಗಳಿಗೆ ಸಂಬಂಧಪಟ್ಟ ವೃತ್ತಿಗಳೂ ಆಂತರೀಯತೆಗೆ ಸಂಬಂಧಪಟ್ಟ ಭಾವನೆಗಳೂ ಈ ಮಧ್ಯನಾಡಿಯಿಂದಲೇ ಹೊರಹೊಮ್ಮುತ್ತಿವೆ. ಮರಳಿ ಅದರಲ್ಲಿಯೇ ಲಯವಾಗುತ್ತಿವೆ. ವಸ್ತುಸ್ಥಿತಿ ಇಷ್ಟು ವಿಶದವಾಗಿ ವಿಸ್ತಾರವಾಗಿ ಅನುಭವಗಮ್ಯವಾಗಿದ್ದರೂ ಪಶುಗಳಾದ ಅಜ್ಞರಿಗೆ ತಿಳಿಯದೆ ಕುರುಡರಿಗೆ ಬೆಳಕಿದ್ದ ಹಾಗಿದೆ.. ಹಿಂದೆ ಹೇಳಿದ ಪಂಚಕೃತ್ಯಗಳ ಅನುಶೀಲನಾದಿ ಕ್ರಮಗಳಿಂದ ಯಾವಾಗ ಆ ಮಧ್ಯಮನಾಡಿಯು ವಿಕಾಸನ್ನು ಪಡೆಯುತ್ತದೆಯೋ ಆಗ ಮೇಲೆ ನಿರೂಪಿಸಿರುವ ಚಿದಾನಂದ ಲಾಭವಾಗುತ್ತದೆ. ಅಥವಾ ಮುಂದೆ ಹೇಳಲ್ಪಡುವ ಇನ್ನೂ ಆಗಮಗಳಲ್ಲಿ ನಿರೂಪಿಸಿರುವ ಉಪಾಯಗಳನ್ನು ಅಧಿಕಾರಿಗಳು ತಮ್ಮ ಮಟ್ಟಕ್ಕನುಸಾರವಾಗಿ ಅನುಷ್ಠಾನ ಮಾಡಿದರೆ ಮಧ್ಯನಾಡಿ ವಿಕಾಸವಾಗಿ ಚಿದಾನಂದಲಾಭವುಂಟಾಗುತ್ತದೆ.

ಮಧ್ಯವು ವಿಕಾಸಕ್ಕೆ ಉಪಾಯಗಳು

ವಿಕಲ್ಪಕ್ಷಯಶಕ್ತಿಸಂಕೋಚ ವಿಕಾಸವಾಹಚ್ಛೇದಾದ್ಯಂತ
ಕೋಟಿ ನಿಭಾಲನಾದಯ ಇಹ ಉಪಾಯಾಃ ॥೧೮॥

ವಿಕಲ್ಪಕ್ಷಯ, ಶಕ್ತಿಸಂಕೋಚ ವಿಕಾಸ, ವಾಹಚ್ಛೇದ, ಆದ್ಯಂತ ಕೋಟಿ ನಿಭಾಲನ ಇವೇ ಮೊದಲಾದವುಗಳು ಉಪಾಯಗಳು.

ಮಧ್ಯಶಕ್ತಿ ವಿಕಾಸಕ್ಕೆ ಹಿಂದೆ ನಾವು ಹೇಳಿರುವ ಪಂಚವಿಧ ಕೃತ್ಯಕಾರಿತ್ವ ಮುಂತಾದುವುಗಳನ್ನು **ಅನುಶೀಲನ ಪರಿಶೀಲನ ಅನುಸಂಧಾನ ಪರಾಮರ್ಶ** ಕರ್ಮಗಳಿಂದ ಅನುಸರಿಸುವುದರಿಂದ ಸರ್ವಮಧ್ಯಭೂತವಾಗಿರುವ ಸಂವಿತ್ತಿನ ವಿಕಾಸ ವುಂಟಾಗುತ್ತದೆ. ಆದರೂ ಇನ್ನೂ ಕೆಲವು ಉಪಾಯಗಳಿವೆ. **ಪ್ರಾಣಾಯಾಮ ಮುದ್ರಾ ಬಂಧ** ಮುಂತಾದ ಕ್ರಮಗಳನ್ನು ಅಭ್ಯಾಸಮಾಡುವುದರಿಂದ ಸಾಧಕನು ಅತಿಶಯವಾದ ಅಲೌಕಿಕ ಸುಖವನ್ನು ಪಡೆಯುತ್ತಾನೆ. ಹೃದಯದಲ್ಲಿ ಮನಸ್ಸನ್ನು ನಿಲ್ಲಿಸಿ ತನ್ನ ಸ್ವರೂಪ ಜ್ಞಾನಕ್ಕೆ ತಡೆಯಾಗಿರುವ ವಿಕಲ್ಪಗಳನ್ನು ಹಿಂದೆ ಹೇಳಿದ ಯುಕ್ತಿಯಿಂದ ಸಾಧಿಸಿದರೆ ಪ್ರಶಾಂತಸ್ಥಿತಿಯನ್ನು ಪಡೆಯುತ್ತಾನೆ. ವಿಕಲ್ಪವಿಲ್ಲದ ಪರಾಮರ್ಶದಿಂದ ಪರಿಶುದ್ಧವಾದ **ಚಿತ್ಪ್ರಮಾತೃವನ್ನು** ಧ್ಯಾನಮಾಡುವುದಕ್ಕೆ ಸಮರ್ಥನಾದರೆ ಅಲ್ಲಿಂದ ಬೇಗನೆ ವಿಕಾಸವಾಗಲಿರುವ ತುರ್ಯ ತುರ್ಯಾತೀತ ಸಮಾವೇಶವನ್ನು ಪಡೆಯುತ್ತಾನೆ.

'ವಿಕಲ್ಪಹಾನೇನೈಕಾಗ್ರ್ಯಾತ್ ಕ್ರಮೇಣೇಶ್ವರತಾಪದಂ'

ವಿಕಲ್ಪಗಳನ್ನು ಬಿಟ್ಟು ಏಕಾಗ್ರತೆಯಿಂದ ಅನುಸಂಧಾನಮಾಡಿ ಈಶ್ವರತ್ವವನ್ನು ಪಡೆಯಬಹುದೆಂದು ಪ್ರತ್ಯಭಿಜ್ಞೆಯಲ್ಲಿ ಹೇಳಿದೆ.

ವಿಕಲ್ಪಗಳು ಲಯವಾದರೆ ಪರಮಪದ ಪ್ರಾಪ್ತಿಯಾಗುತ್ತದೆಂದು ಸ್ಪಂದ ಶಾಸ್ತ್ರದಲ್ಲಿ ಹೇಳಿದೆ.

'ಯದಾ ಕ್ಷೋಭಃ ಪ್ರಲೀಯೇತ್ ತದಾ ಸ್ಯಾತ್ ಪರಮಂ ಪದಂ'

ವಿಹಾಯ ಸಕಲಾಃ ಕ್ರಿಯಾಜನನಿ ಮಾನಸೀಃ ಸರ್ವತೋ
ವಿಮುಕ್ತ ಕರಣಕ್ರಿಯಾನುಸೃತಿ ಪಾರತಂತ್ರ್ಯೋಜ್ವಲಮ್ ।
ಸ್ಥಿತೈಸ್ತ್ವದನುಭಾವತಃ ಸಪದಿ ವೇದ್ಯತೆ ಸಾ ಪರಾ
ದಶಾ ನೃಭಿರತಂದ್ರಿತಾಸಮ ಸುಖಾಮೃತಸ್ಯಂದಿನೀ ॥

ಈ ರೀತಿ ಜ್ಞಾನ ಗರ್ಭಸ್ತೋತ್ರದಲ್ಲಿ ಹೇಳಲ್ಪಟ್ಟಿದೆ.

ಹೇ ದೇವಿಯೆ! ಪರಾಧೀನಗಳಾದ ಬಾಹ್ಯೇಂದ್ರಿಯ ಕ್ರಿಯೆಗಳಿಂದುಂಟಾಗುವ ವೃತ್ತಿಗಳನ್ನೂ ಮಾನಸಿಕವಾದ ಭಾವನೆಗಳನ್ನೂ ಸಂಪೂರ್ಣವಾಗಿ ತೊರೆದು ನಿನ್ನನ್ನೇ ಅನುಸಂಧಾನ ಮಾಡುವ ತಾಳ್ಮೆಯಿರುವ ಮನುಷ್ಯರಿಂದ ಅಸಮಾನವಾದ ಅಮೃತವನ್ನು ಕರೆಯುತ್ತಿರುವ ಮಹಾಸುಖರೂಪವಾದ ಪರಾದಶೆಯು ಅನುಭವಿಸಲ್ಪಡುತ್ತದೆ. ಈ

ಉಪಾಯವು ಎಲ್ಲಾ ಉಪಾಯಗಳಿಗಿಂತಲೂ ಮುಖ್ಯವಾದುದೆಂದು ಪ್ರತ್ಯಭಿಜ್ಞೆಯಲ್ಲಿ ಹೇಳಿದೆ. ಶಕ್ತಿಸಂಕೋಚ ವಿಕಾಸ ಮೊದಲಾದ ಉಪಾಯಗಳು ಪ್ರತ್ಯಭಿಜ್ಞೆಯಲ್ಲಿ ಹೇಳಲ್ಪಟ್ಟಿಲ್ಲ. ಆದರೂ ಆಗಮಗಳಲ್ಲಿ ಹೇಳಲ್ಪಟ್ಟಿರುವುದರಿಂದ ಅನೇಕ ದಾರಿಗಳನ್ನು ತೋರಿಸಿದರೆ ಒಬ್ಬೊಬ್ಬರು ಒಂದೊಂದು ದಾರಿಯನ್ನನುಸರಿಸಬಹುದೆಂದು ನಿರೂಪಿಸಿದೆ. ಇಲ್ಲಿಗೆ ವಿಕಲ್ಪಕ್ಷಯವಾಯಿತು.

ಇಂದ್ರಿಯದ್ವಾರಾ ಪ್ರಸರಿಸುತ್ತಲಿರುವ ಶಕ್ತಿಯನ್ನು ಉಪಸಂಹರಿಸುವ ಕ್ರಮದಿಂದ ಉನ್ಮೀಲೀಕರಣವೇ ಶಕ್ತಿಸಂಕೋಚ. ಕಠೋಪನಿಷತ್ತಿನಲ್ಲಿ ಈ ರೀತಿ ಹೇಳಲ್ಪಟ್ಟಿದೆ.

ಪರಾಂಚಿ ಖಾನಿವ್ಯತೃಂತ್ ಸ್ವಯಂಭೂಃ
ತಸ್ಮಾತ್ ಪರಾಙ್ ಪಶ್ಯತಿನಾಂತರಾತ್ಮನ್ ।
ಕಶ್ಚಿದ್ಧೀರಃ ಪ್ರತ್ಯಗಾತ್ಮಾ ನಮೈಕ್ಷದ್
ಆವೃತ್ತ ಚಕ್ಷುರಮೃತತ್ವಮಿಶ್ಛನ್ ॥

ಬ್ರಹ್ಮನು ಇಂದ್ರಿಯಗಳನ್ನು ಹೊರಗಿನ ವಿಷಯಗಳನ್ನು ತಿಳಿಯುವ ಸ್ವಭಾವವುಳ್ಳವುಗಳನ್ನಾಗಿ ಸೃಷ್ಟಿಮಾಡಿದ್ದಾನೆ. ಆದುದರಿಂದ ಹೊರಗಿನ ಪದಾರ್ಥಗಳನ್ನು ಮಾತ್ರ ಈ ಇಂದ್ರಿಯಗಳಿಂದ ತಿಳಿಯುತ್ತಾನೆ. ಇವುಗಳಿಂದ ಅಂತಃಪ್ರಪಂಚವನ್ನು ನೋಡಲಾರ. ಒಬ್ಬಾನೊಬ್ಬ ಧೀರನಾದ ಸಾಧಕನು ಹೊಳೆಗೆ ಎದುರಾಗಿ ಈಜುವಂತೆ ಇಂದ್ರಿಯಗಳನ್ನು ಹಿಂದಕ್ಕೆ ತಿರುಗಿಸಿ ಮೋಕ್ಷಾಕಾಂಕ್ಷಿಯಾಗಿ ಅಂತಃಪ್ರಪಂಚವನ್ನು ನೋಡಿದನು.

ಆಮೆಯು ತನ್ನ ಕೈಕಾಲುಗಳನ್ನು ಒಳಕ್ಕೆ ಎಳೆದುಕೊಳ್ಳುವ ಹಾಗೂ ಭಯಪಟ್ಟಾಗ ಹೃದಯದಲ್ಲಿಯೇ ಎಲ್ಲಾ ಶಕ್ತಿಗಳೂ ಅಡಗಿದರೆ ಹೇಗೋ ಹಾಗೆ ಹೊರಕ್ಕೆ ಇಂದ್ರಿಯಗಳ ಮೂಲಕ ಪ್ರಸರಿಸುತ್ತಲಿರುವ ಶಕ್ತಿಗಳು ಉಪಸಂಹರಿಸಲ್ಪಟ್ಟರೆ ನಿತ್ಯೋದಿತವಾದ ಚಿದನುಭವವುಂಟಾಗುತ್ತದೆ. **ಈ ಉಪಸಂಹರಣ ಕ್ರಮವು ಉನ್ಮೀಲೀಕರಣ**ವೆನಿಸುತ್ತದೆ.

ಒಳಗೆ ಗೂಢವಾಗಿರುವ ಶಕ್ತಿಯು ಅಕ್ರಮರೂಪವಾದ ಕ್ರಮದಿಂದ ಎಲ್ಲಾ ಇಂದ್ರಿಯಗಳ ಮೂಲಕವೂ ಸ್ಫುರಿಸುವಾಗ ತನ್ನ ಲಕ್ಷ್ಯವು ಅಂತಃಪ್ರಪಂಚದಲ್ಲಿಯೇ ಇದ್ದು ಹೊರಗಿನ ದೃಷ್ಟಿಯು ನಿಮೇಷೋನ್ಮೇಷಗಳಿಲ್ಲದಿರಬೇಕು. ತಾತ್ಪರ್ಯವೇನೆಂದರೆ ಈ ಸಾಧಕನ ಹೊರಗಿನ ವ್ಯಾಪಾರಗಳು ಭೈರವಿಯ ಮುದ್ರೆಯ ಅನುಪ್ರವೇಶಯುಕ್ತಿಯಿಂದ ನಡೆಯಬೇಕು. ಯಾವಾಗಲೂ ಬಾಹ್ಯವ್ಯವಹಾರಗಳನ್ನು ನಡೆಸುತ್ತಿದ್ದರೂ ಚಿದನುಸಂಧಾನವು ಏಕಾಗ್ರವಾಗಿರುವಿಕೆಯೇ **ಭೈರವೀಮುದ್ರಾ**. ಭೈರವೀಮುದ್ರಾ, ಖೇಚರೀಮುದ್ರಾ ಈ ಎರಡು ಮುದ್ರೆಗಳಿಗೂ ಈ ಸಂಪ್ರದಾಯದಲ್ಲಿ ಒಂದೇ ಅರ್ಥ. ಶಕ್ತಿವಿಕಾಸವನ್ನು ಹೊಂದಿದವನು ಈ ಯುಕ್ತಿಯಿಂದ ಜೀವನವನ್ನು ನಡೆಸುತ್ತಾನೆ. ಸಮಾಧಿಸ್ಥಿತಿಯನ್ನು ನೋಡಿರುವವನು ಜಾಗ್ರದವಸ್ಥೆಯಲ್ಲಿಯೂ ಚಿದ್ರಸಾನು

ಭವಿಯಾಗಿಯೇ ಇರುತ್ತಾನೆ. ಈ ವಿಷಯವು ಕಕ್ಷ್ಯಾಸ್ತೋತ್ರದಲ್ಲಿ ಈ ರೀತಿ ಹೇಳಲ್ಪಟ್ಟಿದೆ.

ಎಲೈ ಪರಮೇಶ್ವರನೇ 'ಮನಸ್ಸಿನಿಂದ ತಿಳಿಯುವುದು, ಇಂದ್ರಿಯಗಳಿಂದ ನೋಡುವುದು ಕೇಳುವುದು ಮೊದಲಾದ ಎಲ್ಲಾ ಶಕ್ತಿವ್ಯಾಪಾರಗಳನ್ನು ತಮ್ಮ ತಮ್ಮ ವಿಷಯಗಳಿಂದ ಹಿಂದಿರುಗಿಸಿ ವಿಶ್ವಕ್ಕೆಲ್ಲಾ ಆಧಾರವಾದ ಚಿನ್ನದ ಕಂಬದಂತೆ ಚಾಂಚಲ್ಯವಿಲ್ಲದೆ ಪ್ರಕಾಶಿಸುತ್ತಿದ್ದೀಯೆ' ಎಂದು ತಿಳಿದು ಮನನ ಮಾಡತಕ್ಕದ್ದು ಎಂದು ಸ್ತೋತ್ರಮಾಡಿರುತ್ತಾರೆ.

ಆರುಮುಖಗಳುಳ್ಳ ಆಧಾರಚಕ್ರದಲ್ಲಿ ಶಕ್ತಿಯನ್ನು ಅಭಿವೃದ್ಧಿಪಡಿಸಿ ಮಧ್ಯನಾಡಿಯ ಬುಡ ಮಧ್ಯೆ ಕೊನೆಯಲ್ಲಿ ಸ್ಪರ್ಶಾವೇಶ ರೂಪವಾದ ಅನುಸಂಧಾನಮಾಡುವಿಕೆ. ಅಂದರೆ ಜ್ಞಾನರೂಪವಾಗಿ ಅದನ್ನು ನೆನೆದು ಅನುಸಂಧಾನಮಾಡುವುದು. ಈ ಉಪಾಯದಿಂದ ಬಾಹ್ಯಪ್ರಸರಣರೂಪವಾದ ಶಕ್ತಿವಿಕಾಸಕ್ಕೂ ಅಂತರನುಸಂಧಾನವಾಗುವ ಚಿದ್ವಹ್ನಿಗೂ ಮಧ್ಯೆ ಮನಸ್ಸನ್ನು ಭಾವನಾಬಲದಿಂದ ಸುಖಮಯವಾಗಿ ನಿಲ್ಲಿಸಿದರೆ ಇತರ ವಿಷಯಗಳನ್ನು ಮರೆಯುವಂತಹ ಆನಂದವುಂಟಾಗುತ್ತದೆ.

ವಹ್ನೇರ್ವಿಷಸ್ಯ ಮಧ್ಯೇತು ಚಿತ್ತಂ ಸುಖಮಯಂ ಕ್ಷಿಪೇತ್ ।
ಕೇವಲಂ ವಾಯುಪೂರ್ಣಂ ವಾ ಸ್ಮರಾನಂದೇ ನ ಯುಜ್ಯತೇ ॥

ಇಲ್ಲಿ ವಹ್ನಿಯು (ಚಿತ್ತವು) ಅನುಪ್ರವೇಶಕ್ರಮದಿಂದ ಶಕ್ತಿಸಂಕೋಚಾವಸ್ಥೆಯನ್ನೂ ಪ್ರಸರಣಕ್ರಮದಿಂದ ವಿಕಾಸವನ್ನೂ ಪಡೆಯುವಿಕೆಯೇ ಶಕ್ತಿಸಂಕೋಚವಿಕಾಸವೆಂದೆನಿಸಿಕೊಳ್ಳುತ್ತದೆ. ಈ ಎರಡು ಸ್ಥಿತಿಗಳ ಮಧ್ಯೆ ಮನಸ್ಸನ್ನು ನಿಲ್ಲಿಸುವುದು ಇನ್ನೊಂದು ಕ್ರಮ. ಇಲ್ಲಿಗೆ ಶಕ್ತಿವಿಕಾಸವಾಯಿತು.

ಎಡಬಲಗಳ ಮೂಗಿನ ಸೊಳ್ಳೆಗಳಲ್ಲಿ ಸಂಚರಿಸುತ್ತಿರುವ ಪ್ರಾಣವಾಯುವಿನ ಗತಿಯನ್ನು ಹೃದಯದಲ್ಲಿ ನಿಲ್ಲಿಸುವುದರಿಂದ 'ಕ'ಕಾರ. 'ಹ'ಕಾರಗಳ ಹಾಗಿರುವ ಅನಚ್ಕವರ್ಣೋಚ್ಚಾರದಿಂದ ವಾಹಗತಿಯನ್ನು ನಿಲ್ಲಿಸುವುದು **ವಾಹಚ್ಛೇದ**. ಒಳಗೆ

ಭೈರವೀ ಮುದ್ರಾಲಕ್ಷಣ

ಮನಃ ಸ್ಥಿರಂ ಯಸ್ಯ ವಿನಾವಲಂಬನಂ
ವಾಯುಃ ಸ್ಥಿರೋ ಯಸ್ಯ ವಿನಾವರೋಧನಮ್ ।
ದೃಷ್ಟಿಃ ಸ್ಥಿರಾ ಯಸ್ಯ ವಿನಾವಲೋಕನಮ್
ಸ್ಯಾತ್ಸೈವ ಮುದ್ರಾ ವಿಮಲಾ ಚ ಖೇಚರೀ ॥
ಸರ್ವಾಃ ಶಕ್ತೀಶ್ಚೇತಸಾ ದರ್ಶನಾದ್ಯಾಃ
ಸ್ವೇ ಸ್ವೇ ವೇದ್ಯೇ ಯೌಗಪದ್ಯೇನ ವಿಷ್ವಕ್ ।
ಕ್ಷಿಪ್ತ್ವಾ ಮಧ್ಯೇ ಹಾಟಕಸ್ತಂಭಭೂತ
ಸ್ತಿಷ್ಠನ್ ವಿಶ್ವಾಧಾರ ಏಕೋಽವಭಾಸಿ ॥

ಹೃದಯದಲ್ಲಿ ಮನಸ್ಸನ್ನು ನಿಲ್ಲಿಸಿ ಅನಚ್ಕವರ್ಣಗಳ ಉಚ್ಚಾರಣಕ್ರಮದಿಂದ ಎಡಬಲ ನಾಡಿಗಳನ್ನು ನಿಲ್ಲಿಸಿ ಸಾಧನೆ ಮಾಡುವವನಿಗೆ ಅಜ್ಞಾನವೆಂಬ ಕಗ್ಗತ್ತಲೆಯು ನಾಶವಾಗಿ ಅವನು ಪಶ್ವವಸ್ಥೆಯಲ್ಲಿದ್ದರೂ ಪರಮೇಶ್ವರನ ತತ್ತ್ವವನ್ನು ಪಡೆಯುವಂತಹ ಜ್ಞಾನ ಪ್ರಕಾಶವನ್ನು ಪಡೆಯುತ್ತಾನೆ.

ಅದಚ್ಕಕಕ್ಕತಾಯ ತಿಪ್ರಸೃತ ಪಾರ್ಶ್ವನಾಡೀದ್ವಯ
ಚ್ಛಿದೋ ವಿಧೃತ ಚೇತಸೋ ಹೃದಯ ಪಂಕಜಸ್ಯೋದರೆ ।
ಉದೇತಿ ತವದಾರಿತಾಂಧತಮಸಃ ಸ ವಿದ್ಯಾಂ ಕುರೋ
ಯ ಏಷ ಪರಮೇಶತಾಂ ಜನಯಿತುಂ ಪಶೋರಪ್ಯಲಂ ॥

ಆದ್ಯಂತ ಕೋಟಿ ನಿಭಾಲನ: ಆದಿಕೋಟಿ ಎಂದರೆ ಹೃದಯ. ಹೃದಯ ದಿಂದ ೭೨೦೦೦ ನಾಡಿಗಳು ಹೊರಟಿರುತ್ತವೆ. ಮುಖ್ಯವಾಗಿ ಬ್ರಹ್ಮರಂಧ್ರಕ್ಕೆ ಇದರಿಂದ ಒಂದು ಸೂಕ್ಷ್ಮವಾದ ನಾಡಿ ಹೊರಟಿದೆ. ಈ ನಾಡಿಯ ಬುಡವು ಹೃದಯದಲ್ಲಿಯೂ ಕೊನೆಯು ಬ್ರಹ್ಮರಂಧ್ರವಾದ ದ್ವಾದಶಾಂತದಲ್ಲಿಯೂ ಇದೆ. ಮನಸ್ಸನ್ನು ನಿಲ್ಲಿಸುವುದು ಎರಡು ಬಗೆಯಾಗಿದೆ. ಈ ಸೂಕ್ಷ್ಮ ನಾಡಿಯ ಮೂಲಸ್ಥಾನವಾದ **ಹೃದಯದಲ್ಲಾ** ದರೂ ನಿಲ್ಲಿಸಬಹುದು. ಅಗ್ರಸ್ಥಾನವಾದ ತಲೆಯಲ್ಲಿರುವ **ದ್ವಾದಶಾಂತದಲ್ಲಿಯಾದರೂ** ನಿಲ್ಲಿಸಬಹುದು. ಈ ವಿಧವಾದ ಭಾವನಾಭ್ಯಾಸಕ್ಕೆ ಸಾಧಕನು ವಿಶದವಾಗಿ ಅದರ ಭೇದಗಳನ್ನು ತಿಳಿದಿರಬೇಕು. ಜಾಗ್ರದವಸ್ಥೆಯಲ್ಲಿ ಹೊರಗಿನ ವ್ಯವಹಾರಗಳಲ್ಲಿ ತೊಡಗಿದ್ದರೆ ಆಗ ಹೃದಯದಲ್ಲಿ ನಿಲ್ಲಿಸುವುದು ಕಷ್ಟತರವಾದದ್ದು. ಸಮಾಹಿತವಾದ ಮನಸ್ಸುಳ್ಳವನಾಗಿ ಒಂದುಕಡೆ ಉಪದ್ರವವಿಲ್ಲದೆ ಇರುವ ಸ್ಥಳದಲ್ಲಿ ಕುಳಿತು ಧಾರಣಾ ಭ್ಯಾಸಗಳನ್ನು ಮಾಡಿ ಹೃದಯದಲ್ಲಿ ನಿಲ್ಲಿಸಬಹುದು. ಬಾಹ್ಯೇಂದ್ರಿಯಗಳು ನಡೆಯು ತ್ತಿರುವಾಗಲೂ ಅವುಗಳ ವ್ಯಾಪಾರವನ್ನು ನಿಲ್ಲಿಸಿರುವಾಗಲೂ ಇವನ ಅನುಸಂಧಾನವು ಒಂದೇ ಮುಖವಾಗಿ ನಡೆಯಬೇಕಾಗಿರುವುದರಿಂದ ಈ ಎರಡು ಕ್ರಮಗಳನ್ನು ಸೂಚಿ ಸಿರುತ್ತಾರೆ. ಸಾಧಕನು ತನ್ನ ಶಕ್ತಿಯನ್ನನುಸರಿಸಿ ತನ್ನ ಪರಿಪಾಕಕ್ಕನುಸಾರವಾಗಿ ಈ ಅಭ್ಯಾಸವನ್ನು ಮಾಡಬೇಕು. ಮಾಡುವ ಧಾರಣಾಭ್ಯಾಸವು ಸಾಧಕನಿಗೆ ಪ್ರಾರಂಭ ದಶೆಯಲ್ಲಿ ಬೇಗನೆ ಮಾರ್ಪಾಡನ್ನು ತೋರಿಸುತ್ತದೆ. ಹೃದಯದಲ್ಲಿ ನಿಲ್ಲಿಸುವ ಕ್ರಮವು ಕಾರ್ಯಕ್ರಮದಲ್ಲಿ ಪರಿಪಾಕವಾಗಿ ಸಮಾಧಿ ಅನುಭವವನ್ನುಂಟುಮಾಡುತ್ತದೆ.

ಹಾಗೆಯೇ ಪ್ರತಿಕ್ಷಣದಲ್ಲಿಯೂ ಮನಸ್ಸು ಯಾವರೀತಿ ಚಲಿಸುತ್ತಿದ್ದರೂ ಅದನ್ನು ಉಪಸಂಹರಿಸಿ ತಲೆಯಲ್ಲಿರುವ ದ್ವಾದಶಾಂತದಲ್ಲಿ ನಿಲ್ಲಿಸಿ ಸಾಧಕನು ಅಭ್ಯಾಸ ಮಾಡುವುದರಿಂದ ಕೆಲವು ದಿವಸಗಳಲ್ಲಿಯೇ ಮನೋವೃತ್ತಿಗಳು ನಶಿಸಿದ ವ್ಯತ್ಯಾಸವು ತಿಳಿಯುತ್ತದೆಂದು ವಿಜ್ಞಾನ ಭೈರವದಲ್ಲಿ ಹೇಳಿದೆ. ಇದು **ಅಂತಕೋಟಿ ವಿಷಯ.**

ಸಾಧಕನು ಇದಲ್ಲದೆ ಚಿತ್ತಿನ ಉನ್ಮೇಷವನ್ನು ಆಯಾ ಸಮಯಗಳಲ್ಲಿ ಪರಿಶೀಲಿಸಿ ಅನುಸಂಧಾನಮಾಡುತ್ತಾನೆ. ಲೌಕಿಕವ್ಯವಹಾರಗಳಲ್ಲಿಯೂ ಕೂಡ

ಊಟ ಪಾನ ಉಲ್ಲಾಸ ಮುಂತಾದುವುಗಳ ಭರದಿಂದ ಉಂಟಾಗುವ ತೃಪ್ತಿಯನ್ನು ಚಿತ್ತಿನ ಉನ್ಮೇಷವೆಂದು ತಿಳಿದು ಮಹಾನಂದಮಯನಾಗುತ್ತಾನೆ. ಸಂಗೀತವೇ ಮೊದಲಾದ ವಿಷಯಗಳಿಂದುಂಟಾಗುವ ಆನಂದಕ್ಕೆ ಸಮಾನವಾದ ಆನಂದವನ್ನು ಮನೋರೂಢಿಯಂತೆ ಯೋಗಿಗಳು ತನ್ಮಯರಾಗಿ ಅನುಭವಿಸುತ್ತಾರೆ. ವಿಷಯವಿದ್ದರೆ ಹೇಗೋ ವಿಷಯವಿಲ್ಲದಿದ್ದರೂ ಹಾಗೇ ಆರೋಪಣೆ ಮಾಡಿಕೊಂಡು ಅನುಭವಿಸುತ್ತಾರೆ. ಯಾವಾಗ ಮತ್ತು ಯಾವುದರಿಂದ ಮನಸ್ಸಿಗೆ ಪೂರ್ಣತೃಪ್ತಿಯುಂಟಾಗುತ್ತದೆಯೋ ಅದೇ ಸ್ಥಿತಿಯನ್ನು ಭಾವನಾಬಲದಿಂದ ಮುಂದುವರಿಸಿದರೆ ವಿಕಲ್ಪವೃತ್ತಿಗಳು ಕ್ಷೀಣವಾಗಿ ಪರಾನಂದಸ್ವರೂಪವು ಪ್ರಕಾಶಿಸುತ್ತದೆ. ಹೀಗೆ ಆನಂದಪೂರ್ಣವಾದ ತನ್ನ ಸ್ವರೂಪದ ಅನುಭವವೇ ಮೊದಲಾದುವುಗಳನ್ನು ಊಹಿಸಿಕೊಳ್ಳಬೇಕು. ಇವೇ ಮೊದಲಾದವುಗಳು ಮಧ್ಯವಿಕಾಸಕ್ಕೆ ಉಪಾಯಗಳು.

ಮಧ್ಯವಿಕಾಸದಿಂದ ಚಿದಾನಂದ ಲಾಭವೆಂದು ಹೇಳಿದ್ದಾಯಿತು. ಇದನ್ನೇ ಪರಮಯೋಗಿಗಳಿಗುಂಟಾಗುವ ಸಮಾವೇಶ, ಸಮಾಪತ್ತಿ, ಸಮಾಧಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಅದು ಸದಾ ಬೆಳಗುತ್ತಲಿರುತ್ತದೆ. ಸಾಧನಾಭ್ಯಾಸಗಳಿಂದ ಪೂರ್ಣವಾಗಿ ಪ್ರಕಾಶಿಸದೆ ಇರುವಂತಹ ಸ್ಥಿತಿಯನ್ನು ಪ್ರತಿಬಂಧಕಗಳನ್ನು ದೂರಮಾಡುವ ಮೂಲಕ ಮರಳಿ ಹೊಂದಬೇಕು. ಸಮಾಧಿಸಂಸ್ಕಾರವುಳ್ಳವನಿಗೆ ವ್ಯವಹಾರದ ಜಾಗ್ರದವಸ್ಥೆಯಲ್ಲಿಯೂ ಬಾರಿಬಾರಿಗೂ ಚಿದೈಕ್ಯಾವಸ್ಥೆಯನ್ನು ಪರಾಮರ್ಶಿಸುವುದರಿಂದ ಯಾವಾಗಲೂ ಬೆಳಗುತ್ತಲಿರುವ ಸಮಾಧಿ ರಸಾನುಭವವೇ ಇರುತ್ತದೆ. ಮಧ್ಯಮೋಲ್ಲಾಸ, ಸ್ವಸ್ವರೂಪಾನುಭವ, ತೃತೀಯ ಲೋಚನೋನ್ಮೀಲನ ಇವು ಮೂರು ಒಂದೇ—

ಸಮಾಧಿ ಸಂಸ್ಕಾರವತಿವ್ಯುತ್ಥಾನೆ ಭೂಯೋ ಭೂಯಃ
ಚಿದೈಕ್ಯಾಮರ್ಶಾನ್ನಿತ್ಯೋದಿತ ಸಮಾಧಿಲಾಭಃ ॥೧೯॥

ಸಮಾವೇಶವನ್ನು ಪಡೆದಿರುವ ಯೋಗೀಶ್ವರನು ಜಾಗ್ರತ್‌ವ್ಯವಹಾರದಲ್ಲಿಯೂ ಸಮಾಧಿಯಲ್ಲುಂಟಾದ ಆನಂದಾನುಭವ ಸಂಸ್ಕಾರದಿಂದ ತನ್ಮಯನಾಗಿ ಆನಂದದಿಂದ ವಿಹರಿಸುತ್ತಲಿರುವನು.

ಶರದೃತುವಿನಲ್ಲಿ ಆಕಾಶದಲ್ಲಿ ಮೇಘಗಳು ಹುಟ್ಟಿ ಕರಗಿಹೋಗುವಂತೆ ಈತನು ಬಾಹ್ಯಪದಾರ್ಥಗಳೆಲ್ಲಾ ಚಿತ್ತಿನಲ್ಲಿಯೇ ಹುಟ್ಟಿ ಚಿತ್ತಿನಲ್ಲಿಯೇ ಲಯವಾಗುವುದನ್ನು ತಿಳಿಯುತ್ತಾನೆ. ಬಾರಿಬಾರಿಗೂ ಅಂತರ್ಮುಖನಾಗುತ್ತಾ ಸಮಾಧಿಸ್ಥಿತಿಯಲ್ಲಿ ತಾನು ಅನುಭವಿಸಿದ ಚಿದೈಕ್ಯರಸವನ್ನೇ **ಅನುಶೀಲನ** ಮಾಡುತ್ತಾನೆ. ಇಂತಹವನು ಸಮಾಧ್ಯವಸ್ಥೆಯಲ್ಲಿಯೂ ಜಾಗ್ರತ್‌ವ್ಯವಹಾರಾವಸ್ಥೆಯಲ್ಲಿಯೂ ಸಮಾನವಾದ ಭಾವನೆಯುಳ್ಳವನಾಗಿರುತ್ತಾನೆ.

ಸಾಧಕನು ತನ್ನ ಅಭ್ಯಾಸದಿಂದ ಈ ಸಂಸಾರಾವಸ್ಥೆಯಲ್ಲಿಯೇ ಶುದ್ಧಚಿದನುಭವರೂಪವಾದ ಸಮಾಧಿಸ್ಥಿತಿಯನ್ನು ಪಡೆಯುತ್ತಾನೆ. ಸಮಾಧಿಸ್ಥಿತಿಯನ್ನು ಪಡೆದ ಮಾತ್ರಕ್ಕೆ ಅವನ ಹಿಂದಿನ ಕರ್ಮಪರಿಪಾಕದಿಂದ ಬಂದಿರುವ ಶರೀರ ಮತ್ತು ಇಂದ್ರಿಯಗಳು ಹೋಗುವುದಿಲ್ಲ. ಶರೀರಸಂಬಂಧವಿರುವವರೆಗೂ ಅವನು ಸಾಮಾನ್ಯ ಮನುಷ್ಯನಂತೆಯೇ ಹೊರಗಿನ ವ್ಯಾಪಾರಗಳನ್ನು ನಿರ್ವಹಿಸಬೇಕು. ಆಹಾರ ವಿಹಾರಗಳೂ ಜಾಗ್ರತ್ ಸ್ವಪ್ನ ಸುಷುಪ್ತಿಗಳೂ ಈ ಶರೀರವಿರುವವರೆಗೂ ಇರುತ್ತವೆ. ಹೀಗಿದ್ದರೂ ಸಮಾಧಿಸ್ಥಿತಿಯನ್ನು ಹೊಂದಿರುವವನು ಹೊರಗಿನ ವ್ಯಾಪಾರಗಳಲ್ಲಿರುವಾಗಲೂ ಬಾರಿಬಾರಿಗೂ ತಾನು ಸಮಾಧಿಸ್ಥಿತಿಯಲ್ಲಿ ಅನುಭವಿಸಿದಾನಂದವನ್ನು ಅಂದರೆ ಚಿದನುಭವವನ್ನು ಪರಾಮರ್ಶಿಸುತ್ತಿರುತ್ತಾನೆ. ನದಿಗಳು ಸಮುದ್ರವನ್ನು ಸೇರಿ ಲೀನವಾಗುವಂತೆ ಹೊರಗಿನ ವ್ಯಾಪಾರಗಳು ಚಿತ್ತಿನಲ್ಲಿ ಸೇರಿ ಲೀನವಾಗುತ್ತಿರುತ್ತವೆ. ಆ ಸಮುದ್ರದ ನೀರು ಆವಿಯಾಗಿ ಮೋಡವಾಗಿ ಮಳೆಯಾಗಿ ನದಿಯಾಗುವಂತೆ ಅದೇ ಚಿತ್ತಿನಿಂದಲೇ ಹೊರಹೊಮ್ಮಿ ಬಾಹ್ಯವ್ಯಾಪಾರಗಳಾಗಿ ಪರಿಣಮಿಸುತ್ತದೆ ಎಂಬುದನ್ನು ವಿಶದವಾಗಿ ಸಾಕ್ಷಾತ್ಕರಿಸುತ್ತಾನೆ. ಇದನ್ನೆ ಸೃಷ್ಟಿ ಸ್ಥಿತಿ ಸಂಹಾರರೂಪವಾದ ಚಮತ್ಕಾರಗಳನ್ನು ಒಳಗೊಂಡಿರುವ **ಕ್ರಮಮುದ್ರಾ** ಎನ್ನುತ್ತಾರೆ.

ಹೊರಗಿನ ಪದಾರ್ಥಗಳೆಲ್ಲಾ ‘ಇದಂ’. ಒಳಗಿನ ನಾನು ಎಂಬುದು ‘ಅಹಂ’. ಸಮಾಧಿಯನ್ನು ಪಡೆದಿರುವವನು ‘ಇದಂ’ ರೂಪವಾದ ವಿಶ್ವವನ್ನೆಲ್ಲಾ ನುಂಗುವ ಕ್ರಮದಿಂದ ಚಿಚ್ಛಕ್ತಿಯಾದ ‘ಅಹಂ’ ಪದಾರ್ಥದಲ್ಲಿ ಸೇರುವಿಕೆಯನ್ನು ಗಮನಿಸುತ್ತಾನೆ. ಹಾಗೆಯೇ ‘ಅಹಂ’ ವಸ್ತುವಿನಿಂದ ಹೊರಹೊಮ್ಮಿ ‘ಇದಂ’ ರೂಪವಾಗಿ ಪದಾರ್ಥಸ್ವರೂಪಗಳನ್ನು ಪರಿಶೀಲಿಸುತ್ತಾನೆ. ಈ ಬಗೆಯ ಪರಿಶೀಲನೆಯಿಂದ ಹೊರಗಿನ ‘ಇದಂ’ ಒಳಗಿನ ‘ಅಹಂ’ ಇವೆರಡೂ ಚಿದ್ಘನವಾಗಿಯೇ ಇರುವುದರಿಂದ ಅನುಭವಪೂರ್ವಕವಾಗಿ ತನ್ಮಯವಾಗಿರುವಾಗ ಪರಮಾನಂದವುಂಟಾಗುತ್ತದೆ. ಈ ಆನಂದಾನುಭವವು ಪಾಶಗಳನ್ನು ಬಿಡಿಸುತ್ತದೆ. ಚಿದನುಭವದಲ್ಲಿ ಸ್ಥೈರ್ಯವನ್ನುಂಟುಮಾಡುತ್ತದೆ. ಇಂತಹ ವಿಲಕ್ಷಣವಾದ ಕ್ರಮವುಳ್ಳ ಉಪಾಯಕ್ಕೆ ಕ್ರಮಮುದ್ರೆಯೆಂದು ಹೆಸರು. ತುರ್ಯಾಶಕ್ತಿಯನ್ನೊಳಗೊಂಡಿರುವ ಚಿತ್ತು ಕ್ರಮಮುದ್ರಾಕ್ರಮದಿಂದ ವಿಶ್ವವನ್ನು ಸಾತ್ಮೀಕರಣ ಮಾಡಿಕೊಳ್ಳುತ್ತದೆ.

ಸಾಧಕನು ಈ ಕ್ರಮಮುದ್ರೆಯಿಂದ ಒಳಗಿರುವ ಪೂರ್ಣಾಹಂತಾ ಸ್ವರೂಪವನ್ನೂ ಹೊರಗಿನ ವಿಷಯಗಳನ್ನೂ ಪರಿಶೀಲನೆಮಾಡಿ ಪರಾಶಕ್ತಿಯ ಪ್ರಸಾರವನ್ನು ಸಾಕ್ಷಾತ್ಕರಿಸಿ ಪರಮಯೋಗಿಯಾಗುವನು. ಹೊರಗಿನ ವಿಷಯಜ್ಞಾನ ಸಮೂಹವು ಒಳಗಿನ ಚಿತ್ತಿನೊಳಕ್ಕೆ ನುಂಗಿದಂತೆ ಹೋಗಿ ಲೀನವಾಗುತ್ತದೆ. ಸಮಾವೇಶ ಪಡೆದಿರುವವನು ಒಳಗಿನ ಚಿಚ್ಛಕ್ತಿಸ್ವರೂಪವನ್ನು ಸಾಕ್ಷಾತ್ಕರಿಸುತ್ತಾನೆ. ಅವನು ‘ಇದಂ’ ರೂಪವಾದ ವಿಷಯ ಸಮೂಹವನ್ನು ವಮನಯುಕ್ತಿಯಿಂದ ತಿಳಿಯುತ್ತಾನೆ. ಒಳಗೂ ಹೊರಗೂ ಚಿದ್ವಿಲಾಸವೇ ನಿತ್ಯೋದಿತವಾಗಿ ತೋರುವುದರಿಂದ ಅವನಿಗೆ ಪರಮಾನಂದಾನುಭವ

ಭವವುಂಟಾಗುತ್ತದೆ. ಪಾಶಗಳನ್ನು ಹೋಗಲಾಡಿಸಿ ತುರೀಯಾವಸ್ಥೆಯಲ್ಲಿ ನಿಲ್ಲಿಸುವುದರಿಂದ ಮುದ್ರಾ ಎನ್ನಿಸಿಕೊಳ್ಳುವುದು. ಸೃಷ್ಟ್ಯಾದಿಕ್ರಮಗಳನ್ನು ಪ್ರಕಾಶಪಡಿಸುತ್ತಾ ಒಂದು ಕ್ರಮವನ್ನನುಸರಿಸಿರುವುದರಿಂದ ಕ್ರಮಮುದ್ರೆಯೆಂದು ಹೇಳಲ್ಪಟ್ಟಿದೆ.

ಈ ಕೆಳಗಿನ ಸೂತ್ರವು ಸಮಾಧಿಲಾಭವನ್ನು ಸೂಚಿಸುವುದು.

ತದಾ ಪ್ರಕಾಶಾನಂದಸಾರ ಮಹಾಮಂತ್ರ ವೀರ್ಯಾತ್ಮಕ ಪೂರ್ಣಾಹಂತಾ ವೇಶಾತ್ಸದಾ ಸರ್ವ ಸರ್ಗ ಸಂಹಾರಕಾರಿ ನಿಜಸಂವಿದ್ದೇವತಾ ಚಕ್ರೇಶ್ವರತಾ ಪ್ರಾಪ್ತಿರ್ಭವತೀತಿ ಶಿವಂ ॥೨೦॥

ಸಮಾಧಿಲಾಭವಾದಾಗ ಪ್ರಕಾಶ ಮತ್ತು ಆನಂದ ಇವೇ ಮುಖ್ಯವಾಗುಳ್ಳ ಮಹಾಮಂತ್ರ ವೀರ್ಯಾತ್ಮಕವಾದ ಪೂರ್ಣಾಹಂತಾನುಭವವಾಗುತ್ತದೆ. ಇದರಿಂದ ಎಲ್ಲಾ ಸೃಷ್ಟಿ ಸಂಹಾರಗಳನ್ನೂ ಮಾಡುವ ತನ್ನ ಸಂವಿದ್ದೇವತಾಚಕ್ರದ ಐಶ್ವರ್ಯ ಪ್ರಾಪ್ತಿಯಾಗುತ್ತದೆ.

ನಿತ್ಯಪ್ರಕಾಶವಾದ ಸಮಾಧಿಯು ಲಭಿಸಲಾಗಿ ಚಿದಾನಂದರೂಪವಾದ ಎಲ್ಲಾ ಮಂತ್ರಗಳ ಜೀವಿತರೂಪವಾಗಿರುವ ಪರಿಪೂರ್ಣವಾದ ಪರಾಸಂವಿತ್‌ಶಕ್ತಿಯು ಸಾಕ್ಷಾತ್ಕರಿಸಲ್ಪಡುತ್ತದೆ. ಅಕೃತ್ರಿಮವಾದ ತನ್ನ ಚಮತ್ಕಾರದ ಆವೇಶದಿಂದ ಕಾಲಾಗ್ನಿ (ಯಾವನ ಪ್ರಕೋಪದಿಂದ ವಿಶ್ವವು ಉಪಸಂಹರಿಸಲ್ಪಡುತ್ತದೆಯೋ ಆ ಭುವನೇಶನೆಂಬ ರುದ್ರನ ಹೆಸರು)ಮೊದಲ್ಗೊಂಡು ಕೊನೆಯ ತತ್ತ್ವದವರೆಗೂ ಇರುವ ಈ ವಿಶ್ವದ ವಿಚಿತ್ರವಾದ ಸೃಷ್ಟಿಪ್ರಳಯಗಳು ತನ್ನ ಸಂವಿತ್‌ಶಕ್ತಿಯ ಸಮೂಹದಿಂದ ಆಗುತ್ತದೆಂದು ಆ ಪರಮಯೋಗಿಗೆ ಅನುಭವಕ್ಕೆ ಬರುತ್ತದೆ. ಇದೆಲ್ಲಾ ಶಿವಸ್ವರೂಪವೆಂದು ಸಿದ್ಧಾಂತ. ಇಲ್ಲಿ **ಸೋಪಾನಾರೋಹಣ ಕ್ರಮ**ದಿಂದ ನಿರೂಪಿಸಲ್ಪಟ್ಟಿರುತ್ತದೆ.

ಹೊರಗಿನ ವ್ಯವಹಾರದಲ್ಲಿ ಪದಾರ್ಥ ಮತ್ತು ಪದಾರ್ಥಜ್ಞಾನ ಎರಡೂ ತೋರುತ್ತವೆ. ಆ ಎರಡರಲ್ಲಿ ತಿಳಿಯಲ್ಪಡುವ ಜ್ಞಾನವೇ ಚಿತ್ಸ್ವರೂಪ. ಅದರಲ್ಲಿ ಅಂತರ್ಮುಖ ವಿಮರ್ಶಮಯರಾದ ಪ್ರಮಾತೃಗಳು ಮುಖ್ಯ. ಅದರಲ್ಲಿ ಶರೀರಾದಿ ಸಂಕುಚಿತಾಭಿಮಾನಗಳನ್ನು ತೊರೆದಿರುವ ವಿಶ್ವಶರೀರಿಗಳಾಗಿರುವ ಸದಾಶಿವ ಐಶ್ವರ್ಯವೇ ಮುಖ್ಯ. ಅದರಲ್ಲಿಯೂ ಪ್ರಕಾಶೈಕರೂಪದಿಂದ ಅನಂತವಾದ ಚಮತ್ಕಾರಮಯನಾಗಿರುವ ಮಹೇಶ್ವರನೇ ಪರಮಾರ್ಥ. ಈ ಪಾರಮಾರ್ಥಿಕ ಪ್ರಕಾಶಾವೇಶವಿಲ್ಲದೆ ಯಾವುದೂ ಬೆಳಗುವುದಿಲ್ಲ. ಆ ಪರಮೇಶ್ವರನೇ ತನ್ನ ಸ್ವಾತಂತ್ರ್ಯಶಕ್ತಿಯಿಂದ ಅಕಾರಾದಿ ಕ್ಷಕಾರಾಂತವಾಗಿರುವ ಮಾಯಾಪದದಲ್ಲಿರುವ ಶಬ್ದರಾಶಿಯನ್ನು **ಪರಾಮರ್ಶ** ಮಾಡುತ್ತಾನೆ. ಇದನ್ನು ಸ್ವೀಕರಿಸಿದರೂ ವಾಚ್ಯ ವಾಚಕರೂಪವಾದ ಜಗತ್ತನ್ನು ಸೃಷ್ಟಿಸುವುದರಿಂದ ತಾನು ಪರಿಪೂರ್ಣನಾಗಿದ್ದು ನಿಷ್ಕಾಮವಾಗಿ ಆನಂದಮಯನಾಗಿರುತ್ತಾನೆ. ಪಾರಿಭಾಷಿಕವಾಗಿ "ಅ" ಅಂದರೆ "ಅನುತ್ತರಾಕುಲ ಸ್ವರೂಪ"—ಸರ್ವಾತಿಶಾಯಿಯಾಗಿ ಸ್ವಸಂವೇದ್ಯವಾಗಿ ಸ್ವಯಂಪ್ರಕಾಶವಾಗಿರುವ **ಚಿತ್**. "ಹ" ಅಂದರೆ ಶಕ್ತಿಪ್ರಸರ ರೂಪವಾದ

ಪ್ರಸರಿಸುವ **ವಿಶ್ವ**. ಹಕಾರಕ್ಕೆ ಸಂಪ್ರದಾಯದಲ್ಲಿ ವ್ಯೋಮಕಲಾ ಎಂದು ಹೆಸರು. ಇದು ಸರ್ವವ್ಯಾಪಿತ್ವವನ್ನು ಸೂಚಿಸುತ್ತದೆ. "ಕ್ಷ" ಎಂದರೆ ಪ್ರಸರವನ್ನು ಉಪಸಂಹರಿಸುವಂತಹ ಅಕಾರ ಹಕಾರಗಳ ಸಂಪುಟರೂಪ. ಪ್ರತ್ಯಾಹಾರ ನ್ಯಾಯದಂತೆ ಕ್ಷಕಾರದಲ್ಲಿ ಅಕಾರ ಹಕಾರಗಳೆರಡೂ ಸೇರಿವೆ. ಇದು ಅಭಿನ್ನವಾಗಿ ಅನುಭವಕ್ಕೆ ಬರುತ್ತಾ ಒಂದು ರೂಪವಾಗಿ ಸ್ಫುರಿಸುತ್ತಾ ಅನುತ್ತರವಾದ ಅಕಾರದಲ್ಲಿಯೇ ಲೀನವಾಗುತ್ತದೆ. ಈ ಶಬ್ದರಾಶಿಯ ವಿಮರ್ಶೆಯು ಸತ್ಯವಾದುದು. ಪ್ರಕಾಶವು ಆತ್ಮನಲ್ಲಿ ವಿಶ್ರಾಂತಿಯನ್ನು ಪಡೆದರೆ ಅದು ಅಹಂಭಾವ ಎಂದು ಹೇಳಲ್ಪಡುತ್ತದೆ. ಇದೇ ಸ್ವತಂತ್ರವಾಗಿ ಇತರ ಅಪೇಕ್ಷೆಯಿಲ್ಲದೆ ತನ್ನಲ್ಲಿ ನಿಲ್ಲುವ ಸ್ಥಿತಿಯೇ ಮುಖ್ಯವಾದ ಈಶ್ವರ ಕರ್ತೃತ್ವ ಮತ್ತು ಸ್ವಾತಂತ್ರ್ಯ ಶಕ್ತಿಗಳ ವಿಲಾಸ.

> **ಪ್ರಕಾಶಸ್ಯಾತ್ಮ ವಿಶ್ರಾಂತಿರಹಂಭಾವೋ ಹಿ ಕೀರ್ತಿತಃ ।**
> **ಉಕ್ತಾ ಚ ಸೈವ ವಿಶ್ರಾಂತಿಃ ಸರ್ವಾಪೇಕ್ಷಾ ನಿರೋಧತಃ ॥**
> **ಸ್ವಾತಂತ್ರ್ಯಮಥಕರ್ತೃತ್ವಂ ಮುಖ್ಯಮೀಶ್ವರ ತಾಪಿಚ ।**

ಈ 'ಅಹಂತಾ' ಎಲ್ಲಾ ಮಂತ್ರಗಳ ಉದಯ ಮತ್ತು ವಿಶ್ರಾಂತಿಗಳಿಗೆ ಆಕರವಾಗಿದೆ. ಇದರ ಬಲದಿಂದಲೇ ಎಲ್ಲಾ ಕೆಲಸಗಳೂ ನಿರ್ವಹಿಸಲ್ಪಡುತ್ತಿರುವುದರಿಂದ ಮಹಾವೀರ್ಯ ಭೂಮಿಯಾಗಿರುತ್ತದೆ. ಈ ವಿಷಯವು 'ಶಿವದೃಷ್ಟಿ' ಯಲ್ಲಿಯೂ 'ಶಿವಸೂತ್ರ' ಗಳಲ್ಲಿಯೂ ವಿವರಿಸಲ್ಪಟ್ಟಿದೆ.

> **'ತದಾಕ್ರಮ್ಯ ಬಲಂ ಮಂತ್ರಾ............'**
> **'ಮಹಾಹ್ರದಾನುಸಂಧಾನಾನ್ಮಂತ್ರವೀರ್ಯಾನುಭವಃ'**
>
> **—ಶಿವಸೂತ್ರ**

ಆ ಮಹಾಮಂತ್ರ ವೀರ್ಯಾತ್ಮಕವಾಗಿರುವ ಪೂರ್ಣಾಹಂತ ಸ್ಥಿತಿಯಲ್ಲಿ ದೇಹ ಪ್ರಾಣಾದಿ ವಿಷಯಜ್ಞಾನಗಳು ಲೀನವಾಗಿರುವುದರಿಂದ ಆ ಸ್ಥಿತಿಯಲ್ಲಿ ದೇಹಾದಿಗಳಿಗೂ ನೀಲಾದಿ ವಿಷಯಗಳಿಗೂ ಬೇರೆ ಗೋಚರಿಸುವಿಕೆಯಿಲ್ಲದೆ ಎಲ್ಲಾ ಚಿನ್ಮಯವಾಗಿ ಹೋಗುತ್ತದೆ. ಇಷ್ಟು ವಿವರಿಸಿದ್ದರಿಂದ ದೇಹ ಸುಖ ನೀಲ ಮೊದಲಾದವುಗಳು ಎಷ್ಟು ತೋರುತ್ತವೆಯೋ ಎಷ್ಟುಮಾತ್ರ ತಿಳಿಯಲ್ಪಡುತ್ತವೆಯೋ ಯಾವ ರೀತಿಯಲ್ಲಿ ನೆನೆಯಲ್ಪಡುತ್ತವೆಯೋ ಅಲ್ಲೆಲ್ಲಾ ಆ ಮಹಾಮಹಿಮಳಾದ ಚಿಚ್ಛಕ್ತಿಯು ಆಧಾರವಾಗಿದ್ದಾಳೆಂದು ಸ್ಫುರಿಸುತ್ತದೆ. ಆ ಚಿಚ್ಛಕ್ತಿಯ ಸ್ಫುರಣವಿಲ್ಲದೆ ಯಾವ ವಿಷಯವೂ ತೋರುವುದಿಲ್ಲ. ಎಲ್ಲಾ ರೀತಿಯಾಗಿ ತಾನೇ ಸ್ಫುರಿಸುತ್ತಿದ್ದರೂ ತನ್ನ ಮಾಯಾಶಕ್ತಿಯಿಂದ ದೇಹ ನೀಲಾದಿ ಕ್ರಮಗಳಿಂದ ರಂಜಿಸುತ್ತಾ ಅಭಿಮಾನದಿಂದ ಬೇರೆ ಬೇರೆಯಾಗಿದ್ದ ಹಾಗೆ ಪ್ರಕಾಶಿಸುತ್ತದೆ. ಮಾಯಾಪ್ರಮಾತೃಗಳಿಂದ **ಜ್ಞಾನಸಂಕಲ್ಪ ಅಧ್ಯವಸಾಯಾದಿರೂಪ**ಗಳಿಂದ ತಿಳಿಯಲ್ಪಡುತ್ತದೆ. ತಾತ್ತ್ವಿಕವಾಗಿ ಆ ಚಿಚ್ಛಕ್ತಿಯು ಒಂದೇ ಆಗಿದ್ದರೂ ಆಯಾ ಪದಾರ್ಥ ಕ್ರಮರೂಪಗಳಿಂದ ಪ್ರಕಾಶಿಸುತ್ತದೆ.

ಅಕ್ರಮವಾಗಿ ಅನಂತವಾದ ಚಿದ್ರೂಪವಾಗಿರುತ್ತದೆ. ಆ ಮಹೇಶ್ವರನ ಮಾಯಾಶಕ್ತಿಯಿಂದ ಜ್ಞಾನಸಂಕಲ್ಪ ಅಧ್ಯವಸಾಯಾದಿ ಪದಗಳಿಂದ ಭೇದವ್ಯವಹಾರಗಳುಂಟಾಗುತ್ತವೆ. ಅವು ಆ ಪರಮೇಶ್ವರನ ಮಾಯಾಶಕ್ತಿರೂಪಗಳಾಗಿವೆ.

ಮಾಯಾಶಕ್ತ್ಯಾ ವಿಭೋಃ ಸೈವ ಭಿನ್ನಸಂವೇದ್ಯಗೋಚರಾ
ಕಥಿತಾಜ್ಞಾನ ಸಂಕಲ್ಪಾಧ್ಯವಸಾಯಾದಿ ನಾಮಭಿಃ ॥

ಅಭಿನ್ನವಾದ ಶಕ್ತಿಯು ಭಿನ್ನವಾಗಬೇಕಾಗಿದ್ದರೆ **ಅಖಂಡಜ್ಞಾನ**, 'ಅದೋ' 'ಇದೋ' ಎನ್ನುವ ಭಿನ್ನದ್ಯೋತಕವಾದ **ಸಂಕಲ್ಪ**, ಭೇದ ನಿಶ್ಚಯವಾದ **ಅಧ್ಯವಸಾಯ** ಇವು ಮೂರೂ ಬೇಕು.

ಯಾ ಚೈಷಾ ಪ್ರತಿಭಾ ತತ್ತತ್ಪದಾರ್ಥಕ್ರಮರೂಷಿತಾ ।
ಅಕ್ರಮಾನಂತ ಚಿದ್ರೂಪಃ ಪ್ರಮಾತಾ ಸ ಮಹೇಶ್ವರಃ ॥

ಈ ರೀತಿಯಾಗಿ ಚಿಚ್ಛಕ್ತಿಯೊಂದೇ ಎಲ್ಲಾ ದಶೆಗಳಲ್ಲಿಯೂ ವಿಜೃಂಭಿಸುತ್ತಾ ಎಲ್ಲಾ ವಿಷಯಗಳಲ್ಲಿಯೂ ಅನುಪ್ರವೇಶಮಾಡುತ್ತಾ ಎಲ್ಲವನ್ನೂ ತನ್ನಲ್ಲಿಯೇ ಲೀನ ಮಾಡಿಕೊಳ್ಳುತ್ತಿರುತ್ತದೆ. ಯಾವ ಪ್ರತಿಭಾಶಕ್ತಿಯು ಆಯಾ ಪದಾರ್ಥ ಕ್ರಮ ಸ್ವಭಾವಗಳಿಂದ ಪ್ರಕಾಶಿಸುತ್ತಿದೆಯೋ ಆ ಶಕ್ತಿಯೇ ಕಾಲದೇಶ ಆಕಾರಗಳಿಲ್ಲದ ಅಕ್ರಮವಾದ ಸ್ಥಿತಿಯಲ್ಲಿ ಅನಂತ ಚಿದ್ರೂಪಿಯಾದ ಪರಪ್ರಮಾತೃವಾದ ಪರಮೇಶ್ವರನಾಗಿ ವಿರಾಜಿಸುತ್ತದೆ. ಹಿಂದೆ ವಿವರಿಸಿದಂತೆ ಇಂದ್ರಿಯಗಳ ಮೂಲಕ ಪ್ರಸರ. ಇಂದ್ರಿಯಗಳಿಂದುಂಟಾಗುವ ಜ್ಞಾನವನ್ನು ಉಪಸಂಹಾರಮಾಡುವ ಕ್ರಮದಿಂದ ಪ್ರಕಾಶಿಸುತ್ತಿರುತ್ತದೆ. ಈ ಪ್ರಪಂಚದಲ್ಲಿರುವ ಎಲ್ಲಾ ಪದಾರ್ಥಗಳೂ ಒಂದೇ ಶಕ್ತಿಯಿಂದ ಬೆಳಗಿರುವುದರಿಂದ ಮೂಲ ತತ್ತ್ವವು ಒಂದೇ ರೀತಿಯಾಗಿರುತ್ತದೆ. ಎಲ್ಲಾ ವಿಷಯಗಳೂ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಅನುಭವಿಸುತ್ತಿರುತ್ತವೆ. ಯೋಗಿಯು ತನ್ನ ಅಂತಃಕರಣ ಬಹಿಷ್ಕರಣಗಳನ್ನು ಈ ಚಿಚ್ಛಕ್ತಿಯ ಕಿರಣ ಸಮೂಹವೆಂದು ತಿಳಿಯುತ್ತಾನೆ. ಆಗ ಅವನು ಸಹಜ ಸಂವಿತ್ತಿ ದೇವತಾಚಕ್ರ (ಆಮ್ನಾಯಗಳಾದ ಅಂತಃಕರಣ ಬಹಿಷ್ಕರಣಗಳ ತೇಜಃಪುಂಜ) ರೂಪವೆಂದು ತಿಳಿದು ಈಶ್ವರತ್ವವನ್ನೂ ಪರಭೈರವಾತ್ಮಕ ಸಾಮ್ರಾಜ್ಯವನ್ನೂ ಪಡೆಯುತ್ತಾನೆ.

ಇಂತಹ ಯೋಗಿಯು ಏಕಾಗ್ರತೆಯಿಂದ ಸಂಹಾರವನ್ನೂ ಭೇದಜ್ಞಾನದಿಂದ ಸೃಷ್ಟಿಯನ್ನೂ ಮಾಡುತ್ತಾ ಚಕ್ರೇಶ್ವರನಾಗಿರುತ್ತಾನೆ. ಸಂಕ್ಷೇಪವಾಗಿ ಹೇಳುವುದಾದರೆ ವಿಶ್ವರೂಪವಾಗಿ ಬೆಳಗುತ್ತಾನೆಂದು ಹೇಳಿದಹಾಗಾಯಿತು.

ಈ ಪ್ರಪಂಚದಲ್ಲಿ ಸಾಧನಾಭ್ಯಾಸಗಳಿಂದ ಸಮಾಧಿಸ್ಥಿತಿಯನ್ನು ಕೆಲವರು ಕಾಣುತ್ತಾರೆ. ಅವರಿಗೂ ಸಾಮಾನ್ಯ ಮನುಷ್ಯರಿಗೂ ಬಾಹ್ಯಪ್ರಪಂಚಾನುಭವ ಒಂದೇ ರೀತಿಯಾಗಿರುತ್ತದೆ. ಆದರೆ ಭಾವನಾಕ್ರಮವು ಬೇರೆಯಾಗಿರುತ್ತದೆ. ಸಾಮಾನ್ಯವಾಗಿ

ಮನುಷ್ಯನು ಬಾಹ್ಯಪ್ರಪಂಚದಲ್ಲಿ ಒಂದು ಪದಾರ್ಥವನ್ನು ನೋಡಿದರೆ ಅದರ ಗುಣಾವ ಗುಣಗಳನ್ನು ಅವನ ಹಿಂದಿನ ಅನುಭವದಂತೆ ತಿಳಿಯುತ್ತಾನೆ. ಆ ಹಿನ್ನೆಲೆಯಿಂದ ಆ ಪದಾರ್ಥವನ್ನು ಸ್ವೀಕರಿಸುತ್ತಾನೆ. ಅಥವಾ ಬಿಟ್ಟುಬಿಡುತ್ತಾನೆ. ಸಮಾಧಿಸ್ಥಿತಿಯನ್ನ ನುಭವಿಸಿರುವ ವ್ಯಕ್ತಿಯು ಒಂದು ವಿಚಿತ್ರರೀತಿಯಲ್ಲಿ ಹೊರಗಿನ ಪ್ರಪಂಚವನ್ನು ನೋಡುತ್ತಾನೆ. ಇವನಿಗೆ ಹೊರಗಿನ ಪದಾರ್ಥಪ್ರಧಾನವಲ್ಲ. ಆ ಪದಾರ್ಥಜ್ಞಾನವೇ ಮುಖ್ಯ. ಇವನು ಈ ಪದಾರ್ಥಜ್ಞಾನಕ್ಕಿಂತ ಈ ಪದಾರ್ಥಜ್ಞಾನವನ್ನು ಪಡೆಯುವ ಚಿದ್ರೂಪಿಯಾದ ಜೀವಾತ್ಮನನ್ನು ಪ್ರಧಾನವಾಗಿ ಭಾವಿಸುತ್ತಾನೆ. ಅಷ್ಟಕ್ಕೆ ತೃಪ್ತಿ ಯಾಗದೆ ಸ್ಥೂಲಪ್ರಪಂಚದಲ್ಲಿಯೂ ಎಲ್ಲಾ ಜೀವಾತ್ಮರುಗಳಲ್ಲಿಯೂ ವ್ಯಾಪಿ ಯಾಗಿಯೂ ಆಧಾರವಾಗಿಯೂ ಅಖಂಡವಾಗಿಯೂ ಅನಂತವಾಗಿಯೂ ಇರುವ ಪರಮಾತ್ಮನನ್ನು ಪ್ರಧಾನವೆಂದು ತಿಳಿಯುತ್ತಾನೆ. ಅವನಿಗೆ ಪ್ರತಿಯೊಂದು ವ್ಯವಹಾರ ದಲ್ಲಿಯೂ ಪರಮಾತ್ಮನ ಪ್ರಭಾವವು ಎಡಬಿಡದೆ ಪರಿಶೀಲನೆಯಲ್ಲಿರುತ್ತದೆ. ಹಣ್ಣಿನಲ್ಲಿ ರೂಪ ರಸ ಗಂಧ ಮೊದಲಾದ ಧರ್ಮಗಳು ಒಂದನ್ನೊಂದು ಬಿಡದೆ ಕೇಂದ್ರೀಕೃತ ವಾಗಿರುವಂತೆ ಬಾಹ್ಯಪದಾರ್ಥ, ಪದಾರ್ಥಜ್ಞಾನ, ಅದರ ಜ್ಞಾತೃ, ಇದಕ್ಕೆಲ್ಲಾ ಆಧಾರವಾಗಿರುವ ಸರ್ವವ್ಯಾಪಿಯಾದ ಪರಮಾತ್ಮ ಈ ಅಂಶಗಳನ್ನು ಸದಾ ಅನುಸಂಧಾನ ಮಾಡುತ್ತಿರುತ್ತಾನೆ. ಇದರಿಂದ ಅವನ ಜ್ಞಾನವು ವಿಕಾಸವಾಗಿ 'ಅಲ್ಪಾಹಂತಾ' ವಿಮರ್ಶೆಯಿದ್ದವನು 'ಪೂರ್ಣಾಹಂ' ವಿಮರ್ಶೆಯನ್ನು ಪಡೆಯುತ್ತಾನೆ. ಇದೇ ಸಮಾಧಿ ಲಾಭ.

> **ದೇಹ ಪ್ರಾಣ ಸುಖಾದಿಭಿಃ ಪ್ರತಿಕಲಂ ಸಂರುಧ್ಯಮಾನೋ ಜನಃ**
> **ಪೂರ್ಣಾನಂದ ಘನಾಮಿಮಾಂ ನ ಚಿನುತೆ ಮಾಹೇಶ್ವರೀಂ ಸ್ವಾಂ ಚಿತಿಮ್ ।**
> **ಮಧ್ಯೆ ಬೋಧ ಸುಧಾಬ್ಧಿ ವಿಶ್ವಮಭಿತಸ್ತ್ವೇನಪಿಂಡೋಪಮಂ**
> **ಯಃ ಪಶ್ಯೇದುಪದೇಶತಸ್ತು ಕಥಿತಃ ಸಾಕ್ಷಾತ್ಸ ಏಕಃ ಶಿವಃ ॥**

ಶರೀರ ಪ್ರಾಣ ಸುಖ ಮುಂತಾದವುಗಳಿಂದ ಯಾವಾಗಲೂ ಮುಚ್ಚಲ್ಪಟ್ಟಿರುವ ಜನರು ಈ ಸಂಪೂರ್ಣಾನಂದ ರೂಪವಾಗಿರುವ ಮಾಹೇಶ್ವರೀಯವಾದ ತಮ್ಮ ಚಿತ್ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲಾರರು. ಜ್ಞಾನವೆಂಬ ಕ್ಷೀರಸಾಗರದಲ್ಲಿ ಈ ಮಹಾವಿಶ್ವವನ್ನು ನೊರೆಯಂತೆ ಯಾವನು ಉಪದೇಶದಿಂದ ತಿಳಿಯುತ್ತಾನೆಯೋ ಯಾವನು ಸಾಕ್ಷಾತ್ಕರಿ ಸುತ್ತಾನೆಯೋ ಅವನೇ ಶಿವನಾಗುತ್ತಾನೆ.

ಮಹೇಶ್ವರನು ಸ್ವತಂತ್ರನಾಗಿ ಚಿಚ್ಛಕ್ತಿಗಳ ಸಮೂಹಕ್ಕೆ ಒಡೆಯನಾಗಿ ಸಂವಿ ದ್ದೇವತಾಚಕ್ರಗಳಿಂದ ಕೂಡಿದವನಾಗಿ ವಿರಾಜಿಸುತ್ತಿದ್ದಾನೆ. ಇದುವರೆಗೂ ಹೇಳಿದ ಪ್ರಕರಣಗಳೆಲ್ಲಾ ಮಂಗಳಕರವಾಗಿ ಶಿವಪ್ರಾಪ್ತಿಗೆ ಕಾರಣವಾಗಿರುತ್ತವೆ. ಶಿವನಿಂದಲೇ ಹೊರಟಿರುವುದರಿಂದ ಶಿವನಿಗಿಂತ ಬೇರೆಯಲ್ಲದೆ ಇರುತ್ತವೆ. ಅಂದರೆ ಶಿವಮಯ ವಾಗಿರುತ್ತವೆ.

ಕೆಲವರಿಗೆ ಈಶ್ವರನ ಶಕ್ತಿಪಾತವಾಗಿದ್ದರೂ ಶಾಸ್ತ್ರಾಭ್ಯಾಸವಿಲ್ಲದಿರುವುದರಿಂದ ಅವರು ತೀಕ್ಷ್ಣವಾದ ಮುಕ್ತಿವಿಚಾರಗಳಲ್ಲಿ ಅಸಮರ್ಥರಾಗಿರುವರು. ಅಂತಹವರಿ ಗೋಸ್ಕರ ಪ್ರತ್ಯಭಿಜ್ಞಾದರ್ಶನದ ಅರಿವು ಸುಲಭವಾಗಿ ಉಂಟಾಗಲೆಂದು ಈ ಸಂಗ್ರಹವು ಬರೆಯಲ್ಪಟ್ಟಿದೆ.

ಪ್ರತ್ಯಭಿಜ್ಞಾ ಸೂತ್ರಗಳ ಸರಳಾನುವಾದ

ಸ್ವಯಂಪ್ರಕಾಶವಾದ ಚಿತ್ತು ಸ್ವತಂತ್ರವಾದದ್ದು. ಸರ್ವಶಕ್ತಿಗಳನ್ನೂ ಒಳಗೊಂಡಿ ರುವಂಥಾದ್ದು. ಎಲ್ಲಕ್ಕೂ ಕಾರಣವಾದದ್ದು. ಸುಖೋಪಾಯವಾದದ್ದು ಇದು ದೇಶ ಕಾಲ ಆಕಾರಗಳಿಗೆ ಒಳಪಟ್ಟಿರುವುದಿಲ್ಲ. ಈ ದಶೆಯಲ್ಲಿ ಇದು ಅನುತ್ತರ, ವಿಮರ್ಶ ಮಯೀ, ಪರಾಸಂವಿತ್, ಪರಮಶಿವ ಎಂದು ಕರೆಯಲ್ಪಡುತ್ತದೆ.

ಈ ಚಿತ್ತು ಪ್ರಕಾಶವಿಮರ್ಶಮಯವಾಗಿದೆ. ಪ್ರಕಾಶವೆಂದರೆ ಶಕ್ತಿಪ್ರಸಾರ. ಭೇದಗಳನ್ನಂಗೀಕರಿಸಿ ಪದಾರ್ಥರೂಪವಾಗಿ ವ್ಯಕ್ತವಾಗುವುದು. ವಿಮರ್ಶವೆಂದರೆ ಅಂತರನುಸಂಧಾನರೂಪವಾದ ಸ್ವಸ್ವರೂಪ ಪರಾಮರ್ಶ. ಇವೆರಡಂಶಗಳ ಮಯವಾಗಿರು ವುದೇ ಪ್ರಕಾಶವಿಮರ್ಶಮಯ. ಪ್ರಕಾಶರೂಪದಿಂದ ವಿಶ್ವಾತ್ಮಕವಾಗಿಯೂ ವಿಮರ್ಶ ಕ್ರಮದಿಂದ ವಿಶ್ವೋತ್ತೀರ್ಣವಾಗಿಯೂ ಇದೆ. ತನ್ನ ಇಚ್ಛೆಯಿಂದಲೇ ತನ್ನಲ್ಲಿಯೇ ವಿಶ್ವವನ್ನು ತೋರ್ಪಡಿಸಿಕೊಳ್ಳುತ್ತದೆ. ಹೀಗೆ ತೋರ್ಪಡಿಸಿಕೊಳ್ಳುವುದು ಎರಡು ವಿಧವಾಗಿದೆ. ಒಂದು ಗ್ರಾಹ್ಯಭಾವ, ಇನ್ನೊಂದು ಗ್ರಾಹಕಭಾವ. ತಿಳಿಯಲ್ಪಡುವ ತತ್ತ್ವಪ್ರಪಂಚಕ್ಕೆಲ್ಲಾ ಗ್ರಾಹ್ಯವೆಂದು ಸಂಜ್ಞೆ. ತಿಳಿಯುವ ಶಕ್ತಿ ಇರುವವರಿಗೆ ಗ್ರಾಹಕ ರೆಂದು ಹೆಸರು. ವಿಶ್ವವೇ ಗ್ರಾಹ್ಯ, ಜೀವರುಗಳೇ ಗ್ರಾಹಕರು. ಗ್ರಾಹಕರಿಗನುರೂಪ ವಾದ ಗ್ರಾಹ್ಯಪ್ರಪಂಚವಿರುತ್ತದೆ. ಇಷ್ಟು ಚಮತ್ಕಾರ ಸಾಮರ್ಥ್ಯವುಳ್ಳ ಚಿತ್ತು ತಾನೇ ಸಂಕೋಚದಿಂದ ಗ್ರಾಹ್ಯಗ್ರಾಹಕ ಭಾವವನ್ನು ತಾಳಿರುವುದರಿಂದ ಬದ್ಧಾವಸ್ಥೆಯಲ್ಲಿ ಗ್ರಾಹಕನಾಗಿರುವ ಜೀವನು ಸಂಕುಚಿತನಾದ ವಿಶ್ವಮಯನಾಗಿರುವನು.

ಸ್ವಯಂಪ್ರಕಾಶವಾಗಿ ಎಲ್ಲವನ್ನೂ ತಿಳಿಯುವ ಸಾಮರ್ಥ್ಯವುಳ್ಳ ಚಿತ್ತು ಅವರೋಹಣ ಕ್ರಮದಿಂದ ತನ್ನ ಸ್ವರೂಪವನ್ನು ಮರೆಸಿಕೊಂಡು ಪರಿಮಿತವಾದ ಪದಾರ್ಥಗಳನ್ನು ತಿಳಿಯುವ ಚಿತ್ತವಾಯಿತು. ಈ ಚಿತ್ತಮಯನಾಗಿರುವವನೇ ಬದ್ಧಜೀವನು.

ವಿಶ್ವಕ್ಕೆಲ್ಲಾ ಆಶ್ರಯವಾಗಿಯೂ ವಿಶ್ವವ್ಯಾಪಿಯಾಗಿಯೂ ವಿಶ್ವಾತ್ಮಕನಾಗಿಯೂ ಇರುವ ಚಿನ್ಮೂರ್ತಿಯಾದ ಶಿವನು ಒಬ್ಬನೇ. ಅಂತಹ ಶಿವನು ಸಂಕೋಚ ವಿಕಾಸ ರೂಪಗಳನ್ನಂಗೀಕರಿಸಿ ದ್ವಿರೂಪಿಯಾದನು. ಆಣವ ಮಾಯೀಯ ಕಾರ್ಮಮಲ ಗಳಿಂದ ಕೂಡಿದವನಾಗಿ ತ್ರಿಮಯನಾದನು. ಶೂನ್ಯ, ಪ್ರಾಣ, ಪುರ್ಯಷ್ಟಕ, ಶರೀರ ಎಂಬ ನಾಲ್ಕು ಸಂಕೋಚದ ಮಿತಿಗೆ ಒಳಪಟ್ಟು ಚತುರಾತ್ಮನಾದನು. ಏಳು ಗ್ರಾಹಕ ಭಾವಗಳನ್ನೂ ಚಿತ್, ಆನಂದ, ಇಚ್ಛಾ, ಜ್ಞಾನ, ಕ್ರಿಯಾ ಎಂಬ ಐದು ಶಕ್ತಿಗಳನ್ನೂ

ಒಳಗೊಂಡು ಸಪ್ತಪಂಚಕ ಸ್ವಭಾವವೆನಿಸಿದನು. ಹಾಗೂ ೩೫ ತತ್ತ್ವರೂಪಿಯಾಗಿ ವಿಶ್ವಾತ್ಮಕನಾಗಿದ್ದಾನೆ. ಇದೆಲ್ಲಾ ಶಿವನ ಶಕ್ತಿವಿಲಾಸವಾಗಿರುತ್ತದೆ.

ಈ ಶಿವನು ವಿಶ್ವಾತ್ಮಕನಾಗಿರುವಾಗ ಅತನ ಶಕ್ತಿವಿಲಾಸದ ಒಂದೊಂದಂಶವನ್ನು ನಿರೂಪಣೆ ಮಾಡುವವುಗಳೇ ಚಾರ್ವಾಕ ಸಾಂಖ್ಯಾದಿ ದರ್ಶನಗಳು. ಪಂಚಶಕ್ತಿಗಳಿಂದ ಕೂಡಿದ ಚಿನ್ಮೂರ್ತಿಯಾದ ಶಿವನು ಶಕ್ತಿಸಂಕೋಚದಿಂದ ಮಲಾವೃತನಾಗಿರುವಿಕೆಯೇ ಸಂಸಾರಿತ್ವ. ಈ ಸಂಸಾರಿಯಾದ ಜೀವನು ಶಕ್ತಿಸಂಕೋಚವುಳ್ಳವನಾಗಿದ್ದರೂ ಪರಿಮಿತ ಕ್ರಮದಲ್ಲಿ ಶಿವನ ಹಾಗೆ ಪಂಚಕೃತ್ಯಗಳನ್ನು ನಿರ್ವಹಿಸುತ್ತಾನೆ. ಆಭಾಸನ (ಸೃಷ್ಟಿ) ರಕ್ತಿ (ಸ್ಥಿತಿ) ವಿಮರ್ಶನ (ಸಂಹಾರ) ಬೀಜಾವಸ್ಥಾಪನ (ತಿರೋಧಾನ) ವಿಲಾಪನ (ಅನುಗ್ರಹ) ಎಂಬಿವುಗಳೇ ಆ ಪಂಚಕೃತ್ಯಗಳು. ಯಾವಾಗಲೂ ತಾನು ನಿರ್ವಹಿಸುತ್ತಿರುವ ಈ ಪಂಚಕೃತ್ಯಗಳನ್ನು ತಿಳಿಯದಿರುವಿಕೆಯೇ ವ್ಯಾಮೋಹ. ತನ್ನ ಶಕ್ತಿಗಳು ಸಂಕುಚಿತವಾಗಿರುವಿಕೆಯು ಮತ್ತು ಈ ಸ್ಥಿತಿಯಲ್ಲಿ ತಾನು ನಡೆಸುತ್ತಿರುವ ಪಂಚಕೃತ್ಯಗಳ ಸ್ವರೂಪ ಸ್ವಭಾವಗಳ ಅರಿವಿಲ್ಲದಿರುವಿಕೆಯೇ ಬದ್ಧದಶೆ. ಪಂಚಕೃತ್ಯಗಳ ತಿಳಿವಳಿಕೆಯುಂಟಾದರೆ ಪರಿಮಿತಜ್ಞಾನವನ್ನುಂಟುಮಾಡುತ್ತಿರುವ ಚಿತ್ತವೇ ಅಂತರ್ಮುಖೀಭಾವವನ್ನು ಪಡೆಯುತ್ತದೆ. ಅಂತರ್ಮುಖೀನವಾದ ಚಿತ್ತವು ತನ್ನ ಸಂಕೋಚವನ್ನು ಕಳೆದುಕೊಂಡು ಸ್ವಯಂಪ್ರಕಾಶವಾದ ಚಿತ್ಪದವನ್ನು ಪಡೆಯುತ್ತದೆ. ಚಿತ್ತೆನ್ನುವುದು ಚಂಕಿಗೆ ಸಮಾನವಾದದ್ದು. ಈ ಚಿತ್ತು ಅವರೋಹಣಕ್ರಮದಲ್ಲಿ ತನ್ನ ಸ್ವರೂಪವನ್ನು ಮರೆಸಿಕೊಂಡಿದ್ದರೂ ತಿಳಿಯಲ್ಪಡತಕ್ಕ ವಿಷಯಗಳನ್ನು ಅಂಶತಃ ಸಾತ್ಮೀಕರಿಸಿಕೊಳ್ಳುತ್ತದೆ. ಅಂದರೆ ತನ್ನಲ್ಲಿಯೇ ಸೇರಿಸಿಕೊಳ್ಳುತ್ತದೆ. ಅಂತರ್ಮುಖವಾಗಿ ಸ್ವರೂಪ ಸಾಕ್ಷಾತ್ಕಾರವನ್ನು ಪಡೆದರೆ ಈ ವಿಶ್ವವನ್ನು ತನ್ನಲ್ಲಿಯೇ ಸಾತ್ಮೀಕರಿಸಿಕೊಳ್ಳುತ್ತದೆ. ಈ ವಿಶ್ವವು ತನ್ನಿಂದ ಬೇರೆಯಲ್ಲವೆಂಬ ದೃಢವಿಶ್ವಾಸವು ಬದ್ಧಾತ್ಮನಿಗೆ ಅನುಭವದಿಂದೇರ್ಪಟ್ಟರೆ ಶರೀರ, ಪ್ರಾಣ, ಪುರ್ಯಷ್ಟಕ ಇವುಗಳನ್ನೊಳಗೊಂಡಿದ್ದರೂ ಚಿದಾನಂದಲಾಭವಾಗಿ ಜೀವನ್ಮುಕ್ತಿಯುಂಟಾಗುತ್ತದೆ.

ಚಿದಾನಂದಲಾಭವಾಗಬೇಕಾದರೆ ಬದ್ಧಾತ್ಮನಿಗೆ ಮಧ್ಯನಾಡಿ ವಿಕಾಸವಾಗಬೇಕು. ಮನಸ್ಸಿನಲ್ಲುಂಟಾಗುವ ವಿಕಲ್ಪಗಳನ್ನು ಪಂಚವಿಧ ಕೃತ್ಯಕಾರಿತ್ವವೇ ಮೊದಲಾದುವನ್ನು ಅನುಶೀಲನ, ಪರಿಶೀಲನ, ಅನುಸಂಧಾನ, ಪರಾಮರ್ಶ ಕ್ರಮಗಳನ್ನನುಸರಿಸುವುದರ ಮೂಲಕ ತೊಡೆದುಹಾಕುವುದರಿಂದಲೂ ಹಾಗೆಯೇ ಇಂದ್ರಿಯಗಳಿಂದುಂಟಾಗುವ ವಿಕಲ್ಪಗಳನ್ನು ಪ್ರತ್ಯಾಹಾರಮಾಡುವುದರಿಂದಲೂ ಮನಶ್ಚಾಂಚಲ್ಯಕ್ಕೆ ಕಾರಣವಾಗಿರುವ ವಿಕಲ್ಪಗಳನ್ನು ಉಚ್ಛ್ವಾಸ ನಿಶ್ವಾಸಗಳನ್ನು ನಿಲ್ಲಿಸುವುದರಿಂದಲೂ, ಹೃದಯದಲ್ಲಿಯೂ ಮತ್ತು ಶಿರಸ್ಸಿನಲ್ಲಿಯೂ ಧಾರಣ ಧ್ಯಾನಾಭ್ಯಾಸಗಳನ್ನು ಮಾಡುವುದರಿಂದಲೂ ಮಧ್ಯನಾಡಿ ವಿಕಾಸವನ್ನು ಹೊಂದಬಹುದು.

ಚಿದಾನಂದ ಲಾಭವನ್ನು ಪಡೆದು ಆ ಸಮಾಧಿಸ್ಥಿತಿಯಿಂದ ಎಚ್ಚೆತ್ತವನು ಈ ಪ್ರಪಂಚ ವ್ಯವಹಾರಗಳಲ್ಲಿ ತೊಡಗಿದ್ದರೂ ಬಾರಿಬಾರಿಗೂ ತಾನು ಸಮಾಧಿಯಲ್ಲಿ

ಅನುಭವಿಸಿದ್ದ ಚಿದೈಕ್ಯವನ್ನೇ ವಿಮರ್ಶೆ ಮಾಡುತ್ತಿರುತ್ತಾನೆ. ಈ ಸಮಾಧಿಸಂಸ್ಕಾರದಿಂದ ಅವನು ಸಮಾಧಿ ಸ್ಥಿತಿಯಲ್ಲಿಲ್ಲದಿದ್ದರೂ ಪುನಃ ಪುನಃ ಅದನ್ನೇ ವಿಮರ್ಶೆ ಮಾಡುವುದರಿಂದ ಸದಾ ಸಮಾಧಿಸುಖವನ್ನೇ ಅನುಭವಿಸುತ್ತಿರುತ್ತಾನೆ. ಆಗ ನಿರಂತರಾನುಭವದಿಂದ ಪ್ರಕಾಶಾನಂದವೇರ್ಪಡುತ್ತದೆ. ಇದನ್ನೇ ಮಹಾಮಂತ್ರವೀರ್ಯಾತ್ಮಕವಾದ ಪೂರ್ಣಾಹಂತಾವೇಶವೆನ್ನುತ್ತಾರೆ. ಯಾವಾಗಲೂ ಈ ಸ್ಥಿತಿಯು ಅನುಭವದಲ್ಲಿದ್ದರೆ ಎಲ್ಲಾ ಸೃಷ್ಟಿ ಸ್ಥಿತಿ ಸಂಹಾರಗಳನ್ನೂ ನಡೆಸುತ್ತಿರುವ ಸಹಜ ಸಂವಿತ್ತಿ ದೇವತಾ ಚಕ್ರೇಶ್ವರತಾ ಪ್ರಾಪ್ತಿಯಾಗುತ್ತದೆ.

> **ಆತ್ಮಪ್ರಕಾಶ ವಪುರೇಷ ಶಿವಃ ಸ್ವತಂತ್ರಃ**
> **ಸ್ವಾತಂತ್ರ್ಯ ನರ್ಮ ರಭಸೇನ ನಿಜಂ ಸ್ವರೂಪಂ ।**
> **ಸಂಚ್ಛಾದ್ಯ ಯತ್ಪುನರಪಿ ಪ್ರಥಯೇತ ಪೂರ್ಣಂ**
> **ತಚ್ಚಕ್ರಮಾ ಕ್ರಮವಶಾದಥ ವಾ ತ್ರಿಭೇದಾತ್ ॥**

(**ತಂತ್ರಾಲೋಕ, ಆಹ್ನಿಕ ೧ ಶ್ಲೋಕ ೫**)

ಸರ್ವಜ್ಞನಾದ ಪರಮೇಶ್ವರನು ಪರಿಪೂರ್ಣನು, ಸ್ವತಂತ್ರನು. ತನ್ನ ಲೀಲೆಯಿಂದಲೇ ಸ್ವಚ್ಛಂದನಾಗಿ ನಿಜಸ್ವರೂಪವನ್ನು ಮಾಯೆಯಿಂದ ಮುಚ್ಚಿಕೊಂಡು ಜೀವಾತ್ಮನಾದನು. ಬದ್ಧಾತ್ಮನಾದ ಜೀವನು ತಾನು ಶಿವನಿಂದ ಬೇರೆಯಲ್ಲವೆಂದೂ ತಾನು ಶಿವನೇ ಎಂದೂ ತಿಳಿಯುವುದಕ್ಕೆ ಕ್ರಮಾಗತವಾಗಿ ಇಚ್ಛಾಜ್ಞಾನ ಕ್ರಿಯಾಶಕ್ತಿಗಳಿಂದ ಕೂಡಿದ ಶಾಂಭವ ಶಾಕ್ತ ಆಣವೋಪಾಯಗಳನ್ನು ಪ್ರಕಾಶಪಡಿಸಿದನು.

ಶಿವಸೂತ್ರಗಳು



ಶಿವಸೂತ್ರಗಳಿರುವ ಮಹಾದೇವಗಿರಿ

ಶಿವಸೂತ್ರಗಳ ಇತಿವೃತ್ತ

ಭಾರತೀಯರು ನಮ್ಮ ಭಾರತ ಭೂಮಿಯಲ್ಲಿ ತಮ್ಮ ತಿಳಿವಳಿಕೆಯನ್ನು ರಕ್ಷಣೆ ಮಾಡುವುದಕ್ಕೆ ಮುಖ್ಯವಾಗಿ ಎರಡು ಮಾರ್ಗಗಳನ್ನನುಸರಿಸಿದ್ದರು. ತಾವು ಅನುಭವಿಸಿದ ಹಾಗೂ ಆಚರಿಸಿದ ವಿಷಯಗಳನ್ನು ವಾಙ್ಮಯರೂಪವಾಗಿ ಪರಿವರ್ತಿಸಿ ಅದನ್ನು ಸುವ್ಯವಸ್ಥಿತ ರೀತಿಯಿಂದ ಒಬ್ಬರಿಂದ ಇನ್ನೊಬ್ಬರಿಗೆ ಬಾಯಿಪಾಠದ ಮೂಲಕವೇ ತಿಳಿಯಪಡಿಸುವುದು ಒಂದು ಮಾರ್ಗ. ಈ ನಿಯಮ ಮತ್ತು ಸಂಪ್ರದಾಯ ವೇದಾಧ್ಯಯನ ಪರಂಪರೆಯಲ್ಲಿ ಇದುವರೆಗೂ ನಡೆದು ಬಂದಿರುತ್ತದೆ. ವೇದಕ್ಕೆ ಶ್ರುತಿ ಎಂಬ ಹೆಸರುಂಟು. ಶ್ರುತಿ ಎಂದರೆ ಕಿವಿಯಿಂದ ಕಿವಿಗೆ ಕೇಳ್ಮೆಯಿಂದಲೇ ಹರಿದು ಬಂದಿರುವ ವಾಙ್ಮಯದ ಪ್ರವಾಹ. ಹಿಂದಿನ ಕಾಲದಲ್ಲಿ ಬರವಣಿಗೆಯ ಸೌಕರ್ಯಗಳು ಈಗಿನಂತೆ ಇಲ್ಲದಿದ್ದುದರಿಂದಲೋ ಏನೋ ಸ್ವಾಭಾವಿಕವಾದ ಬಾಯಿಪಾಠಕ್ರಮವನ್ನೇ ಅನುಸರಿಸಿದರು. ಇನ್ನೊಂದು ರೀತಿಯಲ್ಲಿ ತಾವು ತಿಳಿಸಬೇಕಾದ ವಿಷಯಗಳನ್ನು ಸಂಗ್ರಹವಾಗಿ ವಿಶಾಲವಾದ ಬಂಡೆಗಳ ಮೇಲೋ ಲೋಹದ ರೇಕುಗಳ ಮೇಲೋ ಲಿಪಿಮೂಲಕ ಬರೆದಿಡುತ್ತಿದ್ದರು. ಇವುಗಳನ್ನೇ ನಾವು ಶಿಲಾಶಾಸನ, ಲೋಹಶಾಸನ ಎನ್ನುವುದು. ಈ ಕ್ರಮದಲ್ಲಿ ವಿಸ್ತಾರವಾಗಿ ಬರೆಯಲು ಸಾಧ್ಯವಿಲ್ಲದಿರುವುದರಿಂದ ಹೇಳತಕ್ಕ ವಿಷಯಗಳನ್ನು ಸಂಕ್ಷೇಪವಾಗಿ ಬರೆಯಿಸುವುದು ಅನಿವಾರ್ಯ. ಜನಸಾಮಾನ್ಯಕ್ಕೆ ಧರ್ಮವನ್ನೂ ನೀತಿಯನ್ನೂ ಪ್ರಸಾರಮಾಡಲು ಅಶೋಕ ಚಕ್ರವರ್ತಿಯು ಶಾಸನಗಳನ್ನು ಬಂಡೆಯ ಮೇಲೆ ಬರೆಯಿಸುತ್ತಿದ್ದನು. ಕಾಲಕ್ರಮದಲ್ಲಿ ಅನೇಕರು ಈ ಸಂಪ್ರದಾಯವನ್ನು ಅನುಸರಿಸುತ್ತಾ ಬಂದರು. ಪುರಾತನವಾದ ಶೈವಮತದ ವಿಷಯವಾಗಿ ಅನೇಕ ಶಿಲಾಶಾಸನಗಳಿದ್ದಿರಬೇಕೆಂದು ಊಹಿಸಲವಕಾಶವಿದೆ. ಈ ಸಂದರ್ಭದಲ್ಲಿ ೮ನೆಯ ಶತಮಾನದ ಅಂತ್ಯಭಾಗದಲ್ಲಿ ಕಾಶ್ಮೀರ ದೇಶದ ಮಹದೇವಗಿರಿಯಲ್ಲಿ ತಪೋನಿಷ್ಠನಾಗಿದ್ದ ವಸುಗುಪ್ತನಿಗೆ ಶಿವಾನುಗ್ರಹದಿಂದ ಗೋಚರಿಸಿದ "ಶಂಕರೋಪಲ" ಎಂಬ ಶಿಲಾತಲವು ಸ್ಮರಣೀಯವಾಗಿದೆ. ಪರಮಶಿವಭಕ್ತನಾದ ವಸುಗುಪ್ತನು ಆ ಶಿಲಾತಲದಲ್ಲಿ ಅಂಕಿತವಾಗಿದ್ದ ಶಿವಸೂತ್ರಗಳನ್ನು ಅಧ್ಯಯನಮಾಡಿ ಶಿವತತ್ತ್ವಗಳನ್ನು ಪ್ರಚಾರ ಮಾಡಿದನು. ಕಾಲಕ್ರಮದಲ್ಲಿ ಜ್ಞಾನವಾಗಲಿ ಧರ್ಮವಾಗಲಿ ಮಲಿನವಾದರೆ ದಯಾಳುವಾದ ಪರಶಿವನೂ ಸರ್ವಭೂತಹಿತೈಷಿಗಳಾದ ಸಿದ್ಧಪುರುಷರೂ ಅದನ್ನು ಪುನರುದ್ಧಾರಮಾಡಿ ಜನತೆಯನ್ನು ಉದ್ಧರಿಸುವರೆಂಬುದಕ್ಕೆ ಇದು ನಿದರ್ಶನವಾಗಿದೆ. ವಸುಗುಪ್ತನ ಕಾಲಕ್ಕೆ ಬೌದ್ಧಮತವು ಪ್ರಬಲವಾಗಿ ಪ್ರಚಾರದಲ್ಲಿದ್ದು ಪ್ರಾಚೀನವಾದ ಶೈವಮತವು ಕ್ಷೀಣಿಸಿತೆಂಬುದು ಐತಿಹಾಸಿಕ ವಿಷಯ. ಈ ಶಂಕರೋಪಲವೆಂಬ ಶಿಲಾತಲದಲ್ಲಿ ಅಂಕಿತವಾಗಿದ್ದ ಶಿವಸೂತ್ರಗಳ ಸಾಕ್ಷ್ಯದಿಂದ ಶೈವಮತವು ಸಾರ್ವಜನಿಕವಾಗಿ ಹಿಂದಿನಿಂದಲೂ ಪ್ರಚಾರದಲ್ಲಿತ್ತೆಂದು ಸಿದ್ಧವಾಗುತ್ತದೆ. ಈ ಶಿವಸೂತ್ರಗಳಲ್ಲಡಕ

ವಾಗಿದ್ದ ಶಿವತತ್ತ್ವಗಳನ್ನೂ ಸಾಧನಾಭ್ಯಾಸಗಳನ್ನೂ ಜನಗಳಲ್ಲಿ ಪ್ರಚಾರಮಾಡಿ ಕ್ಷಯಿಸಿಹೋಗಿದ್ದ ಶೈವಧರ್ಮವನ್ನು ಸಿದ್ಧವಸುಗುಪ್ತನು ಪುನರುದ್ಧಾರ ಮಾಡಿದನು.

ಶೈವಮತವು ತನ್ನದೇ ಆದ ಒಂದು ರೀತಿಯಲ್ಲಿ ಸ್ಥೂಲ ಮತ್ತು ಸೂಕ್ಷ್ಮದಿಂದಿರುವ ವಿಶ್ವವನ್ನು ವಿವರಿಸುತ್ತದೆ. ಅನಾದಿಕಾಲದಿಂದ ಬಂಧಿತನಾಗಿರುವ ಈ ಜೀವಾತ್ಮನ ಮೋಕ್ಷಕ್ಕೆ ಉಪಾಯಗಳನ್ನು ಸೂಚಿಸಿರುತ್ತದೆ. ಮಾನವನು ತನ್ನ ಅಧಿಕಾರಕ್ಕನುಗುಣವಾಗಿ ತ್ರಿಕರಣಗಳಿಂದ ಯಾವರೀತಿ ನಡೆದುಕೊಂಡು ಇಹದಲ್ಲಿ ಶಾಂತಿಯನ್ನೂ ಪರದಲ್ಲಿ ಶ್ರೇಯಸ್ಸನ್ನೂ ಹೊಂದಬಹುದೆಂಬುದನ್ನು ವಿಶಿಷ್ಟರೀತಿಯಿಂದ ವಿಮರ್ಶಿಸುತ್ತದೆ.

ಜ್ಞಾನಪ್ರವಾಹವು ಮಧ್ಯೆ ಮಧ್ಯೆ ಕಾಲಪ್ರವಾಹದಲ್ಲಿ ಎಡರುತೊಡರುಗಳಿಗೆ ಗುರಿಯಾಗಿ ಕುಂಠಿತವಾದರೂ ಅವಿಚ್ಛಿನ್ನವಾಗಿ ಹರಿಯುತ್ತಲೇ ಬಂದಿದೆ. ನಮ್ಮ ಹಿರಿಯರ ಉಪದೇಶ ಕ್ರಮವು ಎರಡು ಬಗೆಯಾಗಿದೆ. ಸಾಮಾನ್ಯವಾದ ಅನುಭವದಿಂದ ಸೂಕ್ಷ್ಮವಾದ ಅಲೌಕಿಕವಾದ ಅತೀಂದ್ರಿಯವಾದ ವಿಷಯಗಳನ್ನು ಊಹಿಸುವುದು ಒಂದು ಬಗೆ. ಹಾಗೆಯೇ ಅತೀಂದ್ರಿಯ ಪರತತ್ತ್ವಗಳನ್ನು ಮೊದಲು ಉದ್ದೇಶಿಸಿ ಸ್ಥೂಲವಾದ ಎಲ್ಲರ ಅನುಭವಕ್ಕೂ ಗೋಚರಿಸುವ ಪ್ರಪಂಚದ ಸ್ವರೂಪ ಸ್ವಭಾವ ಮತ್ತು ಪ್ರಯೋಜನಗಳನ್ನು ನಿರ್ಣಯಿಸುವುದು ಇನ್ನೊಂದು ಬಗೆ. ಕೊನೆಯ ತೀರ್ಮಾನದಲ್ಲಿ ಸ್ಥೂಲ ಮತ್ತು ಸೂಕ್ಷ್ಮಗಳಿಗೆ ಐಕ್ಯವು ಸಿದ್ಧವಾಗುತ್ತದೆ. ಇದು ಭಾರತೀಯ ಋಷಿಗಳ ಸಾಮಾನ್ಯ ನಿಯಮ. ಈ ವಿಷಯಗಳನ್ನು ವಿವರಿಸುವಾಗ ಯುಕ್ತಿಗೆ ಪ್ರಾಧಾನ್ಯತೆ ಒಂದುಕಡೆ, ವೇದ ಮತ್ತು ಆಗಮಗಳಿಗೆ ಪ್ರಾಮುಖ್ಯತೆ ಇನ್ನೊಂದು ಕಡೆ, ಗುರೂಪದೇಶವೇ ಮುಖ್ಯವೆಂದು ಮತ್ತೊಂದು ಕಡೆ, ಸ್ವಾನುಭವವೇ ಹೆಚ್ಚೆಂದು ಬೇರೊಂದು ಕಡೆ—ಇವೆಲ್ಲಾ ಪರ್ಯವಸಾನದಲ್ಲಿ ಬೇರೆಯಾಗುವುದಿಲ್ಲ. ಈ ಮುಖಭೇದಗಳಿಂದ ಮತಗಳೂ ದರ್ಶನಗಳೂ ಬೇರೆ ಬೇರೆ ರೂಪದಿಂದ ಬೆಳೆದವು.

ಶಿವಸೂತ್ರಗಳು

ಸುಲಭವಾಗಿ ಜ್ಞಾಪಕದಲ್ಲಿ ನಿಲ್ಲುವುದಕ್ಕಾಗಿ ಹಿಂದಿನ ಋಷಿಗಳು ತಮ್ಮ ಜ್ಞಾನವನ್ನು ಅರ್ಥಗರ್ಭಿತವಾದ ಕ್ರಮಬದ್ಧವಾದ ಚಿಕ್ಕ ಚಿಕ್ಕ ವಾಕ್ಯಗಳ ಮೂಲಕ ಸೂತ್ರರೂಪದಲ್ಲಿ ಪ್ರಚಾರಮಾಡಿದರು. ಇವುಗಳಲ್ಲಿ ಗಹನವಾದ ತತ್ತ್ವಗಳನ್ನು ಉದಾತ್ತವಾದ ಧ್ಯೇಯಗಳನ್ನೂ ಪರಿಶುದ್ಧವಾದ ಆದರ್ಶಗಳನ್ನೂ ಸಂಕ್ಷೇಪವಾಗಿ ವಿವರಿಸಿರುತ್ತಾರೆ. ಗುರುಗಳು ಶಿಷ್ಯರಿಗೆ ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳಲು ಉಪದೇಶಿಸಿದ ತತ್ತ್ವಗಳೇ ಸೂತ್ರರೂಪವಾಗಿ ಹೊರಬಿದ್ದಿವೆ.

ನಮ್ಮ ಹಿರಿಯರು ಸೂತ್ರಕ್ಕೆ ಕೆಲವು ಲಕ್ಷಣಗಳನ್ನು ಹೇಳಿರುತ್ತಾರೆ.

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಂ ।
ಅಸ್ತೋಭಮನವದ್ಯಂಚ ಸೂತ್ರಂ ಸೂತ್ರವಿದೋ ವಿದುಃ ॥ (ಪದ್ಮಪುರಾಣ)

ಸೂತ್ರದಲ್ಲಿ ಅಕ್ಷರಗಳು ಕಡಿಮೆಯಾಗಿರಬೇಕು. ಸಂದೇಹಕ್ಕೆ ಎಡೆಯಿರಬಾರದು. ಸಾರಭೂತವಾದ ತತ್ತ್ವವನ್ನು ತಿಳಿಯಪಡಿಸುವುದಾಗಿರಬೇಕು. ಕಾಲ ದೇಶ ದಶಾನುಸಾರವಾಗಿ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವಂತಿರಬೇಕು. ಪರಸ್ಪರ ಸಾಂಕರ್ಯವಿರಬಾರದು. ತಪ್ಪಾಗಿರುವ ಅರ್ಥವನ್ನು ಸೂಚಿಸಕೂಡದು ಎಂಬಿವೇ ಈ ನಿಯಮಗಳು. ಎಲ್ಲಾ ಸೂತ್ರಗಳೂ ಈ ನಿಯಮದಿಂದ ಕೂಡಿರುತ್ತವೆಂದು ಹೇಳಲಿಕ್ಕಾಗುವುದಿಲ್ಲ. ಕೆಲವು ಸೂತ್ರಗಳು ಅತಿಸಂಕ್ಷಿಪ್ತವಾಗಿದ್ದು ವಿದ್ವಾಂಸನಿಗೂ ಕೂಡ ಅಸ್ಪಷ್ಟವಾಗಿರುವಂತೆ ಕಂಡುಬರುವುವು. ಕೆಲವು ಸೂತ್ರಗಳಲ್ಲಿ ಕರ್ತೃ ಕರ್ಮ ಕ್ರಿಯೆಗಳು ವಿಶದವಾಗಿರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಹಿಂದುಮುಂದಿನ ಪ್ರಕರಣಗಳನ್ನು ಸಮಗ್ರವಾಗಿ ಓದಿ ತಿಳಿಯುವುದರಿಂದಾಗಲಿ ಗುರುಮುಖದಿಂದಾಗಲೀ ಸರಿಪಡಿಸಿಕೊಳ್ಳಬಹುದು. ವ್ಯಾಕರಣ ಸೂತ್ರಗಳನ್ನೂ ಬ್ರಹ್ಮಸೂತ್ರಗಳನ್ನೂ ಇದಕ್ಕೆ ನಿದರ್ಶನವಾಗಿ ತೆಗೆದುಕೊಳ್ಳಬಹುದು.

ಕಾಶ್ಮೀರಶೈವಸಿದ್ಧಾಂತವನ್ನು ಪ್ರತಿಪಾದಿಸುವ ಶಿವಸೂತ್ರಗಳು ಮೇಲೆ ಹೇಳಿದ ಮಾತ್ರಾನಿಯಮಗಳಿಗನುಸಾರವಾಗಿವೆ. ಈ ಶಿವಸೂತ್ರಗಳ ಸಂಖ್ಯೆ ಒಟ್ಟು ಎಪ್ಪತ್ತೇಳು. ಇವುಗಳ ಭಾಷೆ ಸರಳವಾಗಿದೆ. ಅಭಿಪ್ರಾಯಗಳು ಗಹನವಾಗಿವೆ. ತಿಳಿದಂತೆ ಭಾಸವಾದರೂ ತಿಳಿಯುವುದು ಕಷ್ಟವಾಗಿದೆ. ಇವುಗಳನ್ನು ಮೂರು ಉನ್ಮೇಷಗಳಾಗಿ ವಿಭಾಗಿಸಿದ್ದಾರೆ. ಈ ಮೂರು ಉನ್ಮೇಷಗಳು ಮೂರು ಉಪಾಯಗಳನ್ನು ವಿವರಿಸುತ್ತವೆ. ಮೊದಲನೆಯ ಉಪಾಯದಲ್ಲಿ ಶಾಂಭವೋಪಾಯವನ್ನೂ ಎರಡನೆಯ ಉನ್ಮೇಷದಲ್ಲಿ ಶಾಕ್ತೋಪಾಯವನ್ನೂ ಮೂರನೆಯ ಉನ್ಮೇಷದಲ್ಲಿ ಅಣವೋಪಾಯವನ್ನೂ ವಿವರಿಸಿದ್ದಾರೆ. ಈ ಸೂತ್ರಗಳಲ್ಲಿ ಉದಾತ್ತತತ್ತ್ವಗಳೂ, ಮನೋಧರ್ಮಗಳೂ ಸಾಧನ ಸಿದ್ಧಿಗಳೂ ಅಚ್ಚೊತ್ತಿದಂತೆ ಮೂಡಿಸಲ್ಪಟ್ಟಿವೆ. ಜ್ಞಾನಿಗಳಿಗೆ ಈ ಸೂತ್ರಗಳು ಉತ್ತಾರಕಗಳಾಗಿಯೂ ಸಾಮಾನ್ಯರಿಗೆ ಉಪಕಾರಕಗಳಾಗಿಯೂ ಇವೆ ಎನ್ನಬಹುದು. ಇದರ ಸಾರವನ್ನು ಜೀರ್ಣಿಸಿಕೊಳ್ಳುವ ಯೋಗ್ಯತೆ ಸಂಪಾದಿಸುವುದು ಒಂದು ಸಾಹಸ. ಆದರೂ ಪ್ರಯತ್ನಮಾಡತಕ್ಕದ್ದು ಮನುಷ್ಯ ಧರ್ಮ. ಸೂತ್ರಗಳು ಸರ್ವತೋಮುಖವಾದ ಅರ್ಥವನ್ನು ಕೊಡುತ್ತವೆ. ಈ ಕಾರಣದಿಂದ ಇಂದಿನವರು ತಮ್ಮ ಹಿನ್ನೆಲೆಯಂತೆ ಅರ್ಥವನ್ನು ಮಾಡಬಹುದು. ಇದು ಅಷ್ಟು ಸಮಂಜಸವಲ್ಲ. ಈ ಸೂತ್ರಗಳನ್ನು ಮೊದಲು ಅಧ್ಯಯನ ಮಾಡಿ ಅದರ ರಹಸ್ಯವನ್ನು ಜೀರ್ಣಮಾಡಿಕೊಂಡು ಲೋಕಹಿತಾರ್ಥವಾಗಿ ಪ್ರಚಾರಮಾಡಿದವರನ್ನು ಕೃತಜ್ಞತೆಯಿಂದ ನೆನೆಯಬೇಕು. ಈ ಮಹಾಕಾರ್ಯವನ್ನು ಮಾಡಿ ನಮ್ಮ ಗೌರವಕ್ಕೆ ಪಾತ್ರನಾದವನು ಮೊದಲನೆಯ ಆಚಾರ್ಯನಾದ ವಸುಗುಪ್ತನು. ಈತನು ತನ್ನ ಶಿಷ್ಯನಾದ ಕಲ್ಲಟನ ಮೂಲಕ ಪ್ರಕಟಿಸಿದ ಪ್ರಬಂಧಗಳು ತುಂಬಾ ಉಪಕಾರಿಗಳಾಗಿವೆ. ಪ್ರಕೃತದಲ್ಲಿ ಸ್ಪಂದಕಾರಿಕೆ, ಸ್ಪಂದಸಂದೋಹ, ಸ್ಪಂದನಿರ್ಣಯ—ಈ ಗ್ರಂಥಗಳ ಮೂಲಕ ಪ್ರತಿಪಾದಿಸಲ್ಪಟ್ಟ ವಿಷಯಗಳನ್ನು ಸಂಕ್ಷೇಪವಾಗಿ ತಿಳಿದು ಆ ದೃಷ್ಟಿಯಿಂದ ಶಿವಸೂತ್ರಗಳನ್ನು ಮನನಮಾಡುವುದು ಒಳ್ಳೆಯದು.

ಶಿವಸೂತ್ರಗಳ ಮುಖ್ಯಪ್ರತಿಪಾದಿತ ವಿಚಾರವೆಂದರೆ ಅನುಸಂಧಾನ, ಅಭ್ಯಾಸ ಸಾಧನೆಗಳ ನಿರ್ದೇಶ, ಉಪಾಯತ್ರಯದ ಸ್ಪಷ್ಟೀಕರಣ. ಈ ಶಿವಸೂತ್ರಗಳು ತತ್ತ್ವಶಾಸ್ತ್ರದ ಮೇಲೆ ಮಾತ್ರವಲ್ಲ ಮನಶ್ಶಾಸ್ತ್ರದ ಮೇಲೆ ಯೋಗಶಾಸ್ತ್ರದ ಮೇಲೆ ಉಪಯುಕ್ತವಾದ ಬೆಳಕನ್ನು ಚೆಲ್ಲಲು ಸಮರ್ಥವಾಗಿವೆ.

ಶಿವಸೂತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟ ಉಪಾಯಗಳು ಒಂದರಿಂದ ಒಂದು ಪೂರ್ಣವಾಗಿ ಭಿನ್ನವಾಗಿರುವುದಿಲ್ಲ. ಈ ಉಪಾಯಗಳಲ್ಲಿ ಒಂದು ಉಪಾಯದ ಅಭ್ಯಾಸವು ಇನ್ನೊಂದು ಉಪಾಯದ ಸಿದ್ಧಿಗೆ ಅನೇಕ ವಿಷಯಗಳಲ್ಲಿ ಸಹಾಯಕವಾಗಿರುತ್ತದೆ. ಸಾಮಾನ್ಯರಿಗೆ ಆಣವೋಪಾಯವನ್ನು ಉಪದೇಶಿಸಿರುತ್ತಾರೆ. ಶಾಸ್ತ್ರಾಭ್ಯಾಸ, ತತ್ತ್ವವಿವೇಚನೆ, ಭಾವನಾಬಲ, ಇರುವವರಿಗೆ ಶಾಕ್ತೋಪಾಯವನ್ನು ನಿರೂಪಿಸಿರುತ್ತಾರೆ. ಸ್ಥೈರ್ಯ, ಪರಿಪಾಕ ಮತ್ತು ಭಾವನಾಪ್ರಕರ್ಷದಿಂದ ಕೂಡಿರುವವರಿಗೆ ಶಾಂಭವೋಪಾಯವು ಸಾಧನವಾಗುತ್ತದೆ. ಈ ಸಂಪ್ರದಾಯದಲ್ಲಿ ಜನ್ಮಾಂತರದಲ್ಲಿ ಸಾಧನಾಭ್ಯಾಸ ಮಾಡಿ ಸಿದ್ಧನಾಗಿದ್ದು ಪೂರ್ಣಪರಿಪಾಕವುಳ್ಳವನಿಗೆ 'ಅನುಪಾಯ 'ವೆಂಬ ಇನ್ನೊಂದು ಉಪಾಯವುಂಟು. ಇದನ್ನು ಮಹಾಮಹೇಶ್ವರಾಚಾರ್ಯ ಅಭಿನವಗುಪ್ತರು ತಂತ್ರಾಲೋಕದಲ್ಲಿ ವಿವರಿಸಿದ್ದಾರೆ. ಈ ಉಪಾಯನಿಷ್ಠನಿಗೆ ಮಿಕ್ಕ ಯಾವ ಕ್ರಿಯಾಕಲಾಪಗಳೂ ಮುಖ್ಯವಲ್ಲ. ಒಂದುಸಲ ಗುರುವಿನ ಉಪದೇಶದಿಂದಾಗಲಿ ಬೇರೆ ಪ್ರಮಾಣದಿಂದಾಗಲಿ ಶಾಸ್ತ್ರಗಳಿಂದಾಗಲಿ ಶಿವತತ್ತ್ವವು ತಿಳಿದು ಅದರಲ್ಲಿ ದೃಢವಾದ ವಿಶ್ವಾಸವೇರ್ಪಟ್ಟರೆ ಯಾವ ಕ್ರಿಯಾಕಲಾಪವೂ ಬೇಕಿಲ್ಲ. ಒಟ್ಟಿನಲ್ಲಿ ಶಿವಸೂತ್ರಗಳು ಕೇವಲ ಉಪಾಯಗಳನ್ನು ನಿರೂಪಿಸಿರುವುದಲ್ಲದೆ ಕಾಶ್ಮೀರಶೈವಸಿದ್ಧಾಂತದ ಸ್ಪಂದತತ್ತ್ವವನ್ನೂ ಪ್ರತ್ಯಭಿಜ್ಞಾತತ್ತ್ವವನ್ನೂ ಸಮಯೋಚಿತವಾಗಿ ಪ್ರತಿಪಾದಿಸಿವೆ. ಈ ಸೂತ್ರಗಳಿಂದ ಮುಖ್ಯವಾಗಿ ಶೈವಸಂಪ್ರದಾಯದ ಮುಖ್ಯತತ್ತ್ವಗಳನ್ನೂ ಸಾಧನಾಭ್ಯಾಸಗಳನ್ನೂ ತಿಳಿಯಬಹುದು.

ಶಿವಸೂತ್ರಗಳು ಮತ್ತು ಈ ಸೂತ್ರಗಳಲ್ಲಿ ಪ್ರತಿಪಾದಿಸಿರುವ ವಿಷಯಗಳು

ಪ್ರಥಮೋನ್ಮೇಷಃ—ಶಾಂಭವೋಪಾಯ

೧. **ಚೈತನ್ಯಮಾತ್ಮಾ**
ಆತ್ಮನ ಲಕ್ಷಣಗಳು.

೨. **ಜ್ಞಾನಂ ಬಂಧಃ**
ಜ್ಞಾನವು ಹೇಗೆ ಬಂಧಕವಾಗುವುದು.
ಆಣವಮಲದ ಎರಡು ಲಕ್ಷಣಗಳು.

೩. **ಯೋನಿವರ್ಗಃ ಕಲಾಶರೀರಂ**
ಮಾಯೀಯಮಲ ಮತ್ತು ಕಾರ್ಮಮಲದ ಲಕ್ಷಣಗಳು.

೪. **ಜ್ಞಾನಾಧಿಷ್ಠಾನಂ ಮಾತೃಕಾ**
ಮಲಗಳು ಹೇಗೆ ಬಂಧಕಗಳಾಗುವುವು ?
ವಾಚ್ಯವಾಚಕ ಭಾವ.

೫. **ಉದ್ಯಮೋ ಭೈರವಃ**
ಬಂಧಕಗಳಾಗಿರುವ ಮೂರು ಮಲಗಳ ನಿವಾರಣೆಗೆ ಕಾರಣವಾಗಿರುವ ಶಾಂಭವ ಸಮಾವೇಶದ ಉಪದೇಶ.

೬. **ಶಕ್ತಿಚಕ್ರಸಂಧಾನೇ ವಿಶ್ವಸಂಹಾರಃ**
ಈ ಸಮಾವೇಶ ಬಲದಿಂದ ಜಾಗ್ರದವಸ್ಥೆಯಲ್ಲಿಯೂ ಭೇದ ಜ್ಞಾನದ ಉಪಶಮನ.

೭. **ಜಾಗ್ರತ್‌ಸ್ವಪ್ನಸುಷುಪ್ತಭೇದೇ ತುರ್ಯಾ ಭೋಗಸಂಭವಃ**
ಸಮಾಧಿ ಅವಸ್ಥೆಗೂ ಜಾಗ್ರದವಸ್ಥೆಗೂ ಭೇದವಿಲ್ಲವೆಂಬ ವಿಷಯದ ವಿವರಣೆ.

೮. **ಜ್ಞಾನಂ ಜಾಗ್ರತ್**
ಜಾಗ್ರದವಸ್ಥೆಯ ಲಕ್ಷಣ.

೯. **ಸ್ವಪ್ನೋ ವಿಕಲ್ಪಾಃ**
ಸ್ವಪ್ನಾವಸ್ಥೆಯ ಲಕ್ಷಣ.

೧೦. **ಅವಿವೇಕೋ ಮಾಯಾ ಸೌಷುಪ್ತಂ**
ಸುಷುಪ್ತಾವಸ್ಥೆಯ ಹಾಗೂ ಮಾಯೆಯ ಲಕ್ಷಣ. (ಜಾಗ್ರದಾದಿ ಮೂರು ಅವಸ್ಥೆಗಳಲ್ಲಿಯೂ ಮೂರು ರೂಪಗಳು : ಈ ವಿಷಯದಲ್ಲಿ ಲೋಕಾಭಿಪ್ರಾಯ ಮತ್ತು ಯೋಗಿಗಳ ಅಭಿಪ್ರಾಯ.)

೧೧. **ತ್ರಿತಯಭೋಕ್ತಾ ವೀರೇಶಃ**
ಸಂವಿತ್ ಸಮಾವೇಶವನ್ನು ಪಡೆದಿರುವ ಯೋಗಿಗೆ ಮೇಲೆ ಹೇಳಿದ ಮೂರು ಅವಸ್ಥೆಗಳು ಚಮತ್ಕಾರವಾಗಿ ತೋರುವುದರಿಂದ 'ವೀರೇಶ' ಎಂಬ ಹೆಸರು. ಅಂತಹ ಚಿತ್ಸಮಾವೇಶವಿಲ್ಲದವನಿಗೆ 'ಪಶು' ಎಂಬ ಸಂಜ್ಞೆ.

೧೨. **ವಿಸ್ಮಯೋ ಯೋಗಭೂಮಿಕಾಃ**
ಮಹಾಯೋಗಿಯ ಪರತತ್ತ್ವಸಾಕ್ಷಾತ್ಕಾರಕ್ಕೆ ಹಂತ ಹಂತವಾಗಿ ಏರುತ್ತಿರುವ ವಿಕಾಸ ಸ್ಥಿತಿಗಳ ನಿರೂಪಣೆ.

೧೩. **ಇಚ್ಛಾಶಕ್ತಿರುಮಾಕುಮಾರೀ**
ಪರಭೈರವ ಸ್ಥಿತಿಯನ್ನು ಪಡೆದಿರುವ ಆರೂಢನ ಇಚ್ಛೆಯೇ ಪರಾಶಕ್ತಿ.

೧೪. **ದೃಶ್ಯಂ ಶರೀರಂ**
ಇಚ್ಛಾಶಕ್ತಿಯ ಬಲದಿಂದ ಸ್ವಾತಂತ್ರ್ಯವನ್ನು ಪಡೆದಿದ್ದರೂ ಸಿದ್ಧನಿಗೆ ವಿಶ್ವದಲ್ಲಿ 'ಅಹಂತಾ' ಅವಭಾಸನೆ ಉಂಟು.

೧೫. **ಹೃದಯೇ ಚಿತ್ತಸಂಘಟ್ಟಾದ್ದೃಶ್ಯಸ್ವಾಪದರ್ಶನಂ**
ಚಿದಾವೇಶದಿಂದ ದೃಶ್ಯಪದಾರ್ಥಗಳೆಲ್ಲವೂ ಚಿನ್ಮಯವಾಗಿ ತೋರುವುವು.

೧೬. **ಶುದ್ಧತತ್ತ್ವಸಂಧಾನಾದ್ವಾಽಪಶುಶಕ್ತಿಃ**
ಶುದ್ಧತತ್ತ್ವೋಪಾಸನೆಯಿಂದ ಪಶುಭಾವ ವಿಸರ್ಜನೆ, ಪತಿಭಾವದ ಪರಿವರ್ತನೆ.

೧೭. **ವಿತರ್ಕ ಆತ್ಮಜ್ಞಾನಂ**
ಯೋಗಿಯ ಆತ್ಮಜ್ಞಾನದ ಲಕ್ಷಣಗಳು.

೧೮. **ಲೋಕಾನಂದಃ ಸಮಾಧಿಸುಖಂ**
ಸಮಾಧಿಸುಖದ ಲಕ್ಷಣ ಮತ್ತು ಅದು ಸಾಮಾನ್ಯರ ಸಂತೋಷಕ್ಕೆ ಹೇಗೆ ಕಾರಣ.

೧೯. **ಶಕ್ತಿಸಂಧಾನೇ ಶರೀರೋತ್ಪತ್ತಿಃ**
ವಿಭೂತಿ ಯೋಗದ ವಿವರಣೆ.

೨೦. **ಭೂತಸಂಧಾನ–ಭೂತಪೃಥಕ್ತ್ವ–ವಿಶ್ವಸಂಘಟ್ಟಾಃ**
ಸಂಧಾನ ವಿಶೇಷಗಳ ಅಭ್ಯಾಸದಿಂದಾಗುವ ಸಿದ್ಧಿಗಳು.

೨೧. **ಶುದ್ಧವಿದ್ಯೋದಯಾಚ್ಚಕ್ರೇಶತ್ವಸಿದ್ಧಿಃ**
ಮಹೇಶ್ವರಿ ಸಿದ್ಧಿಯ ಕಥನ.

೨೨. **ಮಹಾಹ್ರದಾನುಸಂಧಾನಾನ್ಮಂತ್ರವೀರ್ಯಾನುಭವಃ**
ಮಂತ್ರವೀರ್ಯ ಪ್ರಕಾಶಗಳ ವರ್ಣನೆ.

ದ್ವಿತೀಯೋನ್ಮೇಷಃ—ಶಾಕ್ತೋಪಾಯ

೧. **ಚಿತ್ತಂ ಮಂತ್ರಃ**

ಮಂತ್ರಸ್ವರೂಪ - ಆರಾಧಕನ ಚಿತ್ತವೇ ಮಂತ್ರ.

೨. **ಪ್ರಯತ್ನಃ ಸಾಧಕಃ**

ಮಂತ್ರಸಮಾವೇಶದಲ್ಲಿ ಸಾಧಕನ ಸ್ಥಿತಿ.

೩. **ವಿದ್ಯಾಶರೀರಸತ್ತಾ ಮಂತ್ರರಹಸ್ಯಂ**

ಮಂತ್ರವೀರ್ಯದ ಲಕ್ಷಣ.

೪. **ಗರ್ಭೇಚಿತ್ತವಿಕಾಸೋಽವಿಶಿಷ್ಟ ವಿದ್ಯಾಸ್ವಪ್ನಃ**

ಅಶುದ್ಧ ವಿದ್ಯೆಯ ಲಕ್ಷಣ ಮತ್ತು ಅದರಿಂದಾಗುವ ಭ್ರಾಂತಿ.

೫. **ವಿದ್ಯಾಸಮುತ್ಥಾನೇ ಸ್ವಾಭಾವಿಕೇ ಖೇಚರೀ ಶಿವಾವಸ್ಥಾ**

ಖೇಚರೀಮುದ್ರೆಯ ಲಕ್ಷಣ-ಮಂತ್ರವೀರ್ಯ ಮತ್ತು ಮುದ್ರಾವೀರ್ಯಗಳ ಉಪದೇಶ.

೬. **ಗುರುರುಪಾಯಃ**

ಬಲಪ್ರಾಪ್ತಿಗೆ ಉಪಾಯ.

೭. **ಮಾತೃಕಾಚಕ್ರ ಸಂಬೋಧಃ**

ಗುರುಪ್ರಸಾದ.

೮. **ಶರೀರಂ ಹವಿಃ**

ಈ ಶಕ್ತಿಯನ್ನು ಪಡೆದಿರುವವನೇ ಹವಿಸ್ಸು.

೯. **ಜ್ಞಾನಮನ್ನಂ**

ಅನ್ನದ ಲಕ್ಷಣ.

೧೦. **ವಿದ್ಯಾಸಂಹಾರೇ ತದುತ್ಥಸ್ವಪ್ನ ದರ್ಶನಂ**

ಎಚ್ಚರಿಕೆಯಿಲ್ಲದಿದ್ದರೆ ಭೇದಮಯ ಪ್ರಪಂಚದಲ್ಲಿ ‘ ಇದಂತಾ ’ ಜ್ಞಾನವೇ ಉಳಿಯುವುದು.

ತೃತೀಯೋನ್ಮೇಷಃ—ಆಣವೋಪಾಯ

೧. **ಆತ್ಮಾ ಚಿತ್ತಂ**

ಜೀವಾತ್ಮನ ಲಕ್ಷಣ.

೨. **ಜ್ಞಾನಂ ಬಂಧಃ**

ಅಣುವಾಗಿರುವ ಜೀವಾತ್ಮನ ಬಂಧಲಕ್ಷಣ.

೩. **ಕಲಾದೀನಾಂ ತತ್ತ್ವಾನಾಮ ವಿವೇಕೋ ಮಾಯಾ**

ಮಾಯೆಯ ಲಕ್ಷಣ.

೪. ಶರೀರೇ ಸಂಹಾರಃ ಕಲಾನಾಂ

ಮಾಯೆಯ ಉಪಶಮನಕ್ಕೆ ಆಣವೋಪಾಯ.

೫. ನಾಡೀಸಂಹಾರ-ಭೂತಜಯ-ಭೂತಕೈವಲ್ಯ-ಭೂತಪೃಥಕ್ತ್ವಾನಿ

ಆಣವೋಪಾಯ ಸಿದ್ಧಿಗೆ ಸಾಧಕವಾಗಿರುವ ಅಂಗಗಳು.

೬. ಮೋಹಾವರಣಾತ್ ಸಿದ್ಧಿಃ

ಯೋಗತತ್ತ್ವ ಮತ್ತು ಭೋಗ ಇವುಗಳ ಸಿದ್ಧಿಗೆ ಕಾರಣಗಳು.

೭. ಮೋಹಜಯಾದನಂತಾಭೋಗಾತ್ ಸಹಜವಿದ್ಯಾಜಯಃ

ಮೂಢನಾಗದಿರುವವನಿಗೆ ಸಹಜ ವಿದ್ಯಾಲಾಭ.

೮. ಜಾಗ್ರದ್ದ್ವಿತೀಯಕರಃ

ಶುದ್ಧಾಧ್ವ ಸಾಕ್ಷಾತ್ಕಾರವನ್ನು ಪಡೆದಿರುವವನಿಗೆ ವಿಶ್ವವೆಲ್ಲಾ ತನ್ನ ಕಿರಣಗಳ ಹಾಗೆ ತೋರುವುದು.

೯. ನರ್ತಕ ಆತ್ಮಾ

ಆತ್ಮನನ್ನು ನರ್ತಕನಂತೆ ನಿರೂಪಣೆ.

೧೦. ರಂಗೋಽಂತರಾತ್ಮಾ

ರಂಗದ ಲಕ್ಷಣ—ರಂಗಸ್ಥಳದ ಸ್ವರೂಪ.

೧೧. ಪ್ರೇಕ್ಷಕಾಣೀಂದ್ರಿಯಾಣಿ

ನೋಡುವವರ ಲಕ್ಷಣ.

೧೨. ಧೀವಶಾತ್ ಸತ್ತ್ವಸಿದ್ಧಿಃ

ಸತ್ತ್ವಸಿದ್ಧಿಗೆ ಕಾರಣಗಳು.

೧೩. ಸಿದ್ಧಃ ಸ್ವತಂತ್ರಭಾವಃ

ಸತ್ತ್ವಸಿದ್ಧಿಯ ಫಲ.

೧೪. ಯಥಾ ತತ್ರ ತಥಾ ಅನ್ಯತ್ರ

ಸ್ವಾತಂತ್ರ್ಯವನ್ನು ಅನ್ಯತ್ರ ಬಳಸುವಿಕೆ.

೧೫. ಬೀಜಾವಧಾನಂ

ಸ್ವಾತಂತ್ರ್ಯ ಲಾಭವಾಗಿದ್ದರೂ ಆ ಪರವಸ್ತುವನ್ನು ಧ್ಯಾನಮಾಡಬೇಕೆಂಬ ಉಪದೇಶ.

೧೬. ಆಸನಸ್ಥಃ ಸುಖಂ ಹ್ರದೇ ನಿಮಜ್ಜತಿ

ಶಾಕ್ತಬಲ ಲಾಭದಿಂದ ಶಾಂಭವಪದ ಪ್ರಾಪ್ತಿ.

೧೭. ಸ್ವಮಾತ್ರಾ ನಿರ್ಮಾಣಮಾಪಾದಯತಿ

ಸ್ವತಂತ್ರ ಸ್ಥಿತಿಯನ್ನು ಪಡೆದಿರುವವನು ಈ ವಿಶ್ವಕ್ಕೆ ನಿರ್ಮಾತೃವಾಗಿರುವನು.

೧೮. ವಿದ್ಯಾಽವಿನಾಶೇ ಜನ್ಮವಿನಾಶಃ

ಸ್ವಾತಂತ್ರ್ಯವಿಕಾಸವನ್ನು ಪಡೆದಿರುವವನಿಗೆ ಪುನರ್ಜನ್ಮವಿಲ್ಲ.

೧೯. ಕವರ್ಗಾದಿಷು ಮಾಹೇಶ್ವರ್ಯಾದ್ಯಾಃ ಪಶುಮಾತರಃ

ಸಂವಿತ್‌ತತ್ತ್ವಸಾಕ್ಷಾತ್ಕಾರವಾಗಿದ್ದರೂ ಪ್ರಮಾದವಶದಿಂದ ಮೋಹವುಂಟಾಗಬಹುದು. ಪ್ರಕಾಶಿಸುತ್ತಿರುವ ಶುದ್ಧತತ್ತ್ವದಲ್ಲಿ ಯಾವಾಗಲೂ ಗಮನವಿರಬೇಕು.

೨೦. ತ್ರಿಷು ಚತುರ್ಥಂ ತೈಲವದಾಸೇಚ್ಯಂ

ಜಾಗ್ರದಾದಿ ಮೂರು ಅವಸ್ಥೆಗಳಲ್ಲಿಯೂ ತುರೀಯಾನುಸಂಧಾನವಿರಬೇಕು—ಇದು ಉಪಾಯ.

೨೧. ಮಗ್ನಃ ಸ್ವಚಿತ್ತೇನ ಪ್ರವಿಶೇತ್

ಭೇದಜ್ಞಾನದಿಂದ ವ್ಯವಹರಿಸುತ್ತಿದ್ದರೂ ಅಭೇದಾನುಸಂಧಾನವಿರಬೇಕು.

೨೨. ಪ್ರಾಣಸಮಾಚಾರೇ ಸಮದರ್ಶನಂ

ಚಿದಾನಂದವನ್ನು ಅನುಭವಿಸುವವನಿಗೆ ಎಲ್ಲಾ ದೆಸೆಗಳಲ್ಲಿಯೂ ಅಭೇದರೂಪವೇ ಕಾಣುತ್ತದೆ.

೨೩. ಮಧ್ಯೇಽವರಪ್ರಸವಃ

ಸಮಾವೇಶವನ್ನು ಪರಿಶೀಲನೆ ಮಾಡದಿದ್ದರೆ ತೊಂದರೆಯುಂಟು.

೨೪. ಮಾತ್ರಾಸ್ವಪ್ರತ್ಯಯಸಂಧಾನೇ ನಷ್ಟಸ್ಯ ಪುನರುತ್ಥಾನಂ

ಮಧ್ಯಾವಸ್ಥೆಯು ಅನ್ವಯಿಸಿದರೆ ಸ್ವಭಾವವು ಪುನಃ ತಲೆಎತ್ತುವುದು.

೨೫. ಶಿವತುಲ್ಯೋ ಜಾಯತೇ

ಶಿವಸಾರೂಪ್ಯ ನಿರೂಪಣೆ.

೨೬. ಶರೀರವೃತ್ತಿರ್ವ್ರತಂ

ಶಿವೋಽಹಂ ಎಂದು ಅನುಸಂಧಾನ ಮಾಡುವ ವ್ರತ.

೨೭. ಕಥಾಜಪಃ

ಜಪದ ಲಕ್ಷಣಗಳು.

೨೮. ದಾನಮಾತ್ಮಜ್ಞಾನಂ

ಸಾಧಕನ ಚರ್ಯೆಯ ಲಕ್ಷಣ.

೨೯. ಯೋಽವಿಪಸ್ಥೋ ಜ್ಞಾಹೇತುಶ್ಚ

ಇಂತಹ ಚರ್ಯೆ ಇರುವವನೇ ದೇಶಿಕ.

೩೦. ಸ್ವಶಕ್ತಿ ಪ್ರಚಯೋಽಸ್ಯ ವಿಶ್ವಂ

ಶಿವತುಲ್ಯನಾದ ಯೋಗಿಗೆ ಈ ವಿಶ್ವವೆಲ್ಲಾ ತನ್ನ ವಿಕಾಸ ರೂಪವಾಗಿರುತ್ತದೆ.

೩೧. ಸ್ಥಿತಿ ಲಯೌ

ತಾನು ಮಾಡುವ ಕೆಲಸಗಳೆಲ್ಲಾ ತನ್ನ ಶಕ್ತಿಯ ವಿಕಾಸಗಳು.

೩೨. ತತ್ಪ್ರವೃತ್ತಾವಪ್ಯನಿರಾಸಃ ಸಂವೇತ್ತೃಭಾವಾತ್

ಶಿವಸ್ವರೂಪಸ್ಥಿತಿಗೆ ಬದಲಾವಣೆ ಇಲ್ಲ.

೩೩. **ಸುಖದುಃಖಯೋರ್ಬಹಿರ್ಮನನಂ**
ಪುರ್ಯಷ್ಟಕ ಪ್ರಮಾತೃತ್ವವನ್ನು ಮೀರಿದವನಿಗೆ ಸುಖದುಃಖಗಳಿಲ್ಲ.

೩೪. **ತದ್ವಿಮುಕ್ತಸ್ತು ಕೇವಲೀ**
ಸುಖದುಃಖಗಳನ್ನು ಬಿಡುವುದರ ಫಲ.

೩೫. **ಮೋಹಪ್ರತಿಸಂಹತಸ್ತು ಕರ್ಮಾತ್ಮಾ**
ಸುಖದುಃಖಗಳನ್ನು ಬಿಡದಿದ್ದರೆ ಕರ್ಮಬಂಧನಕ್ಕೆ ಒಳಗೊಂಡಿರುವವನಾಗುತ್ತಾನೆ.

೩೬. **ಭೇದತಿರಸ್ಕಾರೇ ಸರ್ಗಾಂತರ ಕರ್ಮತ್ವಂ**
ಕರ್ಮಾತ್ಮನ ಸ್ವಸ್ವರೂಪ ಅಭಿವ್ಯಕ್ತವಾದರೆ ಯಥೇಷ್ಟವಾಗಿ ಸೃಷ್ಟಿಮಾಡಬಲ್ಲನು.

೩೭. **ಕರಣಶಕ್ತಿಃ ಸ್ವತೋಽನುಭವಾತ್**
ಸಿದ್ಧಪುರುಷನು ತನ್ನಿಷ್ಟಬಂದಂತೆ ಸೃಷ್ಟಿಸಲು ಕಾರಣ ಅವನ ಮಹಿಮೆ.

೩೮. **ತ್ರಿಪದಾದ್ಯನುಪ್ರಾಣನಂ**
ಕರ್ತೃಸ್ವರೂಪವನ್ನು ವಿಶದಪಡಿಸಲು ತುರೀಯಾನುಸಂಧಾನದ ಅವಶ್ಯಕತೆ.

೩೯. **ಚಿತ್ತಸ್ಥಿತಿವಚ್ಛರೀರ ಕರಣ ಬಾಹ್ಯೇಷು**
ಹೊರಗಿನ ಪದಾರ್ಥಗಳು ಪ್ರಕಾಶಿಸುತ್ತಿದ್ದರೂ ತುರೀಯ ಶಕ್ತಿಯಿಂದ ಕೂಡಿರುವುವು.

೪೦. **ಅಭಿಲಾಷಾದ್ಬಹಿರ್ಗತಿಃ ಸಂವಾಹ್ಯಸ್ಯ**
ತುರೀಯ ಪದದ ವಿಮರ್ಶೆಯಿಲ್ಲದಿದ್ದಲ್ಲಿ ಸಂಸಾರ.

೪೧. **ತದಾರೂಢ ಪ್ರಮಿತೇಸ್ತತ್ಕ್ಷಯಾಜ್ಜೀವ ಸಂಕ್ಷಯಃ**
ಸ್ವಸ್ವಭಾವವನ್ನು ವಿಮರ್ಶಿಸುವುದರಿಂದ ಬಾಹ್ಯಪ್ರಪಂಚದಲ್ಲಿಯೂ ಆತ್ಮಸಂತೋಷ.

೪೨. **ಭೂತಕಂಚುಕೀ ತದಾವಿಮುಕ್ತೋ ಭೂಯಃ ಪತಿಸಮಃ ಪರಃ**
ಭೂತಗಳು ಮತ್ತು ಕಂಚುಕಗಳಿಂದ ಬಿಡುಗಡೆಯನ್ನು ಪಡೆದವನು ಪರಶಿವನಿಗೆ ಸಮಾನನಾಗಿರುವನು.

೪೩. **ನೈಸರ್ಗಿಕಃ ಪ್ರಾಣಸಂಬಂಧಃ**
ಒಡನೆಯೇ ಶರೀರ ವಿಯೋಗವಾಗದಿರಲು ಕಾರಣ.

೪೪. **ನಾಸಿಕಾಂತರ್ಮಧ್ಯ ಸಂಯಮಾತ್ ಕಿಮತ್ರ ಸವ್ಯಾಪಸವ್ಯ ಸೌಷುಮ್ನೇಷು**
ಪ್ರಾಣಸಂಬಂಧವಿದ್ದರೂ ಅಲೌಕಿಕತ್ವ ನಿರೂಪಣ.

೪೫. **ಭೂಯಃ ಸ್ಯಾತ್ ಪ್ರತಿಮೀಲನಂ**
ಯೋಗಫಲ ವಿವರಣೆ.

ಓಂ ನಮಃ ಸಚ್ಚಿದಾನಂದಾತ್ಮನೇ

ಶಿವಸೂತ್ರಗಳು

ಪ್ರಥಮೋನ್ಮೇಷಃ

ಶಾಂಭವೋಪಾಯ

ರುದ್ರಕ್ಷೇತ್ರಜ್ಞವರ್ಗಃ ಸಮುದಯತಿ ಯತೋ ಯತ್ರ ವಿಶ್ರಾಂತಿ ಮೃಚ್ಛೇದ್ ।
ಯತ್ತತ್ತ್ವಂ ಯಸ್ಯ ವಿಶ್ವಂ ಸ್ಫುರಿತಮಯ ಮಿಯದ್ವನ್ಮಯಂ ವಿಶ್ವಮೇತತ್
ಸ್ವಾಚ್ಛಂದ್ಯಾನಂದ ವೃಂದೋಚ್ಛಲದಮೃತಮಯಾನುತ್ತರ ಸ್ಪಂದತತ್ತ್ವಂ ।
ಚೈತನ್ಯಂ ಶಾಂಕರಂ ತಜ್ಜಯತಿ ಯದಖಿಲಂ ದ್ವೈತ ಭಾಸಾದ್ವಯಾತ್ಮ ॥

ಪ್ರಮಾತೃ ಪ್ರಮೇಯ ರೂಪವಾದ ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ನಡೆಯಿಸುವ ರುದ್ರರೂ ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಸಂಬಂಧಿಸಿದ ಜೀವರುಗಳೂ ಯಾವ ತತ್ತ್ವದಿಂದ ಹುಟ್ಟುತ್ತಿರುವರೋ ಯಾವ ತತ್ತ್ವದಲ್ಲಿ ಉಪಸಂಹರಿಸಲ್ಪಟ್ಟು ಲೀನವಾಗುವರೋ ಆ ತತ್ತ್ವವು ನಿತ್ಯವಾದದ್ದಾಗಿದೆ. ಈ ವಿಶ್ವವು ಅದೇ ತತ್ತ್ವದ ಸ್ಫುರಣರೂಪವಾಗಿದೆ. ಆ ತತ್ತ್ವದಿಂದಲೇ ತನ್ಮಯವಾಗಿಯೂ ಇದೆ. ಆ ಮಹಾತತ್ತ್ವವು ತನ್ನ ಸ್ವಾತಂತ್ರ್ಯದಿಂದ ಆನಂದವೃಂದರೂಪವಾದ ಅಕಾರಾದಿ ಕ್ಷಕಾರಾಂತವಾದ ಅಕ್ಷರ ಸಮಾಮ್ನಾಯರೂಪವಾದ ತನ್ನ ಶಕ್ತಿಕಿರಣಗಳನ್ನು ಹೊರಹೊಮ್ಮಿಸುತ್ತಲಿದೆ. ಆ ತತ್ತ್ವವು ಅಮೃತಮಯವಾಗಿಯೂ, ಅನುತ್ತರವಾಗಿಯೂ, ಸ್ಪಂದತತ್ತ್ವರೂಪವಾಗಿಯೂ ಇದೆ. ಯಾವ ತತ್ತ್ವದಲ್ಲಿ ಈ ವಿಶ್ವವೆಲ್ಲಾ ದ್ವೈತಭಾವದಿಂದ ಪ್ರಕಾಶಿಸುತ್ತಿದ್ದರೂ ಅಭಿನ್ನವಾಗಿದೆಯೋ, ಆ ತತ್ತ್ವವು ಚೈತನ್ಯಸ್ವರೂಪಿಯಾಗಿ ಅದ್ವಯಾತ್ಮಕವಾಗಿದೆ. ಅನಂತಸುಖವನ್ನುಂಟುಮಾಡುವುದಾಗಿಯೂ ಇದೆ. ಹೀಗೆ ಸರ್ವವ್ಯಾಪಿಯಾದ ಶಾಂಕರ ತತ್ತ್ವವು ಸರ್ವೋತ್ಕೃಷ್ಟವಾಗಿ ಪ್ರಕಾಶಿಸುತ್ತಲಿದೆ.

ಕಾಶ್ಮೀರದಲ್ಲಿ ಮಹದೇವಗಿರಿಯಲ್ಲಿ ಮಹಾಮಹೇಶ್ವರಾಚಾರ್ಯನಾದ ವಸುಗುಪ್ತನೆಂಬ ಸಿದ್ಧಪುರುಷನಿದ್ದನು. ಈತನು ಶಕ್ತಿಪಾತವಶದಿಂದ ಅಭಿವ್ಯಕ್ತವಾದ ಈಶ್ವರ ಭಕ್ತಿಯುಳ್ಳವನಾಗಿದ್ದನು. ಶಿವಾರಾಧನಪರನಾಗಿ ಪಾರಮೇಶ್ವರ ತತ್ತ್ವನಿಷ್ಠರಾದ ನಾನಾ ಯೋಗಿ ಯೋಗಿನಿಗಳಿಂದ ಪ್ರಚಾರಮಾಡಲ್ಪಟ್ಟು ಸಿದ್ಧರಿಂದ ಆಚರಿಸಲ್ಪಟ್ಟ ಸತ್ಸಂಪ್ರದಾಯಗಳ ಅರಿವಿನಿಂದ ಪವಿತ್ರವಾದ ಮನಸ್ಸುಳ್ಳವನಾಗಿದ್ದನು. ಈತನಿಗೆ ಒಂದಾನೊಂದು ದಿನ ಸ್ವಪ್ನವಾಯಿತು. ಆ ಸ್ವಪ್ನದಲ್ಲಿ ಪರಮೇಶ್ವರನು ಬಂದು " ಈ ಬೆಟ್ಟದಲ್ಲಿರುವ ಒಂದು ಶಿಲಾತಲದಲ್ಲಿ ರಹಸ್ಯವಿದೆ ; ಅದನ್ನು ತಿಳಿದು ಅರ್ಹರಾದವರಲ್ಲಿ

ಪ್ರಚಾರಮಾಡು ” ಎಂದು ಅಪ್ಪಣೆಮಾಡಿದನು. ವಸುಗುಪ್ತನು ಎಚ್ಚೆತ್ತು ಹುಡುಕುತ್ತಾ ಆ ಶಿಲಾತಲವನ್ನು ಕಂಡನು. ಈತನ ಕರಸ್ಪರ್ಶದಿಂದ ಅಭಿಮುಖವಾಗಿ ತಿರುಗಿದ ಬಂಡೆಯನ್ನು ನೋಡಿದನು. ಆ ಬಂಡೆಯ ಮೇಲೆ ಶೈವಾಗಮಶಾಸ್ತ್ರ ಸಂಗ್ರಹರೂಪಗಳಾದ ಸೂತ್ರಗಳು ಕೆತ್ತಲ್ಪಟ್ಟಿದ್ದವು. ಅವು ಈತನ ದೃಷ್ಟಿಗೆ ಬಿತ್ತಿದ್ದುವು. ಈತನು ಆ ಸೂತ್ರಗಳನ್ನು ಅಧ್ಯಯನಮಾಡಿ ಭಟ್ಟ ಶ್ರೀಕಲ್ಲಟರೇ ಮೊದಲಾದ ಸಚ್ಛಿಷ್ಯರಲ್ಲಿ ಪ್ರಚಾರಮಾಡಿದನು ; ಸ್ಪಂದಕಾರಿಕೆಗಳನ್ನು ಬರೆದು ಈ ಸೂತ್ರಗಳ ತತ್ತ್ವಾರ್ಥವನ್ನು ಪ್ರಕಾಶಪಡಿಸಿದನು ; ಈ ಶಿವಸೂತ್ರಗಳ ಆಧಾರದ ಮೇಲೆಯೇ ಕಾಶ್ಮೀರದ ಶೈವ ಸಿದ್ಧಾಂತವು ಬೆಳೆದುಬಂದಿರುವುದು.

ಈ ಶಿವಸೂತ್ರಗಳಿಗೆ ಅನೇಕ ವ್ಯಾಖ್ಯಾನಗಳಿವೆ. ಇವುಗಳಲ್ಲಿ ಕೆಲವು ಗುರೂಪದೇಶ ಸಂಪ್ರದಾಯಗಳನ್ನನುಸರಿಸಿವೆ. ಇನ್ನು ಕೆಲವು ಆಗಮ ಸಂಪ್ರದಾಯಗಳನ್ನನುಸರಿಸಿವೆ. ಈ ವ್ಯಾಖ್ಯಾನಗಳು ಕೆಲವು ಸಂದರ್ಭಗಳಲ್ಲಿ ಪರಸ್ಪರ ವಿರುದ್ಧವಾಗಿಯೂ ಅಸಮಂಜಸವಾಗಿಯೂ ಕಂಡುಬಂದುದರಿಂದ ಕ್ಷೇಮರಾಜನು ಈ ಸೂತ್ರಗಳಿಗೆ ತಾತ್ತ್ವಿಕವಾಗಿ “ ವಿಮರ್ಶಿನಿ ” ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಈ ಶಿವಸೂತ್ರಗಳಿಗೆ “ ಸ್ಪಂದ ನಿರ್ಣಯ ” ವೆಂಬ ತನ್ನ ಗ್ರಂಥದಲ್ಲಿ ಪರಂಪರೆಯನ್ನನುಸರಿಸಿ ವ್ಯಾಖ್ಯಾನ ಮಾಡಿರುತ್ತೇನೆ ಮತ್ತು ಈ ಶಿವಸೂತ್ರ ವಿಮರ್ಶಿನಿಯಲ್ಲಿ ಸೂತ್ರಗಳಿಗೆ ತಾತ್ಪರ್ಯ ನಿರ್ಣಯಾತ್ಮಕವಾದ ವ್ಯಾಖ್ಯಾನವನ್ನು ಮಾಡಿರುತ್ತೇನೆ ಎಂದು ಹೇಳಿಕೊಂಡಿರುತ್ತಾನೆ.

ಅವತರಣಿಕೆ—ಕೆಲವು ದಾರ್ಶನಿಕರು ಜೀವಾತ್ಮ ಪರಮಾತ್ಮ ಇವೆರಡೂ ಬೇರೆ ಬೇರೆ ಎಂದು ಹೇಳುತ್ತಾರೆ. ಅವರ ಅಭಿಪ್ರಾಯ ಸರಿಯಾದುದಲ್ಲ. ವಸ್ತುತಃ ಜೀವಾತ್ಮನೂ ಪರಮಾತ್ಮನೂ ಒಂದೇ ಎಂಬ ತತ್ತ್ವವನ್ನು ಸೂಚಿಸುವುದಕ್ಕೋಸ್ಕರವಾಗಿ “ ಚೈತನ್ಯಮಾತ್ಮಾ ” ಎಂಬ ಸೂತ್ರವು ಹೊರಟಿದೆ. ಈ ಸೂತ್ರವು ಚೈತನ್ಯವೇ ಶಿವನು. ಶಿವನೇ ಈ ವಿಶ್ವದ ಆತ್ಮ ಎಂದು ಘೋಷಿಸುತ್ತದೆ.

ಚೈತನ್ಯಮಾತ್ಮಾ ॥೧॥

ಆತ್ಮನ ಲಕ್ಷಣಗಳು

ಚೈತನ್ಯವೇ ಆತ್ಮ (ಪರಮಾತ್ಮ). ಈ ಚೈತನ್ಯವು ವಿಶ್ವವನ್ನು ಸೃಷ್ಟಿಮಾಡುವ ಕ್ರಮದಲ್ಲಿ ತನ್ನ ಅನಂತಶಕ್ತಿಗಳ ವಿಲಾಸದಿಂದ ಗ್ರಾಹ್ಯ ಮತ್ತು ಗ್ರಾಹಕ ರೂಪಗಳನ್ನು ಪಡೆಯಿತು. ಗ್ರಾಹ್ಯವೆಂದರೆ ತಿಳಿಯಲ್ಪಡತಕ್ಕ ವಸ್ತು, ಗ್ರಾಹಕವೆಂದರೆ ತಿಳಿಯುವ ಶಕ್ತಿಯನ್ನೊಳಗೊಂಡಿರುವ ಚೈತನ್ಯ. ಈ ವಿಶ್ವವು ಗ್ರಾಹ್ಯ ಗ್ರಾಹಕ ಎಂಬ ಎರಡು ಭೇದಗಳಿಂದ ಅಭಿವ್ಯಕ್ತವಾಗಿದ್ದರೂ ವಸ್ತುತಃ ಒಂದೇ ಆಗಿರುತ್ತದೆ.

ಈ ಪ್ರಪಂಚದಲ್ಲಿ ಚಿತ್ತಿಗೆ ಗೋಚರವಾಗದೆ ಪ್ರಕಾಶಕ್ಕೆ ಬಾರದೇ ಇರುವ ಯಾವ ಪದಾರ್ಥವೂ ಇಲ್ಲ. ಜ್ಞಾನಕ್ಕೆ ಗೋಚರವಾಗದೆ ಇರುವುದು ಪದಾರ್ಥವೇ ಅಲ್ಲ. ಈ

ಕಾರಣದಿಂದ ಚಿತ್ತಿನ ಕ್ರಿಯೆಯು ಸಾಮಾನ್ಯವಾಗಿ ಎಲ್ಲಾ ಕಡೆಯೂ ತುಂಬಿದೆಯೆಂದು ವ್ಯಕ್ತವಾಗುತ್ತದೆ. ಚಿತ್ತಿನ ಕ್ರಿಯೆಯು ಎಲ್ಲೆಡೆಗಳಲ್ಲಿಯೂ ಸಾಮಾನ್ಯರೂಪದಿಂದಿದೆ. ತಿಳಿಯುವುದೂ ತಿಳಿಯುವ ಹಾಗೆ ಮಾಡುವುದೂ ಚೇತನದ ಸ್ವಭಾವ. ಸಮಸ್ತವಾದ ಜ್ಞಾನಕ್ರಿಯಾದಿ ವಿಷಯಗಳಲ್ಲಿ ಪರಿಪೂರ್ಣವಾಗಿ ಸ್ವತಂತ್ರವಾಗಿರುವಿಕೆಯೇ ಅದರ ಸ್ವರೂಪ. ಈ ವಿಧವಾದ ಪ್ರಭಾವದಿಂದ ಕೂಡಿ ಎಲ್ಲಾ ಜ್ಞಾನಕ್ರಿಯಾಸಂಬಂಧವುಳ್ಳದ್ದಾಗಿ ತನ್ಮಯವಾಗಿ ಪರಿಪೂರ್ಣವಾಗಿರುವುದು ಸ್ವಾತಂತ್ರ್ಯವೆನಿಸಿಕೊಳ್ಳುವುದು. ಇಂತಹ ಸ್ವಾತಂತ್ರ್ಯವು ಪರಮಶಿವನೊಬ್ಬನಿಗೇ ಇರುವುದು. ಪೃಥ್ವೀತತ್ತ್ವದಿಂದ ಶಿವತತ್ತ್ವದ ವರೆಗಿರುವ ತತ್ತ್ವಸಮೂಹವು ಪರಮಶಿವನಿಗೆ ಅಧೀನವಾಗಿರುವುದು. ಆ ಪರಶಿವನಾದರೋ ನಿತ್ಯತ್ವ, ವ್ಯಾಪಕತ್ವ, ಅಮೂರ್ತತ್ವವೇ ಮೊದಲಾದ ಅನೇಕ ಧರ್ಮಗಳಿಂದ ಕೂಡಿರುವನು. ನಿತ್ಯತ್ವ ವ್ಯಾಪಕತ್ವಾದಿ ಧರ್ಮಗಳು ಆಕಾಶ ಪರಮಾಣು ಮೊದಲಾದ ಪದಾರ್ಥಗಳಲ್ಲಿ ಕಂಡುಬರಬಹುದಾದರೂ, ಅವುಗಳಲ್ಲಿ ಸ್ವಾತಂತ್ರ್ಯವೆಂಬುದಿಲ್ಲ. ಹೀಗೆ ನಿಷ್ಕೃಷ್ಟವಾದ ಅರ್ಥವನ್ನು ತಿಳಿಯಪಡಿಸುವುದಕ್ಕೋಸ್ಕರ ಚೈತನ್ಯವು ಪರಿಪೂರ್ಣವಾದದ್ದು ಸ್ವತಂತ್ರವಾದದ್ದು ಎಂಬುದನ್ನು ಭಾವಪ್ರತ್ಯಯದಿಂದ "ಚೈತನ್ಯಮಾತ್ಮಾ" ಎಂಬ ಸೂತ್ರದಲ್ಲಿ ನಿರೂಪಿಸಿದ್ದಾರೆ.

ಪರಮಾತ್ಮ ಸ್ವರೂಪಂ ತು ಸರ್ವೋಪಾಧಿವಿವರ್ಜಿತಂ ।
ಚೈತನ್ಯಮಾತ್ಮನೋ ರೂಪಂ ಸರ್ವಶಾಸ್ತ್ರೇಷು ಪಠ್ಯತೇ ॥

—ಮೃತ್ಯುಂಜಿದ್ಭಟ್ಟಾರಕೆ

ಸ್ವತಂತ್ರವಾಗಿರುವ ಈ ಚೈತನ್ಯವೇ ಆತ್ಮ. ಭೇದವಾದಿಗಳು ಹೇಳುವಂತೆ ಆತ್ಮವು ಭಿನ್ನಸ್ವಭಾವವುಳ್ಳದ್ದಲ್ಲ. ಚೈತನ್ಯವು ಅಭಿನ್ನವಾದದ್ದು. ಭಿನ್ನಾಭಿನ್ನವಾಗಿರುವುದು ಅನಾತ್ಮಾ. ಯಾವ ತತ್ತ್ವವೇ ಆಗಲಿ ಚಿದಾತ್ಮಕವಾಗಿದ್ದಲ್ಲಿ ಭೇದವುಂಟಾಗುವುದಿಲ್ಲ. ಚಿತ್ತು ದೇಶ ಕಾಲ ಆಕಾರಗಳಿಗೆ ಅಧೀನವಾಗಿಲ್ಲ. ಚಿತ್ತಿನಿಂದ ಬೇರೆಯಾಗಿದ್ದಿದ್ದರೆ ಜ್ಞಾನಕ್ಕೆ ಗೋಚರವಾಗದೆ ಅಸನ್ಮಾತ್ರವಾಗಿರಬೇಕಾಗಿತ್ತು. ಚಿತ್ತಿನಿಂದ ಬೇರೆಯಾಗದಿದ್ದರೆ ಅದು ಚಿದಭಿನ್ನವಾಯಿತು. ಚಿಚ್ಛಕ್ತಿಯು ಸ್ವರೂಪದಲ್ಲಿ ಭೇದವಿಲ್ಲದ್ದು. ಚಿನ್ಮಾತ್ರಸ್ವರೂಪರುಗಳಾದ ಆತ್ಮರುಗಳಿಗೆ ಸ್ವಭಾವ ಭೇದವಿಲ್ಲ. ಒಂದುವೇಳೆ ಮುಂದೆ ಹೇಳುವ ರೀತಿಯಲ್ಲಿ ಮಲಸಂಬಂಧದಿಂದ ಭೇದ ತೋರ್ಪಟ್ಟರೂ ಆ ಮಲಗಳು ಚಿದಭಿನ್ನವಾಗಿಯೇ ಇರುತ್ತವೆ. ಇದರಿಂದ ಸ್ವಭಾವದಲ್ಲಿ ಭೇದವಿಲ್ಲ. ಈ ಕಾರಣದಿಂದ ಮಲಗಳ ಸಂಬಂಧವಿರುವಾಗಲಾಗಲಿ ಮಲಗಳು ಕಳಚಿಹೋದಮೇಲಾಗಲಿ ಆತ್ಮರುಗಳು ಭಿನ್ನಭಿನ್ನವಾಗಿರುವರೆಂಬ ವಾದವು ಹೊಂದುವುದಿಲ್ಲ. ಮಲಗಳ ಸಂಸ್ಕಾರವಿರುವಾಗ ಅನಾದಿ ಶಿವನಿಗಿಂತ ಸ್ವಲ್ಪ ಅಪಕರ್ಷವು—ಸಂಕೋಚವು ಆತ್ಮರುಗಳಿಗಿರುತ್ತದೆ. ದ್ವೈತಭಾವವನ್ನು ಒಪ್ಪುವುದಾದರೆ ಮೋಕ್ಷವಾದಮೇಲೂ ಜೀವಾತ್ಮರುಗಳು ಸಂಸಾರಿಗಳಾಗಿರಬೇಕಾದೀತು. ಆದುದರಿಂದ ನಾನಾತ್ಮವಾದವು ಸಮಂಜಸವಾಗಿರುವುದಿಲ್ಲ.

ಆತ್ಮ ಎಂಬುವನು ಯಾರು? ಎಂಬ ಪ್ರಶ್ನೆಗೆ ಒಬ್ಬೊಬ್ಬರು ಒಂದೊಂದು ಬಗೆಯ ಉತ್ತರವನ್ನು ಕೊಟ್ಟಿರುವರು. ಶರೀರವೇ ಆತ್ಮವೆಂದು ಚಾರ್ವಾಕರು, ಪ್ರಾಣವೇ ಆತ್ಮವೆಂದು ಕೆಲವು ವೈದಿಕರು, ಬುದ್ಧಿಯೇ ಆತ್ಮವೆಂದು ಕೆಲವು ಯೋಗಾಚಾರದವರು, ಶೂನ್ಯವೇ ಆತ್ಮವೆಂದು ಮಾಧ್ಯಮಿಕರು ಹೇಳಿರುವರು. ಇವರುಗಳು ಹೇಳುವಂತೆ ಶರೀರ ಪ್ರಾಣ ಬುದ್ಧಿ ಶೂನ್ಯ ಇವುಗಳು ಯಾವುವೂ ಆತ್ಮಸ್ವರೂಪಗಳಲ್ಲ. ಪರಮಾತ್ಮನ ಸ್ವರೂಪವು ಯಾವ ಉಪಾಧಿಗೂ ಒಳಪಟ್ಟಿದ್ದಲ್ಲ. ಆ ಪರಮಾತ್ಮನಿಗೆ ಕಲ್ಪಿತವಾದ ಶರೀರ ಸಂಬಂಧವುಂಟು. ಅದು ಕಲ್ಪಿತ ಪ್ರಮಾತೃಸ್ಥಿತಿ. ಈ ಸ್ಥಿತಿಯಲ್ಲಿಯೂ ಅಕಲ್ಪಿತ ವಾದ ಅಹಂ ವಿಮರ್ಶಮಯವಾದ ಸತ್ಯ ಪ್ರಮಾತೃಭಾವವು ಸ್ಫುರಿಸುತ್ತಲೇ ಇರುತ್ತದೆ. ಆತ್ಮನು ಚಿತ್ತೇ ಸ್ವರೂಪ ಧರ್ಮವುಳ್ಳವನಾಗಿ (ಚಿನ್ಮಯನಾಗಿ) ಎಲ್ಲಾ ದೇಹಗಳಲ್ಲಿಯೂ ಒಂದೇ ರೀತಿಯಾಗಿದ್ದಾನೆ. ವಿಶ್ವವೆಲ್ಲಾ ತನ್ಮಯವಾಗಿದೆಯೆಂದು ಯಾರು ಭಾವಿಸು ವರೋ ಅವರು ಸಂಸಾರವನ್ನು ಜಯಿಸಿದವರಾಗುತ್ತಾರೆ.

ಈ ಚೈತನ್ಯವೇ ಆತ್ಮ. ಚೈತನ್ಯವು ಆತ್ಮನ ಸ್ವಭಾವ. ಇದು ಭಾವ ಮತ್ತು ಅಭಾವ ರೂಪಗಳಿಂದಿರುವ ವಿಶ್ವಕ್ಕಿಂತ ಬೇರೆಯಲ್ಲ. ಜ್ಞಾನಕ್ಕೆ ಗೋಚರವಾಗ ದಿರುವಿಕೆಯು ಯಾವ ಪದಾರ್ಥದ ಸ್ವಭಾವವೂ ಅಲ್ಲ. ಪದಾರ್ಥವು ಎಲ್ಲಿ ಜ್ಞಾನಕ್ಕೆ ಗೋಚರವಾಗುತ್ತದೆಯೋ ಆಗ ಅದು ತನ್ನ ಪ್ರಕಾಶಕವಾದ ಚೈತನ್ಯದಿಂದ ಏಕೀಭವಿಸಿ ಚೈತನ್ಯಸ್ವರೂಪವೇ ಆಗುತ್ತದೆ. ಇದೇ ಆತ್ಮ. ತಿಳಿಯುವ ಶಕ್ತಿಯಿಲ್ಲದಿದ್ದರೆ ತಿಳಿಯುವುದು ಅಸಾಧ್ಯ. ಎರಡಕ್ಕೂ ಮೂಲ ಒಂದೇ ಆಗಿರುವುದರಿಂದ ವೇದ್ಯ, ವೇದಕ, ಗ್ರಾಹ್ಯ, ಗ್ರಾಹಕ ಎನ್ನುವ ಭೇದ ವ್ಯವಹಾರಗಳು ತತ್ತ್ವತಃ ಅಭಿನ್ನಗಳಾಗಿವೆ. ಈ ಕಾರಣಗಳಿಂದ ಆತ್ಮನು ಸರ್ವಮಯನಾಗಿರುವನು.

ವಿಶ್ವದ ಸ್ವಭಾವವು ಚೈತನ್ಯವೇ ಆಗಿರುವುದರಿಂದ ಈ ವಿಷಯವನ್ನು ತಿಳಿಸು ವುದಕ್ಕೆ ಯಾವ ಪ್ರಮಾಣವೂ ಸಮರ್ಥವಾಗಲಾರದು. ಪ್ರಮಾಣ ಅದರ ಅಸ್ತಿತ್ವ, ವ್ಯಾಪ್ತಿ, ಫಲ ಮೊದಲಾದುವುಗಳೆಲ್ಲ ಚೈತನ್ಯಕ್ಕೆ ಅಧೀನಗಳಾಗಿರುತ್ತವೆ. ಇದನ್ನು ಸಮರ್ಥಿಸುವುದಕ್ಕೆ ಈಗ ನಿರೂಪಿಸಿದ ಯುಕ್ತಿಗಳೇ ಸಾಕಾಗಿವೆ. ಇದನ್ನು ಬೇರೆ ಯಾವ ಕಾರಣದಿಂದಲೂ ತಿರಸ್ಕರಿಸಲು ಸಾಧ್ಯವಿಲ್ಲ. ಮನುಷ್ಯನು ತನ್ನ ನೆರಳನ್ನು ಹೇಗೆ ತಾನು ದಾಟಲಾರನೋ ಅದೇ ರೀತಿಯಲ್ಲಿ ಪ್ರಮಾಣಗಳಿಂದ ಈ ಚೈತನ್ಯ ಸ್ವರೂಪವನ್ನು ಸಿದ್ಧಿಸುವುದಕ್ಕಾಗುವುದಿಲ್ಲ. ಚೈತನ್ಯವು ಸ್ವಯಂಪ್ರಕಾಶವಾದದ್ದು, ಸರ್ವತ್ರ ಪ್ರಕಾಶಿಸು ವಂಥಾದ್ದು, ಪರಮಾತ್ಮ ಸದ್ರೂಪವಾದದ್ದು.

ಇದುವರೆಗೂ ಹೇಳಿದ ಯುಕ್ತಿಗಳಿಂದ ಚಿತ್ಪ್ರಕಾಶಕ್ಕಿಂತ ಬೇರೆಯಾಗಿರುವುದು ಯಾವುದೂ ಇಲ್ಲವೆಂದು ಸಿದ್ಧವಾಯಿತು.

ಅವತರಣಿಕೆ—ಸೃಷ್ಟಿಕ್ರಮದಲ್ಲಿ ತರತಮಭಾವಗಳುಂಟಾಗುವುದಕ್ಕೂ ಬೇರೆ ಬೇರೆ ವ್ಯಕ್ತಿಗಳಲ್ಲಿ ಜ್ಞಾನ ಸಂಕೋಚ ವಿಕಾಸಗಳುಂಟಾಗುವುದಕ್ಕೂ ಕಾರಣ ಯಾವುದು

ಎಂಬ ಶಂಕೆಯು ಇದ್ದೇ ಇರುತ್ತದೆ. ಇದಕ್ಕೆ ಪರಿಹಾರರೂಪವಾದ ಉತ್ತರವನ್ನು "ಜ್ಞಾನಂ ಬಂಧಃ" ಎಂಬ ಸೂತ್ರದಲ್ಲಿ ಸೂಚಿಸಿದೆ.

ಜ್ಞಾನಂ ಬಂಧಃ ||೨||

ಜ್ಞಾನವು ಹೇಗೆ ಬಂಧಕವಾಗುವುದು ?
ಆಣವ ಮಲದ ಎರಡು ಲಕ್ಷಣಗಳು

ಇದುವರೆಗೂ ಹೇಳಿದ ಯುಕ್ತಿಗಳಿಂದ ಚಿತ್ಪ್ರಕಾಶಕ್ಕಿಂತ ಬೇರೆಯಾಗಿರುವುದು ಯಾವುದೂ ಇಲ್ಲವೆಂದು ನಿರೂಪಿಸಿದ್ದಾಯಿತು. ಸೃಷ್ಟಿಕ್ರಮದಲ್ಲಿ ತರತಮ ಭಾವ ಗಳುಂಟಾಗುವುದಕ್ಕೂ ಬೇರೆ ಬೇರೆ ವ್ಯಕ್ತಿಗಳಲ್ಲಿ ಜ್ಞಾನ ಸಂಕೋಚ ವಿಕಾಸಗಳ ವ್ಯತ್ಯಾಸಕ್ಕೂ ಕಾರಣವು ಯಾವುದು ಎಂಬ ವಿಷಯವನ್ನು ವಿಮರ್ಶಿಸಬೇಕಾಗುತ್ತದೆ. ಇದಕ್ಕೆ ಪರಿಹಾರವನ್ನು "ಜ್ಞಾನಂ ಬಂಧಃ" ಎಂಬ ಸೂತ್ರದಲ್ಲಿ ಸೂಚಿಸಿದ್ದಾರೆ. ಹಿಂದೆ ಹೇಳಿದ ಯುಕ್ತಿಗಳಿಂದ ಎಲ್ಲವೂ ಚಿತ್ಪ್ರಕಾಶಕ್ಕಿಂತ ಬೇರೆಯಲ್ಲವೆಂದು ಸಿದ್ಧವಾಗುತ್ತದೆ. ಭೇದವಾದಿಗಳು ಸಂಕೋಚ ವಿಕಾಸಗಳಿಗೆ ಮತ್ತು ಸುಖದುಃಖಾನುಭವಗಳಿಗೆ ಕಾರಣ ವಾಗಿರುವ ಮಲವು ಹೇಗೆ ಚಿತ್ಪ್ರಕಾಶದಲ್ಲಿ ಇದ್ದೀತು ಎಂದು ಆಕ್ಷೇಪಿಸುತ್ತಾರೆ. ಈ ಸಂಪ್ರದಾಯದಲ್ಲಿ ಮಲವೆಂದರೆ ಅಖ್ಯಾತಿ. ಇದನ್ನೇ ಅಜ್ಞಾನವೆಂದು ಕರೆಯುವರು. ಇದು ಸ್ವಸ್ವರೂಪವನ್ನು ಆಚ್ಛಾದಿಸುವುದರ ಮೂಲಕ ಬೇರೆ ತಿಳಿವಳಿಕೆಯನ್ನುಂಟು ಮಾಡುತ್ತದೆ. ಇದಕ್ಕೆ ಆಣವ ಮಲವೆಂದು ಹೆಸರು. ಜೀವಾತ್ಮನಿಗೆ ಭೇದಜ್ಞಾನ ವನ್ನುಂಟುಮಾಡಿ ಮಾಯೆಯಿಂದ ಮೊದಲುಗೊಂಡು ಪೃಥ್ವೀವರೆಗಿರುವ ತತ್ತ್ವಗಳ ರೂಪವಾಗಿರುವ ಸ್ಥೂಲಸಂಬಂಧವನ್ನುಂಟುಮಾಡುವುದು ಮಾಯೀಯ ಮಲ. ಶರೀರ, ಪ್ರಾಣ, ಪುರ್ಯಷ್ಟಕ ಸಂಬಂಧಗಳಿಂದ ಬದ್ಧಾವಸ್ಥೆಯಲ್ಲಿರುವ ಜೀವಾತ್ಮನು ಶುಭಾಶುಭ ಕರ್ಮಗಳನ್ನು ಆಚರಿಸುತ್ತಾನೆ. ಅವುಗಳ ಫಲಗಳನ್ನನುಭವಿಸುತ್ತಾನೆ. ಇದು ಕಾರ್ಮ ಮಲ. ವಿಶ್ವದ ಸೃಷ್ಟಿಸ್ಥಿತಿ ಸಂಹಾರಗಳು ಇವುಗಳೊಡನೆ ಕೂಡಿರುತ್ತವೆ. ಮಲ, ಅಜ್ಞಾನ, ಸಂಕೋಚ ಮೊದಲಾದ ಪದಗಳಿಗೆ ಇಲ್ಲಿ ಒಂದೇ ಅರ್ಥ. ಪರಮೇಶ್ವರನು ಸ್ವಾತಂತ್ರ್ಯ ಶಕ್ತಿಯಿಂದ ವಿಶ್ವವನ್ನು ಪ್ರಕಾಶಪಡಿಸುತ್ತಾನೆ. ಹೀಗೆ ಪ್ರಕಾಶಪಡಿಸಿದ ವಿಶ್ವದ ವಿವಿಧ ಸ್ವರೂಪಗಳನ್ನು ತನ್ನ ಶಕ್ತಿಯಿಂದಲೇ ಮರೆಮಾಚುವನು. ಆಕಾಶದಂತೆ ನಿರ್ಮಲವಾಗಿರುವ ತನ್ನ ಸ್ವರೂಪದಲ್ಲಿ ಅನಾಶ್ರಿತ ಶಿವನ ಮೊದಲು ಮಯಾ ಪ್ರಮಾತೃವರೆಗೂ ಸಂಕೋಚಗಳು ಬಗೆಬಗೆಯಾಗಿರುತ್ತವೆ. ಇವುಗಳು ಶಿವನಿಂದ ಅಭಿನ್ನವಾಗಿ ಭೇದವನ್ನು ತಿಳಿಯದಿರುವ ಅಖ್ಯಾತ್ಯಾತ್ಮಕವಾದ ಜ್ಞಾನ ವಿಶೇಷಗಳು. ಇದರಿಂದ ಬದ್ಧಜೀವನು "ಅಪೂರ್ಣಂ ಮನ್ಯತಾ" ತಾನು ಪರಿಪೂರ್ಣ ನಲ್ಲವೆಂದು ತಿಳಿಯುವನು. ಇದನ್ನೇ ಆಣವ ಮಲವೆನ್ನುವುದು. ಇದು ಸಂಕುಚಿತವಾದ ಜ್ಞಾನರೂಪವಾದ ಬಂಧನವಾಗಿದೆ. ಇದು ಕೇವಲ ಸಂಕೋಚರೂಪವಾಗಿದ್ದರೂ ಚಿತ್ಪ್ರಕಾಶಕ್ಕಿಂತ ಬೇರೆಯಲ್ಲ. ವಿಶ್ವಸೃಷ್ಟಿ ಮರೆಮಾಚಲು ಪರಮೇಶ್ವರನು ಮಹಾ

ಮಾಯಾಶಕ್ತಿಯಿಂದ ಸಂಕೋಚವನ್ನುಂಟುಮಾಡುವನು ಎಂಬುದು ಭಟ್ಟ ಉತ್ಪಲಾಚಾರ್ಯರ ಅಭಿಪ್ರಾಯ.

ಹೀಗೆ ಆತ್ಮನ ಸ್ವರೂಪದಲ್ಲಿ ತಾನು ಆತ್ಮನಲ್ಲವೆಂಬ ಅಭಿಮಾನವೇ ಅಖ್ಯಾತಿ ಎನಿಸುತ್ತದೆ. ಅಖ್ಯಾತಿಯೆಂದರೆ ಎರಡನ್ನು ಒಂದಾಗಿ ತಿಳಿಯುವುದು ಅಥವಾ ಒಂದನ್ನು ಎರಡಾಗಿ ತಿಳಿಯುವುದು. ಇದು ಜ್ಞಾನರೂಪವಾಗಿರುವುದರಿಂದ ಈ ಅಜ್ಞಾನಾತ್ಮಕವಾದ ಜ್ಞಾನವೇ ಬಂಧವೆನಿಸುತ್ತದೆ. ಇಷ್ಟು ಮಾತ್ರವಲ್ಲದೆ ಆತ್ಮಸ್ವರೂಪವಾಗದಿರುವ ಶರೀರವೇ ಮೊದಲಾದ ತತ್ತ್ವಗಳಲ್ಲಿ ನಾನು ಎಂಬ ಅಭಿಮಾನವನ್ನು ಪಡೆಯುವಿಕೆಯು ಅಜ್ಞಾನ ಮೂಲಕವಾದ ಜ್ಞಾನವೇ ಆಗಿರುತ್ತದೆ. ಆದುದರಿಂದ ಅದೂ ಬಂಧವೇ.

ವಿಶ್ವವೆಲ್ಲಾ ಸ್ವಾತಂತ್ರ್ಯಾತ್ಮಕವಾದ ಚಿತ್ಸ್ವರೂಪ ವಿಲಾಸ. ಇಲ್ಲಿ ಎಲ್ಲಾ ಚಿದಾತ್ಮಕವಾಗಿದ್ದರೂ ಸ್ವಾತಂತ್ರ್ಯವು ಸ್ಫುರಿಸದಿರುವ ವಿಜ್ಞಾನಾಕಲನಂತೆ ತಾನು ಪರಿಪೂರ್ಣನಲ್ಲವೆಂದು ತಿಳಿಯುವ ಸಂಕೋಚ ಜ್ಞಾನವು ಒಂದು ಬಗೆಯಾಗಿರುತ್ತದೆ. ಹಾಗೆಯೇ ಬೇರೆಯಾಗಿರುವ ದೇಹಾದಿಗಳಲ್ಲಿ ಜಡರೂಪವು ತೋರುತ್ತಿದ್ದರೂ ತಾನೇ ದೇಹವೆಂದು ಶರೀರಾದಿಗಳನ್ನು ತಿಳಿಯುವಿಕೆಯ ಜ್ಞಾನವು ಮತ್ತೊಂದು ಬಗೆಯಾಗಿರುತ್ತದೆ. ತತ್ತ್ವತಃ ಶರೀರವು ತನ್ನ ಸ್ವರೂಪಕ್ಕಿಂತ ಬೇರೆಯಾಗಿದ್ದರೂ ಆ ಶರೀರವೇ ತಾನು ಎಂಬ ತಪ್ಪು ತಿಳಿವಳಿಕೆ ಇನ್ನೊಂದು ಬಗೆ. ಒಟ್ಟಿನಲ್ಲಿ ಈ ರೀತಿಯಾಗಿ ಆಣವಮಲವು ಇಲ್ಲದೇ ಇರುವುದನ್ನು ಇರುವಂತೆಯೂ ಇರುವುದನ್ನು ಇಲ್ಲದಿರುವಂತೆಯೂ ತೋರಿಸುತ್ತದೆ.

ಸ್ವಾತಂತ್ರ್ಯಹಾನಿರ್ಬೋಧಸ್ಯ ಸ್ವಾತಂತ್ರ್ಯಸ್ಯಾಪ್ಯಬೋಧತಾ ।
ದ್ವಿಧಾಣವಂ ಮಲಮಿದಂ ಸ್ವಸ್ವರೂಪಾಪಹಾನಿತಃ ॥

—ಈಶ್ವರ ಪ್ರತ್ಯಭಿಜ್ಞಾ

ಅವತರಣಿಕೆ—ಸಂಕ್ಷೇಪವಾಗಿ ಹೇಳುವುದಾದರೆ ಸಂಸಾರಕ್ಕೆ ಕಾರಣವಾಗಿರುವ ಅಜ್ಞಾನವೇ ಮಲ. ಅಜ್ಞಾನದಿಂದಲೇ ಬಂಧ. ಅದರಿಂದಲೇ ಸೃಷ್ಟಿ ಮತ್ತು ಸಂಹಾರಗಳು ನಡೆಯುವುವು.

ಯೋನಿರ್ವರ್ಗಃ ಕಲಾಶರೀರಂ ॥೩॥

ಮಾಯೀಯ ಮತ್ತು ಕಾರ್ಮಮಲದ ಲಕ್ಷಣಗಳು

ಯೋನಿ ಎಂದರೆ ಮಾಯಾ, ಮಾಯಾ ವಿಶ್ವಕ್ಕೆ ಕಾರಣವಾದ ವಸ್ತು.

ಮೇಲೆ ಹೇಳಿದ ಆಣವಮಲದ ಸಂಬಂಧ ಒಂದೇ ಬಂಧನವಲ್ಲ. ಈ ವಿಶ್ವಕ್ಕೆ ಕಾರಣವಾದ ಮಾಯೆಯ ಸಂಬಂಧವಾದ ತತ್ತ್ವಕ್ರಮವು ಪರಂಪರೆಯಾಗಿಯೂ, ಸಾಕ್ಷಾತ್ತಾಗಿಯೂ ಬಂಧಕ್ಕೆ ಕಾರಣವಾಗುತ್ತದೆ. ಆ ಮಾಯೆಯ ತತ್ತ್ವಸಮೂಹದಿಂದ ಅನೇಕ ಲೋಕಗಳು ರೂಪುಗೊಂಡಿವೆ. ಬದ್ಧಜೀವಿಗಳು ಸುಖದುಃಖಗಳನ್ನನು-

ಭವಿಸುವುದಕ್ಕೆ ಸಾಧನಗಳಾಗಿರುವ ಶರೀರಗಳುಂಟಾಗಿವೆ. ಕಲಾತತ್ತ್ವ ಮೊದಲು ಭೂಮಿತತ್ತ್ವದವರೆಗಿರುವ ತತ್ತ್ವಸಮೂಹವೇ ಕಿಂಚಿದ್ ಜ್ಞಾತೃತ್ವ ಕಿಂಚಿತ್ಕರ್ತೃತ್ವಗಳಿಗೆ ಕಾರಣವಾಗುತ್ತದೆ. ಇದರ ಸ್ವರೂಪವನ್ನೇ ಮಾಯೀಯಮಲವೆನ್ನುತ್ತೇವೆ. ಯಾವುದು ಸ್ವಸ್ವರೂಪಾವೇಶದಿಂದ ಇತರ ವಸ್ತುಗಳನ್ನು ತನ್ನಹಾಗೆ ಸಂಕುಚಿತವಾಗಿರುವಂತೆ ನಿಯಮಿಸುತ್ತದೆಯೋ ಹಾಗೆಯೇ ನಡೆಸುತ್ತದೆಯೋ ಅದೇ ಕಲಾ ಎನ್ನಿಸಿಕೊಳ್ಳುವುದು. ಯಾರಿಗೆ ಯಾವ ಶರೀರವು ಅವನ ವ್ಯಕ್ತಿತ್ವವನ್ನು ಪ್ರತಿಫಲಿಸುತ್ತದೆಯೋ ಅದು ಆ ಬದ್ಧಜೀವಾತ್ಮನಿಗೆ ಕಲಾಶರೀರ. ಕಲಾಶರೀರದಿಂದುಂಟಾಗುವ ಕಾರ್ಮಮಲವೂ ಬಂಧನವಾಗಿದೆ.

ಸ್ವಭಾವದಿಂದ ಸ್ವಯಂಪ್ರಕಾಶವಾಗಿರುವ ಚಿತ್ಪ್ರಕಾಶ ಸಂಕೋಚವು ಆಣವಮಲದಿಂದಾಗುತ್ತದೆ. ಮಾಯೀಯ ತತ್ತ್ವಗಳ ಸಂಬಂಧದಿಂದುಂಟಾಗುವ ಕಿಂಚಿತ್ಕರ್ತೃತ್ವಾದಿ ಧರ್ಮಗಳು ಮಾಯೀಯ ಮಲದ ಫಲಗಳು. ಕಲಾದಿ ಭೂಮಿವರೆಗಿರುವ ತತ್ತ್ವ ಸಮೂಹದಿಂದ ರೂಪುಗೊಂಡಿರುವುದು ಶರೀರ. ಇದರ ವ್ಯಾಪಾರ ಮತ್ತು ವ್ಯವಹಾರವೇ ಶುಭಾಶುಭ ರೂಪವಾದ ಫಲಗಳಿಗೆ ಸಾಧನವಾಗಿರುತ್ತದೆ. ಇದೇ ಕಾರ್ಮಮಲ.

'ಧರ್ಮಾಧರ್ಮಾತ್ಮಕಂ ಕರ್ಮ ಸುಖದುಃಖಾದಿಲಕ್ಷಣಂ'

ಈ ಮೂರು ಮಲಗಳ ಪೈಕಿ ಮೊದಲನೆಯದು ಆಣವ ಮಲ. ಇದರಿಂದ ಸಂಕೋಚವುಂಟಾಗದಿದ್ದರೆ ಇತರ ಎರಡು ಮಲಗಳಿಗೆ ಅವಕಾಶವಿಲ್ಲ. ಈ ಆಣವ ಮಲವಿದ್ದಲ್ಲಿ ಮಿಕ್ಕ ಎರಡು ಮಲಗಳೂ ಇದರ ಸಂಕೋಚವನ್ನು ದೃಢಪಡಿಸುತ್ತವೆ. ತಿಳಿವಳಿಕೆಯ ಸ್ವಾತಂತ್ರ್ಯದ ಹಾನಿ, ಭೇದಜ್ಞಾನ, ಶುಭಾಶುಭ ಕರ್ಮಾಚರಣೆ ಇವು ಮೂರು ಮಲಗಳ ಪ್ರಭಾವ. ಜೀವನು ಬದ್ಧಾವಸ್ಥೆಯಲ್ಲಿ ಈ ಮೂರು ಮಲಗಳಿಂದ ಕೂಡಿದ್ದಾನೆಂಬುದಕ್ಕೆ ಮೇಲೆ ಹೇಳಿದ ಮೂರು ಕುರುಹುಗಳು. ಮೇಲೆ ಹೇಳಿದ ವಿವರಣೆಯಿಂದ ಅಜ್ಞಾನಾತ್ಮಕವಾದ ಜ್ಞಾನ, ತತ್ತ್ವಗಳ ರೂಪವಾದ ಶರೀರ, ಶುಭಾಶುಭ ಕರ್ಮಾಚರಣೆ ಇವು ಮೂರೂ ಬಂಧನಗಳು.

ಚೈತನ್ಯವು ಮಲಗಳಿಂದ ಸಂಕುಚಿತವಾಗಿರುತ್ತದೆ; ಕಲಾ ಮತ್ತು ವಿದ್ಯಾತತ್ತ್ವಗಳಿಂದ ಆಶ್ರಿತವಾಗಿರುತ್ತದೆ; ರಾಗದಿಂದ ರಂಜಿತವಾಗಿರುತ್ತದೆ; ಕಾಲದಿಂದ ಕೂಡಿರುತ್ತದೆ; ನಿಯತಿಯಿಂದ ನಿರ್ಬಂಧಿಸಲ್ಪಟ್ಟು "ನಾನು" ಎಂಬ ಭೇದಜ್ಞಾನವನ್ನುಂಟಾಗಿರುತ್ತದೆ. ಸತ್ತ್ವರಜಸ್ತಮೋಗುಣಗಳಿಂದ ಕೂಡಿದ ಪ್ರಧಾನವಾದ ಆಶಯವನ್ನೇ ತನ್ನ ಐಶ್ವರ್ಯವನ್ನಾಗಿ ತಿಳಿಯುತ್ತದೆ. ಹಾಗೆಯೇ ಬುದ್ಧಿ ತತ್ತ್ವದಲ್ಲಿದ್ದು ಅಹಂಕಾರದಿಂದ ಆವರಿಸಲ್ಪಟ್ಟಿರುತ್ತದೆ. ಮನಸ್ಸು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ತನ್ಮಾತ್ರಗಳು, ಪಂಚಭೂತಗಳು ಇವುಗಳ ಮೂರ್ತೀಭೂತ ಸ್ವರೂಪವೇ ಬದ್ಧಜೀವಾತ್ಮನ ಬದುಕಾಗಿ ಪರಿಣಮಿಸುತ್ತದೆ.

ಅವತರಣಿಕೆ.—ಅಜ್ಞಾನಾತ್ಮಕವಾದ ಜ್ಞಾನವು ಬಂಧಕವೆಂದು ನಿರೂಪಿಸಲ್ಪಟ್ಟಿತು. ತತ್ತ್ವಸಮುದಾಯವಾದ ಶರೀರವು ಬಂಧಕವೆನಿಸಿತು. ಶುಭಾಶುಭ ಕರ್ಮಗಳು ಬಂಧಕಗಳಾದವು. ಈಗ ಮಲಗಳು ಹೇಗೆ ಬಂಧಕಗಳಾಗುವುವು ?

ಜ್ಞಾನಾಧಿಷ್ಠಾನಂ ಮಾತೃಕಾ ॥೪॥

ಮಲಗಳು ಹೇಗೆ ಬಂಧಕಗಳಾಗುವುವು ?

ವಾಚ್ಯವಾಚಕ ಭಾವ

ತಾನು ಅಪೂರ್ಣನೆಂಬ ತಿಳಿವಳಿಕೆ, ಭೇದಜ್ಞಾನ, ಶುಭಾಶುಭ ಕರ್ಮವಾಸನೆ ಈ ಮೂರೂ ಆಣವ, ಮಾಯೀಯ, ಕಾರ್ಮಮಲಗಳ ಪರಿಣಾಮವಾಗಿರುವ ಸಂಕುಚಿತವಾಗಿರುವ ಜ್ಞಾನರೂಪಗಳು. ಈ ಸಂಕುಚಿತವಾದ ತಿಳಿವಳಿಕೆಯು ಅಕಾರಾದಿ ಕ್ಷಕಾರದ ವರೆಗಿರುವ ಮಾತೃಕಾ ಚಕ್ರದಿಂದ ಅಂದರೆ ಅಕ್ಷರ ಸಮೂಹದಿಂದ ಉಂಟಾಗುತ್ತದೆ. ನಮ್ಮ ಅಭಿಪ್ರಾಯಗಳು, ಉದ್ವೇಗಗಳು, ಭಾವನೆಗಳು ಇವೇ ಮೊದಲಾದುವುಗಳನ್ನು ವ್ಯಕ್ತಪಡಿಸುವುದು ಅಕ್ಷರಸಮೂಹವೇ ಆಗಿರುತ್ತದೆ. ಎಲ್ಲಾ ಭಾಷೆಗಳೂ, ಪಾರಿಭಾಷಿಕ ಪದಗಳೂ, ಸಂಜ್ಞೆಗಳೂ ಈ ಅಕ್ಷರ ಮತ್ತು ಶಬ್ದರೂಪಗಳನ್ನು ಮೀರಲಾರವು. ಅಕ್ಷರದಿಂದ ಪದ, ಪದಗಳಿಂದ ಅರ್ಥ ಮತ್ತು ತಾತ್ಪರ್ಯ, ಇವುಗಳಿಂದ ಮನಸ್ಸಿನಲ್ಲಿ ಒಂದು ಚಿತ್ರ. ಇವುಗಳ ದೆಶೆಯಿಂದ ಸಂತೋಷ ಸಂತಾಪಗಳು ಉಂಟಾಗುವುವು. ಇದು ಅನುಭವ ಸಿದ್ಧವಾದ ವಿಷಯ. ಇಷ್ಟು ಪರಿಣಾಮಗಳಿಗೂ ಕಾರಣವಾಗಿರುವ ಮಾತೃಕಾ ಶಕ್ತಿಯೇ— ಅಕ್ಷರಸಮೂಹವೇ — ವಿಶ್ವಕ್ಕೂ ಮೂಲಕಾರಣ. ಈ ಶಕ್ತಿಯು ಸಂಕೋಚಕ್ಕೂ ವಿಕಾಸಕ್ಕೂ ಕಾರಣವಾಗಿದೆ. ಇದು ಸಂಕುಚಿತವಾದ ತಿಳಿವಳಿಕೆಯನ್ನುಂಟುಮಾಡುತ್ತಾ ನಾನು ಅಪೂರ್ಣ, ನಾನು ಕೃಶವಾಗಿದ್ದೇನೆ ಇವೇ ಮುಂತಾದ ಭೇದಜ್ಞಾನಗಳಿಗೆ ಕಾರಣವಾಗಿರುತ್ತದೆ. ಹಾಗೆಯೇ ಅನೇಕ ವಿಕಲ್ಪಗಳನ್ನು ತೋರ್ಪಡಿಸುತ್ತಾ ಸ್ಥೂಲ ಮತ್ತು ಸೂಕ್ಷ್ಮವಾದ ಶಬ್ದವನ್ನು ಪರಾಮರ್ಶಿಸುತ್ತದೆ. ಈ ಭೇದಜ್ಞಾನವನ್ನುಂಟುಮಾಡುವಂತಹ ವಾಚಕಗಳಾಗಿರುವ ಶಬ್ದಗಳ ಮೂಲಕ ದುಃಖ, ಆಶ್ಚರ್ಯ, ಸಂತೋಷ, ಆಸೆ ಮೊದಲಾದ ರೂಪಗಳನ್ನು ಬಾರಿ ಬಾರಿಗೂ ವ್ಯಕ್ತಿಯ ಭಾವನಾಂಬರದಲ್ಲಿ ಉಂಟುಮಾಡುತ್ತದೆ. ಇದರಿಂದ ವ್ಯಕ್ತಿಗಳು ಮೋಹಗೊಳ್ಳುವರು. ಈ ಶಕ್ತಿಯು ಚಿದ್ಗಗನದಲ್ಲಿದ್ದರೂ ಲಿಪಿಕ್ರಮದಿಂದ ಅಕಾರಾದಿ ಕ್ಷಕಾರಾಂತದವರೆಗಿರುವ ಮಾತೃಕಾ ರೂಪದಿಂದ ವಾಚ್ಯವಾಚಕ ದ್ವಾರಾ ಜ್ಞಾನಕ್ಕೆ ಕಾರಣವಾಗಿದೆ. ಈ ಜ್ಞಾನವೇ ಶೋಕ, ವಿಸ್ಮಯ, ಹರ್ಷ, ರಾಗಗಳನ್ನುಂಟುಮಾಡುವುದು. ಇದು ಅನೇಕ ಲಿಪಿ ಕ್ರಮಗಳ ಸನ್ನಿವೇಶದಿಂದ ಅನೇಕ ರೂಪಗಳನ್ನು ಪಡೆದು ವಿಶ್ರಾಂತಿಯಿಲ್ಲದೆ ಬಹಿರ್ಮುಖವಾದ ಜ್ಞಾನವಾಗಿ ವ್ಯವಹರಿಸುತ್ತಿರುತ್ತದೆ. ಅಂತಹ ಪ್ರಪಂಚದಲ್ಲಿ ಅಕಾರಾದಿ ಕ್ಷಕಾರಾಂತ ವಾಚ್ಯವಾಚಕ ಭಾವವಿಲ್ಲ. ವಾಚ್ಯವಾಚಕ ಭಾವವಿಲ್ಲದೆ ಇರುವುದರಿಂದ ವಿಕಲ್ಪವಿಲ್ಲ. ವಿಕಲ್ಪವೇ ಭೇದಜ್ಞಾನವನ್ನು ಹುಟ್ಟಿಸುವಂಥಾದ್ದು.

ಅಕ್ಷರಗಳಿಂದ ಅಕ್ಷರಗಳಿಲ್ಲದೆ ಇರುವ 'ಪರಾ' ಸ್ಥಿತಿಗೆ ಹೋಗುವ ಉಪಾಸನಾ ಕ್ರಮದಿಂದ-ಸವಿಕಲ್ಪದಿಂದ ನಿರ್ವಿಕಲ್ಪಕ್ಕೆ ಹೋಗಬಹುದು. ಆಗ ಸುಖವೂ ಇಲ್ಲ, ದುಃಖವೂ ಇಲ್ಲ. ಮಂತ್ರ ಜಪದಲ್ಲಿ ವಾಚ್ಯವಾಚಕ ಭಾವವಿಲ್ಲ, ವ್ಯವಹಾರಭಾವವಿಲ್ಲ. ಆಕಾರವಿಲ್ಲದ ಆಕಾರವನ್ನು ಹುಟ್ಟಿಸುವುದು ಮಂತ್ರ. ಮಂತ್ರಜಪದಲ್ಲಿ ಪರಮಾರ್ಥ ಭಾವವಿದೆ. ಸವಿಕಲ್ಪದಿಂದ ಅವಿಕಲ್ಪಕ್ಕೆ ಹೋಗುವುದೇ ಮಂತ್ರದ ಉದ್ದೇಶ. ಬೇರೆಬೇರೆ ರೂಪದಿಂದ ಹೊರಹೊಮ್ಮುತ್ತಾ ಅಂಬಾ, ಜ್ಯೇಷ್ಠ, ರೌದ್ರಿ, ವಾಮ ಎಂಬ ನಾಲ್ಕು ಭೇದಗಳನ್ನು ಪಡೆದಿರುತ್ತದೆ. ಅಂಬಾ ಎಂದರೆ ಭೇದಭಾವಗಳು ಅಂಕುರಿಸದೆ ಸಮರಸ ವಾಗಿದ್ದು ಭೇದಜ್ಞಾನವನ್ನುಂಟುಮಾಡಲಿಕ್ಕೆ ಉನ್ಮುಖವಾಗಿರುವ ಪಾರಮೇಶ್ವರೀಶಕ್ತಿ. ಜ್ಯೇಷ್ಠ ಎಂದರೆ ಅಕ್ಷರ ಸನ್ನಿವೇಶ ರೂಪವಾಗಿರುವ ಅನುಗ್ರಾಹಕ ಶಕ್ತಿ. ರೌದ್ರಿ ಎಂದರೆ ಜಗತ್ತನ್ನು ತನ್ನಲ್ಲಿಯೇ ಲೀನಮಾಡಿಕೊಳ್ಳುವ ಶಕ್ತಿ. ವಾಮ ಎಂದರೆ ಈ ಜಗತ್ತನ್ನು ವಮನ ಮಾಡಿ ಹೊರಹೊಮ್ಮಿಸುವ ಶಕ್ತಿ. ಈ ರೀತಿ ನಾಲ್ಕು ಭೇದಗಳಿಂದ ವ್ಯವಹರಿ ಸುತ್ತಿರುವ ಮಾತೃಕಾ ಶಕ್ತಿಯೇ ಅಭಿವ್ಯಕ್ತರೂಪದಲ್ಲಿ ಅಕ್ಷರಗಳಾಗಿರುತ್ತದೆ. ಅನಭಿ ವ್ಯಕ್ತ ಸ್ಥಿತಿಯಲ್ಲಿ ಜ್ಞಾನರೂಪವಾಗಿರುತ್ತದೆ. ಅಕ್ಷರಗಳಿಂದ ಜ್ಞಾನ, ಜ್ಞಾನದಿಂದ ಅಕ್ಷರಗಳ ಅಭಿವ್ಯಕ್ತಿ. ಈ ಜ್ಞಾನವು ಮಾತೃಕಾ ಶಕ್ತಿಯ ಪ್ರಭಾವದಿಂದ ಒಂದು ಕ್ಷಣವೂ ವಿಶ್ರಾಂತಿಯಿಲ್ಲದೆ ಬಹುಮುಖವಾಗಿ ಹೊರಹೊಮ್ಮುತ್ತಲಿರುತ್ತದೆ. ಸ್ವಸ್ವರೂಪ ಜ್ಞಾನವನ್ನು ಮರೆಮಾಚುತ್ತಲಿರುತ್ತದೆ.

'ಸ್ವರೂಪಾವರಣೇ ಚಾಸ್ಯ ಶಕ್ತಯಃ ಸತತೋತ್ಥಿತಾಃ'

ಆದುದರಿಂದ ಈ ಶಕ್ತಿಗಳು ಬಂಧಕಗಳು.

ಅವತರಣಿಕೆ--ಈ ವಿಧವಾದ ಬಂಧವನ್ನು ಕಳೆಯಲು ಮಾಡುವ ಉಪಾಯವೇ ಉದ್ಯಮ.

ಉದ್ಯಮೋ ಭೈರವಃ

ಬಂಧಕಗಳಾಗಿರುವ ಮೂರು ಮಲಗಳ ನಿವಾರಣೆಗೆ ಕಾರಣವಾಗಿರುವ ಶಾಂಭವ ಸಮಾವೇಶದ ಉಪದೇಶ

ಈ ಶಕ್ತಿಪ್ರಸರರೂಪವಾದ ವಿಮರ್ಶಮಯವಾದ ಚಿಚ್ಛಕ್ತಿಯು ಶಕ್ತಿಪಾತದ ಪ್ರಭಾವದಿಂದ ಸ್ವಸ್ವರೂಪ ವಿಕಾಸದ ಕಡೆ ಸ್ಫುರಿಸುತ್ತದೆ. ಅದರಿಂದ ಪ್ರತಿಭಾಪ್ರಕಾಶ ರೂಪವಾಗಿ ಸ್ವಸ್ವರೂಪ ಸಾಕ್ಷಾತ್ಕಾರವಾಗಿರುವ ಪ್ರಯತ್ನವೇ ಉದ್ಯಮ.

ಅಕ್ಷರ ರಾಶಿಯು ಭೇದ ಜ್ಞಾನಗಳನ್ನುಂಟುಮಾಡುವುದರಿಂದ ಹರ್ಷ ಶೋಕಗಳಿಗೆ ಕಾರಣವಾಗುವಂತೆಯೇ ಭೈರವಾತ್ಮಕವಾದ ಸ್ವಸ್ವರೂಪದ ಅವಗತಿ, ಅಧಿಗತಿ, ಅನುಸಂಧಾ ನಗಳಿಗೂ ಕಾರಣವಾಗುತ್ತದೆ. ಈ ಆ ರೀತಿಯ ಅಂತರ್ಯಾತೆಯ ಅಥವಾ ಸ್ವಾತ್ಮ ವಿಮರ್ಶೆಯ ಅನುಸಂಧಾನವೇ ಪ್ರಯತ್ನ.

ಈ ಪ್ರಯತ್ನವು ಎಲ್ಲಾ ಶಕ್ತಿಭೇದಗಳನ್ನೂ ಸಮವಾಗಿ ನೋಡುತ್ತದೆ. ನವಿಲಿನ ಮೊಟ್ಟೆಯಂತೆ ಎಲ್ಲಾ ವಿಚಿತ್ರಗಳನ್ನೂ ಒಳಗೊಂಡಿರುತ್ತದೆ. ಎಲ್ಲಾ ವಿಕಲ್ಪಗಳನ್ನೂ ತನ್ನಲ್ಲಿಯೇ ಭಿನ್ನಭಿನ್ನವಾಗಿ ಅಡಗಿಸಿಕೊಂಡಿರುತ್ತದೆ. ಈ ಪ್ರಯತ್ನವು ಭೈರವಾತ್ಮಕವಾಗಿರುವ ಸ್ವಸ್ವರೂಪದ ಅಭಿವ್ಯಕ್ತಿಗೆ ಕಾರಣವಾಗಿರುವುದು. ಇದು ಅಂತರ್ಮುಖವಾಗಿ ಈ ತತ್ತ್ವವನ್ನೇ ಅನುಸಂಧಾನಮಾಡುವ ಭಕ್ತನಿಗೆ ವಿಕಾಸವನ್ನುಂಟುಮಾಡುವುದಾಗಿದೆ. ಶಾಂಭವೋಪಾಯ ಸ್ವರೂಪವನ್ನು ಸಂಕ್ಷೇಪವಾಗಿ 'ಮಾಲಿನೀ ವಿಜಯ'ದಲ್ಲಿ ನಿರೂಪಿಸಿರುತ್ತಾರೆ.

> ಅಕಿಂಚಿಚ್ಚಿಂತಕಸ್ಯೈವ ಗುರುಣಾ ಪ್ರತಿಬೋಧತಃ ।
> ಜಾಯತೇ ಯಃ ಸಮಾವೇಶಃ ಶಾಂಭವೋಽಸಾವುದೀರಿತಃ ॥

ಸಾಧಕನು ಮೊದಲು ಯಾವ ವಿಧವಾದ ಯೋಗಾಭ್ಯಾಸವಿಲ್ಲದಿದ್ದರೂ ಇರಬಹುದು. ಪರತತ್ತ್ವವನ್ನು ಕುರಿತು ಅನುಸಂಧಾನಮಾಡದೆಯೂ ಇರಬಹುದು. ಇಂತಹವನಿಗೆ ಗುರುವು ಉಪದೇಶ ಮಾಡಿದ ಒಡನೆಯೇ ಈಶ್ವರ ಸಮಾವೇಶವುಂಟಾಗುತ್ತದೆ. ಇದಕ್ಕೆ ಶಿಷ್ಯನ ಪರಿಪಾಕ, ಗುರುವಿನ ಮಹಿಮೆ ಇವೆರಡೂ ಕಾರಣವಾಗಿರುತ್ತವೆ. ಈ ವಿಧವಾದ ಸಮಾವೇಶವುಂಟಾಗುವುದಕ್ಕೆ "ಶಾಂಭವ"ಎಂದು ಹೆಸರು. ಇಲ್ಲಿ ಗುರುವಿನಿಂದ ಅಂದರೆ ತನ್ನ ಜ್ಞಾನವಿಕಾಸದಿಂದ ಎಂದು ಅರ್ಥಮಾಡಿಕೊಳ್ಳಬೇಕು.

ಅವತರಣಿಕೆ.—ಒಂದು ತಿಳಿವಳಿಕೆಯಿಂದ ಇನ್ನೊಂದು ತಿಳಿವಳಿಕೆಯುಂಟಾಗುವಂತೆ ಆಗುವ ಉನ್ಮೇಷವನ್ನು ಅನುಭವದಿಂದ ಗುರುತಿಸಬೇಕು. ಹೀಗೆ ಪ್ರತಿಭೋನ್ಮೇಷರೂಪವಾದ ಭೈರವ ದಶೆಯನ್ನು ಸಾಧಕನು ಭಾವಿಸಬೇಕು. ಅದಕ್ಕೆ ಪ್ರತಿಬಂಧಕವಾಗಿರುವ ಅಜ್ಞಾನವನ್ನು ಹೋಗಲಾಡಿಸುವ ಉಪಾಯವನ್ನು ಸೂಚಿಸಿದ್ದಾಯಿತು. ಇನ್ನು ಭಾವನಾ ಪ್ರಕರ್ಷದಿಂದ ಜಾಗ್ರದವಸ್ಥೆಯಲ್ಲಿಯೂ ಪ್ರಶಾಂತತಾ ಅನುಭವವನ್ನು ಅನುಭವಿಸುವ ಬಗೆ ಹೇಗೆ?

ಶಕ್ತಿಚಕ್ರಸಂಧಾನೇ ವಿಶ್ವಸಂಹಾರಃ ॥೬॥

ಈ ಸಮಾವೇಶ ಬಲದಿಂದ ಜಾಗ್ರದವಸ್ಥೆಯಲ್ಲಿಯೂ ಭೇದಜ್ಞಾನದ ಉಪಶಮನ

ಈ ಪರಪ್ರತಿಭೆಯ ವಿಕಾಸಕ್ಕಾಗಿ ಆತ್ಮಾನುಸಂಧಾನವು ಹೇಳಲ್ಪಟ್ಟಿತು. ಇದು 'ಉದ್ಯಂ ಕೃತಾ ಸ್ವಭಾವ' ಅಂದರೆ ಮೇಲಕ್ಕೆ ಹೋಗುವುದು ಎಂದರ್ಥ. ಇದು ವಿಕಾಸಮಾರ್ಗ. ಇದನ್ನು ಅಂತರ್ಮುಖತೆಯ ದೃಷ್ಟಿಯಿಂದ ಒಳಗೂ ವ್ಯಾವಹಾರಿಕ ದೃಷ್ಟಿಯಿಂದ ಹೊರಗೂ ಅನುಭವಿಸಬೇಕು. ಈ ದ್ವಿವಿಧ ಭಾವನೆಯಿಂದ ಎಲ್ಲಾ ಶಕ್ತಿ ವಿಲಾಸಗಳೂ ಸೃಷ್ಟಿ, ಸ್ಥಿತಿ, ಪ್ರಳಯಾದಿ ವ್ಯತ್ಯಾಸಗಳಿಗೆ ಕಾರಣವಾಗಿವೆಯೆಂಬುದು ತಿಳಿಯುತ್ತದೆ. ಈ ವ್ಯತ್ಯಾಸವನ್ನತಿಕ್ರಮಿಸಿರುವ ಸ್ಥಿತಿಯೇ 'ಪರಾಶಕ್ತಿ'. ಇದೇ ಅನುತ್ತರೆ. ಇದೇ ಸ್ವಾತಂತ್ರ್ಯಶಕ್ತಿ. ಕ್ರಮವಾಗಿಯೂ, ಅಕ್ರಮವಾಗಿಯೂ, ಉಭಯ

ರೂಪವಾಗಿಯೂ ಹೇಳಲ್ಪಡುತ್ತಲಿರುವ ಅನುತ್ತರಾರೂಪವಾದ ಪರಾಶಕ್ತಿಯು ಇದಕ್ಕೆಲ್ಲಾ ಕಾರಣವಾಗಿದೆಯೆಂದು ಅನುಭವಕ್ಕೆ ಬರುತ್ತದೆ. ಹೀಗೆ ಅನುಭವವನ್ನು ಪಡೆದಿರುವವನಿಗೆ ಆ ಮಹಾಶಕ್ತಿಯು ತನ್ನಲ್ಲಿ ಭೂಮಿಯ ಮೊದಲು ಪರಪ್ರಮಾತೃವಿನ ವರೆಗೂ ಇರುವ ವಿಶ್ವವನ್ನೆಲ್ಲಾ ಹೊರಹೊಮ್ಮಿಸುತ್ತದೆಯೆಂದೂ, ಈ ವಿಶ್ವವೆಲ್ಲಾ ಆ ಶಕ್ತಿಯ ಕ್ರೀಡೆಯೆಂದೂ ವಿಕಾಸವನ್ನು ಪಡೆದಿರುವ ಸಾಧಕನು ತಿಳಿಯುವನು.

ಮೇಲೆ ವಿವರಿಸಲ್ಪಟ್ಟಿರುವಂತೆ ಶಕ್ತಿಚಕ್ರದ ಸ್ವರೂಪವನ್ನು ಪ್ರಕಾಶ ವಿಮರ್ಶಾಂತರ್ಗತ ವಾದ ಕ್ರಮದಿಂದ ಅನುಸಂಧಾನಮಾಡಬೇಕು. ಮೃತ್ಯುವನ್ನೂ, ಕಾಲವನ್ನೂ, ಕಲಾತತ್ತ್ವಗಳ ಸಮೂಹವನ್ನೂ, ಅವುಗಳ ವಿಕಾರಗಳನ್ನೂ, ತಿಳಿವಳಿಕೆಗಳ ಸಮಾನತೆ ಯನ್ನೂ, ಅನೇಕವಾಗಿಯೂ ಅಭಿನ್ನವಾಗಿಯೂ ಇರುವ ವಿಕಲ್ಪಗಳನ್ನೂ ಆ ಅಂತರ್ಯ ವಾದ ಪರತತ್ತ್ವವು ತನ್ನಲ್ಲಿಯೇ ಲೀನಮಾಡಿಕೊಳ್ಳುತ್ತಿರುತ್ತದೆ. ಭಿನ್ನಾಭಿನ್ನ ವಿಕಲ್ಪ ಗಳು ಯಾವ ಶಕ್ತಿಯಲ್ಲಿ ಲಯವಾಗುತ್ತವೆಯೋ ಆ ಮಹಾಶಕ್ತಿಯನ್ನು ತನ್ನಲ್ಲಿಯೇ ಇರುವುದಾಗಿ ಭಾವಿಸುತ್ತಾನೆ.

ಯತ್ರ ಸರ್ವೇ ಲಯಂ ಯಾಂತಿ ದಹ್ಯಂತೇ ತತ್ತ್ವ ಸಂಚಯಾಃ ।
ತಾಂ ಚಿತಿಂ ಪಶ್ಯ ಕಾಯಸ್ಥಾಂ ಕಾಲಾನಲ ಸಮತ್ವಿಷಮ್ ॥

ಉಚ್ಚಾರ ಮಾಡುವುದಕ್ಕೆ ಆಗದಿರುವಂಥಾದ್ದನ್ನು ಮನಸ್ಸಿನ ಭಾವನಾ ಬಲದಿಂದಲೇ ಸಾಕ್ಷಾತ್ಕರಿಸುತ್ತಾನೆ. ಇದರಿಂದ ಯಾವ ಸಮಾವೇಶವುಂಟಾಗುತ್ತದೆಯೋ ಅದಕ್ಕೆ 'ಶಾಕ್ತ'ವೆಂದು ಹೆಸರು. ಈ ರಹಸ್ಯವನ್ನು ಗುರೂಪದೇಶದಿಂದ ತಿಳಿಯಬೇಕು.

ಅವತರಣಿಕೆ.—ಈ ವಿಧವಾದ ಸಮಾವೇಶವನ್ನು ಪಡೆದಿರುವವನಿಗೆ ಸಮಾಧ್ಯ ವಸ್ಥೆಗೂ ಜಾಗ್ರದವಸ್ಥೆಗೂ ವ್ಯತ್ಯಾಸವಿಲ್ಲವೆಂಬುದನ್ನು ಸೂಚಿಸುವುದೇ ಮುಂದಿನ ಸೂತ್ರ.

ಜಾಗ್ರತ್ ಸ್ವಪ್ನಸುಷುಪ್ತಭೇದೇ ತುರ್ಯಾಭೋಗಸಂಭವಃ ॥೭॥

ಸಮಾಧಿ ಅವಸ್ಥೆಗೂ ಜಾಗ್ರದವಸ್ಥೆಗೂ ಭೇದವಿಲ್ಲವೆಂಬ ವಿಷಯದ ವಿವರಣೆ

ಜಾಗ್ರತ್, ಸ್ವಪ್ನ, ಸುಷುಪ್ತಿ ಈ ಮೂರು ಸ್ಥಿತಿಗಳೂ ನಮ್ಮ ಅನುಭವದಲ್ಲಿವೆ. ಈ ಮೂರು ದಶೆಗಳನ್ನು ಅನುಭವಿಸುವವನು ಬೇರೆ ಒಬ್ಬನಿದ್ದಾನೆ. ಮೇಲೆ ಹೇಳಿದಂತೆ ಅನುಸಂಧಾನ ಮಾಡುವ ಯೋಗಿಗೆ ಈ ಮೂರು ಅವಸ್ಥೆಗಳು ಅನಿತ್ಯವಾಗಿಯೂ ಇವುಗಳಿಗೆ ಆಶ್ರಯವಾಗಿರುವ ತುರೀಯಾವಸ್ಥೆಯು ನಿತ್ಯವಾಗಿಯೂ ಅನುಭವಕ್ಕೆ ಬರುತ್ತದೆ. ತುರೀಯಾವಸ್ಥೆಯನ್ನು ಮೇಲೆ ಹೇಳಿದ ಸಾಧನಾಭ್ಯಾಸಿಯು ಅನುಭವಿಸು ತ್ತಾನೆ. ತಾನು ಆನಂದವನ್ನನುಭವಿಸುವುದಲ್ಲದೆ ಜಗತ್ತನ್ನು ಚಂದ್ರನು ತನ್ನ ಕಿರಣಗಳಿಂದ ಆಹ್ಲಾದಗೊಳಿಸುವಂತೆ ಆನಂದಪಡಿಸುತ್ತಾನೆ. ಈ ವಿಧವಾದ ಸಿದ್ಧಿಗೆ ತುರೀಯಾಭೋಗ ವೆಂದು ಹೆಸರು.

ಅವತರಣಿಕೆ— ಜಾಗ್ರದಾದಿ ಮೂರು ಅವಸ್ಥೆಗಳು.

ಜ್ಞಾನಂ ಜಾಗ್ರತ್ ||೮||

ಜಾಗ್ರದವಸ್ಥೆಯ ಲಕ್ಷಣ

ಸ್ವಪ್ನೋ ವಿಕಲ್ಪಾಃ ||೯||

ಸ್ವಪ್ನಾವಸ್ಥೆಯ ಲಕ್ಷಣ

ಅವಿವೇಕೋ ಮಾಯಾ ಸೌಷುಪ್ತಂ ||೧೦||

ಸುಷುಪ್ತಾವಸ್ಥೆಯ ಹಾಗೂ ಮಾಯೆಯ ಲಕ್ಷಣ

ಜಾಗ್ರದಾದಿ ಮೂರು ಅವಸ್ಥೆಗಳಲ್ಲಿಯೂ ಮೂರು ರೂಪಗಳು

ಈ ವಿಷಯದಲ್ಲಿ ಲೋಕಾಭಿಪ್ರಾಯ ಮತ್ತು ಯೋಗಿಗಳ ಅಭಿಪ್ರಾಯ

ಬಾಹ್ಯೇಂದ್ರಿಯಗಳಿಂದ ತಿಳಿವಳಿಕೆಯುಂಟಾಗುವ ಸ್ಥಿತಿ ಎಲ್ಲರ ಅನುಭವದಲ್ಲಿದೆ. ಇದಕ್ಕೆ ಜಾಗ್ರದವಸ್ಥಾ ಎಂದು ಹೆಸರು. ಇದರಲ್ಲಿ ಒಬ್ಬನು ನೋಡಿದ್ದನ್ನು ಇನ್ನೊಬ್ಬನು ನೋಡಬಹುದು.

ಸ್ವಪ್ನಾವಸ್ಥೆಯು ಮನಸ್ಸಿನಿಂದ ಮಾತ್ರ ತಿಳಿಯಲ್ಪಡತಕ್ಕದ್ದಾಗಿದೆ. ಮನಸ್ಸು ಅಂತರಿಂದ್ರಿಯವಾಗಿರುವುದರಿಂದ ಸಾಮಾನ್ಯ ಸ್ಥಿತಿಯಲ್ಲಿ ಒಬ್ಬನ ಮನೋಭಾವನೆಗಳು ಮತ್ತು ಸ್ವಪ್ನಗಳು ಇನ್ನೊಬ್ಬನಿಗೆ ತಿಳಿಯುವುದಿಲ್ಲ. ಗ್ರಾಹ್ಯ–ಗ್ರಾಹಕ ಭೇದಜ್ಞಾನವಿಲ್ಲದೆ ಇರುವ ಅನುಭವವೇ ಸುಷುಪ್ತಿ. ಇದು ಮಾಯಾರೂಪವಾಗಿಯೂ, ಮೋಹಮಯವಾಗಿಯೂ ಇದೆ. ಹೀಗೆ ಈ ಮೂರು ದಶೆಗಳಲ್ಲಿಯೂ, ಪರಸ್ಪರ ಸಾಂಕರ್ಯ ಮತ್ತು ಸಮಾವೇಶವಿರುತ್ತದೆ. ಜಾಗ್ರದವಸ್ಥೆಯಲ್ಲಿ ಇಂದ್ರಿಯಗಳ ಮೂಲಕ ತಿಳಿಯುತ್ತೇವೆ. ಸ್ವಪ್ನಾವಸ್ಥೆಯಲ್ಲಿ ಅಂತಹ ತಿಳಿವಳಿಕೆಯ ವಿಕಲ್ಪಗಳನ್ನು ಕಾಣುತ್ತೇವೆ, ಅನುಭವಿಸುತ್ತೇವೆ. ಸುಷುಪ್ತಾವಸ್ಥೆಯಲ್ಲಿ ನಮಗೆ ಗ್ರಾಹ್ಯ-ಗ್ರಾಹಕ ಜ್ಞಾನವಿರುವುದಿಲ್ಲ. ತುರೀಯಾವಸ್ಥೆಯಲ್ಲಿ ಈ ಮೇಲೆ ಹೇಳಿದ ಮೂರು ಅವಸ್ಥೆಗಳನ್ನು ಚಮತ್ಕಾರದಿಂದ ನೋಡುತ್ತೇವೆ. ತುರೀಯಾತೀತ ಸ್ಥಿತಿಯಲ್ಲಿ ಎಲ್ಲವೂ ಅಭೇದ ವ್ಯಾಪ್ತಿಯುಳ್ಳದ್ದಾಗಿ ಕಂಡುಬರುತ್ತದೆ.

ಅವತರಣಿಕೆ— ಹೀಗೆ ಲೋಕಮರ್ಯಾದೆಯನ್ನನುಸರಿಸಿ ಜಾಗ್ರದಾದಿ ಮೂರು ಅವಸ್ಥೆಗಳಲ್ಲಿಯೂ, ಸಾಧಕನು ಶಕ್ತಿಚಕ್ರಸಂಧಾನದಿಂದ ತುರೀಯ ಸ್ಥಿತಿಯನ್ನು ಅನುಭವಿಸಿದ ನಂತರ ಮೇಲೆ ಹೇಳಿದ ತುರೀಯಾತೀತ ಸ್ಥಿತಿಯಾಗಿರುವ ಶುದ್ಧ ಚೈತನ್ಯವನ್ನು ಗುರುತಿಸುವನು.

ತ್ರಿತಯಭೋಕ್ತಾ ವೀರೇಶಃ ||೧೧||

ಸಂವಿತ್ ಸಮಾವೇಶವನ್ನು ಪಡೆದಿರುವ ಯೋಗಿಗೆ ಮೇಲೆ ಹೇಳಿದ

ಮೂರು ಅವಸ್ಥೆಗಳು ಚಮತ್ಕಾರವಾಗಿ ತೋರುವುದರಿಂದ 'ವೀರೇಶ' ಎಂಬ ಹೆಸರು.

ಅಂತಹ ಚಿತ್ಸಮಾವೇಶವಿಲ್ಲದವನಿಗೆ ಪಶು ಎಂಬ ಸಂಜ್ಞೆ.

ಜಾಗ್ರತ್ ಸ್ವಪ್ನ ಸುಷುಪ್ತಿಗಳು ಅನುಭವದಲ್ಲಿದ್ದರೂ ಸಾಧಕನು ತುರೀಯಾವಸ್ಥೆಯ ದೃಷ್ಟಿಯಿಂದ ಈ ವ್ಯತ್ಯಾಸಗಳನ್ನೆಲ್ಲಾ ಶಕ್ತಿವಿಲಾಸಗಳೆಂದು ತಿಳಿದು ಶಕ್ತಿಚಕ್ರವನ್ನು ಅನುಸಂಧಾನಮಾಡುತ್ತಾನೆ. ಈ ಬಗೆಯ ಅನುಸಂಧಾನದಿಂದ ತುರೀಯಾವಸ್ಥೆಯ ಅಭೇದ ವ್ಯಾಪ್ತಿಯುಳ್ಳ ಆನಂದವನ್ನನುಭವಿಸುತ್ತಾನೆ. ಇದರ ಮೂಲಕ ತುರೀಯಾತೀತವಾದ ಶುದ್ಧ ಚೈತನ್ಯ ಸ್ಥಿತಿಯನ್ನು ಹೊಂದಲು ಶಕ್ತನಾಗುತ್ತಾನೆ.

ತ್ರಿಷು ಧಾಮಸು ಯದ್ಭೋಗ್ಯಂ ಭೋಕ್ತಾ ಯಶ್ಚ ಪ್ರಕೀರ್ತಿತಃ ।
ವೇದೈತದುಭಯಂ ಯಸ್ತು ಸ ಭುಂಜಾನೋ ನ ಲಿಪ್ಯತೆ ॥

ಜಾಗರಾದಿಗಳಲ್ಲಿದ್ದು ಭೋಗನಿರತನಾಗಿದ್ದರೂ ನೀರಿನಲ್ಲಿರುವ ಕಮಲ ಪತ್ರದಂತೆ ಕರ್ಮದಿಂದ ನಿರ್ಲಿಪ್ತನಾಗಿರುತ್ತಾನೆ.

ಯೋಗೀ ಸ್ವಚ್ಛಂದಯೋಗೇನ ಸ್ವಚ್ಛಂದಗತಿಚಾರಿಣಾ ।
ಸ ಸ್ವಚ್ಛಂದ ಪದೇ ಯುಕ್ತಃ ಸ್ವಚ್ಛಂದ ಸಮತಾಂ ವ್ರಜೇತ್ ॥

—ಸ್ವಚ್ಛಂದ

ಯಾವನು ಈ ಬಗೆಯ ಪರಾಮರ್ಶದಿಂದ ವಿಕಾಸವನ್ನು ಪಡೆದು ಭೇದಸಂಸ್ಕಾರಗಳನ್ನು ಕಳೆಯುವನೋ ಅವನು ಈ ವಿಶ್ವವನ್ನು ಆನಂದ ರಸಮಯ ಪ್ರವಾಹವೆಂದು ನೋಡುವನು. ಈ ಮೂರು ಅವಸ್ಥೆಗಳಲ್ಲಿ ಅನುಭವಿಸುವವನು ಯಾರು? ಅನುಭವಿಸಲ್ಪಡತಕ್ಕದ್ದು ಯಾವುದು? ಎನ್ನುವುದನ್ನು ಪರಿಶೀಲಿಸಿ ತಿಳಿದಿರುವನೋ ಅವನಿಗೆ ಈ ಪ್ರಾಪಂಚಿಕ ವ್ಯವಹಾರಗಳ ಬಂಧನವಿಲ್ಲ. ಅವನು ಈ ಮೂರು ಅವಸ್ಥೆಗಳನ್ನು ಅನುಭವಿಸುವ ವೀರೇಶನು. ಈ ಕ್ರಮದಿಂದ ಯಾವ ಆತಂಕವೂ ಇಲ್ಲದ ಪರಮಾನಂದ ಪರಿಪೂರ್ಣನಾಗುವನು. ಭೇದಜ್ಞಾನಕ್ಕೆ ಕಾರಣಗಳಾಗಿರುವ ಇಂದ್ರಿಯಗಳಿಗೆ ಒಡೆಯನಾಗಿ ಅವುಗಳನ್ನು ಅಂಕೆಯಲ್ಲಿಡುವನು. ಈ ವಿಷಯವು ಪ್ರಾಚೀನರಿಂದ ಅನೇಕ ವಿಧವಾಗಿ ನಿರೂಪಿಸಲ್ಪಟ್ಟಿದೆ. ಈ ರೀತಿಯಾದ ವಿಮರ್ಶನ ಮತ್ತು ಅನುಭವವಿಲ್ಲದಿರುವವನು ಕೇವಲ ಜಾಗ್ರತ್ ಸ್ವಪ್ನ ಸುಷುಪ್ತಿಗಳನ್ನನುಭವಿಸುತ್ತಿರುವವನು–ಲೌಕಿಕನು. ಇವನು ಪಶುಸಮಾನನು. ಯೋಗಿಯಾದರೂ ಈ ಕ್ರಮದಲ್ಲಿ ಸಿದ್ಧಿಯನ್ನು ಪಡೆಯದಿದ್ದರೆ ವೀರೇಶನಾಗುವುದಿಲ್ಲ. ಯೋಗಿಗೆ ಸ್ವಾತಂತ್ರ್ಯವೃತ್ತಿಯು ಬೇಕಾಗಿದೆ. ಅವನದು ಇಂದ್ರಿಯಾಧೀನ ವೃತ್ತಿಯಲ್ಲ. ಅವನು ಈ ಮೂರು ಅವಸ್ಥೆಗಳಲ್ಲಿಯೂ ಭೋಕ್ತೃರೂಪದಿಂದ ಸುಖದುಃಖಗಳನ್ನನುಭವಿಸುತ್ತಾನೆ. ತುರೀಯಾವಸ್ಥೆಯಲ್ಲಿ ಈ ತೊಂದರೆಗಳಿಲ್ಲ. ಈ ಸಿದ್ಧಿಯುಳ್ಳ ಯೋಗಿಗೆ ತತ್ತ್ವಸಾಕ್ಷಾತ್ಕಾರದ ಕ್ರಮದಲ್ಲಿ ತತ್ತ್ವಗಳನ್ನು ಮೀರಿರುವ ಪರತತ್ತ್ವವು ಭಾವನಾ ಬಲದಿಂದ ಗೋಚರಿಸುವುದು.

ಅವತರಣಿಕೆ—ಯೋಗ ಭೂಮಿಕೆಗಳು–ಹಂತಗಳು.

ವಿಸ್ಮಯೋ ಯೋಗಭೂಮಿಕಾಃ ॥೧೨॥

ಮಹಾಯೋಗಿಯ ಪರತತ್ತ್ವ ಸಾಕ್ಷಾತ್ಕಾರಕ್ಕೆ ಹಂತಹಂತವಾಗಿ ಏರುತ್ತಿರುವ ವಿಕಾಸ ಸ್ಥಿತಿಗಳ ನಿರೂಪಣೆ

ಪ್ರಪಂಚದಲ್ಲಿ ಒಂದಕ್ಕಿಂತ ಒಂದು ಅತಿಶಯವಾಗಿರುವ ಪದಾರ್ಥಗಳನ್ನು ನೋಡಿದರೆ ವಿಸ್ಮಯವುಂಟಾಗುತ್ತದೆ. ಹಾಗೆಯೇ ಯೋಗಿಗೂ ಯಾವಾಗಲೂ ಆಯಾ ಗ್ರಾಹ್ಯ ವಿಭಾಗಗಳನ್ನು ಅನುಸಂಧಾನಮಾಡುವಾಗ ಅಸಾಮಾನ್ಯವಾದ ಹೊಸ ಹೊಸದಾದ ಚಮತ್ಕಾರವಾದ ಚಿದ್ರೂಪವಾದ ಸ್ವಾತ್ಮ ಆವೇಶಾನುಭವವುಂಟಾಗುತ್ತದೆ. ಇದರಿಂದ ಆಗಿಂದಾಗ್ಗೆ ಆಶ್ಚರ್ಯ, ಸ್ತಬ್ಧತೆ, ವಿಕಾಸ ಮುಂತಾದ ಚಮತ್ಕಾರಗಳು ಉಂಟಾಗುತ್ತಿರುತ್ತವೆ. ಇಂದ್ರಿಯಗಳಿಂದುಂಟಾಗುವ ಅನುಭವದಿಂದ ಅವನಿಗೆ ತೃಪ್ತಿಯಿಲ್ಲ. ಆತನ ಭಾವನೆಯು ಬಾರಿ ಬಾರಿಗೂ ಪರತತ್ತ್ವದಲ್ಲಿ ಏಕೀಭವಿಸಲು ಮುಂದುವರಿಯುತ್ತಿರುತ್ತದೆ. ಆಮೇಲಿನ ಸಿದ್ಧಿಯನ್ನು ಪಡೆಯಲು ಮುಂದುವರಿಯುತ್ತಿರುವಾಗ ಮಧ್ಯೆ ಮಧ್ಯೆ ಪರಿಮಿತವಾಗಿ ಅನುಭವಕ್ಕೆ ಬರುವ ಅನುಭವಗಳ ಹಂತಗಳೇ ಭೂಮಿಕೆಗಳು. ಇವುಗಳು ಸಾಮಾನ್ಯವಾದ ಕುಂಡಲಿನೀಚಾಲನ ಮೊದಲಾದ ಸಿದ್ಧಿಗಳಲ್ಲ. ಇವುಗಳು ಬಿಂದುವೇ ಮೊದಲಾದ ವಿಶೇಷ ಸ್ಥಾನಗಳ ಅನುಭವಗಳೂ ಅಲ್ಲ. ಸ್ವಯಂಪ್ರಕಾಶವಾದ ಸ್ವರೂಪವು ಆತ್ಮನದು. ತನ್ನಿಂದಲೇ ತನ್ನನ್ನು ತಿಳಿಯಬೇಕು. ಹೀಗೆ ತನ್ನ ಸ್ವಭಾವವನ್ನು ಸಾಕ್ಷಾತ್ಕರಿಸಿದರೆ ಬೇರೆ ಯಾವುದರ ಆವಶ್ಯಕತೆಯೂ ಇರುವುದಿಲ್ಲ.

ಅವತರಣಿಕೆ— ಈ ಸ್ಥಿತಿಯನ್ನು ಪಡೆದ ಯೋಗಿಯ ಇಚ್ಛಾಶಕ್ತಿಯೇ ಉಮಾಕುಮಾರಿ.

ಇಚ್ಛಾಶಕ್ತಿರುಮಾಕುಮಾರೀ ॥೧೩॥

ಪರಭೈರವ ಸ್ಥಿತಿಯನ್ನು ಪಡೆದಿರುವ ಆರೂಢನ ಇಚ್ಛೆಯೇ ಪರಾಶಕ್ತಿ

ಪರಭೈರವ ಸ್ಥಿತಿಯನ್ನು ಪಡೆದಿರುವ ಈ ಯೋಗಿಯ ಇಚ್ಛಾಶಕ್ತಿಯೇ ಸ್ವಾತಂತ್ರ್ಯ ರೂಪಿಣಿಯಾದ ಪರಮೇಶ್ವರಿಯಾದ ವಿಶ್ವದ ಸೃಷ್ಟಿ ಸ್ಥಿತಿ ಲಯಗಳೇ ಲೀಲೆಯಾಗುಳ್ಳ ಕುಮಾರಿ. (ಕುಂ ಮಾರಯತೀತಿ ಕುಮಾರಿ) ಕುಂ ಎಂದರೆ ಮಾಯಾಭೂಮಿ—ಭೇದಜ್ಞಾನವನ್ನುಂಟುಮಾಡುವ ಶಕ್ತಿ—ಅದನ್ನು ಹೋಗಲಾಡಿಸುವವಳು ಕುಮಾರಿ. "ಉಮಾಕುಮಾರಿ" ಎಂದರೆ ಭೇದಜ್ಞಾನವಿಮುಖಿಯಾಗಿ ಈಶ್ವರನ ಏಕಾತ್ಮ್ಯ ಸಾಧನೆಗೆ ಯಾವಾಗಲೂ ತೊಡಗಿರುವವಳು ಎಂದರ್ಥ. ಹೀಗೆ ಯೋಗಿಗೆ ಲೌಕಿಕರ ಹಾಗೆ ಸ್ಥೂಲವಾದ ಇಚ್ಛೆ ಇರುವುದಿಲ್ಲ. ಆದರೂ ಅವನ ದೃಷ್ಟಿಗೆ ಆ ಪರಾಶಕ್ತಿಯೇ ಎಲ್ಲೆಡೆಗಳಲ್ಲಿಯೂ ತುಂಬಿರುವ ಹಾಗೆ ಕಾಣುತ್ತದೆ. ಈ ಶಕ್ತಿಯೇ ಎಲ್ಲಾ ನಾಮರೂಪಗಳಿಂದ ವಿಶ್ವರೂಪವಾಗಿದೆ. ಹೀಗಿದ್ದರೂ ತನ್ನ ಯೋಗಮಾಯೆಯಿಂದ ಮರೆಸಿಕೊಂಡಿರುತ್ತಾಳೆ. ಬೆಂಕಿಯಲ್ಲಿ ಉಷ್ಣವಿರುವಂತೆ ಸೂರ್ಯನಲ್ಲಿ ಕಿರಣಗಳಿರುವಂತೆ ಆ ಶಕ್ತಿಯು ಕಾರಣರೂಪಿಯಾಗಿದ್ದಾಳೆ. ಇದು ಪ್ರೇರಣಾಶಕ್ತಿ ಮಾತ್ರವಲ್ಲ.

ಸಪ್ತಪ್ರಮಾತೃಗಳಲ್ಲಿ ಸದಾಶಿವ ಪ್ರಮಾತೃವಾದ ಮೂರನೆಯ ಪ್ರಮಾತೃ ಸ್ಥಿತಿಯಲ್ಲಿ ಅಭೇದವ್ಯಾಪ್ತಿಯಿಂದ ಭೇದಭಾವವು ಅಂಕುರಿಸುತ್ತದೆ. ಮಾಯಾದಿ

ತತ್ತ್ವಗಳು ಸರ್ವಥಾ ಭಿನ್ನಗಳಾಗಿರುತ್ತವೆ. ಶುದ್ಧ ವಿದ್ಯಾತತ್ತ್ವಗಳ ಭೇದಭಾವವು ಚಿದ್ರೂಪದ ಮಟ್ಟದಲ್ಲೇ ಇದ್ದು ಪೂರ್ಣವಾದ ಭೇದಭಾವವನ್ನು ಪಡೆಯುವುದಿಲ್ಲ. ಸದಾಶಿವ ತತ್ತ್ವದಲ್ಲಿ ಮೊಟ್ಟಮೊದಲು 'ಅಹಂ', 'ಇದಂ' ಎಂಬ ಭೇದವು ಅಂಕುರಿಸುತ್ತದೆ. ತುರೀಯಾವಸ್ಥೆಯನ್ನು ಮುಟ್ಟಿರುವ ಸಾಧಕನು ಸಮಾಧ್ಯವಸ್ಥೆಯಲ್ಲಿ ಚಿನ್ಮಯವಾದ ಸ್ವಸ್ವರೂಪ ಸಾಕ್ಷಾತ್ಕಾರವನ್ನು ಪಡೆದಿರುತ್ತಾನೆ. ಈ ಸ್ಥಿತಿಯಲ್ಲಿ ಇವನು ಈ ವಿಶ್ವವನ್ನೆಲ್ಲಾ 'ಇದಂ' ಎಂದೂ, ಸ್ವಸ್ವರೂಪವನ್ನು 'ಅಹಂ' ಎಂದೂ ತಿಳಿಯುವಾಗ ವಿಶ್ವವು ಸರ್ವಥಾ ಇವನಿಂದ ಭಿನ್ನವಾಗಿ ತೋರುವುದಿಲ್ಲ. ಆದರೂ ಸ್ಥೂಲರೂಪವಾಗಿರುವ ವಿಶ್ವವೆಲ್ಲಾ ಇವನ ಶರೀರವಾಗಿ ತೋರುತ್ತದೆ.

ಅವತರಣಿಕೆ—ಇಂತಹವನಿಗೆ ದೃಶ್ಯಂ ಶರೀರಂ.

ದೃಶ್ಯಂ ಶರೀರಂ ||೧೪||

ಇಚ್ಛಾಶಕ್ತಿಯ ಬಲದಿಂದ ಸ್ವಾತಂತ್ರ್ಯವನ್ನು ಪಡೆದಿದ್ದರೂ ಸಿದ್ಧನಿಗೆ ವಿಶ್ವದಲ್ಲಿ 'ಅಹಂತಾ' ಅವಭಾಸನೆ ಉಂಟು

ಯೋಗಿಗೆ ದೇಹ, ಬುದ್ಧಿ, ಪ್ರಾಣ, ಶೂನ್ಯ ಇವುಗಳ ಸಮಾವೇಶವೇ ಶರೀರವೆಂದು ಅನುಭವಕ್ಕೆ ಬರುತ್ತದೆ. ಸಾಮಾನ್ಯ ಮನುಷ್ಯನಿಗೆ ತೋರುವಂತೆ 'ನಾನು' ಎಂದು ತೋರುವುದಿಲ್ಲ. ಸ್ಥೂಲಶರೀರವನ್ನೇ ತಾನು ಎಂಬ ಭಾವನೆಯುಳ್ಳವನಾಗಿರುವುದಿಲ್ಲ. ಈತನಿಗೆ ಶರೀರದಲ್ಲಿಯೂ ಬಾಹ್ಯಪದಾರ್ಥಗಳಲ್ಲಿಯೂ ನವಿಲಿನ ಮೊಟ್ಟೆಯಂತೆ ಅವಿಭಕ್ತವಾದ ಜ್ಞಾನವಿರುತ್ತದೆ. ನೀರಿನ ಅಲೆಗಳು, ಬೆಂಕಿಯ ಜ್ವಾಲೆಯ ಭಂಗಿಗಳು, ಸೂರ್ಯನ ಕಾಂತಿ ಇವುಗಳಿರುವಂತೆ ಭೈರವನ ವಿಲಾಸವೇ ಈ ವಿಶ್ವವೆಂದು ತಿಳಿಯುತ್ತಾನೆ. ಭೋಕ್ತೃವೇ ಸರ್ವತ್ರ ಭೋಗ್ಯಭಾವದಿಂದಿರುವನೆಂಬ ಅರಿವುಂಟಾಗುತ್ತದೆ.

ಅವತರಣಿಕೆ—ಈ ರೀತಿಯಾಗಿ ಎಲ್ಲಾ ದೃಶ್ಯವೂ ಶರೀರಭಾವದಿಂದ ತೋರಿ ಏಕರೂಪದಿಂದ ಪ್ರಕಾಶಿಸುತ್ತದೆಂದು ಹೇಳುವುದು ದುರ್ಘಟವೇನೂ ಅಲ್ಲ.

ಹೃದಯೇ ಚಿತ್ತಸಂಘಟ್ಟಾದ್ದೃಶ್ಯಸ್ವಾಪದರ್ಶನಂ ||೧೫||

ಚಿದಾವೇಶದಿಂದ ದೃಶ್ಯಪದಾರ್ಥಗಳೆಲ್ಲವೂ ಚಿನ್ಮಯವಾಗಿ ತೋರುವುವು

ವಿಶ್ವವೆಲ್ಲಾ ಚಿತ್ತದಿಂದಲೇ ಹೊರಹೊಮ್ಮಿರುವುದರಿಂದ ಚಿತ್ಪ್ರಕಾಶವೇ ಇದಕ್ಕೆ ಆಧಾರ. ಚಿತ್ಪ್ರಕಾಶವೇ ಇದಕ್ಕೆ ಹೃದಯ. ಅಲ್ಲಿ ಮನಸ್ಸನ್ನು ಏಕಾಗ್ರವಾಗಿ ನಿಲ್ಲಿಸಿ ಧ್ಯಾನಮಾಡುವುದರಿಂದ ದೃಶ್ಯವಾದ ದೇಹ ಪ್ರಾಣಾದಿಗಳೂ ಸುಷುಪ್ತಿಯೂ ಈ ಜ್ಞಾನಗಳಿಲ್ಲದಿರುವ ಶೂನ್ಯಾವಸ್ಥೆಗಳೂ ತೋರುತ್ತವೆ. ಈ ಗ್ರಾಹ್ಯ-ಗ್ರಾಹಕ ರೂಪವಾದ ಭೇದಜ್ಞಾನ ತಿಳಿದಮೇಲೆ ಎಲ್ಲಾ ವಸ್ತುಗಳೂ ಅವುಗಳ ಸ್ಥಿತಿಗನುಸಾರವಾಗಿ ತನ್ನ ಶರೀರವಿದ್ದಹಾಗೆ ಪ್ರಕಾಶಿಸುತ್ತವೆ. ಚಿತ್ಪ್ರಕಾಶದಿಂದ ಕೂಡಿರುವ ಚಿತ್ತವು ಚಿತ್ಸ್ವರೂಪದಂತೆಯೇ ವಿಶ್ವವನ್ನು ನೋಡುತ್ತದೆ. ಯೋಗಿಯಾದರೋ

ಹೃದಯಾಕಾಶದಲ್ಲಿ ಇಂದ್ರಿಯಗಳನ್ನು ನಿಲ್ಲಿಸಿ ಬೇರೊಂದನ್ನು ನೆನೆಯದೆ ವಿಕಾಸವನ್ನು ಪಡೆಯುತ್ತಾನೆ. ಶ್ರೇಷ್ಠವಾದ ವಿಕಾಸ ಸೌಭಾಗ್ಯವು ವಿಶ್ವೇಶ್ವರತ್ವವನ್ನು ಸಂಪಾದಿಸುವುದು. ಯೋಗಿಯು ಎಲ್ಲಾ ಭೂತಗಳಲ್ಲಿಯೂ ತತ್ತ್ವಗಳಲ್ಲಿಯೂ ಇಂದ್ರಿಯಗಳಲ್ಲಿಯೂ ಅಲ್ಲದೆ ಸ್ಥಾವರ ಜಂಗಮ ಮತ್ತು ಚೇತನಾಚೇತನರೂಪವಾದ ಈ ವಿಶ್ವವನ್ನು ಅನುಸಂಧಾನ ಮಾಡಿ ಸಾಮರಸ್ಯವನ್ನು ಪಡೆಯುವನು.

ಹೃದ್ಯಾಕಾಶೇ ನಿಲೀನಾಕ್ಷಃ ಪದ್ಮಸಂಪುಟ ಮಧ್ಯಗಃ ।
ಅನನ್ಯಚೇತಾಃ ಸುಭಗೇ ಪರಂ ಸೌಭಾಗ್ಯಮಾಪ್ನುಯಾತ್ ॥

—ವಿಜ್ಞಾನಭೈರವ

ಅವತರಣಿಕೆ—ಉಪಾಯಾಂತರಗಳು.

ಶುದ್ಧತತ್ತ್ವಸಂಧಾನಾದ್ವಾಽಪಶುಶಕ್ತಿಃ ॥೧೬॥

ಶುದ್ಧತತ್ತ್ವೋಪಾಸನೆಯಿಂದ ಪಶುಭಾವ ವಿಸರ್ಜನೆ, ಪತಿಭಾವದ ಪರಿವರ್ತನೆ

ಪೂರ್ಣಶುದ್ಧತತ್ತ್ವವು ಪರಮಶಿವನು. ಆ ಪರಮಶಿವನು ವಿಶ್ವಮಯನೆಂದು ಅನುಸಂಧಾನಮಾಡಿದರೆ ಸಾಧಕನಿಗೆ ಬಂಧಕವಾದ ಪಾಶವೀಶಕ್ತಿಯು ಬಿಟ್ಟುಹೋಗುವುದು. ಆ ಸ್ಥಿತಿಯಲ್ಲಿ ಇವನು ಸದಾಶಿವನಂತೆ ವಿಶ್ವಕ್ಕೆ ಅಧಿಪತಿಯಾಗುವನು. ದೀಕ್ಷಾಸಿದ್ಧಿ ಪ್ರಕರಣದಲ್ಲಿ ಅತೀಂದ್ರಿಯ ವಿಷಯಗಳನ್ನನುಸಂಧಾನಮಾಡುವ ಕ್ರಮವನ್ನು ವಿವರಿಸಿದೆ. ಆದರೂ ಆ ಶುದ್ಧತತ್ತ್ವ ವಿಮರ್ಶನೆಗೆ ಇವುಗಳ ಅನುಸಂಧಾನವು ಸರಿಬರಲಾರದು. ಏಕೆಂದರೆ ಅಂತಹ ಅವಾಂತರ ಭೂಮಿಕೆಗಳ ಧ್ಯಾನವು ಕೇವಲ ಪರಿಪೂರ್ಣ ವಿಕಾಸಕ್ಕೆ ಪ್ರತಿಬಂಧಕವಾಗುತ್ತದೆ. ಶರೀರವನ್ನೆಲ್ಲಾ ಚಿನ್ಮಯವೆಂದು ಅಥವಾ ಜಗತ್ತನ್ನೆಲ್ಲಾ ಚಿನ್ಮಯವೆಂದು ನಿರ್ವಿಕಲ್ಪವಾದ ಮನಸ್ಸಿನಿಂದ ಧ್ಯಾನಿಸಿದರೆ ಅವನಿಗೆ ಪರ ಸಮಾವೇಶವುಂಟಾಗುತ್ತದೆ. ಈ ವಿಶ್ವವನ್ನೆಲ್ಲಾ ಚಿಚ್ಛಕ್ತಿಯ ವಿಲಾಸ ಲೀಲೆಯೆಂದು ಯಾರು ತಿಳಿಯುವರೋ ಅಂತಹ ಭಾವನಾಶಾಲಿಯು ಜೀವನ್ಮುಕ್ತನಾಗುವನು. ಇಂತಹವನಿಗೆ—

ಇತಿ ವಾಯಸ್ಯ ಸಂವಿತ್ತಿಃ ಕ್ರೀಡಾತ್ವೇನಾಖಿಲಂ ಜಗತ್ ।
ಸ ಪಶ್ಯನ್ ಸತತಂ ಯುಕ್ತೋ ಜೀವನ್ಮುಕ್ತೋ ನ ಸಂಶಯ ॥

—ಸ್ಪಂದಕಾರಿಕಾ

ಸರ್ವಂ ದೇಹಂ ಚಿನ್ಮಯಂ ಹಿ ಜಗದ್ವಾಪರಿಭಾವಯೇತ್ ।
ಯುಗಪನ್ನಿರ್ವಿಕಲ್ಪೇನ ಮನಸಾ ಪರಮೋದ್ಭವಃ ॥

—ವಿಜ್ಞಾನಭೈರವ

ಅವತರಣಿಕೆ—ಇಂತಹ ಯೋಗಿಗೆ—

ವಿತರ್ಕ ಆತ್ಮಜ್ಞಾನಂ ॥೧೭॥

ಯೋಗಿಯ ಆತ್ಮಜ್ಞಾನದ ಲಕ್ಷಣಗಳು

ವಿಶ್ವಾಂತರ್ಯಾಮಿಯಾಗಿರುವ ಆ ಶಿವನೇ ನಾನು ಎಂಬ ವಿಚಾರವು ಯಾವಾಗಲೂ ಪ್ರತಿಫಲಿಸುತ್ತಿದ್ದರೆ ಅದೇ ಆತ್ಮಜ್ಞಾನವೆನಿಸುವುದು. ಇದನ್ನೇ ವಿತರ್ಕವೆನ್ನುವುದು. ಶರೀರ ಪ್ರಾಣ ಮೊದಲಾದುವುಗಳು ಬೇರೆಬೇರೆಯಾಗಿದ್ದರೂ ಜಡಾನೇಕ ರೂಪವಾದ ವಿಶ್ವವು ಚಿದೇಕರೂಪವೆಂದೂ ಕ್ರಮವಾಗಿಯೂ ಅಕ್ರಮವಾಗಿಯೂ ಆ ಚಿತ್ತೇ ಈ ರೂಪದಿಂದ ಸ್ಫುರಿಸುವುದೆಂದೂ ಭಾವಿಸಬೇಕು.

ಈಶ್ವರ ಸೃಷ್ಟಿಯು ಸಿತ್ಯವಾದ ಅನಂತವಾದ ನಿಯಮಗಳಿಗೆ ಒಳಪಟ್ಟಿರುತ್ತದೆ. ಆ ನಿಯಮಗಳು ಈಶ್ವರನ ಸಂಕಲ್ಪರೂಪವಾಗಿಯೂ ಇಚ್ಛಾರೂಪವಾಗಿಯೂ ಇವೆ. ಈ ವಿಶ್ವವನ್ನು ಸೃಷ್ಟಿಮಾಡುವಾಗ ಶಿವನಮೊದಲು ಪೃಥ್ವೀವರೆಗೆ ತತ್ತ್ವಗಳನ್ನು ಅನುಕ್ರಮವಾಗಿ ಹೊರಹೊಮ್ಮಿಸಿರುತ್ತಾನೆ. ಉಪಸಂಹಾರದಲ್ಲಿಯೂ ಕ್ರಮವನ್ನನುಸರಿಸಬಹುದು. ಈ ವಿಧವಾದ ಪರಸ್ಪರ ಅಸಂಕೀರ್ಣವಾದ ಸೃಷ್ಟಿಯನ್ನು ಕ್ರಮಸೃಷ್ಟಿ ಎನ್ನುತ್ತೇವೆ. ಈ ಕ್ರಮಕ್ಕೆ ವ್ಯತಿರೇಕವಾಗಿ ಆ ಈಶ್ವರನು ಈ ಎಲ್ಲಾ ತತ್ತ್ವಗಳಲ್ಲಿಯೂ ಸಮಾನವಾಗಿ, ಏಕರೂಪವಾಗಿ ವ್ಯಾಪಿಸಿರುತ್ತಾನೆ. ಈ ತತ್ತ್ವಗಳ ಪರಿಣಾಮಗಳಿಂದಾಗುವ ಸುಖದುಃಖಾನುಭವಗಳು ಆತನಿಗಿಲ್ಲ. ಈ ಅಂಶವನ್ನು ತಿಳಿಸುವುದಕ್ಕೆ ವಿಶ್ವವು ಈಶ್ವರನಿಗೆ ಶರೀರವಾಗಿದೆ ಎಂದು ಶಾಸ್ತ್ರಜ್ಞರು ಹೇಳುತ್ತಾರೆ. ಈಶ್ವರನು ಕ್ರಮ ಮತ್ತು ಅಕ್ರಮಗಳಿಂದ ವಿಶ್ವವನ್ನು ವ್ಯಾಪಿಸಿರುತ್ತಾನೆ. 'ಕ್ರಮ'ವೆಂದರೆ ತತ್ತ್ವಸೃಷ್ಟಿಕ್ರಮವನ್ನನುಸರಿಸುವುದು. 'ಅಕ್ರಮ'ವೆಂದರೆ ಸರ್ವತ್ರ ಸರ್ವದಾ ಸಮಾನವಾಗಿ ವ್ಯಾಪಿಸಿರುವುದು. ಇದರಿಂದ ಸರ್ವಜ್ಞನು ಸರ್ವಕರ್ತನು ವ್ಯಾಪಕನು ಆದ ಪರಮೇಶ್ವರನಿಂದ ಬೇರೆಯಲ್ಲವೆಂಬ ಶಿವತ್ವ ಪ್ರಾಪ್ತಿಯಾಗುತ್ತದೆ. ಇದೇ ಶಾಕ್ತಭೂಮಿಕೆ, ಶಾಕ್ತೋಪಾಯದ ಅಪ್ರಯತ್ನಪೂರ್ವಕವಾದ ಅನುಸಂಧಾನ.

ಶಿವೋಹಂ—ಶಿವನೇ ನಾನೆಂಬ ಧರ್ಮವಿರುವವನು. ಅದೇ ಗುಣವುಳ್ಳವನು. ಗುಣ ಧರ್ಮ ಭಾವನೆಯಿಂದ ದಾರ್ಢ್ಯವಿರುವವನು.

> **ಸರ್ವಜ್ಞಃ ಸರ್ವಕರ್ತಾಚ ವ್ಯಾಪಕಃ ಪರಮೇಶ್ವರ ।**
> **ಸ ಏವಾಹಂ ಶೈವಧರ್ಮಾ ಇತಿ ದಾರ್ಢ್ಯಾಚ್ಛಿವೋ ಭವೇತ್ ॥**
>
> —ವಿಜ್ಞಾನ ಭೈರವ

ಆತ್ಮಜ್ಞಾನ.—ಆತ್ಮ ಎಂದರೆ ವಿಶ್ವಾತ್ಮಕವಾಗಿರುವ ಶಿವಾಭಿನ್ನವಾಗಿರುವ ತತ್ತ್ವಜ್ಞಾನ—ತಿಳಿವಳಿಕೆ.

ವಿತರ್ಕ.—ಅಯತ್ನಪೂರ್ವಕವಾದ ಅನವರತ ಭಾವನಾಸ್ಥಿತಿ.

ಅವತರಣಿಕೆ :—ಇವನಿಗೆ—

ಲೋಕಾನಂದಃ ಸಮಾಧಿಸುಖಂ ॥೧೮॥

ಸಮಾಧಿಸುಖದ ಲಕ್ಷಣ ಮತ್ತು ಅದು ಸಾಮಾನ್ಯರ ಸಂತೋಷಕ್ಕೆ ಹೇಗೆ ಕಾರಣ

ಇಂದ್ರಿಯಗಳಿಂದ ತಿಳಿಯುವ ಮತ್ತು ಊಹೆಗೆ ಗೋಚರಿಸುವ ವಸ್ತು ಸಮೂಹ ವೆಲ್ಲಾ ಲೋಕ ಅಥವಾ ಗ್ರಾಹಕವೆಂದೆಸಿಸುವುದು. ತಿಳಿಯಲ್ಪಡುವ ವಸ್ತುಗಳು ಅಥವಾ ವಿಷಯಗಳು, ತಿಳಿಯುವ ಚೇತನಗಳು ಇವೆರಡನ್ನೂ ಇಲ್ಲಿ 'ಲೋಕ' ಎಂದು ಕರೆಯು ಲಾಗಿದೆ. ಯೋಗಿಗಳ ಭಾವನೆಗಳು ಗ್ರಾಹ್ಯ ಮತ್ತು ಗ್ರಾಹಕಗಳಿಗಿರುವ ಸಂಬಂಧ ವಿಷಯದಲ್ಲಿ ವಿಲಕ್ಷಣವಾಗಿವೆ. ಸಾಮಾನ್ಯರಿಗೆ ಗ್ರಾಹ್ಯ ಮತ್ತು ಗ್ರಾಹಕಗಳು ಬೇರೆ ಬೇರೆಯಾಗಿವೆಯೆಂದು ತೋರುತ್ತವೆ. ಯೋಗಿಗಳಿಗೆ ಈ ಎರಡು ಭೇದಗಳೂ ಅಷ್ಟು ಮುಖ್ಯವಲ್ಲ. ಇವೆರಡೂ ಒಂದೇ ಎಂಬ ಭಾವನೆ ಇರುತ್ತದೆ. ಅವರ ಭಾವನೆಯು ಪ್ರಮಾತೃಪದವಾದ 'ಶಿವೋಽಹಂ' ಎನ್ನುವ ಶುದ್ಧತತ್ತ್ವವಿಶ್ರಾಂತವಾಗಿರುವುದರಿಂದ ಚಮತ್ಕಾರಮಯವಾದದ್ದು. ಈ ಚಮತ್ಕಾರವೇ ಆನಂದ. ಇದೇ ಸಮಾಧಿ. ಈ ವಿಶ್ವವೆಲ್ಲಾ ತನ್ನ ಶರೀರದಂತೆ ಎಂದು ಯಾವನು ನೆನೆಯುವನೋ ಅವನು ತನ್ನ ಸ್ವರೂಪ ಅಮೃತಾನಂದವನ್ನನುಭವಿಸುವನು. ಹೀಗೆ ಬೇರೆ ಬೇರೆಯಾಗಿರುವ ವಿಶ್ವವನ್ನು ಅಭಿನ್ನವಾಗಿರುವುದೆಂದೂ, ಆನಂದಮಯವಾಗಿರುವುದೆಂದೂ ಯಾವನು ನೋಡುವನೋ ಅವನು ಪರಿಪಾಕ ದಶೆಯಿಂದ ಸ್ವಾತ್ಮಾನಂದವನ್ನನುಭವಿಸುತ್ತಿರುತ್ತಾನೆ. ಈ ಬಗೆಯಾದ ದೃಷ್ಟಿ, ಭಾವನೆ, ಅನುಭವ ಈ ಎಲ್ಲವುಗಳ ಪರಿಪಾಕದಿಂದ ಈ ವಿಶ್ವವನ್ನು ತಿಳಿಯು ವವರಿಗೆ ಸ್ವಾನಂದಾಭಿವ್ಯಕ್ತಿಯು ಸ್ವತಃ ಉಂಟಾಗುತ್ತದೆ. ಇಲ್ಲಿಯೇ ಅಮೃತ ಪ್ರಾಪ್ತಿಯಾಗುತ್ತದೆ.

> **ಗ್ರಾಹ್ಯಗ್ರಾಹಕ ಸಂವಿತ್ತಿಃ ಸಾಮಾನ್ಯಾ ಸರ್ವದೇಹಿನಾಂ ।**
> **ಯೋಗಿನಾಂತು ವಿಶೇಷೋಽಯಂ ಸಂಬಂಧೇ ಸಾವಧಾನತಾ ॥**
>
> **ಸರ್ವಂ ಜಗತ್ಸ್ವದೇಹಂ ವಾ ಸ್ವಾನಂದಭರಿತಂ ಸ್ಮರೇತ್ ।**
> **ಯುಗಪತ್ಸ್ವಮೃತೇ ನೈವ ಪರಾನಂದಮಯೋ ಭವೇತ್ ॥**

ಅವತರಣಿಕೆ—ಈ ಸಿದ್ಧಪುರುಷನ ವಿಭೂತಿ.

ಶಕ್ತಿಸಂಧಾನೇ ಶರೀರೋತ್ಪತ್ತಿಃ ॥೧೯॥

ವಿಭೂತಿ ಯೋಗದ ವಿವರಣೆ

ಹಿಂದೆ ಹದಿಮೂರನೆಯ ಸೂತ್ರದಲ್ಲಿ "ಇಚ್ಛಾಶಕ್ತಿರುಮಾಕುಮಾರೀ" ಎಂದು ಹೇಳಿದೆ. ಆ ಇಚ್ಛಾಶಕ್ತಿಯನ್ನು ಸಾಧಕನು ಯಾವಾಗ ಅನುಸಂಧಾನಮಾಡಿ ಆ ಶಕ್ತಿ ಯೊಡನೆ ಏಕೀಭವಿಸಿದನೋ ಆಗ ಆತನ ಇಷ್ಟಕ್ಕನುಸಾರವಾಗಿ ಶರೀರಪ್ರಾಪ್ತಿ ಯಾಗುತ್ತದೆ. ಪರಸ್ಫುರತ್ತಾರೂಪವಾದ ಆ ಶಕ್ತಿಯು ಇಚ್ಛಾ ಜ್ಞಾನ ಕ್ರಿಯಾ ಮೊದಲಾದ ಅನಂತ ರೂಪಗಳನ್ನು ಪಡೆಯುತ್ತದೆ. ಈ ಶಕ್ತಿಯೇ ಎಲ್ಲಕ್ಕೂ ಮೂಲ ಕಾರಣ.

ಆ ಪರಶಿವನು ತನ್ನ ಸಂಕಲ್ಪಾನುಸಾರವಾಗಿ ಸಾಧಕರಿಗೆ ಆ ಶಕ್ತಿಗಳನ್ನು ಪ್ರೇರಿಸುವುದರಿಂದ ಅವರ ಇಷ್ಟಾರ್ಥಗಳನ್ನು ಕೊಡುತ್ತಾನೆ. ಸಾಧಕನು

ಯೋಗಿಯಾಗಿದ್ದರೂ ಅವನಿಗೆ ಹಿಂದಿನ ಸಂಸ್ಕಾರಗಳಿದ್ದೇ ಇರುತ್ತವೆ. ಅವನ ಹೃದಯ ದಲ್ಲಡಗಿರುವ ಆಶಯುಗಳನ್ನು ಪರಮೇಶ್ವರನು ಅಪೂರ್ವವಾದ ನಿರ್ಮಾಣಗಳಿಂದ ಕರಗಿಸು ತ್ತಾನೆ. ಪ್ರಾಣಾಪಾನ ವಿಕಾಸದಿಂದ ಮತ್ತು ಜ್ಞಾನ ವಿಕಾಸದಿಂದ ಸಮಾನ ಶಕ್ತಿಯನ್ನು ಹೊರಹೊಮ್ಮಿಸಿ ಆಶಯುಗಳನ್ನು ಪೂರ್ಣವಾಗಿ ಕಳೆದುಬಿಡುತ್ತಾನೆ. ಇದರಿಂದ ಜಾಗ್ರತ್ ಸ್ವಪ್ನಾದ್ಯವಸ್ಥೆಗಳು ಇಚ್ಛಾಶಕ್ತಿಯ ವಿಲಾಸಗಳೆಂದು ಸ್ಥಿರವಾಗುತ್ತದೆ. ಸಂಕ್ಷೇಪವಾಗಿ ಹೇಳುವುದಾದರೆ ಯೋಗಿಯಾದವನು ತನ್ನಿಷ್ಟಬಂದಂತೆ ಒಳಗೂ ಹೊರಗೂ ಸೃಷ್ಟಿಯನ್ನು ವಿಚಿತ್ರವಾಗಿ ಮಾಡಬಲ್ಲನು.

ಅವತರಣಿಕೆ—ಸಿದ್ಧಿಗಳು.

ಭೂತಸಂಧಾನ-ಭೂತಪೃಥಕ್ತ್ವ-ವಿಶ್ವಸಂಘಟ್ಟಾಃ ||೨೦||

ಸಂಧಾನವಿಶೇಷಗಳ ಅಭ್ಯಾಸದಿಂದಾಗುವ ಸಿದ್ಧಿಗಳು

ಇಂತಹ ಸಿದ್ಧಪುರುಷನಿಗೆ ಅವನ ಇಚ್ಛಾನುಸಾರವಾಗಿ ಶರೀರ, ಪ್ರಾಣ, ಭಾವ (ಪದಾರ್ಥ) ರೂಪಗಳಿಂದಿರುವ ಪಂಚಭೂತಗಳು ನಡೆಯುತ್ತವೆ. ಹೇಗೆಂದರೆ ಒಂದು ಭೂತವನ್ನು ಇನ್ನೊಂದು ಭೂತದೊಂದಿಗೆ ಸೇರಿಸಬಹುದು. ಅದರಿಂದ ತೃಪ್ತಿಯನ್ನು ಪಡೆಯಬಹುದು. ಅದೇ ರೀತಿಯಾಗಿ ವಿಶ್ಲೇಷಣಪೂರ್ವಕ ಅಂದರೆ ಬೇರ್ಪಡಿಸುವುದರ ಮೂಲಕ ರೋಗಗಳನ್ನು ಹೋಗಲಾಡಿಸಬಹುದು. ಭೂತಕಾಲ ವಿಷಯಗಳನ್ನು ತಿಳಿಯಬಹುದು. ಭವಿಷ್ಯತ್ಕಾಲದ ವಿಷಯಗಳನ್ನು ಊಹಿಸಬಹುದು. ದೇಶ ಕಾಲ ಗಳಿಂದ ದೂರವಾಗಿರುವ ವಿಶ್ವವನ್ನೇ ಅರಿಯಬಹುದು. ಈ ಸಿದ್ಧಿಗಳು ಶಕ್ತಿಸಂಧಾನ ದಿಂದುಂಟಾಗುತ್ತವೆ. ಸ್ಥೂಲದೃಷ್ಟಿಗೆ ಇಂತಹ ಸಿದ್ಧಪುರುಷನು ದುರ್ಬಲನಾಗಿದ್ದರೂ ಚಿಚ್ಛಕ್ತಿಯಿಂದ ಅಸಾಧ್ಯವಾದ ಕೆಲಸಗಳನ್ನು ನಿರ್ವಹಿಸಬಲ್ಲನು. ದೇಹಾಲಸ್ಯ, ಅಜ್ಞಾನ ಜ್ಞಾನವಿಕಾಸ ಇವುಗಳೆಲ್ಲಾ ಆ ಶಕ್ತಿಯ ಅನೇಕ ಮುಖಗಳು. ನಮಗೆ ಒಂದು ವಿಷಯ ಸ್ಪಷ್ಟವಾಗಿ ತಿಳಿದಿರುತ್ತದೆ ಅನ್ನೋಣ. ಅದನ್ನು ಇನ್ನಷ್ಟು ಮನನ ಮಾಡಿದರೆ ಮತ್ತೂ ಸ್ವಚ್ಛವಾಗಿ ತಿಳಿಯುತ್ತದೆ. ಇದೆಲ್ಲಾ ಸಂವಿದ್ಬಲದ ಪ್ರಭಾವ. ಯೋಗಿಯು ಸಾಮಾನ್ಯ ರಿಂದ ಜನಗಳಿಗೆ ಚಮತ್ಕಾರವನ್ನುಂಟುಮಾಡುವ ಆಶ್ಚರ್ಯಗಳನ್ನೇ ಮುಖ್ಯವಾಗೆಣಿಸು ವುದಿಲ್ಲ. ಅಣಿಮಾದಿ ಸಿದ್ಧಿಗಳೂ ಕೂಡ ಇವನಿಗೆ ಅಲ್ಪವಿಷಯಗಳಾಗಿರುತ್ತವೆ. ಶಕ್ತಿ ಸಂಧಾನದಿಂದ ಬಾಹ್ಯವಾಗಿ ಸೃಷ್ಟಿಯನ್ನು ಮಾಡಬಲ್ಲನು. ಚಮತ್ಕಾರಗಳನ್ನು ತೋರಿಸಬಲ್ಲನು. ಇದೇ ಶಕ್ತಿಯ ಅನುಸಂಧಾನದಿಂದಲೇ ಪರಿಮಿತವಾದ ಸಿದ್ಧಿಗಳನ್ನು ಕೋರದೆ ಆಂತರ್ಯತೆಯ ಚಿದ್ವಿಕಾಸವನ್ನು ಪಡೆಯಬಲ್ಲನು.

ಅವತರಣಿಕೆ—ಮಿತಸಿದ್ಧಿಗಳನ್ನು ತಿರಸ್ಕರಿಸಿ ವಿಶ್ವಾತ್ಮಭಾವವನ್ನು ಕೋರಿದಾಗ ಆಗುವ ಸಿದ್ಧಿ.

ಶುದ್ಧ ವಿದ್ಯೋದಯಾಚ್ಚಕ್ರೇ ಶತ್ವಸಿದ್ಧಿಃ ||೨೧||

ಮಹೇಶ್ವರಿ ಸಿದ್ಧಿಯ ಕಥನ

"ಅಹಮೇವ ಸರ್ವಂ" ನಾನೇ ಎಲ್ಲಾ ಎಂಬ ವಿಶ್ವಾತ್ಮ ಭಾವನೆಯಿಂದ ಶಕ್ತಿಯನ್ನನುಸಂಧಾನಮಾಡಿದರೆ ಶುದ್ಧ ವಿದ್ಯಾಸ್ಫುರಣವುಂಟಾಗುತ್ತದೆ. ಇದೇ ವಿಶ್ವಾತ್ಮಕ ವಾಗಿರುವ ಸ್ವಶಕ್ತಿಚಕ್ರೇಶತ್ವಪ್ರಾಪ್ತಿ; ಇದೇ ಮಾಹೈಶ್ವರ್ಯ. ಯಾವುದನ್ನು ಅತಿಕ್ರಮಿಸುವಂತಹ ತತ್ತ್ವವೇ ಇಲ್ಲವೋ ಅದೇ ವಿಶ್ವಾತ್ಮ ತತ್ತ್ವ. ಇದರಿಂದಲೇ ಸ್ವಾತಂತ್ರ್ಯ ಶಕ್ತ್ಯಾತ್ಮಕವಾದ ಸ್ವಸ್ವಭಾವವನ್ನರಿಯುವುದು, ತನ್ನಲ್ಲಿಯೇ ಶಿವತ್ವ ವಿದೆಯೆಂದು ಸಾಕ್ಷಾತ್ಕರಿಸುವುದು, ತಾನು ಶಿವನಲ್ಲವೆಂಬ ಭಾವನೆಯನ್ನು ಬಿಡುವುದು, ಈ ಮೂರೂ ಸತತವಾಗಿ ಅಪ್ರಯತ್ನಪೂರ್ವಕವಾಗಿ ಎಡಬಿಡದೆ ಇರುತ್ತವೆಯೋ ಆ ಸ್ಥಿತಿಗೆ 'ವಿದ್ಯೆ' ಎಂದರ್ಥ. ಇದನ್ನು 'ಉನ್ಮನೀ' ಎಂದು ಕರೆಯುತ್ತಾರೆ. 'ಉನ್ಮನೀ' ಎಂದರೆ ಸ್ವಸ್ವರೂಪವನ್ನು ಬೆಳಗಿಸುವುದು ಎಂದರ್ಥ. ಈ ಸ್ಥಿತಿಯಲ್ಲಿದ್ದು ಪರಿಪಾಕದಿಂದ ಪರಮಕಾರಣರೂಪವಾದ ಪರಶಿವಭಾವನೆಯನ್ನು ಬೆಳಗಿಸಿದರೆ ಶಿವತ್ವ ಪ್ರಾಪ್ತಿಯಾಗುತ್ತದೆ. ಈ ಪ್ರಾಪ್ತಿಯನ್ನು ಪಡೆದವನು ಸಿದ್ಧನು.

ತಸ್ಮಾತ್ಸಾ ತು ಪರಾವಿದ್ಯಾ ಯಸ್ಮಾದನ್ಯಾ ನ ವಿದ್ಯತೇ ।
ವಿಂದತೇ ಹ್ಯತ್ರ ಯುಗಪತ್ಸಾರ್ವಜ್ಞ್ಯಾದಿ ಗುಣಾನ್ ಪರಾನ್ ॥
—ಸ್ವಚ್ಛಂದ

ಸರ್ವಜ್ಞತಾ ತೃಪ್ತಿರನಾದಿಬೋಧಃ
ಸ್ವತಂತ್ರತಾ ನಿತ್ಯಮಲುಪ್ತ ಶಕ್ತಿಃ ॥
ಅನಂತಶಕ್ತಿಶ್ಚ ವಿಭೋರ್ವಿಧಿಜ್ಞಾಃ ।
ಷಡಾಹುರಂಗಾನಿ ಮಹೇಶ್ವರಸ್ಯ ॥

ಅವತರಣಿಕೆ—ಯಾವಾಗ ಆತ್ಮತೃಪ್ತಿಯಿಂದಿರುವನೋ ಆಗ.

ಮಹಾಹ್ರದಾನುಸಂಧಾನಾನ್ಮಂತ್ರ ವೀರ್ಯಾನುಭವಃ ॥೨೨॥

ಮಂತ್ರವೀರ್ಯ ಪ್ರಕಾಶಗಳ ವರ್ಣನೆ

ಆ ಪರಾಶಕ್ತಿಯೇ ಸಂವಿತ್ ಶಕ್ತಿ. ಆ ಪರಾಶಕ್ತಿಯೇ ಇಚ್ಛಾಶಕ್ತಿ ಮೊದಲ್ಗೊಂಡು ಸ್ಥೂಲವಾಗಿರುವ ಪ್ರಮೇಯಗಳನ್ನು ಹೊರಹೊಮ್ಮಿಸುತ್ತಿರುವುದೆಂದು ಅನುಭವಕ್ಕೆ ಬರುತ್ತದೆ. ಹಾಗೆಯೇ ಖೇಚರೀ ಗೋಚರೀ ಮೊದಲಾದ ಚಕ್ರಪ್ರವಾಹಗಳಿಗೆ ಕಾರಣ ವೆಂದು ಮನವರಿಕೆಯಾಗುತ್ತದೆ. ವಿಶ್ವವನ್ನೇ ಪ್ರತಿಬಿಂಬಿಸುತ್ತಿರುವುದರಿಂದ ಅತಿಸ್ವಚ್ಛ ವಾಗಿಯೂ, ಅನಾವೃತವಾಗಿಯೂ ಇರುವುದೆಂದು ತಿಳಿಯುತ್ತದೆ. ಅನಾವೃತವೆಂದರೆ ವಿಶ್ವವನ್ನು ಪ್ರತಿಬಿಂಬಿಸುತ್ತಿದ್ದರೂ ಇತರ ಪದಾರ್ಥಗಳಿಂದ ಆಚ್ಛಾದಿಸಲ್ಪಡದೆ ಇರುತ್ತ ದೆಂದು ಅರ್ಥ. ಇದು ತಿಳಿಯಲು ಗಹನವಾಗಿರುತ್ತದೆ ಮತ್ತು ಗಭೀರವಾಗಿರುತ್ತದೆ. ಈ ಕಾರಣದಿಂದ ಸಂವಿತ್ತಿಗೆ ಮಹಾಹ್ರದ (ಮಹಾಸಾಗರ) ವನ್ನು ದೃಷ್ಟಾಂತವಾಗಿ ಕೊಟ್ಟಿದೆ. ಈ ಸಂವಿತ್‌ಶಕ್ತಿಯನ್ನು ಅನುಸಂಧಾನಮಾಡುವುದರಿಂದ ಸತತವಾದ ಅಂತರ್ಮುಖೀನತೆಯ ದೆಶೆಯಿಂದ ಸಂವಿತ್ತಾದಾತ್ಮ್ಯ ವಿಮರ್ಶನವೇರ್ಪಡುತ್ತದೆ.

ಮುಂದೆ ಹೇಳುವ ಶಬ್ದರಾಶಿಯ ಸಾರಭೂತವಾಗಿರುವ ಪೂರ್ಣಾಹಂತಾ ವಿಮರ್ಶನವು ಮಂತ್ರವೀರ್ಯಾನುಭವದಿಂದ ಸ್ವಾತ್ಮರೂಪವಾಗಿ ಸ್ಫುರಿಸುತ್ತದೆ. ಸಂವಿತ್ ಶಕ್ತಿಯು ಇಚ್ಛಾದಿ ರೂಪದಿಂದ ಅಕಾರಾದಿ ಕ್ಷಕಾರದವರೆಗೆ ೫೦ ಮಾತೃಕಾ ರೂಪದಿಂದ ಈ ವಿಶ್ವವನ್ನೆಲ್ಲಾ ತೋರ್ಪಡಿಸುತ್ತಿರುತ್ತದೆ ಎಂದು ಹೇಳಿ ಮಂತ್ರೋದ್ಧಾರವನ್ನು ತೋರಿಸಿರುವರು. —ಮಾಲಿನೀ ವಿಜಯ

ಆ ಪರಾಶಕ್ತಿಯೇ ಮಹಾಹ್ರದ. ಇದರ ಅನುಸಂಧಾನದಿಂದಲೇ ಮಂತ್ರವೀರ್ಯಾನುಭವ. ಈ ಮಾತೃಕಾ ಚಕ್ರವನ್ನು ತಿಳಿದರೆ ಉತ್ತಾರಕವಾಗುವುದು ತಿಳಿಯದಿದ್ದರೆ ಬಂಧಕವಾಗುವುದು.

ಹೀಗೆ 'ಚೈತನ್ಯಮಾತ್ಮಾ' ಎಂದು ಪ್ರಾರಂಭಿಸಿ ಸ್ವಾತಂತ್ರ್ಯಾವಭಾಸವಿಲ್ಲದಿರುವುದೆಲ್ಲಾ ಅಖ್ಯಾತಿಯೆಂದು ನಿರೂಪಿಸಿದ್ದಾಯಿತು. ಅದನ್ನೇ ಬಂಧವೆಂದು ತಿಳಿಸಿದ್ದಾಯಿತು. ಇದನ್ನು ತಡೆಯಲು ಭೈರವಸಮಾಪತ್ತಿಯನ್ನು ಸೂಚಿಸಿದ್ದಾಯಿತು. ಶಕ್ತಿಯನ್ನು ಅನುಸಂಧಾನಮಾಡುವುದರಿಂದ ಸ್ವಾನಂದಾಮೃತವನ್ನು ಪಡೆಯಬಹುದು. ಮಂತ್ರವೀರ್ಯದವರೆಗಿನ ಎಲ್ಲಾ ಸಿದ್ಧಿಗಳೂ ಶಕ್ತ್ಯನುಸಂಧಾನದಿಂದಲೇ ಉಂಟಾಗುವುವು. ಈ ಶಾಂಭವೋಪಾಯವನ್ನು ನಿರೂಪಿಸುವಾಗ ಮಧ್ಯೆ ಶಕ್ತಿಸ್ವರೂಪವನ್ನು ಹೇಳಿದ್ದಾಯಿತು.

ಶಕ್ತಿಮತ್ತಾ ಎಂದರೆ ಸ್ವಾತಂತ್ರ್ಯಸಾರಾ ಎಂದರ್ಥ.

ದ್ವಿತೀಯೋನ್ಮೇಷಃ

ಶಾಕ್ತೋಪಾಯ

ಹಿಂದಿನ ಉನ್ಮೇಷದಲ್ಲಿ ವಿಶ್ವಸ್ಫುರಣ ಕರ್ತೃವಾದ ಪೂರ್ಣಾಹಂತಾರೂಪಿಯಾದ ಆ ಪರಾಸಂವಿತ್ ಶಕ್ತಿಯು ಮಂತ್ರವೀರ್ಯ ಸ್ಫುರರೂಪವೆಂದು ತಿಳಿಸಿದೆ. ಈಗ ಆ ಮಂತ್ರದ ಸ್ವರೂಪವನ್ನು ಮುಂದಿನ ಸೂತ್ರದಲ್ಲಿ ವಿವರಿಸಿದೆ.

ಚಿತ್ತಂ ಮಂತ್ರಃ ||೧||

ಮಂತ್ರಸ್ವರೂಪ–ಆರಾಧಕನ ಚಿತ್ತವೇ ಮಂತ್ರ

ಯಾವುದರಿಂದ ಪರತತ್ತ್ವವು ವಿಮರ್ಶಿಸಲ್ಪಡುತ್ತದೆಯೋ ಮನನ ಮಾಡಲ್ಪಡುತ್ತದೆಯೋ ತಿಳಿಯಲ್ಪಡುತ್ತದೆಯೋ ಅದೇ ಚಿತ್ತ. ಈ ತಿಳಿವಳಿಕೆಯು ಪ್ರಣವಾದಿ ಅಕ್ಷರಗಳ ವಿಮರ್ಶನರೂಪವಾಗಿರುತ್ತದೆ. ಈ ಪ್ರಣವವು ಪೂರ್ಣವಾದ ತತ್ತ್ವ ಸ್ಫುರಣೆಯ ಪ್ರತೀಕವಾಗಿರುತ್ತದೆ. ಇದನ್ನು ಆಂತರಂಗಿಕವಾಗಿ ಅಭೇದ ದೃಷ್ಟಿಯಿಂದ ವಿಮರ್ಶಿಸಬೇಕು. ಈ ವಿಮರ್ಶೆಯು ಪರಮೇಶ್ವರ ಸ್ವರೂಪವನ್ನು ಅಭೇದಭಾವದಿಂದ ಮನನಮಾಡುವ ಕ್ರಮವಾಗಿರುವುದರಿಂದ ಮಂತ್ರವೆನಿಸುವುದು. ಈ ಕಾರಣದಿಂದ ಮಂತ್ರವು ಆ ಪರತತ್ತ್ವಸ್ಫುರಣದ ಮನನ ಧರ್ಮಾತ್ಮಕವಾಗಿದೆ. ಅದರ ತತ್ತ್ವವು ಆನಂದಮಯವಾದದ್ದು ಮತ್ತು ಸ್ವತಃ ಸ್ಫುರಿಸುವಂಥಾದ್ದು ಎಂಬ ಎರಡು ಸ್ಥಿತಿಗಳನ್ನುಳ್ಳದ್ದಾಗಿದೆ. ಈ ಸ್ಫುರಣವೇ ವಿಶ್ವರೂಪವಾಗಿ ವಿರಾಜಿಸುತ್ತದೆ. ಈ ಸ್ಫುರಣಶಕ್ತಿಯೇ ಸ್ವಾತ್ಮವಿಮರ್ಶನಕ್ರಮದಿಂದ ಮನನಧರ್ಮಾತ್ಮಕವಾಗಿದೆ. ಅಭೇದವಿಮರ್ಶನಾದೃಷ್ಟಿಯಿಂದ ಭೇದಮಯವಾದ ಸಂಸಾರವನ್ನು ಕಳೆಯುವುದಾಗಿದೆ. ಆದುದರಿಂದ ಮಂತ್ರವು ಸಾಧಕನನ್ನು ರಕ್ಷಿಸುವ ಉಪಾಯವಾಗಿದೆ.

' ಮಂತಾರಂ ತ್ರಾಯತೇ ಇತಿ ಮಂತ್ರಃ '

ಹೀಗಿರುವುದರಿಂದ ವ್ಯವಹಾರದಲ್ಲಿರುವ ಅಕ್ಷರ ಸಮೂಹ ರೂಪವಾದ ಮಂತ್ರಗಳು ಅವುಗಳ ಮೂಲಕ ಧ್ಯಾನಮಾಡಬೇಕಾದ ದೇವತೆಗಳು ಇಲ್ಲಿ ಪ್ರಕೃತವಲ್ಲ. ಈ ಪ್ರಸಂಗದಲ್ಲಿ ಸಾಧಕನ ಚಿತ್ತವೇ ಮಂತ್ರ. ಉಚ್ಚರಿಸುವ ವರ್ಣಸಮೂಹವೇ ಮಂತ್ರವಲ್ಲ. ವರ್ಣಗಳಿಗೆ ಜೀವಭೂತವಾಗಿರುವ ಶಕ್ತಿಯೇ ಮಂತ್ರ. ಜಪಮಾಡುವ ಮಂತ್ರ ಬೇರೆ, ಜಪ ಮಾಡುವವನು ಬೇರೆ ಎಂಬುವುದು ಸಿದ್ಧವಾಗುವುದಿಲ್ಲ. ವಾಚ್ಯ ಮತ್ತು ವಾಚಕಗಳಿಗೆ ತತ್ತ್ವತಃ ಭೇದವಿಲ್ಲದಿರುವುದರಿಂದ ಆರಾಧ್ಯ ಮತ್ತು ಆರಾಧಕ ಎಂಬ ಭೇದ ಬುದ್ಧಿಯು ಸಿದ್ಧಿಯನ್ನು ಪಡೆಯಲಾರದು. ಈ ಎರಡು ಭೇದಗಳು ಸಂವಿತ್ ಶಕ್ತಿಯ ಎರಡು ಶಾಖೆಗಳಾಗಿರುವುವು. ಈ ಭಾವನೆಯಿಂದ ಸಾಧಕನೂ ಸಾಧಕನ ಚಿತ್ತವೂ ಈ ಮನನದಿಂದ ಶಿವಾಭಿನ್ನರೂಪಗಳೆಂದು ಸಿದ್ಧವಾಗುತ್ತವೆ.

ಧ್ಯಾನಮಾಡುವುದಕ್ಕೆ ನಿರ್ದಿಷ್ಟವಾಗಿರುವ ತತ್ತ್ವವೇ ದೇವತೆ. ಅದು ಸಾಧಕನ ಅಭಿರುಚಿಯಂತೆ ಇರಬಹುದು. ಆ ದೇವತೆಯನ್ನು ಪ್ರಸನ್ನವಾಗಿ ಮಾಡುವುದಕ್ಕೆ

ಅಥವಾ ವಶಪಡಿಸಿಕೊಳ್ಳುವುದಕ್ಕೆ ಸಾಧನವಾಗಿರುವುದು ವರ್ಣಸಮುದಾಯ. ಇದೇ ಮಂತ್ರ. ಮಂತ್ರಗಳು ಅನೇಕ ಬಗೆಯಾಗಿರುತ್ತವೆ. ಯಾರು ಜಪ ಧ್ಯಾನಗಳಿಂದ ಸಿದ್ಧಿಯನ್ನು ಪಡೆಯಬೇಕೆಂದು ಕೋರುವರೋ ಅವರೇ ಮಂತ್ರಿಗಳು. ಈ ರೀತಿಯಾಗಿ ಮಂತ್ರ, ದೇವತೆ, ಸಾಧಕನಾದ ಮಂತ್ರಿ—ಈ ಮೂರುಭೇದಗಳೂ ಸಾಮಾನ್ಯವಾಗಿ ಪ್ರಸಿದ್ಧವಾಗಿವೆ. ತಾತ್ತ್ವಿಕ ದೃಷ್ಟಿಯಿಂದ ಪರಿಶೀಲಿಸಿದರೆ ಈ ಮೂರುಭೇದಗಳೂ ಅಪೇಕ್ಷಾ ಬುದ್ಧಿಯಿಂದ ತೋರುವ ವಿಷಯಗಳಾಗಿರುತ್ತವೆ. ಅಖಂಡವಾದ ಅನಂತವಾದ ಚಿತ್ತೇ ಎಲ್ಲಕ್ಕೂ ಮೂಲಕಾರಣವಾಗಿರುತ್ತದೆ. ಅದರ ಸ್ಫುರಣವೇ ಸ್ಥೂಲ ಮತ್ತು ಸೂಕ್ಷ್ಮರೂಪದಿಂದಿರುವ ಈ ವಿಶ್ವ. ಚಿತ್ತೇ ಲೀಲೆಯಿಂದ ವಿಶ್ವವನ್ನು ಹೊರಹೊಮ್ಮಿ ಸಿದ್ದರೂ ಮರಳಿ ತನ್ನಲ್ಲಿಯೇ ಉಪಸಂಹರಿಸಿಕೊಳ್ಳುತ್ತದೆ. ಅಭಿನ್ನವಾದ ಆ ಪರ ತತ್ತ್ವದ ಸ್ಫುರಣವೇ ಈ ವಿಶ್ವವೆಂದು ವಿಮರ್ಶೆಮಾಡುವಾಗ ಪೂರ್ಣಾಹಂತಾ ವಿಮರ್ಶನ ವೇರ್ಪಡುತ್ತದೆ. ಆ ಸ್ಥಿತಿಯನ್ನು ಸಾಧಿಸುವುದೇ ಮುಖ್ಯಗುರಿ. ಸ್ವಚ್ಛವಾದ ತಿಳಿವಳಿಕೆ ಯಿಂದ ಅಭೇದ ವ್ಯಾಪ್ತಿಯನ್ನು ಪಡೆಯುವುದಕ್ಕೆ ತೊಡಗಿರುವ ಸಾಧಕನಿಗೆ ಮಂತ್ರ, ದೇವತೆ, ಮಂತ್ರಿ ಎಂಬ ಭೇದವಿಲ್ಲ. ಈ ಮೂರು ಅಂಶಗಳಲ್ಲಿಯೂ ಅಭೇದಾನು ಸಂಧಾನವೇ ಆ ಸಾಧಕನ ಹಿರಿಮೆ ಮತ್ತು ಪರಿಪೂರ್ಣತೆ.

> ಪೃಥಙ್ಮಂತ್ರಃ ಪೃಥಙ್ಮಂತ್ರೀ ನ ಸಿದ್ಧ್ಯತಿ ಕದಾಚನ ।
> ಜ್ಞಾನಮೂಲಮಿದಂ ಸರ್ವಮನ್ಯಥಾ ನೈವ ಸಿದ್ಧ್ಯತಿ ॥
>
> —ಶ್ರೀಕಂಠಸಂಹಿತಾ

> ಮಂತ್ರಾಣಾಂ ಜೀವಭೂತಾ ತು ಯಾ ಸ್ಮೃತಾ ಶಕ್ತಿರವ್ಯಯಾ ।
> ತಯಾಹೀನಾ ವರಾರೋಹೇ ನಿಷ್ಫಲಾಃ ಶರದಭ್ರವತ್ ।
>
> —ಶ್ರೀತಂತ್ರಸದ್ಭಾವ

ಪ್ರಯತ್ನಃ ಸಾಧಕಃ ॥೨॥

ಮಂತ್ರಸಮಾವೇಶದಲ್ಲಿ ಸಾಧಕನ ಸ್ಥಿತಿ

ಮೇಲೆ ಹೇಳಿದ ಕ್ರಮದಿಂದ ಮಂತ್ರವನ್ನು ಮನನಮಾಡಬೇಕೆಂಬ ಇಚ್ಛೆ ಇರುವವರಿಗೆ ಮೊದಲನೆಯ ಉನ್ಮೇಷದಲ್ಲಿ ಸ್ವಾಭಾವಿಕವಾದ ಪ್ರಯತ್ನವನ್ನು ಸೂಚಿಸಿದ್ದಾಯಿತು. ಆ ಪ್ರಯತ್ನವು ಸಾಧಕನಿಗೂ ಮತ್ತು ಮಂತ್ರ ದೇವತೆಗೂ ತಾದಾತ್ಮ್ಯ ವನ್ನುಂಟುಮಾಡುತ್ತದೆ. ಉದಾಹರಣೆಗೆ ಆಕಾಶದಲ್ಲಿ ಹಾರುವ ಹಕ್ಕಿಯು ತನ್ನ ಆಹಾರ ವನ್ನು ಭೂಮಿಯ ಮೇಲೆ ಕಂಡಾಗ ಹೇಗೆ ಸಹಜವಾಗಿ ಕ್ಷಿಪ್ರದಲ್ಲಿಯೇ ವೇಗವಾಗಿ ನೇರವಾಗಿ ಕೆಳಕ್ಕೆ ನುಗ್ಗುತ್ತದೆಯೋ, ಬಿಲ್ಲಿನಿಂದ ಬಾಣವು ಹೇಗೆ ಜಾರುತ್ತದೆಯೋ ಹಾಗೆ ಯೋಗಿಯು ತನ್ಮಯನಾಗಿ ಪರಪ್ರಕಾಶವನ್ನು ಮನನಮಾಡಬೇಕು. ಇಂತಹ ಸ್ವಾಭಾವಿಕವಾದ ಪ್ರಯತ್ನಬಲದಿಂದ ಅಂದರೆ ದೃಢವಾದ ಮನೋಭಾವನೆಯಿಂದ ಪರ ಪ್ರಕಾಶವನ್ನು ಪಡೆಯಬೇಕು. ಇಂತಹ ಭೇದವಿಲ್ಲದ ಪರಪ್ರಕಾಶವನ್ನು ಪಾರಿಭಾಷಿಕ ವಾಗಿ 'ಬಿಂದು' ಎಂದು ಕರೆಯುತ್ತಾರೆ. ಈ ಸ್ವಾಭಾವಿಕವಾದ ಪ್ರಯತ್ನವು ವಿಮರ್ಶಾ

ರೂಪವಾಗಿರುತ್ತದೆ. ಈ ಪ್ರಯತ್ನವು ಸ್ಥಾನ ಕರಣ ಪ್ರಯತ್ನಗಳಿಂದ ಅಂದರೆ ಶಬ್ದಗಳು ಉತ್ಪತ್ತಿಯಾಗುವ ಜಾಗಗಳು, ಹಲ್ಲು ತುಟಿ ಮೊದಲಾದ ಅವಯವಗಳು, ಉಚ್ಚಾರಣೆಯ ಒತ್ತಡದಿಂದ ಬರತಕ್ಕ ಅಂಶಗಳು ಇವುಗಳಿಂದ ಸಿದ್ಧವಾಗುವ ಬೀಜಾಕ್ಷರಗಳ ಉಚ್ಚಾರಣಾ ರೂಪವಾಗಿಲ್ಲ. ಧ್ಯಾನಮಾಡುವವನ ಮನಸ್ಸಿನಲ್ಲಿ ಧ್ಯಾನ ಮಾಡತಕ್ಕ ತತ್ತ್ವವು ತಾದಾತ್ಮ್ಯವನ್ನು ಪಡೆಯುವಿಕೆಯೇ ಇಲ್ಲಿ ಪ್ರಯತ್ನವೆನಿಸುವುದು. ಆ ಪ್ರಯತ್ನವು ಸ್ವಾಭಾವಿಕವಾಗಿರಬೇಕು. ಪರಪ್ರೇರಿತವಾಗಿರಕೂಡದು. ಈ ರೀತಿಯಾಗಿ ಸಾಧಕನಿಂದ ಸಾಧಿಸಬೇಕಾಗಿರುವ ಮಂತ್ರಸ್ವರೂಪವನ್ನು ಹಿಂದೆ ಸೂಚಿಸಿದ್ದನ್ನೇ ಈಗ ವಿಶದವಾಗಿ ವಿವರಿಸಿದೆ.

ಅವತರಣಿಕೆ— ಈಗ ಮಂತ್ರವೀರ್ಯವೆಂದು ಹೇಳಿದ ಪ್ರಕರಣದಲ್ಲಿ ವೀರ್ಯ ಎಂದರೇನು ಎಂಬ ವಿಷಯವನ್ನು ಮುಂದಿನ ಸೂತ್ರದಲ್ಲಿ ವಿವರಿಸುತ್ತಾರೆ.

ವಿದ್ಯಾಶರೀರಸತ್ತಾ ಮಂತ್ರರಹಸ್ಯಂ ॥೩॥

ಮಂತ್ರವೀರ್ಯದ ಲಕ್ಷಣ

ವಿದ್ಯಾ ಎಂದರೆ ಅಭಿನ್ನವಾದ ಪರಪ್ರಕಾಶ. ಆ ಪರಪ್ರಕಾಶವನ್ನೇ ಆಧಾರವಾಗಿ ಉಳ್ಳದ್ದು ವಿದ್ಯಾಶರೀರ. ಅದೇ ಶಬ್ದರಾಶಿ. ಅದರ ಸಾರಭೂತವಾಗಿರುವುದು ಈ ಸಮಸ್ತ ವಿಶ್ವದ ರೂಪಗಳಲ್ಲಿ ಅಭಿನ್ನವಾಗಿರುವಂತಹ ಶಕ್ತಿ. ಅದೇ ಪೂರ್ಣಾಹಂ ವಿಮರ್ಶಾರೂಪವಾದ ಸ್ಫುರಣೆ. ಅದೇ ಮಂತ್ರಗಳ ಸಾರ. ಅದನ್ನೇ ವೀರ್ಯ, ರಹಸ್ಯ, ಉಪನಿಷತ್ ಮೊದಲಾದ ಶಬ್ದಗಳಿಂದ ಶಾಸ್ತ್ರಕಾರರು ಹೇಳುತ್ತಾರೆ. ಅಭೇದ ಅಂತ ತಿಳಿಯುವುದೇ ರಹಸ್ಯ.

ವ್ಯವಹಾರವೆಲ್ಲಾ ಅಕ್ಷರಗಳಿಂದ ನಡೆಯಬೇಕಾಗಿದೆ. ಅಕ್ಷರಗಳೇ ಮಂತ್ರಗಳು. ಈ ಮಂತ್ರಗಳು ಶಕ್ತಿರೂಪವಾಗಿವೆ. ಈ ಶಕ್ತಿಯನ್ನೇ ಮಾತೃಕಾ ಎಂದು ತಿಳಿಯಬೇಕು. ಈ ಮಾತೃಕಾ ಶಿವಾತ್ಮಕವಾಗಿದೆ. ಈ ರಹಸ್ಯವನ್ನು ತಿಳಿದಿರುವವರಿಗೆ ತತ್ತ್ವದ ಅರಿವು ಪೂರ್ಣವಾಗಿ ಉಂಟಾಗುತ್ತದೆ. ಈ ರಹಸ್ಯ ತಿಳಿಯದಿದ್ದರೆ ಬರೀ ಅಕ್ಷರ ರಾಶಿಯ ತಿಳಿವಳಿಕೆಯಾಗುತ್ತದೆ. ಈ ವಿಶ್ವವೆಲ್ಲಾ ಆ ಮಾತೃಕಾದೇವಿಯಿಂದ ಪರಿಪೂರ್ಣವಾಗಿದೆ.

ಸರ್ವೇ ವರ್ಣಾತ್ಮಕಾ ಮಂತ್ರಾಃ ತೇ ಚ ಶಕ್ತ್ಯಾತ್ಮಕಾಃ ಪ್ರಿಯೇ ।
ಶಕ್ತಿಸ್ತು ಮಾತೃಕಾ ಜ್ಞೇಯಾ ಸಾ ಚ ಜ್ಞೇಯಾ ಶಿವಾತ್ಮಿಕಾ ॥

—ಶ್ರೀತಂತ್ರಸದ್ಭಾವ

ವರ್ಣಾಕಾರದಿಂದ ನಿಯಮಿತವಾಗದೆ ಅಕ್ಷರಗಳಿಗೆಲ್ಲಾ ಮೂಲವಾಗಿದ್ದು ಸೂಕ್ಷ್ಮವಾಗಿ ವ್ಯಾಪಿಸಿರುವ ಶಕ್ತಿಗೆ "ನಿರಾಚಾರ" ಎಂದು ಹೇಳುತ್ತಾರೆ. ಆ ಶಕ್ತಿಯು ಹೃದಯವನ್ನು ಸುತ್ತಿಕೊಂಡು ಹೊರಗೆ ಭೇದವನ್ನೂ ಅಂತರ್ಯದಲ್ಲಿ ಅಭೇದವನ್ನೂ ಒಳಗೊಂಡಿರುತ್ತದೆ. ಇದೇ ಶಕ್ತಿಯೇ ವಿಶ್ವವನ್ನು ಪ್ರಕಾಶಪಡಿಸಲು ದ್ವಾದಶಾಂತ,

ಭ್ರೂಮಧ್ಯ, ಹೃದಯ ಮೊದಲಾದ ಸ್ಥಾನಗಳಲ್ಲಿ ಸ್ಫುರಿಸುತ್ತದೆ. ಸರ್ವತ್ರ ಪ್ರಕಾಶವು ಸಮಾನವಾಗಿದ್ದರೂ ಸ್ಥಾನಭೇದದಿಂದ ವ್ಯತ್ಯಾಸವನ್ನು ಪಡೆದಿರುತ್ತದೆ. ಇದು ಮೂಲ ರೂಪದಲ್ಲಿ ಅಭೇದವ್ಯಾಪ್ತಿಯನ್ನು ಹೊರಹೊಮ್ಮಿಸುತ್ತದೆ. ಈ ಶಕ್ತಿಯು ಹೊರಹೊಮ್ಮು ವಾಗ ಸ್ವರ ವ್ಯಂಜನಾದಿ ರೂಪಗಳಿಂದ ೫೦ ಸಂಖ್ಯೆಗಳಲ್ಲಿ ವ್ಯಕ್ತವಾಗುತ್ತದೆ. ನಾಲಿಗೆ ಯಿಂದ ಉಚ್ಚರಿಸುವ ವೇಳೆಗೆ ಈ ಭೇದಗಳು ಸ್ಪಷ್ಟವಾಗಿ ಕಾಣುತ್ತವೆ. ಈ ರೀತಿಯಲ್ಲಿ ಮಾತೃಕಾ ಶಕ್ತಿಯು ಮೂಲರೂಪದಲ್ಲಿ ಅಭಿನ್ನವಾಗಿಯೂ ಅಭಿವ್ಯಕ್ತವಾಗುವಾಗ್ಗೆ ಭೇದರೂಪವನ್ನು ಪಡೆಯುತ್ತಾ ಅಕ್ಷರ ರೂಪವನ್ನು ಹೊಂದುತ್ತಾ ಅನಂತಭೇದ ರೂಪವಾದ ವ್ಯವಹಾರಗಳಿಗೆ ಆಶ್ರಯವಾಗಿರುತ್ತದೆ. ಪ್ರತಿಯೊಂದು ಪವಿತ್ರ ಗ್ರಂಥ ದಲ್ಲಿಯೂ ಈ ರಹಸ್ಯವನ್ನು ಒಂದಲ್ಲ ಒಂದು ರೀತಿ ವಿವರಿಸಿರುತ್ತಾರೆ. ಇದರಿಂದ ಈ ರಹಸ್ಯವನ್ನು ಪರಿಪೂರ್ಣವಾಗಿ ತಿಳಿಯಲು ಯಾರಿಗೆ ಸಾಧ್ಯವಿಲ್ಲವೋ ಅಂತಹವರು ತಿಳಿದ ಗುರುಗಳಿಂದ ತಿಳಿಯಬೇಕು.

ಅವತರಣಿಕೆ—ಯಾರಿಗೆ ಪರತತ್ತ್ವಾನುಸಂಧಾನವು ರುಚಿಸುವುದಿಲ್ಲವೋ ಅವರಿಗೆ ಈ ಸಾಧನಾಭ್ಯಾಸದಲ್ಲುಂಟಾಗುವ ಪರಿಮಿತ ಸಿದ್ಧಿಗಳು ರುಚಿಸುತ್ತವೆ.

ಗರ್ಭೇ ಚಿತ್ತವಿಕಾಸೋಽವಿಶಿಷ್ಟ ವಿದ್ಯಾಸ್ವಪ್ನಃ ॥೪॥

ಅಶುದ್ಧ ವಿದ್ಯೆಯ ಲಕ್ಷಣ ಮತ್ತು ಅದರಿಂದಾಗುವ ಭ್ರಾಂತಿ

ಗರ್ಭ ಅಂದರೆ 'ಅಖ್ಯಾತಿ'—'ಅಜ್ಞಾನ'. ಇದರಿಂದ ಪರಿಮಿತವಾದ ಸಿದ್ಧಿ ಗಳಲ್ಲಿ ತೃಪ್ತಿಯುಂಟಾಗುತ್ತದೆ. ಪರಮಾರ್ಥವನ್ನು ಸಾಧಿಸದೆ ಹೋದರೂ ಅಲ್ಪಸಿದ್ಧಿ ಗಳಲ್ಲಿ ಸಂತೋಷವುಂಟಾಗುವುದರಿಂದ ಇವು ಎಲ್ಲರಿಗೂ ಸಮಾನವಾಗಿರುತ್ತವೆ. ಇದರಲ್ಲಿ ಅತಿಶಯವೇನೂ ಇಲ್ಲ. ಇದು ಕಿಂಚಿಜ್ಞತ್ವರೂಪದ ಫಲ. ಅಶುದ್ಧವಿದ್ಯಾಸ್ವಭಾವ. ಇದು ಸ್ವಪ್ನದಂತೆ ಭೇದಜ್ಞಾನದಿಂದುಂಟಾಗುವ ವಿಕಲ್ಪರೂಪವಾದ ಭ್ರಮೆ. ಇದು ವ್ಯವಹಾರದಲ್ಲಿ ಸಿದ್ಧಿಯಾದರೂ ಮೋಕ್ಷಕ್ಕೆ ವಿಘ್ನವಾಗಿರುತ್ತದೆ. ಈ ಬಗೆಯ ಸಾಧಕರು ಚಿದ್ವಿಕಾಸವನ್ನು ಪರಿಪೂರ್ಣವಾಗಿ ಪಡೆಯಲಾರರು.

ಅವತರಣಿಕೆ—ಕೆಲವರು ಈ ಪರಿಮಿತ ಸಿದ್ಧಿಗಳನ್ನು ನಿರಾಕರಿಸಿ ಪರತತ್ತ್ವ ಸಾಕ್ಷಾತ್ಕಾರವನ್ನೇ ಗುರಿಯಾಗಿಟ್ಟುಕೊಂಡು ಮುಂದುವರಿಯುತ್ತಾರೆ.

ವಿದ್ಯಾಸಮುತ್ಥಾನೇ ಸ್ವಾಭಾವಿಕೇ ಖೇಚರೀ ಶಿವಾವಸ್ಥಾ ॥೫॥

ಖೇಚರೀ ಮುದ್ರೆಯ ಲಕ್ಷಣ-ಮಂತ್ರವೀರ್ಯ ಮತ್ತು ಮುದ್ರಾವೀರ್ಯಗಳ ಉಪದೇಶ

ಸಾಧಕನಿಗೆ ಹಿಂದೆ ಹೇಳಿದ ಸ್ವಾಭಾವಿಕವಾದ ವಿದ್ಯಾವಿಕಾಸವೇರ್ಪಟ್ಟಲ್ಲಿ ಪರಮೇಶ್ವರನ ಇಚ್ಛೆಯಿಂದ ಘಟಿಸಿದ ಮಿತಸಿದ್ಧಿಗಳನ್ನು ತಿರಸ್ಕರಿಸಿ ಸಹಜವಾದ ಚಿದ್ವಿ ಕಾಸದಲ್ಲಿ ಮುಳುಗುವನು. ಅಂತಹ ಸಾಧಕನಿಗೆ ಚಿದ್ಗಗನದಲ್ಲಿ ಆನಂದವನ್ನನುಭವಿಸುವ ಸ್ಥಿತಿಯುಂಟಾಗುತ್ತದೆ. ಇದಕ್ಕೆ ಖೇಚರಿ ಎಂದು ಹೆಸರು. 'ಖ' ಅಂದರೆ ಚಿದಾಕಾಶ.

'ಚರಿ' ಅಂದರೆ ಅದರಲ್ಲಿ ಸಂಚರಿಸುವವನು, ಆನಂದಿಸುವವನು, ಅನುಭವಿಸುವವನು ಎಂದರ್ಥ. ಇದೇ 'ಶಿವಾವಸ್ಥಾ' ಎನ್ನಿಸುತ್ತದೆ.

ಸಾಧಕನು ಪದ್ಮಾಸನದಲ್ಲಿ ಕುಳಿತು ನಾಭಿಸ್ಥಾನದಲ್ಲಿ ಮನಸ್ಸನ್ನು ನಿಲ್ಲಿಸಬೇಕು. ಅನಂತರ ಬ್ರಹ್ಮರಂಧ್ರದಲ್ಲಿರುವ ಪರತತ್ತ್ವವನ್ನು ಸಾಕ್ಷಾತ್ಕರಿಸಲು ಹೃದಯ ಭ್ರೂಮಧ್ಯಗಳ ಮೂಲಕ ಶಕ್ತಿಯನ್ನು ಪ್ರೇರೇಪಿಸಿ ದ್ವಾದಶಾಂತವನ್ನು ಸೇರಿಸಬೇಕು. ಇಂದ್ರಿಯ ದ್ವಾರಗಳಿಂದುಂಟಾಗುವ ತಿಳಿವಳಿಕೆಗಳನ್ನೆಲ್ಲಾ ತಡೆದು ದ್ವಾದಶಾಂತದಲ್ಲಿರುವ ಪರತತ್ತ್ವದೊಡನೆ ಐಕ್ಯವನ್ನು ಸಂಪಾದಿಸಬೇಕು. ಈ ರೀತಿಯಲ್ಲಿ ಭೇದಾತ್ಮಕವಾಗಿರುವ ಮಾಯೀಯವಾದ ಎಲ್ಲಾ ಬಗೆಯ ಅಶಾಂತಿಗೂ ಕಾರಣವಾಗಿರುವ ತೊಂದರೆಗಳನ್ನು ತಡೆದು ಚಿದಾತ್ಮಕ ಸ್ವರೂಪದಿಂದ ಆನಂದವನ್ನನುಭವಿಸುವಿಕೆಯೇ ಮಂತ್ರವೀರ್ಯ ಅಥವಾ ಮುದ್ರಾವೀರ್ಯ ಎಂದು ಉಪದೇಶಿಸಿದೆ.

ಮಂತ್ರವೀರ್ಯ ಅಂದರೆ 'ಅಹಂ' ಎನ್ನುವ ಅನುಭವ. ಮುದ್ರಾ ಅಂದರೆ ಪರಭೈರವೀಯತಾ. ಖೇಚರಿಯೇ ಮುದ್ರೆ; ಮಂತ್ರವೀರ್ಯವೇ ಬೀಜ. ಈ ಎರಡನ್ನು ಯಾರು ಸಾಧಿಸುವರೋ ಅವರಿಗೆ ಶಾಶ್ವತವಾದ ಶಾಂತಿಯು ಲಭಿಸುವುದು. ಯಾವಾಗ ಭೇದಜ್ಞಾನದಿಂದುಂಟಾದ ಅಶಾಂತಿಯು ಕಳೆಯುತ್ತದೆಯೋ ಆಗ ಪರಮಪದ ಪ್ರಾಪ್ತಿಯಾಗುವುದು.

ಅವತರಣಿಕೆ—ಮುದ್ರಾ ಮತ್ತು ಮಂತ್ರವೀರ್ಯಗಳನ್ನು ಸಾಧಿಸುವುದರಲ್ಲಿ 'ಗುರುರುಪಾಯಃ'

ಗುರುರುಪಾಯಃ ॥೬॥

ಬಲಪ್ರಾಪ್ತಿಗೆ ಉಪಾಯ

ಗುರುವು ಉಪಾಯವಾಗಿರುವನು. ಗುರು ಎಂಬ ಪದದಲ್ಲಿ 'ಗು' ಎಂದರೆ ಕತ್ತಲೆ, 'ರು' ಎಂದರೆ ಆ ಕತ್ತಲೆಯನ್ನು ಹೋಗಲಾಡಿಸುವವನು; ಅಜ್ಞಾನವೆಂಬ ಕತ್ತಲೆಯನ್ನು ತೊಡೆದು ಜ್ಞಾನಜ್ಯೋತಿಯನ್ನು ಬೆಳಗಿಸುವವನು ಎಂದು ತಾತ್ಪರ್ಯ. ಇದು ಪದಾರ್ಥ.

ಉಪದೇಶ ಮಾಡುವವನು ಗುರು. ಮೇಲೆ ಹೇಳಿದ ಮುದ್ರಾವೀರ್ಯ ಮಂತ್ರವೀರ್ಯಗಳನ್ನು ಪಡೆಯುವುದಕ್ಕೆ ಗುರುವು ಉಪಾಯವಾಗಿರುವನು. ಅಗಾಧವಾದ ಸಂಶಯಗಳನ್ನು ಉದ್ಧರಿಸುವ ವಾಕ್ಯವೇ "ಗುರುಭಾರತಿ" (ಗುರುವಿನ ಮಾತು). ಈ ವಾಕ್ಕು ಪ್ರತ್ಯಕ್ಷವಾಗಿ ಗುರುವಿನ ಮೂಲಕ ಬಂದರೂ ಅದು ಪರಮೇಶ್ವರನ ಅನುಗ್ರಹ ರೂಪವಾದ ಶಕ್ತಿಯೇ ಆಗಿರುತ್ತದೆ.

ಇಲ್ಲಿ ವ್ಯಕ್ತಿಯೇ ಗುರುವಲ್ಲ; ಗುರುತರವಾದದ್ದು ಶಕ್ತಿ. ಆ ಶಕ್ತಿ ಗುರುವಿನ ದ್ವಾರಾ ಬರುತ್ತದೆ. ಆ ಶಕ್ತಿಯೇ ಇವನಿಗೆ ಚಿದ್ವಿಕಾಸವನ್ನು ಅನುಭವಕ್ಕೆ ತಂದು

ಕೊಡುತ್ತದೆ. ಈ ಶಕ್ತಿಯು ಅನಂತವಾದದ್ದು, ಅಖಂಡವಾದದ್ದು ಎಂದು ವೇದ್ಯವಾಗಿ ಅನುಭವಕ್ಕೆ ಬಂದಾಗ ತನ್ನ ಸ್ವರೂಪಕ್ಕೂ ಶಕ್ತಿಗೂ ಶಿವನಿಗೂ ಇರುವ ತಾದಾತ್ಮ್ಯವು ಅನುಭವಕ್ಕೆ ಬರುತ್ತದೆ. ಈ ದೃಷ್ಟಿಯಿಂದ ತನಗೆ ತಾನೇ ಗುರುವಾಗಬೇಕೆಂಬ ಹಿರಿಯರ ನುಡಿ ಕೇಳಬರುತ್ತದೆ. ಇದು ತತ್ತ್ವಾರ್ಥ.

"ಸ ಗುರುರ್ಮತ್ಸಮಃ ಪ್ರೋಕ್ತೋ ಮಂತ್ರವೀರ್ಯ ಪ್ರಕಾಶಕಃ"

—ಮಾಲಿನೀ ವಿಜಯ

ಅಗಾಧ ಸಂಶಯಾಂಬೋಧಿ ಸಮುತ್ತರಣ ತಾರಿಣೀಮ್ ।
ವಂದೇ ವಿಚಿತ್ರಾರ್ಥಪದಾಂ ಚಿತ್ರಾಂ ತಾಂ ಗುರುಭಾರತೀಮ್ ॥

—ಸ್ಪಂದಶಾಸ್ತ್ರ

"ಶಕ್ತಿಚಕ್ರಂ ತದೇವೋಕ್ತಂ ಗುರುವಕ್ತ್ರಂ ತದುಚ್ಯತೆ" —ಮಾಲಿನೀ ವಿಜಯ

"ಗುರೋರ್ಗುರುತರಾ ಶಕ್ತಿರ್ಗುರುವಕ್ತ್ರಗತಾ ಭವೇತ್" —ತ್ರಿಶಿರೋಭೈರವ

ಈ ರೀತಿ ಅವಕಾಶವನ್ನು ಕೊಡುವುದರಿಂದ ಗುರುವು ಉಪಾಯ.

ಅವತರಣಿಕೆ—ಪ್ರಸನ್ನನಾದ ಗುರುವಿನ ದೆಶೆಯಿಂದ ಮಾತೃಕಾ ಚಕ್ರ ಸಂಬೋಧವು ಶಿಷ್ಯನಿಗುಂಟಾಗುತ್ತದೆ.

ಮಾತೃಕಾಚಕ್ರ ಸಂಬೋಧಃ ॥೭॥

ಗುರುಪ್ರಸಾದ

ಅಕ್ಷರಗಳಲ್ಲಿ ಮೊದಲನೆಯದು 'ಅ'. ಇದರಲ್ಲಿಯೇ ಎಲ್ಲವೂ ಅಡಗಿದೆ. ಇದು ಪರತತ್ತ್ವವನ್ನು ಸೂಚಿಸುತ್ತದೆ. ಪರತತ್ತ್ವವು ತನ್ನ ಸ್ವಾತಂತ್ರ್ಯದಿಂದ ವಿಶ್ವವನ್ನು ತನ್ನಲ್ಲಿಯೇ ಹೊರಹೊಮ್ಮಿಸುವಾಗ ಶಿವಶಕ್ತಿ ರೂಪಗಳನ್ನು ಅಭಿವ್ಯಕ್ತಪಡಿಸುತ್ತದೆ. ಇಲ್ಲಿ ಶಿವತ್ವವನ್ನು ಬಿಡದಿರುವ ಸ್ವಭಾವ ಪೂರ್ಣಾಹಂತಾ. ಇದೇ ಅನುತ್ತರಾಶಕ್ತಿ. ಹೀಗೆ ಅಕಾರವು ಶಿವ ಮತ್ತು ಶಕ್ತಿಯಿಂದ ಒಡಗೂಡಿದ ಸಮಷ್ಟಿ ಅರ್ಥವನ್ನು ಸೂಚಿಸುತ್ತದೆ. ಇದರ ವಿಕಾಸವೇ ಮಿಕ್ಕ ವರ್ಣಪ್ರಪಂಚ. ಸಂಗ್ರಹವಾಗಿ ಹೇಳುವುದಾದರೆ ಅ ಇ ಉ ಋ ಒ ಈ ಐದು ಸ್ವರವರ್ಣಗಳು ಚಿತ್ ಆನಂದ ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳ ಮೂಲಕ ಜೀವಾತ್ಮನವರೆಗೂ ಇರುವ ವಿಶ್ವವನ್ನು ತೋರಿಸುತ್ತವೆ. ಈ ಒಂದೊಂದು ಶಕ್ತಿಗೂ ಐದೈದು ಭೇದಗಳುಂಟು. ಇದರಿಂದ ಇಪ್ಪತ್ತೈದಾಯಿತು. ಈ ಕ್ರಮದಿಂದ ಶಕ್ತಿಗಳು ಇತರ ವರ್ಣಗಳಿಂದಲೂ ವಾಚ್ಯಗಳಾಗಿವೆ. ಋ ೠ ಒ ಓ ಈ ಅಕ್ಷರಗಳು ಮಿಂಚಿನಂತೆ ಕ್ಷಣಿಕವಾಗಿರುವ ಭಾವನಾತರಂಗಗಳನ್ನು ಎಬ್ಬಿಸುತ್ತವೆ. ಯ ರ ಲ ವ ಈ ನಾಲ್ಕು ಅಕ್ಷರಗಳು ಸ್ವತಂತ್ರವಾಗಿ ಬೇರೆ ಅರ್ಥವನ್ನು ಸೂಚಿಸಲಾರವು. ಹೀಗೆ ಅನುತ್ತರಾ, ಆನಂದ, ಇಚ್ಛಾ, ಅ ಆ ಇ ಇವು ಮೂರೂ ಸೇರಿ ಎ ಕಾರವಾಯಿತು. ಇದನ್ನು ತ್ರಿಕೋಣ ಬೀಜವೆಂದೂ, ಯೋನಿ ಬೀಜವೆಂದೂ ಕರೆಯುತ್ತಾರೆ. ಅನುತ್ತರಾ ಆನಂದ ಉನ್ಮೇಷ ಇವುಗಳ ಯೋಜನೆಯಿಂದ ನಿರ್ಮಾಣ ಶಕ್ತಿಯನ್ನು ಅಂಗೀಕರಿಸಿದ ಅಂಶವನ್ನು 'ಓ' ಕಾರವು ಸೂಚಿಸುತ್ತದೆ.

ಈ ಮೇಲ್ಕಂಡ ಏ ಓ ಎರಡರ ಸಂಯೋಗದಿಂದ ಷಟ್ಕೋಣರೂಪದಿಂದ ಶೂಲ ಬೀಜವೇರ್ಪಡುತ್ತದೆ. ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳಿಂದ ಕೂಡಿ ಪೂರ್ಣವಾದ ಕ್ರಿಯಾಶಕ್ತಿಯೇ ಪ್ರಧಾನವಾಗುಳ್ಳದ್ದಾಗಿರುವ ಶಕ್ತಿತ್ರಯವು ಸಂಘಟ್ಟನಮಯವಾಗಿದೆ ಯೆಂದು ಹೇಳಿದ್ದಾಯಿತು.

ಒಂದೇ ಸಲ ಬಹಿಃಪ್ರಪಂಚವನ್ನೂ ಅಂತಃಪ್ರಪಂಚವನ್ನೂ ತೋರಿಸುತ್ತಾ ಇರುವುದು ವಿಸರ್ಗ 'ಃ'. ಇಲ್ಲಿ ಎರಡು ಬಿಂದುಗಳಿವೆ. ಅಂತರ್ವಿಮರ್ಶನೆಯಿಂದ ಅನುತ್ತರವೂ, ಬಹಿರ್ವಿಮರ್ಶನೆಯಿಂದ ಕಕಾರಾದಿ ಪಂಚವರ್ಗೀಯಗಳಿಂದ ವಾಚ್ಯ ವಾದ ಪ್ರಮೇಯಗಳೂ ಉದ್ದೇಶಿಸಲ್ಪಟ್ಟಿರುತ್ತವೆ.

ಕಕಾರದಿಂದ ಮಕಾರದವರೆಗೂ ವಿಶ್ವವ್ಯವಹಾರ ನಡೆಯುತ್ತಲಿರುತ್ತದೆ. ಅಂತರ್ಯತೆಯಲ್ಲಿ ನಿಯತಿಯೇ ಮೊದಲಾದ ಕಂಚುಕಗಳನ್ನು ಈ ವರ್ಣಗಳು ತೋರಿಸುತ್ತವೆ. ಕೊನೆಯಲ್ಲಿ ಎಲ್ಲಾ ಸೃಷ್ಟಿಯ ಅಂತರ್ರೂಪವಾದ 'ಹ' ಎಂಬಕ್ಷರ ವಿದೆ. ಪ್ರತ್ಯಾಹಾರ ನ್ಯಾಯದಿಂದ 'ಅ' ಮತ್ತು 'ಹ' ಈ ಎರಡಕ್ಷರಗಳನ್ನು ಸೇರಿಸಿದರೆ 'ಅಹಂ' ಆಗುತ್ತದೆ. ಇದು ಮಹಾಮಂತ್ರವೀರ್ಯಾತ್ಮಕವಾದ 'ಅಹಂ ವಿಮರ್ಶಾ'. ಇಲ್ಲಿ ಅನುತ್ತರಾತ್ಮಕವಾದದ್ದು 'ಕ' ಕಾರ. ವಿಸರ್ಗಾತ್ಮಕವಾದದ್ದು 'ಸ' ಕಾರ. ಇವುಗಳ ಸಂಘಟ್ಟನರೂಪವಾಗಿರುವುದು 'ಕ್ಷ' ಕಾರ.

ಎಲ್ಲಾ ಪ್ರಕಾಶಗಳೂ ವಿಕಾಸಗಳೂ ಪೂರ್ಣಾಹಂತಾ ವಿಮರ್ಶನೆಯಲ್ಲಿ ಕೊನೆಗೊಳ್ಳುತ್ತವೆ. ಇಂತಹ ಮಹಾ ಪ್ರಭಾವವುಳ್ಳ ಮಾತೃಕಾ ಚಕ್ರವನ್ನು ಮೇಲೆ ಹೇಳಿದಂತೆ ಅನುತ್ತರ ಆನಂದ ಇಚ್ಛಾದಿ ಶಕ್ತಿಗಳಿಂದ ಕೂಡಿದುದಾಗಿಯೂ, ಚಿದಾನಂದ ಘನವಾಗಿಯೂ, ಸ್ವಸ್ವರೂಪ ಸಮಾವೇಶಮಯವಾಗಿಯೂ ಇದೆಯೆಂದು ಅನುಸಂಧಾನ ಮಾಡಬೇಕು.

ಪರಮೇಶ್ವರಿಯೇ ಸಂವಿಚ್ಛಕ್ತಿಯಾಗಿ ಕುಂಡಲಿನೀರೂಪದಲ್ಲಿರುತ್ತದೆ. ಸ್ವರಗಳೂ, ವ್ಯಂಜನಗಳೂ ವಿಸರ್ಗಗಳೂ, ಮೊದಲಾದ ಭೇದಗಳೆಲ್ಲಾ ಇದರ ವಿಲಾಸ. ಅನುಸಂಧಾನಕ್ರಮದಲ್ಲಿ ಮೊದಲನೆಯದಾದ 'ಅ' ಕಾರ ಕೊನೆಯದಾದ 'ಹ' ಕಾರ ಇವೆರಡನ್ನೂ ಬಿಟ್ಟರೆ ಮಂತ್ರಗಳೆಲ್ಲಾ ನಿಷ್ಫಲವಾಗುತ್ತವೆ. ತತ್ತ್ವಜ್ಞನಾದ ಗುರುವು ಶಿಷ್ಯನಿಗೆ ಈ 'ಅ' ಕಾರ ಮತ್ತು 'ಹ' ಕಾರಗಳ ಸಮಾವೇಶವನ್ನು ತಿಳಿಯಪಡಿಸ ಬೇಕು. ಮಾತೃಕಾ ಶಕ್ತಿಯು ಕ್ರಿಯಾತ್ಮಕವಾದದ್ದು. ಇದು ಬದ್ಧಾತ್ಮನಲ್ಲಿ ನೆಲಸಿರು ತ್ತದೆ. ಇದರ ಸ್ವಭಾವ ತಿಳಿಯದಿದ್ದರೆ ಬಂಧಕವಾಗಿಯೂ, ತಿಳಿದರೆ ಸಿದ್ಧಿಯನ್ನುಂಟು ಮಾಡುವುದಾಗಿಯೂ ಇದೆ.

ಅವತರಣಿಕೆ—ಇಂತಹ ಮಾತೃಕಾ ಚಕ್ರಸಂಬೋಧವನ್ನು ಪಡೆದಿರುವವನ ಶರೀರವೇ 'ಹವಿ'.

ಶರೀರಂ ಹವಿಃ ||೮||

ಈ ಶಕ್ತಿಯನ್ನು ಪಡೆದಿರುವವನೇ ಹವಿಸ್ಸು

ಎಲ್ಲಾ ಸಾಮಾನ್ಯ ಜನಗಳಿಂದ ಯಾವುದು ಪ್ರಮಾತೃವೆಂದು ಪ್ರಸಿದ್ಧವಾಗಿದೆಯೋ ಅದು ಸ್ಥೂಲ ಮತ್ತು ಸೂಕ್ಷ್ಮವಾಗಿರುವ ಶರೀರವಾಗಿರುತ್ತದೆ. ಅದು ಯೋಗಿಯಾದವನಿಗಿರುವುದಿಲ್ಲ. ಯೋಗಿಗೆ ವಿಶ್ವವೆಲ್ಲಾ ಚಿದಗ್ನಿಯಲ್ಲಿ ಅರ್ಪಿಸುತ್ತಲಿರುವ ಹವಿಸ್ಸಿನ ರೂಪದಿಂದಿರುತ್ತದೆ. ಅಂದರೆ ಶರೀರದಲ್ಲಿ ಪ್ರಮಾತೃತ್ವದ ಅಭಿನಿವೇಶವಿರುವುದಿಲ್ಲ. ಯಾವಾಗಲೂ ಚಿನ್ಮಾತೃತಾ ಅಭಿನಿವೇಶವಿರುತ್ತದೆ—ಇವನಿಗೆ ಬಂಧುಗಳು ಬಂಧುಗಳಲ್ಲ. ಶತ್ರುಗಳು ಶತ್ರುಗಳಲ್ಲ—ಜ್ಞಾನವಿಕಾಸದಿಂದ ಆತ್ಮಸಂಯಮ ಎಂಬ ಯೋಗಾಗ್ನಿಯಲ್ಲಿ ಎಲ್ಲವನ್ನೂ ಸಮರ್ಪಿಸಿರುವನು. ಬದ್ಧಜೀವಾತ್ಮನಿಗೆ ಕ್ಷೋಭವು ದೇಹಾತ್ಮಭ್ರಮೆಯಿಂದುಂಟಾಗುತ್ತದೆ.

ಅವತರಣಿಕೆ—ಈ ಭ್ರಾಂತಿಜ್ಞಾನವನ್ನು ಮೀರಿ ದೇಹಾದಿಗಳಲ್ಲಿ ಅಭಿಮಾನವಿಲ್ಲದೆ ಸರ್ವವ್ಯಾಪಿಯಾದ ಪರತತ್ತ್ವದಿಂದ ತಾನು ಬೇರೆಯಲ್ಲವೆಂಬ ಆಧ್ಯಾತ್ಮ ಭಾವನೆಯುಂಟಾಗುವಿಕೆಯೇ ಪರಮಪದ. ದೇಹಾದಿ ಪ್ರಮೇಯಗಳಲ್ಲಿ ಅಹಂ ಪ್ರತ್ಯಯವೇ ಕ್ಷೋಭಾ. ಅದರ ಉಪಶಮನವೇ ಪರಮಪದವಾಗುತ್ತದೆ. ಹೀಗೆ ಪರಿಪಾಕವನ್ನು ಪಡೆದಿರುವ ಯೋಗಿಗೆ ಜ್ಞಾನವೇ ಅನ್ನ.

ಜ್ಞಾನಮನ್ನಂ ||೯||

ಅನ್ನದ ಲಕ್ಷಣ

ಹಿಂದೆ ' ಜ್ಞಾನಂ ಬಂಧಃ ' ಎಂದು ಹೇಳಿದ್ದೆವು. ಅದು ಪರಿಪಾಕವಿಲ್ಲದ ದೆಸೆಯನ್ನು ಕುರಿತು ಹೇಳಿರುವ ಮಾತು. ಈಗ ಪರಿಪಾಕದ ಮಿತಿಯು ತಿಳಿಯಲಾಗಿ ಮೃತ್ಯು, ಕಾಲ, ಕಲಾ ಮೊದಲಾದ ವಿಕಾರಗಳೆಲ್ಲಾ ಬೇರೆ ದೃಷ್ಟಿಯಿಂದ ತೋರುತ್ತವೆ. ಏಕಾತ್ಮ್ಯ ನಾನಾತ್ಮ್ಯ ಮೊದಲಾದ ತರ್ಕಗಳೆಲ್ಲಾ ಈಗ ಜ್ಞಾನವಿಕಾಸದಿಂದ ಅಳಿದಿವೆ. ಆದುದರಿಂದ ಭೇದಜ್ಞಾನ, ಅಭೇದಜ್ಞಾನ ಇವೆಲ್ಲಾ ಯೋಗಿಗೆ ಅನ್ನಪ್ರಾಯವಾಗಿವೆ. ಸಾಮಾನ್ಯ ಜನರ ಅನುಭವದಲ್ಲಿಯೂ ಕೂಡ ಅನ್ನ ಎಂದರೆ ತೃಪ್ತಿಸಾಧನ ಎಂದರ್ಥ.

ಪೂರ್ಣವಾಗಿ ತೃಪ್ತಿಯನ್ನುಂಟುಮಾಡುವುದರಿಂದಲೂ ಸ್ವಾತ್ಮ ವಿಶ್ರಾಂತಿಗೆ ಕಾರಣವಾಗಿರುವುದರಿಂದಲೂ ಸ್ವರೂಪ ವಿಮರ್ಶಾತ್ಮಕವಾದ ಜ್ಞಾನವೇ ಯೋಗಿಗೆ ಅನ್ನವಾಗಿರುತ್ತದೆ.

ಸಾಧಕನ ಪರಿಪಾಕಾವಸ್ಥೆಗಳನ್ನು ಹಿಂದಿನ ಕಾಲದಲ್ಲಿ ಸಿದ್ಧಪುರುಷರು ೧೧೨ ಹಂತಗಳಾಗಿ ವಿಂಗಡಿಸಿರುತ್ತಾರೆ. ಇವು ಕೇವಲ ಅನುಭವದಿಂದ ತಿಳಿಯತಕ್ಕ ಅಂಶಗಳು. ಅಧಿಕಾರ ಭೇದದಿಂದ ಇವುಗಳ ವ್ಯತ್ಯಾಸಗಳು ತಿಳಿಯುತ್ತವೆ. ಎಲ್ಲರಿಗೂ ಎಲ್ಲಾ ಹಂತಗಳೂ ಅನುಭವಕ್ಕೆ ಬರುವುದಿಲ್ಲ. ಗಮ್ಯಸ್ಥಾನ ಮಾತ್ರ ಸಮಾನವಾಗಿರುತ್ತದೆ.

೧೧೨ ಅಂತಸ್ತುಗಳಲ್ಲಿ ಮನಸ್ಥೈರ್ಯದಿಂದ ಯಾವ ಅಂತಸ್ತಿನಲ್ಲಾಗಲಿ ಸ್ಥೈರ್ಯ ಉಂಟಾದರೂ ಯೋಗಿಗೆ ತೃಪ್ತಿಯುಂಟು.

ಅವತರಣಿಕೆ—ಹೀಗೆ ಯಾವಾಗಲೂ ಸ್ವರೂಪಾನುಸಂಧಾನದಲ್ಲಿಯೇ ತತ್ಪರನಾಗಿದ್ದರೂ ಪರಿಪಾಕದ ಪರಿಣಾಮದಿಂದ ಯೋಗಿಯು ಒಂದು ಬಗೆಯ ಗರ್ವವನ್ನು ಪಡೆಯುವ ಸಂಭವವಿದೆ.

ವಿದ್ಯಾಸಂಹಾರೇ ತದುತ್ಥಸ್ವಪ್ನದರ್ಶನಂ ॥೧೦॥

ಎಚ್ಚರಿಕೆಯಿಲ್ಲದಿದ್ದರೆ ಭೇದಮಯ ಪ್ರಪಂಚದಲ್ಲಿ 'ಇದಂತಾ' ಜ್ಞಾನವೇ ಉಳಿಯುವುದು

ಹಿಂದೆ ಹೇಳಿದ ಜ್ಞಾನವಿಕಾಸದ ದೆಸೆಯಿಂದ ಶುದ್ಧವಿದ್ಯೆಯು ಅನುಭವವಾಗುತ್ತಿತ್ತು. ಈಗ ಈ ವಿಧವಾದ ಗರ್ವದಿಂದ ವಿದ್ಯಾಸಂಸ್ಕಾರವು ತಿರಸ್ಕರಿಸಲ್ಪಟ್ಟು ಭೇದಮಯವಾದ ವಿಕಲ್ಪ ಪ್ರಪಂಚದ ಅನುಭವವೇ ಸ್ಫುಟವಾಗಿ ನಿಲ್ಲುತ್ತದೆ. ಅಭ್ಯಾಸ ಬಲದಿಂದಲೋ ವಾಸನಾಬಲದಿಂದಲೋ ಸ್ವಲ್ಪಮಟ್ಟಿಗೆ ಜ್ಞಾನವಿಕಾಸವೇರ್ಪಡಬಹುದು. ಆ ಸಮಯದಲ್ಲಿ ಎಚ್ಚರಿಕೆ ತಪ್ಪಿದರೆ ಸಾಧಕನನ್ನು ಅದೇ ಶಕ್ತಿಗಳೇ ಅನಿತ್ಯವಾದ ಭೋಗಗಳಲ್ಲಿ ಆಸಕ್ತನನ್ನಾಗಿ ಮಾಡುವುವು. ಇದರ ಮುಖ್ಯ ತಾತ್ಪರ್ಯವೇನೆಂದರೆ ಸಾಧಕನು ಯಾವಾಗಲೂ ಶುದ್ಧವಿದ್ಯಾ ವಿಮರ್ಶಕನಾಗಿರಬೇಕೆಂಬುದೇ.

ಉತ್ತಮವಾದ ವಿಷಯಗಳಲ್ಲಿ ತೊಡಗಿರುವವನು ಸಾಮಾನ್ಯ ವಿಷಯಗಳಲ್ಲಿ ಆಸಕ್ತಿಯನ್ನು ವಹಿಸಬಾರದು. ಯಾವಾಗಲೂ ಸ್ಪಂದತತ್ತ್ವವನ್ನು ವಿಮರ್ಶಿಸುತ್ತಾ ಎಚ್ಚರದಿಂದ ಸ್ವಸ್ವರೂಪ ಸಾಕ್ಷಾತ್ಕಾರವನ್ನು ಪಡೆಯಬೇಕು. ಹೀಗೆ "ಚಿತ್ತಂ ಮಂತ್ರಃ" ಎಂಬ ಸೂತ್ರ ಮೊದಲ್ಗೊಂಡು ಮಂತ್ರವೀರ್ಯ ಮುದ್ರಾವೀರ್ಯ ಇವುಗಳನ್ನೆಲ್ಲಾ ವಿವರಿಸಿದ್ದಾಯಿತು. ಉಚ್ಚಾರವಿಲ್ಲದಿರುವಂತಹ ವಸ್ತುವನ್ನು ಮನಸ್ಸಿನಿಂದಲೇ ಧ್ಯಾನಮಾಡುತ್ತಾ ಯಾವ ಸಮಾವೇಶವನ್ನು ಪಡೆಯುವನೋ ಅದೇ ಶಾಕ್ತೋಪಾಯ. ಇದನ್ನು ಇಲ್ಲಿ ವಿವರಿಸಿ ಸಾಧಕನು ಪ್ರಮಾದದಿಂದ ಗರ್ವಪಡಬಹುದೆಂದು ಎಚ್ಚರಿಕೆಯನ್ನು "ವಿದ್ಯಾಸಂಹಾರೆ" ಎಂಬ ಸೂತ್ರದಿಂದ ಸೂಚಿಸಿದೆ. ಇನ್ನು ಮುಂದೆ ಆಣವೋಪಾಯವನ್ನು ವಿವರಿಸುವುದಾಗುತ್ತದೆ.

ಉಚ್ಚಾರರಹಿತಂ ವಸ್ತು ಚೇತಸೈವ ವಿಚಿಂತಯನ್ ।
ಯಂ ಸಮಾವೇಶಮಾಪ್ನೋತಿ ಶಾಕ್ತಃ ಸೋಽತ್ರಾಭಿಧೀಯತೇ ॥

ತೃತೀಯೋನ್ಮೇಷಃ

ಆಣವೋಪಾಯ

ಆಣವೋಪಾಯವನ್ನು ನಿರೂಪಣೆ ಮಾಡುತ್ತಾ 'ಅಣು' ಎಂದರೆ ಏನು ಎಂಬ ವಿಷಯವನ್ನು ವಿವರಿಸಿರುತ್ತಾರೆ.

ಆತ್ಮಾ ಚಿತ್ತಂ ||೧||

ಜೀವಾತ್ಮನ ಲಕ್ಷಣ

ಮನುಷ್ಯನ ಜೀವನದಲ್ಲಿ ಬಾಹ್ಯವ್ಯವಹಾರಗಳು ಪ್ರಧಾನವಾಗಿವೆ. ಇದಕ್ಕೆ ಮುಖ್ಯ ಸಾಧನ ಮನಸ್ಸು. ಇದು ಅಭಿಮಾನ, ವಿಕಲ್ಪ, ನಿಶ್ಚಯ, ಅಹಂಕಾರ, ಬುದ್ಧಿ, ಅಧ್ಯವಸಾಯ ಮೊದಲಾದ ರೂಪಗಳಿಂದ ವಿಶ್ರಾಂತಿಯಿಲ್ಲದೆ ಸಂಚರಿಸುತ್ತಿರುತ್ತದೆ. ಇಂತಹ ಚಿತ್ತದೊಡನೆ ಆತ್ಮನು ಸುಖ ದುಃಖಗಳನ್ನನುಭವಿಸುತ್ತಿರುತ್ತಾನೆ. ಈ ಆತ್ಮ ವಸ್ತುವು ಚಿದಾತ್ಮಕವಾದ ಜ್ಯೋತಿಯೇ ಆಗಿದ್ದರೂ ಸ್ವಸ್ವರೂಪಾಖ್ಯಾತಿಯಿಂದ ಸತ್ತ್ವ ರಜಸ್ತಮಸ್ಸುಗಳನ್ನವಲಂಬಿಸಿ ಅನೇಕ ಜನ್ಮಗಳನ್ನು ಪಡೆಯುತ್ತದೆ. ಹೀಗೆ ಸಂಕುಚಿತ ವಾಗಿ ಸತ್ತ್ವ ರಜಸ್ಸು ತಮಸ್ಸುಗಳ ಪ್ರಭಾವಕ್ಕೆ ಒಳಗಾಗಿ ಕರ್ಮಾಂತರಗಳ ದೆಸೆಯಿಂದ ಅನೇಕ ಯೋನಿಗಳಲ್ಲಿ ಸಂಚರಿಸುತ್ತಿರುವ ಈ ಆತ್ಮನನ್ನು 'ಅಣು' ಎಂದು ಆತ್ಮಜ್ಞರು ನಿಶ್ಚಯಿಸಿರುತ್ತಾರೆ.

ಸರ್ವವ್ಯಾಪಿಯಾಗಿ ನಿತ್ಯನಾಗಿ ಚಿನ್ಮೂರ್ತಿಯಾಗಿರುವ ಆತ್ಮನಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲನವಲನಗಳಿಲ್ಲ. ಹೀಗಿರುವುದರಿಂದ ಮೊದಲನೆಯ ಸೂತ್ರದಲ್ಲಿ ತಾತ್ವಿಕವಾದ ಸ್ವರೂಪವನ್ನು ತಿಳಿಸಲು 'ಚೈತನ್ಯಮಾತ್ಮಾ' ಎಂದು ಹೇಳಿದ್ದಾಯಿತು. ಈಗ ಇವನ ಸಂಕುಚಿತ ಸ್ಥಿತಿಯೇ ಪ್ರಧಾನವಾಗುಳ್ಳ 'ಅಣು' ದಶೆಯನ್ನು ವಿಶದಪಡಿಸಿದೆ.

ಅವತರಣಿಕೆ—ಚಿತ್ಸರೂಪಿಯಾಗಿ ಸರ್ವವ್ಯಾಪಿಯಾಗಿದ್ದ ಆತ್ಮನು ಚಿತ್ತ ಸ್ವರೂಪಿಯಾಗಿ ಬದ್ಧಜೀವಾತ್ಮನಾಗಿ ಅಣುವಾಗಿದ್ದಾನೆ.

ಜ್ಞಾನಂ ಬಂಧಃ ||೨||

ಅಣುವಾಗಿರುವ ಜೀವಾತ್ಮನ ಬಂಧಲಕ್ಷಣ

ಸುಖ ದುಃಖ ಮೋಹಮಯವಾಗಿರುವ ಅಧ್ಯವಸಾಯ, ಅಭಿಮಾನ, ನಿಶ್ಚಯ, ವಿಕಲ್ಪ ಮೊದಲಾದ ವೃತ್ತಿಗಳಿಂದಲೂ ಅವುಗಳನ್ನನುಸರಿಸಿರುವ ಭೇದಜ್ಞಾನದಿಂದಲೂ ಯಾವ ವ್ಯವಹಾರವು ನಡೆಯುತ್ತದೆಯೋ ಅದೇ ಬಂಧ. ಈ ಬಗೆಯಾದ ತಿಳಿವಳಿಕೆ ಯಿಂದ ಇವನು ಬಂಧಿತನಾಗಿ ಸತ್ವರಜಸ್ತಮೋಗುಣಗಳನ್ನು ಅನುಭವಿಸುತ್ತಾ ಇನ್ನೊಂದು ಶರೀರವನ್ನು ಹೊಂದುವನು. ಇಷ್ಟೇ ಅಲ್ಲದೆ ಐದು ತನ್ಮಾತ್ರೆಗಳು ಮನಸ್ಸು

ಅಹಂಕಾರ ಮತ್ತು ಬುದ್ಧಿ ಸೇರಿ ಪುರ್ಯಷ್ಟಕವಾಗುತ್ತದೆ. ಈ ಪುರ್ಯಷ್ಟಕದಿಂದ ಕೂಡಿದವನಾಗಿ ಪರಾಧೀನನಾಗಿ ಬದ್ಧನಾಗಿರುವನು.

ಜ್ಞಾನವು ಸ್ವಯಂಪ್ರಕಾಶವಾದುದು. ಆತ್ಮನು ಸ್ವಯಂಪ್ರಕಾಶನು. ಇವೆರಡೂ ಒಂದನ್ನೊಂದು ಬಿಟ್ಟಿರಲಾರವು. ತಾತ್ಪರ್ಯವೇನೆಂದರೆ ಆತ್ಮನು ಜ್ಞಾನದಿಂದ ಪ್ರಕಾಶಿಸುತ್ತಾನೆ. ಹೀಗಿರಲಾಗಿ ಆತ್ಮನಿಗೆ ಬಂಧವು ಯಾವುದು, ಬಂಧವೆಂದರೇನು, ಜ್ಞಾನವು ಬಂಧವಾಗುವ ಬಗೆ ಹೇಗೆ ಎಂದು ಶಂಕಿಸಬಹುದು. ಆದರೆ ಜ್ಞಾನ ಮತ್ತು ಜ್ಞಾನಿ ಈ ಎರಡು ಅಂಶಗಳಿಗಿರುವ ಭೇದಗಳನ್ನು ತಿಳಿದು ಸ್ವಾತ್ಮವಿಮರ್ಶೆ ಏರ್ಪಟ್ಟರೆ ಆಗ ಬಂಧವಿಲ್ಲ. ಮಾಯಾಶಕ್ತಿಯ ಪ್ರಭಾವದಿಂದ ಇಂತಹ ಸ್ವಾತ್ಮವಿಮರ್ಶೆಯುಂಟಾಗುವುದಿಲ್ಲ. ಹೀಗೆ ಜ್ಞಾನವು ಭೇದದೃಷ್ಟಿಯಿಂದ ಬಂಧಕವಾಗುತ್ತದೆ. ಅದೇ ಜ್ಞಾನವೇ ಪರಮೇಶ್ವರನ ದಯೆಯಿಂದ ಉಂಟಾಗುವ ಅಭೇದವ್ಯಾಪ್ತಿಯಿಂದ ಬಂಧವಿಮೋಚನೆಗೆ ಕಾರಣವಾಗುತ್ತದೆ.

> ಜ್ಞಾನಂ ಪ್ರಕಾಶಕಂ ಲೋಕೇ ಆತ್ಮಾ ಚೈವ ಪ್ರಕಾಶಕಃ ।
> ಅನಯೋರಪೃಥಗ್ಭಾವಾತ್ ಜ್ಞಾನೇ ಜ್ಞಾನೀ ಪ್ರಕಾಶತೇ ॥
>
> —ವಿಜ್ಞಾನಭೈರವ

ಅವತರಣಿಕೆ—ಈ ವಿಧವಾದ ವಿಮರ್ಶನೆ ಇಲ್ಲದಿರುವಾಗ—

ಕಲಾದೀನಾಂ ತತ್ತ್ವಾನಾಮ ವಿವೇಕೋ ಮಾಯಾ ॥೩॥

ಮಾಯೆಯ ಲಕ್ಷಣ

ಕಿಂಚಿತ್ಕರ್ತೃತ್ವಾದಿ ಸಂಕೋಚವನ್ನುಂಟುಮಾಡುವ ಕಲಾತತ್ತ್ವ ಮೊದಲು ಭೂಮಿಯವರೆಗೂ ಇರುವ ತತ್ತ್ವಗಳ ಸಂಪುಟರೂಪಗಳಾದ ಕಂಚುಕ, ಪುರ್ಯಷ್ಟಕ, ಸ್ಥೂಲದೇಹ ಇವುಗಳಿವೆ. ಜೀವಾತ್ಮನು ಈ ಸಂಪುಟದಲ್ಲಿದ್ದರೂ ಇವುಗಳನ್ನು ವಿವಿಧವಾಗಿ ತಿಳಿಯಲಾರನು. ಈ ಸಂಪುಟವು ಇವನಿಂದ ಬೇರೆಯಾಗಿದ್ದರೂ ತನ್ನ ಸ್ವರೂಪದಿಂದ ಅಭಿನ್ನವೆಂದೇ ತಿಳಿಯುತ್ತಾನೆ. ಹೀಗೆ ತತ್ತ್ವಗಳ ಭೇದವನ್ನು ತಿಳಿಯದಿರುವಿಕೆಯೇ ಮಾಯಾ—ಅಖ್ಯಾತಿ. ಹಾಗೆಯೇ ಕಲಾದಿಗಳಿಂದ ಸಂಕೋಚ, ವಿದ್ಯೆಯಿಂದ ಆಕಾಂಕ್ಷೆ, ರಾಗದಿಂದ ಆಸೆ, ಬುದ್ಧಿಯೇ ಮೊದಲಾದ ಕರಣಗಳಿಂದ ಕೂಡಿ ಮಾಯಾತ್ಮಕವಾದ ಬಂಧವನ್ನು ಪಡೆದಿರುವನು. ಈ ಕಲಾದಿಗಳನ್ನಾಶ್ರಯಿಸಿಕೊಂಡು ಧರ್ಮಾಧರ್ಮಗಳಿರುತ್ತವೆ. ಸ್ವಸ್ವರೂಪ ಜ್ಞಾನಕ್ಕೆ ಇವುಗಳು ಪ್ರತಿಬಂಧಕಗಳಾಗಿವೆ. ಇದೇ ಪಾಶ.

ಅವತರಣಿಕೆ.—ಈ ಪಾಶದ ಪರಿಹಾರಕ್ಕೋಸ್ಕರ—

ಶರೀರೇ ಸಂಹಾರಃ ಕಲಾನಾಂ ॥೪॥

ಮಾಯೆಯ ಉಪಶಮನಕ್ಕೆ ಆಣವೋಪಾಯ

ಪಂಚಭೂತಾತ್ಮಕವಾದದ್ದು ಸ್ಥೂಲ ಶರೀರ. ಪುರ್ಯಷ್ಟಕ ರೂಪದಿಂದಿರುವುದು ಸೂಕ್ಷ್ಮಶರೀರ. ಈ ಎರಡು ಶರೀರಗಳಿಂದಲೂ ಜೀವಾತ್ಮನು ಬಂಧಿತನಾಗಿದ್ದಾನೆ. ಸಮನಾಂತವಾಗಿರುವ ಈ ಸಂಪುಟದಲ್ಲಿ ಸ್ಥೂಲ, ಸೂಕ್ಷ್ಮ ಮತ್ತು ಪರಾ ಶರೀರಗಳು ಸೇರಿವೆ. ಇವುಗಳಲ್ಲಿ ಪೃಥ್ವಿ ಮೊದಲು ಶಿವತತ್ತ್ವದವರೆಗಿರುವ ಎಲ್ಲಾ ತತ್ತ್ವವಿಭಾಗಗಳೂ ಅಡಗಿವೆ. ಮೂಲಕಾರಣವಾಗಿರುವ ಶಿವತತ್ತ್ವದಲ್ಲಿ ಈ ವಿಭಾಗಗಳೆಲ್ಲಾ ಲಯವಾಗುವಂತೆ ಧ್ಯಾನಮಾಡಬೇಕು. ಆ ಶಿವತತ್ತ್ವವನ್ನೇ ಚಿದಗ್ನಿಯೆಂದು ಭಾವಿಸಿ ಮಿಕ್ಕ ತತ್ತ್ವಗಳು ಆ ಅಗ್ನಿಯಲ್ಲಿ ದಹಿಸಿ ಹೋಗುವುವೆಂದು ಅನುಸಂಧಾನಮಾಡಬೇಕು. ಆ ಕಾರಣವಸ್ತುವೇ 'ಕಾಲಾಗ್ನಿ' ಎನ್ನಿಸುವುದು. ಇಂತಹ ಧ್ಯಾನದಿಂದ ಪ್ರಶಾಂತವಾದ ಜ್ಯೋತಿಯು ಸ್ಫುರಿಸುತ್ತದೆ. ಸ್ಥೂಲ, ಸೂಕ್ಷ್ಮ ಈ ಎರಡು ರೂಪಗಳಿಂದಲೂ ನಡೆಯುವುದೇ ಪ್ರಾಣ ವ್ಯಾಪಾರ. ಇದನ್ನೇ 'ಉಚ್ಚಾರ' ಎನ್ನುವುದು. ಆಸನ, ಮುದ್ರಾ ಮೊದಲಾದ ಉಪಾಯಗಳು ಶರೀರವನ್ನು ಅಭ್ಯಾಸಬಲದಿಂದ ಒಂದು ಕ್ರಮಕ್ಕೆ ತರುತ್ತವೆ. ಇದೇ 'ಕರಣ'. ಬುದ್ಧಿವ್ಯಾಪಾರವೇ 'ಧ್ಯಾನ'. ಆ ಧ್ಯಾನವು— ಎಲ್ಲಾ ತತ್ತ್ವಗಳಲ್ಲಿಯೂ ಅಡಗಿರುವ ಸ್ವಪ್ರಕಾಶವಾದ ಪರತತ್ತ್ವವು ತನ್ನ ಹೃದಯದಲ್ಲಿಯೇ ಪ್ರಕಾಶಿಸುತ್ತಿದೆಯೆಂದು – ಭಾವಿಸುವುದೇ ಆಗಿದೆ. ಸೂಕ್ಷ್ಮ ಪ್ರಾಣೋಚ್ಚಲನದಿಂದ ಸ್ಫುರಿಸುವ ಅವ್ಯಕ್ತವಾದ ಅನುಕೃತಿ ಪ್ರಾಯವಾದ ಧ್ವನಿಯೇ 'ವರ್ಣ'. ತ್ರಿಕೋಣ, ಕಂದ, ಹೃದಯ ಮೊದಲಾದವುಗಳು ಸ್ಥಾನಗಳು. ಉಚ್ಚಾರ, ಕರಣ, ಧ್ಯಾನ, ವರ್ಣ, ಸ್ಥಾನ ಪ್ರಕಲ್ಪನ (ಸ್ಥಾನಗಳನ್ನು ಗುರುತಿಸುವುದು) ಈ ಐದು ಅಂಶಗಳನ್ನೂ ಸೇರಿಸಿ ಸಾಧಕನು ಅಭ್ಯಾಸಮಾಡುವುದರಿಂದುಂಟಾಗುವ ಸಮಾವೇಶವು ಆಣವೋಪಾಯವೆನಿಸುತ್ತದೆ. ಇದರಲ್ಲಿ ಶಾಕ್ತೋಪಾಯ, ಶಾಂಭವೋಪಾಯಗಳು ಅಂತರ್ಭೂತವಾಗಿರುತ್ತವೆ.

ಆಣವೋಪಾಯವು ಸ್ಥೂಲವಾದ ಉಪಾಯ. ಇದರಲ್ಲಿ ಸೂಕ್ಷ್ಮಾಂಶಗಳು ಇದ್ದೇ ಇರುತ್ತವೆ. ತತ್ತ್ವಗಳನ್ನು 'ಕಾರಣ' (ಕಾಲಾಗ್ನಿ) ದಲ್ಲಿ ಲಯಾನುಸಂಧಾನ ಮಾಡುವಿಕೆಯೇ ಇದರ ಮುಖ್ಯ ತಾತ್ಪರ್ಯವಾಗಿದೆ.

> ಭುವನಾಧ್ವಾದಿರೂಪೇಣ ಚಿಂತಯೇತ್ ಕ್ರಮಶೋಽಖಿಲಮ್ ।
> ಸ್ಥೂಲಸೂಕ್ಷ್ಮಪರಿಸ್ಥಿತ್ಯಾ ಯಾವದಂತೇ ಮನೋಲಯಃ ॥
>
> —ವಿಜ್ಞಾನಭೈರವ

> ಉಚ್ಚಾರ ಕರಣ ಧ್ಯಾನ ವರ್ಣ ಸ್ಥಾನ ಪ್ರಕಲ್ಪನೈಃ ।
> ಯೋ ಭವೇತ್ಸ ಸಮಾವೇಶಃ ಸಮ್ಯಗಾಣವ ಉಚ್ಯತೇ ॥
>
> —ಶ್ರೀಪೂರ್ವಶಾಸ್ತ್ರ

ಅವತರಣಿಕೆ.— ಹೀಗೆ ಧ್ಯಾನವೆಂಬ ಆಣವೋಪಾಯವನ್ನು ವಿವರಿಸಿ ಅದರ ಅಭಿವೃದ್ಧಿ ಮತ್ತು ರಕ್ಷಣೆಯನ್ನು ಮಾಡುವ ಪ್ರಾಣಾಯಾಮ, ಧಾರಣ, ಪ್ರತ್ಯಾಹಾರ, ಸಮಾಧಿ ಇವುಗಳನ್ನು ಮುಂದೆ ವಿವರಿಸುತ್ತಾರೆ.

ನಾಡೀಸಂಹಾರ–ಭೂತಜಯ–ಭೂತಕೈವಲ್ಯ–ಭೂತಪೃಥಕ್ತ್ವಾನಿ ॥೫॥

ಆಣವೋಪಾಯ ಸಿದ್ಧಿಗೆ ಸಾಧಕವಾಗಿರುವ ಅಂಗಗಳು

ಈ ಅಂಗಗಳು ಅಥವಾ ಭೇದಗಳು ಯೋಗಿಯಿಂದ ಭಾವಿಸಲ್ಪಡತಕ್ಕವುಗಳಾಗಿವೆ.

ನಾಡೀಸಂಹಾರ—ಪ್ರಾಣಾಪಾನಗಳು ನಡೆಯುವ ಮಾರ್ಗಕ್ಕೆ 'ನಾಡಿ' ಎಂದು ಹೆಸರು. ಈ ಪ್ರಾಣಾಪಾನಗಳನ್ನು ಯುಕ್ತಿಯಿಂದ ಉದಾನವಾಯುವಿನಲ್ಲಿ ಅಂದರೆ ಮಧ್ಯನಾಡಿಯಲ್ಲಿ ಲೀನಮಾಡುವಿಕೆಯೇ ನಾಡೀಸಂಹಾರ. ಈ ಯುಕ್ತಿಯನ್ನು ಸ್ವಚ್ಛಂದ ಕಾರರು ಪ್ರಾಣಾಯಾಮಕ್ರಮವನ್ನು ವಿವೇಚಿಸುತ್ತಾ ತಿಳಿಸಿರುತ್ತಾರೆ. ಬಲಗಡೆಯಿಂದ ರೇಚನಮಾಡಿ ಎಡಗಡೆಯಿಂದ ಪೂರಕವನ್ನು ಮಾಡುವ ಉಪಾಯದಿಂದ ನಾಡೀಶೋಧನ ವಾಗುತ್ತದೆ. ಹಾಗೆಯೇ ಸುಷುಮ್ನಾ ನಾಡಿಯು ಶೋಧಿಸಲ್ಪಡುತ್ತದೆ.

ಭೂತಜಯ—ರೇಚಕ, ಪೂರಕ, ಕುಂಭಕ ಎಂದು ಪ್ರಾಣಾಯಾಮ ಮೂರು ಬಗೆಯಾಗಿದೆ. ಇದು ಬಾಹ್ಯಕ್ರಮ. ಆಭ್ಯಂತರ ಕ್ರಮವು ಇದಕ್ಕಿಂತ ವಿಲಕ್ಷಣ ವಾಗಿರುತ್ತದೆ. ರೇಚನವನ್ನು ದ್ವಾದಶಾಂತದಲ್ಲಿಯೂ, ಪೂರಣವನ್ನು ಹೃದಯದಲ್ಲಿಯೂ ಮಾಡಬೇಕು. ನಿಷ್ಕಂಪವಾಗಿ ನಿರಾಯಾಸವಾಗಿ ಪ್ರಶಾಂತವಾಗಿರುವಿಕೆಯೇ ಕುಂಭಕ. ಈ ಮೂರೂ ಆಭ್ಯಂತರ ಪ್ರಾಣಾಯಾಮ ಕ್ರಮಗಳು. ಇದರ ಫಲವೇ ಭೂತಜಯ. ಇದು ಧಾರಣಾಸಿದ್ಧಿ. ಇದರ ಪ್ರಭಾವದಿಂದ ಭೂತಗಳಿಗಿಂತ ಚಿತ್ತವು ಬೇರೆಯಾಗಿರುವು ದೆಂಬುದು ಅನುಭವಕ್ಕೆ ಬರುತ್ತದೆ.

ಭೂತಕೈವಲ್ಯ—ಪ್ರತ್ಯಾಹಾರ ಸಾಧನೆ. ಪ್ರಾಣವಾಯುವನ್ನು ಬಾಹ್ಯ ಸಂಚಾರದಿಂದ ಒಳಕ್ಕೆ ತಿರುಗಿಸಿ ಮೆಲ್ಲಮೆಲ್ಲನೆ ಹೃದಯದಲ್ಲಿ ನಿಲ್ಲಿಸಬೇಕು. ಪ್ರಾಣಾಧೀನ ವಾಗಿರುವುದು ಮನಃಪ್ರವೃತ್ತಿ. ಪ್ರಾಣವಾಯುವನ್ನು ನಿಲ್ಲಿಸಿದರೆ ಮನಃಪ್ರವೃತ್ತಿ ನಿಲ್ಲುವುದು. ಮನಸ್ಸನ್ನು ಇಂದ್ರಿಯ ಜ್ಞಾನಗಳಿಂದ ಹಿಂದಿರುಗಿಸಿ ನಾಭಿಸ್ಥಾನದಲ್ಲಿ ನಿಲ್ಲಿಸಿದರೆ ಮನಸ್ಸು ಪ್ರಶಾಂತವಾಗುತ್ತದೆ. ಇದೇ ಪ್ರತ್ಯಾಹಾರ ಸಿದ್ಧಿ.

ಭೂತಪೃಥಕ್ತ್ವ—ಹೀಗೆ ಭೂತಗಳಿಂದ ಬೇರೆಯಾಗಿಯೂ ಮನೋವೃತ್ತಿ ಗಳಿಂದ ಅಂಟದೆಯೂ ಇರಬೇಕು. ಈ ಎರಡೂ ಅನುಭವಕ್ಕೆ ಬರಲಾಗಿ ಯೋಗಿಯು ಎಲ್ಲಾ ವೃತ್ತಿಗಳನ್ನೂ ಅತಿಕ್ರಮಿಸಿ ಸ್ವಸ್ವರೂಪವನ್ನೂ ಸ್ವಾತಂತ್ರ್ಯವನ್ನೂ ಅನುಭವಿಸು ವನು. ಹಿಂದೆ ಭೂತಸಂಧಾನ ಭೂತಪೃಥಕ್ತ್ವ ವಿಶ್ವಸಂಘಟ್ಟ ಎಂದು ಹೇಳಿದ್ದಾಯಿತು. ಅವು ಶಾಂಭವೋಪಾಯ ಸಿದ್ಧನಿಗೆ ತಾವಾಗಿಯೇ ಲಭಿಸುತ್ತವೆ. ಆಣವೋಪಾಯದಲ್ಲಿ ಸಾಧನೆಯಿಂದ ಆ ಅಂಶಗಳು ಸಿದ್ಧಿಸಬೇಕು. ಶಾಂಭವೋಪಾಯ ನಿಷ್ಠನಿಗೂ, ಆಣವೋ ಪಾಯ ನಿಷ್ಠನಿಗೂ ಇರುವ ವ್ಯತ್ಯಾಸ ಇಷ್ಟೆ. ಹೀಗೆ ದೇಹಶುದ್ಧಿ, ಭೂತಶುದ್ಧಿ, ಪ್ರಾಣಾ ಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳಿಂದುಂಟಾಗುವ ಆಯಾ ತತ್ತ್ವ ಸ್ವರೂಪ ಜ್ಞಾನವು ಒಂದು ಮೋಹಾವರಣರೂಪವಾಗಿರುತ್ತದೆ.

ಅಪಸವ್ಯೇನ ರೇಚ್ಯೇತ ಸವ್ಯೇನೈವ ತು ಪೂರಯೇತ್ ।
ನಾಡೀನಾಂ ಶೋಧನಂ ಹ್ಯೇತನ್ಮೋಕ್ಷಮಾರ್ಗಪಥಸ್ಯ ಚ ॥
ರೇಚನಾತ್ಪೂರಣಾದ್ರೋಧಾ ಪ್ರಾಣಾಯಾಮಾಸ್ತ್ರಿಧಾ ಸ್ಮೃತಾಃ ।
ಸಾಮಾನ್ಯಾ ಬಹಿರೇತೇ ತು ಪುನಶ್ಚಾಭ್ಯಂತರೇ ತ್ರಯಃ ॥
ಆಭ್ಯಂತರೇಣ ರೇಚ್ಯೇತ ಪೂರ್ಯೇತಾಭ್ಯಂತರೇಣ ತು ।
ನಿಃಸ್ಪಂದಂ ಕುಂಭಕಂ ಕೃತ್ವಾ ಕಾರ್ಯಾಶ್ಚಾಭ್ಯಂತರಾಸ್ತ್ರಯಃ ॥
ನಾಭ್ಯಾಂ ಹೃದಯಸಂಚಾರಾನ್ಮನಶ್ಚೇಂದ್ರಿಯ ಗೋಚರಾತ್ ।
ಪ್ರಾಣಾಯಾಮಶ್ಚತುರ್ಥಸ್ತು ಸುಪ್ರಶಾಂತ ಇತಿ ಸ್ಮೃತಃ ॥

—ಸ್ವಚ್ಛಂದಶಾಸ್ತ್ರ

ಅವತರಣಿಕೆ— ಇದು ಶುದ್ಧ ತತ್ತ್ವಜ್ಞಾನವಲ್ಲ.

ಮೋಹಾವರಣಾತ್ ಸಿದ್ಧಿಃ ॥೬॥

ಯೋಗತತ್ತ್ವ ಮತ್ತು ಭೋಗ ಇವುಗಳ ಸಿದ್ಧಿಗೆ ಕಾರಣಗಳು

ಮೋಹಗೊಳಿಸುವುದು ಮಾಯೆ. ಆದರಿಂದ ಉಂಟಾಗುವುದು ಆವರಣ. ಮೇಲೆ ಹೇಳಿದ ಧಾರಣಾದಿ ಕ್ರಮಗಳಿಂದ ಆಯಾ ತತ್ತ್ವಗಳನ್ನು ವಿಶದವಾಗಿ ಬೇರೆ ಬೇರೆ ರೂಪದಿಂದ ಅನುಭವಿಸುವುದಕ್ಕೆ ಸಾಧ್ಯವಾಗುತ್ತದೆ. ಯೋಗಸಾಧನಾ ಸಿದ್ಧಿಗಳು ಪರತತ್ತ್ವಪ್ರಕಾಶಕಗಳಲ್ಲ. ಆದರೆ ಇವು ಪರತತ್ತ್ವ ಪ್ರಕಾಶಕ್ಕೆ ಸಾಧನಗಳಾಗಿರುತ್ತವೆ. ಪರತತ್ತ್ವವು ಯಾವಾಗಲೂ ಸಿದ್ಧವಾಗಿಯೇ ಇದೆ. ಯೋಗಸಾಧನೆಗಳು ಪರತತ್ತ್ವ ಪ್ರಕಾಶಕ್ಕಿರುವ ಪ್ರತಿಬಂಧಕಗಳನ್ನು ದೂರಮಾಡುತ್ತವೆ.

ಜನನ ಮರಣಗಳಿಲ್ಲದ ಅನಾದಿಯಾದ ನಿರ್ವಿಕಲ್ಪನಾದ ಶಿವನು ಪ್ರತ್ಯಕ್ಷನಾಗಿ ಎಲ್ಲೆಡೆಗಳಲ್ಲಿಯೂ ಇದ್ದಾನೆ. ಆದರೆ ಅವನು ಹೀಗಿರುವುದನ್ನು ನಾವು ಮೋಹದಿಂದ ತಿಳಿಯುವುದಿಲ್ಲ. ಮೋಹ ಕಳೆದರೆ ಜ್ಞಾನಶಕ್ತಿಯ ವಿಕಾಸವನ್ನುಂಟುಮಾಡುವ 'ಉದಾನಜಯ 'ವೇರ್ಪಡುತ್ತದೆ. ಇದರ ಸಹಾಯದಿಂದ ಪ್ರಾಣಾಪಾನಗಳನ್ನತಿಕ್ರಮಿಸಬೇಕು. ಪ್ರಾಣಾದಿ ಸ್ಥೂಲಭಾವಗಳನ್ನು ಬಿಟ್ಟು ಸೂಕ್ಷ್ಮಾತಿಸೂಕ್ಷ್ಮವಾಗಿರುವ ಮೆಟ್ಟಲುಗಳನ್ನು ಮೀರಿ ಪರತತ್ತ್ವವನ್ನು ಸಾಕ್ಷಾತ್ಕರಿಸಬೇಕು. ಯಾವ ಅಂತಸ್ತನ್ನು ಸೇರಿದರೆ ಪುನಃ ಹಿಂದಿರುಗುವಿಕೆ ಇಲ್ಲವೋ ಅದು ಪ್ರಾಣಾಯಾಮ.

ಶಬ್ದ ಸ್ಪರ್ಶ ರೂಪ ರಸ ಗಂಧಗಳು ಮನಸ್ಸಿನಿಂದ ಅನುಭವಿಸಲ್ಪಡುತ್ತವೆ. ಆ ಮನೋಭಾವನೆಗಳನ್ನತಿಕ್ರಮಿಸಿ ಪರತತ್ತ್ವವನ್ನೇ ಗುರಿಯಾಗಿ ಮಾಡಿಕೊಂಡರೆ ಪ್ರತ್ಯಾಹಾರವಾಗುತ್ತದೆ. ಸತ್ತ್ವರಜಸ್ತಮಸ್ಸುಗಳನ್ನತಿಕ್ರಮಿಸಿ ಸ್ವಸಂವೇದ್ಯನೆಂದು ಶಿವನನ್ನು ತಿಳಿದರೆ ಅದು ಧ್ಯಾನ. ಸರ್ವದಾ ಆ ಪರಶಿವತ್ವವು ತನ್ನಲ್ಲಿದೆಯೆಂದು ಸಮಾವೇಶವನ್ನು ಪಡೆದರೆ ಧಾರಣ. ಗ್ರಾಹ್ಯಗ್ರಾಹಕರೂಪವಾದ ಈ ವಿಶ್ವದಲ್ಲೆಲ್ಲಾ ಶಿವತ್ವವು ಸಮಾನರೂಪವಾಗಿದೆಯೆಂದೂ ತಾನು ಶಿವಾಭಿನ್ನನೆಂದೂ ಅನುಭವಕ್ಕೆ ತಂದುಕೊಳ್ಳುವುದೇ ಸಮಾಧಿ. ಇದೇ ಪರತತ್ತ್ವ ಸಮಾವೇಶ.

ಪ್ರತ್ಯಾಹಾರ ಧಾರಣ ಧ್ಯಾನ ಸಮಾಧಿ ಇವುಗಳನ್ನು ಹೀಗೆ ತಾತ್ತ್ವಿಕ ದೃಷ್ಟಿಯಿಂದ ವಿವರಿಸಿರುತ್ತಾರೆ.

ಮೋಹಜಯಾದಸಂತಾಭೋಗಾತ್ ಸಹಜವಿದ್ಯಾಜಯಃ ॥೭॥

ಮೂಢನಾಗದಿರುವವನಿಗೆ ಸಹಜ ವಿದ್ಯಾಲಾಭ

ಅಖ್ಯಾತಿಯೆಂಬ ಅಜ್ಞಾನವು ಸಮನಾಂತವಾಗಿರುತ್ತದೆ. ಸಮನಾ ಅಂದರೆ ಮಾಂತ್ರಿಕವಾದ ಧ್ವನಿ. ಇದು ಹನ್ನೊಂದು ತೆರನಾಗಿದೆ.

ಅ, ಉ, ಮ, ಂ (ಬಿಂದು), ‿ (ಅರ್ಧಚಂದ್ರ), ನಿರೋಧಿ, ನಾದ, ನಾದಾಂತ, ಶಕ್ತಿ, ವ್ಯಾಪಿನಿ, ಸಮನಾ ಇವು ಹನ್ನೊಂದು ಪರಿಭಾಷೆಗಳು. ಇವುಗಳೆಲ್ಲಾ ಪಾಶ ಪ್ರಪಂಚ. ಭೇದಜ್ಞಾನಕ್ಕೆ ಆಶ್ರಯವಾಗಿರುವಂಥವುಗಳು. ಇವುಗಳ ಮೇಲೆ ಆತ್ಮವ್ಯಾಪ್ತಿ ಶಿವವ್ಯಾಪ್ತಿಗಳಿರುತ್ತವೆ. ಆತ್ಮವ್ಯಾಪ್ತಿ ಶಿವವ್ಯಾಪ್ತಿಗಳು ಉಪಾದೇಯಗಳು.

ಈ ಮಾಯಾಪ್ರಪಂಚವು ವಿಸ್ತಾರವಾದುದು. ಸಂಸ್ಕಾರಗಳು ಪೂರ್ತಿಯಾಗಿ ನಾಶವಾಗುವವರೆಗೂ ಮಾಯಾಪ್ರಪಂಚವು ಅನುಸರಿಸಿಕೊಂಡಿರುತ್ತದೆ. ಸ್ವಸ್ವರೂಪ ಜ್ಞಾನವು ಅಂದರೆ ಸಾಕ್ಷಾತ್ಕಾರವು ಮೋಹಜಯದಿಂದ ಉಂಟಾಗುತ್ತದೆ—ಇದೇ ಸಹಜವಿದ್ಯಾ. ಆಣವೋಪಾಯದಲ್ಲಿ ಶಾಕ್ತೋಪಾಯವು ಅಂತರ್ಭೂತವಾಗಿದೆ. ಸಮನಾಂತವಾದ ಈ ಮಾಯಾವಿಶ್ವವನ್ನು ದಾಟಿ ಸ್ವಸ್ವರೂಪಾವಲೋಕನಕ್ಕೆ ತೊಡಗಿದರೆ ಅದೇ ಆತ್ಮವ್ಯಾಪ್ತಿ. ಆತ್ಮವ್ಯಾಪ್ತಿಯನ್ನು ಪಡೆಯುವಿಕೆಯೇ ಮೋಹ ಜಯ. ಅನಂತರ ಶಿವವ್ಯಾಪ್ತಿ. ಸರ್ವಜ್ಞತ್ವಾದಿ ಗುಣಗಳಿಂದ ಕೂಡಿ ವಿಶ್ವವ್ಯಾಪಿ ಯಾಗಿರುವ ಶಿವತ್ವವನ್ನು ಧ್ಯಾನಮಾಡುವಿಕೆಯೇ ಶಿವವ್ಯಾಪ್ತಿ. ಇದರ ಸಿದ್ಧಿಯಿಂದ ಸಹಜ ಸ್ವಭಾವದಿಂದಿರುವ ಸ್ವತಂತ್ರವಾದ ಸ್ವರೂಪ ಸಾಕ್ಷಾತ್ಕಾರದ ಅನುಭವವೇರ್ಪಡು ತ್ತದೆ. ಇದನ್ನೇ 'ಸಹಜ ವಿದ್ಯಾ' ಎಂದೂ 'ಉನ್ಮನಾ' ಎಂದೂ ಹೇಳುವರು.

ಮನಸ್ಸಂಕಲ್ಪಕ್ಕೆ ಉನ್ಮನಾ ಎಂದು ಹೇಳುವುದುಂಟು. ಮನಸ್ಸಿನಿಂದ ತಿಳಿಯ ಲಾಗದ ವಿಷಯಗಳು ಮನಸ್ಸಂಕಲ್ಪದಲ್ಲಿ ಅನಭಿವ್ಯಕ್ತರೂಪದಲ್ಲಿರುತ್ತವೆ—ಇದನ್ನತಿ ಕ್ರಮಿಸಿದ ಜ್ಞಾನವು ಸಹಜ ವಿದ್ಯೆಗೆ ಕಾರಣವಾಗುತ್ತದೆ. ಅನಿತ್ಯವಾದ ತತ್ತ್ವಗಳನ್ನು ಬಿಟ್ಟು ನಿತ್ಯವಾದ ಪರಮಾತ್ಮ ತತ್ತ್ವವನ್ನು ಧ್ಯಾನಿಸುವುದಕ್ಕೆ ವಿದ್ಯೆ ಎಂದು ಹೆಸರು. ವಿದ್ಯಾನಿಷ್ಠನಾದವನು ಅಸಂಕುಚಿತವಾದ ಪರಮಶಿವನ ರೂಪವನ್ನು ಪ್ರತ್ಯಭಿಜ್ಞಾ ಕ್ರಮದಿಂದ ತಿಳಿಯಬಹುದು.

> ಪಾಶಾವಲೋಕನಂ ತ್ಯಕ್ತ್ವಾ ಸ್ವರೂಪಾಲೋಕನಂ ಹಿ ಯತ್ ।
> ಆತ್ಮವ್ಯಾಪ್ತಿರ್ಭವತ್ಯೇಷಾ ಶಿವವ್ಯಾಪ್ತಿಸ್ತತೋಽನ್ಯಥಾ ॥
> ಆತ್ಮತತ್ವಂ ತತಸ್ತ್ಯಕ್ತ್ವಾ ವಿದ್ಯಾತತ್ತ್ವೇ ನಿಯೋಜಯೇತ್ ।
> ಉನ್ಮನಾ ಸಾ ತು ಜ್ಞೇಯಾ ಮನಃಸಂಕಲ್ಪ ಉಚ್ಯತೇ ॥
>
> —ಶ್ರೀ ಸ್ವಚ್ಛಂದ

ಜಾಗ್ರದ್ದ್ವಿತೀಯಕರಃ ||೮||

ಶುದ್ಧಾಧ್ವ ಸಾಕ್ಷಾತ್ಕಾರವನ್ನು ಪಡೆದಿರುವವನಿಗೆ ವಿಶ್ವವೆಲ್ಲಾ ತನ್ನ ಕಿರಣಗಳ ಹಾಗೆ ತೋರುವುದು

ಶುದ್ಧವಿದ್ಯಾಪದವನ್ನು ಸಾಕ್ಷಾತ್ಕರಿಸಿದರೂ ಅದರಲ್ಲಿ ಏಕಾಗ್ರತೆಯನ್ನು ಸ್ಥಿರವಾಗಿ ನಿಲ್ಲಿಸುವುದಕ್ಕೆ ಎಚ್ಚರಿಕೆಯಿಂದಿರಬೇಕು. ಪೂರ್ಣಾಹಂತಾ ವಿಮರ್ಶನೆಯನ್ನು ಸದಾ ಅನುಸರಿಸಿಕೊಂಡಿರಬೇಕು. ಈ ಸ್ವಾನುಭೂತಿ ಪ್ರಕಾಶಕ್ಕಿಂತ ಬೇರೆಯಾಗಿರುವ ವೇದ್ಯವಾದ ವಿಶ್ವದ ಆಭಾಸವೆಲ್ಲಾ ಶಕ್ತಿಸ್ವರೂಪ. ಅದು ಸ್ವಯಂಜ್ಯೋತಿಯಾದ ಚಿಚ್ಛಕ್ತಿಯ ಕಿರಣಗಳಿದ್ದ ಹಾಗೆ ಸಾಧಕನಿಗೆ ತೋರುತ್ತದೆ—ಅಂದರೆ ವಿಶ್ವವೆಲ್ಲಾ ತನ್ನ ಪ್ರಕಾಶಮಯವಾದ ಕಿರಣಗಳ ರೂಪದಿಂದ ಸ್ಫುರಿಸುವುದು ಎಂದು ತಾತ್ಪರ್ಯ. ಯಾವ ಪರಿಸ್ಥಿತಿಯಲ್ಲಿ ಇಂದ್ರಿಯಗಳ ದ್ವಾರಾ ಚೈತನ್ಯವು ಅಭಿವ್ಯಕ್ತವಾಗುವುದೋ ಅವೆಲ್ಲಾ ಧರ್ಮಗಳು—ಶಕ್ತಿಗಳು. ಚಿತ್ ಒಂದೇ ಧರ್ಮಿ (ಶಕ್ತ). ಆ ಧರ್ಮಿಯಲ್ಲಿ ಈ ಧರ್ಮಗಳೆಲ್ಲಾ ಅಡಗಿರುತ್ತವೆ. ಶಕ್ತಿ ಮತ್ತು ಶಕ್ತಿಯುಳ್ಳವನು ಎಂದು ಎರಡು ವಿಷಯಗಳನ್ನು ಕುರಿತು ನಾವು ವ್ಯವಹರಿಸುತ್ತೇವೆ—ಶಕ್ತಿಯ ವಿಲಾಸವು ಈ ಜಗತ್ತು. ಶಕ್ತಿಯುಳ್ಳವನು ಮಹೇಶ್ವರ.

> ಯತ್ರ ಯತ್ರಾಕ್ಷಮಾರ್ಗೇಣ ಚೈತನ್ಯಂ ವ್ಯಜ್ಯತೇ ವಿಭೋಃ ।
> ತಸ್ಯ ತನ್ಮಾತ್ರ ಧರ್ಮಿತ್ವಾಚ್ಚಿಲ್ಲಯಾದ್ಭರಿತಾತ್ಮತಾ ॥
>
> —ವಿಜ್ಞಾನಭೈರವ

ಅವತರಣಿಕೆ—ಇಂತಹ ಸಿದ್ಧಿಯ ಜ್ಞಾನದಿಂದ ಯಾವಾಗಲೂ ಸ್ವರೂಪ ವಿಮರ್ಶಾವಿಷ್ಟನಾಗಿರುವ ಸಾಧಕನು ನರ್ತಕ ಆತ್ಮಾ.

ನರ್ತಕ ಆತ್ಮಾ ||೯||

ಆತ್ಮನನ್ನು ನರ್ತಕನಂತೆ ನಿರೂಪಣೆ

ಆತ್ಮನು ತನ್ನ ಸ್ವರೂಪವನ್ನು ಮರೆಮಾಚಿಕೊಂಡು ಸ್ವಭಾವದಲ್ಲಿರುವ ಸ್ವಪ್ನ ಜಾಗರ ಸುಷುಪ್ತಿ ಮೊದಲಾದ ಅವಸ್ಥೆಗಳನ್ನು ನಟಿಸುತ್ತಾನೆ. ಈ ವೇಷಗಳನ್ನು ತನ್ನ ಚಿದ್ವಿಲಾಸ ಲೀಲೆಯಿಂದಲೇ ತನ್ನಲ್ಲಿಯೇ ಪ್ರಕಟಿಸುವುದರಿಂದ ಆತ್ಮನೆನಿಸಿಕೊಂಡಿದ್ದಾನೆ. ಎಲ್ಲಾ ಭಾವಗಳ ಸಂಸ್ಕಾರಗಳನ್ನೂ ತೊಡೆದು ಮೂರು ಲೋಕಗಳ ನಾಟಕಗಳನ್ನು ಅಭಿನಯಿಸುವ ಸಮರ್ಥನು ಶಿವನಲ್ಲದೆ ಮತ್ತಾರು! ಆದುದರಿಂದ ಪರಮೇಶ್ವರನೊಬ್ಬನೇ ಈ ಪ್ರಪಂಚದಲ್ಲಿ ಸಂಸಾರನಾಟ್ಯವನ್ನು ನಡೆಯಿಸುವವನು. ಜಗತ್ತೆಲ್ಲಾ ನಿದ್ರಿಸುವಾಗ ತಾನು ಎಚ್ಚರವಾಗಿರುತ್ತಾನೆ.

ಅವತರಣಿಕೆ—ಇಂತಹ ಜಗನ್ನಾಟ್ಯನರ್ತಕನ ವೇಷ, ಗ್ರಹಣ ಮತ್ತು ಪದಬಂಧ ಈ ಸ್ಥಾನಗಳಿಗೆ ರಂಗವಾಗಿರುವುದು ಅಂತರಾತ್ಮಾ.

ರಂಗೋಽಂತರಾತ್ಮಾ ॥೧೦॥

ರಂಗದ ಲಕ್ಷಣ—ರಂಗಸ್ಥಳದ ಸ್ವರೂಪ

ಈ ಜಗನ್ನಾಟ್ಯಕ್ರೀಡೆಯನ್ನು ತೋರಿಸುವ ಆಸೆಯುಳ್ಳ ಆತ್ಮನೇ ರಂಗಭೂಮಿ. ಆಯಾವೇಷವನ್ನು ತೋರಿಸುವ ಸ್ಥಳವೇ ಅಂತರಾತ್ಮ. ಈ ಆತ್ಮನು ಸಂಕೋಚದಿಂದ ಪ್ರಕಾಶಿಸುವನು. ಶೂನ್ಯಪ್ರಧಾನನಾಗಿರುವನು. ತತ್ತ್ವಕ್ರಮದಲ್ಲಿ ಪುರ್ಯಷ್ಟಕ ರೂಪನು. ದೇಹದೃಷ್ಟಿಯಿಂದ ಪಳಗಿರುವ ಜೀವಾತ್ಮನು. ಜೀವಾತ್ಮನಲ್ಲಿದ್ದು ತನ್ನ ಶಕ್ತಿ ಸ್ಫುರಣದಿಂದ ಇಂದ್ರಿಯಗಳ ಮೂಲಕ ಈ ಜಗನ್ನಾಟ್ಯವನ್ನು ಅಭಿನಯಿಸುವನು. ಪುರ್ಯಷ್ಟಕ ಸಮಾವೇಶದಿಂದ ಬೇರೆ ಬೇರೆ ಜನ್ಮಗಳಲ್ಲಿ ಸಂಚರಿಸುವ ಅಂತರಾತ್ಮನು.

ಅವತರಣಿಕೆ—ಹೀಗೆ ಅಂತರಾತ್ಮರಂಗದಲ್ಲಿ ನಾಟ್ಯವಾಡುತ್ತಲಿರುವ ಇವನ ಲಕ್ಷಣಗಳು—

ಪ್ರೇಕ್ಷಕಾಣೀಂದ್ರಿಯಾಣಿ ॥೧೧॥

ನೋಡುವವರ ಲಕ್ಷಣ

ಯೋಗಿಯ ಕಣ್ಣು ಮೊದಲಾದ ಇಂದ್ರಿಯಗಳು ಈ ಸಂಸಾರ ನಾಟ್ಯವನ್ನು ಪ್ರಕಟಿಸುವವುಗಳಾಗಿವೆ. ಮತ್ತು ಸ್ವಸ್ವರೂಪವನ್ನು ಅಂತರ್ಮುಖವಾಗಿ ಸಾಕ್ಷಾತ್ಕರಿಸು ವವುಗಳಾಗಿವೆ. ಈ ಅನುಭವದಿಂದ ಈ ವಿಶ್ವವನ್ನು ತಾನೇ ಚಮತ್ಕಾರದಿಂದ ಪ್ರಕಾಶ ಪಡಿಸುತ್ತಿರುವವನೂ, ಭೇದಜ್ಞಾನವನ್ನು ಕಳೆದು ತಾನೇ ಶಿವನೆಂಬ ಭಾವನೆಯನ್ನು ಪಡೆಯುವವನೂ ಆಗಿದ್ದಾನೆ.

ಕಶ್ಚಿದ್ಧೀರಃ ಪ್ರತ್ಯಗಾತ್ಮಾ ನಮೈಕ್ಷದ್ ಆವೃತ್ತಚಕ್ಷುರಮೃತತ್ವಮಿಚ್ಛನ್ ।

—ಕಠೋಪನಿಷತ್

ಅವತರಣಿಕೆ—ಇಂತಹ ಸಾಧಕನ ಸಿದ್ಧಿಗೆ—

ಧೀವಶಾತ್ ಸತ್ತ್ವಸಿದ್ಧಿಃ ॥೧೨॥

ಸತ್ತ್ವಸಿದ್ಧಿಗೆ ಕಾರಣಗಳು

ತಾತ್ತ್ವಿಕವಾದ ಸ್ವರೂಪ ವಿಮರ್ಶನೆಯಲ್ಲಿ ಸಮರ್ಥವಾದ ತಿಳಿವಳಿಕೆಯು ಇಂತಹ ಸಾಧಕನಿಗಿರುತ್ತದೆ. ಈ ತಿಳಿವಳಿಕೆಯ ಬಲದಿಂದ ಆಂತರೀಯಕವಾಗಿ ಹರಡುವ ಸೂಕ್ಷ್ಮವಾದ ಸ್ಫುರತ್ತಾತ್ಮಕವಾದ ಸತ್ತ್ವದ ಸಿದ್ಧಿಯು ಅಭಿವ್ಯಕ್ತವಾಗುತ್ತದೆ. ನಾಟ್ಯದಲ್ಲಿ ಸಾತ್ತ್ವಿಕಾಭಿನಯ ಸಿದ್ಧಿಬುದ್ಧಿ ಕೌಶಲ್ಯದಿಂದ ಲಭಿಸುತ್ತದೆ.

ಅವತರಣಿಕೆ—ಹೀಗೆ ಸ್ಫುರತ್ತಾತ್ಮಕ ಸತ್ತ್ವಸಿದ್ಧಿಯುಳ್ಳ ಯೋಗಿಯು ಸ್ವತಂತ್ರ ಭಾವವುಳ್ಳವನಾಗಿರುತ್ತಾನೆ.

ಸಿದ್ಧಃ ಸ್ವತಂತ್ರಭಾವಃ ||೧೩||

ಸತ್ತ್ವಸಿದ್ಧಿಯ ಫಲ

ಈ ರೀತಿಯಾದ ಸ್ಫುರತ್ತಾತ್ಮಕ ಸ್ವಾತಂತ್ರ್ಯಶಕ್ತಿ ಪಡೆದಿರುವ ಯೋಗಿಗೆ ಸಹಜವಾದ ಜ್ಞಾತೃತ್ವ, ಕರ್ತೃತ್ವ, ಸ್ವತಂತ್ರಭಾವ ಇವುಗಳೆಲ್ಲಾ ಸಂಪನ್ನವಾಗುತ್ತವೆ. ಎಲ್ಲಾ ತತ್ತ್ವಗಳೂ, ಭೂತಗಳೂ, ಮಂತ್ರವರ್ಣಗಳೂ ಯಾವಾಗಲೂ ಶಿವಭಾವನೆಯುಳ್ಳವನಿಗೆ ವಶವಾಗಿರುತ್ತವೆ. ಇದರಿಂದ ವಿಶ್ವವಶೀಕಾರವಾಗುತ್ತದೆ.

ಯಥಾ ತತ್ರ ತಥಾ ಅನ್ಯತ್ರ ||೧೪||

ಸ್ವಾತಂತ್ರ್ಯವನ್ನು ಅನ್ಯತ್ರ ಬಳಸುವಿಕೆ

ಹೇಗೆ ಸ್ವತಂತ್ರಭಾವವು ಯೋಗಿಗೆ ಶರೀರದಲ್ಲಿ ಸ್ವರೂಪಾಭಿವ್ಯಕ್ತಿ (ಆತ್ಮಸಾಕ್ಷಾತ್ಕಾರ) ಯಾಗಿರುವುದೋ ಆದೇ ರೀತಿಯಾಗಿ ಬೇರೆ ಎಲ್ಲಾ ಕಡೆಗಳಲ್ಲಿಯೂ ಅನುಸಂಧಾನತತ್ಪರರಿಗೆ ಸ್ವರೂಪ ಸಾಕ್ಷಾತ್ಕಾರವಾಗುತ್ತದೆ. ಯೋಗಸಿದ್ಧಿಯಿಂದ ಸ್ವಚ್ಛಂದತಾ ಸಿದ್ಧಿಯಾಗುತ್ತದೆ. ಅಂದರೆ ತಾನು ಸ್ವತಂತ್ರನೆಂಬ ಭಾವನೆಯುಂಟಾಗುತ್ತದೆ. ಆದುದರಿಂದ ಶ್ರದ್ಧೆಯಿಂದ ತತ್ತ್ವಗಳನ್ನು ಪರಿಶೀಲಿಸಬೇಕು. ಇಲ್ಲಿ ಉಂಟಾಗುವ ಸ್ವಾತಂತ್ರ್ಯವು ಅಕೃತ್ರಿಮವಾದದ್ದು. ಹೀಗೆ ಸಿದ್ಧಿಸ್ಥಾನವನ್ನು ಮುಟ್ಟಿದ್ದರೂ ಸಾಧಕನು ಉದಾಸೀನನಾಗಿರಕೂಡದು.

ಬೀಜಾವಧಾನಂ ||೧೫||

ಸ್ವಾತಂತ್ರ್ಯ ಲಾಭವಾಗಿದ್ದರೂ ಆ ಪರವಸ್ತುವನ್ನು ಧ್ಯಾನಮಾಡಬೇಕೆಂಬ ಉಪದೇಶ

ವಿಶ್ವಕ್ಕೆ ಕಾರಣವಾಗಿರುವ ಸ್ಫುರತ್ತಾರೂಪವಾದ ಪರಾಶಕ್ತಿಯೇ ಬೀಜ. ಅದು ಎಲ್ಲಾ ದೇವತೆಗಳಿಗೂ, ಶಕ್ತಿಗಳಿಗೂ ಕಾರಣವಾಗಿದೆ. ಆದುದರಿಂದಲೇ ವಿಶ್ವವು ನಡೆಯುತ್ತಿದೆ. ಆ ಬೀಜರೂಪವಾದ ಪರಾಶಕ್ತಿಯಲ್ಲಿ ಬಾರಿ ಬಾರಿಗೂ ಮನಸ್ಸನ್ನು ನಿಲ್ಲಿಸುತ್ತಿರಬೇಕು. ಇದೇ ಅವಧಾನ. ಈ ಅವಧಾನ ಯಾರಿಗಿರುತ್ತದೆಯೋ ಅವನೇ ಯೋಗಿ.

ಆಸನಸ್ಥಃ ಸುಖಂ ಹ್ರದೇ ನಿಮಜ್ಜತಿ ||೧೬||

ಶಾಕ್ತಬಲ ಲಾಭದಿಂದ ಶಾಂಭವಪದ ಪ್ರಾಪ್ತಿ

ಯಾವಾಗಲೂ ಏಕಾತ್ಮ್ಯದಿಂದಿರುವಿಕೆಯೇ ಆಸನ. ಶಾಕ್ತವೇ ಶ್ರೇಷ್ಠವಾದ ಬಲ. ಇದರಲ್ಲಿ ಯಾರು ಸದಾ ತತ್ಪರರಾಗಿರುವರೋ ಅವರು ಪರಾಪರತತ್ತ್ವಗಳನ್ನು ಪ್ರತ್ಯೇಕವಾಗಿ ಸಂಧಾನಮಾಡಬೇಕಾಗಿಲ್ಲ. ಅವರು ಯಾವಾಗಲೂ ಅಂತರ್ಮುಖರಾಗಿ ಪರಾಶಕ್ತಿಯನ್ನು ಪರಾಮರ್ಶಿಸುತ್ತಿರಬೇಕು. ಅನಾಯಾಸವಾಗಿ ಹೀಗೆ ಪರಾಮರ್ಶಿಸುವವರು ಈ ವಿಶ್ವಪ್ರವಾಹಕ್ಕೆ ಕಾರಣವಾದ ಆ ಪರಾಮೃತ ಸಮುದ್ರದಲ್ಲೇ ಮುಳುಗುವರು.

ದೇಹಾದಿ ಸಂಕೋಚಭಾವನೆಗಳನ್ನು ಮತ್ತು ಸಂಸ್ಕಾರಗಳನ್ನು ದಾಟಿ ತನ್ಮಯರಾಗಿರುವರು. ಮೇಲೆ ಕೆಳಗೆ ಮಧ್ಯೆ, ಹಿಂದೆ ಮುಂದೆ ಪಕ್ಕಗಳಲ್ಲಿ, ಶರೀರದೊಳಗೆ ಹೊರಗೆ, ಆಕಾಶದಲ್ಲಿ ಅಥವಾ ಅಧೋಭಾಗದಲ್ಲಿ ದೃಷ್ಟಿಯನ್ನಿಡಬೇಕಾದ್ದಿಲ್ಲ. ಹಾಗೆಯೇ ಸಾಲಂಬನವಾಗಿಯಾಗಲಿ, ನಿರಾಲಂಬನವಾಗಿಯಾಗಲಿ, ಇಂದ್ರಿಯಗಳನ್ನಾಗಲಿ, ಭೂತಗಳನ್ನಾಗಲಿ ಧ್ಯಾನಮಾಡಬೇಕಾದ್ದಿಲ್ಲ. ಈ ಭೇದಗಳನ್ನು ಕಳೆದು ತನ್ಮಯತೆಯಿಂದ ಇರುವಿಕೆಯೇ ಶ್ರೇಷ್ಠವಾದ ನಿರಾಭಾಸವಾದ ಮುಕ್ತಾವಸ್ಥೆ.

ಅವತರಣಿಕೆ—ಈ ಹಿಂದೆ ಹೇಳಿದಂತೆ ನಾಡೀಸಂಹಾರವೇ ಮೊದಲಾದ ಆಣವೋಪಾಯ ಕ್ರಮವನ್ನನುಸರಿಸಬೇಕು. ಅದರಿಂದ ಮೋಹವನ್ನು ಜಯಿಸಬೇಕು. ಇದರ ಪ್ರಭಾವದಿಂದ ಶುದ್ಧ ವಿದ್ಯಾತ್ಮಕ ಶಾಕ್ತಬಲ ಪ್ರಾಪ್ತಿಯಾಗುತ್ತದೆ. ಬಲಪ್ರಕರ್ಷದಿಂದ ಸಾತ್ಮ್ಯೀಕೃತವಾದ ತನ್ಮಯತ್ವ ಸಿದ್ಧಿಯಾಗುತ್ತದೆ. ಶಾಂಭವಪದ ಪ್ರಾಪ್ತಿಯಾಗುತ್ತದೆ.

ಸ್ವಮಾತ್ರಾ ನಿರ್ಮಾಣಮಾಪಾದಯತಿ ॥೧೭॥

ಸ್ವತಂತ್ರ ಸ್ಥಿತಿಯನ್ನು ಪಡೆದಿರುವವನು ಈ ವಿಶ್ವಕ್ಕೆ ನಿರ್ಮಾತೃವಾಗಿರುವನು

ಸಾಧಕನು ತನ್ನ ಚೈತನ್ಯಕ್ಕೆ ಸಂಬಂಧಪಟ್ಟ ಚಿದ್ರಸರೂಪವಾದ ಅಂಶದಿಂದ ತನಗಿಷ್ಟಬಂದ ಹಾಗೆ ಈ ವೇದ್ಯ ವೇದಕ (ಗ್ರಾಹ್ಯ ಗ್ರಾಹಕ) ರೂಪಗಳನ್ನು ನಿರ್ಮಿಸಿರುವೆನೆಂದು ತಿಳಿಯುತ್ತಾನೆ. ಆ ಮಹಾಪ್ರಕಾಶ ಸ್ಥೂಲವಾಗುತ್ತದೆ. ಇದಕ್ಕೆ ಉಪಾಧಿಯೇ ಕಾರಣ. ಆದ್ದರಿಂದ ಇದಕ್ಕಿಂತ ಬೇರೆಯಾಗಿರುವ ಪರಮಾತ್ಮತತ್ತ್ವವನ್ನು ಸಾಕ್ಷಾತ್ಕಾರಮಾಡಬೇಕು. ಮಂಜಿನಲ್ಲಿ ನೀರಿರುವಂತೆ ಶಿವಶಕ್ತಿಗಳಿರುತ್ತವೆ. ಈ ವಿಶ್ವವೆಲ್ಲಾ ಕ್ರೀಡೆಯೆಂದು ಯಾವನು ತಿಳಿಯುವನೋ ಯಾವನು ಸದಾ ಅನುಸಂಧಾನ ಮಾಡುವನೋ ಅವನೇ ಜೀವನ್ಮುಕ್ತ.

> ಇತಿ ವಾ ಯಸ್ಯ ಸಂವಿತ್ತಿಃ ಕ್ರೀಡಾತ್ವೇನಾಖಿಲಂ ಜಗತ್ ।
> ಸ ಪಶ್ಯನ್ ಸತತಂ ಯುಕ್ತೋ ಜೀವನ್ಮುಕ್ತೋ ನ ಸಂಶಯಃ ॥
>
> —ಸ್ಪಂದನಿರ್ಣಯ

ಅವತರಣಿಕೆ—ತನ್ನಿಂದಲೇ ವಿಶ್ವವು ಸೃಷ್ಟಿಯಾಗಿದೆಯೆಂದು ಅನುಭವಕ್ಕೆ ಬಂದರೆ ಇವನಿಗೆ ಭೂತಾತ್ಮಕವಾಗಿಯಾಗಲಿ, ಭಾವಾತ್ಮಕವಾಗಿಯಾಗಲಿ ಇರುವ ಶರೀರದಿಂದ ಬಂಧನವಿಲ್ಲ.

ವಿದ್ಯಾಽವಿನಾಶೇ ಜನ್ಮವಿನಾಶಃ ॥೧೮॥

ಸ್ವಾತಂತ್ರ್ಯವಿಕಾಸವನ್ನು ಪಡೆದಿರುವವನಿಗೆ ಪುನರ್ಜನ್ಮವಿಲ್ಲ

ಸ್ವರೂಪ ವಿಮರ್ಶರೂಪವಾದ ಸಹಜ ವಿದ್ಯೆಯು ಮಲಿನವಾಗದಿದ್ದರೆ ಅಥವಾ ಜಾಗರೂಕವಾಗಿದ್ದರೆ ಜನನ ಮರಣಗಳಿಗೆ ಕಾರಣವಾದ ಅಜ್ಞಾನಕ್ಕೆ ಸಹಕಾರಿಗಳಾದ ಕರ್ಮವೇ ಕಾರಣವಾಗುಳ್ಳ ದುಃಖಮಯವಾದ ದೇಹ, ಇಂದ್ರಿಯ ಮೊದಲಾದ ಸ್ಥೂಲ

ಉಪಕರಣಗಳ ಸಮೂಹವು ನಷ್ಟವಾಗುತ್ತದೆ. ಇದು ಬೇಕು, ಇದು ಬೇಡ, ಇದು ಕಡ್ಡಿ, ಇದು ಎಲೆ, ಇದು ಕಲ್ಲು ಎಂಬ ವ್ಯತ್ಯಾಸವನ್ನು ಭಾವನಾಬಲದಿಂದ ಬಿಟ್ಟು ಶಿವನ ಮೊದಲು ಪೃಥ್ವೀಪರೆಗಿರುವ ಭಾವಾಭಾವರೂಪವಾದ ಈ ವಿಶ್ವವನ್ನು ಶಿವಮಯ ವೆಂದು ಧ್ಯಾನಮಾಡುವವನಿಗೆ ಜನ್ಮವಿಲ್ಲ. ನರ ಶಿವ ಶಕ್ತಿ ಈ ಮೂರು ತತ್ತ್ವತ್ರಯಗಳು. ಯೋಗಮಾರ್ಗದಿಂದ ಈ ಮೂರನ್ನು ದಾಟಿ ಪರತತ್ತ್ವವನ್ನು ಸಾಕ್ಷಾತ್ಕರಿಸಬೇಕು.

ಕವರ್ಗಾದಿಷು ಮಾಹೇಶ್ವರ್ಯಾದ್ಯಾಃ ಪಶುಮಾತರಃ ॥೧೯॥

ಸಂವಿತ್ ತತ್ತ್ವ ಸಾಕ್ಷಾತ್ಕಾರವಾಗಿದ್ದರೂ ಪ್ರಮಾದವಶದಿಂದ ಮೋಹವುಂಟಾಗ ಬಹುದು. ಪ್ರಕಾಶಿಸುತ್ತಿರುವ ಶುದ್ಧತತ್ತ್ವದಲ್ಲಿ ಯಾವಾಗಲೂ ಗಮನವಿರಬೇಕು

ಯಾವಾಗ ಶುದ್ಧ ವಿದ್ಯಾಸ್ವರೂಪವು ಅವನಿಗೆ ಸಾಕ್ಷಾತ್ಕೃತವಾಗುತ್ತದೆಯೋ ಆಗ 'ಕ' ವರ್ಗವೇ ಮೊದಲಾದ ಅಕ್ಷರಗಳು ಅಧಿಷ್ಠಾತೃದೇವತೆಗಳಾಗಿರುತ್ತವೆ. ಆ ಪರಮಾತ್ಮನ ಶಕ್ತಿಯು ಮಹಾದೇವತೆ. ತಾನು ಅಭಿನ್ನವಾಗಿದ್ದರೂ ವಿಶ್ವವನ್ನು ಸೃಷ್ಟಿಮಾಡಬೇಕೆಂಬ ಸಂಕಲ್ಪದಿಂದ ಅನೇಕ ರೂಪಗಳನ್ನು ಪಡೆಯುತ್ತದೆ. ಈ ಪದಾರ್ಥ ಈ ವಿಷಯ ಹೀಗೆಯೇ ಇರಬೇಕೆಂಬುದು ನಿರ್ಣಯಿಸುವುದು ಜ್ಞಾನಶಕ್ತಿ. ಈ ಪದಾರ್ಥವು ಈ ರೂಪದಿಂದಿರಲಿ ಎಂದು ನಿರ್ಣಯಿಸುವುದು ಕ್ರಿಯಾಶಕ್ತಿ. ಹೀಗೆ ಶಕ್ತಿಯು ಮುಖ್ಯವಾಗಿ ಎರಡು ರೂಪಗಳಿಂದಿದ್ದರೂ ವಾಚ್ಯ ವಾಚಕಾತ್ಮಕ ಜಗತ್ತನ್ನು ಸೃಷ್ಟಿಮಾಡುವುದರಿಂದ ಅನೇಕ ರೂಪಗಳನ್ನು ಪಡೆಯುತ್ತದೆ. ವಾಚ್ಯವಾಚಕ ಸ್ಥಿತಿ ಯನ್ನು ಪಡೆದಾಗ 'ಮಾತಾ' ಎನ್ನಿಸಿಕೊಳ್ಳುತ್ತದೆ. (ಇಲ್ಲಿ ಮಾತಾ ಎಂದರೆ ಅಳತೆ ಮಾಡುವುದು ನಿರ್ಣಯಿಸುವುದು ಎಂದರ್ಥ.) ಅನುಸ್ವಾರ ವಿಸರ್ಗಸೇರಿ ಸ್ವರಗಳು ೧೬. ಇವೇ ಬೀಜಗಳು. ವ್ಯಂಜನಗಳು ೩೩. ಇವು ಯೋನಿಗಳು. ಇವುಗಳಲ್ಲಿ ವರ್ಗಭೇದದಿಂದ ಯ ರ ಲ ವ ಶ ಷ ಸ ಹ ಳ ಈ ರೀತಿ ಒಂಭತ್ತು ರೂಪಗಳಾಗಿವೆ.

ಶಿವನೇ ಬೀಜ. ಶಕ್ತಿಯೇ ಯೋನಿ. ವರ್ಗಾಷ್ಟಕ ಭೇದದಿಂದ ಮಾಹೇಶ್ವರ್ಯಾದಿ ಶಕ್ತಿದೇವತೆಗಳ ಭೇದ ಉಂಟಾಗುತ್ತದೆ. ಪ್ರತಿಯೊಂದು ಅಕ್ಷರವನ್ನೂ ಬೇರೆ ಬೇರೆ ಯಾಗಿ ಎಣಿಸಿದರೆ ೫೦ ಭೇದಗಳಿಂದ ಆ ರುದ್ರರೂಪಗಳನ್ನೇ ತಿಳಿಯಪಡಿಸುತ್ತದೆ. ಆ ಪರಮೇಶ್ವರಿಯ ಪರಾವಾಕ್‌ಶಕ್ತಿ ಪ್ರಸರಿಸುವಾಗ ಮೊದಲು ಇಚ್ಛಾ ಜ್ಞಾನ ಕ್ರಿಯಾ ರೂಪಗಳನ್ನು ತಾಳುತ್ತದೆ. ಮುಂದೆ ಬೀಜ ಯೋನಿ ವರ್ಗ ವರ್ಗೀಯಾದಿ ರೂಪ ಗಳಿಂದ ಹೊರಹೊಮ್ಮುತ್ತದೆ. ಹಾಗೆಯೇ ಮಹೇಶ್ವರೀ ಮೊದಲಾದ ವಾಚಕ ರೂಪ ವನ್ನು ತಾಳುತ್ತದೆ. ಈ ಸಹಜವಿದ್ಯೆಯು ಅಕಾರಾದಿ ಕ್ಷಕಾರಾಂತವಾದ ಮಾತೃಕಾ ಆಕಾರದಿಂದ ಬೆಳಗುತ್ತದೆ. ಎಲ್ಲಾ ಪ್ರಮಾತೃಗಳಲ್ಲಿಯೂ ಅವಿಕಲ್ಪ ಸವಿಕಲ್ಪ ಮೊದಲಾದ ವೃತ್ತಿಗಳನ್ನು ಪ್ರಕಾಶಗೊಳಿಸುವಾಗ ಆಯಾದಶೆಗಳಲ್ಲಿ ಅಂತರ್ಯವಾಗಿ ಪರಾಮರ್ಶನೆಗೆ ಗುರಿಯಾಗಿರುತ್ತದೆ. ಹಾಗೆಯೇ ಸ್ಥೂಲ ಮತ್ತು ಸೂಕ್ಷ್ಮವಾದ ಶಬ್ದ ದೊಡನೆ ವರ್ಗ ಮತ್ತು ವರ್ಗೀಯಗಳ ಅಧಿಷ್ಠಾತೃಗಳಾದ ದೇವತೆಗಳ ದ್ವಾರಾ ಆಶ್ಚರ್ಯ

ಹರ್ಷದಯಾ ರಾಗ ದ್ವೇಷಾದಿ ಭಾವಗಳನ್ನು ವಿಸ್ತರಿಸುತ್ತಾ ಇರುತ್ತದೆ. ಅಸಂಕುಚಿತವಾಗಿರುವ ಸ್ವತಂತ್ರವಾದ ಚಿದ್ಘನ ಸ್ವಭಾವದಿಂದಿರುವ ತನ್ನ ಸ್ವರೂಪವನ್ನು ಮರೆಮಾಚುತ್ತಿರುತ್ತದೆ. ಸಂಕುಚಿತವಾದ ಪರತಂತ್ರಗಳಾಗಿರುವ ಶರೀರಗಳನ್ನೇ ತಾನೆಂದು ತಿಳಿಯುವ ಹಾಗೆ ಮಾಡುತ್ತದೆ. ಚಿದ್ಗಗನದಲ್ಲಿದ್ದುಕೊಂಡು ಈ ದೇವತೆಗಳು ಬಾರಿ ಬಾರಿಗೂ ಪ್ರಮಾತೃವನ್ನು ಮೋಹಗೊಳಿಸುತ್ತಿರುತ್ತವೆ. ಈ ಅಂಶವನ್ನು ಮೊದಲನೆ ಉನ್ಮೇಷದ ನಾಲ್ಕನೆಯ ಸೂತ್ರದಲ್ಲಿ—'ಜ್ಞಾನಾಧಿಷ್ಠಾನಂ ಮಾತೃಕಾ' ಎಂಬ ಸೂತ್ರದಲ್ಲಿ—ತಿಳಿಯಪಡಿಸಿದ್ದಾಯಿತು. ಸಾಧಕನಿಗೆ ತತ್ತ್ವಜ್ಞಾನವಿದ್ದರೂ ಸ್ವಲ್ಪ ಪ್ರಮಾದ ಉಂಟಾದರೂ ಶಬ್ದದ್ವಾರಾ ಈ ಅಕ್ಷರ ದೇವತೆಗಳು ಮೋಹಗೊಳಿಸುತ್ತವೆ.

ಅವತರಣಿಕೆ—ಯಾವ ಕಾರಣದಿಂದ ಪರತತ್ತ್ವಾನುಸಂಧಾನಕ್ಕೆ ತೊಂದರೆಯುಂಟಾಗುತ್ತದೆಯೋ ಅದರ ನಿವಾರಣೆಗೆ ಹಿಂದೆ ಹೇಳಿದ ಉಪಾಯಗಳನ್ನನುಸರಿಸಿ ಶುದ್ಧವಿದ್ಯಾನುಭವವನ್ನು ಪಡೆದಿದ್ದರೂ ಆ ಸ್ಥಿತಿಯನ್ನು ರಕ್ಷಿಸಿಕೊಳ್ಳುವುದಕ್ಕೆ ಎಲ್ಲಾ ಕಾಲ ದೇಶ ದಶೆಗಳಲ್ಲಿಯೂ ಯೋಗಿಯು ಸಾವಧಾನದಿಂದಿರಬೇಕು.

ತ್ರಿಷು ಚತುರ್ಥಂ ತೈಲವದಾಸೇಚ್ಯಂ ॥೨೦॥

ಜಾಗ್ರದಾದಿ ಮೂರು ಅವಸ್ಥೆಗಳಲ್ಲಿಯೂ ತುರೀಯಾನುಸಂಧಾನವಿರಬೇಕು—ಇದು ಉಪಾಯ

ಜಾಗ್ರತ್ ಸ್ವಪ್ನ ಸುಷುಪ್ತಿ ದಶೆಗಳಲ್ಲಿ ಶುದ್ಧವಿದ್ಯೆಯನ್ನು ಪ್ರಕಾಶಗೊಳಿಸುವ ತುರೀಯಾನಂದ ರಸಾತ್ಮಕವಾದ ಸ್ವಸ್ವರೂಪವನ್ನು ಅನುಸಂಧಾನ ಮಾಡಬೇಕು. ಹೇಗೆಂದರೆ ಒಂದು ತೊಟ್ಟು ಎಣ್ಣೆಯನ್ನು ನೀರಿನಲ್ಲಿ ಬಿಟ್ಟರೆ ಅದು ಹೇಗೆ ನೀರಿನ ಮೇಲ್ಭಾಗದಲ್ಲೆಲ್ಲಾ ಹರಡುತ್ತದೆಯೋ ಹಾಗೆ ಜಾಗ್ರದಾದಿ ಮೂರು ಅವಸ್ಥೆಗಳಲ್ಲಿಯೂ ತುರೀಯಾನುಭೋಗವನ್ನು ಸಾಧಿಸಬೇಕು. ಉನ್ಮೇಷ ಮತ್ತು ಉಪಶಾಂತಿಗಳಲ್ಲಿ (ಪ್ರಾರಂಭ ಮತ್ತು ಕೊನೆ) ಸ್ಫುರಿಸುವ ತುರೀಯಾನುಭವವನ್ನು ಮಧ್ಯದಶೆಯಲ್ಲಿಯೂ ಅನುಸಂಧಾನ ಮಾಡುತ್ತಾ ಬರಬೇಕು. ಇದರಿಂದ ತನ್ಮಯೀಭಾವವುಂಟಾಗುತ್ತದೆ.

'ಜಾಗ್ರತ್ಸ್ವಪ್ನಸುಷುಪ್ತ ಭೇದೇ ತುರ್ಯಾಭೋಗ ಸಂಭವಃ'

(೧ ನೇ ಉನ್ಮೇಷ, ೭ ನೇ ಸೂತ್ರ)

ಜಾಗ್ರದಾದಿ ಎಲ್ಲಾ ಅವಸ್ಥೆಗಳಲ್ಲಿಯೂ ತುರೀಯಾವಸ್ಥೆಯೇ ತಳಹದಿಯಾಗಿರುತ್ತದೆ.

'ತ್ರಿತಯಭೋಕ್ತಾ ವೀರೇಶಃ'

(೧ ನೇ ಉನ್ಮೇಷ, ೨ ನೇ ಸೂತ್ರ)

ಎಂಬಂತೆ ಕ್ರಮಾಕ್ರಮವಾಗಿ ಪರಿಪಾಕವನ್ನು ಪಡೆದಿರುವ ಸಾಧಕನು ಉಪದೇಶಗಳಿಂದಲೋ ಅಥವಾ ವಿಕಾಸದಿಂದಲೋ ಜಾಗರಾದ್ಯವಸ್ಥೆಗಳಲ್ಲಿ ತುರೀಯಾನುಸಂಧಾನವನ್ನು ಪಡೆಯುವನೆಂದು ಹೇಳಿದ್ದಾಯಿತು. ಇಲ್ಲಿ ಆಣವೋಪಾಯಕ್ಕೆ ತಕ್ಕಂತೆ

ಕತ್ತಿಗೆ ಒರೆ ಇರುವಂತೆ ಜಾಗ್ರದಾದ್ಯವಸ್ಥೆಗಳಿಗೆ ತುರೀಯಾವಸ್ಥೆಯ ಅನುಸಂಧಾನವಿರಬೇಕೆಂದು ಹೇಳಿದೆ.

ಅವತರಣಿಕೆ—ಹೀಗೆ ಜಾಗ್ರದಾದ್ಯವಸ್ಥೆಗಳಲ್ಲಿ ತುರೀಯಾನುಸಂಧಾನವೇರ್ಪಡಬೇಕಾದರೆ ಉಪಾಯವನ್ನು ಹೇಳುತ್ತಾರೆ.

ಮಗ್ನಃ ಸ್ವಚಿತ್ತೇನ ಪ್ರವಿಶೇತ್ ॥೨೦॥

ಭೇದಜ್ಞಾನದಿಂದ ವ್ಯವಹರಿಸುತ್ತಿದ್ದರೂ ಅಭೇದಾನುಸಂಧಾನವಿರಬೇಕು

ಸಾಧಕನು ರೇಚಕಪೂರಕರೂಪವಾದ ಸ್ವಭಾವವುಳ್ಳ ಸ್ಥಿತಿಯನ್ನು ಅತಿಕ್ರಮಿಸಿ ಅನಂತರ ಲಭಿಸುವ ಸೂಕ್ಷ್ಮವಾದ ಮಧ್ಯನಾಡಿಯಲ್ಲಿ ಪ್ರಾಣವನ್ನು ಪ್ರವೇಶಮಾಡಿಸಿ ಸೂಕ್ಷ್ಮಾತೀತವಾದ ಪರಮಸ್ಪಂದವನ್ನು ಪಡೆಯುವನು.

ಪ್ರಾಣಾಯಾಮ, ಧ್ಯಾನ, ಧಾರಣ ಮೊದಲಾದ ಸ್ಥೂಲೋಪಾಯಗಳನ್ನು ಬಿಟ್ಟು ತನ್ನ ಮನಸ್ಸಿನಿಂದ ಅವಿಕಲ್ಪ ಸ್ವರೂಪವನ್ನು ಧ್ಯಾನಿಸಬೇಕು. ಅಂತರ್ಮುಖನಾಗಿ ವಿಮರ್ಶ ಚಮತ್ಕಾರಾತ್ಮಕವಾದ ಸಂವೇದನದಿಂದ (ಅನುಭವದಿಂದ) ಸಮಾವೇಶವನ್ನು ಪಡೆಯಬೇಕು. ಹೇಗೆಂದರೆ ಶರೀರ ಪ್ರಾಣಾದಿ ಪ್ರಮಾತೃಭಾವಗಳನ್ನು ಚಿಚ್ಚಮತ್ಕಾರ ರಸದಲ್ಲಿ ಮುಳುಗಿಸಬೇಕು. ಅಂದರೆ ಚಿನ್ಮಯವಾಗಿದೆಯೆಂದು ಎಡಬಿಡದೆ ಅನುಸಂಧಾನವಿರಬೇಕು. ಭೇದಜ್ಞಾನಗಳಾದ ಮನೋವ್ಯಾಪಾರಗಳನ್ನು ಬಿಟ್ಟು ಸ್ವಯಂಪ್ರಕಾಶವಾದ ಬೋಧರೂಪದಲ್ಲಿ ಸೇರಬೇಕು. ಆಗ ಪಶುವು ಸಂಸಾರದಿಂದ ಮುಕ್ತನಾಗುತ್ತಾನೆ. ಶಿವತ್ವವನ್ನು ಪಡೆಯುತ್ತಾನೆ.

ಮನಸ್ಸು, ಚೇತನಾ, ಶಕ್ತಿ, ಆತ್ಮ ಎಂಬ ನಾಲ್ಕು ಭೇದಗಳಿವೆ. ಭಾವನಾ ಪ್ರಪಂಚದಲ್ಲಿ ಈ ನಾಲ್ಕೂ ಅಭಿನ್ನವಾದರೆ ಅದೇ ತತ್ತ್ವ ಸಾಕ್ಷಾತ್ಕಾರ.

ಅವತರಣಿಕೆ—ಹೀಗೆ ಪರಮಪದಪ್ರಾಪ್ತಿಯಾಗಿರುವ ಸಾಧಕನು ವಸ್ತು ಸ್ವಭಾವದಂತೆ ಯಾವಾಗ ವ್ಯವಹರಿಸುವನೋ ಆಗ ಸಮದರ್ಶನ ಉಂಟಾಗುತ್ತದೆ.

> ಪ್ರಾಣಾದಿ ಸ್ಥೂಲಭಾವಂ ತು ತ್ಯಕ್ತ್ವಾ ಸೂಕ್ಷ್ಮಮಥಾಂತರಮ್ ।
> ಸೂಕ್ಷ್ಮಾತೀತಂ ತು ಪರಮಂ ಸ್ಪಂದನಂ ಲಭ್ಯತೇ ಯತಃ ॥
> ವ್ಯಾಪಾರಂ ಮಾನಸಂ ತ್ಯಕ್ತ್ವಾ ಬೋಧರೂಪೇಣ ಯೋಜಯೇತ್ ।
> ತದಾ ಶಿವತ್ವಮಭ್ಯೇತಿ ಪಶುರ್ಮುಕ್ತೋ ಭವಾರ್ಣವಾತ್ ॥
>
> —ಸ್ವಚ್ಛಂದ

ಪ್ರಾಣಸಮಾಚಾರೇ ಸಮದರ್ಶನಂ ॥೨೧॥

ಚಿದಾನಂದವನ್ನನುಭವಿಸುವವನಿಗೆ ಎಲ್ಲಾ ದಶೆಗಳಲ್ಲಿಯೂ ಅಭೇದರೂಪವೇ ಕಾಣುತ್ತದೆ

ಪರಸ್ಫುರತ್ತಾತ್ಮಕವಾದ ಅನುಭವದಿಂದ ಶಾಕ್ತೋಪಾಯ ಸಿದ್ಧಿಯನ್ನು ಪಡೆದಿರುವ ಸಾಧಕನು ಚೆನ್ನಾಗಿ ವಿಕಸಿತವಾಗಿರುವ ಈ ವಿಶ್ವದ ಸಮಸ್ತ ಭಾವಗಳನ್ನು ಅಂತರ್ಮುಖತೆಯ ಆಲಂಬನದಿಂದ ಇರುವುವುಗಳೆಂದು ತಿಳಿದಿರುತ್ತಾನೆ ಬಾಹ್ಯವಾಗಿ ಪ್ರಸರಿಸುವ

ಎಲ್ಲಾ ಚಿತ್ತವೃತ್ತಿಗಳಲ್ಲಿಯೂ ಪ್ರತಿಯೊಂದು ರೂಪವನ್ನೂ ಯಾವಾಗಲೂ ಚಿದಾನಂದ ಘನವೆಂದು ತಿಳಿಯುತ್ತಾನೆ—ಎಲ್ಲಾ ದಶೆಗಳಲ್ಲಿಯೂ ಇವನಿಗೆ ಅಭಿನ್ನವಾದ ಅನುಭವ ವೇರ್ಪಡುತ್ತದೆ. ಹಾಗೆಯೇ ವರ್ಣ, ಆಶ್ರಮ, ದೇವತೆಗಳು, ಲೌಕಿಕಾಚಾರಗಳು, ದ್ರವ್ಯಗಳು ಮುಂತಾದವುಗಳಲ್ಲೆಲ್ಲಾ ಅಭಿನ್ನತೆಯನ್ನು ಗ್ರಹಿಸುತ್ತಾನೆ. ಬುದ್ಧಿ ಮತ್ತು ಪ್ರಾಣ ಇವುಗಳ ಪ್ರಸರದಲ್ಲಿಯೇ ಆಗಲಿ, ಹೊರಗಿನ ಪದಾರ್ಥಗಳ ತಿಳಿವಳಿಕೆಗಳಲ್ಲಿಯೇ ಆಗಲಿ ಇವನಿಗೆ ವಿಶ್ವಾತ್ಮರೂಪ ಲಾಭವೇರ್ಪಡುತ್ತದೆ.

> ಉತ್ಸೃಜ್ಯ ಲೌಕಿಕಾಚಾರಮದ್ವೈತಂ ಮುಕ್ತಿದಂ ಶ್ರಯೇತ್ ।
> ಸ ಸಮಂ ಸರ್ವದೇವಾನಾಂ ತಥಾ ವರ್ಣಾಶ್ರಮಾದಿಕೇ ॥
> ದ್ರವ್ಯಾಣಾಂ ಸಮತಾದರ್ಶೀ ಸ ಮುಕ್ತಃ ಸರ್ವಬಂಧನೈಃ ॥
>
> —ಆನಂದ ಭೈರವ

ಅವತರಣಿಕೆ— ಯಾವಾಗ ಅಂತರ್ಮುಖೀನವಾದ ತುರೀಯದಶಾನುಸಂಧಾನ ದಿಂದ ಪರಿಪಾಕವೇರ್ಪಟ್ಟು ತುರೀಯಾತೀತ ಪದವನ್ನು ಪೊಂದದೆ ಪೂರ್ವಾಪರ ಕೋಟಿ ವಿಮರ್ಶನೆಯಿಂದ ತುರೀಯ ಸ್ಥಿತಿಯಲ್ಲಿಯೇ ತೃಪ್ತನಾಗಿರುವನೋ ಆಗ—

ಮಧ್ಯೇಽವರಪ್ರಸವಃ ॥೨೩॥

ಸಮಾವೇಶವನ್ನು ಪರಿಶೀಲನೆ ಮಾಡದಿದ್ದರೆ ತೊಂದರೆಯುಂಟು

ಪೂರ್ವಾಪರ ಕೋಟಿಗಳಲ್ಲಿ ತುರೀಯ ರಸವನ್ನು ಅನುಭವಿಸುತ್ತಿರುವವನು ಅಂದರೆ ಅಭೇದಾನುಸಂಧಾನವನ್ನು ಪಡೆಯುತ್ತಿರುವವನು ಮಧ್ಯದಶೆಯಲ್ಲಿ ಭೇದಪ್ರಥನಾತ್ಮಕ ವಾದ ಸೃಷ್ಟಿಯನ್ನು ಅನುಭವಿಸುತ್ತಾನೆ. ಎರಡನೆಯ ಉನ್ಮೇಷದ ೧೦ನೆಯ ಸೂತ್ರದಲ್ಲಿ "ವಿದ್ಯಾಸಂಹಾರೇ ತದುತ್ಥ ಸ್ವಪ್ನ ದರ್ಶನಂ" ಎಂದು ಹೇಳಿದಹಾಗೆ ಆ ಸ್ಥಿತಿಯಲ್ಲಿ ಇವನು ಸಾಮಾನ್ಯರು ಮೋಹಗೊಳ್ಳುವಂತೆ ಅಜ್ಞಾನದಿಂದ ಮೋಹಗೊಳ್ಳುವುದಿಲ್ಲ. ಆದರೆ ವಾಸನಾ ಮಾತ್ರವಿದ್ದು ತತ್ತ್ವಸಾಕ್ಷಾತ್ಕಾರವಾಗಿದ್ದರೂ ಪ್ರಮತ್ತನಾದರೆ ಅವನು ಅನಿತ್ಯ ಭೋಗಗಳಲ್ಲಿ ಮೋಹಗೊಳ್ಳುವನು. ಆದ್ದರಿಂದ ಜ್ಞಾನಿಯು ಕೆಳಗಿನ ಸೃಷ್ಟಿಯಲ್ಲಿ ಗಮನವನ್ನೀಯಬಾರದು.

> ವಾಸನಾಮಾತ್ರ ಲಾಭೇಽಪಿ ಯೋಽಪ್ರಮತ್ತೋ ನ ಜಾಯತೇ ।
> ತಮನಿತ್ಯೇಷು ಭೋಗೇಷು ಯೋಜಯಂತಿ ವಿನಾಯಕಾಃ ॥
> ತಸ್ಮಾನ್ನ ತೇಷು ಸಂಸಕ್ತಿಂ ಕುರ್ವೀತೋತ್ತಮ ವಾಂಛಯಾ ।
>
> —ಮಾಲಿನೀ ವಿಜಯ

ಅವತರಣಿಕೆ—ಹೀಗೆ ವ್ಯವಹಾರದಲ್ಲಿ ಮಧ್ಯಾವಸ್ಥೆಯಲ್ಲಿ ಅಂದರೆ ಭೇದ ಪ್ರಥನಾವಸ್ಥೆಯಲ್ಲಿ ತುರೀಯಾನುಸಂಧಾನವನ್ನು ಮಾಡುವಾಗ—

ಮಾತ್ರಾಸ್ವಪ್ರತ್ಯಯಸಂಧಾನೇ ನಷ್ಟಸ್ಯ ಪುನರುತ್ಥಾನಂ ॥೨೪॥

ಮಧ್ಯಾವಸ್ಥೆಯನ್ನು ಅನ್ವಯಿಸಿದರೆ ಸ್ವಭಾವವು ಪುನಃ ತಲೆಯೆತ್ತುವುದು

ಮಾತ್ರಾಸು ಅಂದರೆ ಶಬ್ದ ಸ್ಪರ್ಶ ರೂಪ ರಸ ಗಂಧರೂಪಗಳಾಗಿರುವ ಪದಾರ್ಥಗಳಲ್ಲಿ ಸ್ವರೂಪಾನುಸಂಧಾನಮಾಡುವುದು. ಕಣ್ಣಿನಿಂದ ನೋಡುವುದು, ವಾಕ್ಕಿನಿಂದ ಸೂಚಿಸುವುದು, ಮನಸ್ಸಿನಿಂದ ಚಿಂತಿಸುವುದು, ಬುದ್ಧಿಯಿಂದ ಊಹಿಸುವುದು, ಅಹಂಕಾರದಿಂದ ಗುರುತಿಸುವುದು, ತಿಳಿಯಲ್ಪಡತಕ್ಕದ್ದೆಂದು ಕಲ್ಪಿಸುವುದು-ಇವುಗಳೆಲ್ಲಾ ಇಲ್ಲದಿರುವುದನ್ನು ಸಾಧಕನು ಹುಡುಕಬೇಕು. ಈ ಯುಕ್ತಿಯಿಂದ 'ಇದಂ' ರೂಪವಾದ ವಿಶ್ವವೆಲ್ಲಾ 'ಅಹಂ' ಎಂದು ಚಿದ್ಘನಾತ್ಮವಾಗಿ ಸರ್ವತ್ರ ಅನುಸಂಧಾನ ಮಾಡುವವನಾಗುತ್ತಾನೆ. ಭೇದಪ್ರಥಾತ್ಮಕವಾದ ಮಧ್ಯ ಸೃಷ್ಟಿಯೂ ಕೂಡ ಸಾಧಕನಿಗೆ ತುರೀಯ ಚಮತ್ಕಾರಮಯ ಸ್ವಭಾವವಾಗಿಯೇ ತೋರುತ್ತದೆ. ಎಲ್ಲಾ ಅವಸ್ಥೆಗಳಲ್ಲಿಯೂ ಮನಸ್ಸು ಚಲಿಸದೆ ಇರುತ್ತದೆ. ಸ್ಥಿರವಾದ, ಪೂರ್ಣವಾದ, ವ್ಯಾಪ್ತವಾದ, ಜ್ಞೇಯಮಯವಾದ ಭಾವವೇ ತೋರುತ್ತದೆ—ಹೀಗೆ ಅಭಿನ್ನವಾಗಿ ತೋರುವುದೆಲ್ಲಾ ಶಿವಮಯವಾಗಿರುತ್ತದೆ. ವಿಷಯಗಳಲ್ಲಿಯೂ ಇಂದ್ರಿಯಾರ್ಥಗಳಲ್ಲಿಯೂ ಪ್ರತಿಯೊಂದು ಭಾವದಲ್ಲಿಯೂ ಶಿವನನ್ನು ಬಿಟ್ಟು ಬೇರೆಯಿಲ್ಲ.

ಚಕ್ಷುಷಾ ಯಚ್ಚ ಸಂಧಾನಂ ವಾಚಾ ವಾ ಯಶ್ಚ ಗೋಚರಃ ।
ಮನಶ್ಚಿಂತಯತೇ ಯಾನಿ ಬುದ್ಧಿಶ್ಚೈವಾಧ್ಯವಸ್ಯತಿ ॥
ಪ್ರಸಹ್ಯ ಚಂಚಲೀತ್ಯೇವ ಯೋಗಿನಾಮಪಿ ಯನ್ಮನಃ ॥
ಯಸ್ಯ ಜ್ಞೇಯ ಮಯೋಭಾವಃ ಸ್ಥಿರಃ ಪೂರ್ಣಃ ಸಮಂತತಃ ।
ಮನೋ ನ ಚಲಿತಂ ತಸ್ಯ ಸರ್ವಾವಸ್ಥಾಗತಸ್ಯತು ॥
ಯತ್ರ ಯತ್ರ ಮನೋಯಾತಿ ಜ್ಞೇಯಂ ತತ್ರೈವ ಚಿಂತಯೇತ್ ।
ಚಲಿತ್ವಾಯಾಸ್ಯತೇ ಕುತ್ರ ಸರ್ವಂ ಶಿವಮಯಂ ಯತಃ ॥
ವಿಷಯೇಷು ಚ ಸರ್ವೇಷು ಇಂದ್ರಿಯಾರ್ಥೇಷು ಚ ಸ್ಥಿತಮ್ ।
ಯತ್ರ ಯತ್ರ ನಿರೂಪ್ಯೇತ ನಾಶಿವಂ ವಿದ್ಯತೇ ಕ್ವಚಿತ್ ॥

—ಸ್ವಚ್ಛಂದ

ಅವತರಣಿಕೆ—ಇಂತಹ ವಿಕಾಸವನ್ನು ಪಡೆದಿರುವ ಯೋಗಿಯು ಶಿವತುಲ್ಯನಾಗುತ್ತಾನೆ.

ಶಿವತುಲ್ಯೋ ಜಾಯತೆ ॥೨೫॥

ಶಿವಸಾರೂಪ್ಯ ನಿರೂಪಣೆ

ಯೋಗಿಯು ಯಾವಾಗಲೂ ತುರೀಯಾವಸ್ಥೆ ಪರಿಶೀಲನೆಯಿಂದ ತುರೀಯಾತೀತ ಸ್ಥಿತಿಯನ್ನು ಅನುಭವಿಸುತ್ತಾನೆ. ಈ ಸ್ಥಿತಿಯಿಂದ ಪರಿಪೂರ್ಣವಾದ ಸ್ವಚ್ಛವಾದ ಸ್ವತಂತ್ರವಾಗಿರುವ ಚಿದಾನಂದ ಘನರೂಪಿಯಾದ ಶಿವನಿಗೆ ಸಮಾನನಾಗಿರುತ್ತಾನೆ. ಶರೀರವು ಕಳೆದುಹೋಗದೆ ಇರುವುದರಿಂದ ಶಿವನಿಗೆ ಸಮಾನನಾಗಿರುವನು. ಶರೀರ ವಿಯೋಗವೇರ್ಪಟ್ಟರೆ ಸಾಕ್ಷಾತ್ ಶಿವನೇ ಆಗುವನು. ಆದುದರಿಂದ ಗುರುಮುಖದಿಂದ ಯೋಗವನ್ನು ತಿಳಿದು ನಿಸ್ಸಂದೇಹವಾಗಿ ಅವಿಕಲ್ಪಭಾವನೆಯಿಂದ ತನ್ಮಯತ್ವವನ್ನು

ಸಾಧಿಸಬೇಕು. ಶಿವನಿಗೆ ಸಮಾನವಾದ ಸ್ಥಿತಿಯನ್ನು ಪಡೆಯುವುದೇ ಈ ಸಾಧನೆಗೆ ಫಲವಾಗಿರುತ್ತದೆ. ಈ ಸ್ಥಿತಿಯನ್ನು ಪಡೆದವನನ್ನು 'ಭೈರವ'ನೆನ್ನುತ್ತಾರೆ.

ಅವತರಣಿಕೆ—ಈ ಸ್ಥಿತಿಯನ್ನು ಪಡೆದರೂ ವ್ಯವಹಾರದಲ್ಲಿರುವ ಸುಖ ದುಃಖಾನುಭವಗಳನ್ನು ಶರೀರವಿರುವವರೆಗೂ ಅತಿಕ್ರಮಿಸುವುದಕ್ಕಾಗುವುದಿಲ್ಲ.

ಶರೀರವೃತ್ತಿರ್ವ್ರತಂ ॥೨೬॥

ಶಿವೋಹಂ ಎಂದು ಅನುಸಂಧಾನ ಮಾಡುವ ವ್ರತ

ಮೇಲೆ ಹೇಳಿದಂತೆ ಶಿವನಿಗೆ ಸಮಾನನಾಗಿರುವ ಯೋಗಿಯು ಶಿವೋಹಂ ಭಾವದಿಂದ ಇರುವನು. ಸ್ವಸ್ವರೂಪ ವಿಮರ್ಶಾತ್ಮಕವಾಗಿ ನಿತ್ಯೋದಿತವಾದ ಆ ಪರಮಾತ್ಮನ ಪೂಜಾತತ್ಪರನಾಗಿರುವಿಕೆಯೇ ಅಂದರೆ ಸದಾ ಅನುಸಂಧಾನ ಮಾಡುವಿಕೆಯೇ ವ್ರತ. ದೃಷ್ಟಾಂತವನ್ನು ಕೊಡುವುದಾದರೆ ಕಾಷ್ಠ, ಅರಣಿ, ವಹ್ನಿ, ವಹ್ನಿಶಿಖಾ, ಅಂಬರ ಈ ಐದಕ್ಕೆ ಸರಿಯಾಗಿ ದೇಹ, ಮಂತ್ರ, ಪ್ರಾಣ, ಆತ್ಮ, ಶಿವ ಇವುಗಳು ಸಮವಾಗಿ ಹೋಲುತ್ತವೆ. ಅರಣಿಯಿಂದ ಕಟ್ಟಿಗೆಯನ್ನು ಮಥನ ಮಾಡಿದರೆ ಬೆಂಕಿ ಹುಟ್ಟುತ್ತದೆ—ಆ ಜ್ವಾಲೆಯು ಸುಡಬೇಕಾದದ್ದನ್ನು ಸುಟ್ಟು ಆಕಾಶದಲ್ಲಿ ಲೀನವಾಗುತ್ತದೆ. ಹಾಗೆಯೇ ದಿವ್ಯವಾದ ಕರಣಗಳಾಗಿರುವ ಮಂತ್ರವೆಂಬ ಅರಣಿಯಿಂದ ಉತ್ತೇಜಕವಾದ ಶರೀರದಲ್ಲಿ ಪ್ರಾಣವು ಪ್ರಜ್ವಲಿಸಿ ಮಧ್ಯೆ ಊರ್ಧ್ವವಾಹಿನಿಯಾಗಿ ಉದಾನಾಗ್ನಿಯಾಗುತ್ತದೆ. ದೇಹದಲ್ಲಿರುವ ಆತ್ಮನು ಇದರಿಂದ ಪರಿಶುದ್ಧನಾಗಿ ವಿಜ್ಞಾನ ಕೇವಲಿ ರೂಪನಾಗುವನು. ಆ ಸ್ಥಿತಿಯಲ್ಲಿ ಇವನು ವಹ್ನಿ ಶಿಖಾತುಲ್ಯನಾಗಿ ಸಮನಾಂತವಾದ ಸಮಸ್ತವಾದ ದೇಹವೆಂಬ ಕಟ್ಟಿಗೆಯನ್ನು ಸುಟ್ಟು ತುರೀಯಾತೀತ ಸ್ಥಿತಿಯಲ್ಲಿ ಲೀನವಾಗುವನು. ಈ ರೀತಿ ಉಪಾಧಿರಹಿತವಾದ ಪರಶಿವೈಕಾತ್ಮ್ಯವನ್ನು ಪಡೆಯುವನು. ಸಿದ್ಧಾವಸ್ಥೆಯಲ್ಲಿರುವವನು ಶಿವತುಲ್ಯನಾಗಿರುವನು. ಅದುವರೆಗೂ ಇರುವ ಆಯುಷ್ಯವು ವ್ರತರೂಪವಾಗಿರುತ್ತದೆ.

> ಸುಪ್ರದೀಪ್ತೇ ಯಥಾವಹ್ನೌ ಶಿಖಾ ದೃಶ್ಯೇತ ಚಾಂಬರೇ ।
> ದೇಹಪ್ರಾಣಸ್ಥಿತೋಽಪ್ಯಾತ್ಮಾ ತದ್ವಲ್ಲೀಯೇತ ತತ್ಪದೇ ॥ —ಸ್ವಚ್ಛಂದ
>
> ದೇಹೋತ್ಥಿತಾಭಿ ರ್ಮುದ್ರಾಭಿರ್ಯಃ ಸದಾಮುದ್ರಿತೋಬುಧಃ ।
> ಸ ತು ಮುದ್ರಾಧರಃ ಪ್ರೋಕ್ತಃ ಶೇಷಾ ವೈ ಅಸ್ಥಿಧಾರಕಾಃ ॥ —ತ್ರಿಕಸಾರ

ಮುದ್ರಾಧರನು 'ಅಂತರ್ಲಕ್ಷ್ಯ ಬಹಿರ್ದೃಷ್ಟಿಃ' ಉಳ್ಳವನಾಗಿರುತ್ತಾನೆ.

> ಅವ್ಯಕ್ತಲಿಂಗಿನಂ ದೃಷ್ಟ್ವಾ ಸಂಭಾಷಂತೇ ಮರೀಚಯಃ ।
> ಲಿಂಗಿನಂ ನೋಪಸರ್ಪಂತಿ ಅತಿಗುಪ್ತತರಾಯತಃ ॥ —ತ್ರಿಕಸಾರ

ಕಥಾಜಪಃ ॥೨೭॥

ಜಪದ ಲಕ್ಷಣಗಳು

> ಅಹಮೇವ ಪರೋಹಂಸಃ ಶಿವಃ ಪರಮಕಾರಣಮ್ —ಸ್ವಚ್ಛಂದ

ವಿಶ್ವಕ್ಕೆ ಪರಮಕಾರಣನಾಗಿರುವ ಆ ಶಿವನೇ ನಾನೆಂಬ ಅಹಂಭಾವದಿಂದ ಕೂಡಿರುವುದೇ ಜಪ. ಮಹಾ ಮಂತ್ರಾತ್ಮಕವಾಗಿಯೂ, ಅಕೃತಕವಾಗಿಯೂ, ಅಹಂ ವಿಮರ್ಶಾರೂಢವಾಗಿಯೂ ಇರುವ ಯೋಗಿಯ ಉಚ್ಚಾರಣೆ ಮೊದಲಾದವುಗಳೆಲ್ಲ ಆತ್ಮದೇವತಾ ವಿಮರ್ಶನರೂಪವಾಗಿ ಜಪವಾಗಿರುತ್ತವೆ. ಬಾರಿಬಾರಿಗೂ ಆ ಪರಭಾವ ದಲ್ಲಿಯೇ ನಿಂತರೆ ಅದೇ ಜಪ, ಅದೇ ನಾದ, ಅದೇ ಅಹಂ ವಿಮರ್ಶಾ.

ನಮ್ಮ ಸಂಪ್ರದಾಯದಲ್ಲಿ ಅಜಪ ಗಾಯತ್ರೀಜಪ ಎಂಬ ಒಂದು ವಿವರಣೆ ಇದೆ– ಅಪ್ರಯತ್ನಪೂರ್ವಕವಾಗಿ, ಒಂದು ರಾತ್ರಿ ಒಂದು ಹಗಲು, ಇಷ್ಟರ ವೇಳೆಗೆ, ೨೧,೬೦೦ ಉಚ್ಛ್ವಾಸ ನಿಶ್ವಾಸಗಳು ನಡೆಯುತ್ತವೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಉಚ್ಛ್ವಾಸ ನಿಶ್ವಾಸಗಳ ಅನುಕೃತಿಯು 'ಹಂಸಾ' 'ಹಂಸಾ' ಎಂದಿರುತ್ತದೆ. ಸಾಂಪ್ರದಾಯಿಕರು ಇದನ್ನೇ 'ಸೋಹಂ' 'ಸೋಹಂ' ಎನ್ನುತ್ತಾರೆ. ಈ ಉಚ್ಛ್ವಾಸ ನಿಶ್ವಾಸಗಳಲ್ಲಿ 'ಸ' ಕಾರಾನುಕೃತಿಯಲ್ಲಿ ರೇಚಕ 'ಹ' ಕಾರಾನುಕೃತಿಯಲ್ಲಿ ಪೂರಕ ನಡೆಯು ತ್ತಿರುತ್ತವೆ. ಜ್ಞಾನಿಯಾದವನು ಇದನ್ನೇ ಸ್ವಾತ್ಮಾನುಸಂಧಾನಕ್ಕೆ ಸಾಧನವಾಗಿ ಉಪ ಯೋಗಿಸಿಕೊಳ್ಳುತ್ತಾನೆ.

> ತಸ್ಯ ದೇವಾತಿದೇವಸ್ಯ ಪರಬೋಧ ಸ್ವರೂಪಿಣಃ ।
> ವಿಮರ್ಶಃ ಪರಮಾಶಕ್ತಿಃ ಸರ್ವಜ್ಞಾ ಜ್ಞಾನಶಾಲಿನೀ ॥
>
> —ಕಾಳಿಕಾಕ್ರಮ

> ಭೂಯೋಭೂಯಃ ಪರೇಭಾವೇ ಭಾವನಾಭಾವ್ಯತೇಹಿಯಾ ।
> ಜಪಃ ಸೋऽತ್ರ ಸ್ವಯಂ ನಾದೋ ಮಂತ್ರಾತ್ಮಾ ಜಪ್ಯ ಈದೃಶಃ ॥
>
> —ವಿಜ್ಞಾನಭೈರವ

ಅವತರಣಿಕೆ—ಈ ಬಗೆಯಾದ ಜಪವ್ರತವುಳ್ಳವನ ನಡತೆ ಎಂಥಾದ್ದೆಂದರೆ,

ದಾನಮಾತ್ಮಜ್ಞಾನಂ ॥೨೮॥

ಸಾಧಕನ ಚರ್ಯೆಯ ಲಕ್ಷಣ

ಮೇಲೆ ಹೇಳಿದ ಚೈತನ್ಯರೂಪಿಯಾದ ಆತ್ಮಸಾಕ್ಷಾತ್ಕಾರವಾಗಿರುವಿಕೆಯೇ ಅವನ ದಾನ. ದಾನವೆಂದರೆ ವಿಶ್ವಭೇದವು ನಿವಾರಣೆಯಾಗುತ್ತದೆಂದರ್ಥ. ಮಾಯಾ ಸ್ವರೂಪವು ಶೋಧಿಸಲ್ಪಡುತ್ತದೆಂದು ಮತ್ತೊಂದರ್ಥ. ಶಿವಾತ್ಮಕವಾದ ಸ್ವಭಾವವು ರಕ್ಷಿಸಲ್ಪಡುತ್ತದೆಂದು ಇನ್ನೊಂದರ್ಥ. ಇವೆಲ್ಲವೂ ಡುದಾಜ್ಞ್ ಎಂಬ ಧಾತುವಿನಿಂದ ನಿಷ್ಪನ್ನವಾಗುವ ಅರ್ಥಗಳು. ವ್ಯವಹಾರದಲ್ಲಿ ಶಿಷ್ಯರಿಗೆ ಆತ್ಮಜ್ಞಾನವನ್ನು ಕೊಡು ವವನು ದಾನಿ. ಸಿದ್ಧರಾದ ಯೋಗಿಗಳು ನೋಡುವುದು, ಮುಟ್ಟುವುದು, ಊಟ ಮಾಡುವುದು, ಹೇಳುವುದು, ಪಾಠಹೇಳುವುದು ಮೊದಲಾದ ಉಪಾಯಗಳಿಂದ ಶ್ರದ್ಧಾವಂತರನ್ನು ಉದ್ಧರಿಸುವರು. ಹೀಗೆ ಶಿವತುಲ್ಯನಾಗಿ ವ್ರತ, ಜಪ, ಚರ್ಯನಿಷ್ಠ

ನಾಗಿ ಯೋಗಿಯು ಸದಾ ಈ ವಿಶ್ವವನ್ನು ತನ್ನ ಶಕ್ತಿಯ ವಿಕಾಸವೆಂದು ತಿಳಿಯುವನು. ಇವನೇ ಇತರರಿಗೆ ಅವರವರ ಸ್ವಸ್ವರೂಪವನ್ನು ಪ್ರತಿಬೋಧಿಸುವನು, ಜ್ಞಾಪಿಸುವನು.

ದರ್ಶನಾತ್ಸ್ಪರ್ಶನಾದ್ವಾಪಿ ವಿತತಾದ್ಭವ ಸಾಗರಾತ್ ।
ತಾರಯಿಷ್ಯಂತಿ ಯೋಗೀಂದ್ರಾಃ ಕುಲಾಚಾರಪ್ರತಿಷ್ಠಿತಾಃ ॥

ವಿಶ್ವಭೇದ—ವಿಶ್ವರೂಪವಾಗಿರುವ ಧರಣಿಯಿಂದ ಶಿವಾಂತದವರೆಗೆ ಇರುವ ಮೂವತ್ತಾರು ತತ್ತ್ವಗಳ ಲಕ್ಷಣಭೇದ.

ಚರ್ಯಾ—ಸ್ವರೂಪ ಸಾಕ್ಷಾತ್ಕಾರಕ್ಕೆ ಮಾಡಬೇಕಾದ ಕಾರ್ಯ.

ಯೋಽವಿಪಸ್ಥೋ ಜ್ಞಾಹೇತುಶ್ಚ ॥೨೯॥

ಇಂತಹ ಚರ್ಯೆ ಇರುವವನೇ ದೇಶಿಕ

ಪಶುಗಳನ್ನು ರಕ್ಷಿಸುವವುಗಳು ಕವರ್ಗಾದಿಗಳಲ್ಲಿರುವ ಮಹಾಶ್ಚರ್ಯಾದಿ ಶಕ್ತಿಗಳು. ಈ ಶಕ್ತಿಚಕ್ರದಲ್ಲಿರುವ ಮಾಹಾತ್ಮ್ಯವನ್ನು ತಿಳಿದಿರುವವನು ಸಿದ್ಧಪುರುಷ. ಅವನು ಜ್ಞಾನಶಕ್ತಿಯಿಂದ ಇತರರನ್ನು ಪ್ರತಿಬೋಧಿಸಲು ಸಮರ್ಥನು. ಅವನು ಶಕ್ತಿಚಕ್ರಕ್ಕೆ ಒಡೆಯನಾಗಿರುತ್ತಾನೆ. ಇತರರಾದರೋ ಶಕ್ತಿಚಕ್ರಕ್ಕೆ ಅಧೀನರಾಗಿರುವುದರಿಂದ ಅನ್ಯಜೀವಿಗಳನ್ನುದ್ಧರಿಸಲಾರರು. ಈ ಸೂತ್ರದಲ್ಲಿ 'ಯೋ' ಅಂದರೆ ಯೋಗೀಂದ್ರ, 'ವಿ' ಅಂದರೆ ವಿಜ್ಞಾನ, 'ಪ' ಅಂದರೆ ಪದ, 'ಸ್ಥ' ಅಂದರೆ ಅದರಲ್ಲಿರುವವನು, 'ಜ್ಞಾ' ಅಂದರೆ ಜ್ಞಾತೃ, 'ಹೇ' ಅಂದರೆ ಹೇಯ, 'ತು' ಅಂದರೆ ತುಚ್ಛ. ಚಕಾರದಿಂದ ಹೇಳದೆ ಇರುವುದನ್ನೆಲ್ಲಾ ಗ್ರಹಿಸಿಕೊಳ್ಳಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಹೀಗೆ ಅರ್ಥಮಾಡುವುದು ಅಷ್ಟು ಯುಕ್ತವಲ್ಲವೆಂದು ಕ್ಷೇಮರಾಜನು ಅಭಿಪ್ರಾಯಪಡುತ್ತಾನೆ.

ಸ್ವಶಕ್ತಿ ಪ್ರಚಯೋಽಸ್ಯ ವಿಶ್ವಂ ॥೩೦॥

ಶಿವತುಲ್ಯನಾದ ಯೋಗಿಗೆ ಈ ವಿಶ್ವವೆಲ್ಲಾ ತನ್ನ ವಿಕಾಸರೂಪವಾಗಿರುತ್ತದೆ

ಯೋಗಿಯು ಶಿವತುಲ್ಯನಾಗಿರುವುದರಿಂದ ಶಿವನಿಗೆ ಹೇಗೆ ಈ ವಿಶ್ವವು ಶಕ್ತಿ ವಿಕಾಸರೂಪವಾಗಿದೆಯೋ ಹಾಗೆಯೇ ಯೋಗಿಗೂ ವಿಕಾಸರೂಪವಾಗಿದೆ. ಚಿದಾತ್ಮನ ಕ್ರಿಯಾಶಕ್ತಿಸ್ಫುರಣವೇ ವಿಕಾಸ. ಅದೇ ವಿಶ್ವ.

ಪರಮೇಶ್ವರನು ಜ್ಞಾನಮಯನು, ಚಿನ್ಮಾತ್ರಪರಮಾರ್ಥನು, ಅವನ ಜ್ಞಾನವು ಸ್ವತಂತ್ರವಾದದ್ದು. ಸಂಕೋಚ ವಿಕಾಸರೂಪದಿಂದ ನಾನಾತ್ವವನ್ನು ಹೊಂದುವಂಥಾದ್ದು.

ಜ್ಞಾನವು ಒಳಗೂ ಹೊರಗೂ ಆಯಾ ಅನುಕೂಲಗಳಿಂದ ಪ್ರಕಾಶಿಸುತ್ತದೆ. ಜ್ಞಾನವಿಲ್ಲದೆ ಯಾವ ವಿಷಯವೂ ಯಾರಿಗೂ ತಿಳಿಯುವುದಿಲ್ಲ. ಆದುದರಿಂದ ಪದಾರ್ಥವು ಜ್ಞಾನಾತ್ಮಕವೆಂದೇ ಸಿದ್ಧವಾಗುತ್ತದೆ. ಇದು ಇದೆ, ಇದು ಇಲ್ಲ, ಇದನ್ನು

ಮಾಡಬೇಕು, ಇದನ್ನು ಮಾಡಬಾರದು ಮೊದಲಾದವುಗಳೆಲ್ಲಾ ಜ್ಞಾನಕ್ಕೆ ಸೇರಿದವುಗಳೇ ಹೊರತು ಜ್ಞೇಯುಗಳಾದ ಪದಾರ್ಥಗಳಿಗೆ ಸೇರಿದವುಗಳಲ್ಲ. ಜ್ಞಾನ ಜ್ಞೇಯ ಎರಡೂ ಒಂದೇ ಕಾಲದಲ್ಲಿ ಗೋಚರಿಸುವುದರಿಂದ ಒಂದೇ ರೂಪದಿಂದಿರುವುವು. ಕೇವಲ ಸೃಷ್ಟಿಯಲ್ಲಿ ಈ ವಿಶ್ವವು ನಿಜಶಕ್ತಿ ವಿಕಾಸರೂಪವಾಗಿದೆಯೆಂದು ಹೇಳಬೇಕಾಗಿಲ್ಲ.

ಯತೋ ಜ್ಞಾನಮಯೋ ದೇವೋ ಜ್ಞಾನಂ ಚ ಬಹುಧಾ ಸ್ಥಿತಂ ।
ನಿಯಂತ್ರಿತಾನಾಂ ಬದ್ಧಾನಾಂ ತ್ರಾಣಂ ತನ್ನೇತ್ರಮುಚ್ಯತೇ ॥

—ಶ್ರೀಮೃತ್ಯುಜಿತ್

ಸ್ಥಿತಿ ಲಯೌ ॥೩೦॥

ತಾನು ಮಾಡುವ ಕೆಲಸಗಳೆಲ್ಲಾ ತನ್ನ ಶಕ್ತಿಯ ವಿಕಾಸಗಳು

ಈ ವಿಶ್ವವು ಶಕ್ತಿವಿಕಾಸವನ್ನನುಸರಿಸಿಕೊಂಡಿದೆ. ಕ್ರಿಯಾಶಕ್ತಿಯಿಂದ ಹೊರಹೊಮ್ಮಿಸಲ್ಪಟ್ಟ ವಿಶ್ವವು ಆಯಾ ಪ್ರಮಾತೃವಿಗೆ ಸಮಯಾನುಸಾರವಾಗಿ ಒಳಗೂ ಹೊರಗೂ ಪ್ರಕಾಶಿಸುತ್ತಲಿರುತ್ತದೆ. ಅದೇ ಅಂತರ್ಯವಾಗಿ ಚಿನ್ಮಯವಾದ ಪ್ರಮಾತೃವಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತಾ ಲೀನವಾಗುತ್ತಿರುತ್ತದೆ. ಈ ಎರಡು ಅವಸ್ಥೆಗಳೂ ಚಿನ್ಮೂರ್ತಿಯ ಶಕ್ತಿಯ ವಿಲಾಸಗಳೇ ಆಗಿವೆ. ಆಯಾಯ ಘಟನೆಗಳಲ್ಲಿ ಹೊರಗೆ ತಿಳಿಯಲ್ಪಡತಕ್ಕದ್ದೂ ಒಳಗೆ ನಿಜ ಸಂವಿತ್ ಶಕ್ತಿಯಲ್ಲಿ ಲೀನವಾಗುವುದೂ ಎರಡೂ ಅಭಿನ್ನವಾಗಿವೆ. ಇಲ್ಲದಿದ್ದರೆ ವಿಶ್ವವು ತಿಳಿಯಲ್ಪಡುತ್ತಿರಲಿಲ್ಲ. ಹಿಂದೆ ಹೇಳಿದ ಇದೆ ಇಲ್ಲ ಎಂಬ ವಿಭಾಗಗಳು ಇಂತಹ ಸ್ಥಿತಿಲಯಗಳೆಂಬ ಅಭಿಪ್ರಾಯದಿಂದ ಹೇಳಿದ ಮಾತುಗಳು. ಎಲ್ಲವೂ ಸ್ವಪ್ರಯತ್ನಾತ್ಮಕವಾಗಿರುವುದೆಂದೂ, ಜ್ಞಾನರೂಪವಾಗಿರುವುದೆಂದೂ, ನಿರಾಲಂಬವೆಂದೂ ವೇದ್ಯಸ್ಥಿತಿಯನ್ನು ಮೀರಿರುವುದೆಂದೂ, ಶುದ್ಧವೆಂದೂ ಯಾರು ತಿಳಿಯುವರೋ ಅವರು ಬದುಕಿರುವಾಗಲೇ ಮುಕ್ತರು.

ಸರ್ವಂ ಶುದ್ಧಂ ನಿರಾಲಂಬಂ ಜ್ಞಾನಂ ಸ್ವಪ್ರತ್ಯಯಾತ್ಮಕಮ್ ।
ಯಃ ಪಶ್ಯತಿ ಸ ಮುಕ್ತಾತ್ಮಾ ಜೀವನ್ನೇವ ನ ಸಂಶಯಃ ॥

ಈ ರೀತಿ ಇರುವುದರಿಂದ ಸೃಷ್ಟಿ ಸ್ಥಿತಿ ಪ್ರಳಯ ಎಂಬ ಅವಸ್ಥೆಗಳಲ್ಲಿ ಪರಸ್ಪರ ಭೇದವು ಕಂಡುಬರುತ್ತದೆ.

ಅವತರಣಿಕೆ—ಈ ಭೇದಗಳು ನಿಜವಲ್ಲವೆಂಬ ಶಂಕೆಗೆ ಮುಂದಿನ ಸೂತ್ರವು ಸಮಾಧಾನವನ್ನು ಸೂಚಿಸುತ್ತದೆ.

ತತ್ಪ್ರವೃತ್ತಾವಪ್ಯನಿರಾಸಃ ಸಂವೇತ್ತೃಭಾವಾತ್ ॥೩೧॥

ಶಿವಸ್ವರೂಪಸ್ಥಿತಿಗೆ ಬದಲಾವಣೆ ಇಲ್ಲ

ಸೃಷ್ಟಿ ಸ್ಥಿತಿ ಪ್ರಳಯಗಳು ತಮ್ಮಷ್ಟಕ್ಕೆ ತಾವೇ ನಡೆಯುತ್ತಲಿರುತ್ತವೆ. ಯೋಗಿಯು ಗ್ರಾಹಕನಾಗಿರುತ್ತಾನೆ. ತುರೀಯ ಚಮತ್ಕಾರಾತ್ಮಕವಾದ ವಿಮರ್ಶನೆಯಿಂದ ವಿಶ್ವವನ್ನು ತಿಳಿಯುತ್ತಲಿರುತ್ತಾನೆ. ಈ ವಿಧವಾದ ತಿಳಿವಳಿಕೆಯು ಲೋಪ

ವಿಲ್ಲದ್ದು. ಇದಿಲ್ಲದಿದ್ದರೆ ವಿಶ್ವದ ಪ್ರಕಾಶವೇ ಇಲ್ಲ. ಮಾಯೆಯಿಂದ ವಿಕಾಸಗೊಂಡಿರುವ ಈ ವಿಶ್ವವು ನಷ್ಟವಾದರೂ ಸ್ವಸ್ವಭಾವವು ನಷ್ಟವಾಗುವುದಿಲ್ಲ. ಆ ಸ್ವಭಾವಕ್ಕೆ ಉತ್ಪತ್ತಿ ಸ್ಥಿತಿ ಪ್ರಳಯಗಳಿಲ್ಲ. ಯಾವ ಕಾರಣದಿಂದ ಅವಿದ್ಯೆ ಹುಟ್ಟುತ್ತದೆ, ನಾಶವಾಗುತ್ತದೆ ಎಂದು ಗೌಣವಾಗಿ ವ್ಯವಹಾರ ಮಾಡುವೆವೋ ಹಾಗೆಯೇ ಸ್ವಭಾವವು ವಿಕಾರವನ್ನು ಪಡೆಯುವುದಿಲ್ಲವೆಂಬುದು ಮುಖ್ಯವಾಗಿದೆ.

ಕಾರ್ಯ ಒಂದು, ಕರ್ತೃತ್ವ ಒಂದು ಎಂದು ಹೇಳಲ್ಪಟ್ಟಿದೆ. ಈ ಎರಡು ಅವಸ್ಥೆಗಳಲ್ಲಿ ಕಾರ್ಯಪ್ರಪಂಚವೆಲ್ಲಾ ಬದಲಾವಣೆಯನ್ನು ಪಡೆಯುತ್ತದೆ. ಕರ್ತೃತ್ವ ಬದಲಾವಣೆ ಪಡೆಯುವುದಿಲ್ಲ. ಕಾರ್ಯೋನ್ಮುಖವಾದ ಪ್ರಯತ್ನವು ನಿಂತುಹೋಗುತ್ತದೆ. ಆಗ ಅಜ್ಞಾನಿಯು ತಾನು ನಾಶವಾದೆನೆಂದು ತಿಳಿಯುತ್ತಾನೆ. ಸರ್ವಜ್ಞತ್ವಾದಿ ಗುಣಗಳುಳ್ಳ ಅಂತರ್ಮುಖೀಭಾವವು ಲೋಪವಿಲ್ಲದ್ದು, ನಾಶವಿಲ್ಲದ್ದು, ಬದಲಾವಣೆಯಿಲ್ಲದ್ದು.

ನಾಶೇಽವಿದ್ಯಾಪ್ರಪಂಚಸ್ಯ ಸ್ವಭಾವೋ ನ ವಿನಶ್ಯತಿ ।
ಉತ್ಪತ್ತಿಧ್ವಂಸವಿರಹಾತ್ತಸ್ಮಾನ್ನಾಶೋ ನ ವಾಸ್ತವಃ ॥
ಅವಸ್ಥಾಯುಗಲಂ ಚಾತ್ರ ಕಾರ್ಯ ಕರ್ತೃತ್ವ ಶಬ್ದಿತಮ್ ।
ಕಾರ್ಯತಾ ಕ್ಷಯಿಣೀ ತತ್ರ ಕರ್ತೃತ್ವಂ ಪುನರಕ್ಷಯಮ್ ॥

—ಸ್ಪಂದ

ಅವತರಣಿಕೆ—ಈ ವಿಧವಾದ ಸ್ಥಿತಿಯನ್ನು ಪಡೆದಿರುವ ಯೋಗಿಗೆ ಎಲ್ಲವೂ ಅಹಂ ಸ್ವರೂಪವಾಗಿಯೇ ಕಾಣುತ್ತದೆ.

ಸುಖದುಃಖಯೋರ್ಬಹಿರ್ಮನನಂ ॥೩೩॥

ಪುರ್ಯಷ್ಟಕ ಪ್ರಮಾತೃತ್ವವನ್ನು ಮೀರಿದವನಿಗೆ ಸುಖದುಃಖಗಳಿಲ್ಲ

ಮೇಲೆ ಹೇಳಿದ ಯೋಗಿಯು ತಿಳಿಯಲ್ಪಡತಕ್ಕ ಪದಾರ್ಥಗಳನ್ನು ಇದಂ ಎಂದು ತಿಳಿಯುತ್ತಾನೆ. ಹಾಗೆಯೇ ಅವುಗಳಿಂದ ಉಂಟಾಗುವ ಸುಖದುಃಖಗಳು 'ಇದಂ' ರೂಪವೆಂತಲೇ ತಿಳಿಯುತ್ತಾನೆ. ಇದನ್ನೇ ಸಾಮಾನ್ಯನಾದ ಲೌಕಿಕನು 'ಅಹಂತಾ' ಸ್ಪರ್ಶನದಿಂದ ನನಗೆ ಅನುಕೂಲವಾಯಿತು, ನನಗೆ ತೊಂದರೆಯಾಯಿತು ಎಂದು ತಿಳಿಯುತ್ತಾನೆ. ಈ ಯೋಗಿಗೆ ಮೂರನೇ ಉನ್ಮೇಷದ ೩೦ ನೇ ಸೂತ್ರದಲ್ಲಿ ಹೇಳಿದಂತೆ ಎಲ್ಲವೂ ಅಹಂತಾಚ್ಛಾದಿತವಾಗಿ ಸ್ಫುರಿಸುತ್ತದೆ. ಯೋಗಿಯು ಪ್ರಮಾತೃಭಾವವನ್ನೂ ಪುರ್ಯಷ್ಟಕ ಪ್ರಭಾವವನ್ನೂ ದಾಟಿರುತ್ತಾನೆ. ಅವನಿಗೆ ಸುಖದುಃಖಗಳ ಸ್ಪರ್ಶವಿಲ್ಲ. ಆಚಾರ್ಯ ಅಭಿನವಗುಪ್ತರು ಪ್ರತ್ಯಭಿಜ್ಞಾ ವಿಮರ್ಶನೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಸಾಧಕನು ಪ್ರಯತ್ನ ಮತ್ತು ಸಂಸ್ಕಾರಗಳಿಂದ ಪ್ರಮಾತೃ ಹಂತಗಳನ್ನು ಕ್ರಮಕ್ರಮವಾಗಿ ಅತಿಕ್ರಮಿಸಿ ವಾಸ್ತವವಾದ ಪರಪ್ರಮಾತೃ ದಶೆಯನ್ನು ಪಡೆಯುತ್ತಾನೆಂದು ಹೇಳಿದ್ದಾರೆ. ಆ ತತ್ತ್ವ ಸ್ಥಿತಿಯನ್ನು ಮುಟ್ಟಿದಾಗ ಸುಖದುಃಖಗಳು ಅನುಭವ

ದಲ್ಲಿದ್ದರೂ ಅವನಿಗೆ ಲೌಕಿಕವಾದ ಸಂತೋಷ ಸಂತಾಪಗಳೇರ್ಪಡುವುದಿಲ್ಲ. ಪ್ರತಿಯೊಂದು ಕ್ರಿಯೆಯೂ ಚಲನವೂ ಚಿತ್ಪ್ರಕಾಶದ ಚಮತ್ಕಾರವೆಂದು ಗುರುತಿಸಿ ನಿಶ್ಚಯಿಸಿರುವುದರಿಂದ ಸಹಜಾನಂದವೇ ಯಾವಾಗಲೂ ಅನುಭವದಲ್ಲಿರುತ್ತದೆ. ಆದುದರಿಂದ ಎಲ್ಲಿ ದುಃಖವೂ ಇಲ್ಲವೋ, ಸುಖವೂ ಇಲ್ಲವೋ, ಎಲ್ಲಿ ಗ್ರಾಹ್ಯಭೇದವೂ ಇಲ್ಲವೋ, ಗ್ರಾಹಕ ಭಾವವೂ ಇಲ್ಲವೋ, ಎಲ್ಲಿ ಮೂಢಭಾವವೂ ಇಲ್ಲವೋ ಅದೇ ಪರಮಾರ್ಥ, ಅದೇ ನಿಜವಾದ ತತ್ತ್ವ.

ನ ದುಃಖಂ ನ ಸುಖಂ ಯತ್ರ ನ ಗ್ರಾಹ್ಯಂ ಗ್ರಾಹಕೋ ನ ಚ ।
ನ ಚಾಸ್ತಿ ಮೂಢಭಾವೋಽಪಿ ತದಸ್ತಿ ಪರಮಾರ್ಥತಃ ॥

—ಸ್ಪಂದಕಾರಿಕೆ

ಅವತರಣಿಕೆ—ಪುರ್ಯಷ್ಟಕ ಮತ್ತು ಪ್ರಮಾತೃಭಾವವನ್ನು ಮೀರಿರುವ ಯೋಗಿಗೆ ಆಂತರ್ಯವಾದ ಸುಖದುಃಖಗಳ ಸ್ಪರ್ಶವಿಲ್ಲ.

ತದ್ವಿಮುಕ್ತಸ್ತು ಕೇವಲೀ ॥೩೪॥

ಸುಖದುಃಖಗಳನ್ನು ಬಿಡುವುದರ ಫಲ

ಹಿಂದಿನ ಸೂತ್ರದಲ್ಲಿ ಹೇಳಿರುವ ಕಾರಣಗಳಿಂದ ಯೋಗಿಯು ಆ ಸುಖದುಃಖಗಳಿಂದ ಬಿಡುಗಡೆಯನ್ನು ಪಡೆದು ಸಂಸ್ಕಾರದಿಂದಲೂ ಕೂಡ ಒಳಗೆ ಸ್ಪರ್ಶವಿಲ್ಲದವನಾಗಿ ಕೇವಲಿಯಾಗಿರುವನು. ಅವನು ಚಿನ್ಮಾತ್ರ ಪ್ರಮಾತೃರೂಪಿಯಾಗಿ ಸುಖದುಃಖ ಮೊದಲಾದ ಮಹತ್ತರವಾದ ವಿಜ್ಞಾನ ವಿಕಲ್ಪಗಳನ್ನು ಅತಿಕ್ರಮಿಸಿ ಭೇದಜ್ಞಾನವೆಂಬ ಮಹಾಮೋಹವನ್ನು ಕಳೆದು ಯೋಗಫಲವನ್ನು ಪಡೆಯುತ್ತಾನೆ. ಕೇವಲಿಯು ಸ್ವಸ್ವರೂಪ ಮಾತ್ರ ಅನುಭವವುಳ್ಳವನು.

ಮೋಹಪ್ರತಿಸಂಹತಸ್ತು ಕರ್ಮಾತ್ಮಾ ॥೩೫॥

ಸುಖದುಃಖಗಳನ್ನು ಬಿಡದಿದ್ದರೆ ಕರ್ಮಬಂಧನಕ್ಕೆ ಒಳಗೊಂಡಿರುವವನಾಗುತ್ತಾನೆ

ಅಜ್ಞಾನದಿಂದ ಕೂಡಿ ತನ್ಮಯನಾಗಿ ಸುಖ ಮತ್ತು ದುಃಖಗಳಿಗೆ ಆಶ್ರಯನಾದವನೇ ಕರ್ಮಾತ್ಮಾ. ಇವನು ಯಾವಾಗಲೂ ಶುಭ ಮತ್ತು ಅಶುಭ ರೂಪವಾದ ಕರ್ಮಫಲಗಳಿಂದ ಕಲಂಕಿತನಾಗಿರುತ್ತಾನೆ.

ಅವಿದ್ಯೆಯಿಂದ ವಿಕಲ್ಪಗಳುಂಟಾಗುತ್ತವೆ. ವಿಕಲ್ಪಗಳಿಂದ ಶುಭಾಶುಭ ಫಲಗಳು ಅನುಭವಕ್ಕೆ ಬರುತ್ತವೆಯೇ ಹೊರತು ಶಿವಾದಿ ತತ್ತ್ವಜ್ಞಾನವಾಗುವುದಿಲ್ಲ. ಅಶುಭ ಭಾವನೆಗಳಿಂದ ದುಃಖ ಮಾತ್ರ ಉಂಟಾಗುತ್ತಿರುತ್ತದೆ. ಈ ಕರ್ಮಾತ್ಮನಿಗೆ ಯಾವಾಗ ನಿರರ್ಗಳವಾದ ಮಹೇಶ ಶಕ್ತಿಪಾತ ಉಂಟಾಗುತ್ತದೆಯೋ ಆಗ ಸಹಜ ಸ್ವಾತಂತ್ರ್ಯ ಯೋಗವು ಮೊಳಗುತ್ತದೆ. ಸಹಜ ಸ್ವಾತಂತ್ರ್ಯಯೋಗವೆಂಬುದು ಪೂರ್ಣಾಹಂತಾ.

ಭೇದತಿರಸ್ಕಾರೇ ಸರ್ಗಾಂತರ ಕರ್ಮತ್ವಂ ॥೩೬॥

ಕರ್ಮಾತ್ಮನ ಸ್ವಸ್ವರೂಪ ಅಭಿವ್ಯಕ್ತವಾದರೆ ಯಥೇಷ್ಟವಾಗಿ ಸೃಷ್ಟಿಮಾಡಬಲ್ಲನು

ಶರೀರ ಪ್ರಾಣಾದಿಗಳಲ್ಲಿ ನಾನು ಎಂಬ ಅಭಿಮಾನವುಳ್ಳ ಪ್ರಮಾತೃಗಳು 'ಸಕಲ', 'ಪ್ರಳಯಾಕಲ' ಮೊದಲಾದವರು. ಇವರಿಗಿರುವುದು ಭೇದಜ್ಞಾನ. ಈ ಭೇದಜ್ಞಾನವನ್ನು ತಿರಸ್ಕರಿಸಿದರೆ ಸಿದ್ಧವಾಗಿರುವ ಚಿದ್ಘನಸ್ವಭಾವವು ಹೊರಹೊಮ್ಮುತ್ತದೆ, ಅಭಿವ್ಯಕ್ತವಾಗುತ್ತದೆ. ಇದರ ಫಲವಾಗಿ ಕ್ರಮಕ್ರಮವಾಗಿ ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರಾತ್ಮಕವಾದ ಮಾಹಾತ್ಮ್ಯವನ್ನು ಪಡೆಯುತ್ತಾನೆ. ತನ್ನಿಷ್ಟಬಂದಂತೆ ಸೃಷ್ಟಿ ಸ್ಥಿತಿ ಲಯಗಳನ್ನುಂಟುಮಾಡುವ ಶಕ್ತಿಯುಳ್ಳವನಾಗುತ್ತಾನೆ.

ತ್ರಿಗುಣಗಳನ್ನು ದಾಟಿದರೆ ಸ್ವಾತಂತ್ರ್ಯಸಿದ್ಧಿಯುಂಟಾಗುವುದು. ಇವನಿಗೆ ಕಾಲನ ಭಯವಿಲ್ಲ. ಶಾಪಾನುಗ್ರಹಸಮರ್ಥನಾಗುವನು. ದೇವತೆಗಳಿಗೂ ಒಡೆಯನಾಗುವನು. ಇವನಿಗೆ ಅಸಾಧ್ಯವಾದದ್ದು ಯಾವುದೂ ಇರುವುದಿಲ್ಲ ಎಂದು ಸ್ವಚ್ಛಂದ ತಂತ್ರದಲ್ಲಿ ಈ ಪ್ರಮಾತೃಗಳ ಸ್ಥಿತಿಯನ್ನು ವರ್ಣಿಸಿರುತ್ತಾರೆ.

ಕರಣಶಕ್ತಿಃ ಸ್ವತೋಽನುಭವಾತ್ ॥೩೭॥

ಸಿದ್ಧಪುರುಷನು ತನ್ನಿಷ್ಟಬಂದಂತೆ ಸೃಷ್ಟಿಸಲು ಕಾರಣ—ಅವನ ಮಹಿಮೆ

ಸಂಕಲ್ಪ ಸ್ವಪ್ನ ಮೊದಲಾದ ಅವಸ್ಥೆಗಳಲ್ಲಿ ವಿಶ್ವವೈಚಿತ್ರ್ಯವನ್ನು ನಿರ್ಮಾಣ ಮಾಡುವ ಶಕ್ತಿಯು ಇನ್ನೊಂದು ಕಾರಣವನ್ನಪೇಕ್ಷಿಸುತ್ತದೆ. ಆ ಶಕ್ತಿಯು ತನ್ನಲ್ಲಿಯೇ ತನಗೆ ತಾನೇ ಇರುತ್ತದೆ. ಆಯಾ ಪರಿಸ್ಥಿತಿಗೆ ತಕ್ಕಂತೆ ಅಸಾಧಾರಣವಾದ ವಿಷಯಗಳನ್ನು ಸೃಷ್ಟಿಮಾಡುವುದು ಆತ್ಮನಿಗೆ ಸಿದ್ಧವಾದ ಶಕ್ತಿ. ಇಷ್ಟಬಂದ ಹಾಗೆ ಉಲ್ಲೇಖಿಸುವುದು, ಪ್ರಕಾಶಗೊಳಿಸುವುದು ಜ್ಞಾನ ಮತ್ತು ಕ್ರಿಯಾಶಕ್ತಿಗಳ ಫಲ. ಬದುಕಿರುವ ಎಲ್ಲರಿಗೂ ಈ ಅಂಶಗಳು ಅನುಭವದಲ್ಲಿವೆ.

> ಅತಏವ ಯಥಾಭೀಷ್ಟಸಮುಲ್ಲೇಖಾವಭಾಸನಾತ್ ।
> ಜ್ಞಾನಕ್ರಿಯೇ ಸ್ಫುಟೇ ಏವ ಸಿದ್ಧೇ ಸರ್ವಸ್ಯ ಜೀವತಃ ॥
>
> —ಪ್ರತ್ಯಭಿಜ್ಞಾ

ಒಂದು ವೇಳೆ ಯಾವ ವಿಷಯವನ್ನಾದರೂ ಮರೆತುಬಿಟ್ಟರೆ ವಿಮರ್ಶಶಕ್ತಿಯಿಂದ ಮರಳಿ ಜ್ಞಾಪಿಸಿಕೊಳ್ಳಬಹುದು. ದೃಢವಾದ ಧ್ಯಾನದಿಂದಲೂ, ಮನನದಿಂದಲೂ ಮರೆತದ್ದನ್ನು ನೆನೆಯಬಹುದು. ಹಾಗೆಯೇ ಹೊಸದನ್ನು ಊಹಿಸಬಹುದು. ಹೀಗೆ ಸಂಕಲ್ಪವು ಅನಂತವಾದ ಭಾವಗಳಿಗೆ ಸ್ವತಂತ್ರವಾಗಿ ಕಾರಣವಾಗಿರುತ್ತದೆ. ಕರಣಶಕ್ತಿಗಳು ತುರೀಯಾತ್ಮಕವಾದ ಸ್ವಾತಂತ್ರ್ಯ ಶಕ್ತಿಗಳೇ ಆಗಿರುತ್ತವೆ. ಜ್ಞಾತೃವಾದ ಪ್ರಮಾತೃವಿಗೆ ಇದೇ ಮುಖ್ಯವಾದ ಅಂಶ.

ಅವತರಣಿಕೆ—ಆದುದರಿಂದ ಮಾಯಾಶಕ್ತಿಯ ದೆಸೆಯಿಂದ ದೂರವಾಗಿರುವ ಸ್ವಸ್ವರೂಪವನ್ನು ಮುಂದೆ ಹೇಳುವ ರೀತಿ ಪ್ರಕಾಶಪಡಿಸಬೇಕು.

ತ್ರಿಪದಾದ್ಯನುಪ್ರಾಣನಂ ॥೩೮॥

ಕರ್ತೃಸ್ವರೂಪವನ್ನು ವಿಶದಪಡಿಸಲು ತುರೀಯಾನುಸಂಧಾನದ ಆವಶ್ಯಕತೆ

ಪದಾರ್ಥಗಳಿಗೆ ಉತ್ಪತ್ತಿ ಸ್ಥಿತಿ ಲಯಗಳೆಂಬ ಮೂರು ಅವಸ್ಥೆಗಳುಂಟು. ಭಾವನಾಮಯಗಳಾದ ಈ ಮೂರು ಅವಸ್ಥೆಗಳು ಯಾವುದರಿಂದ ಹುಟ್ಟುತ್ತವೆಯೋ, ಯಾವ ಚಮತ್ಕಾರದಿಂದ ನಡೆಯುತ್ತಲಿವೆಯೋ ಅದು ಆನಂದಘನವಾದ ತುರೀಯ ಪದವಾಗಿದೆ. ಆಯಾ ವಿಷಯಗಳನ್ನು ಅನುಭವಿಸುವಾಗ ಮಿಂಚಿನಂತೆ ಆಯಾ ಅವಸರ ಗಳಲ್ಲಿ ಕ್ಷಣಮಾತ್ರ ಸ್ಫುರಿಸಿದರೂ ಅದನ್ನು ಅಂತರ್ಮುಖೀನವಾಗಿ ವಿಮರ್ಶೆಮಾಡ ಬೇಕು. ಈ ವಿಮರ್ಶೆಯಿಂದಾದ ವಿಷಯಾನುಭೋಗಕ್ಕೂ, ಈ ಸ್ಫುರಣಕ್ಕೂ ಇರುವ ತಾರತಮ್ಯವು ಅನುಭವಕ್ಕೆ ಬರುತ್ತದೆ. ವಿಕಲ್ಪಗಳಿಂದ ದೂರವಾಗಿ ಸ್ವಾನುಭವಾನಂದ ರೂಪವಾಗಿರುವ ಭೈರವೀ ಅವಸ್ಥೆಯು ವಿಶ್ವವ್ಯಾಪಿಯಾಗಿದೆ. ಅದನ್ನು ತಿಳಿಯಬೇಕು.

ಶಕ್ತಿಯ ಆವೇಶ, ಸಂಗಮದಿಂದುಂಟಾಗುವ ಸುಖವು ಬ್ರಹ್ಮಾನಂದಕ್ಕೆ ಸಮ ವಾದುದು. ತಾನನುಭವಿಸಿದ ತೃಪ್ತಿಯನ್ನು ನೆನೆದರೂ ಒಂದು ಬಗೆ ತೃಪ್ತಿಯುಂಟು. ಆಹಾರ ವಿಹಾರಗಳಲ್ಲುಂಟಾಗುವ ಆನಂದವನ್ನೂ, ಸಂಗೀತವೇ ಮೊದಲಾದ ವಿಷಯಾ ನುಭವಗಳಿಂದ ಉಂಟಾಗುವ ತೃಪ್ತಿಯನ್ನೂ ಸ್ವಾತ್ಮಾನಂದವೆಂದು ತಿಳಿಯಬೇಕು. ಇದನ್ನೇ ಚಿತ್ಸ್ಪರ್ಶವೆಂದು ಹೇಳುತ್ತಾರೆ.

ಅತಿಕೋಪ, ಸಂತೋಷ, ಏನು ಮಾಡುವುದು ಎಂಬ ಸಂದಿಗ್ಧ ಯೋಚನೆ ಮೊದಲಾದ ಸ್ಥಿತಿಗಳಲ್ಲಿ ಸ್ವಸ್ವರೂಪವೂ, ಆ ಸ್ವರೂಪದಿಂದ ಭಿನ್ನವಾಗಿರುವ ಕ್ರಿಯಾ ವೇಗವೂ ಗೋಚರಿಸುತ್ತವೆ.

ಮೂರನೇ ಉನ್ಮೇಷ ೨೦ ನೇ ಸೂತ್ರದಲ್ಲಿ ಜಾಗ್ರದಾದ್ಯವಸ್ಥೆಗಳಲ್ಲಿ ತುರೀಯಾನು ಸಂಧಾನವನ್ನು ಸೂಚಿಸಿದೆ. ಇಲ್ಲಿ ಎಲ್ಲಾ ದಶೆಗಳಲ್ಲಿಯೂ ಆದಿ ಮಧ್ಯ ಅಂತರ್ರೂಪ ಗಳಾದ ಸೃಷ್ಟಿ ಸ್ಥಿತಿ ಸಂಹಾರಗಳಲ್ಲಿ ತುರೀಯಾನುಸಂಧಾನ ಮಾಡಬೇಕೆಂಬುದೇ ತಾತ್ಪರ್ಯ.

ಅಂತಃ ಸ್ವಾನುಭವಾನಂದಾ ವಿಕಲ್ಪೋನ್ಮುಕ್ತ ಗೋಚರಾ ।
ಯಾವಸ್ಥಾ ಭರಿತಾಕಾರಾ ಭೈರವೀ ಭೈರವಾತ್ಮನಃ ॥
ತದ್ವಪುಸ್ತತ್ತ್ವತೋ ಜ್ಞೇಯಂ ವಿಮಲಂ ವಿಶ್ವಪೂರಣಂ ।

—ವಿಜ್ಞಾನ ಭೈರವ

ಅತಿಕೃದ್ಧಃ ಪ್ರಹೃಷ್ಟೋವಾ ಕಿಂ ಕರೋಮೀತಿ ವಾ ಮೃಶನ್ ।
ಧಾವನ್ವಾ ಯತ್ಪದಂ ಗಚ್ಛೇತ್ತತ್ರ ಸ್ಪಂದಃ ಪ್ರತಿಷ್ಠಿತಃ ॥

—ಸ್ಪಂದನಿರ್ಣಯ

ಅವತರಣಿಕೆ—ಹೀಗೆ ಮೂರು ಅವಸ್ಥೆಗಳಲ್ಲಿಯೂ ಆಂತರಂಗಿಕ ಅನುಭವ ವನ್ನು ಪಡೆದ ಮಾತ್ರಕ್ಕೆ ಸಂತೋಷಪಡಬಾರದು.

ಚಿತ್ತಸ್ಥಿತಿವಚ್ಛರೀರ ಕರಣ ಬಾಹ್ಯೇಷು ॥೩೯॥

ಹೊರಗಿನ ಪದಾರ್ಥಗಳು ಪ್ರಕಾಶಿಸುತ್ತಿದ್ದರೂ ತುರೀಯ ಶಕ್ತಿಯಿಂದ ಕೂಡಿರುವುವು

ಹೇಗೆ ಅಂತರ್ಮುಖರೂಪವಾದ ಚಿತ್ತಸ್ಥಿತಿಯಲ್ಲಿ ತುರೀಯಾನುಸಂಧಾನವನ್ನು ಮಾಡುತ್ತಾರೋ ಅದೇ ರೀತಿಯಲ್ಲಿ ಶರೀರ, ಇಂದ್ರಿಯಗಳು, ಇತರ ಪದಾರ್ಥಗಳು ಮೊದಲಾದವುಗಳೆಲ್ಲ ಹೊರಗಿನ ಪ್ರಪಂಚಕ್ಕೆ ಸೇರಿವೆಯೆಂದು ಅನುಸಂಧಾನ ಮಾಡಬೇಕು. ಅವುಗಳಲ್ಲಿಯೂ ಕೂಡ ಕ್ರಮಕ್ರಮವಾಗಿ ತಾರತಮ್ಯದಿಂದ ತುರೀಯಾನುಸಂಧಾನಮಾಡಬೇಕು. ಜಗತ್ತೆಲ್ಲಾ ತನ್ನ ಶರೀರವಾಗಿದೆಯೆಂದು ಆನಂದ ಭರಿತನಾಗಿರಬೇಕು. ಅಂತಹವನು ಒಂದೇ ಸಲ ಪರಾನಂದವನ್ನನುಭವಿಸುವನು. ಹೀಗೆ ಆನಂದರೂಪಿಣಿಯಾದ ಸ್ವಾತಂತ್ರ್ಯಶಕ್ತಿಯು ಎಲ್ಲಾ ದಶೆಗಳಲ್ಲಿಯೂ ಸ್ಫುಟವಾಗಿದ್ದು ತನ್ನಿಷ್ಟಬಂದ ಹಾಗೆ ಸೃಷ್ಟಿಯನ್ನು ಮಾಡುತ್ತಲಿರುತ್ತದೆ. ಅದೇ ಶಕ್ತಿಯೇ ಅನುತ್ತರ. ಆನಂದಮಯವಾಗಿರುವ ತುರೀಯ ದಶೆಯನ್ನು ವಿಮರ್ಶಿಸದೇ ಇದ್ದರೆ ದೇಹಾದಿಗಳಲ್ಲಿ ನಾನು ಎಂಬ ಭಾವನೆ ಉಂಟಾಗುತ್ತದೆ. ಇದು 'ಅಪೂರ್ಣಂ ಮನ್ಯತಾರೂಪ'ವಾದ ಆಣವ ಮಲದ ಪ್ರಭಾವ.

ಸರ್ವಂ ಜಗತ್ಸ್ವದೇಹಂ ವಾ ಸ್ವಾನಂದಭರಿತಂ ಸ್ಮರೇತ್ ।
ಯುಗಪತ್ಸ್ವಾಮೃತೇನೈವ ಪರಾನಂದಮಯೋ ಭವೇತ್ ॥

—ವಿಜ್ಞಾನ ಭೈರವ

ಅಭಿಲಾಷಾದ್ಬಹಿರ್ಗತಿಃ ಸಂವಾಹ್ಯಸ್ಯ ॥೪೦॥

ತುರೀಯಪದದ ವಿಮರ್ಶೆಯಿಲ್ಲದಿದ್ದಲ್ಲಿ ಸಂಸಾರ

ಶಕ್ತಿಚಕ್ರಗಳಿಗೆ ಅಧಿಷ್ಠಾತೃಗಳಾಗಿರುವ ಕಂಚುಕಗಳು, ಅಂತಃಕರಣ, ಇಂದ್ರಿಯಗಳು, ತನ್ಮಾತ್ರಗಳು, ಭೂತಗಳು—ಇವುಗಳು ಕರ್ಮಾತ್ಮನಾಗಿರುವ ಪಶುವನ್ನು ಜನ್ಮದಿಂದ ಜನ್ಮಕ್ಕೆ ಒಯ್ಯುತ್ತವೆ. ಅಪೂರ್ಣಂ ಮನ್ಯತಾತ್ಮಕವಾಗಿರುವ ಅವಿದ್ಯೆಯೆನ್ನಿಸಿರುವುದೇ ಆಣವ ಮಲ. ಅಭಿಲಾಷೆಯಿಂದಲೇ ಬಹಿರ್ಗತಿ ಉಂಟಾಗುವುದು. ಇದರಿಂದಲೇ ವಿಷಯೋನ್ಮುಖತ್ವ. ಅಂತರ್ಮುಖರೂಪದಲ್ಲಿ ಅನುಸಂಧಾನವಿದ್ದಲ್ಲಿ ಯಾವ ವಿಧವಾದ ಸಂಕೋಚವೂ ಉಂಟಾಗುವುದಿಲ್ಲ. ಅವಿದ್ಯೆಯಿಂದ ಆಚ್ಛಾದಿಸಿರುವಿಕೆ, ವಿಕಲ್ಪಜ್ಞಾನ ಇವೇ ಮೊದಲಾದವುಗಳಿಂದ ಶಿವಾದಿ ತತ್ತ್ವಜ್ಞಾನವು ಬೇಗನೆ ಏರ್ಪಡುವುದಿಲ್ಲ. ಇವುಗಳಿಂದ ಶುಭಾಶುಭ ಕರ್ಮಗಳು, ಸುಖದುಃಖಗಳು, ನರಕಾದಿ ಅನುಭವಗಳು ಉಂಟಾಗುತ್ತವೆ. ಬಿದಿರು ಪೊದೆಯು ತನ್ನಲ್ಲಿಯೇ ಹುಟ್ಟುವ ಬೆಂಕಿಯಿಂದ ಸುಡಲ್ಪಡುವಂತೆ ಜೀವಾತ್ಮನು ಮಾಯಾತತ್ತ್ವಗಳಿಂದುಂಟಾದ ತೊಂದರೆಗಳನ್ನು ಅನುಭವಿಸುತ್ತಾನೆ.

ಯದವಿದ್ಯಾ ವೃತತಯಾ ವಿಕಲ್ಪ ವಿಧಿಯೋಗತಃ ।
ಶಿವಾದೀನ್ನೈವ ಝಟಿತಿ ಸಮುದ್ಭಾವ ಯತೇಖಿಲಾನ್ ॥

ತತಃ ಶುಭಾಶುಭಾ ಭಾವಾ ಲಕ್ಷ್ಯಂತೇ ತದ್ವಶತ್ವತಃ ।
ಅಶುಭೇಭ್ಯಶ್ಚ ಭಾವೇಭ್ಯಃ ಪರಂ ದುಃಖಂ ಪ್ರಜಾಯತೇ ॥

ಅತಥ್ಯಾಂ ಕಲ್ಪನಾಂ ಕೃತ್ವಾ ಪಚ್ಯಂತೇ ನರಕಾದಿಷು ।
ಸ್ವೋತ್ಥೈರ್ದೋಷೈಶ್ಚ ದಹ್ಯಂತೇ ವೇಣವೋ ವಹ್ನಿನಾ ಯಥಾ ॥
ಮಾಯಾಮಯೈಃ ಸದಾ ಭಾವೈರವಿದ್ಯಾಂ ಪರಿಭುಂಜತೇ ।
ಮಾಯಾಮಯೀಂ ತನುಂ ಯಾಂತಿ ತೇ ಜನಾಃ ಕ್ಲೇಶಭಾಜನಮ್ ॥

—ಕಾಳಿಕಾಕ್ರಮ

ಅವತರಣಿಕೆ—ಯಾವಾಗ ಪರಮೇಶ್ವರನ ಶಕ್ತಿಪಾತ ಉಂಟಾಗುತ್ತದೆಯೋ ಆಗ ಮಾಯೆಯ ತತ್ತ್ವಗಳಿಂದುಂಟಾಗುವ ತೊಂದರೆಗಳನ್ನು ತನ್ನ ಶ್ರೇಯಸ್ಸಿಗೆ ಪರಿವರ್ತಿಸಿಕೊಳ್ಳುವನು. ಸ್ವಸ್ವಭಾವವನ್ನು ವಿಮರ್ಶಿಸುವನು. ಆಗ ಬಾಹ್ಯಾಕಾಂಕ್ಷೆಯು ಇರುವುದಿಲ್ಲ. ಅಂತರನುಭವವು ಮುಖ್ಯವಾಗಿರುತ್ತದೆ.

ತದಾರೂಢ ಪ್ರಮಿತೇಸ್ತತ್ಕ್ಷಯಾಜ್ಜೀವ ಸಂಕ್ಷಯಃ ॥೪೧॥

ಸ್ವಸ್ವಭಾವವನ್ನು ವಿಮರ್ಶಿಸುವುದರಿಂದ ಬಾಹ್ಯಪ್ರಪಂಚದಲ್ಲಿಯೂ ಆತ್ಮಸಂತೋಷ

ಹಿಂದೆ ಹೇಳಿದ ತುರೀಯಾವಸ್ಥೆಯಲ್ಲಿ ಆರೂಢನಾಗಿರುವವನು ತದ್ವಿಮರ್ಶನಪರನಾಗಿರುತ್ತಾನೆ. ಅಂತಹ ಯೋಗಿಗೆ ಪುರ್ಯಷ್ಟಕ ಪ್ರಮಾತೃಭಾವಗಳು ಕ್ಷಯಿಸುತ್ತವೆ. ಚಿತ್ಪ್ರಮಾತೃತ್ವವು ಸದಾ ಸ್ಫುರಿಸುತ್ತಿರುತ್ತದೆ. ಸ್ವಪ್ನದಿಂದ ಎಚ್ಚರಗೊಂಡವನು ಸ್ವಪ್ನ ಪದಾರ್ಥಗಳನ್ನು ಹೇಗೆ ನೋಡುವುದಿಲ್ಲವೋ ಹಾಗೆ ಯೋಗಿಯು ಸಂಸಾರವನ್ನು ನೋಡುವುದಿಲ್ಲ. ಭಾವಾಭಾವರೂಪವಾದ ಬಾಹ್ಯಪ್ರಪಂಚದ ಗೊಡವೆಯನ್ನು ತಿರಸ್ಕರಿಸಿ ಬಗೆಬಗೆಯಾಗಿ ಕಾಣುವ ಈ ವಿಕಲ್ಪ ಜಾಲವನ್ನು ಕಡೆಹಾಯ್ದು ಎರಡನೆಯದಿಲ್ಲದ ಅದ್ವೈತದಲ್ಲಿ ಪರಾಪರ ಭಾವವನ್ನು ಪಡೆಯುವನು. ಯಾವನು ಸದಾ ಸ್ವಾತ್ಮನಿರತನಾಗಿರುತ್ತಾನೆಯೋ ಅವನೇ ಕೈವಲ್ಯವನ್ನು ಪಡೆಯುವನು ; ಅರ್ಹನೂ ಸಮರ್ಥನೂ ಆಗುವನು. ಕೈವಲ್ಯಪದವೆಂದರೆ ಇಂದ್ರಿಯಗಳು ಮತ್ತು ತನ್ಮಾತ್ರಗಳು ಇವುಗಳಿಗೆ ಅಧೀನವಾಗಿ ಸಂಚರಿಸದೆ ಇರುವುದು.

ಅವತರಣಿಕೆ—ಹೀಗೆ ಸಿದ್ಧನಾದರೂ ಅವನು ಒಡನೆಯೇ ಶರೀರದಿಂದ ಬಿಡುಗಡೆಯನ್ನು ಪಡೆಯುವುದಿಲ್ಲ. ಹಾಗಾದರೆ ಇವನಿಗೆ ಆರೂಢಜ್ಞಾನವುಂಟಾಗುವ ಬಗೆ ಹೇಗೆ ?

ನಿರಸ್ಯ ಸದ ಸದ್ವೃತ್ತೀಃ ಸಂಶ್ರಿತ್ಯ ಪದಮಾಂತರಂ ।
ವಿಹಾಯ ಕಲ್ಪನಾಜಾಲಮದ್ವೈತೇನ ಪರಾಪರಂ ॥
ಯಃ ಸ್ವಾತ್ಮನಿರತೋ ನಿತ್ಯಂ ಕಾಲಗ್ರಾಸೈಕ ತತ್ಪರಃ ।
ಕೈವಲ್ಯಪದ ಭಾಗ್ಯೋಗೀ ಸ ನಿರ್ವಾಣಪದಂ ಲಭೇತ್ ॥

ಭೂತಕಂಚುಕೀ ತದಾವಿಮುಕ್ತೋಭೂಯಃ ಪತಿಸಮಃ ಪರಃ ॥೪೨॥

ಭೂತಗಳು ಮತ್ತು ಕಂಚುಕಗಳಿಂದ ಬಿಡುಗಡೆಯನ್ನು ಪಡೆದವನು ಪರಶಿವನಿಗೆ ಸಮಾನನಾಗಿರುವನು

ಇವನಿಗೆ ಪುರ್ಯಷ್ಟಕ ಪ್ರಮಾತೃತ್ವದಲ್ಲಿ ಅಭಿಮಾನವಿಲ್ಲ. ಇವನ ಸ್ಥೂಲ ಶರೀರಕ್ಕೆ ಕಾರಣವಾಗಿರುವ ಭೂತಗಳು ಇವನಿಗೆ ಕವಚವಿದ್ದ ಹಾಗಿರುತ್ತವೆ. ಇವುಗಳು ಅಹಂತಾಪದವನ್ನು ಮುಟ್ಟುವುದಿಲ್ಲ. ಹಾಗಿರುವುದರಿಂದ ಅವನು ಬದುಕಿದ್ದರೂ ಮುಕ್ತನೇ. ಏಕೆಂದರೆ ಅವನು ವಿಶೇಷವಾಗಿ ಪರಮೇಶ್ವರಸ್ವರೂಪಾವಿಷ್ಟನಾಗಿರುವನು. ಆದುದರಿಂದಲೇ ಅವನು ಪರಿಪೂರ್ಣನು. ಅವನು ಮುಕ್ತನಾಗಿದ್ದರೂ ಶರೀರ ಮಾತ್ರ ವಿರುತ್ತದೆ. ಅಂತಹವನು ಬದುಕಿರುವುದು ಇತರರ ಜ್ಞಾನವಿಕಾಸಕ್ಕೆ ಸಹಾಯವಾಗುವುದ ಕ್ಕೋಸ್ಕರ. ಕಣ್ಣುರೆಪ್ಪೆ ಹೊಡೆಯುವಷ್ಟು ಸಮಯದಷ್ಟು ತತ್ತ್ವಸಾಕ್ಷಾತ್ಕಾರ ವೇರ್ಪಟ್ಟರೂ ಅವನಿಗೆ ಮೋಕ್ಷವುಂಟು.

ಅವತರಣಿಕೆ—ತತ್ತ್ವಜ್ಞಾನವಾದ ಒಡನೆಯೇ ಶರೀರ ವಿಯೋಗವು ಏಕೆ ಆಗಕೂಡದು ಎಂಬ ಪ್ರಶ್ನೆಗೆ ಮುಂದಿನ ಸೂತ್ರವೇ ಉತ್ತರ.

> ನಿಮೇಷೋನ್ಮೇಷ ಮಾತ್ರಂ ತು ತತ್ತ್ವಂ ಯದ್ಯುಪಲಭ್ಯತೇ ।
> ತದೈವಕಿಲ ಮುಕ್ತೋಽಸೌ ನ ಪುನರ್ಜನ್ಮ ಚಾಪ್ನುಯಾತ್ ॥
>
> —ಶ್ರೀಮೃತ್ಯುಜಿತ್

ನೈಸರ್ಗಿಕಃ ಪ್ರಾಣಸಂಬಂಧಃ ॥೪೩॥

ಒಡನೆಯೇ ಶರೀರವಿಯೋಗವಾಗದಿರಲು ಕಾರಣ

ಸ್ವಾಭಾವಿಕವಾಗಿ ಸ್ವತಂತ್ರವಾಗಿರುವ ಆತ್ಮನಿಗೆ ಪ್ರಾಣಸಂಬಂಧವುಂಟು. ಸಂವಿದ್ದೇವತೆಯು ವಿಶ್ವವೈಚಿತ್ರ್ಯಗಳನ್ನು ಪ್ರಕಾಶಪಡಿಸಬೇಕೆಂದು ಸಂಕೋಚಭಾವ ವನ್ನು ಪಡೆಯುತ್ತದೆ. ಆ ಸಂವಿದ್ದೇವತೆಯೇ ಸಂಕೋಚ ಸ್ಫುರಣವನ್ನುಂಟುಮಾಡುವ ಪ್ರಾಣಶಕ್ತಿಯ ರೂಪವನ್ನು ತಾಳುತ್ತದೆ. ಅನಂತರ ಅದೇ ಶಕ್ತಿಯೇ ಗ್ರಾಹ್ಯರೂಪವಾದ ಜಗತ್ತನ್ನು ಹೊರಹೊಮ್ಮಿಸುತ್ತದೆ. ಸ್ವಾತಂತ್ರ್ಯದಿಂದಲೇ ಸ್ವಭಾವವಾಗಿ ಜೀವಾತ್ಮನಿಗೆ ಪ್ರಾಣಶಕ್ತಿಯು ಈ ವಿಶ್ವಕ್ಕೆ ಸಂಬಂಧವನ್ನುಂಟು ಮಾಡುತ್ತದೆ. ಆ ಪ್ರಾಣಶಕ್ತಿಯು ಬಲಾತ್ಕಾರವಾಗಿ ಮೂರು ನಾಡಿಗಳಲ್ಲಿ ಹರಿಯುತ್ತಾ ಮೂರು ರೂಪಗಳಾಗಿ ಕಾಲವನ್ನು ಎಳೆಯುತ್ತದೆ. ಹೀಗೆ ಸಂವಿದ್ದೇವತೆಯೇ ಕಾಲಕ್ರಮದಲ್ಲಿ ಪ್ರಾಣಶಕ್ತಿಯ ಕ್ರಮ ದಿಂದಲೂ, ಅತೀತ ಅನಾಗತ ವರ್ತಮಾನ ರೂಪಗಳಿಂದಲೂ ಕಾಲ ವ್ಯವಹಾರವನ್ನು ನಡೆಸುತ್ತಿರುತ್ತದೆ, ಎಲ್ಲಾ ಜೀವಿಗಳ ಎದೆಯಲ್ಲಿದ್ದು ಚಲಿಸುತ್ತಿರುತ್ತದೆ, ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕಾರಣರೂಪವಾಗಿರುತ್ತದೆ.

ಅವತರಣಿಕೆ—ಆದುದರಿಂದ ಪ್ರಾಣಸಂಬಂಧ ಇದ್ದರೂ ಆರೂಢನಾದ ಸಾಧಕನು ಅಂತರ್ಯವಾದ ಕಲಾವಿಮರ್ಶನದಿಂದಲೇ ಆನಂದವನ್ನನುಭವಿಸುತ್ತಾ ಇರುವನು.

> ಯಾ ಸಾ ಶಕ್ತಿಃ ಪರಾಸೂಕ್ಷ್ಮಾ ವ್ಯಾಪಿನೀ ನಿರ್ಮಲಾ ಶಿವಾ ।
> ಶಕ್ತಿಚಕ್ರಸ್ಯ ಜನನೀ ಪರಾನಂದಾಮೃತಾತ್ಮಿಕಾ ॥
>
> —ಶ್ರೀವಾಜಸನೇಯಾ

ಪ್ರಾಣಃ ಪ್ರಾಣಮಯಃ ಪ್ರಾಣೋ ವಿಸರ್ಗಾಪೂರಣಂ ಪ್ರತಿ ।
ನಿತ್ಯಮಾಪೂರಯತ್ಯೇಷ ಪ್ರಾಣಿನಾಮುರಸಿ ಸ್ಥಿತಃ ॥

—ಸ್ವಚ್ಛಂದ

ಪ್ರಾಕ್‌ಸಂವಿತ್ ಪ್ರಾಣೆ ಪರಿಣತಾ ।

—ತತ್ತ್ವಾರ್ಥಚಿಂತಾಮಣಿ

ನಾಸಿಕಾಂತರ್ಮಧ್ಯ ಸಂಯಮಾತ್ ಕಿಮತ್ರ ಸವ್ಯಾಪಸವ್ಯ ಸೌಷುಮ್ನೇಷು ॥೪೪॥

ಪ್ರಾಣಸಂಬಂಧವಿದ್ದರೂ ಅಲೌಕಿಕತ್ವ ನಿರೂಪಣ

ಎಲ್ಲಾ ನಾಡಿಚಕ್ರಗಳಿಗೂ ಪ್ರಧಾನವಾಗಿರುವುದು ಎಡಬಲ ನಾಡಿಗಳು. ಮಧ್ಯೆ ಇರುವುದು ಸುಷುಮ್ನಾ ನಾಡಿ. ಇದು ಪ್ರಧಾನವಾದದ್ದು. ಇದೇ ಬೋಧಾಶ್ರಯ. ಇದರ ಜಯವಾದರೆ ಸರ್ವಜ್ಞತ್ವ ಉಂಟಾಗುತ್ತದೆ. ಅಂತರ್ಯವಾದ ಧ್ಯಾನ ಮತ್ತು ಅನುಸಂಧಾನದಿಂದ ಸಿದ್ಧಿಸುತ್ತದೆ. ಇದು ಎಲ್ಲಾ ದಶೆಗಳಲ್ಲಿಯೂ ದೇದೀಪ್ಯಮಾನವಾಗಿರುವ ಪರಸಮಾಧಿ. ಹೀಗೆ ಯೋಗಫಲವನ್ನು ಇದುವರೆಗೂ ನಿರೂಪಿಸಿ ಈಗ ಉಪಸಂಹಾರ ಮಾಡುತ್ತಾರೆ.

ಗ್ರಾಹ್ಯಗ್ರಾಹಕ ಸಂವಿತ್ತಿಃ ಸಾಮಾನ್ಯಾ ಸರ್ವದೇಹಿನಾಂ ।
ಯೋಗಿನಾಂ ತು ವಿಶೇಷೋಽಯಂ ಸಂಬಂಧೇ ಸಾವಧಾನತಾ ॥

—ವಿಜ್ಞಾನಭೈರವ

ಭೂಯಃ ಸ್ಯಾತ್ ಪ್ರತಿಮೀಲನಮ್ ॥೪೫॥

ಯೋಗಫಲ ವಿವರಣೆ

ಚೈತನ್ಯಸ್ವರೂಪಿಯಾಗಿರುವವನು ಆತ್ಮಾ. ಅವನಿಂದಲೇ ಬಗೆಬಗೆಯಾಗಿರುವ ಈ ವಿಶ್ವವು ಹುಟ್ಟಿದೆ. ಭೇದಜ್ಞಾನಕ್ಕೆ ಆಕರವಾಗಿರುವ ಈ ವಿಶ್ವವು ಪುನಃ ಅಭೇದ ರೂಪವನ್ನು ಪಡೆಯುವಿಕೆಯೇ ಪ್ರತಿಮೀಲನ. ಈ ಸ್ಥಿತಿಯೂ ಸ್ವಸ್ವರೂಪ ಉನ್ಮೀಲನವೂ ಒಂದೇ ಆಗಿದೆ. ಇದು ಪರಮನಿಷ್ಠನಾದ ಯೋಗಿಗೆ ಲಭಿಸುತ್ತದೆ. ಇದನ್ನು ಉನ್ಮನೀ ಅವಸ್ಥೆಯೆಂದೂ, ತನ್ಮಯವೆಂದೂ, ತಾದಾತ್ಮ್ಯವೆಂದೂ ಹೇಳುತ್ತಾರೆ. ಕಟ್ಟಿಗೆಯಿಂದ ಬೆಂಕಿಯನ್ನು ಉರಿಸಿದರೆ ಹೇಗೆ ಆ ಜ್ವಾಲೆಯು ಮರಳಿ ಆ ಕಟ್ಟಿಗೆಯಲ್ಲಿ ಪ್ರವೇಶಿಸುವುದಿಲ್ಲವೋ ಹಾಗೆ ಸ್ಫುರಿಸಿದ ಜ್ಞಾನವು ಮಲಿನವಾಗುವುದಿಲ್ಲ. ಯೋಗಿಗೆ ಸ್ವಭಾವವಾಗಿರುವುದು ಚಿತ್ಸ್ಫುರಣ. ಮಾಯೆಯಿಂದ ಈ ಚಿತ್ಸ್ಫುರಣವು ಗೋಚರವಾಗುತ್ತಿರಲಿಲ್ಲ. ಇಲ್ಲಿ ಸೂಚಿಸಿದ ಉಪಾಯಗಳಿಂದ ಅದು ಗೋಚರಿಸುತ್ತದೆ. ಅಭಿವ್ಯಕ್ತವಾಗುತ್ತದೆ. ಶಿವತ್ವ ಪ್ರಾಪ್ತಿಯಾಗುತ್ತದೆ.

ಶಿವಸೂತ್ರಗಳು ಉಪದೇಶವಾಕ್ಯಗಳು

ಆತ್ಮಸ್ವರೂಪ, ಮಲತ್ರಯಗಳು, ಜಾಗ್ರತ್‌ಸ್ವಪ್ನಸುಷುಪ್ತಿಗಳು ಶುದ್ಧವಿದ್ಯೋದಯ— ಈ ವಿಷಯಗಳು—ಪ್ರಥಮೋನ್ಮೇಷ ೧, ೨, ೩, ೨೧, ೨೨ ಸೂತ್ರಗಳಲ್ಲಿ ನಿರೂಪಿಸಲ್ಪಟ್ಟಿವೆ.

ಮಂತ್ರರಹಸ್ಯ, ಜ್ಞಾನಸಾಧನೆ ಮತ್ತು ಸಿದ್ಧಿ—ಈ ವಿಷಯಗಳು ದ್ವಿತೀಯೋನ್ಮೇಷ ೧, ೨, ೩ ಸೂತ್ರಗಳಲ್ಲಿ ನಿರೂಪಿಸಲ್ಪಟ್ಟಿವೆ.

ಅಣು, ಮಾಯಾ, ಶುದ್ಧಾಧ್ವಸ್ವರೂಪ, ಯೋಗ ಮತ್ತು ಸುಖದುಃಖನಿವಾರಣೆ ಇವುಗಳು ತೃತೀಯೋನ್ಮೇಷ ೧, ೨, ೩, ೩೦, ೪೫ ಸೂತ್ರಗಳಲ್ಲಿ ನಿರೂಪಿಸಲ್ಪಟ್ಟಿವೆ.

ಇತಿ ಶಿವಂ

ಅನುಬಂಧ

ಶಿವೋಪಾಸಕರು ಲಿಂಗಾರಾಧಕರು

ಲಿಂಗೋಪಾಸನೆಯ ಬೆಳವಣಿಗೆಯ ಇತಿಹಾಸ

ದೇವರ ಕಲ್ಪನೆಯ ಉಗಮ ಮತ್ತು ಅದರ ಉತ್ಕ್ರಾಂತಿ ರೀತಿಗಳು ನಮಗೆ ಎಲ್ಲಿಯವರೆಗೆ ಗೊತ್ತಾಗುವುದಿಲ್ಲವೋ ಅಲ್ಲಿಯವರೆಗೆ ಲಿಂಗಪೂಜೆಯ ಬೆಳವಣಿಗೆಯ ಇತಿಹಾಸ ತಿಳಿಯುವುದು ಶಕ್ಯವಲ್ಲ. ಐತಿಹಾಸಿಕ ದೃಷ್ಟಿಯಿಂದ ಧರ್ಮದ ರೀತಿ ನೀತಿ ಗಳನ್ನು ಪರಿಶೋಧಿಸುತ್ತಾ ಪಂಡಿತ ಮ್ಯಾಕ್ಸ್ ಮುಲ್ಲರವರು ಮಾನವನಿಗೆ ದೇವರ ಕಲ್ಪನೆ ಹೇಗುಂಟಾಯಿತೆಂಬುದನ್ನು ತಿಳಿಯಲು ಕೆಲವು ನಿಯಮಗಳನ್ನು ಸೂಚಿಸಿ ವಿಮರ್ಶಿಸಿರುತ್ತಾರೆ. ಆ ನಿಯಮಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುವುದು ಸೂಕ್ತ.

ಇಂದ್ರಿಯಗೋಚರವಾಗದೆ ಇರತಕ್ಕ ಯಾವ ಸಂಗತಿಯಲ್ಲಿಯೂ ಶ್ರದ್ಧೆಯು ಸಾಮಾನ್ಯವಾಗಿ ಗೋಚರಿಸುವುದಿಲ್ಲ. ಇಂದ್ರಿಯ ವಿಷಯಗಳಿಂದ ಊಹಿಸಿ ಇಂದ್ರಿಯಾ ತೀತ ವಿಷಯಗಳಿಗೆ ಪ್ರವೇಶಿಸಬೇಕು. ಅಂದರೆ ಮೊದಲು ದೃಶ್ಯಪದಾರ್ಥಗಳ ಜ್ಞಾನ ವಾಗಿ ಅನಂತರ ಅದೃಶ್ಯ ಪದಾರ್ಥಗಳ ಜ್ಞಾನವಾಗುವುದೆಂಬುದು ಸಾಮಾನ್ಯ ನಿಯಮ. ಮಾನವನಿಗೆ ಬಾಲ್ಯಾವಸ್ಥೆಯಲ್ಲಿ ಮನಸ್ಸಿನ ಮೇಲೆ ಆದ ಸಂಸ್ಕಾರಗಳು ಕಾಲಕ್ರಮದಲ್ಲಿ ವಿಕಾಸಹೊಂದಿ ಇಂದ್ರಿಯ ಗೋಚರವಾದ ಜ್ಞಾನವೇ ಕೊನೆಗೆ ಇಂದ್ರಿಯಾತೀತ ಜ್ಞಾನಕ್ಕೆ ಕಾರಣವಾಗಿ ಪರಿಣಮಿಸುವುದು.

ಕಣ್ಣಿಗೆ ಕಾಣುವ ಆದರೆ ಕೈಗೆ ನಿಲುಕದ ಸೂರ್ಯಚಂದ್ರ ನಕ್ಷತ್ರ ಮೋಡ ಮೊದಲಾದ ಸ್ಪಷ್ಟ ಪದಾರ್ಥಗಳ ಅದ್ಭುತ ಕಾರ್ಯಗಳನ್ನು ನೋಡಿ ಬಾಲ್ಯಾವಸ್ಥೆ ಯಲ್ಲಿ ಆಶ್ಚರ್ಯಪಟ್ಟದ್ದು ಸ್ವಾಭಾವಿಕ. ಅವೂ ತಮ್ಮಂತೆಯೇ ಕಾರ್ಯಮಾಡುತ್ತ ವೆಂದೂ ಅವುಗಳಿಗೆ ಒಬ್ಬ ಒಡೆಯನಿರುವಂತೆ ತಿಳಿಯುವುದು ಸ್ವಾಭಾವಿಕ. ಹಾಗೆಯೇ ಅಗೋಚರವಾಗಿರುವ ಶಕ್ತಿಯ ಅದ್ಭುತ ಕಾರ್ಯಗಳಿಂದ ಮಾನವನಲ್ಲಿ ಉಂಟಾದ ಆಶ್ಚರ್ಯ ಅಥವಾ ಭಯವೇ ದೇವರ ಕಲ್ಪನೆಯ ಉಗಮ. ಸೂರ್ಯಚಂದ್ರರು ಆಕಾಶ ದಲ್ಲಿ ತಿರುಗುತ್ತಿದ್ದಾರೆ. ಮೇಲೆ ಕಾಣುವ ನೀಲವರ್ಣದ ಆಕಾಶವು ಅದೇನಿರಬಹುದು, ಅದರ ಆಚೆ ಯಾರಿರಬಹುದು, ಅವುಗಳನ್ನು ನಡೆಸುತ್ತಿರುವವರು ಯಾರು ಎಂದು ಬಾಲ್ಯಾವಸ್ಥೆಯ ಮನುಷ್ಯರು ಪ್ರಶ್ನೆಮಾಡಿ ತಮ್ಮ ತಮ್ಮ ತಿಳಿವಳಿಕೆ ಪ್ರಕಾರ ಅವುಗಳಿಗೆ ಉತ್ತರವನ್ನು ಕೊಟ್ಟರು. ಈ ರೀತಿಯಾದ ಊಹೆ ಮತ್ತು ಆಲೋಚನೆಯ ಪ್ರಕಾರ ಆಕಾಶದ ಪ್ರತೀಕವೇ ಪರಮಾತ್ಮನನ್ನು ಪ್ರತಿಬಿಂಬಿಸುವ ಲಿಂಗವೆಂದು ಭಾವಿಸಿದರು.

ಲಿಂಗ ವಿಜ್ಞಾನ

ಮಾನವವರ್ಗಕ್ಕೆ ಸೇರಿದವರೆಲ್ಲರೂ ತತ್ತ್ವಜ್ಞಾನಿಗಳಲ್ಲ. ಐಹಿಕ ಪ್ರಪಂಚಕ್ಕೆ ಸಂಬಂಧಪಟ್ಟವರಾದ ನಾವು ನಮ್ಮ ಕಣ್ಣಿಗೆ ಅಗೋಚರವಾದ ದೇವರನ್ನು ನಾವು ಧ್ಯಾನ

ಮಾಡುವುದರ ಮೂಲಕವೇ ನಮಗೆ ತೃಪ್ತಿಯಾಗುವುದಿಲ್ಲ. ನಾವು ಕಣ್ಣಾರೆ ನೋಡುವ ಮುಟ್ಟುವ ಅಡ್ಡಬಿದ್ದು ನಮಸ್ಕರಿಸುವ ಒಂದು ದೃಶ್ಯವು ನಮಗೆ ಎಂತೋ ಹೇಗೋ ಬೇಕು.

ಭಕ್ತಿಯ ಆಚರಣೆಯಲ್ಲಿ ಅರ್ಚನೆ, ಸ್ತೋತ್ರ, ಜಪ, ಧ್ಯಾನ ಮೊದಲಾದವುಗಳು ಒಂದು ವಿಧವಾದ ಸಾಧನೆಯ ಮಾರ್ಗ. ಅರ್ಚನೆಗೋಸ್ಕರ ಯಾವುದಾದರೊಂದು ಮೂರ್ತಿಯನ್ನೊ ಸಂಕೇತವನ್ನೊ ಊಹಿಸಿಕೊಂಡು ನಾವು ಮೂರ್ತಿಪೂಜೆಯನ್ನು ಮಾಡುತ್ತೇವೆ. ಈ ಕಲ್ಪನೆಯು ಭಕ್ತನ ಯೋಗ್ಯತೆ ಮತ್ತು ಕಲ್ಪನೆಗನುಸಾರವಾಗಿ ಇರುತ್ತದೆ. ಈ ವಿಚಾರದಲ್ಲಿ ನಾವು ಮೂರು ಅಂಶಗಳನ್ನು ಜ್ಞಾಪಕದಲ್ಲಿಟ್ಟುಕೊಂಡಿರ ಬೇಕಾಗುತ್ತದೆ—ಅವು ಯಾವುವೆಂದರೆ ಪೂಜ್ಯ, ಪೂಜಕ, ಪೂಜೆ. ಪೂಜ್ಯ ಅಂದರೆ ದೇವರು. ದೇವರ ಸ್ವರೂಪ, ಲಕ್ಷಣ, ಶಕ್ತಿ ಮೊದಲಾದವುಗಳನ್ನು ಶಾಸ್ತ್ರಜ್ಞಾನ ದಿಂದಾಗಲಿ ಗುರೂಪದೇಶದಿಂದಾಗಲಿ ತಿಳಿದಿರಬೇಕು. ಭಕ್ತಿಶ್ರದ್ಧೆಗಳನ್ನು ಪ್ರದರ್ಶಿಸು ವುದಕ್ಕೆ ಅನುಕೂಲವಾದ ಒಂದು ಚಿಹ್ನೆ ಅಥವಾ ವಸ್ತು ಬೇಕಾಗುತ್ತದೆ. ಪೂಜೆಗೆ ಸಾಧನಗಳಾದ ವಿಗ್ರಹಗಳು ಪರಮೇಶ್ವರನ ಬಾಹ್ಯಸೃಷ್ಟಿಯನ್ನೂ ಮಾನವನ ದೇಹದ ರಚನೆಯನ್ನೂ ಜೀವನದ ಪ್ರಗತಿಯನ್ನೂ ವಾಸ್ತುಶಿಲ್ಪ ರೂಪದಲ್ಲಿ ಭಕ್ತನಿಗೆ ಜ್ಞಾಪಿಸು ವುದಕ್ಕಾಗಿ ನಿರ್ಮಿತವಾಗಿವೆ ಎಂಬುದು ದೇವಾಲಯಗಳ ಬಗೆಗೆ ಭಾರತೀಯರ ಬಾಹ್ಯ ದೃಷ್ಟಿ—

ಲಿಂಗಸ್ವರೂಪದ ಕಲ್ಪನೆ

ದೇವರು ಮೇಲಿದ್ದಾನೆಂದು ತಿಳಿದು ಆಕಾಶದ ಕಡೆಗೆ ಕೈಮಾಡಿ ಬೇಡಿಕೊಳ್ಳುವ ರೂಢಿಯಿದೆ. ದೇವರು ಮೇಲಿದ್ದಾನೆಂದು ತಿಳಿದೇ ಗುಡ್ಡ ಪರ್ವತ ಮೊದಲಾದ ಉನ್ನತ ಪ್ರದೇಶಗಳಲ್ಲಿ ದೇವಾಲಯಗಳನ್ನು ಕಟ್ಟುವ ರೂಢಿ ಬಂದಿತು.

ಕೈಗೆ ಸಿಲುಕದ ಆಕಾಶದಂತೆಯೇ ಗೋಳಾಕಾರವಾಗಿ ಒಂದು ಗುರುತನ್ನು ಮಾಡಿಕೊಂಡು ಅದನ್ನು ಪೂಜಿಸಲು ಮೊದಲು ಪ್ರಾರಂಭಿಸಿದರು. ಆಕಾಶವು ಜಲ ವಿಶಿಷ್ಟವಾಗಿರುತ್ತದೆಂಬ ತಿಳಿವಳಿಕೆಯಿಂದಲೇ ಜಲಾಶಯಗಳ ದಂಡೆಯಲ್ಲಿ ಲಿಂಗವನ್ನು ಮಾಡಿ ಪೂಜಿಸಲಾರಂಭಿಸಿದರು.

ಮರಳು ಮತ್ತು ಮಣ್ಣಿನ ಲಿಂಗಪೂಜೆ ಬಹಳಕಾಲ ನಡೆದ ಅನಂತರವೇ ಅವು ಯಾವಾಗಲೂ ಪೂಜೆಗೆ ಅಳವಡುವುದಿಲ್ಲವೆಂದು ಕಲ್ಲಿನ ಲಿಂಗಗಳನ್ನು ಮಾಡಿ ಪೂಜಿಸುವ ಪದ್ಧತಿ ಉಂಟಾಗಿರಬೇಕು. ಅಭಿಷೇಕದ ನೀರು ಹೋಗುವುದಕ್ಕಾಗಿಯೇ ಜಲಧಾರಿಯು ಮಾಡಲ್ಪಟ್ಟಿತೆಂದು ತಿಳಿಯುವುದು ಸಮಂಜಸವಾದದ್ದು. ಲಿಂಗಪೂಜೆಯ ಚಿಹ್ನೆಯೂ ಅದರ ರೂಪದಲ್ಲಿಯೂ ಸುಧಾರಣೆಯಾಗುತ್ತಾ ಬಂದಿತು. ಲಿಂಗದ ಮೇಲೆ ನಿರಂತರ ನೀರು ಬೀಳುತ್ತಿರುವಂತೆ ಅದರ ಮೇಲೆ ಜಲಕುಂಭವನ್ನು ಕಟ್ಟುವ ರೂಢಿಯು ಇದೆ ಯಷ್ಟೆ. ಆಕಾಶದಲ್ಲಿ ನೀರು ನಿರಂತರ ಇದ್ದೇ ಇರುವುದರಿಂದ ತಾವು ಕಲ್ಪಿಸಿಕೊಂಡ

ಆಕಾಶವೆಂಬ ಲಿಂಗದ ಮೇಲೂ ನೀರು ನಿರಂತರ ಇರಲೆಂದೇ ಈ ಜಲಕುಂಭವನ್ನು ಕಟ್ಟಿದರು. ಮಳೆಬಾರದಿದ್ದಾಗ ಲಿಂಗವನ್ನು ಯಾವಾಗಲೂ ನೀರಿನಲ್ಲಿ ಮುಳುಗಿಸಿಬಿಟ್ಟರೆ ಮಳೆ ಬರುತ್ತದೆಂಬ ಕಲ್ಪನೆಯು ಆಕಾಶವನ್ನೇ ಲಿಂಗವನ್ನಾಗಿ ಮಾಡಿಕೊಂಡಿದ್ದಾರೆಂಬುದಕ್ಕೆ ಇದೊಂದು ದೃಷ್ಟಾಂತ. ಶಿವನು (ಲಿಂಗ) ಅಭಿಷೇಕಪ್ರಿಯನೆಂಬ ಕಲ್ಪನೆಯಿಂದ ಆಕಾಶ ಮತ್ತು ಮಳೆ ಇವುಗಳ ಪರಸ್ಪರ ಸಂಕೇತವೆಂದು ಊಹಿಸಬಹುದು. ವೈಶೇಷಿಕದರ್ಶನದಲ್ಲಿ ಆಕಾಶಕ್ಕೆ ' ಲಿಂಗ ' ಎಂದು ಹೇಳಿದೆ. " ನಿಷ್ಕ್ರಮಣಂ ಪ್ರವೇಶನಮಿತ್ಯಾಕಾಶಸ್ಯ ಲಿಂಗ " (೨-೧-೧೦)

ಆಕಾಶದ ಗುರುತೇ ಮೊದಲು ಲಿಂಗವಾಗಿ ಪೂಜೆಗೊಂಡಿತು. ಇದು ಭೌತಿಕ ಪೂಜೆ. ಎರಡನೆಯದಾದ ಪಿತೃಪೂಜೆ ಅಥವಾ ವಿಭೂತಿಪೂಜೆಗೆ ಬಂದಾಗ ಶಿವರೂಪವನ್ನು ತಾಳಿತು. ಮೂರನೆಯದಾಗಿ ಆ ಶಿವನೇ ಪರಬ್ರಹ್ಮ ಪರಮಾತ್ಮಾ ಎಂಬ ಹೆಸರುಗಳನ್ನು ಹೊಂದಿತು. ವಿಭೂತಿಪೂಜೆಯಲ್ಲಿ ಸರ್ವವ್ಯಾಪಿ ಪರಮಾತ್ಮನ ಪೂಜೆಯಾಯಿತು. " ಲೀನಾರ್ಥಗಮಕಂ ಚಿಹ್ನಂ ಲಿಂಗಮುತ್ಯಭಿಧೀಯತೆ ". ಅವ್ಯಕ್ತವಾಗಿರುವ ಜ್ಞಾನವನ್ನುಂಟುಮಾಡಿಕೊಡುವುದಕ್ಕೆ ಲಿಂಗ ಎಂದೂ ಶಿವಲಿಂಗವೆಂದರೆ ಶಿವನ ಗುರುತು ಎಂದು ಅರ್ಥವೇ ವಿನಾ ಬೇರೆ ಏನೂ ಅಲ್ಲ.

ಲಿಂಗಪೂಜೆಯ ಪ್ರಸಾರ

ಆಕಾಶದ ಪ್ರತೀಕವೇ ಮೊದಲು ಲಿಂಗವಾಯಿತು. ಸಮುದ್ರ ಜಲಾಶಯಗಳ ದಂಡೆಯಲ್ಲಿ ಮೊದಲು ಮಳಲುಲಿಂಗಪೂಜೆ ಪ್ರಾರಂಭವಾಯಿತು. ಕಾಲಕ್ರಮೇಣ ಲಿಂಗವು ಶಿಲೆಯಿಂದ ಮಾಡಲ್ಪಟ್ಟಿತು. ಹನ್ನೆರಡು ಜ್ಯೋತಿರ್ಲಿಂಗಗಳು ಭರತಖಂಡದಲ್ಲಿ ಪ್ರಸಿದ್ಧವಾಗಿವೆ. ಇವುಗಳ ದರ್ಶನ ಪೂಜೆ ಬಹುಜನರಿಗೆ ಶಕ್ಯವಿಲ್ಲವೆಂದು ಬಹುಜನರ ಪೂಜೆಗೆ ಅನುಕೂಲಪಡಿಸುವುದಕ್ಕಾಗಿ ಲಿಂಗಸ್ಥಾಪನೆಯು ಬಹುಪುಣ್ಯಕರವಾದದ್ದೆಂಬ ಭಾವನೆಯಿಂದ ತೀರ್ಥಕ್ಷೇತ್ರಗಳಲ್ಲಿ ಲಿಂಗಸ್ಥಾಪನೆಯುಂಟಾಯಿತು. ಕ್ಷೇತ್ರಯಾತ್ರೆಗಳಿಗೆ ಹೋಗಿ ಲಿಂಗದರ್ಶನ ಪೂಜೆಗಳನ್ನು ಹೊಂದುವುದು ಎಲ್ಲರಿಗೂ ಶಕ್ಯವಿಲ್ಲವೆಂದು ಗ್ರಾಮಾಂತರಗಳಲ್ಲಿ ಲಿಂಗಗಳನ್ನು ದೇವಾಲಯಗಳಲ್ಲಿ ಸ್ಥಾಪಿಸಲ್ಪಟ್ಟು ಲಿಂಗಪೂಜೆಯ ಪ್ರಸಾರ ಹೊಂದಿದಾಗ ತತ್ತ್ವಜ್ಞಾನವಿಶಿಷ್ಟರೂಪವು ಕೊಡಲ್ಪಟ್ಟಿತು. ಗ್ರಾಮಾಂತರ ಲಿಂಗಗಳು ಏರ್ಪಟ್ಟಾಗ ಗೃಹಲಿಂಗಗಳು ಏರ್ಪಟ್ಟವು. ಮನೆಯಲ್ಲಿ ಲಿಂಗವನ್ನಿಟ್ಟು ಪೂಜಿಸುವ ಪದ್ಧತಿಯುಂಟಾಯಿತು. ಪ್ರತಿದಿನವೂ ಲಿಂಗಪೂಜಾನಿಷ್ಠನಾದ ಭಕ್ತನು ಪರಸ್ಥಳ ಹೋದಾಗ್ಯೆ ಲಿಂಗಪೂಜೆ ತಪ್ಪಬಾರದೆಂದು ಜೊತೆಯಲ್ಲಿ ಲಿಂಗವನ್ನು ಪೆಟ್ಟಿಗೆಯಲ್ಲಿಟ್ಟುಕೊಂಡು ಹೋಗಲಾರಂಭಿಸಿ ಕೊನೆಗೆ ದೇಹದಮೇಲೆ ಲಿಂಗವನ್ನು ಧರಿಸುವ ರೂಢಿ ಬಂದಿರಬೇಕು.

ಲಿಂಗವು ಮೊದಲು ಆಕಾಶ ಪ್ರತೀಕವಾಗಿ ಏರ್ಪಟ್ಟು ಮಾನವನ ಆಧ್ಯಾತ್ಮ ಜ್ಞಾನವಿಕಾಸವಾದಂತೆ ಕೊನೆಗೆ ಅದು ವಿಶ್ವಪ್ರತೀಕವಾಯಿತು. ಲಿಂಗಸ್ವರೂಪವನ್ನು ಬಸವಣ್ಣನವರು ಈ ಕೆಳಗೆ ಕಂಡಂತೆ ವಿವರಿಸಿರುವರು—

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ
ಅಗಮ್ಯ-ಅಪ್ರಮಾಣ-ಅಗೋಚರ ಅಪ್ರತಿಮ ಲಿಂಗವೇ
ಕೂಡಲಸಂಗಮದೇವಯ್ಯ ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ.

ಲಿಂಗಪೂಜೆಯ ತತ್ತ್ವ

ಉಪಾಸನೆ ಇಲ್ಲದಂಥ ಯಾವ ಧರ್ಮವೂ ಜಗತ್ತಿನಲ್ಲಿಲ್ಲ. ಅದರ ಉದ್ದೇಶ ಪರಮಾತ್ಮನ ನೆನಪನ್ನು ಮಾಡಿಕೊಳ್ಳುವುದು. ಆ ನೆನಪಿನಿಂದ ಮಾನವನು ಕೆಟ್ಟದ್ದನ್ನು ತ್ಯಜಿಸಿ ಯಾವುದು ಉತ್ಕೃಷ್ಟವೋ ಅದನ್ನು ಸ್ವೀಕರಿಸಲು ಅವನ ಮನಸ್ಸು ಸಿದ್ಧವಾಗುವುದು. ಆದುದರಿಂದ ಪ್ರತಿಯೊಂದು ಧರ್ಮದವರೂ ಉಪಾಸನೆಗೆ ಬಹಳ ಮಹತ್ವ ಕೊಟ್ಟಿರುತ್ತಾರೆ. ಅವರು ಈ ಬಗ್ಗೆ ವಿಧಿಗಳನ್ನು ಕಲ್ಪಿಸಿ ಅವುಗಳನ್ನು ಪಾಲಿಸಬೇಕೆಂದು ಕಠಿಣವಾದ ನಿರ್ಬಂಧನೆಗಳನ್ನು ಮಾಡಿರುತ್ತಾರೆ.

ಒಂದು ಧರ್ಮದ ಉಪಾಸನಾ ಪದ್ಧತಿಗಳು ಮಾತ್ರ ಒಂದೇತರದವು ಇರುವುದಿಲ್ಲ. ಅವು ಬಹುಶಃ ಆ ಧರ್ಮದಲ್ಲಿ ದೇವರ ಸ್ವರೂಪದ ಬಗ್ಗೆ ಯಾವ ವಿಚಾರಗಳು ರೂಢವಾಗಿರುತ್ತವೆಯೋ ಅವುಗಳನ್ನವಲಂಬಿಸಿರುತ್ತವೆ. ದೇವರು ಒಬ್ಬ ಶ್ರೇಷ್ಠನಾದ ಮಾನವನೆಂದು ತಿಳಿದರೆ ಅವನನ್ನು ಗುರುವನ್ನು ಸೇವಿಸುವಂತೆ ಭಾವಿಸಿ ಉಪಾಸನೆ ಮಾಡುತ್ತಾರೆ. ಪರಮಾತ್ಮನು ನಿರಾಕಾರನೂ ಸರ್ವವ್ಯಾಪಿಯೂ ಆಗಿದ್ದಾನೆಂಬವೇ ವಿಚಾರಗಳು ಉತ್ಪನ್ನವಾದಾಗ ಪೂಜಾದಿಗಳಿಗೆ ಬದಲಾಗಿ ಆತನ ಸ್ತೋತ್ರ ಸ್ಮರಣೆ ಮತ್ತು ಧ್ಯಾನಕ್ಕೆ ಹೆಚ್ಚು ಮಹತ್ತ್ವ ಕೊಡುತ್ತಾ ಬರುವರು. ಹಾಗೆಯೇ ಯೋಗಾಭ್ಯಾಸಗಳು ತಲೆದೋರಿದವು. ಪರಮಾತ್ಮನು ಸರ್ವವ್ಯಾಪಿಯೂ ಜಗತ್ತಿನ ಚರಾಚರ ವಸ್ತುಗಳಲ್ಲಿದ್ದು ಅವುಗಳ ಪ್ರೇರಕನೂ ಆಗಿರುತ್ತಾ ಹಾಗೆಯೇ ಆತನ ಅಸ್ತಿತ್ವವು ತನ್ನಲ್ಲಿಯೇ ಇದೆ ಎಂದು ಭಾವಿಸಿ ಆತನ ಚಿಹ್ನೆಯ ರೂಪವಾದ ಲಿಂಗವನ್ನು ದೀಕ್ಷಾಪೂರ್ವಕ ಧಾರಣಮಾಡಿ ಉಪಾಸನೆ ಮಾಡುವುದು ವೀರಶೈವರಲ್ಲಿ ಪ್ರಚಾರಕ್ಕೆ ಬಂದಿತು. ಲಿಂಗಪೂಜೆಯ ಉದ್ದೇಶವು ಆತ್ಮಾನುಭವವೇ ಮುಖ್ಯವಾದದ್ದಾಗಿರುತ್ತದೆ. ಅಂದರೆ ತನ್ನನ್ನು ತಾನು ತಿಳಿದುಕೊಳ್ಳುವುದೇ ಆಗಿರುತ್ತದೆ. ಅಂದರೆ ಅವ್ಯಕ್ತಭಾವದಿಂದಿದ್ದ ಪರಮಾತ್ಮನನ್ನು ತನ್ನಲ್ಲಿ ಅಭಿವ್ಯಕ್ತಗೊಳಿಸುವುದಕ್ಕೆ ಸಹಾಯಕವಾಗಿರುವ ಕರ್ಮಗಳನ್ನು ಮಾಡುವುದೇ ಲಿಂಗಪೂಜೆಯ ಮಹತ್ವ. ಪರಮಾತ್ಮನು ಅವ್ಯಕ್ತವಾಗಿ ಮನುಷ್ಯನಲ್ಲಿ ಹೇಗೆ ವ್ಯಾಪಿಸಿರುವನೆಂಬುದನ್ನು ವ್ಯಕ್ತಗೊಳಿಸಬೇಕೆಂದು ಗುರುವು ಭಕ್ತನಿಗೆ ದೀಕ್ಷಾಪೂರ್ವಕ ಲಿಂಗಧಾರಣೆ ಮಾಡುವನು. ಲಿಂಗದ ಗುಣಗಳನ್ನು ತನ್ನಲ್ಲಿ ಪ್ರಕಟಪಡಿಸುವುದೇ ಲಿಂಗಪೂಜೆಯ ಮುಖ್ಯ ಉದ್ದೇಶ.

ಪ್ರತಿಯೊಬ್ಬ ಮನುಷ್ಯನಿಗೆ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಮೂರು ಶರೀರಗಳಿರುತ್ತವೆ. ಈ ಮೂರು ಶರೀರಗಳ ವ್ಯಾಪಾರಗಳು ಸರಿಯಾಗಿ ನಡೆದರೆ ಮಾತ್ರ ಅವನಿಂದ ಕಾರ್ಯಗಳು ಸುಸೂತ್ರವಾಗಿ ಆಗುತ್ತವೆ. ಈ ಮೂರು ಶರೀರಗಳು ಒಂದಕ್ಕೊಂದು ಪರಾವಲಂಬಿಗಳು. ಶರೀರದ ಬಾಹ್ಯಕ್ರಿಯೆಗಳು **ಸ್ಥೂಲಶರೀರ**ದಿಂದಾಗುತ್ತವೆ. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ವ್ಯವಹರಿಸುವ ಶರೀರವು **ಸೂಕ್ಷ್ಮಶರೀರವು.** ಈ ಸೂಕ್ಷ್ಮಶರೀರದ ಸಹಾಯವಿಲ್ಲದೆ **ಸ್ಥೂಲಶರೀರವು** ವ್ಯವಹರಿಸಲಾರದು. ಈ ಎರಡು ಶರೀರಗಳಿಗೂ ಚೈತನ್ಯ ಕೊಡುವುದು **ಕಾರಣಶರೀರ**. ಈ ಮೂರು ಶರೀರಗಳಲ್ಲಿ 'ಲಿಂಗ' ವನ್ನು ಚೈತನ್ಯಗೊಳಿಸದ ಹೊರತು ಪರಮಾತ್ಮನನ್ನು ಅರಿಯಲಾರನು. ಸ್ಥೂಲ ಶರೀರದಲ್ಲಿ ಪ್ರಜ್ವಲಿಸತಕ್ಕ ಲಿಂಗಕ್ಕೆ **ಇಷ್ಟಲಿಂಗ**ವೆಂತಲೂ ಸೂಕ್ಷ್ಮಶರೀರದಲ್ಲಿ ಪ್ರಜ್ವಲಿಸತಕ್ಕ ಲಿಂಗಕ್ಕೆ **ಪ್ರಾಣಲಿಂಗ**ವೆಂತಲೂ ಕಾರಣಶರೀರದಲ್ಲಿ ಪ್ರಜ್ವಲಿಸತಕ್ಕ ಲಿಂಗಕ್ಕೆ **ಭಾವಲಿಂಗ**ವೆಂತಲೂ ಹೆಸರುಗಳನ್ನು ವಚನಕಾರರು ಕೊಟ್ಟಿರುತ್ತಾರೆ. ಈ ಮೂರು ಶರೀರಗಳ ವ್ಯಾಪಾರಗಳು ಲಿಂಗಚೈತನ್ಯವುಳ್ಳವುಗಳಾಗಿ ಮಾಡುವುದೇ ಲಿಂಗಪೂಜೆಯ ಮುಖ್ಯತತ್ತ್ವವಾಗಿರುತ್ತದೆ. ಈ ದೃಷ್ಟಿಯಿಂದ ಪೂಜಾರ್ಚನೆಗಳನ್ನು ಮಾಡುವುದೇ ವೀರಶೈವನ ಕರ್ತವ್ಯ.

ಹಿರಿಯ ದಾರ್ಶನಿಕ ಅನುಭಾವಿಗಳಾದ ನಿಜಗುಣಶಿವಯೋಗಿಗಳು ಇಷ್ಟ ಪ್ರಾಣ ಭಾವಲಿಂಗಗಳ ಧ್ಯಾನವನ್ನು ಕುರಿತು ಡಾ|| ಆರ್. ಡಿ. ರಾನಡೆಯವರ ದಾರ್ಶನಿಕ ಚರ್ಚೆಯನ್ನು ಇಲ್ಲಿ ವಿವರಿಸುವುದು ಅಪ್ರಸ್ತುತವೆನಿಸಲಾರದು. ಇಷ್ಟಲಿಂಗವು ಒಂದು ಭೌತಿಕಲಿಂಗವು. ಇದರಲ್ಲಿ ಎರಡು ದಾರ್ಶನಿಕ ಅಂಶಗಳು ವಿಚಾರಣೀಯವಾದುವುಗಳು. ಈ ಲಿಂಗವು ಬೋಧಮಾತ್ರವಿರುವುದು. 'ಅದು ಶುದ್ಧ ಪ್ರಜ್ಞೆಯೊಡನೆ ಏಕರೂಪವಾದುದಿರುವುದು'. ಎರಡನೆಯದಾಗಿ, ಈ ಲಿಂಗವು 'ತನಗೆ ತಾನು ಆಧಾರವಾಗಿರ್ಪುದು.' ಯಾವುದು ತನ್ನಲ್ಲಿಯೇ ನೆಲಸಿ ತನ್ನಿಂದಲೇ ತನ್ನನ್ನು ಅರಿಯಬಲ್ಲುದೋ ಅದು ಮೂಲವಸ್ತು. ಈ ಎರಡು ದಾರ್ಶನಿಕ ಅಂಶಗಳನ್ನು ಇಷ್ಟಲಿಂಗದಲ್ಲಿ ಕಾಣಬಹುದು.

ಪ್ರಾಣಲಿಂಗವು ಪಾರಮಾರ್ಥಿಕ ಲಿಂಗ. ಅದರಲ್ಲಿ ನಾವು ನಾಲ್ಕು ಲಕ್ಷಣಗಳನ್ನು ಕಾಣಬಹುದು. ಮೊದಲನೆಯದಾಗಿ, ಅದು ನಾದರೂಪವಿರುವುದು. 'ಶ್ರವಣ ವಿಷಯವಾದ ಪರಮನಾದವೇ' ಅದು. ಈ ಪರಮನಾದವು ಅನಾಹುತನಾದವು. ಅದು ಶ್ರವಣರೂಪಿಯಾದ ಅನುಭವದ ವಿಷಯ. ಎರಡನೆಯದಾಗಿ, ಅದು ಒಳಗೆ ದೀಪವಿದ್ದ ವಿವರವುಳ್ಳ ಕುಂಭದೊಳಗಿಂದ ಹೊರಬರುವ ಬೆಳಕಿನ ಕಿರಣರೂಪವಿರುವುದು. ಅನೇಕ ವಿವರಗಳುಳ್ಳ ಕುಂಭದಲ್ಲಿಯ ದೀಪವು ಬೆಳಕನ್ನು ಹೊರಚೆಲ್ಲುವಂತೆ ಪ್ರಾಣಲಿಂಗವು ದೇಹದೊಳಗಿನ ವಿವರಗಳೊಳಗಿಂದ 'ದೇಹಕರಣ ನಿಕರ ಮುಖದೊಳು' ಬೆಳಕನ್ನು ಬೀರುತ್ತಿದೆ. ಮೂರನೆಯದಾಗಿ, ಅದು ಎಲ್ಲಾ ಬೇರೆ ಬೇರೆ ಚಕ್ರಗಳನ್ನು ವ್ಯಾಪಿಸುವುದು. ಕೊನೆಯದಾಗಿ, ಅದು ಕೆಂಪು ಮಿಂಚು ರನ್ನ ಚಿನ್ನ ಸೊಡರು

ಚಂಚಲಲತಾಗ್ನಿ ಇತ್ಯಾದಿ ಬಗೆಬಗೆಯ ಬಣ್ಣಗಳನ್ನು ಹೊರಚೆಲ್ಲುವುದು. ಒಟ್ಟಾರೆ ಪ್ರಾಣಲಿಂಗದ ನಾಲ್ಕು ಪ್ರಧಾನಲಕ್ಷಣಗಳನ್ನು ಗಮನಿಸಬಹುದು. ಅದು ಜ್ಯೋತಿರ್ಮಯವಿರುವುದು; ಅದರಲ್ಲಿ ಆಂತರಿಕ ಸಾಮರಸ್ಯವಿರುವುದು; ಅದು ಬಣ್ಣಗಳಿಂದ ತುಂಬಿರುವುದು; ಹಾಗೂ ಅದು ಇಡೀ ಶರೀರವನ್ನು ವ್ಯಾಪಿಸಿರುವುದು. ಇದು ಪ್ರಾಣಲಿಂಗದ ಸ್ವರೂಪ.

ಭಾವಲಿಂಗವೆಂಬುದು ಒಂದು ಮಹತ್ವದ ದಾರ್ಶನಿಕ ಕಲ್ಪನೆ. ಭಾರತೀಯರ ದರ್ಶನವನ್ನು ಚೆನ್ನಾಗಿ ಅಭ್ಯಸಿಸಿದವರೇ ಅದನ್ನು ಚೆನ್ನಾಗಿ ಪೂರ್ತಿಯಾಗಿ ಅರಿಯಬಲ್ಲರು. ಭಾವಲಿಂಗವು ಸರ್ವವ್ಯಾಪಿಯಾದುದು. ಇದನ್ನು ಇಷ್ಟ ಪ್ರಾಣಲಿಂಗಗಳ ಆವಿಷ್ಕಾರಗಳೆಂದು ಭಾವಿಸಬಹುದು. ಇದು ಆ ಲಿಂಗಗಳ ಮುಖಾಂತರ ಹೊಳೆಯುವುದು. ಈ ಲಿಂಗಗಳನ್ನು ಪರಸ್ಪರ ಹೋಲಿಸಿನೋಡಿದರೆ, ಯೋಗದ ಪರಿಭಾಷೆಯಲ್ಲಿ ಇಷ್ಟಲಿಂಗವು ಭೌತಿಕ ಲಿಂಗವಿರುವುದು, ಪ್ರಾಣಲಿಂಗವು ಪಾರಮಾರ್ಥಿಕ ಲಿಂಗವಿರುವದು, ಭಾವಲಿಂಗವು ದಾರ್ಶನಿಕಲಿಂಗವಿರುವದು. ಈ ರೀತಿ ಭೌತಿಕತೆ, ಪಾರಮಾರ್ಥಿಕತೆ ಹಾಗೂ ದಾರ್ಶನಿಕತೆ—ಇವು ಈ ಲಿಂಗಗಳ ಮೂರು ಪ್ರಧಾನ ಸ್ವರೂಪಗಳು. ದಾರ್ಶನಿಕ ದೃಷ್ಟಿಯಿಂದ ಕಂಡಾಗ ನಾವು ಮೂರು ಮಹತ್ವದ ವಿಷಯಗಳನ್ನು ಗಮನಿಸಬಹುದು. ಭಾವಲಿಂಗವು 'ಮೂಲಕಾರಣ'. ದಾರ್ಶನಿಕರು ಹೇಳುವಂತೆ ಸ್ವಂತ ಕಾರಣ ಕಾರ್ಯಕಾರಣ ಕರ್ಮಗಳು ಈ ಪರಮಕಾರಣದ ಆವಿರ್ಭಾವಗಳು. ಎರಡನೆಯದಾಗಿ, ಭಾವಲಿಂಗವು 'ಅಖಿಲಸಾಕ್ಷಿಕವಾದುದು'. ಅದು ಸೃಷ್ಟಿಯ ಕಾರ್ಯದಲ್ಲಿ ಸಕ್ರಿಯ ಭಾಗವಹಿಸುವುದಿಲ್ಲ. ಕೇವಲ ಪರಮಸಾಕ್ಷಿಯಾಗಿರುವುದು. ಮೂರನೆಯದಾಗಿ, ಭಾವಲಿಂಗವು 'ಸಾಟಿದೋರದ ತೃಪ್ತಿಮಯವಾದುದು'. ಅದು ಉನ್ನತತಮ ಆನಂದಮಯವು. ಈ ರೀತಿ ಭಾರತೀಯ ದಾರ್ಶನಿಕರು ಪರತತ್ತ್ವವನ್ನು ಮಂಡಿಸಿರುವರು.

ಬಸವೇಶ್ವರರು ಲಿಂಗತತ್ತ್ವವನ್ನು ಹೀಗೆ ತಿಳಿಸಿರುವರು.

> ಅಯ್ಯಾ ಮರದೊಳಗೆ ಅಗ್ನಿ ಇದ್ದರೇನಯ್ಯ !
> ಮಥಿಸಿ ತೋರುವರಿಲ್ಲದನ್ನಕ್ಕರ ಕಾಣಬಹುದೆ !
> ಜಗದೊಳಗೆ ಕೂಡಿ ಪರಿಪೂರ್ಣ ಶಿವನೆಂದರೆ
> ಅಂತರಂಗದಲ್ಲಿ ಕಾಣಬಹುದೆ ? ಆದಿಲಿಂಗ ಅನಾದಿ ಶರಣನ ಭೇದವ ತಿಳುಹಿ
> ನಿಜಪ್ರಾಣದೊಳಗಿಪ್ಪ ಸುಜ್ಞಾನ ಲಿಂಗವ ಕರಸ್ಥಲಕ್ಕೆ ತಂದು,
> ಆ ಕರಸ್ಥಲದ ಲಿಂಗವೆನ್ನ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋರಿ,
> ನಿತ್ಯ ನಿತ್ಯ ನಿಜಲಿಂಗೈಕ್ಯವಹ ಹೊಲಬಿನ ಹರಿವ ತೋರಿಸಿ
> ಮರ್ತ್ಯಲೋಕದೊಳಗೆಲ್ಲ ಇಂದು ಮೊದಲಾಗಿ ಪ್ರಾಣಲಿಂಗದ ಘನವಹರಹಿ
> ಶಿವಭಕ್ತಿಯನ್ನುದ್ಧರಿಸಿನು.
>
> —ಶೂನ್ಯಸಂಪಾದನೆ, ಪುಟ. ೮೦-೮೧

ಕಾಶ್ಮೀರಶೈವ-ವೀರಶೈವ

ತಾತ್ತ್ವಿಕದೃಷ್ಟಿಯಿಂದ ಪರಿಶೀಲಿಸಿದರೆ ಕಾಶ್ಮೀರಶೈವ ವೀರಶೈವಗಳಿಗಿರುವ ಸಾಮ್ಯವು ಕಾಣಬರುವುದು. ಈ ಎರಡು ಸಂಪ್ರದಾಯದ ಮೂಲತತ್ತ್ವಗಳು ಒಂದೇ ಆಗಿವೆ. ಕಾಶ್ಮೀರ ಶಿವಾದ್ವೈತ ತತ್ತ್ವಗಳು ಒಳಮೂಡಿದ್ದು ೯ನೇ ಶತಮಾನದಿಂದ ೧೨ನೇ ಶತಮಾನದ ವರೆಗೆ. ವೀರಶೈವಧರ್ಮವು ಪ್ರಚಾರಕ್ಕೆ ಬಂದದ್ದು ೧೧ನೇ ಶತಮಾನ ದಿಂದೀಚೆಗೆ ಎಂದು ಇತಿಹಾಸಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಆಗಿನ ಕಾಲದಲ್ಲಿ ಕಾಶ್ಮೀರಕ್ಕೂ ಭಾರತದ ದಕ್ಷಿಣದೇಶಕ್ಕೂ ಕರ್ನಾಟಕಕ್ಕೂ ವಿದ್ವಾಂಸರ ಸಂಪರ್ಕ ವಿತ್ತೆಂಬುದು ಇತಿಹಾಸಗ್ರಂಥ ರಾಜತರಂಗಿಣಿ ಮತ್ತು ಕರ್ನಾಟಕದಲ್ಲಿ ದೊರೆತಿರುವ ಶಾಸನಗಳಿಂದ ವ್ಯಕ್ತಪಟ್ಟಿದೆ. ಇವೆರಡು ಸಂಪ್ರದಾಯಗಳಿಗೂ ವಿಚಾರವಿನಿಮಯ ವಿತ್ತೆಂದು ಊಹಿಸಲು ಅವಕಾಶವಿದೆ. ಈ ಎರಡು ಸಂಪ್ರದಾಯಗಳೂ ಅನುಸರಿಸಿರುವ ಶೈವಧರ್ಮತತ್ತ್ವಗಳ ಸೂಕ್ಷ್ಮಪರಿಚಯ ಹೀಗಿದೆ—

ಶಿವನ ಶಕ್ತಿಪರಿಣಾಮವೇ ಈ ಸೃಷ್ಟಿ. ಮೂಲತಃ ಶಿವನು ಆವರಣ ಮಾಡಿಕೊಂಡು ೩೬ ತತ್ತ್ವಗಳಿಂದ ಆಚ್ಛಾದಿತನಾಗಿ ಜೀವನಾಗುತ್ತಾನೆ. ಹಾಗೆಯೇ ಶಿವನಿಂದ ಪ್ರಪಂಚ ಸೃಷ್ಟಿಯು ಆವಿರ್ಭಾವವಾಗಿದೆ. ಈ ತತ್ತ್ವಗಳ ಸಮಗ್ರವಾದ ವಿಮರ್ಶೆಯಿಂದ ಜಿಜ್ಞಾಸು ವಿಗೆ ವ್ಯವಹಾರ ಪ್ರಪಂಚದಲ್ಲಿ ನಡೆಯುವ ಘಟನೆಗಳೂ ಸುಖದುಃಖಾನುಭವಗಳೂ ಶಿವನ ಮಾಯಾತತ್ತ್ವದ ಪ್ರಭಾವದಿಂದ ನಡೆಯುವುವೆಂದು ಗೋಚರವಾಗುತ್ತದೆ. ಹಾಗೆಯೇ ಮಾಯೆಯು ಜೀವಾತ್ಮನ ಜ್ಞಾನಸಂಕೋಚಕ್ಕೆ ಸಾಕ್ಷಾತ್ಕಾರವಾಗಿಯೂ ದೇಹ ಇಂದ್ರಿಯಾದಿಗಳ ಮೂಲಕ ಪರಂಪರಾಕಾರಣವಾಗಿಯೂ ಇದೆ ಎಂದು ಗೊತ್ತಾ ಗುತ್ತದೆ. ಜೀವಾತ್ಮನಲ್ಲಿ ಅಂತರ್ಯವಾಗಿ ಉಂಟಾಗುವ ಆನಂದ ಮತ್ತು ಜ್ಞಾನ ವಿಕಾಸಗಳು ಶುದ್ಧವಿದ್ಯಾತತ್ತ್ವಗಳ ಸಂಪರ್ಕ ಮತ್ತು ಅವುಗಳ ಅನುಭವವೆಂಬುದು ವೇದ್ಯವಾಗದೆ ಇರದು. ಹೀಗೆ ತತ್ತ್ವವಿಮರ್ಶೆಯು ವ್ಯವಹಾರದಲ್ಲಿ ಶಾಂತಿಯನ್ನೂ ಅಂತರಂಗಿಕವಾಗಿ ಜ್ಞಾನವಿಕಾಸವನ್ನುಂಟುಮಾಡುವುದಾಗಿದೆ. ಜಗತ್ತು ಪರಶಿವಬ್ರಹ್ಮದ ಪರಿಣಾಮ.

ಜಗತ್ತು ಸತ್ಯ, ಚಿತ್‌ಶಕ್ತಿ ಸಂಕೋಚರೂಪವಾದ ಚಿತ್ತವಿಶಿಷ್ಟನೇ ಜೀವನು. ಈ ರೀತಿಯಾಗಿ ಜಗತ್ತು ಜೀವಾತ್ಮ ಇವೆರಡು ಒಬ್ಬನೇ ಪರಶಿವಬ್ರಹ್ಮನಿಂದ ಅಭಿವ್ಯಕ್ತ ವಾದವುಗಳು. "ಶಿವಜೀವರೆಂಬರೆರಡಿಲ್ಲ, ಪರಶಿವಮಯವೇ ಈ ಜಗವೆಲ್ಲ" ಎಂಬ ತತ್ತ್ವವು ಈ ಎರಡು ಸಂಪ್ರದಾಯಗಳಿಗೂ ಸಮಾನ. ಹಾಗೆಯೇ ಪರತತ್ತ್ವ, ಶಿವ ಶಕ್ತಿ, ೩೬ ತತ್ತ್ವಗಳು, ಪ್ರಪಂಚಸೃಷ್ಟಿ, ಜೀವಾತ್ಮನನ್ನು ಆವರಿಸಿರುವ ಕಂಚುಕಗಳು ಮತ್ತು ಮೂರುಮಲಗಳು, ಷಡಧ್ವಗಳು, ಶಕ್ತಿಪಾತ (ಶಿವಾನುಗ್ರಹ) ಮೊದಲಾದ ಪ್ರಕ್ರಿಯೆಗಳಲ್ಲಿ ಕಾಶ್ಮೀರ ಶಿವಾದ್ವೈತಕ್ಕೂ ವೀರಶೈವ ಶಕ್ತಿವಿಶಿಷ್ಟಾದ್ವೈತಕ್ಕೂ ಇರುವ ನಿಕಟ ಸಾಮ್ಯವನ್ನು ಕಾಣಬಹುದು. ವೀರಶೈವಗ್ರಂಥಗಳಾದ ಸಿದ್ಧಾಂತ ಶಿಖಾಮಣಿ,

ವೀರಶೈವಾನಂದಚಂದ್ರಿಕೆ, ಶಿವಾದ್ವೈತಮಂಜರಿ ಮತ್ತು ಶ್ರೀಕರಭಾಷ್ಯ ಇವುಗಳು ಕಾಶ್ಮೀರ ಶಿವಾದ್ವೈತವನ್ನೇ ತನ್ನದೇ ಆದ ರೀತಿಯಲ್ಲಿ ಸಮರ್ಥಿಸುವುದಾಗಿದೆ ಮತ್ತು ಎರಡೂ ಸಂಪ್ರದಾಯಗಳೂ ಅನುಭವವನ್ನೇ ಮುಂದಿಟ್ಟುಕೊಂಡು ಬಂದಿರುವ ಶಿವಾದ್ವೈತತತ್ತ್ವವನ್ನೇ ಪ್ರತಿಪಾದನೆ ಮಾಡುವವುಗಳಾಗಿವೆ.

ಕಾಶ್ಮೀರಶೈವಕ್ಕೂ ವೀರಶೈವಕ್ಕೂ ಇರುವ ಹೋಲಿಕೆಗಳನ್ನು ಈ ಕೆಳಗೆ ವಿವರಿಸಿರುವ ಪ್ರಮಾತೃಗಳ ವಿವರಣೆಯಲ್ಲಿಯೂ ಕಾಣಬಹುದು. ವೀರಶೈವರಲ್ಲಿ ಕಾಣಬರುವ ಲಿಂಗಸ್ಥಲದ ಆರುಭೇದಗಳೂ ಅಂಗಸ್ಥಲದ ಆರುಭೇದಗಳೂ ಸಮಾನವಾಗಿವೆ. ಸಕಲ, ಪ್ರಳಯಾಕಲ, ವಿಜ್ಞಾನಾಕಲ, ತ್ಯಾಗಾಂಗಪ್ರಕಾಶ, ಭೋಗಾಂಗಪ್ರಕಾಶ, ಯೋಗಾಂಗ ಪ್ರಕಾಶ ಎಂಬ ಆರುವ್ಯಕ್ತಿಗಳೂ ಕಾಶ್ಮೀರಪ್ರಮಾತೃವರ್ಗಕ್ಕೆ ಸಮಾನವಾದವುಗಳೆನ್ನಬಹುದು. 'ವಿಜ್ಞಾನಾಕಲಾ' ಅಥವಾ ವಿಜ್ಞಾನಕೇವಲಿಗೆ ಕರ್ಮಸಂಬಂಧವೂ ಕಲಾಸಂಬಂಧವೂ ಇಲ್ಲ. ಜ್ಞಾನಿ ಎನ್ನಿಸಿಕೊಂಡಿರುವ ಇವನಿಗೆ ಮಾಯಾಸಂಬಂಧಮಾತ್ರ ಇರುವುದು. ಪ್ರಳಯಕೇವಲಿಗೆ ಮಲ ಮತ್ತು ಕರ್ಮ ಎಂಬ ಎರಡು ಬಂಧನಗಳಿರುವುವು. ಸಕಲನಿಗೆ ಮೂರು ಮಲಗಳಿರುವುವು. ತ್ಯಾಗಾಂಗ ಭೋಗಾಂಗ ಯೋಗಾಂಗ ಎಂಬ ಸ್ಥಳವಿಶೇಷ ರೂಪವಾದ ಚಿತ್ಪ್ರಕಾಶಗಳು ಕ್ರಮವಾಗಿ ಕಾಶ್ಮೀರಶೈವಸಂಪ್ರದಾಯದ ಮಂತ್ರ, ಮಂತ್ರೇಶ್ವರ, ಮಂತ್ರಮಹೇಶ್ವರ ಎಂದೆನಿಸಿಕೊಳ್ಳುವುವು. 'ತ್ಯಾಗಾಂಗ ಪ್ರಕಾಶವು 'ಕರ್ಮವೆಂಬ ಒಂದೇ ಮಲದ ವಾಸನಾಮಾತ್ರದಿಂದ ಕೂಡಿರುವುದರಿಂದ 'ಮಂತ್ರ'ವೆನಿಸಿಕೊಳ್ಳುವುದು. 'ಭೋಗಾಂಗ ಪ್ರಕಾಶವು' ಕರ್ಮ ಮಲವಾಸನೆಯ ವಿಷಯದಲ್ಲಿ ಔನ್ಮುಖ್ಯವನ್ನು ಪಡೆದಿರುವುದರಿಂದ 'ಮಂತ್ರೇಶ್ವರ'ವೆನ್ನಿಸಿಕೊಳ್ಳುವುದು. 'ಯೋಗಾಂಗ ಪ್ರಕಾಶವು' ಕರ್ಮವಾಸನೆಯ ವಿಷಯವನ್ನೇ ಪಡೆಯದಿರುವುದರಿಂದ 'ಮಂತ್ರಮಹೇಶ್ವರ'ವೆನ್ನಿಸಿಕೊಳ್ಳುವುದು. ಈ ಮೇಲಿನ ವಿವರಗಳು ಶಿವಾದ್ವೈತ ಮಂಜರಿಯಲ್ಲಿ ಉದಹರಿಸಿರುವ ತತ್ತ್ವಪ್ರಕಾಶಿಕಾ ಗ್ರಂಥದ ಆಧಾರದ ಮೇಲೆ ಉಕ್ತವಾಗಿದೆ. ಈ ಎರಡುಸಂಪ್ರದಾಯಗಳು ಅನುಭವಾರೂಢವಾದವುಗಳು, ಸ್ವತಃ ಸಿದ್ಧವಾದವುಗಳು.

ಕೆಲವು ಪರಿಭಾಷೆಗಳು ಆಯಾ ದೇಶ ಕಾಲಕ್ಕನುಸಾರವಾಗಿ ಎಲ್ಲಾ ಮತಗಳಲ್ಲಿಯೂ ಮಾರ್ಪಡುವಂತೆ ಇಲ್ಲಿಯೂ ಮಾರ್ಪಟ್ಟಿವೆ. ಕಾಲಪ್ರವಾಹವು ಬದಲಾವಣೆ ಆದಹಾಗೆಲ್ಲಾ ದಾರ್ಶನಿಕರು ಭಾವುಕರು ಆಗಿನ ಕಾಲದ ಸಮಸ್ಯೆಗಳನ್ನು ಗಣನೆಗೆ ತಂದುಕೊಂಡು ಆಗಿನ ಜನಗಳ ಆಚರಣೆಗೆ ಹೊಂದುವಂತೆ ಮಾರ್ಪಾಡುಗಳನ್ನು ಸೂಚಿಸಿರುತ್ತಾರೆ. ಮೂಲಭೂತವಾದ ತತ್ತ್ವಸ್ವರೂಪವನ್ನು ಬದಲಾವಣೆಯಿಲ್ಲದೆ ನಿರೂಪಿಸಿದರೂ ಮಿಕ್ಕ ವ್ಯವಹಾರ ಆಚರಣೆಗಳಲ್ಲಿ ಬದಲಾವಣೆಗಳು ಕಾಲಕ್ರಮದಲ್ಲಿ ಉಂಟಾಗುತ್ತವೆ. ಎಲ್ಲಾ ಮತಗಳೂ ಸಂಪ್ರದಾಯಗಳೂ ಕಾಲಕ್ರಮದಲ್ಲಿ ಇಂತಹ ಬದಲಾವಣೆಗಳನ್ನು ಪಡೆಯುತ್ತವೆ. ಇದು ಪ್ರಕೃತಿಯ ಮಹಿಮೆ.

ಪಾರಿಭಾಷಿಕ ಶಬ್ದಗಳ ಅರ್ಥವಿವರಣೆ

ಅಕುಲ—ಅ ಅಂದರೆ ಚಿತ್ತು ; ಕುಲ ಅಂದರೆ ಶರೀರ—ಚಿಚ್ಛರೀರ.

ಅಕ್ರಮ—ದೇಶಕಾಲದಶಾ ಇವುಗಳಿಂದ ನಿಯಮಿತವಾಗದೆ ಪ್ರಸರಿಸುವುದು.

ಅಖ್ಯಾತಿ—ಜ್ಞಾನಶಕ್ತಿಯ ಸಂಕೋಚಾವಸ್ಥೆ. 'ಭೇದಾಗ್ರಹರೂಪಾಖ್ಯಾತಿಃ'—ಭೇದವು ತಿಳಿಯದಿರುವುದು.

ಅಜ್ಞಾನ—ಲೌಕಿಕವಾಗಿ ತಪ್ಪುತಿಳಿವಳಿಕೆ.

ಅಂತಕೋಟಿ—ದ್ವಾದಶಾಂತ ತಲೆಯಲ್ಲಿರುವ ಬ್ರಹ್ಮರಂಧ್ರದ ಒಂದಂಶ ; ಆದಿ ಕೋಟಿ=ಹೃದಯ.

ಅಣು—ಜೀವಾತ್ಮ, ದೇಹ, ಪುರ್ಯಷ್ಟಕ, ಪ್ರಾಣಗಳಿಗೆ ಆಶ್ರಯವಾದ ಚಿತ್ತವುಳ್ಳ ಪ್ರಮಾತೃ.

ಅನಾಶ್ರಿತಶಿವ— ಸ್ವತಂತ್ರೇಶ್ವರ, ಶೂನ್ಯಾತಿ ಶೂನ್ಯಾತ್ಮ.

ಅನುಗ್ರಹ—ಶಕ್ತಿಪಾತ-ವೃತ್ತಿಗಳು ಸಂಸ್ಕಾರರೂಪ ಬಿಟ್ಟು ಚಿತ್ತಿನಲ್ಲಿ ನಿಶ್ಶೇಷವಾಗಿ ಲಯವಾಗುವುದು.

ಅನುತ್ತರ—ಯಾವುದರ ಆಚೆ ಏನೂ ಇಲ್ಲವೋ ಅದು.

ಅನುಸೃತ್ಯ ಸಂಧಾನ—ಹಿಂದಿನ ಮತ್ತು ಈಗಿನ ಪರಿಸ್ಥಿತಿಯನ್ನು ತಿಳಿದು ಒಂದೇ ಆಕಾರವನ್ನು ಧ್ಯಾನಮಾಡುವುದು.

ಅಂತಕೋಟಿ—ದ್ವಾದಶಾಂತ, ತಲೆಯಲ್ಲಿರುವ ಬ್ರಹ್ಮರಂಧ್ರದ ಒಂದಂಶ.

ಆದ್ಯಂತಕೋಟಿ
ಆದಿಕೋಟಿ } ಹೃದಯ.

ಅನಚ್ಕ—ಉಚ್ಚಾರಣೆಗೆ ಬರುವುದಕ್ಕೆ ಮುಂಚೆ ಇರುವ ಅರ್ಧಾಕ್ಷರಗಳು—ಸ್ವರಸಹಿತ ವಾಗಿಲ್ಲದೆ ಇರುವ ಅಕ್ಷರಗಳು ಉಚ್ಚಾರಸಹಿತದಿಂದ ಉಚ್ಚಾರರಹಿತಕ್ಕೆ ಹೋಗು ವುದು. ಇದರಿಂದ ವಾಚ್ಯವಾಚಕ ಭಾವವಿಲ್ಲದಿರುವ ಅಭೇದಸ್ಥಿತಿಯು ಅನುಭವಕ್ಕೆ ಬರುತ್ತದೆ.

ಆಭಾಸನ—ಶಕ್ತಿಯಲ್ಲಿ ಉನ್ಮೇಷ.

ಅಹಂ—ಕೇವಲ ಗ್ರಾಹಕನಾಗಿರುವ ಆತ್ಮಸ್ವರೂಪ. ಎಲ್ಲಾ ಪ್ರಕಾಶಗಳೂ ಆತ್ಮನಲ್ಲಿ ವಿಶ್ರಾಂತವಾಗಿ 'ಅಹಂ 'ಭಾವವನ್ನು ಪಡೆಯುತ್ತವೆ. ಇದನ್ನೇ ಈಶ್ವರ ಭಾವ ವೆನ್ನುತ್ತಾರೆ. ಇದು ಸ್ವಸ್ವರೂಪದಲ್ಲಿ ವಿಶ್ರಾಂತಿಯನ್ನು ಹೊಂದುವುದು. 'ಯಾ ಸ್ವರೂಪೆ ವಿಶ್ರಾಂತಿಃ ವಿಮರ್ಶಃ ಸೋಹಮಿತ್ಯಯಂ'.

ಅಹಂತಾ—ನಾನು ಎಂಬ ಆತ್ಮಭಾವನೆ ಪೂರ್ಣಾಹಂತಾ ಅಲ್ಪಾಹಂತಾ ಎಂದು ಎರಡು ರೂಪವಾಗಿದೆ. ಪೂರ್ಣಾಹಂತಾವಸ್ಥೆಯಲ್ಲಿ ವಿಶ್ವಾತ್ಮಕ ಭಾವನೆ. ಅಲ್ಪಾಹಂತಾವಸ್ಥೆಯಲ್ಲಿ ಜೀವಾತ್ಮನ ಸಂಕುಚಿತ ಭಾವನೆ.

ಅಪೋಹನಶಕ್ತಿ—ಅಖಂಡವಾದ ಚಿತ್ತು ಸಖಂಡವಾಗಿ ವ್ಯವಹರಿಸುವುದು, ಇರುವುದನ್ನು ತಪ್ಪಾಗಿ ತಿಳಿಯುವುದು, ಚಿತ್ತತ್ವವು ಚಿನ್ಮಾತ್ರಪ್ರಕಾಶರೂಪವಾಗಿರುವುದನ್ನು ಬಿಟ್ಟು ಭಿನ್ನವಾಗಿರುವ ದೇಹ, ಇಂದ್ರಿಯ, ಪ್ರಾಣಗಳಲ್ಲಿ "ಸ್ಥೂಲೋಽಹಂ, ಕೃಶೋಽಹಂ" ಅನ್ನುವ ಭಾವಗಳನ್ನು 'ಅಹಂ ಜಾನಾಮಿ' ಅನ್ನುವಂತೆ ಭಿನ್ನವಾಗಿ ತಿಳಿಯುವುದು.

ಅಲ್ಪಾಹಂತಾ—ಸಂಕುಚಿತವಾಗಿರುವ ಜೀವಾವಸ್ಥೆ.

ಆಭಾಸನ—ಶಕ್ತಿಯ ಉನ್ಮೇಷ, ಪ್ರಕಾಶ, ಸೃಷ್ಟಿ.

ಆಣವಮಲ—'ಅಪೂರ್ಣಂ ಮನ್ಯತಾರೂಪಂ ಆಣವಮಲಂ'. ಇಚ್ಛಾಶಕ್ತಿ ಸಂಕೋಚರೂಪವಾದದ್ದು. ಶರೀರಾದಿಗಳಲ್ಲಿ 'ನಾನು' ಎಂಬ ಅಭಿಮಾನ.

ಆಣವೋಪಾಯ—ವಿಕಲ್ಪಗಳನ್ನು ಸಂಸ್ಕರಿಸಿ ಚಿತ್ತವಿಶ್ರಾಂತಿ ಪಡೆಯುವುದು. ಮಂತ್ರ ಜಪ ಧ್ಯಾನ ವರ್ಣ ಸ್ಥಾನಗಳ ಅನುಸಂಧಾನಗಳಿಂದ ಬರುವ ಸಮಾವೇಶ.

ಅಲಂಗ್ರಾಸಯುಕ್ತಿ—ಚಿತ್ತಿನಲ್ಲಿ ಸಂಸ್ಕಾರರೂಪವಾಗಿದ್ದನ್ನು ನಿಶ್ಶೇಷವಾಗುವಂತೆ ಮಾಡುವ ಪರಿಶ್ರಮವಿಶೇಷ. ಈ ಯುಕ್ತಿಯಿಂದ ಅನುಗ್ರಹವಿಲಾಪಗಳುಂಟಾಗುತ್ತವೆ.

ಇದಂತಾ—ಇದು ಎಂದರ್ಥ, ತಿಳಿಯಲ್ಪಡುವ ಪದಾರ್ಥ ಅಥವಾ ತತ್ತ್ವ.

ಇಚ್ಛಾಶಕ್ತಿ—ಸಂಕಲ್ಪ ರೂಪವಾದದ್ದು. ಏನುಮಾಡಬೇಕೆನ್ನುವ ಆತಂಕ.

ಈಶ್ವರತತ್ತ್ವ—೩೬ ತತ್ತ್ವಗಳಲ್ಲಿ ಒಂದು. ಕ್ರಿಯಾಶಕ್ತಿ ಉದ್ರಿಕ್ತವಾಗಿರುವುದು. ಇಲ್ಲಿ ಗ್ರಾಹ್ಯಗ್ರಾಹಕ ಭಾವಗಳು ಸ್ಫುಟವಾಗಿರುವ ಸ್ಥಿತಿ.

ಉದಾನಶಕ್ತಿ—ಪಂಚಪ್ರಾಣಶಕ್ತಿಗಳಲ್ಲಿ ಒಂದು. ಆಧ್ಯಾತ್ಮವಿಕಾಸವನ್ನುಂಟುಮಾಡುವ ಶಕ್ತಿ.

ಉನ್ಮೀಲನ—ಚಿತ್ತಿನಲ್ಲಿರುವ ವೃತ್ತಿಗಳನ್ನು ಹೊರಹೊಮ್ಮಿಸುವಿಕೆ.

ಉನ್ಮೇಷ—ನಿಸ್ತರಂಗವಾಗಿರುವುದು ಚಂಚಲವಾಗುವಿಕೆ. ಶಿವನು ಶಕ್ತಿಪ್ರಸಾರ ಮಾಡುವುದರಲ್ಲಿ ಮೊದಲನೆಯ ಸ್ಫುರಣವೇ ಉನ್ಮೇಷ. ಚಿತ್ತು–ಬಹುಮುಖವಾಗುವ ಮೊದಲನೆಯ ಚಲನಶಕ್ತಿಯ ಆವಿರ್ಭಾವ. ಸ್ಪಂದ, ಆಭಾಸನ, ಉದಯ ಎಂಬವು ಇದೇ ಅರ್ಥವನ್ನು ಸೂಚಿಸುತ್ತವೆ. ಸೂಕ್ಷ್ಮತತ್ತ್ವಗಳಿಂದ ಹೊರಹೊಮ್ಮುವ ಸ್ಥೂಲತತ್ತ್ವಗಳನ್ನು ತಿಳಿಯುವುದಕ್ಕೆ ಉನ್ಮೇಷ ಪದವನ್ನು ಉಪಯೋಗಿಸುತ್ತಾರೆ.

ಉನ್ಮುಖೀಕರಣ—ಇಂದ್ರಿಯದ್ವಾರಾ ಪ್ರಕಾಶಿಸುತ್ತಿರುವ ಶಕ್ತಿಯನ್ನು ಉಪಸಂಹರಿಸುವುದು.

ಉಪಾದಾನಕಾರಣ—ಎಲ್ಲಾ ವಿಕಾಸಗಳಿಗೂ ಆಧಾರವಾಗಿರುವ ಶಿವನೊಬ್ಬನೇ ಈ ಸೃಷ್ಟಿಗೆ ಉಪಾದಾನಕಾರಣನೂ ನಿಮಿತ್ತಕಾರಣನೂ ಆಗಿದ್ದಾನೆ.

ಊರ್ಧ್ವಕುಂಡಲಿನಿ—ಕುಂಡಲಿಯ ಮೇಲ್ಭಾಗದಲ್ಲಿರುವ ಸ್ವರೂಪಾನುಭವಗಳು. ಮನೋವ್ಯಾಪಾರಗಳಿಗಿಂತ ಮೇಲಿರುವ ಸ್ವರೂಪಾನುಭವ. ಇದಕ್ಕೆ ಉನ್ಮನೀ ಅಂತಲೂ ಹೆಸರು.

ಐಶ್ವರ್ಯ—ಎಲ್ಲವನ್ನೂ ಸ್ವಶಕ್ತಿಯಿಂದಲೇ ತನ್ನಿಷ್ಟ ಬಂದಂತೆ ನಿಯಮಿಸಲು ಶಕ್ತನಾಗಿರುವುದು.

ಕಂಚುಕ—ಮುಚ್ಚಳ, ತೊಡಿಗೆ, ಕವಚ. ಆತ್ಮನು ಚಿದ್ರೂಪಿ. ತನಗೆ ತಾನೇ ಬೆಳಗುವನು. ಆತ್ಮನ ಸ್ವರೂಪಾವರಣಗಳನ್ನೇ ಕಂಚುಕಗಳೆನ್ನುವುದು. ಕಂಚುಕಗಳು ಆರು. ಇವುಗಳಲ್ಲಿ ಮೊದಲನೆಯದಾದ ಮಾಯೆಯ ಪ್ರಭಾವದಿಂದ ಆತ್ಮನ ಸ್ವರೂಪಾಭಿನ್ನವಾಗಿರುವ ಸರ್ವಜ್ಞತ್ವ, ಪೂರ್ಣತ್ವ, ವ್ಯಾಪಕತ್ವ, ನಿತ್ಯತ್ವ ಶಕ್ತಿಗಳು ಸಂಕುಚಿತವಾಗಿ ವಿದ್ಯಾ, ಕಲಾ, ರಾಗ, ನಿಯತಿ, ಕಾಲರೂಪಗಳಿಂದ ಮಾರ್ಪಟ್ಟವು. ಇವು ಮಾಯೆಯು ಭೇದದೃಷ್ಟಿ, ಭೇದ ಭಾವ, ಭೇದ ಜ್ಞಾನ ಮಾಡುವ ಶಕ್ತಿ ವಿಶೇಷ. ಈ ಆರು ಕಂಚುಕಗಳು ಆತ್ಮನ ಸ್ವರೂಪವನ್ನು ಮರೆಮಾಚಿ, ಶಕ್ತಿಗಳನ್ನು ಸಂಕೋಚಗೊಳಿಸಿ, ಆತ್ಮನನ್ನು ಬದ್ಧಜೀವನನ್ನಾಗಿ ಮಾಡುವುವು. ಈ ಸಂಪುಟದಲ್ಲಿ ಸಿಕ್ಕಿ ಜೀವಾತ್ಮನು ಜನನ ಮರಣ ಕಷ್ಟ ಸುಖಗಳಿಗೆ ಗುರಿಯಾಗುವನು. ಈ ಶಕ್ತಿಗಳ ಸಂಪೂರ್ಣ ವಿಕಾಸವಾದಾಗ ಶಿವನಾಗುವನು.

ಕೃಚ್ಛ್ರಾಧ್ವ—ಮಾಯಾಪದ. ಮಾಯೆಯಿಂದ ಪೃಥ್ವೀವರೆಗೂ ಇರುವ ೩೧ ತತ್ತ್ವಗಳು–ಮಾಯಾಧ್ವ.

ಕ್ರಮಮುದ್ರಾ—ಯೋಗಿಯು ಅನುಕ್ರಮವಾಗಿ ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಆಕರಸ್ಥಾನಗಳಲ್ಲಿ (ಚಕ್ರಗಳಲ್ಲಿ) ಮನಸ್ಸನ್ನು ಏಕಾಗ್ರಚಿತ್ತತೆಯಲ್ಲಿ ನಿಲ್ಲಿಸುವುದಕ್ಕೆ 'ಮುದ್ರಾ' ಎಂದು ಹೆಸರು. ಅಂತಃಪ್ರಪಂಚದ ವಿಷಯಗಳನ್ನು ಬಾಹ್ಯ ಪ್ರಪಂಚಕ್ಕೆ ಸೇರಿಸಿ ಯೋಗಿಯು ತುರೀಯಸತ್ತೆಯಲ್ಲಿ ನಿಲ್ಲಿಸಿ ಚಿಚ್ಛಕ್ತಿಯು ಪ್ರಕಾಶಿಸುವಂತೆ ಮಾಡುವುದಕ್ಕೆ 'ಕ್ರಮಮುದ್ರಾ' ಎಂದು ಹೆಸರು.

ಕಾಲ—ನಿತ್ಯಶಕ್ತಿಯ ಸಂಕೋಚ.

ಕಾಲಾಗ್ನಿ—ಸಂಹಾರಮಾಡುವ–ಉಪಸಂಹರಿಸುವ ಶಕ್ತಿ.

ಕಲಾ—ಯಾವುದು ಸ್ವಸ್ವರೂಪಾವೇಶದಿಂದ ಇತರ ವಸ್ತುಗಳನ್ನು ಸಂಕುಚಿತವಾಗಿರುವಂತೆ ನಿಯಮಿಸುತ್ತದೆಯೋ ಹಾಗೆಯೇ ನಡೆಸುತ್ತದೆಯೋ ಅದೇ ಕಲಾ ಎನ್ನಿಸಿಕೊಳ್ಳುವುದು. ಆತ್ಮನ ಸರ್ವಜ್ಞತ್ವಾದಿ ಎಲ್ಲಾ ಕ್ರಿಯಾಶಕ್ತಿಯ ಪ್ರಭಾವಕ್ಕೂ ಇದು ಸಂಕೋಚವನ್ನುಂಟುಮಾಡುವುದು. ಇದರ ಪರಿಣಾಮವಾಗಿ ಜೀವಾತ್ಮನು ತನ್ನ ಸಂಕೋಚಸ್ಥಿತಿಯನ್ನೇ ತನ್ನ ಸ್ವರೂಪವೆಂದು ಗ್ರಹಿಸುವನು.

ಗ್ರಾಹಕ—ತಿಳಿಯುವವನು, ವಿಕಲ್ಪಮಯವಾದ ಜೀವನು.
ಚಿತ್—ಚಿಚ್ಛಕ್ತಿ.
ಚಿತ್ತ—ಸತ್ತ್ವ ರಜಸ್ತಮಸ್ಸುಗಳಿಂದ ಕೂಡಿದ ಒಂದು ಕರಣ-ಮನಸ್ಸು. ಚಿದ್ರೂಪವಾಗಿ ಚೈತನ್ಯವಾಗಿದ್ದ 'ಚಿತ್' ಜೀವರುಗಳಲ್ಲಿ ಅಂತಃಕರಣಮೂಲಕ ವ್ಯವಹರಿಸುವಾಗ 'ಚಿತ್ತ'ವಾಯಿತು. ಶರೀರ ಮತ್ತು ಪ್ರಾಣ ಒಂದು ಪದವಾಗಬೇಕಾದರೆ ಚಿತ್ತಬೇಕು. ಜ್ಞಾಪಕಕ್ಕೆ ತಂದುಕೊಡುವ ಶಕ್ತಿ ಚಿತ್ತಸಂಸ್ಕಾರದ್ದು. ಚಿತ್ ಅಭೇದ ಜ್ಞಾನವನ್ನು ಉಂಟುಮಾಡುವುದು. ಚಿತ್ತಭೇದ ಜ್ಞಾನವನ್ನುಂಟುಮಾಡುವುದು. ಚಿತ್ತವು ವಿಕಲ್ಪಗಳಿಗಾಶ್ರಯವಾದದ್ದು.
ಚಿತ್‌ಶುದ್ಧವಾದ ತತ್ತ್ವ—'ಆತ್ಮಪ್ರತ್ಯವಮರ್ಶತಾ'—ಅಂದರೆ ತನ್ನಷ್ಟಕ್ಕೆ ತಾನೆ ವ್ಯಕ್ತಪಡಿಸಿಕೊಳ್ಳುವುದು. ಕಾಲದೇಶಕ್ಕೆ ಒಳಗಾಗದೆ ಇರುವಂಥಾದ್ದು.
ಚೈತನ್ಯ—ಜಡವಿಲ್ಲದಿರುವುದು. ಸ್ವಶಕ್ತಿಯಿಂದ ಕೂಡಿ ಬೆಳಗುವುದು. ಬೇರ್ಪಡಿಸುವ ಮತ್ತು ಕೂಡಿಸುವ ಶಕ್ತಿ ಒಳಗಿರತಕ್ಕದ್ದನ್ನು ನಾನಾ ವಿಧವಾಗಿ ವ್ಯವಹರಿಸುವುದು.
ಚೈತನ್ಯಮಾತ್ಮಾ—ಶುದ್ಧಾತ್ಮಾವಿಭು.
ಚಿತ್ತಮಾತ್ಮಾ—ಅಣು ವಿಕಲ್ಪಾದಿಗಳಿಗಾಶ್ರಯವಾದ ಚಿತ್ತದಿಂದ ಕೂಡಿರುವನು.
ಚಮತ್ಕಾರ—'ತತ್ತ್ವಚಮತ್ಕಾರ ಇಚ್ಛಾಶಕ್ತಿಃ' ಪ್ರತಿಯೊಂದು ಕಲೆಯ ವೈಶಿಷ್ಟ್ಯವನ್ನು ಅದರಲ್ಲಿರುವ ಚಮತ್ಕಾರದಿಂದ ಅಳೆಯಬಹುದು-ನಿರ್ಣಯಿಸಬಹುದು. ಎಷ್ಟೆಷ್ಟರಮಟ್ಟಿಗೆ ನಮ್ಮ ಅರಿವು ನಮ್ಮ ಹೃದಯವನ್ನು ಕೆರಳಿಸುತ್ತದೆಯೋ ಅಷ್ಟಷ್ಟರಮಟ್ಟಿಗೆ ಅಲ್ಲಿ ಚಮತ್ಕಾರವಿದೆಯೆಂದು ಹೇಳಬಹುದು. ಚಮತ್‌ಕಾರ. 'ಚಮತ್' ಎಂದರೆ ಕುತೂಹಲವನ್ನು ಆಶ್ಚರ್ಯವನ್ನು ಹುಟ್ಟಿಸುವುದು. 'ಕಾರ' ಎಂದರೆ ಆಶ್ಚರ್ಯವನ್ನು ಕೆರಳಿಸುವುದು. 'ಚಮತ್ ಇತಿ ವಾ ಅಂತರ ಸ್ಪಂದಾದೋಳನೋದಿತ ಪರಾಮರಶ್ಚಮಯ ಶಬ್ದನಾವ್ಯಕ್ತಾನುಕರಣಂ"

(ಅಭಿನವಗುಪ್ತ)

ಇನ್ನೊಂದು ರೀತಿಯಲ್ಲಿ ನೋಡಿದರೆ 'ಚಮತ್' ಎಂಬ ಪದಕ್ಕೆ ರುಚಿ ನೋಡುವುದು, ತಿನ್ನುವುದು, ಗ್ರಹಿಸುವುದು, ಅನುಭವಿಸುವುದು ಮೊದಲಾದ ಪ್ರಚೋದನಗಳಿಂದ ಸೌಂದರ್ಯಾನುಭವವನ್ನುಂಟುಮಾಡುವುದು (ಸಾಹಿತ್ಯ ದರ್ಪಣ) ಬಾಯಿಂದಹೇಳಿ ವ್ಯಕ್ತಪಡಿಸುವುದಕ್ಕಾಗದಿರುವ ಸ್ವಾನುಭವವನ್ನು ಅರಿವು-ತನ್ನ ವ್ಯಕ್ತಿತ್ವವನ್ನು ಮರೆಯುವುದು-ಇವುಗಳನ್ನು ಸೌಂದರ್ಯಾನುಭವದಲ್ಲಿಯೂ ದೈವಿಕಾನುಭವದಲ್ಲಿಯೂ ಕಾಣಬಹುದು.
ಜ್ಞಾನಶಕ್ತಿ—'ಆಮರ್ಷಾತ್ಮಕತಾ ಜ್ಞಾನಶಕ್ತಿಃ' ಎಲ್ಲಾ ವಸ್ತುಗಳನ್ನೂ ತನ್ನಲ್ಲಿ ಅಡಗಿಸಿಕೊಳ್ಳುವ ಶಕ್ತಿ—ತನ್ನನ್ನು ತಾನು ತಿಳಿಯುವ ಶಕ್ತಿ.
ತುರೀಯಾ—ಸಮಾಧಿಸ್ಥಿತಿ. ನಿದ್ದೆಯಿಂದ ಬರುವ ಸುಖವನ್ನು ನಿದ್ದೆಯಿಲ್ಲದೆ ಅನುಭವಿಸುವ ಆಧ್ಯಾತ್ಮಿಕ ಸ್ಥಿತಿ.

ತುರೀಯಾವಸ್ಥೆ— ಚಿನ್ಮಾತ್ರಾನುಭವಸ್ಥಿತಿ.

ತಿರೋಧಾನ—ಚಿತ್ತಿನಲ್ಲಿ ಅಖಂಡವಾಗಿದ್ದ ವಿಷಯಗಳನ್ನು ಭೇದರೂಪವಾಗಿ ಪ್ರಕಾಶ ಪಡಿಸುವ ಸ್ಥಿತಿ.

ನಿಯತಿ—ಸಂಕುಚಿತವ್ಯಾಪಕ ಶಕ್ತಿ. ಯಾವುಯಾವುದು ಯಾವ ಯಾವ ರೀತಿಯಲ್ಲಿ ಆಗಬೇಕೋ ಹಾಗೆ ಆಗುವ ನಿಯಮ.

ನಿಮಿಷತಿ—ವಿಶ್ವವು ತನ್ನ ರೂಪವನ್ನು ಮರೆಮಾಚಿಕೊಂಡು ಪ್ರಳಯವಾಗುವುದು.

ನೀಲ—ವಿಶ್ವವು ನೀಲ, ಸುಖ, ದೇಹ, ಪ್ರಾಣ–ಈ ರೀತಿ ನಾಲ್ಕು ವಿಧವಾಗಿದೆ. ನೀಲ ಎಂದರೆ ಬಹಿರಿಂದ್ರಿಯಗಳಿಂದ ತಿಳಿಯತಕ್ಕ ಆಕಾರವಿರುವ ಪದಾರ್ಥಗಳು. ಸುಖ ಎಂದರೆ ಅಂತರಿಂದ್ರಿಯದಿಂದ ಗ್ರಹಿಸುವ ಅಂಶಗಳು.

ಪಶು—ಬದ್ಧನಾದ ಜೀವ–' ದೇಹ ಪ್ರಾಣಪುರ್ಯಷ್ಟಕ ವಿಶಿಷ್ಟಃ '

ಪರಾಶಕ್ತಿ—ಮೂಲಾಧಾರದಲ್ಲಿ ನಿರಾಕಾರಶಕ್ತಿಸ್ವರೂಪ.

ಪರಾವಾಕ್—' ಸತತಮೇವ ವರ್ತಮಾನರೂಪಾ '. ' ಪರಾಪಶ್ಯಂತಿ ಮಧ್ಯಮಾ ವೈಖರಿ '–ಇವು ವಾಗ್ದೇವಿಯ ನಾಲ್ಕುರೂಪಗಳು. ಅಭಿನ್ನಾವಸ್ಥೆಯಲ್ಲಿ ಪ್ರಶಾಂತ ಸ್ಥಿತಿಗೆ ' ಪರಾ ' ಎಂದು ಹೆಸರು. ಪ್ರೇರಣೆಯುಂಟಾಗಿ ಆಕೂತರೂಪ ದಿಂದ ಕೂಡಿರುವುದಕ್ಕೆ **ಪಶ್ಯಂತಿ** ಎಂದು ಸಂಜ್ಞೆ. ಗ್ರಾಹ್ಯ ಗ್ರಾಹಕ ವಿಭಾಗ ವನ್ನು ಪಡೆದು ನಾದರೂಪವನ್ನು ಹೊಂದಿ ಭೇದರೂಪದಿಂದ ಹೊರಹೊಮ್ಮುವ ಸ್ಥಿತಿಗೆ **ಮಧ್ಯಮಾ** ಎಂದು ಪರಿಭಾಷೆ. ೫೧ ಅಕ್ಷರರೂಪವಾಗಿ ಹೊರ ಹೊಮ್ಮುವ ಹಂತಕ್ಕೆ **ವೈಖರಿ** ಎಂಬ ಶಾಸ್ತ್ರೀಯ ಸಂಜ್ಞೆ. ಅಭಿನ್ನವಾದ ಪರಾಶಕ್ತಿಯ ಐಶ್ವರ್ಯವೇ ಈ ವಿಚಿತ್ರವಾದ ಅನಂತವಾದ ಭೇದಪ್ರಪಂಚ.

ಪ್ರತಿಭಾ—' ಪ್ರಜ್ಞಾ, ನವನವೋಲ್ಲೇಖಶಾಲಿನೀ ಪ್ರತಿಭಾಮತಾ ' ಯಾವುದು–ಯಾವ ಶಕ್ತಿಯೂ ನಮ್ಮನ್ನು ಮೊದಲಿನ ಸ್ಥಿತಿಗೆ ಒಯ್ಯುತ್ತದೆಯೋ, ಯಾವ ಪ್ರಚೋದನೆಯು ಮನುಷ್ಯನನ್ನು ದೈವದ ಕಡೆಗೆ ಸೆಳೆಯುವುದೋ–ಅಂದರೆ ತನ್ನಲ್ಲಿಯೇ ಆ ದೈವವನ್ನು ಕಾಣುವಂತೆ ಮಾಡುವುದೋ ಅದೇ ಪ್ರತಿಭಾ. ಯಾವುದು ಮೊದಲೇ ಇರತಕ್ಕದ್ದರಲ್ಲಿ ಹೊಸಹೊಸದಾಗಿ ಉತ್ಪಾದನೆ ಮಾಡತಕ್ಕ ಕ್ರಿಯಾಶಕ್ತಿಯನ್ನುಳ್ಳದ್ದಾಗಿರುತ್ತದೆಯೋ ಅದೇ ಪ್ರತಿಭಾ.

ಅಲಂಕಾರಶಾಸ್ತ್ರದ ಪ್ರಕಾರ ' ತಾನಾಗಿಯೇ ಸ್ಫುರಿಸುವುದು ' ಎಂದು ಅರ್ಥವಾಗುತ್ತದೆ. ಇದು ಕವಿಹೃದಯದಲ್ಲಿ ಕಾಣುವ ಕ್ರಿಯಾಶಕ್ತಿ. ಕವ್ಯಾತ್ಮಕ ವಾಗಿರತಕ್ಕ ಶಕ್ತಿ. ಇದನ್ನು ಪರಾವಾಕ್ ಎಂದು ಹೇಳುವುದುಂಟು. ಈ ಪರಾವಾಕ್ಕಿ ನಿಂದ ಕವಿಯು ಯಾವುದರಲ್ಲಿ ಬೇಕಾದರೂ ಜೀವಕಳೆಯನ್ನು ತುಂಬಬಲ್ಲ. ಅವನು ನಿಜವಾಗಿಯೂ ಸೃಷ್ಟಿಕರ್ತ, ವಿಧಾತೃ–ಪರಿವರ್ತನ ಮಾಡತಕ್ಕ ಶಕ್ತಿಯುಳ್ಳವನು. ಯಾರು ಶುದ್ಧಚಿತ್ತರಾಗಿರುತ್ತಾರೆಯೋ ಅವರು ಪ್ರತಿಭಾಶಾಲಿಗಳು. ಅವರ ಪ್ರತಿಭೆ ಸ್ವಯಮೇವ ಉಂಟಾದದ್ದು. ಇದು ಶೃಂಗಾರಾನುಭವ ದೈವಿಕಾನುಭವ

ಗಳೆರಡಕ್ಕೂ ಅನ್ವಯಿಸಿದರೂ ಎರಡೂ ಒಂದೇ ಪ್ರಜ್ಞಾ-ಆನಂದದ ಶಾಖೆಗಳು. ಆನಂದಾಬ್ಧಿಯ ಹನಿಗಳೇ ಶೃಂಗಾರರಸದ ಸಂತೋಷಗಳು. ದುಃಖವನ್ನು ಹೋಗಲಾಡಿಸಿ ಸುಖವಾಗಿ ಮಾರ್ಪಡಿಸುವುವು.

ಪ್ರಕಾಶ--ಶಕ್ತಿಪ್ರಸಾರ. ಚಿತ್ತು ಹೊರಗೆ ಭೇದವನ್ನಂಗೀಕರಿಸಿ ಪದಾರ್ಥರೂಪವಾಗಿ ವ್ಯಕ್ತವಾಗುವುದು **ಪ್ರಕಾಶ.** ಅಂತರನುಸಂಧಾನ ರೂಪವಾದ ಸ್ವಸ್ವರೂಪ ಪರಾಮರ್ಶವೇ **ವಿಮರ್ಶ.** ಈ ಎರಡು ಅಂಶಗಳ ಮಯವಾಗಿರುವುದು ಪ್ರಕಾಶ ವಿಮರ್ಶಮಯ.

ಪ್ರತ್ಯಭಿಜ್ಞಾ—ತಾನು ಮರೆತುಹೋಗಿದ್ದ ನಿಜಸ್ವರೂಪವನ್ನು ತಿಳಿಯುವುದು. 'ಗ್ರಹಣ ಸ್ಮರಣಯೋಃ ಐಕ್ಯಂ ಪ್ರತ್ಯಭಿಜ್ಞಾ' ಈಗಿನ ತಿಳಿವಳಿಕೆ ಹಿಂದಿನ ನೆನಪು ಇವುಗಳಿಂದ ಅವನೇ ಇವನು ಎಂಬ ಜ್ಞಾನ ಉಂಟಾಗುವುದೇ ಪ್ರತ್ಯಭಿಜ್ಞಾ.

ಪ್ರತ್ಯಾಹಾರ—ಬಾಹ್ಯೇಂದ್ರಿಯ ಪ್ರವೃತ್ತಿಯನ್ನು ವಿಷಯಗಳಿಂದ ಹಿಂದಿರುಗಿಸುವಿಕೆ.

ಪ್ರಮಾ—ಸ್ವಚ್ಛವಾದ ತಿಳಿವಳಿಕೆ. ಇದು ಇತರ ಪದಾರ್ಥಗಳ ಪರಿಮಿತಿಯನ್ನು ತೋರಿಸುತ್ತದೆ. ತನ್ನ ಸ್ವರೂಪವನ್ನು ತೋರ್ಪಡಿಸಿಕೊಳ್ಳುತ್ತದೆ.

ಪ್ರಮಾಣ—ತಿಳಿಯತಕ್ಕ ಸಾಧನ-ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ ಮೊದಲಾದವುಗಳು ಪ್ರಮಾಣಗಳು. ಇವು ಚಿತ್ತತ್ವವನ್ನು-ಚಿತ್‌ಸ್ವರೂಪವನ್ನು ತೋರ್ಪಡಿಸಲಾರವು.

ಪ್ರಮಾಣೋಪಹಾರಕ್ರಮ—ಪ್ರಮಾಣಗಳಿಂದ ಹೊರಗಿನ ಪದಾರ್ಥಸ್ವರೂಪವನ್ನು ತಿಳಿದು ಒಳಗಿನ ಅನುಭವಗಳನ್ನು ಮನನಮಾಡುವುದರಿಂದ ಜ್ಞಾನವಿಕಾಸವನ್ನು ಪಡೆಯುವುದು. ಜೀವನು ಮೊದಲು ಪ್ರಮಾಣಗಳಿಂದ ಆರಂಭಿಸಿ ಅತೀಂದ್ರಿಯ ಸಾಧನೆಗಳ ಸಹಾಯದಿಂದ ಪೂರ್ಣವಿಕಾಸವನ್ನು ಹೊಂದುತ್ತಾನೆ. ಇದಕ್ಕೆ ಪರಪ್ರಮಾತ್ರಾವೇಶವೆಂದು ಹೆಸರು.

ಪ್ರಮಾತೃ—ಸ್ವಯಂಪ್ರಕಾಶವಾದ ತಿಳಿಯುವ ಶಕ್ತಿ ಇರುವವನು ಪ್ರಮಾತೃ.

ಪ್ರಮೇಯ—ತಿಳಿಯತಕ್ಕ ವಸ್ತು–ವಿಷಯ–ಅನುಭವಿಸುವುದಕ್ಕೆ ಯೋಗ್ಯವಾದ ಪದಾರ್ಥ.

ಪ್ರಳಯಾಕಲ—ಮಾಯಾ ತತ್ತ್ವದಲ್ಲಿರತಕ್ಕ ಶೂನ್ಯಪ್ರಮಾತೃವರ್ಗ. ಆಣವ ಮತ್ತು ಮಾಯೀಯ ಮಲದಿಂದ ಆವೃತನಾದವನು.

ಪುರ್ಯಷ್ಟಕ—ಪೃಥಿವಿಯೇ ಮೊದಲಾದ ಐದು ಭೂತಗಳ ಪೂರ್ವರೂಪವಾದ ಐದು ತನ್ಮಾತ್ರಗಳು ಮತ್ತು ಮನಸ್ಸು ಬುದ್ಧಿ ಅಹಂಕಾರ ಈ ಎಂಟೂ ಸೇರಿರುವ ಗ್ರಂಥಿ. ಸೂಕ್ಷ್ಮಶರೀರ.

ಪೂರ್ಣಾಹಂತಾ— ಚಿದ್ವಿಕಾಸ ಸ್ಥಿತಿ—ಚಿದನುಭವ.

ಪೂರ್ಣಾಹಂ ವಿಮರ್ಶಾ—ಸಪ್ತಪ್ರಮಾತೃಗಳ ಅಂತಸ್ತುಗಳನ್ನು ಮೆಟ್ಟಿಲು ಮೆಟ್ಟಿಲಾಗಿ ಪಡೆಯುತ್ತಾ ಸ್ವರೂಪವಿಕಾಸವನ್ನು ಹೊಂದುವುದು.

ಪ್ರಮಾ—ಜ್ಞಾನ ತನ್ನನ್ನೂ ತನಗಿಂತ ಬೇರೆಯಾಗಿರುವ ಪದಾರ್ಥಗಳನ್ನೂ ಅರಿಯು ವವನು. ಜ್ಞಾನದಿಂದ ಅರಿಯಲ್ಪಡುವ ವಸ್ತು.

ಪ್ರಮಾಣೋಪಹಾರಕ್ರಮ—ಅತೀಂದ್ರಿಯ ವಿಷಯಗಳನ್ನು ಪ್ರಮಾಣಗಳಿಂದ ತಿಳಿದು ಕ್ರಮಕ್ರಮವಾಗಿ ತನ್ನ ಅನುಭವಕ್ಕೆ ತಂದುಕೊಳ್ಳುವ ಉಪಾಯ. ಇಂತಹ ಜ್ಞಾನವಿಕಾಸದಿಂದ ಕೊನೆಗೆ ಚಿನ್ಮಯವಾದ ಪರಶಿವಾನುಭವವನ್ನು "ಪರಪ್ರಮಾತ್ರಾವೇಶ"ವೆಂದು ಕರೆಯುವರು.

ಪುರುಷತತ್ತ್ವ—ಅನ್ಯೋನ್ಯಾಭಾವಾತ್ಮಕವಾದ ಭೇದವೇ ಪ್ರಧಾನವಾಗುಳ್ಳ ಮಾಯಾ ತತ್ತ್ವದಿಂದ ಪರಿವೇಷ್ಟಿತವಾಗಿರುವ ಅಂಗತತ್ತ್ವವೇ ಪುರುಷತತ್ತ್ವ.

ಬಿಂದು—ಘನೀಭೂತಶಕ್ತಿ ಹೊರಹೊಮ್ಮುವ ಅಭಿವ್ಯಕ್ತವಾಗುವುದಕ್ಕೆ ಮುಂಚೆ ಅಂದರೆ ಅಹಂ ಇದಂ ಪ್ರಕಾಶದ ಪೂರ್ವಸ್ಥಿತಿ. ಇದನ್ನು ಚಿದ್ಘನ ಎಂದು ವ್ಯವಹರಿಸುವರು. ಅ=ಶಿವ ಹ=ಶಕ್ತಿ. ಶಿವನು ಶಕ್ತಿಯ ಮೂಲಕ ಪ್ರಪಂಚ ರೂಪದಲ್ಲಿ ಅಭಿವ್ಯಕ್ತ ವಾಗುವುದಕ್ಕೆ ಮುಂಚೆ "ಅವಿಭಾಗ ವೇದನಾತ್ಮಕ ಬಿಂದು ರೂಪತಯಾ"— ಅವಿಭಕ್ತವಾದ ಪ್ರಕಾಶ, ತೇಜಸ್ಸು ಸ್ಫುರಿಸಿ ಪ್ರವಾಹರೂಪವಾಗಿ ಚಿಮ್ಮಿದರೆ **ನಾದ**. ನಾದವೇ ಮುಂದಿನ ಚಲನವಲನಗಳಿಗೆ ಕಾರಣ. ಇದು **ಕ್ರಿಯಾ** ಶಕ್ತಿಯ ವಿಲಾಸ.

ಮಂತ್ರ—ಅಕ್ಷರರಾಶಿ. ಅಕಾರಾದಿ ಕ್ಷಕಾರದವರೆಗೆ ಇರುವ ಅಕ್ಷರಗಳೆಲ್ಲವೂ ಮಂತ್ರಗಳೇ—

"ಮಂತ್ರ ವರ್ಣಾತ್ಮಕಾಃ ಸರ್ವೆ
ಸರ್ವೆ ವರ್ಣಾಃ ಶಿವಾತ್ಮಕಾಃ"

ಅಕ್ಷರಗಳು ಚಿತ್ಸಂಸರ್ಗದಿಂದ ಮಂತ್ರತ್ವವನ್ನು ಹೊಂದುತ್ತವೆ. ಪ್ರತಿಯೊಂದು ಅಕ್ಷರವೂ ಒಂದೊಂದು ದೇವತಾಶಕ್ತಿ ವಿಶಿಷ್ಟವಾಗಿರುತ್ತದೆ—ವಿಕಲ್ಪಗಳನ್ನೂ ಅವಿಕಲ್ಪಗಳನ್ನೂ ತೋರಿಸುವಂಥಾದ್ದು. ವಿಕಲ್ಪಗಳನ್ನು ನಿಶ್ಚಿತವಾಗಿ ತಿಳಿದು ಮಾತೃಕಾನುಸಂಧಾನ ಮಾಡುವವನಿಗೆ ಮಹೇಶತಾ ಪ್ರಾಪ್ತಿಯಾಗುತ್ತದೆ.

ಮಂತಾರಂ ತ್ರಾಯತೇ ಇತಿ ಮಂತ್ರಃ
ಯಾರು ಇದನ್ನು ಮನನಮಾಡುತ್ತಾರೋ ಅವನನ್ನು ಕಾಪಾಡುತ್ತದೆ—
ಮನನತ್ರಾಣ ಧರ್ಮಾಣೋ ಮಂತ್ರಾಃ
ಎಂದು ಆಗಮಗಳು ಹೇಳುತ್ತವೆ.

ಮಂತ್ರಾಃ—ವಿದ್ಯಾತತ್ತ್ವದಲ್ಲಿರುವ ಪ್ರಮಾತೃವರ್ಗ.

ಮಂತ್ರಮಹೇಶ್ವರಾಃ—ಸದಾಶಿವ ಸ್ಥಿತಿಯಲ್ಲಿ ಗ್ರಾಹ್ಯಗ್ರಾಹಕ ಭಾವಗಳು ಸ್ಪಷ್ಟ ವಾಗಿಲ್ಲದೆ ಇರುವ ಪ್ರಮಾತೃವರ್ಗ.

ಮಹೇಶ್ವರಾಃ—ಈಶ್ವರತತ್ತ್ವದಲ್ಲಿರುವ ಪ್ರಮಾತೃವರ್ಗ.

ಮಾತೃಕಾ—ಅಕಾರಾದಿ ೫೧ ಅಕ್ಷರಗಳು.

ಮಾತೃಕಾಶಕ್ತಿ ಸಂಬೋಧ—ಅಕಾರಾದಿ ೫೧ ಅಕ್ಷರಗಳೂ ಆ ಪರಾಶಕ್ತಿಯ ವಿಕಾಸಗಳೆಂದು ತಿಳಿದು ನಾವು ಉಚ್ಚರಿಸುವ ಪ್ರತಿಯೊಂದು ಅಕ್ಷರವೂ ಆ ಪರಾಶಕ್ತಿಯ ಉಪಾಸನೆಯೆಂಬ ಭಾವನೆ ಇದ್ದರೆ ಅಂತಹವನಿಗೆ ಆಗುವ ಅನುಭವ.

ಮಾಯಾ—'ದುರ್ಘಟಸಂಪಾದನ ಸಮರ್ಥಶಕ್ತಿವಿಶೇಷಃ'. ವಿಶ್ವವೆಲ್ಲಾ ಯಾವ ಶಕ್ತಿಯಿಂದ ಹುಟ್ಟುತ್ತದೆಯೋ ಯಾವುದರಲ್ಲಿ ಉಪಸಂಹೃತವಾಗುತ್ತದೆಯೋ ಅಂತಹ ತತ್ತ್ವಕ್ಕೆ ಮಾಯಾ ಎಂದು ಹೆಸರು.

ಮಾಯಾಪ್ರಮಾತಾ—ಅಣವಾದಿ ಮೂರು ಮಲಗಳಿಂದ ಕೂಡಿರುವ ಸಕಲ ಸ್ಥಿತಿಯಲ್ಲಿರುವ ಬದ್ಧಜೀವ. ಮಿತಪ್ರಮಾತೃ ಸತ್ವರಜಸ್ತಮೋವೃತ್ತಿಗಳನ್ನನುಭವಿಸುವವನು.

ಮಂತ್ರವೀರ್ಯ—ಮಂತ್ರದ ಅನುಸಂಧಾನದಿಂದುಂಟಾಗುವ ಜ್ಞಾನವಿಕಾಸ. ಸಪ್ತ ಪ್ರಮಾತೃಗಳ ಮಟ್ಟವನ್ನು ನೆನೆಯುತ್ತಾ 'ಇದಂ' ಭಾವದಿಂದ 'ಅಹಂ' ಭಾವಕ್ಕೆ ಹೋಗುತ್ತಾ ಪೂರ್ಣಾಹಂತ ಬಂದರೆ ಮಂತ್ರವೀರ್ಯ.

ಮಾಧ್ಯಮಿಕರು—ಬೌದ್ಧರಲ್ಲಿ ಎಲ್ಲವೂ ಶೂನ್ಯವೆಂದು ಹೇಳುವ ಪಂಗಡದವರು.

ಮಾಯಿಾಯಮಲ—ಇಚ್ಛಾಶಕ್ತಿಸಂಕೋಚ—ಅಭಿನ್ನವಾದ ಚಿತ್ತು ಭಿನ್ನವಾದ ತಿಳಿವಳಿಕೆಯನ್ನು ಸ್ವೀಕರಿಸುವಿಕೆ. ಭಿನ್ನವೇದ್ಯಪ್ರಥಾ, ಭೇದದೃಷ್ಟಿ, ಭೇದ ಭಾವಗಳು ಪಂಚಕಂಚುಕಗಳಿಂದ ಕೂಡಿ ಶರೀರ ಮತ್ತು ಇಂದ್ರಿಯಗಳಿಗೆ ಅಧೀನವಾಗಿರುವುದಕ್ಕೆ ಕಾರಣವಾಗಿರುವುದು.

ಮಾಹೈಶ್ವರ್ಯ—ಮಹೇಶತ್ವ, ಪಂಚವಿಧ ಕೃತ್ಯಗಳನ್ನು ದೃಢನಂಬಿಕೆಯಿಂದ ಪರಿಶೀಲನೆ ಮಾಡುವವರಿಗೆ ಪ್ರಾಪ್ತಿಯಾಗುತ್ತದೆ. ಅವರು ವಿಶ್ವವನ್ನು ಸ್ವರೂಪ ವಿಕಾಸವೆಂದು ತಿಳಿಯುತ್ತಾರೆ.

ಮಿತಪ್ರಮಾತೃ—ಮೂರು ಮಲಗಳಿಂದ ಕೂಡಿರುವವನು. ಜೀವಾತ್ಮ, ಅಣವಾದಿ ಮಲಗಳಿಂದಲೂ ಕೂಡಿರುವ ಜೀವಾತ್ಮ.

ಮುಕ್ತಿ—'ವಿಶ್ವೋತ್ತೀರ್ಣ ಪರಮಶಿವೀಭಾವೋವಾ' ವಿಶ್ವೋತ್ತೀರ್ಣನಾಗಿರುವ ಪರಶಿವಪದವನ್ನು ಪಡೆಯುವುದು ಮೋಕ್ಷ.

ಮುದ್ರಾ—'ದ್ರಾ' ಎಂದರೆ ಪಾಶಗಳನ್ನು ಓಡಿಸುವುದು. 'ಮುತ್' ಎಂದರೆ ಆನಂದವನ್ನು ಕೊಡುವುದು. ಪಾಶಗಳನ್ನು ಹೋಗಲಾಡಿಸಿ ಆನಂದರೂಪವಾದ ತುರೀಯಾವಸ್ಥೆಯಲ್ಲಿ ನಿಲ್ಲಿಸುವುದು ಮುದ್ರಾ.

ಯೋನಿ—ಕಾರಣಶಕ್ತಿ-ಅಕ್ಷರಗಳಿಗೆಲ್ಲಾ ಕಾರಣವಾಗಿರುವುದು.

ಯೋನಿವರ್ಗ—ಅಕ್ಷರಸಮೂಹ.

ರಾಗ—ಪಂಚಕಂಚುಕಗಳಲ್ಲೊಂದು. ಕಂಚುಕ-ಪೂರ್ಣತ್ವ ಸಂಕುಚಿತವಾಗಿರುವಿಕೆ.

ಲಯ—ಅಂತರ್ಮುಖೀಭಾವ.

ವಿಕಾಸ—ವಿಸ್ತರಿಸುವುದು ಉಬ್ಬಿಸುವುದು. ಪುರುಷನ ಆದ್ಯಂತವೂ ವ್ಯಾಪಕವಾಗಿ ವಿಸ್ತರಿಸುವುದು-ಸತ್ವಗುಣಪ್ರಧಾನವಾದದ್ದು. ಪ್ರಕಾಶ, ಬೆಳಕು, ಸಂತೋಷ, ಆನಂದ, ಸೌಂದರ್ಯ, ಧ್ಯಾನವಸ್ತುವಿನಲ್ಲಿ ಅನುಪ್ರವೇಶ, ಗ್ರಾಹ್ಯಗ್ರಾಹಕಗಳೆಲ್ಲವೂ ಒಂದೇ ಎಂಬ ಅನುಭವ. ಪ್ರಸಾದ, ಯಾವ ಪೂಜಾಕ್ರಿಯೆಗಳಿಂದ ತನಗೆ ಆತ್ಮತೃಪ್ತಿಯಾಗುತ್ತದೆಯೋ ಅಂತಹ ಪ್ರಿಯವಸ್ತುಗಳನ್ನೇ ಸಮರ್ಪಿಸುವುದರಿಂದ, ತನ್ನ ಚಿತ್ತವಿಕಾಸವಾಗಿ ಪೂಜ್ಯಪೂಜಕವೆರಡೂ ಒಂದೇ ಆಗಿ ಪರಿಣಮಿಸುವುದು. ವಿಕಾಸವಾದ ಹಾಗೆಲ್ಲಾ ಪೂರ್ಣತ್ವ ಪ್ರಾಪ್ತಿಯಾಗುತ್ತದೆ. ಸಂಕೋಚವು ಬೇರ್ಪಡಿಸುತ್ತದೆ. ಭಕ್ತನನ್ನು ವೃತ್ತದ ಅಂಚಿನಿಂದ ಸ್ವಪ್ರಕಾಶವಾದ ಮಧ್ಯಭಾಗಕ್ಕೆ ಒಯ್ಯುವುದು ವಿಕಾಸ.

'ವಾಹಾಃ ಪರಮೇಶ್ವರಸ್ಯ ಸ್ಫುರಣಧಾರಾಃ'

ಇವುಗಳು ವ್ಯೋಮವಾಮೇಶ್ವರಿ :— ಖೇಚರಿ, ದಿಕ್ಚರಿ, ಗೋಚರಿ, ಭೂಚರಿ— ಖೇಚರಿಯು ಗ್ರಾಹಕ ಬುದ್ಧಿಶಕ್ತಿಗೆ ಸಂಬಂಧಪಟ್ಟದ್ದು. ದಿಕ್ಚರಿ ಅಂತಃಕರಣಕ್ಕೂ ಗೋಚರಿ ಇಂದ್ರಿಯಗಳಿಗೂ ಭೂಚರಿ ನಾನಾಮುಖವಾಗಿ ಸಂಸಾರಾವಸ್ಥೆಗಳನ್ನು ನಿರ್ವಹಿಸುತ್ತಾ ಪಶುದಶೆಯಲ್ಲಿ ಉತ್ತಾರಕವಾಗಿ ಪಸರಿಸುವುದು.

ವಾಚ್ಯವಾಚಕಭಾವ--ತತ್ರವಾಚಕವಾಚ್ಯಾತ್ಮಸ್ಪಂದಯೋರೇಕಶಃಪ್ರಭೋ ।
ಸ್ಥೂಲಸೂಕ್ಷ್ಮಪರಾಭಾಸಕ್ರಮಯೋಃ ಷಡ್ವಿಧಾಧ್ವತಾ ॥

ಅಭಿನವಗುಪ್ತ–ಪರ್ಯಂತ–ಪಂಚಶಿಖಾ.

ಶಿವನು ವಿಮರ್ಶಪ್ರಕಾಶರೂಪ(ಯಾಮಳ) ದಿಂದಿದ್ದಾನೆ. ಸ್ಪಂದ–ಪ್ರಕಾಶಸ್ಪಂದ ವಿಮರ್ಶಸ್ಪಂದ ಎಂದು ಎರಡು ಬಗೆ. ವಿಮರ್ಶ–ವಾಚಕ(ಶಬ್ದ)–ಪ್ರಕಾಶ–ವಾಚ್ಯ (ಅರ್ಥ). ಶಿವನು ಶಬ್ದಾರ್ಥಸ್ವರೂಪನು. ಈ ಎರಡು ರೂಪಗಳೇ ಆರು ಅಧ್ವಗಳಾಗಿರುವುದು. ವಾಚಕ–ಮಂತ್ರಪದವರ್ಣ ; ವಾಚ್ಯ–ಭುವನಾ, ತತ್ತ್ವ, ಕಲಾ ಈ ಪ್ರತಿಯೊಂದೂ ಮೂರು ತೆರನಾಗಿದೆ. ಸ್ಥೂಲ ಸೂಕ್ಷ್ಮಪರಾ.

ವಾಮೇಶ್ವರಿ ಶಕ್ತಿವಿಲಾಸ

ಪಶುದಶೆಯಲ್ಲಿ		ಪತಿದಶೆಯಲ್ಲಿ
ಕಲಾ ಮತ್ತು ಕಂಚುಕಗಳ ಕಾರ್ಯಶಕ್ತಿಯು ಸ್ವರೂಪಜ್ಞಾನ ಸಂಕೋಚವನ್ನುಂಟುಮಾಡುವುದು.	ಖೇಚರೀ ಶಕ್ತಿ	ಚಿದ್ಗಗನದಲ್ಲಿ ಸಂಚರಿಸುವುದು ದೇಶ ಕಾಲ ಆಕಾರರಹಿತವಾದ ನಿರ್ವಿಕಲ್ಪವಾದ ಚಿದನುಭವವನ್ನುಂಟುಮಾಡುವುದು.
ಅಂತಃಕರಣದ ಮೂಲಕ ವಿಕಲ್ಪಗಳನ್ನು ತಂದುಕೊಡುವುದು. ಭಿನ್ನಭಾವ, ಗರ್ವ ಮತ್ತು ಭೇದಜ್ಞಾನದಲ್ಲಿ ಅಭಿಮಾನವನ್ನು ಹುಟ್ಟಿಸುವುದು.	ಗೋಚರೀ ಶಕ್ತಿ	ಅಭೇದನಿಶ್ಚಯರೂಪವಾಗಿ ಐಕ್ಯತೆಯನ್ನು ಪಡೆಯುವುದು.
ಬಾಹ್ಯೇಂದ್ರಿಯಗಳ ಮೂಲಕ ಭೇದದೃಷ್ಟಿಯನ್ನು ಉಂಟುಮಾಡುವುದು.	ದಿಕ್ಚರೀ ಶಕ್ತಿ	ಅಭೇದಾಲೋಚನಾತ್ಮಕದಿಂದ ಐಕ್ಯದೃಷ್ಟಿಯನ್ನು ಹುಟ್ಟಿಸುವುದು.
ಬಾಹ್ಯ ಪದಾರ್ಥಗಳು ಅಥವಾ ಪ್ರಮೇಯಗಳು ಭಿನ್ನಭಿನ್ನವಾಗಿ ತಿಳಿಯಲ್ಪಡುವುವು.	ಭೂಚರೀ ಶಕ್ತಿ	ವಿಶ್ವವೆಲ್ಲಾ ಅಭಿನ್ನವಾಗಿ ತನ್ನ ಶರೀರದಂತೆ ಸ್ಫುರಿಸುವುದು.

ವಾಹಚ್ಛೇದ—ಜೀವಕ್ಕೆ ಆಧಾರವಾಗಿರುವ ಪ್ರಾಣಾಪಾನಗಳನ್ನು ನಿಲ್ಲಿಸುವಿಕೆ.

ವಿಶ್ವ—ನೀಲ ಸುಖ ದೇಹ ಪ್ರಾಣಾದಿ ಸ್ವರೂಪವುಳ್ಳದ್ದಾಗಿಯೂ ಪ್ರಮಾತೃ ಪ್ರಮಾಣ ಪ್ರಮೇಯ ರೂಪವಾಗಿ ವ್ಯವಹಾರಕ್ಕೆ ಯೋಗ್ಯವಾಗಿಯೂ "ಸದಾಶಿವ ತತ್ತ್ವದಿಂದ ಭೂಮಿತತ್ತ್ವದವರೆಗಿರುವ ತತ್ತ್ವಗಳ ರೂಪವಾಗಿಯೂ ಇರುವ ಪ್ರಪಂಚ.

ನೀಲ=ಬಾಹ್ಯಾನುಭವ
ಸುಖ=ಅಂತರನುಭವ
ದೇಹ=ಸ್ಥೂಲಾನುಭವ
ಪ್ರಾಣ=ಸೂಕ್ಷ್ಮಾನುಭವ
(ಸ್ವಾನುಭವ).

ವಿಜ್ಞಾನಾಕಲಾ—ಸಪ್ತಪ್ರಮಾತೃಗಳಲ್ಲಿ ಚಿನ್ಮಾತ್ರನಾಗಿರುತ್ತಾನೆ. ಸಹಜಾವಸ್ಥೆ.

ವಿಲಾಪನ—ಅನುಗ್ರಹ.

ವಿಮರ್ಶನ—ಬಾಹ್ಯಜ್ಞಾನವನ್ನು ಅಂತರ್ಮುಖವಾಗಿ ಮಾಡುವುದು.

ವಿತರ್ಕಃ—ನಾನೇ ಶಿವನೆಂದು ಅನುಸಂಧಾನಮಾಡುವುದು.

ವಿದ್ಯಾತತ್ತ್ವ—ಉನ್ಮನಾಶಕ್ತಿ, ಕಿಂಚಿಜ್ಞತ್ವದ ಕಾರಣತತ್ತ್ವ.

ವಿದ್ಯಾಶರೀರಃ—ಪೂರ್ಣಾಹಂತಾ ವಿಮರ್ಶ.

ವಿಸರ್ಗಭೂಮಿ—ವಿಶ್ವವು ಹೊರಹೊಮ್ಮುವ ಸ್ಥಿತಿ.

ವಿಶ್ರಾಂತಿ—'ವಿಗಲಿತ ವೇದ್ಯಾಂತರಾತಯಾ'. ಮನಸ್ಸನ್ನು ಹೊರಗೆ ಹೋಗದಹಾಗೆ ಒಂದೇಕಡೆ ಲೀನಗೊಳಿಸುವುದು. 'ತನ್ಮಯೀ ಭಾವನಾ'—ಗ್ರಾಹ್ಯಗ್ರಾಹಕಗಳಲ್ಲಿ ಐಕ್ಯಭಾವವನ್ನು ತರುವುದು. ಅಹಂ ಮತ್ತು ಇದಂ ಗಳಲ್ಲಿ ಐಕ್ಯತೆ. ಧ್ಯಾನದಲ್ಲಿ ಧ್ಯಾನಮಾಡತಕ್ಕ ವಸ್ತುವಿನಲ್ಲಿ ಲಯಿಸುವುದು. ಹೀಗೆ ಮಾಡುತ್ತಾ ಹೋದರೆ ಆನಂದದಲ್ಲಿ ನಿಮಗ್ನನಾಗುವನು. ಮನಸ್ಸು ಭಾವತಃ ಚಂಚಲ. ದುಃಖದಲ್ಲಿರಲು ಇಚ್ಛಿಸುವುದಿಲ್ಲ. ಚಲಿಸುವುದು ಅದರ ಗುಣ. ಇದನ್ನು ಚಲಿಸದೆ ಒಂದು ನಿಲುಕಡೆಗೆ ತಂದು ನಿಲ್ಲಿಸುವುದು ವಿಶ್ರಾಂತಿ. ಸುಂದರವಾದ ವಸ್ತುವಿನಲ್ಲೇ ಸೌಂದರ್ಯದ ದೃಷ್ಟಿಯಿಂದ ಮೈಮರೆಯುವಂತೆ ಮಾಡುವುದು. ಆಧ್ಯಾತ್ಮಿಕ ಭಾವನೆಯಲ್ಲಿ ಆತ್ಮೈಕ್ಯಭಾವನೆ. ಈ ಪದವನ್ನು ಪ್ರವೇಶ, ಸಮಾವೇಶ, ಸಮಾಪತ್ತಿ, ತಾದಾತ್ಮ್ಯ, ತನ್ಮಯೀಭಾವನಾ, ನಿವೃತ್ತಿ, ಲಯ ಈ ಅರ್ಥಗಳಲ್ಲಿ ಉಪಯೋಗಿಸುತ್ತಾರೆ.

ವೀರೇಶಃ—ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲಿ ತುರೀಯಾನುಸಂಧಾನ ಮಾಡುತ್ತಿರುವವನು. ಇಂದ್ರಿಯಗಳಿಗೆ ಒಡೆಯನಾಗಿರುವವನು.

ಶಕ್ತಿಪಾತ—ಶಿವನ ಅನುಗ್ರಹ—ವಿಲಾಪನ. ಶಕ್ತ್ಯಾವಿಷ್ಕರಣದಿಂದ ಶಕ್ತಿಪಾತ ಉಂಟಾಗುತ್ತದೆ.

ಶಕ್ತಿವಿಕಾಸ—ಅಂತರ್ನಿಗೂಢವಾಗಿರುವ ಶಕ್ತಿಗಳನ್ನು ಭೈರವಿಯೇ ಮೊದಲಾದ ಮುದ್ರೆಗಳಿಂದ ಅಕ್ರಮವಾಗಿ ಹೊರಗೆ ಪ್ರಸರಿಸುವುದು.

ಶಕ್ತಿಸಂಕೋಚ—ಇಂದ್ರಿಯಗಳ ದ್ವಾರಾ ಪ್ರಸರಿಸುತ್ತಿರುವ ಶಕ್ತಿಗಳನ್ನು ಆಮೆಯು ತನ್ನ ತಲೆ ಕೈಕಾಲುಗಳನ್ನು ಒಳಗೆ ಎಳೆದುಕೊಳ್ಳುವಂತೆ ತನ್ನ ಹೃತ್ಪ್ರದೇಶದಲ್ಲಿ ಸೇರಿಸುವುದು.

ಶಿವಭಟ್ಟಾರಕ—ಮಂತ್ರಮಹೇಶ್ವರನಿಗಿಂತ ಉನ್ನತಸ್ಥಾನದಲ್ಲಿ ಸ್ವಪ್ರಕಾಶ ಶರೀರಯಾಗಿರತಕ್ಕವನು.

ಶಾಕ್ತೋಪಾಯಃ— ವಿಕಲ್ಪಸಂಸ್ಕಾರಗಳೇ ಮೊದಲಾದವುಗಳಿಂದ ಶಿವಸಮಾವೇಶ ವನ್ನು ಪಡೆಯುವ ಉಪಾಯ. ವರ್ಣಾನುಸಂಧಾನದಿಂದ ಪರಾ ಪಶ್ಯಂತಿ ಮಧ್ಯಮಾ ವೈಖರೀ ಧ್ಯಾನಮಾಡುವುದು.

ಶಾಂಭವೋಪಾಯಃ—ಚಿತ್ಸ್ವರೂಪದಲ್ಲಿ ಅಭಿನ್ನವಾಗಿರುವ ಇಚ್ಛಾಜ್ಞಾನ ಕ್ರಿಯಾ ಶಕ್ತಿಗಳಲ್ಲಿ ಇಚ್ಛಾಶಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ವಿಕಾಸವನ್ನು ಪಡೆಯುವದರಿಂದಾಗುವ ಶಿವಸಮಾವೇಶ.

ಶುದ್ಧವಿದ್ಯಾ—ಅಹಂ ಇದಂ ಈ ರೂಪಗಳು ಚಮತ್ಕಾರದಿಂದ ತೋರುವ ಅವಸ್ಥೆ.

ಶುದ್ಧಾಧ್ವ—ಶಿವತತ್ತ್ವದಿಂದ ವಿದ್ಯಾತತ್ತ್ವದ ವರೆಗಿರುವ ತತ್ತ್ವಪಂಚಕ. ಇಲ್ಲಿ ಗ್ರಾಹ್ಯಗ್ರಾಹಕಭಾವಗಳು ವಿಶದವಾಗಿಲ್ಲ. ಇಲ್ಲಿ ಕೇವಲ ಆಣವ ಮಲಕ್ಕೆ ಮಾತ್ರ ಅವಕಾಶ.

ಶೂನ್ಯ—ನಿರ್ವಾಣ, ನಿರ್ಬಯಲು, ಜೋಲಾಡುವ ವಿಷಯಗಳಿಲ್ಲದೆಯೂ ಪ್ರಶಾಂತ ವಾಗಿಯೂ ಅಖಂಡವಾಗಿಯೂ ಭೇದಜ್ಞಾನಗಳಿಗೆ ಆಕಾರವಾಗದೆ ಇರುವ ಚಿದ್ರೂಪಸ್ಥಿತಿ. ಮನೋಭಾವನೆಗಳಿಲ್ಲದೆಯೂ ಹಿಂದಿನ ಸಂಸ್ಕಾರಗಳಿಲ್ಲದೆಯೂ ಇರುವ ಚಿತ್ತು–ಆದರೆ ಸತ್ತ್ವವುಳ್ಳದ್ದಾಗಿ ಆಕಾಶರೂಪವಾಗಿ ನಿರ್ಮಲವಾಗಿರು ತ್ತದೆ. ತನ್ನಷ್ಟಕ್ಕೆ ತಾನೆ ಪ್ರಕಾಶಿಸುವ ಪರಿಶುದ್ಧವಾದ ಪ್ರಾಮುಖ್ಯವಾದ ಶಕ್ತಿಯೇ ಸಾರವಾಗುಳ್ಳ ಚಿತ್‌ಸಂವಿತ್ ಶಕ್ತಿ. ಭಿನ್ನಭಿನ್ನವಾಗಿರುವ ಪದಾರ್ಥ ಗಳನ್ನು ಸಂಕೋಚ ಸ್ಥಿತಿಯಲ್ಲಿ ಪ್ರಮೇಯ ಭಾವದಿಂದ ಗ್ರಹಿಸುತ್ತಿರುತ್ತದೆ. ವಿಕಾಸಸ್ಥಿತಿಯಲ್ಲಿ ಪ್ರಮೇಯಭಾವವನ್ನು ಬಿಟ್ಟು ನಿರ್ಮಲವಾದ ಮೋಘಗಳಿಲ್ಲದ ಆಕಾಶದ ಹಾಗೆ ಸ್ಫುರಿಸುತ್ತದೆ. ಇದನ್ನು ಚಿದ್ಘನ ಎಂದು ವ್ಯವಹರಿಸುತ್ತಾರೆ. ಇದು ಸ್ವಸ್ವರೂಪ ವಿಮರ್ಶೆ. ಸಂಪಿತ್ತಿನ ಶೂನ್ಯರೂಪ ಇಂಥದು.

ರೇವಣಸಿದ್ಧರು ‘ ಬಯಲಿಗೆ ಬಯಲು ನಿರ್ಬಯಲು ’ ಎಂಬ ಪದವನ್ನು ‘ ಶೂನ್ಯ ’ ಎಂಬರ್ಥದಲ್ಲಿ ಉಪಯೋಗಿಸಿರುವರು. ಇಲ್ಲಿ ‘ ನಿರ್ಬಯಲು ’ ಎಂಬುದು ಅನುಭವಾತ್ಮಕ ಮಾತು. ಬೌದ್ಧರು ಶೂನ್ಯವನ್ನು ‘ ನಿರ್ವಾಣ ’ ಎಂಬ ಭಾವಾರ್ಥದಲ್ಲಿ ಬಳಸಿರುವರು. ಶ್ರೀ ಉತ್ತಂಗಿಯವರು ನಿರ್ಬಯಲನ್ನು ಕುರಿತು ಅದು “ತಮ್ಮೆಲ್ಲ ಪ್ರೇರಣೆಗಳನ್ನು ಬಯಕೆಗಳನ್ನು ಮನೋವಿಕಾರಗಳನ್ನು ಪೂರ್ತಿಯಾಗಿ ಅಳಿಸಿ, ಪರವಸ್ತುವಿನಲ್ಲಿ ಬೆರೆತು ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುವುದೇ ಶೂನ್ಯ. ಇಲ್ಲವೇ ನಿರ್ಬಯಲು ” ಎಂದು ಹೇಳಿದ್ದಾರೆ.

ಶೂನ್ಯಪ್ರಮಾತೃತ್ವ—ನಾನು ಎಂಬ ತಿಳಿವಳಿಕೆ ಮಾತ್ರ ಇರುವ ಸ್ಥಿತಿ. ಸುಖ ದುಃಖಗಳನ್ನನುಭವಿಸುವುದಕ್ಕಾಶ್ರಯವಾದ ಶರೀರವಿಲ್ಲದಿರುವ ಸ್ಥಿತಿ.

ಸಂವಿತ್—ಜ್ಞಾನಶಕ್ತಿ, ಸ್ವಾತಂತ್ರಶಕ್ತಿ, ಪೂರ್ಣಾಹಂ ವಿಮರ್ಶಾತ್ಮಿಕಾ ಶಕ್ತಿ.

ಸಕಲ—ಸಪ್ತಪ್ರಮಾತೃಗಳಲ್ಲಿ ಎಲ್ಲಕ್ಕಿಂತ ಕೆಳಮಟ್ಟನವನು.

ಸದಾಶಿವಃ—ಇಲ್ಲಿ ಅಹಂ ಇದಂ ಇವೆರಡೂ ಅಭೇದದಿಂದ ಇರುವ ಪೂರ್ಣಾಹಂತಾವಸ್ಥೆ.

ಸಮಾಧಿ—ಜೀವನು ಬದ್ಧನಾಗಿರುವಾಗಲೇ ನಿರ್ದಿಷ್ಟಕಾಲ ಪರಮಾತ್ಮನ ಸಂಬಂಧ ವನ್ನು ಪಡೆಯುವುದು.

ಸುಪ್ರಬುದ್ಧಂ—ತುರೀಯಾವಸ್ಥೆ.

ಹಠಪಾಕಃ—ಕಷ್ಟಸಾಧನೆಯಿಂದ ವಿಕಲ್ಪಗಳನ್ನು ಹದಮಾಡುವುದು. ಕ್ರಮ ಮತ್ತು ಅಕ್ರಮ ಸಾಧನೆಗಳಿಂದ ಪಾಕವಾಗುವುದು.

ಭಟ್ಟನಾರಾಯಣ—೯ ನೆಯ ಶತಮಾನ

ಕ್ರಿ.ಶ. ೯ ನೆಯ ಶತಮಾನದಲ್ಲಿ ಕೆಲವು ಕಾಶ್ಮೀರ ಶೈವಪಂಡಿತರು ಅಮೂಲ್ಯ ಗ್ರಂಥಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಕೆಲವು ಶಾಸ್ತ್ರೀಯ ವಿಚಾರಗಳಿಂದ ಪಂಡಿತ ವರ್ಗಕ್ಕೆ 'ವಿಚಾರದರ್ಪಣ' ದಂತೆ ಶೋಭಿಸುತ್ತಿವೆ. ಲೌಕಿಕದಲ್ಲಿ ಸಾಮಾನ್ಯವಾಗಿ ನಾವು ಕನ್ನಡಿ ಮುಂದೆ ನಿಂತು ನೋಡಿದರೆ ನಮ್ಮ ಎಡಭಾಗ ಬಲಭಾಗವಾಗಿ, ಬಲ ಭಾಗ ಎಡಭಾಗವಾಗಿ ಪ್ರತಿಬಿಂಬ ಕಾಣಿಸುತ್ತದೆ. ಇಲ್ಲಿ 'ದರ್ಪಣ' ಎಂದರೆ ಕನ್ನಡಿ ಯಲ್ಲಿ ಕಾಣುವ ಪ್ರತಿಬಿಂಬ ಹೀಗೆ ವ್ಯತ್ಯಾಸವಾಗಿ ಕಾಣುತ್ತದೆ. ಆದರೆ ಇದಕ್ಕೆ ವ್ಯತಿ ರೇಕವಾಗಿ "ಶಾಸ್ತ್ರದರ್ಪಣ"ದಲ್ಲಿ ಕಾಣುವ ತತ್ತ್ವಾರ್ಥ ಸ್ವಸ್ವರೂಪ ವ್ಯತ್ಯಾಸವಿಲ್ಲದೆ ಸ್ವಾಭಾವಿಕವಾಗಿಯೂ ಸತ್ಯವಾಗಿಯೂ ಗೋಚರವಾಗುತ್ತದೆ. ಇಲ್ಲಿ ಶಾಸ್ತ್ರದರ್ಪಣ ವೆಂದರೆ ವಿಚಾರದಿಂದ ಪರಿಣಮಿಸುವ ನಿಶ್ಚಯ ಜ್ಞಾನ.

ಕಾಶ್ಮೀರ ಪಂಡಿತರಲ್ಲಿ ಸ್ತೋತ್ರಗಳನ್ನು ಬರೆದಿರುವವರು ಕೆಲವರು. ಪರವಸ್ತು ವಿನ ಅನುಭವವನ್ನು ಇಲ್ಲಿಯೇ ಪಡೆಯಲಿಕ್ಕೆ ಸಾಧಕವಾದ ಮತ್ತು ಬೋಧಕವಾದ ಶ್ಲೋಕಗಳನ್ನು ರಚಿಸಿರುವರು ಕೆಲವರು. ಇವುಗಳಲ್ಲಿ ಸಾಧನಮಾರ್ಗಗಳು ಅನುಭವದ ಹಂತಗಳು, ಭಕ್ತಿಯ ಮೇಲ್ಮೆ, ತಿಳಿವಳಿಕೆಯ ಲಕ್ಷಣ, ತಿಳಿವಳಿಕೆಯುಳ್ಳವನ ಮನೋ ಭಾವ ಸ್ವರೂಪ, ಸಾಧಕನು ಯಾವಾಗಲೂ ಹೊಂದಿರಬೇಕಾದ ಆಲಂಬನ ಯೋಗದ ಸೂಚನೆ ಮತ್ತು ಪ್ರಾಸಂಗಿಕವಾದ ಹಲವಾರು ವಿಷಯಗಳನ್ನು ಸುಲಭ ಶೈಲಿಯಲ್ಲಿ ವರ್ಣಿಸಿರುತ್ತಾರೆ. ತದ್ವೃತ್ತಿಯುಳ್ಳ ಪ್ರಸನ್ನರಾದ ಸಾಧಕರಿಗೆ ಇವು ಕೈದೀವಿಗೆ ಯಂತಿವೆ.

ಸ್ತವಚಿಂತಾಮಣಿ

(ಕಾಶ್ಮೀರ ಶೈವತತ್ತ್ವಗಳ ಸ್ವರೂಪಾನುಭವ)

ಸ್ತವಚಿಂತಾಮಣಿಯನ್ನು ಬರೆದಿರುವ ಭಟ್ಟನಾರಾಯಣ ಸಾಧಕನು ಮಾತ್ರವಲ್ಲ- ಸಿದ್ಧಪುರುಷ. ಆತನು ಸಾಧಕರಿಗೆ ಪರವಸ್ತುವನ್ನು ಪಡೆಯುವ ರೀತಿಯನ್ನು ಸಂಕ್ಷೇಪವಾಗಿ ಈ ಶ್ಲೋಕಗಳಲ್ಲಿ ಸೂಚಿಸಿದ್ದಾನೆ. ಸಾಧಕನು ಹೇಗೆ ಹಂತ ಹಂತವಾಗಿ ಕೊನೆಗೆ ಒಟ್ಟಾಗಿ ಪರವಸ್ತುವನ್ನು ಅರಿಯುತ್ತಾನೆ ಅನುಭವಿಸುತ್ತಾನೆ ಎಂಬುದನ್ನು ಉಪದೇಶಿಸಿರುತ್ತಾನೆ-ಸ್ತವಚಿಂತಾಮಣಿಯ ಕೆಲವು ಶ್ಲೋಕಗಳನ್ನು ಅರ್ಥಸಹಿತ ಈ ಕೆಳಗೆ ವಿವರಿಸಿದೆ—

ಪ್ರಣವೋರ್ಧ್ವಾರ್ಧಮಾತ್ರಾತೋಽ
ಪ್ಯಣವೇ ಮಹತೇ ಪುನಃ ।
ಬ್ರಹ್ಮಾಂಡಾದಪಿ ನೈರ್ಗುಣ್ಯ
ಗುಣಾಯ ಸ್ಥಾಣವೇ ನಮಃ ॥೬॥

ಓಂ ಸ್ವರವನ್ನು ಉಚ್ಚರಿಸುವಾಗ ಓಂ ಎನ್ನುವುದು ವಾಚಕ. ಇದರಿಂದ ತಿಳಿಯಲ್ಪಡತಕ್ಕದ್ದು ಪರವಸ್ತು-ಪರಮಾತ್ಮ. ಅರ್ಧಮಾತ್ರಾ ಕಾಲದಲ್ಲಿ ‹ ಓಂ ' ಉಚ್ಚರಿಸಿದ ನಂತರ ಸೂಕ್ಷ್ಮವಾಗಿಯೂ ವಿಶ್ವಕ್ಕಿಂತ ದೊಡ್ಡದಾಗಿಯೂ ನಿರ್ಗುಣವಾಗಿಯೂ ಅದೇ ಗುಣವಾಗಿಯೂ ಉಳ್ಳ ಶಾಶ್ವತವಾದ ಪರಮಾತ್ಮನಿಗೆ ನಮಸ್ಕಾರ,

ವಾಙ್ಮನಃ ಕಾಯಕರ್ಮಾಣಿ
ವಿನಿಯೋಜ್ಯತ್ವಯಿ ಪ್ರಭೋ ।
ತ್ವನ್ಮಯೀಭೂಯ ನಿರ್ದ್ವಂದ್ವಾಃ
ಕಚ್ಚಿತ್ಸ್ಯಾಮಾಪಿ ಕರ್ಹಿಚಿತ್ ॥೧೭॥

ಪ್ರಭುವೆ, ವಾಕ್ಕು ಮನಸ್ಸು ಶರೀರ ಇವುಗಳ ಚಲನವಲನಗಳನ್ನು ನಿನ್ನಲ್ಲಿ ಉಪಯೋಗಿಸಿ ನಿನ್ನನ್ನೇ ಸಾತ್ಮೀಕರಿಸಿ ಸುಖದುಃಖಗಳನ್ನು ಕಳೆದು ಆನಂದಮಯರಾಗೋಣ. ಭೇದರಹಿತವಾದ ತಾದಾತ್ಮ್ಯಭಾವನ್ನು ಪಡೆಯುವವರಾಗೋಣ-ಇದು ನಮ್ಮೆಲ್ಲರ ಆಸೆ.

ಶ್ರೀಮದಭಿನವಗುಪ್ತಾಚಾರ್ಯರು ‘ ಅನುಭವ ನಿವೇದನಂ ’ ಎಂಬ ನಾಲ್ಕು ಶ್ಲೋಕಗಳಲ್ಲಿ ಅಂತಃಪ್ರಜ್ಞೆಯ ಅನುಭವಗಳನ್ನು ಸೂಚಿಸಿರುತ್ತಾರೆ (ಪುಟ ೧೫೩)

ಶ್ರೀ ಉತ್ಪಲ ದೇವಾಚಾರ್ಯರು ಶಿವಾದ್ವೈತತತ್ತ್ವವನ್ನು ‘ ಶಿವಸ್ತೋತ್ರಾವಳಿ ’ಯ ಕೆಲವು ಶ್ಲೋಕಗಳಲ್ಲಿ ಪ್ರತಿಪಾದಿಸಿರುತ್ತಾರೆ. (ಪುಟ ೧೭೮)

ನಮೋ ನಮಃ ಶಿವಾಯೇತಿ
ಮಂತ್ರಸಾಮರ್ಥ್ಯಮಾಶ್ರಿತಾಃ ।
ಶ್ಲಾಘ್ಯಾಸ್ತೇ ಶಾಂಭವೀಂ ಭೂತಿ
ಮುಪಭೋಕ್ತುಂ ಯ ಉದ್ಯತಾಃ ॥೨೦॥

ನಮಃ ಶಿವಾಯ ಎಂಬ ಮಂತ್ರದ ಸಾಮರ್ಥ್ಯವನ್ನು ಆಶ್ರಯಿಸಿರುವವರು ಧನ್ಯರು. ಅವರು ಶಾಂಭವೀ ಐಶ್ವರ್ಯವನ್ನು ಅನುಭವಿಸುವುದಕ್ಕೆ ಉದ್ಯುಕ್ತರಾಗಿರುವರು. ಅಂತಹವರಿಗೆ ಯಾವ ಮಾರ್ಗವು ತಾನೆ ಪರವಸ್ತುವನ್ನು ಪಡೆಯಲು ಅರ್ಹವಲ್ಲ!

ಕಃ ಪಂಥಾ ಯೇನ ನ ಪ್ರಾಪ್ಯಃ
ಕಾ ಚ ವಾಙ್ನೋಚ್ಯಸೇ ಯಯಾ ।
ಕಿಂ ಧ್ಯಾನಂ ಯೇನ ನ ಧ್ಯೇಯಃ
ಕಿಂ ವಾ ಕಿಂ ನಾಸಿ ಯತ್ಪ್ರಭೋ ॥೨೧॥

ಯಾವ ವಿಧವಾದ ಧ್ಯಾನ ಅಮಿತವಾದ ಪ್ರಕಾಶವನ್ನು ನೀಡುವುದಿಲ್ಲ! ಯಾವುದು ವಾಕ್ಕಿಗೆ ಮನಸ್ಸಿಗೆ ಪ್ರಕಾಶವನ್ನು ನೀಡುವುದಿಲ್ಲ! ಯಾವ ಧ್ಯಾನವು ಧ್ಯೇಯವಾದ ಪರವಸ್ತುವನ್ನು ತೋರುವುದಿಲ್ಲ! ಪರವಸ್ತುವನ್ನು ಬಿಟ್ಟು ಬೇರೆ ಯಾವುದಿದೆ.

ಕರಣ ಮತ್ತು ಕಳೇಬರ ಪರವಸ್ತುವಿನಿಂದ ಬೇರೆಯಲ್ಲವೆಂಬ ಭಾವನೆಯು–ಅಂತರಂಗದಲ್ಲಿ–ಅನುಭವ ಹೃದಯದಲ್ಲಿ–ಮೂಡಿರುವವರಿಗೆ ಈ ವಿಶ್ವವೆಲ್ಲವೂ ಶಿವಾಭಿನ್ನವಾಗಿ ಪ್ರಕಾಶಿಸುವುದು.

ನಮಃ ಸ್ತುತೌ ಸ್ಮೃತೌ ಧ್ಯಾನೇ
ದರ್ಶನೇ ಸ್ಪರ್ಶನೇ ತಥಾ ।
ಪ್ರಾಪ್ತೌ ಚಾನಂದ ವೃಂದಾಯ
ದಯಿತಾಯ ಕಪರ್ದಿನೇ ॥೨೬॥

ನಮಸ್ಕಾರ, ಸ್ತೋತ್ರ, ಸ್ಮೃತಿ, ಧ್ಯಾನ, ದರ್ಶನ, ಸ್ಪರ್ಶನ ಮತ್ತು ಪ್ರಾಪ್ತಿಗಳಲ್ಲಿ ಆನಂದಸಂದೋಹ ರೂಪವಾಗಿರುವ ಪರಮಸ್ನೇಹಿತನಾದ ಪರತತ್ತ್ವರೂಪಿಯಾದ ಶಿವನೇ—ನಿನಗೆ ನಮಸ್ಕಾರ.

ಆತ್ಮವಿಕಾಸಕ್ಕಾಗಿ ನಾವು ಪ್ರಯೋಗಿಸುವ ಪದಗಳು ಅವುಗಳಿಂದ ತಿಳಿಯತಕ್ಕ ಗುರಿ ಬೇರೆಯಾದವುಗಳಾದರೂ—ವ್ಯಾಖ್ಯಾತೃ ವ್ಯವಹಾರ ಅತೀಂದ್ರಿಯ ವಿಷಯಗಳಲ್ಲೂ ಇರುತ್ತದೆ. ನಮಸ್ಕಾರದಲ್ಲಿ ಪ್ರವೃತ್ತಿ, ಸ್ತುತಿ ಸ್ಥೈರ್ಯಕ್ಕೆ ಪ್ರಯತ್ನ, ಸ್ಮೃತಿಯಲ್ಲಿ ಸ್ಥೈರ್ಯ, ಧ್ಯಾನದಲ್ಲಿ ಪ್ರಾಪ್ತಿಗೆ ವ್ಯವಸಾಯ, ದರ್ಶನ ಸ್ಪರ್ಶನಗಳಲ್ಲಿ ಪ್ರಾಪ್ತಿ–ಆನಂದ.

ಚಿಂತ ಯಿತ್ವಾಪಿ ಕರ್ತವ್ಯ
ಕೋಟೀಶ್ಚಿತ್ತಸ್ಯ ಚಾಪಲಾತ್ ।
ವಿಶ್ರಾಮ್ಯನ್ನಭವ ಭಾವತ್ಕ
ಚಿತ್ತಾನಂದೇರಸೌಭೃಶವ್ ॥೩೮॥

ಸಂತೋಷವನ್ನು ಶರೀರದಲ್ಲಿಯೂ ಇಂದ್ರಿಯಗಳಲ್ಲಿಯೂ ಪರಾಧೀನವಾಗಿ ಅನುಭವಿಸಬಹುದು. ಮನಸ್ಸಿನಲ್ಲಿ ಮೋಹಾತ್ಮಕವಾಗಿ ಅನುಭವಿಸಬಹುದು. ಜ್ಞಾನಕ್ಷೇತ್ರದಲ್ಲಿ ಚಿತ್ಸ್ವರೂಪಾನಂದದಲ್ಲಿ ಅನುಭವಿಸಬಹುದು. ವಿಕಾಸವನ್ನು ಪಡೆದಿರುವ ಸಾಧಕನು ಮನಸ್ಸಿನ ಚಾಂಚಲ್ಯದಿಂದ ತಾನು ಮಾಡಬೇಕಾದ ಕೆಲಸಗಳನ್ನು ಚಿಂತನೆಮಾಡಿ ಪರಾಧೀನ ಮತ್ತು ಸ್ವಾಧೀನ ಈ ಎರಡು ಬಗೆಯಾಗಿರುವ ಅನುಭವದಲ್ಲಿ ಅನೇಕ ಕೋಟಿಗಳನ್ನು ಕಂಡರೂ ವಿಶ್ರಾಂತಿಯನ್ನು ಪಡೆಯುತ್ತಾನೆ. ಚಿತ್ತಾನಂದದಲ್ಲಿ ರಮಿಸುತ್ತಾನೆ—

ರಾಗೋಽಪ್ಯಸ್ತು ಜಗನ್ನಾಥ
ಮಮತ್ವಯ್ಯೇವ ಯಃ ಸ್ಥಿತಃ ।
ಲೋಭಾಯಾಪಿ ನಮಸ್ತಸ್ಮೈ
ತ್ವಲ್ಲಾಭಾಲಂಬನಾಯ ಮೆ ॥೪೭॥

ನನ್ನಲ್ಲೇ ಇರುವ ಪ್ರಭುವೆ,–ನಿನ್ನನ್ನು ಪಡೆಯಬೇಕೆಂಬ ರಾಗವೂ ನನಗಿರಲಿ, ಲೋಭವೂ ಇರಲಿ. ಅಂತಹ ರಾಗ ಮತ್ತು ಲೋಭಗಳಿಗೆ ನಮಸ್ಕಾರ.

ಅಹೋಮಹದಿದಂ ಕರ್ಮ
ದೇವತ್ವದ್ಭಾವನಾತ್ಮಕಂ ।
ಆ ಬ್ರಹ್ಮಕ್ರಿಮಿ ಯಸ್ಮಿನ್ನೊ
ಮುಕ್ತಯೇಽಧಿಕ್ರಿಯೇತ ಕಃ ॥೪೮॥

ಎಲೈ ಪ್ರಭುವೆ, ಬ್ರಹ್ಮ ಮೊದಲ್ಗೊಂಡು ಸಣ್ಣ ಕ್ರಿಮಿವರೆವಿಗೂ ನಿನ್ನ ಇಚ್ಛಾಮಾತ್ರದಿಂದ ಸೃಷ್ಟಿಕಾರ್ಯ ನಡೆದಿದೆ. ಅಂತಹ ಭಾವನೆಯಿಲ್ಲದವನು—ಆ ತತ್ತ್ವದ ಭಾವನಾತ್ಮಕವಾದ ಸ್ಥೈರ್ಯವಿಲ್ಲದವನು ಮುಕ್ತಿಗೆ ಅಧಿಕಾರಿಯಾದಾನೆಯೆ!

ನಮಃ ಪ್ರಸನ್ನ ಸದ್ವೃತ್ತ
ಮಾನಸೈಕ ನಿವಾಸಿನೆ ।
ಭೂರಿ ಭೂತಿ ಸಿತಾಂಗಾಯ
ಮಹಾ ಹಂಸಾಯ ಶಂಭವೇ ॥೫೭॥

ಪ್ರಸನ್ನರಾಗಿರುವವರ ಸದ್ವೃತ್ತಿಯುಳ್ಳವರ ಮನಸ್ಸಿನಲ್ಲಿ ಮಾತ್ರ ಇರುವ ಪ್ರಭುವೆ. ವಿಭೂತಿಯಿಂದ ಬೆಳ್ಳಗಿರುವ ಮಹಾ ಹಂಸಮೂರ್ತಿಯೆ ನಿನಗೆ ನಮಸ್ಕಾರ.

ಏಷ ಮುಷ್ಟ್ಯಾ ಗೃಹೀತೋಽಪಿ
ದೃಷ್ಟ ಏಷಕ್ವಯಾಸಿನಃ ।
ಇತಿ ಭಕ್ತಿ ರಸಾಧ್ಮಾತಾ
ಧನ್ಯಾಧಾವಂತಿ ಧೂರ್ಜಟಿಂ ॥೬೮॥

ಎಲೈ ಪ್ರಭುವೇ—ಧನ್ಯರಾದ ಸಾಧಕರಾದ ನಾವು ನಿನ್ನನ್ನು ಕೈಯಿಂದ ಹಿಡಿದುಕೊಂಡಿದ್ದೇವೆ. ನಾವು ನಿನ್ನನ್ನು ಕಂಡೆವು. ಈಗ ನೀನು ಎಲ್ಲಿ ಹೋಗುವೆ ಎಂದು ಭಕ್ತಿರಸದಿಂದ ಸಾಕ್ಷಾತ್ಕಾರವನ್ನು ಪಡೆದಿರುವ ಮಹನೀಯರು ಧನ್ಯರು.

ಕೋ ಗುಣೈರಧಿಕ ಸ್ತ್ವತ್ತಃ
ತ್ವತ್ತಃ ಕೋ ನಿರ್ಗುಣೋಽಧಿಕಃ ।
ಇತಿ ನಾಥ ನುಮಃ ಕಿಂ ತ್ವಾಂ
ಕಿಂ ನಿಂದಾಮೋನ ಮನ್ಮಹೆ ॥೯೭॥

ನಿನಗಿಂತ ಗುಣಗಳಲ್ಲಿ ದೊಡ್ಡವರಾರು. ನಿನಗಿಂತ ನಿರ್ಗುಣರಾರು ಅಧಿಕರು. ನಿನ್ನನ್ನು ಹೊಗಳೋಣವೇ ತೆಗಳೋಣವೇ--ಒಂದೂ ತಿಳಿಯುತ್ತಿಲ್ಲ—

ಸ್ಥಿತ್ಯುತ್ಪತ್ತಿಲಯೈರ್ಲೋಕ
ತ್ರಯಸ್ಯೋಪಕ್ರಿಯಾಸ್ವಿಹ ।
ಏಕೈವೇಶ ಭವಚ್ಛಕ್ತಿಃ
ಸ್ವತಂತ್ರಂ ತಂತ್ರಮಿಷ್ಯತೆ ॥೧೦೭॥

ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ನಿನ್ನ ಸ್ವತಂತ್ರವಾದ ಶಕ್ತಿಯೊಂದೇ ಕಾರಣವಾಗಿದೆ.

ತಚ್ಚಕ್ಷುರೀಕ್ಷಸೆಯೇನ
ಸಾಗರ್ಗತಿರ್ನ್ಯಸೆ ಯಯಾ ।
ಫಲಂ ತದಜ ಜಾತಂ ಯ
ತ್ವತ್ಕಥಾ ಕಲ್ಪ ಪಾದಪಾತ್ ॥೧೦೯॥

ಯಾವುದರಿಂದ ನಿನ್ನನ್ನು ನೋಡುವೆವೋ ಅದೇ ಕಣ್ಣು. ಯಾವುದರಿಂದ ನಿನ್ನನ್ನು ಪಡೆಯುವೆವೋ ಅದೇ ಗತಿ-ನಡಿಗೆ-ಯಾವುದರಿಂದ ನಿನ್ನ ಜ್ಞಾನ ಉಂಟಾಗುತ್ತದೆಯೋ ಅದೇ ಫಲ. ಅದು ನಿನ್ನ ಕಥಾಕಲ್ಪವೃಕ್ಷದಿಂದ ದೊರೆಯುವಂತಹುದು.

ಧನ್ಯೋಽಸ್ಮಿ ಕೃತಕೃತ್ಯೋಽಸ್ಮಿ
ಮಹಾನಸ್ಮೀತಿ ಭಾವನಾ ।
ಭವೇತ್ಸಾಲಂಬನಃತಸ್ಯ
ಯತ್ವ್ವದಾಲಂಬನಃ ಪ್ರಭೋ ॥೧೧೫॥

ಯಾರ ಮನಸ್ಸಿಗೆ ನೀನೇ ಧ್ಯೇಯ ವಸ್ತುವಾಗಿ ಆಲಂಬನವಾಗಿರುತ್ತೀಯೋ ಅವನು ನಾನು. ನಾನು ಧನ್ಯನಾದೆ, ಕೃತಕೃತ್ಯನಾದೆ, ನಾನು ಮಹಾನ್ ಆದೆ ಎಂಬ ಆಲಂಬನ ಭಾವನೆಯುಳ್ಳವನಾಗುವೆನು.

ಅಕಾರಾದಿ ಸೂಚಿ

ಒಪ್ಪೋಲೆ

ತಪ್ಪು	ಒಪ್ಪು	ಪುಟ
ಶಿವಸೂತ್ರಗಳನ್ನೂ	ಶಿವಸೂತ್ರಗಳನ್ನು	೩
ಮಾಡವದಾಗಿರುತ್ತದೆ	ಮಾಡುವುದಾಗಿರುತ್ತದೆ	೩
ಶಿವನೇ ಅಥನ್ನು	ಶಿವನೇ ನಾನು ಎನ್ನುವುದನ್ನು	೨೩
ಕಂಚುಕಿ	ಕಂಚುಕ	೨೭
ಶಿವಮಾರ್ಗವನ್ನನುಸರಿಸದ	ಶಿವಮಾರ್ಗವನ್ನನಸರಿಸಿದ	೨೭
ಸಂವದ್ರೂಪವಾದ	ಸಂವಿದ್ರೂಪವಾದ	೩೨
ಹೊಂದಿರುತ್ತಾರೆ	ಹೊಂದಿರುತ್ತವೆ	೩೨
ರಸತತಾತ್ರ	ರಸತನ್ಮಾತ್ರ	೪೧
ತಂ ಶಕ್ತಿಚಕ್ರವಿಭವಪ್ರಭಂ	ತಂ ಶಕ್ತಿ ಚಕ್ರ ವಿಭವಪ್ರಭವಂ	೨೩
ಪ್ರಥಮಾತುರ್ವಿಃ	ಪ್ರಥಮಾ ತುಟಿಃ	೭೫
ಪ್ರತ್ಯಾಹಾರ್ಯ	ಪ್ರತ್ಯಾಹಾರ	೯೭
ಇತ್ಯೇವಂ ಪರಿಜಾನಕಃ	ಇತ್ಯೇವಂ ಪರಿಜಾನತಃ	೧೦೧
ಪರ್ಯವಸಾನ ವಾನ	ಪರ್ಯವಸಾನ	೧೧೪

ತಪ್ಪು—ಪರಮಾವರಣಂ ಮಲ ಇಪ ಸೂಕ್ಷ್ಮಾಂ ಮಾಯಾದಿ ಕಂಚುಕಂ
ಸ್ಥೂಲಂ ಬಾಹ್ಯಂ ವಿಗ್ರಹ ರೂಪಕೋಶತ್ರಯು ವೇಷ್ಟಿತೋ ಹ್ಯಾತ್ಮಾ । ೧೨೩
ಶ್ಲೋಕ ೫೫

ಒಪ್ಪು—ಪರಮಾವರಣಂ ಮಲ ಇಪ ಸೂಕ್ಷ್ಮಂ ಮಾಯಾದಿ ಕಂಚುಕಂ ಸ್ಥೂಲಂ
ಬಾಹ್ಯಂ ವಿಗ್ರಹರೂಪಂ ಕೋಶತ್ರಯುವೇಷ್ಟಿತೋ ಹ್ಯಾತ್ಮಾ।
ಪರಮಾರ್ಥಸಾರ ಶ್ಲೋಕ ೨೪

ತಪ್ಪು—ತುಷ ಕಂಬುಕ ಕಿಂಶಾರುಕ ಮುಕ್ತ ಜೀಜಂ ಯಥಾಂ ಕುರುತೆ ।
ನೈವ ತಥಾಣವ ಮಾಯಾ ಕರ್ಮವಿಮುಕ್ತೋ ಭವಾಂಕುರಂ ಹ್ಯಾತ್ಮಾ ॥ ೧೨೩
ತಂತ್ರಸಾರ ೫೭

ಒಪ್ಪು—ತುಷ ಕಂಬುಕ ಕಿಂಶಾರುಕ ಮುಕ್ತಂ ಬೀಜಂ ಯಥಾಂ ಕುರುಕುರುತೆ
ತಥಾಣವಮಾಯಾ ಕರ್ಮವಿಮುಕ್ತೋ ಭವಾಂಕುರಂ ಹ್ಯಾತ್ಮಾ
ಪರಮಾರ್ಥಸಾರ ಶ್ಲೋಕ ೫೭

ಅನನ್ಯಾಪೇಕ್ಷಿ ಶಾ	ಅನನ್ಯಾಪೇಕ್ಷಿತೌ	೧೪೧
ಸವಿದಂ	ಸಂವಿದಂ	೧೪೭
ಹೊಗಳಲ್ಲಿ	ಹೊಗಳಲಿ	೧೭೭
ಪ್ರತ್ಯಾಭಿಜ್ಞಾ	ಪ್ರತ್ಯಭಿಜ್ಞಾ	೧೮೪
ಸಸ್ವರೂಪ	ಸ್ವಸ್ವರೂಪ	೦೯೩
ಸಂಚವೇ	ಸಂಕೋಚವೇ	೧೯೪
ಮಿತ್ರಪ್ರಮಾತೃ	ಮಿತಪ್ರಮಾತೃ	೧೯೮
ಸಮಾಹವನ್ನು	ಸಮೂಹವನ್ನು	೨೦೩
ಹ್ರಸದೃಷ್ಟಿ	ಹ್ರಸ್ವದೃಷ್ಟಿ	೨೦೫
ತುಮಾವಸ್ಥೆ	ತುರೀಯಾವಸ್ಥೆ	೨೧೨
ಪರಮಾರ್ಶವು	ಪರಾಮರ್ಶವು	೨೧೨
ಪಲೀಯೇತ್	ಪ್ರಲೀಯೇತ	೨೧೯
ಪ್ರಾಣಗಲಿಂಗ	ಪ್ರಾಣಲಿಂಗ	೭೦೭
ಅನಾಹುತನಾದ	ಅನಾಹತನಾದ	೩೦೭
ಪಶ್ಯಂತ	ಪರ್ಯಂಕ ಪಂಚಶಿಖಾ	೩೧೯

ಗ್ರಂಥಗಳ ಸ್ಮರಣೆ

ಕಾಶ್ಮೀರಪ್ರಾಚ್ಯ ಸಂಶೋಧನಾಲಯದ ಪ್ರಕಟನೆಗಳು

ಸಂಸ್ಕೃತ

ವಸುಗುಪ್ತ	ಕ್ರಿ. ಶ. ೮೦೦–೮೫೦	ಶಿವಸೂತ್ರಗಳು
ಕಲ್ಲಟ	ಕ್ರಿ. ಶ. ೮೫೦–೯೦೦	ಸ್ಪಂದಕಾರಿಕಾ
ಸೋಮಾನಂದ	ಕ್ರಿ. ಶ. ೮೫೦–೯೧೦	ಶಿವದೃಷ್ಟಿ
ಉತ್ಪಲದೇವ	ಕ್ರಿ. ಶ. ೯೫೦–೯೭೫	ಸಿದ್ಧತ್ರಯೀ, ಈಶ್ವರಪ್ರತ್ಯಭಿಜ್ಞಾಕಾರಿಕಾವೃತ್ತಿ, ಶಿವಸ್ತೋತ್ರಾವಳಿ
ರಾಮಕಾಂತ	ಕ್ರಿ. ಶ. ೯೨೫–೯೭೫	ಸ್ಪಂದಕಾರಿಕಾವಿವೃತಿ
ಭಟ್ಟನಾರಾಯಣ	ಕ್ರಿ. ಶ. ೯೮೦–೧೦೨೦	ಸ್ತವಚಿಂತಾಮಣಿ
ಅಭಿನವಗುಪ್ತ	ಕ್ರಿ. ಶ. ೯೯೩–೧೦೧೫	ಈಶ್ವರ ಪ್ರತ್ಯಭಿಜ್ಞಾವಿಮರ್ಶಿನಿ, ಭಾಗ ೧, ೨ ಪರಮಾರ್ಥಸಾರ, ಪರಾತ್ರಿಂಶಿಕ ವಿವರಣ, ತಂತ್ರಾಲೋಕ ೧, ೨, ೩, ೪, ೮, ತಂತ್ರಸಾರ
ಕ್ಷೇಮರಾಜ	ಕ್ರಿ. ಶ. ೧೦೨೫–೧೦೭೫	ಪ್ರತ್ಯಭಿಜ್ಞಾಹೃದಯ ಷಟ್ತ್ರಿಂಶತತ್ತ್ವಸಂದೋಹ ಸ್ಪಂದಸಂದೋಹ ಶಿವಸೂತ್ರವಿಮರ್ಶಿನಿ
ಭಟ್ಟವಾಮದೇವ		ಜನನ-ಮರಣ ವಿಚಾರ
ಕ್ಷೇಮರಾಜ ಮತ್ತು ಶಿವೋಪಾಧ್ಯಾಯ		ವಿಜ್ಞಾನಭೈರವ
ಮಹೇಶ್ವರಾನಂದ		ಮಹಾರ್ಥಮಂಜರಿ (ಪರಿಮಳವ್ಯಾಖ್ಯಾನ ಸಹಿತ)
ಭಾಸ್ಕರ ಕವಿ	ಕ್ರಿ. ಶ. ೧೬೭೫–೧೭೫೦	ಲಲ್ಲವಾಕ್ಯಾನಿ

ಇಂಗ್ಲೀಷು

ಪ್ರತ್ಯಭಿಜ್ಞಾಹೃದಯ	ಡಾ॥ ಕೆ. ಎಂ. ಟಿ. ಲೇಡೇಕರ್
ಅಭಿನವಗುಪ್ತ	ಡಾ॥ ಕೆ. ಸಿ. ಪಾಂಡೆ
ಭಾಸ್ಕರಿ–ವಾಲ್ಯೂಂ I, II, III,	,,
ಕಾಶ್ಮೀರಶೈವಿಜಂ	ಡಾ॥ ಜೆ. ರುದ್ರಪ್ಪ

ಕನ್ನಡ

ಲಲ್ಲಯೋಗೀಶ್ವರಿ	ಡಾ॥ ಜೆ. ರುದ್ರಪ್ಪ
ಪರಮಾರ್ಥಸಾರ	ಪ್ರೊ. ಎಸ್. ಎಸ್. ರಾಘವಾಚಾರ್

ವಿಮರ್ಶಾ ಪತ್ರಗಳು

ಕಾಶ್ಮೀರ ಶೈವಧರ್ಮ (English edition)

ಎಷ್ಟೋ ವರ್ಷಗಳ ಕಾಲ ಆಸ್ಥೆಯಿಂದ ಈ ಶಾಸ್ತ್ರ (ಪ್ರತ್ಯಭಿಜ್ಞಾ)ವನ್ನು ಆಳವಾಗಿ ಅಭ್ಯಾಸಮಾಡಿರುವ ಮಾನ್ಯ ಲೇಖಕರು ಈಗಾಗಲೇ ಕನ್ನಡದಲ್ಲಿ ಆಕರ ಗ್ರಂಥಗಳಾದ ಪ್ರತ್ಯಭಿಜ್ಞಾಹೃದಯ, ಶಿವಸೂತ್ರ ಇತ್ಯಾದಿಗಳನ್ನು ವಿವರಣೆಗಳೊಂದಿಗೆ ಪ್ರಕಟಿಸಿ ವಿದ್ವಾಂಸರ ಮನ್ನಣೆಗೆ ಪಾತ್ರರಾಗಿದ್ದಾರೆ. ಲೇಖಕರ ನಿರೂಪಣೆಗಳು ಸರಳವಷ್ಟೇ ಅಲ್ಲ, ಸಾರಗ್ರಾಹಿಯೂ ಆಗಿದೆ. ಅವರ ವಿಷಯಸಂಗ್ರಹಣ ಸಮಗ್ರವಾಗಿರುವಂತೆ ಸಮೃದ್ಧವಾಗಿಯೂ ಇದೆ. ಎಲ್ಲಾ ರೀತಿಯಿಂದಲೂ ಗ್ರಂಥವು ಶ್ಲಾಘ್ಯವಾಗಿರುವುದರಿಂದ ತತ್ತ್ವ ಜಿಜ್ಞಾಸುಗಳ ಗೌರವವನ್ನು ಗಳಿಸುವುದರಲ್ಲಿ ಸಂಶಯವಿಲ್ಲ. ಒಟ್ಟನಲ್ಲಿ ತತ್ತ್ವಜ್ಞಾನವನ್ನು ಸ್ವಾನುಭವದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದೆಂಬುದರ ಕುತೂಹಲವುಳ್ಳವರೆಲ್ಲರಿಗೂ ಇದು ಉಪಯೋಗಿಯಾದ ಗ್ರಂಥ.

ಕೆ. ಕೃಷ್ಣಮೂರ್ತಿ,
(ಕರ್ಣಾಟಕ ವಿಶ್ವವಿದ್ಯಾನಿಲಯ).

ಲಲ್ಲಯೋಗೀಶ್ವರಿ

ಶ್ರೀಮಾನ್ ಜೆ. ರುದ್ರಪ್ಪನವರು ತಮ್ಮ ಸತತವಾದ ವಿದ್ವತ್ಸಾಧನೆ ಮತ್ತು ಪ್ರಗಾಢ ಪರಿಶ್ರಮಗಳಿಂದ ಈ ಅಮೂಲ್ಯ ಶಾಸ್ತ್ರ ಶಾಖೆಯನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಅವರ 'ಪ್ರತ್ಯಭಿಜ್ಞಾ ಹೃದಯ' ಮತ್ತು 'ಶಿವಸೂತ್ರ' ಈ ಕ್ಷೇತ್ರದಲ್ಲಿ ಅವರು ಸಲ್ಲಿಸಿರುವ ಸೇವೆಗೆ ಸ್ತುತ್ಯ ಸಾಕ್ಷಿಗಳಾಗಿವೆ. ಶ್ರೀಯುತರು ತತ್ತ್ವ ಶಾಸ್ತ್ರಕ್ಕೆ ಅದರಲ್ಲೂ ಕನ್ನಡದಲ್ಲಿ ಅದರ ವ್ಯಾಖ್ಯಾನಕ್ಕೆ ಅವಿಶ್ರಾಂತವಾಗಿ ಸೇವೆ ಸಲ್ಲಿಸುತ್ತಿರುವುದು ಅಭಿನಂದನೀಯ ಸಂಗತಿ.

—ಕುವೆಂಪು.

ಪ್ರತ್ಯಭಿಜ್ಞಾ ಹೃದಯ ಮತ್ತು ಶಿವಸೂತ್ರಗಳು

ಕನ್ನಡದಲ್ಲಿ ದರ್ಶನ ಗ್ರಂಥಗಳು ಅತ್ಯಂತ ವಿರಳ. ಹೊಸಗನ್ನಡದಲ್ಲಿ ವಿಚಾರ ಮಾರ್ಗ ಪ್ರಬುದ್ಧವಾಗಿ ಪೂರ್ಣವಾದ ದರ್ಶನ ಮರ್ಯಾದೆಗೆ ಒಳಪಟ್ಟ ಬರೆವಣಿಗೆ ಹೇರಳವಾಗಿ ಬರಬೇಕೆಂಬ ಆಕಾಂಕ್ಷೆಯನ್ನು ಈಡೇರಿಸುವಂತೆ ಶ್ರೀಮಾನ್ ಜೆ ರುದ್ರಪ್ಪನವರ ಶಿವಸೂತ್ರಗಳು ಮತ್ತು ಪ್ರತ್ಯಭಿಜ್ಞಾ ಹೃದಯ ಎಂಬ ಎರಡು ಗ್ರಂಥಗಳು ಹೊರಬಿದ್ದಿವೆ.

....

ಕರ್ಮಮಾರ್ಗಕ್ಕೆ ಅಂತರ್ಮುಖತೆಯನ್ನು ಕೊಟ್ಟು, ಭಕ್ತಿಗೆ ವಿಚಾರದ ಬೆಂಬಲವನ್ನು ಒದಗಿಸಿ ವಿಚಾರವು ಶುಷ್ಕವಾಗದಂತೆ ಅದನ್ನು ಆಧ್ಯಾತ್ಮಿಕ ಅಂತರಂಗ ಜೀವನಕ್ಕೆ ಸಾಧನವಾಗಿ ಅಳವಡಿಸಿಕೊಂಡು ಸಂಪ್ರದಾಯ ಮತ್ತು ವೃತ್ತಿ ಪ್ರತಿಭೆಗಳನ್ನು ಸಮನ್ವಯಗೊಳಿಸಿ ಜಗತ್ತಿನ ನಿರಾಕರಣೆಯಿಲ್ಲದೆ ಪರವಸ್ತುವಿನ ಪಾರಮ್ಯವನ್ನು ರಮ್ಯಭವ್ಯ ರೀತಿಯಲ್ಲಿ ಸಾಧಿಸುವ ಮಾರ್ಗ ಕಾಶ್ಮೀರಶೈವ ದರ್ಶನಕಾರರದು.

ಈ ದರ್ಶನದಲ್ಲಿ ಅನೇಕ ಸಂಪ್ರದಾಯಗಳ ಮಿಳನವಿದೆ. ಉಪನಿಷತ್ತುಗಳು ಭಗವದ್ಗೀತೆ, ವ್ಯಾಕರಣ ದರ್ಶನ, ಸಾಂಖ್ಯ, ಯೋಗ, ನ್ಯಾಯ, ತಂತ್ರ, ಅಲಂಕಾರ ಶಾಸ್ತ್ರ, ಬೌದ್ಧರವಿ, ಜ್ಞಾನವಾದ ಮತ್ತು ಭಕ್ತಿಪಂಥ ಇವೆಲ್ಲವುಗಳ ಸಂಗಮದಿಂದ ನಿಷ್ಪನ್ನವಾಗಿದೆ ಈ ಬೃಹತ್ಪ್ರವಾಹ. ಈ ಶಾಸ್ತ್ರೀಯ ಗ್ರಂಥಗಳ ಪರಿಚಯವನ್ನು ಕನ್ನಡ ಜನಕ್ಕೆ ಮೊದಲು ಮಾಡಿಕೊಟ್ಟ ಶ್ರೀಯುತರು ಸರ್ವರ ಅಭಿನಂದನೆಗೂ ಪಾತ್ರರಾಗಿದ್ದಾರೆ. ನೂತನ ಮಾರ್ಗದಲ್ಲಿ ಆತ್ಮಪೋಷಣೆಯನ್ನು ಒದಗಿಸುವ ಈ ಕಾಶ್ಮೀರದರ್ಶನವು ಇನ್ನೂ ಹೆಚ್ಚು ಹೆಚ್ಚಾಗಿ ನಮಗೆ ಮಾತೃಭಾಷೆಯಲ್ಲಿ ಲಭಿಸಬೇಕು. ಈ ಉದ್ಯಮವನ್ನು ಪ್ರಾರಂಭಿಸಿರುವ ಶ್ರೀ ರುದ್ರಪ್ಪನವರು ಇನ್ನೂ ಹೆಚ್ಚು ಕೃತಕೃತ್ಯರಾಗಲಿ.

—ಎಸ್. ಎಸ್. ರಾಘವಾಚಾರ್.

(Professor of Philosophy, Mysore University)

ಕಾಶ್ಮೀರ ಶೈವಧರ್ಮ

It is an achievement to have compressed so much of profouud matter in so brief a presentation. It is a thought provoking publication. It is reconciliation of conflicting philosophies. It reconciles the opposition between being and becoming: Prathyabhijna doctrine of self recognition 'I am He' has been successfully explained by the author J. Rudrappa.

—Advent (M. P. Pandit)

ಈ ದರ್ಶನದಲ್ಲಿ ನಿಶಿತವಾದ ಬುದ್ಧಿಶಕ್ತಿಯಿಂದ ಪರ್ಯಾಲೋಚನೆಮಾಡಿ ಮುಂದಿಟ್ಟ ಸಿದ್ಧಾಂತವುಂಟು. ಮನಸ್ತತ್ತ್ವಜಿಜ್ಞಾಸುಗಳಿಗಂತೂ ತುಂಬಾ ಆದರ್ಶನೀಯವಾದ ದರ್ಶನ. ತತ್ತ್ವಶಾಸ್ತ್ರದ ಮೇಲೆ ಮಾತ್ರವಲ್ಲ, ಮನಶ್ಶಾಸ್ತ್ರದ ಮೇಲೆ, ಯೋಗಶಾಸ್ತ್ರದ ಮೇಲೆ ಉಪಯುಕ್ತವಾದ ಬೆಳಕನ್ನು ಚೆಲ್ಲಲು ಸಮರ್ಥವಾದ ಗ್ರಂಥ. ಶ್ರೀರುದ್ರಪ್ಪನವರ ಪ್ರಯತ್ನ ಸ್ತುತ್ಯರ್ಹವಾಗಿದೆ.

—ಪ್ರಜಾವಾಣಿ.

ಲಲ್ಲಯೋಗೀಶ್ವರಿ

The learned author who has specialised in Kashmir Saiva studies, indicates in his introduction how the sayings of Lalla-yogiswari are pregnant with the thoughts of Pratyabhigna School of Kashmir. His Kannada is racy and readable, clear and concise. His final summing up of Lalla's thoughts on spiritual experience is at once penetrating and pointed and should attract students of comparative religion and Indian philosophy.

K. Krishna Murthy.
(Karnataka University)

ಈಚಿನ ಕೆಲವು ಮುಖ್ಯ ಪ್ರಕಟಣೆಗಳು

1 ಪ್ರವಾಸಿ ಕಂಡ ಇಂಡಿಯಾ (ಭಾಗ ೪)-- ಎಚ್. ಎಲ್. ನಾಗೇಗೌಡ

2 ಕನ್ನಡ ಚಂಪೂಕಾವ್ಯಗಳ ಪದ್ಯಾನುಕ್ರಮಣಿ— ಎನ್. ಅನಂತರಂಗಾಚಾರ್

3 ಶಿಕ್ಷಣಕ್ರಾಂತಿ—ಸಂ. ಎಚ್. ತಿಪ್ಪೇರುದ್ರಸ್ವಾಮಿ

4 ವ್ಯವಸಾಯ ಕೈಪಿಡಿ— ಜಿ. ವಿ. ಬಿ. ನಾಯುಡು ಮತ್ತು ಇತರರು

5 ಕನ್ನಡಗಾದೆಗಳ ಸಮೀಕ್ಷೆ— ಸಂ. ತಪಸ್ವೀಕುಮಾರ್

6 ಟ್ರಾನ್ಸಿಸ್ಟರ್ ವಿಜ್ಞಾನ—ಕೆ. ಹರಿದಾಸಭಟ್

7 ಭಾರತದ ಹಳ್ಳಿಗಳು — ಡಾ. ಹಿರೇಮಲ್ಲೂರ ಕೆ. ಈಶ್ವರನ್

8 ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ— ಕೆ. ಬಸವಯ್ಯ ಮತ್ತು ಟಿ. ಆರ್. ನಾಗಪ್ಪ

9 The Hoysala Dynasty—*Ed. Dr. B. Sheik Ali*

10 Indian Parliament : A Critical Study— *T. S. Rajagopala Iyengar*

11 ಕರ್ನಾಟಕದಲ್ಲಿ ಚಿತ್ರಕಲೆ—ಡಾ. ಕೆ. ಶಿವರಾಮ ಕಾರಂತ

12 ಸುಶ್ರುತ ಸಂಹಿತಾ (ಹೊಸ ಆವೃತ್ತಿ) (ಸಂಪುಟ 1)— ಸಂ. ಎನ್. ಎಲ್. ಭಟ್ಟಾಚಾರ್ಯ